ವಿಷಯಾನುಕ್ರಮಣಿಕೆ

shrinath.udupa@gmail.com

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ನಂ. ೩೦

ಶ್ರೀ ವ್ಯಾಸಮಹರ್ಷಿಪ್ರಣೀತಂ

ಬ್ರಹ್ಮಮಹಾಪುರಾಣಂ

(ಸಂಸ್ಕೃತಮೂಲ, ಕನ್ನಡ ಅರ್ಥಾನುವಾದ ವಿವರಣೆಗಳೊಡನೆ)

ಭಾಗ—೧

(೧—೩೩ ಅಧ್ಯಾಯಗಳು)

ಅನುವಾದಕ :

ಹಾಸನದ ಪಂಡಿತ ವೆಂಕಟರಾವ್

ಆಸ್ಥಾನ ವಿದ್ವಾನ್

ಮೈಸೂರು

ಶ್ರೀ ಚಾಮುಂಡೇಶ್ವರೀ ಎಲಕ್ಟ್ರಿಕ್ ಪ್ರೆಸ್

೧೯೪೬

shrinath.udupa@gmail.com

ಪ್ರಸ್ತಾವನೆ.

ಅಷ್ಟಾದಶಮಹಾಪುರಾಣಗಳಲ್ಲಿ ಬ್ರಹ್ಮಪುರಾಣವೇ ಮೊದಲನೆಯದು. ಇದರಲ್ಲಿ ಸೃಷ್ಟಿಕಥನವೂ, ತೀರ್ಥಕ್ಷೇತ್ರಮಾಹಾತ್ಮ್ಯಗಳೂ, ಸಂದರ್ಭಾನುಸಾರ ಉಪಾಖ್ಯಾನಗಳೂ, ಇನ್ನೂ ನಾನಾವಿಷಯಗಳೂ ಉಕ್ತವಾಗಿವೆ. ಈ ಪುರಾಣದಲ್ಲಿ ಒಟ್ಟು ಇನ್ನೂರನಲವತ್ತಾರು ಅಧ್ಯಾಯಗಳಿವೆ. ಖಂಡ, ಸಂಹಿತಾ ಮೊದಲಾದ ವಿಭಾಗಗಳಾವೂ ಇಲ್ಲದಿರುವುದರಿಂದ ಮುದ್ರಣಾನುಕೂಲಕ್ಕಾಗಿ ಈ ಗ್ರಂಥವನ್ನು ಸುಮಾರು ಐನೂರು ಪೇಜಿನ ಆರು ಭಾಗಗಳನ್ನಾಗಿ ವಿಂಗಡಿಸಿ ಮುದ್ರಿಸಲಾಗುತ್ತದೆ. ಪ್ರಕೃತ ಮೊದಲನೆಯ ಭಾಗದಲ್ಲಿ ಸೃಷ್ಟಿಕ್ರಮವೂ, ಸೂರ್ಯೋಪಾಸನಕ್ರಮವೂ ಪೂರ್ವೇತಿಹಾಸಗಳೊಡನೆ ವಿಸ್ತಾರವಾಗಿ ವಿವರಿಸಲ್ಪಟ್ಟಿರುವವು.

ಇಹಪರ ಶ್ರೇಯಸ್ಸುಗಳ ಪ್ರಾಪ್ತಿಗಾಗಿ ಸೂರ್ಯೋಪಾಸನೆಯು ಬಹು ಉತ್ತಮವಾದ ಸಾಧನವಾಗಿರುವುದೆಂದು ಪೂರ್ವದಿಂದಲೂ ಪ್ರಸಿದ್ಧವಾಗಿರುವುದು. ಆದುದರಿಂದಲೇ ಸೂರ್ಯನಮಸ್ಕಾರಮಾಡುವ ಪದ್ಧತಿಯು ಬಹುಕಾಲದಿಂದಲೂ ನಮ್ಮಲ್ಲಿ ಆಚರಣೆಯಲ್ಲಿದೆ. " **ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ** " ಎಂದು ವೇದದಲ್ಲಿ ಹೇಳಿರುವಂತೆ ಸೂರ್ಯನೇ ಪ್ರಪಂಚದ ಸಮಸ್ತಚರಾಚರಪ್ರಾಣಿಗಳಿಗೂ ಆತ್ಮಭೂತನಾಗಿ ಅವುಗಳ ಚಲನವಲನೆ ಮೊದಲಾದ ಸಮಸ್ತಕಾರ್ಯಗಳಿಗೂ ಪ್ರೇರಕನಾಗಿರುವನು. ಸೂರ್ಯನಿಂದ ನಾವು ಬೆಳಕನ್ನೂ, ಶಾಖವನ್ನೂ ಹೊಂದುವುದು ಮಾತ್ರವೇ ಅಲ್ಲ, ನಮ್ಮ ಜೀವನಕ್ಕೆ ಮುಖ್ಯ ಆಧಾರಭೂತವಾದ ಆಹಾರವು ಎಂದರೆ ಓಷಧಿವನಸ್ಪತಿಗಳೂ, ಅವುಗಳ ಬೆಳವಣಿಗೆಗೆ ಬೇಕಾಗುವ ಮಳೆಯೂ, ಉಷ್ಣವೂ ಸೂರ್ಯನಿಂದಲೇ ಲಭಿಸುವವು. ಸೂರ್ಯನಿಲ್ಲದಿದ್ದರೆ, ಎಂದರೆ ಸೂರ್ಯನ ಕಿರಣಗಳು ಭೂಮಿಯ ಮೇಲೆ ಬೀಳದಿದ್ದರೆ ಈ ಭೂಮಿಯಲ್ಲಿ ಯಾವ ವಿಧವಾದ ಚಲನವಲನಗಳೂ ನಡೆಯಲು ಸಾಧ್ಯವಿಲ್ಲವೆಂಬುದು ನಿರ್ವಿವಾದವಾದ ವಿಷಯ. ಆದುದರಿಂದ ಸೂರ್ಯನಿಲ್ಲದಿದ್ದರೆ ಪ್ರಪಂಚದಲ್ಲಿ ಜೀವರಾಶಿಗಳು ಜೀವಿಸಿರಲು ಸಾಧ್ಯವಿಲ್ಲ. ಈ ವಿಷಯಗಳನ್ನೆಲ್ಲಾ ಚೆನ್ನಾಗಿ

shrinath.udupa@gmail.com

ಅಂದೇ ಪೂರ್ವಕಾಲದ ಋಷಿಗಳು ಸೂರ್ಯಾರಾಧನೆಗೆ ಮಹತ್ತ್ವವನ್ನು ಕಲ್ಪಿಸಿರುವರು. “ **ಪರೋಕ್ಷಂ ವಾ ಅನ್ಯೇ ದೇವಾಃ** ” ಎಂದರೆ ಇತರ ದೇವತೆಗಳು ನಮ್ಮ ಕಣ್ಣಿಗೆ ಕಾಣಿಸುವುದಿಲ್ಲ. ಆದರೆ ಸೂರ್ಯನು ನಮಗೆ ಪ್ರತ್ಯಕ್ಷವಾಗಿ ಕಾಣಿಸುವ ದೇವತೆಯು. ಇಂತಹ ಸೂರ್ಯನೂ, ಇಂತಹ ಸೂರ್ಯನನ್ನು ಒಳಗೊಂಡಿರುವ ಅನೇಕ ಕೋಟಿ ಬ್ರಹ್ಮಾಂಡಗಳೂ ಸರ್ವವ್ಯಾಪಕನಾದ ಆ ಪರಮೇಶ್ವರನ ಒಂದು ಸಣ್ಣ ಅಂಶಮಾತ್ರ. ಸೂರ್ಯನನ್ನು ಆರಾಧಿಸಿದರೆ ಜಗದೀಶ್ವರನಾದ ಭಗವಂತನನ್ನೇ ಆರಾಧಿಸಿದಂತಾಗುವುದು. “ **ಅಸಾವಾದಿತ್ಯೋ ಬ್ರಹ್ಮೇತಿ** ” ಎಂದರೆ, ನಮಗೆ ಗೋಚರಿಸುವ ಈ ಸೂರ್ಯನೇ ಪರಬ್ರಹ್ಮನು ಎಂದು ಶ್ರುತಿಯು ಹೇಳುವುದು. ವೇದಮಂತ್ರಗಳಲ್ಲಿ ಬಹು ಶ್ರೇಷ್ಠವಾದ ಗಾಯತ್ರಿಯು ಸೂರ್ಯನನ್ನೇ ಪ್ರತಿಪಾದಿಸುವುದು. ಆದುದರಿಂದಲೇ ನಾವು ಪ್ರತಿದಿನವೂ ಮಾಡುವ ಸಂಧ್ಯಾವಂದನೆಯಲ್ಲಿ ಸೂರ್ಯೋಪಸ್ಥಾನವು ಬಹು ಮುಖ್ಯವಾದ ಅಂಗವಾಗಿರುವುದು. ಅಲ್ಲದೆ, “**ಉದ್ಯಂತಮಸ್ತಂಯಂತಮಾದಿತ್ಯಮಭಿಧ್ಯಾಯನ್ ಕುರ್ವನ್ ಬ್ರಾಹ್ಮಣೋ ವಿದ್ವಾನ್ ಸಕಲಂ ಭದ್ರಮಶ್ನುತೇಽಸಾವಾದಿತ್ಯೋ ಬ್ರಹ್ಮೇತಿ ಬ್ರಹ್ಮೈವ ಸನ್ಬ್ರಹ್ಮಾಪ್ಯೇತಿ ಯ ಏವಂ ವೇದ** ” ಈ ಸೂರ್ಯನೇ ಪರಬ್ರಹ್ಮನು ಎಂದು ಭಾವಿಸಿ ಉದಯಾಸ್ತಕಾಲಗಳಲ್ಲಿ ಆ ಸೂರ್ಯನನ್ನು ಭಕ್ತಿಭಾವದಿಂದ ಧ್ಯಾನಮಾಡುತ್ತಾ ಆರಾಧನೆ ಮಾಡುವ ವಿವೇಕಿಯಾದ ಬ್ರಹ್ಮಜ್ಞಾನಿಯು ಈ ಲೋಕದಲ್ಲಿ ಸಮಸ್ತಸನ್ಮಂಗಳಗಳನ್ನು ಅನುಭವಿಸಿ, ಕಡೆಯಲ್ಲಿ ಬ್ರಹ್ಮಸ್ವರೂಪನೇ ಆಗಿ ಆ ಪರಬ್ರಹ್ಮನಲ್ಲಿ ಸಾಯುಜ್ಯವನ್ನು ಹೊಂದುವನು ಎಂದೂ ಶ್ರುತಿಯು ಸಾರುತ್ತಿರುವುದು. ಆದುದರಿಂದ ಸೂರ್ಯೋಪಾಸನೆಯನ್ನು ವಿಧಿವತ್ತಾಗಿ ಸಕಲರೂ ಮಾಡಿ ಅವರವರ ಇಷ್ಟಾರ್ಥಗಳನ್ನೂ, ಆರೋಗ್ಯವನ್ನೂ, ತತ್ಕ್ಷಣ ಪಡೆಯಬಹುದು. ಈ ವಿಷಯದಲ್ಲಿ ಸ್ವಲ್ಪವೂ ಸಂಶಯವಿಲ್ಲ.

ಈ ಗ್ರಂಥದ ಮುದ್ರಣಕಾರ್ಯದಲ್ಲಿ, ಬೊಂಬಾಯಿನ ವೆಂಕಟೇಶ್ವರ ಪ್ರೆಸ್ಸಿನಲ್ಲಿ ಪ್ರಿಂಟಾಗಿರುವ ಸಂಸ್ಕೃತಲಿಪಿಯ ಪ್ರತಿ, ಪೂನಾದ ಆನಂದಾಶ್ರಮದ ಪ್ರತಿ, ಹಸ್ತಲಿಖಿತ ತೆಲಗು ಅಕ್ಷರದ ಪ್ರತಿ ಈ ಮೂರನ್ನು ಉಪಯೋಗಿಸಲಾಗಿದೆ. ಇವುಗಳಲ್ಲಿ ಪೂನಾದ ಆನಂದಾಶ್ರಮದ ಪ್ರತಿಯೇ ಶುದ್ಧವಾಗಿರುವುದರಿಂದ ಅದನ್ನೇ ವಿಶೇಷವಾಗಿ ಅವಲಂಬಿಸಲಾಗಿದೆ.

shrinath.udupa@gmail.com

ಜನೋಪಯುಕ್ತವಾದ ಬಹುವಿಷಯಗಳನ್ನೊಳಗೊಂಡಿರುವ ಈ ಮಹಾ ಗ್ರಂಥವನ್ನು ಕನ್ನಡದಲ್ಲಿ ಬರೆಯಬೇಕೆಂದು ನಮ್ಮನ್ನಾಳುವ **ಶ್ರೀ ಜಯಚಾಮ ರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಬಿ., ಜಿ. ಸಿ. ಎಸ್. ಐ.** ಮಹಾಪ್ರಭುಗಳ ಅಪ್ಪಣೆಯನ್ನು ಶಿರಸಾವಹಿಸಿ ಈ ಗ್ರಂಥವನ್ನು ಬರೆದಿರುವೆನು. ಸಚ್ಚಿದಾನಂದಸ್ವರೂಪನಾದ ಭಗವಂತನು ಪ್ರಜಾವತ್ಸಲರಾದ ನಮ್ಮ ಪ್ರಭುವರ್ಯರಿಗೂ ಅವರ ಕುಟುಂಬಕ್ಕೂ, ರಾಷ್ಟ್ರದ ಸಮಸ್ತಜನಗಳಿಗೂ ಆಯುರಾರೋಗ್ಯೈಶ್ವರ್ಯಾದಿಗಳನ್ನು ಅನುಗ್ರಹಿಸಲೆಂದು ದಯಾಮಯನಾದ ಆ ಪರಮೇಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸುವೆನು.

ಮೈಸೂರು,
ವ್ಯಯ ಸಂ॥ ಚೈತ್ರ ಬಹುಳ ಪಂಚಮೀ,
೨೧–೪–೪೬.

ಅನುವಾದಕ :
ಹಾಸನದ ಪಂಡಿತ ವೆಂಕಟರಾವ್,
ಆಸ್ಥಾನ ವಿದ್ವಾನ್.

shrinath.udupa@gmail.com

ವಿಷಯಾನುಕ್ರಮಣಿಕೆ.

shrinath.udupa@gmail.com

shrinath.udupa@gmail.com

ಏಳನೆಯ ಅಧ್ಯಾಯವು—

shrinath.udupa@gmail.com

shrinath.udupa@gmail.com

ಪುಟಸಂಖ್ಯೆ

ಹತ್ತನೆಯ ಅಧ್ಯಾಯವು—

ಹನ್ನೊಂದನೆಯ ಅಧ್ಯಾಯವು—

shrinath.udupa@gmail.com

ಪುಟಸಂಖ್ಯೆ

shrinath.udupa@gmail.com

ಪುಟಸಂಖ್ಯೆ

shrinath.udupa@gmail.com

shrinath.udupa@gmail.com

shrinath.udupa@gmail.com

---

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಮಹಾಮುನಿ ಶ್ರೀವ್ಯಾಸಪ್ರಣೀತಂ

ಬ್ರ ಹ್ಮ ಮ ಹಾ ಪು ರಾ ಣ ಂ

ಪ್ರಥಮೋಽಧ್ಯಾಯಃ

ಯಸ್ಮಾತ್ಸರ್ವಮಿದಂ ಪ್ರಪಂಚರಚಿತಂ ಮಾಯಾಜಗಜ್ಜಾಯತೇ
ಯಸ್ಮಿಂಸ್ತಿಷ್ಠತಿ ಯಾತಿ ಚಾಂತಸಮಯೇ ಕಲ್ಪಾನುಕಲ್ಪೇ ಪುನಃ ।
ಯಂ ಧ್ಯಾತ್ವಾ ಮುನಯಃ ಪ್ರಪಂಚರಹಿತಂ ವಿಂದಂತಿ ಮೋಕ್ಷಂ ಧ್ರುವಂ
ತಂ ವಂದೇ ಪುರುಷೋತ್ತಮಾಖ್ಯಮಮಲಂ ನಿತ್ಯಂ ವಿಭುಂ ನಿಶ್ಚಲಂ ॥ ೧ ॥

ಒಂದನೆಯ ಅಧ್ಯಾಯ

೧. ಶ್ರೀ ವ್ಯಾಸಮಹರ್ಷಿಯು ಬ್ರಾಹ್ಮವೆಂಬ ಈ ಮಹಾಪುರಾಣವನ್ನು ರಚಿಸಲು ಉದ್ದೇಶಿಸಿ, ಈ ಪುರಾಣಪ್ರತಿಪಾದ್ಯನಾದ ವಿಷ್ಣುವನ್ನು ನಮಸ್ಕರಿಸಿ ಗ್ರಂಥಾರಂಭವನ್ನು ಮಾಡುವನು. ಗ್ರಂಥಾರಂಭವನ್ನು ಮಾಡುವಾಗ ಇಷ್ಟದೇವತಾ ನಮಸ್ಕಾರಪೂರ್ವಕವಾದ ಮಂಗಳಾಚರಣೆಯನ್ನು ಮಾಡುವದು ಆರ್ಷೇಯಪದ್ಧತಿಯಾಗಿದೆ. ಅದರಂತೆ ಈ ಅಧ್ಯಾಯದ ಒಂದೆರಡನೆಯ ಶ್ಲೋಕಗಳಲ್ಲಿ ಸರ್ವೇಶ್ವರನಾದ ನಾರಾಯಣನನ್ನು ನಮಸ್ಕರಿಸಿ, ಗ್ರಂಥವನ್ನು ವ್ಯಾಸಮುನಿಯು ಆರಂಭಿಸಿರುವನು.

ಯಾವ ಪರಮಾತ್ಮನಿಂದ ಈ ಸಮಸ್ತಪ್ರಪಂಚವೂ ಉತ್ಪತ್ತಿಯಾಗುವುದೋ, ನಮ್ಮ ದೃಷ್ಟಿಗೆ ಗೋಚರವಾಗುವ ಈ ಚರಾಚರಾತ್ಮಕವಾದ ಮಾಯಾಪ್ರಪಂಚವೆಲ್ಲವೂ ಯಾವ ಪರಮಾತ್ಮನಲ್ಲಿ ನೆಲಸಿರುವುದೋ, ಮತ್ತು ಪ್ರಳಯಕಾಲದಲ್ಲಿಯೂ,

shrinath.udupa@gmail.com

ಯಂ ಧ್ಯಾಯಂತಿ ಬುಧಾಃ ಸಮಾಧಿಸಮಯೇ ಶುದ್ಧಂ ವಿಯತ್ಸಂನಿಭಂ
ನಿತ್ಯಾನಂದಮಯಂ ಪ್ರಸನ್ನಮಮಲಂ ಸರ್ವೇಶ್ವರಂ ನಿರ್ಗುಣಂ ।
ವ್ಯಕ್ತಾವ್ಯಕ್ತಪರಂ ಪ್ರಪಂಚರಹಿತಂ ಧ್ಯಾನೈಕಗಮ್ಯಂ ವಿಭುಂ
ತಂ ಸಂಸಾರವಿನಾಶಹೇತುಮಜರಂ ವಂದೇ ಹರಿಂ ಮುಕ್ತಿದಂ ॥ ೨ ॥

ಪ್ರತಿಕಲ್ಪಗಳಲ್ಲಿಯೂ ಯಾರಲ್ಲಿ ಲೀನವಾಗುವುದೋ ಅಂತಹ ಸರ್ವೇಶ್ವರನನ್ನು ನಮಸ್ಕಾರಮಾಡುವೆನು. ಮತ್ತು ತಪಸ್ವಿಗಳು ಪ್ರಪಂಚದಿಂದ ಭಿನ್ನನಾದ ಯಾವ ಪರಮಾತ್ಮನನ್ನು ಧ್ಯಾನಮಾಡಿ ಶಾಶ್ವತವಾದ ಮೋಕ್ಷಪದವಿಯನ್ನು ಹೊಂದುವರೋ ಅಂತಹ ಪುರುಷಶ್ರೇಷ್ಠನೂ, ನಿರ್ಮಲನೂ, ಸನಾತನನೂ ಆದ್ಯಂತರಹಿತನೂ, ಸಕಲ ಜಗತ್ತಿಗೂ ಸ್ವಾಮಿಯೂ ಆದ ಪರಮಪುರುಷನನ್ನು ಭಕ್ತಿಯಿಂದ ನಮಸ್ಕಾರ ಮಾಡುವೆನು.

ಈ ಶ್ಲೋಕದಲ್ಲಿಯೂ ಮುಂದಿನ ಶ್ಲೋಕದಲ್ಲಿಯೂ ಗ್ರಂಥಕರ್ತೃವು ಪರಬ್ರಹ್ಮನನ್ನು ಸ್ತುತಿಸಿರುವನು. ಸೃಷ್ಟಿಸ್ಥಿತಿಲಯಗಳು ಬ್ರಹ್ಮನಿಂದಲೇ ಉಂಟಾಗುವವು. ಎಂದರೆ ಅವ್ಯಕ್ತರೂಪದಲ್ಲಿರುವ ಪರಬ್ರಹ್ಮನೇ ವ್ಯಕ್ತರೂಪವನ್ನು ಹೊಂದಿ ಈ ಸಮಸ್ತಚರಾಚರಾತ್ಮಕವಾದ ಜಗತ್ತಿನಂತೆ ಕೆಲವುಕಾಲವಿದ್ದು ಪುನಃ ಅವ್ಯಕ್ತರೂಪವನ್ನೇ ಹೊಂದುವನು. ವ್ಯಕ್ತರೂಪವನ್ನು ಹೊಂದುವಾಗ ಜಗತ್ಸೃಷ್ಟಿಯೆಂತಲೂ ಆ ಸ್ಥಿತಿಯಲ್ಲಿರುವಾಗ, ಸ್ಥಿತಿಯೆಂತಲೂ ಪುನಃ ಅವ್ಯಕ್ತದೆಶೆಯನ್ನು ಹೊಂದಿ ಅವ್ಯಕ್ತ ಸ್ವರೂಪದಲ್ಲಿ ಲೀನವಾದಾಗ ಪ್ರಳಯವೆಂತಲೂ ಹೇಳಲ್ಪಡುವುದು. ಸೃಷ್ಟಿಸ್ಥಿತಿಗಳು ಕೆಲವುಕಾಲ ಮಾತ್ರವಿರುವುದರಿಂದ ಆ ಕಾಲದಲ್ಲಿ ತೋರುವ ಈ ಜಗತ್ತು ಮಾಯಾ ಜಗತ್ತೆಂತಲೂ, ಅನಿತ್ಯವೆಂತಲೂ ಹೇಳಲ್ಪಡುವುದು. ಅವ್ಯಕ್ತಸ್ವರೂಪದಿಂದಿರುವ ಪರಬ್ರಹ್ಮವೇ ಸರ್ವಕಾಲದಲ್ಲಿಯೂ ಇರುವುದರಿಂದ ಅದು ನಿತ್ಯವೆಂದೂ ನಾಶರಹಿತವೆಂದೂ ನಿರ್ಗುಣವೆಂದೂ ನಾನಾವಿಧವಾಗಿ ವರ್ಣಿಸಲ್ಪಟ್ಟಿರುವುದು.

೨. ಶುದ್ಧನೂ, ಆಕಾಶದಂತೆ ಆಕಾರಹೀನನೂ ಆದ ಆ ಪರಮೇಶ್ವರನನ್ನು ತಪಸ್ವಿಗಳು ಸಮಾಧಿಯೋಗದಲ್ಲಿ ಧ್ಯಾನಮಾಡುವರು. ಏಕೆಂದರೆ ಪ್ರಪಂಚಾತೀತನಾಗಿ ಅವ್ಯಕ್ತಸ್ವರೂಪದಿಂದಿರುವ ಆ ಬ್ರಹ್ಮವಸ್ತುವನ್ನು ಧ್ಯಾನದಿಂದ ಮಾತ್ರವೇ ತಿಳಿಯಲು ಸಾಧ್ಯವು. ಆ ಪರಮಪುರುಷನು ಯಾವಾಗಲೂ ಆನಂದಸ್ವರೂಪನು, ಕರ್ಮಾಧೀನನಲ್ಲವಾದುದರಿಂದ ಅವನಿಗೆ ದುಃಖವೆಂಬುದೇ ಇಲ್ಲ. ನಿರ್ಗುಣನಾದುದರಿಂದ ದೋಷಗಳೂ ಆತನಿಗಿಲ್ಲ. ಯಾವಾಗಲೂ ಪ್ರಸನ್ನನಾಗಿಯೇ ಇರುವನು. ವೃದ್ಧಿಕ್ಷಯಾದಿಗಳಾಗಲಿ, ನಾಶವಾಗಲಿ ಇಲ್ಲ. ಇಂತಹ ದೇವನನ್ನು ಧ್ಯಾನಮಾಡಿ

shrinath.udupa@gmail.com

ಸುಪುಣ್ಯೇ ನೈಮಿಷಾರಣ್ಯೇ ಪವಿತ್ರೇ ಸುಮನೋಹರೇ ।
ನಾನಾಮುನಿಜನಾಕೀರ್ಣೇ ನಾನಾಪುಷ್ಪೋಪಶೋಭಿತೇ ॥ ೩ ॥

ಸರಲೈಃ ಕರ್ಣಿಕಾರೈಶ್ಚ ಪನಸೈರ್ಧವಖಾದಿರೈಃ ।
ಆಮ್ರಜಂಬೂಕಪಿತ್ಥೈಶ್ಚ ನ್ಯಗ್ರೋಧೈರ್ದೇವದಾರುಭಿಃ ॥ ೪ ॥

ಅಶ್ವತ್ಥೈಃ ಪಾರಿಜಾತೈಶ್ಚ ಚಂದನಾಗರುಪಾಟಲೈಃ ।
ವಕುಲೈಃ ಸಪ್ತಪರ್ಣೈಶ್ಚ ಪುನ್ನಾಗೈರ್ನಾಗಕೇಸರೈಃ ॥ ೫ ॥

ಶಾಲೈಸ್ತಾಲೈಸ್ತಮಾಲೈಶ್ಚ ನಾರಿಕೇಲೈಸ್ತಥಾರ್ಜುನೈಃ ।
ಅನ್ಯೈಶ್ಚ ಬಹುಭಿರ್ವೃಕ್ಷೈಶ್ಚಂಪಕಾದ್ಯೈಶ್ಚ ಶೋಭಿತೇ ॥ ೬ ॥

ನಾನಾಪಕ್ಷಿಗಣಾಕೀರ್ಣೇ ನಾನಾಮೃಗಗಣೈರ್ಯುತೇ ।
ನಾನಾಜಲಾಶಯೈಃ ಪುಣ್ಯೈರ್ದೀರ್ಘಿಕಾದ್ಯೈರಲಂಕೃತೇ ॥ ೭ ॥

ದರೆ ಪ್ರಾಣಿಗಳಿಗೆ ಸಂಸಾರಬಂಧನವು ನಾಶವಾಗಿ ಮುಕ್ತಿಯು ಲಭಿಸುವುದು. ಇಂತಹ ಪರಮಪುರುಷನಾದ ಹರಿಯನ್ನು ನಮಸ್ಕಾರಮಾಡಿ ಈ ಗ್ರಂಥಾರಂಭವನ್ನು ಮಾಡುವೆನು.

೩-೬. ಈ ಭೂಮಂಡಲದಲ್ಲಿ ಪವಿತ್ರವೂ ಮನೋಹರವೂ ಆದ ನೈಮಿಶಾರಣ್ಯವೆಂಬ ಒಂದು ಪುಣ್ಯಕ್ಷೇತ್ರವಿರುವುದು. ಆ ವನದಲ್ಲಿ ಅನೇಕಜನ ಮುನಿಗಳು ತಪಸ್ಸನ್ನಾಚರಿಸುತ್ತಾ ವಾಸಿಸುತ್ತಿರುವರು. ಅಲ್ಲಿರುವ ವೃಕ್ಷಗಳು ಬಗೆಬಗೆಯ ಪುಷ್ಪಗಳಿಂದ ಬಹುರಮಣೀಯವಾಗಿ ಕಂಗೊಳಿಸುತ್ತಿರುವವು. ಮತ್ತು ಆ ವನದಲ್ಲಿ ಸರಲ, ಕರ್ಣಿಕಾರ, ಹಲಸು, ಧವ, ಖಾದಿರ, ಮಾವು, ನೇರಲೆ, ಬೇಲ, ಆಲ, ದೇವದಾರು, ಅಶ್ವತ್ಥ, ಪಾರಿಜಾತ, ಚಂದನ, ಅಗರು, ಪಾದಲ, ವಕುಲ, ಬಾಳೆ, ಪುನ್ನಾಗ, ನಾಗಕೇಸರ, ಶಾಲಿ, ತಾಲ, ತಮಾಲ, ತೆಂಗು, ಅಡಿಕೆ, ಅರ್ಜುನ, ಸಂಪಿಗೆ ಇವೇ ಮೊದಲಾದ ಅನೇಕ ಬಗೆಯ ವೃಕ್ಷಗಳು ಸದಾ ಫಲಪುಷ್ಪಭರಿತಗಳಾಗಿ ಶೋಭಿಸುತ್ತಿರುವವು.

೭-೧೧. ಮತ್ತು ಆ ವನವು ಬಗೆಬಗೆಯ ಪಕ್ಷಿಗಳಿಂದಲೂ, ಅನೇಕವಿಧವಾದ ಮೃಗಗಳಿಂದಲೂ, ಅಲ್ಲಲ್ಲಿ ಕಂಗೊಳಿಸುತ್ತಿರುವ ವಾಪೀಕೂಪತಟಾಕಾದಿ ಪವಿತ್ರ ಜಲಾಶಯಗಳಿಂದಲೂ ಬಹುರಮಣೀಯವಾಗಿರುವುದು. ಬ್ರಾಹ್ಮಣರು, ಕ್ಷತ್ರಿಯರು,

shrinath.udupa@gmail.com

ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಃ ಶೂದ್ರೈಶ್ಚಾನ್ಯೈಶ್ಚ ಜಾತಿಭಿಃ ।
ವಾನಪ್ರಸ್ಥೈರ್ಗೃಹಸ್ಥೈಶ್ಚ ಯತಿಭಿರ್ಬ್ರಹ್ಮಚಾರಿಭಿಃ ॥ ೮ ॥

ಸಂಪನ್ನೈರ್ಗೋಕುಲೈಶ್ಚೈವ ಸರ್ವತ್ರ ಸಮಲಂಕೃತೇ ।
ಯವಗೋಧೂಮಚಣಕೈರ್ಮಾಷಮುದ್ಗತಿಲೇಕ್ಷುಭಿಃ ॥ ೯ ॥

ಚೀನಕಾದ್ಯೈಸ್ತಥಾ ಮೇಧ್ಯೈಃ ಸಸ್ಯೈಶ್ಚಾನ್ಯೈಶ್ಚ ಶೋಭಿತೇ ।
ತತ್ರ ದೀಪ್ತೇ ಹುತವಹೇ ಹೂಯಮಾನೇ ಮಹಾಮಖೇ ॥ ೧೦ ॥

ಯಜತಾಂ ನೈಮಿಷೇಯಾಣಾಂ ಸತ್ರೇ ದ್ವಾದಶವಾರ್ಷಿಕೇ ।
ಆಜಗ್ಮುಸ್ತತ್ರ ಮುನಯಸ್ತಥಾನ್ಯೇಽಪಿ ದ್ವಿಜಾತಯಃ ॥ ೧೧ ॥

ತಾನಾಗತಾನ್ ದ್ವಿಜಾಂಸ್ತೇ ತು ಪೂಜಾಂ ಚಕ್ರುರ್ಯಥೋಚಿತಾಂ ।
ತೇಷು ತತ್ರೋಪವಿಷ್ಟೇಷು ಋತ್ವಿಗ್ಭಿಃ ಸಹಿತೇಷು ಚ ॥ ೧೨ ॥

ವೈಶ್ಯರು, ಶೂದ್ರರು, ಇತರ ಜಾತಿಯ ಜನಗಳೂ, ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಯತಿ ಎಂಬ ನಾಲ್ಕು ವರ್ಣಾಶ್ರಮಜನಗಳೂ, ಅಲ್ಲಿ ವಾಸಿಸುತ್ತಿರುವರು. ಹಾಲು ಕರೆಯುವ ಹಸುಗಳೂ, ಎಮ್ಮೆಗಳೂ, ಯಥೇಚ್ಛವಾಗಿರುವವು. ಇದಲ್ಲದೆ, ಭತ್ತ, ಗೋಧಿ, ಕಡಲೆ, ಉದ್ದು, ಹೆಸರು, ಎಳ್ಳು, ಕಬ್ಬು ಮೊದಲಾದ ಸಸ್ಯಗಳಿಂದಲೂ, ಕರ್ಪೂರದ ಗಿಡವೇ ಮೊದಲಾದ ಸುವಾಸನಾವೃಕ್ಷಗಳಿಂದಲೂ; ತಿನ್ನಲು ಯೋಗ್ಯವಾದ ಗೆಡ್ಡೆ ಗೆಣಸು ಮೊದಲಾದ ಬಗೆಬಗೆಯ ವನಸ್ಪತಿಗಳಿಂದಲೂ ಆ ವನವು ಸಮೃದ್ಧವಾಗಿರುವುದು. ಇಂತಹ ಆ ನೈಮಿಷಾರಣ್ಯದಲ್ಲಿ, ಅಲ್ಲಿದ್ದ ಮುನಿಗಳು ಹನ್ನೆರಡು ವರ್ಷಕಾಲ ಮಾಡಬೇಕಾದ ಒಂದು ದೊಡ್ಡ ಯಾಗವನ್ನು ಮಾಡಲು ದ್ದೇಶಿಸಿ, ಅಗ್ನಿಪ್ರತಿಷ್ಠಾಪನಾದಿಗಳನ್ನು ಮಾಡಿ ಪ್ರಜ್ವಲಿತವಾದ ಅಗ್ನಿಯಲ್ಲಿ ಹೋಮ ಮಾಡುತ್ತಿದ್ದರು. ಆಗ ಆ ಯಜ್ಞವನ್ನು ನೋಡಲು ನಾನಾದಿಕ್ಕುಗಳಿಂದ ಮುನಿಗಳೂ, ಇತರ ಬ್ರಾಹ್ಮಣಾದಿವರ್ಣಗಳವರೂ ಅಲ್ಲಿಗೆ ಬಂದು ಸೇರಿದರು.

೧೨. ಯಜ್ಞವನ್ನು ನೋಡಲು ಬಂದ ಬ್ರಾಹ್ಮಣರನ್ನು ನೈಮಿಷಾರಣ್ಯದ ಮುನಿಗಳು ಯಥಾವಿಧಿಯಾಗಿ ಸತ್ಕರಿಸಿ ಉಚಿತಾಸನದಲ್ಲಿ ಅವರನ್ನು ಕುಳ್ಳಿರಿಸಿದರು.

shrinath.udupa@gmail.com

ತತ್ರಾಜಗಾಮ ಸೂತಸ್ತು ಮತಿಮಾಂಲ್ಲೋಮಹರ್ಷಣಃ ।
ತಂ ದೃಷ್ಟ್ವಾ ತೇ ಮುನಿವರಾಃ ಪೂಜಾಂ ಚಕ್ರುರ್ಮುದಾನ್ವಿತಾಃ ॥ ೧೩ ॥

ಸೋಽಪಿ ತಾನ್ಪ್ರತಿಪೂಜ್ಯೈವ ಸಂವಿವೇಶ ವರಾಸನೇ ।
ಕಥಾಂ ಚಕ್ರುಸ್ತದಾನ್ಯೋಽನ್ಯಂ ಸೂತೇನ ಸಹಿತಾ ದ್ವಿಜಾಃ ॥ ೧೪ ॥

ಕಥಾಂತೇ ವ್ಯಾಸಶಿಷ್ಯಂ ತೇ ಪಪ್ರಚ್ಛುಃ ಸಂಶಯಂ ಮುದಾ ।
ಋತ್ವಿಗ್ಭಿಃ ಸಹಿತಾಃ ಸರ್ವೇ ಸದಸ್ಯೈಃ ಸಹ ದೀಕ್ಷಿತಾಃ ॥ ೧೫ ॥

॥ ಮುನಯ ಊಚುಃ ॥

ಪುರಾಣಾಗಮಶಾಸ್ತ್ರಾಣಿ ಸೇತಿಹಾಸಾನಿ ಸತ್ತಮ ।
ಜಾನಾಸಿ ದೇವದೈತ್ಯಾನಾಂ ಚರಿತಂ ಜನ್ಮ ಕರ್ಮ ಚ ॥ ೧೬ ॥

ನ ತೇಽಸ್ತ್ಯವಿದಿತಂ ಕಿಂಚಿದ್ವೇದೇ ಶಾಸ್ತ್ರೇ ಚ ಭಾರತೇ ।
ಪುರಾಣೇ ಮೋಕ್ಷಶಾಸ್ತ್ರೇ ಚ ಸರ್ವಜ್ಞೋಽಸಿ ಮಹಾಮತೇ ॥ ೧೭ ॥

೧೩-೧೫. ಅಷ್ಟರಲ್ಲಿ ಮಹಾಬುದ್ಧಿಶಾಲಿಯೂ, ಲೋಮಹರ್ಷಣನೆಂದು ಪ್ರಸಿದ್ಧನೂ ಆದ ಸೂತಮುನಿಯು ಅಲ್ಲಿಗೆ ಬಂದನು. ಅವನು ಬಂದದ್ದನ್ನು ನೋಡಿ ಅಲ್ಲಿದ್ದ ಮುನಿಗಳೆಲ್ಲರೂ ಸಂತೋಷದಿಂದ ಅವನನ್ನು ಸತ್ಕರಿಸಿದರು. ಆ ಸೂತನೂ ಅವರನ್ನು ಪ್ರತಿಯಾಗಿ ಗೌರವಿಸಿ ಉಚಿತಾಸನದಲ್ಲಿ ಕುಳಿತಮೇಲೆ, ಒಬ್ಬರಿಗೊಬ್ಬರು ಕುಶಲಪ್ರಶ್ನೆಯನ್ನು ಮಾಡಿ ತಮ್ಮ ತಮ್ಮ ವೃತ್ತಾಂತಗಳನ್ನು ಹೇಳುತ್ತಾ ಪರಸ್ಪರ ವಾಗಿ ಮಾತನಾಡಿಕೊಳ್ಳುತ್ತಿದ್ದರು. ಸ್ವಲ್ಪಹೊತ್ತಿನಮೇಲೆ, ಅಲ್ಲಿದ್ದ ಮುನಿಗಳೂ, ದೀಕ್ಷಿತರೂ, ಋತ್ವಿಕ್ಕುಗಳೂ ಸಹ ತಮಗೆ ಅನೇಕ ವಿಷಯಗಳಲ್ಲಿ ಉಂಟಾಗಿರುವ ಸಂಶಯಗಳನ್ನು ಪರಿಹರಿಸಿಕೊಳ್ಳಲು ವ್ಯಾಸಶಿಷ್ಯನಾದ ಆ ಸೂತನನ್ನು ಹೀಗೆ ಪ್ರಶ್ನೆ ಮಾಡಿದರು.

೧೬-೧೭. ಮುನಿಗಳು ಕೇಳಿದರು :—ಎಲೈ ದ್ವಿಜಶ್ರೇಷ್ಠನೇ, ನೀನು ಪುರಾಣ ಆಗಮಶಾಸ್ತ್ರ, ಇತಿಹಾಸ ಇವುಗಳನ್ನೂ, ದೇವದಾನವರ ಉತ್ಪತ್ತಿಯೇ ಮೊದಲಾದ ಅವರ ಚರಿತ್ರೆಗಳೆಲ್ಲವನ್ನೂ ತಿಳಿದಿರುವೆ. ಮತ್ತು ವೇದ, ಶಾಸ್ತ್ರ, ಭಾರತ ಪುರಾಣ, ವೇದಾಂತ ಮೊದಲಾದ ಶಾಸ್ತ್ರಗಳಲ್ಲಿ ನಿನಗೆ ತಿಳಿಯದಿರುವ ವಿಷಯಒಂದೂ ಇಲ್ಲ. ನೀನು ಸರ್ವಜ್ಞನು, ಬುದ್ಧಿಶಾಲಿಯು.

shrinath.udupa@gmail.com

ಯಥಾಪೂರ್ವಮಿದಂ ಸರ್ವಮುತ್ಪನ್ನಂ ಸಚರಾಚರಂ ।
ಸಸುರಾಸುರಗಂಧರ್ವಂ ಸಯಕ್ಷೋರಗರಾಕ್ಷಸಂ ॥ ೧೮ ॥

ಶ್ರೋತುಮಿಚ್ಛಾಮಹೇ ಸೂತ ಬ್ರೂಹಿ ಸರ್ವಂ ಯಥಾ ಜಗತ್ ।
ಬಭೂವ ಭೂಯಶ್ಚ ಯಥಾ ಮಹಾಭಾಗ ಭವಿಷ್ಯತಿ ॥ ೧೯ ॥

ಯತಶ್ಚೈವ ಜಗತ್ಸೂತ ಯತಶ್ಚೈವ ಚರಾಚರಂ ।
ಲೀನಮಾಸೀತ್ತಥಾ ಯತ್ರ ಲಯಮೇಷ್ಯತಿ ಯತ್ರ ಚ ॥ ೨೦ ॥

॥ ಲೋಮಹರ್ಷಣ ಉವಾಚ ॥

ಅವಿಕಾರಾಯ ಶುದ್ಧಾಯ ನಿತ್ಯಾಯ ಪರಮಾತ್ಮನೇ ।
ಸದೈಕರೂಪರೂಪಾಯ ವಿಷ್ಣವೇ ಸರ್ವಜಿಷ್ಣವೇ ॥ ೨೧ ॥

ನಮೋ ಹಿರಣ್ಯಗರ್ಭಾಯ ಹರಯೇ ಶಂಕರಾಯ ಚ ।
ವಾಸುದೇವಾಯ ತಾರಾಯ ಸರ್ಗಸ್ಥಿತ್ಯಂತಕರ್ಮಣೇ ॥ ೨೨ ॥

೧೮-೨೦. ಸುರಾಸುರಯಕ್ಷರಾಕ್ಷಸಗಂಧರ್ವರಿಂದಲೂ, ಚರಾಚರಾತ್ಮಕವಾದ ವಸ್ತುಗಳಿಂದಲೂ ಕೂಡಿರುವ ಈ ಜಗತ್ತು ಪೂರ್ವಕಲ್ಪದಲ್ಲಿ ಹೇಗೆ ಇದ್ದಿತು ? ಈಗ ಹೇಗೆ ಉತ್ಪನ್ನವಾಯಿತು ? ಮುಂದೆ ಹೇಗೆ ಆಗುವುದು ? ಚರಾಚರಾತ್ಮಕವಾದ ಈ ಜಗತ್ತು ಯಾತರಿಂದ ಉತ್ಪನ್ನವಾಯಿತು ? ಮತ್ತು ಯಾತರಲ್ಲಿ ಲಯವನ್ನು ಹೊಂದುವದು ? ಈ ವಿಷಯಗಳೆಲ್ಲವನ್ನೂ ಕೇಳಬೇಕೆಂದು ನಮಗೆ ಅಪೇಕ್ಷೆ ಇರುವುದು. ಆದುದರಿಂದ ಇವೆಲ್ಲವನ್ನೂ ವಿಸ್ತಾರವಾಗಿ ನಮಗೆ ಹೇಳು ಎಂದು ಕೇಳಿದರು.

೨೧–೨೪. ಇದನ್ನು ಕೇಳಿ ಲೋಮಹರ್ಷಣಮುನಿಯು ಈ ಪುರಾಣವನ್ನು ಹೇಳುವುದಕ್ಕಾಗಿ ಪ್ರಾರಂಭದಲ್ಲಿ ಪರಮಾತ್ಮನನ್ನು ಈ ರೀತಿ ಸ್ತೋತ್ರಮಾಡುವನು– ಎಲೈ ದೇವದೇವನೇ, ನೀನು ವಿಕಾರರಹಿತನಾದವನು ಎಂದರೆ ವೃದ್ಧಿಕ್ಷಯಜರಾಮರಣಗಳಿಲ್ಲದೆ ಯಾವಾಗಲೂ ಒಂದೇಸಮನಾಗಿರುವವನು. ಶುದ್ಧಸ್ವರೂಪವುಳ್ಳವನು, ನಾಶರಹಿತನು, ಸರ್ವಪ್ರಾಣಿಗಳಲ್ಲಿಯೂ ಅಂತರಾತ್ಮನಾಗಿ ನೆಲಸಿರುವವನು. ಬ್ರಹ್ಮವಿಷ್ಣುಮಹೇಶ್ವರರೆಂಬ ಮೂರ್ತಿತ್ರಯಗಳಿಂದ ತೋರುವವನೂ ನೀನೇ. ಸೃಷ್ಟಿಸ್ಥಿತಿಪ್ರಳಯಗಳು ನಿನ್ನ ಅಧೀನವಾಗಿರುವವು. ನಿನಗೆ ಇಚ್ಛೆಬಂದಾಗ ಸ್ಥೂಲಸೂ

shrinath.udupa@gmail.com

ಏಕಾನೇಕಸ್ವರೂಪಾಯ ಸ್ಥೂಲಸೂಕ್ಷ್ಮಾತ್ಮನೇ ನಮಃ ।
ಅವ್ಯಕ್ತವ್ಯಕ್ತಭೂತಾಯ ವಿಷ್ಣವೇ ಮುಕ್ತಿಹೇತವೇ ॥ ೨೩ ॥

ಸರ್ಗಸ್ಥಿತಿವಿನಾಶಾಯ ಜಗತೋ ಯೋಽಜರಾಮರಃ ।
ಮೂಲಭೂತೋ ನಮಸ್ತಸ್ಮೈ ವಿಷ್ಣವೇ ಪರಮಾತ್ಮನೇ ॥ ೨೪ ॥

ಆಧಾರಭೂತಂ ವಿಶ್ವಸ್ಯಾಪ್ಯಣೀಯಾಂಸಮಣೀಯಸಾಂ ।
ಪ್ರಣಮ್ಯ ಸರ್ವಭೂತಸ್ಥಮಚ್ಯುತಂ ಪುರುಷೋತ್ತಮಂ ॥ ೨೫ ॥

ಜ್ಞಾನಸ್ವರೂಪಮತ್ಯಂತಂ ನಿರ್ಮಲಂ ಪರಮಾರ್ಥತಃ ।
ತಮೇವಾರ್ಥಸ್ವರೂಪೇಣ ಭ್ರಾಂತಿದರ್ಶನತಃ ಸ್ಥಿತಂ ॥ ೨೬ ॥

ವಿಷ್ಣುಂ ಗ್ರಸಿಷ್ಣುಂ ವಿಶ್ವಸ್ಯ ಸ್ಥಿತೌ ಸರ್ಗೇ ತಥಾ ಪ್ರಭುಂ ।
ಸರ್ವಜ್ಞಂ ಜಗತಾಮೀಶಮಜಮಕ್ಷಯಮವ್ಯಯಂ ॥ ೨೭ ॥

ಕ್ಷ್ಮಾದಿ ಅನೇಕ ರೂಪಗಳನ್ನು ಕೈಗೊಳ್ಳುವೆ. ಅವ್ಯಕ್ತಸ್ವರೂಪನಾಗಿದ್ದರೂ ವ್ಯಕ್ತ ರೂಪದಿಂದ ಭಕ್ತರಿಗೆ ಗೋಚರಿಸಿ ಅವರಿಗೆ ಮುಕ್ತಿಯನ್ನು ನೀಡುವವನು. ಜಗತ್ತಿನ ಉತ್ಪತ್ತಿಸ್ಥಿತಿಲಯಗಳಿಗೆ ನೀನೇ ಕಾರಣನು. ಮುಪ್ಪುಮರಣವೊದಲಾದ ದುಃಖ ಗಳು ನಿನಗಿರುವುದಿಲ್ಲ. ಸಮಸ್ತಪ್ರಪಂಚಕ್ಕೂ ಮೂಲಭೂತನಾಗಿರುವ ನಿನಗೆ ನಮಸ್ಕಾರವು.

೨೫-೨೭. ಮತ್ತು ಆ ಜಗನ್ನಿಯಾಮಕನು ಸಮಸ್ತ ಪ್ರಪಂಚಕ್ಕೂ ಆಧಾರ ಭೂತನಾದವನು ಎಂದರೆ ಅವನಿಂದಲೇ ಈ ಜಗತ್ತೆಲ್ಲವೂ ಉದ್ಭವಿಸಿರುವುದು. "ಅಣೋ ರಣೀಯಾನ್ಮಹತೋ ಮಹೀಯಾನ್" ಎಂಬ ಶ್ರುತಿವಾಕ್ಯದಂತೆ ನಾವು ಊಹಿ ಸಲು ಶಕ್ಯವಾದ ಅತಿಸಣ್ಣವಸ್ತುಗಳಿಗಿಂತಲೂ ಅತ್ಯಂತಸೂಕ್ಷ್ಮವಾದ ರೂಪವುಳ್ಳವನು. ಸಮಸ್ತಪ್ರಾಣಿಗಳಲ್ಲಿಯೂ ಅಂತರಾತ್ಮನಾಗಿ ಅವರನ್ನು ಪ್ರೇರಿಸುವವನು. "ಅಂತಃ ಪ್ರವಿಷ್ಟಃ ಶಾಸ್ತಾ ಜನಾನಾಗ್ಂ ಸರ್ವಾತ್ಮಾ" ಎಂದು ಈ ಅರ್ಥದಲ್ಲಿ ಶ್ರುತಿಯು ಪ್ರಸಿದ್ಧವಾಗಿರುವುದು. ಮತ್ತು ಈ ಪರಮಾತ್ಮನು ನಾಶರಹಿತನೂ, ಪುರುಷಶ್ರೇ ಷ್ಠನೂ ದೋಷರಹಿತನೂ ಆಗಿರುವನು. ಸಚ್ಚಿದಾನಂದಸ್ವರೂಪನು. ನಮ್ಮ ಕಣ್ಣು ಗಳಿಗೆ ವ್ಯಕ್ತರೂಪದಿಂದ ಗೋಚರಿಸಿದರೂ, ಸ್ವಭಾವದಿಂದ ಆತನು ಜ್ಞಾನಸ್ವರೂಪನು. ಸೃಷ್ಟಿಸ್ಥಿತಿಪ್ರಳಯಗಳನ್ನು ಲೀಲಾಜಾಲವಾಗಿ ಮಾಡಲು ಸಮರ್ಥನು. ಸರ್ವಜ್ಞನು,

shrinath.udupa@gmail.com

ಆದ್ಯಂ ಸುಸೂಕ್ಷ್ಮಂ ವಿಶ್ವೇಶಂ ಬ್ರಹ್ಮಾದೀನ್ಪ್ರಣಿಪತ್ಯ ಚ ।
ಇತಿಹಾಸಪುರಾಣಜ್ಞಂ ವೇದವೇದಾಂಗಪಾರಗಂ ॥ ೨೮ ॥

ಸರ್ವಶಾಸ್ತ್ರಾರ್ಥತತ್ತ್ವಜ್ಞಂ ಪರಾಶರಸುತಂ ಪ್ರಭುಂ ।
ಗುರುಂ ಪ್ರಣಮ್ಯ ವಕ್ಷ್ಯಾಮಿ ಪುರಾಣಂ ವೇದಸಂಮಿತಂ ॥ ೨೯ ॥

ಕಥಯಾಮಿ ಯಥಾ ಪೂರ್ವಂ ದಕ್ಷಾದ್ಯೈರ್ಮುನಿಸತ್ತಮೈಃ ।
ಪೃಷ್ಟಃ ಪ್ರೋವಾಚ ಭಗವಾನಬ್ಜಯೋನಿಃ ಪಿತಾಮಹಃ ॥ ೩೦ ॥

ಶೃಣುಧ್ವಂ ಸಂಪ್ರವಕ್ಷ್ಯಾಮಿ ಕಥಾಂ ಪಾಪಪ್ರಣಾಶಿನೀಂ ।
ಕಥ್ಯಮಾನಾಂ ಮಯಾ ಚಿತ್ರಾಂ ಬಹ್ವರ್ಥಾಂ ಶ್ರುತಿವಿಸ್ತರಾಂ ॥ ೩೧ ॥

ಯಸ್ತ್ವಿಮಾಂ ಧಾರಯೇನ್ನಿತ್ಯಂ ಶೃಣುಯಾದ್ವಾಪ್ಯಭೀಕ್ಷ್ಣಶಃ ।
ಸ್ವವಂಶಧಾರಣಂ ಕೃತ್ವಾ ಸ್ವರ್ಗಲೋಕೇ ಮಹೀಯತೇ ॥ ೩೨ ॥

ಜಗದೊಡೆಯನು. ಜನ್ಮಮರಣರಹಿತನೂ, ನಿತ್ಯನೂ ಎಂದು ಪ್ರಸಿದ್ಧಿಪಡೆದಿರುವವನು. ಇಂತಹ ಸ್ವರೂಪವುಳ್ಳ ಆದಿದೇವನೂ, ಜಗದೊಡೆಯನೂ ಆದ ಸೂಕ್ಷ್ಮರೂಪದಿಂದಿರುವ ಪರಮಾತ್ಮನನ್ನು ಎಂದರೆ ವಿಷ್ಣುವನ್ನು ನಮಸ್ಕರಿಸುವೆನು. ಹಾಗೆಯೇ ಬ್ರಹ್ಮಾದಿದೇವತೆಗಳನ್ನೂ, ವೇದವೇದಾಂತಪುರಾಣಶಾಸ್ತ್ರ ಮೊದಲಾದ ಸಕಲವಿದ್ಯಾಪಾರಂಗತನಾದ, ಪರಾಶರಮಹರ್ಷಿಯ ಪುತ್ರನೂ, ನನಗೆ ಗುರುವೂ ಆದ ವ್ಯಾಸಮುನಿಯನ್ನು ಭಕ್ತಿಯಿಂದ ನಮಸ್ಕರಿಸಿ ವೇದಗಳಿಗೆ ಸಮನಾದ ಈ ಮಹಾ ಪುರಾಣವನ್ನು ನಿಮಗೆ ಹೇಳುವೆನು.

೩೦. ಪೂರ್ವದಲ್ಲಿ ದಕ್ಷಾದಿಮುನಿಗಳು ಈ ಪುರಾಣವನ್ನು ಹೇಳಬೇಕೆಂದು ಬ್ರಹ್ಮನನ್ನು ಕೇಳಲು, ಲೋಕಪಿತಾಮಹನೆನಿಸಿದ ಕಮಲಸಂಭವನು ಅವರಿಗೆ ಹೇಳಿರುವುದನ್ನೇ ಈಗ ನಿಮಗೆ ಹೇಳುವೆನು.

೩೧-೩೨. ಈಗ ನಾನು ಹೇಳುವ ಕಥೆಯು ಬಹು ವಿಚಿತ್ರವಾಗಿಯೂ, ವೇದ ಪ್ರತಿಪಾದ್ಯವಾದ ತತ್ತ್ವಾರ್ಥಗಳನ್ನೂ ವಿಸ್ತಾರವಾಗಿ ವರ್ಣಿಸುವುದಾಗಿಯೂ ಇರುವುದು. ಇಂತಹ ಪಾಪನಾಶಕವಾದ ಕಥೆಯನ್ನು ಭಕ್ತಿಯಿಂದ ಕೇಳುವ ಮನುಜನು ತನ್ನ ವಂಶವನ್ನು ಉದ್ಧಾರಮಾಡಿ ಸ್ವರ್ಗಲೋಕದಲ್ಲಿ ಗೌರವಿಸಲ್ಪಡುವನು. ಆದುದರಿಂದ ನಾನು ಹೇಳುವ ಈ ಪುರಾಣವನ್ನು ಸಾವಧಾನಮನಸ್ಸಿನಿಂದ ಕೇಳಿ.

shrinath.udupa@gmail.com

ಅವ್ಯಕ್ತಂ ಕಾರಣಂ ಯತ್ತನ್ನಿತ್ಯಂ ಸದಸದಾತ್ಮಕಂ ।
ಪ್ರಧಾನಂ ಪುರುಷಸ್ತಸ್ಮಾನ್ನಿರ್ಮಮೇ ವಿಶ್ವಮೀಶ್ವರಃ ॥ ೩೩ ॥

ತಂ ಬುದ್ಧ್ಯಧ್ವಂ ಮುನಿಶ್ರೇಷ್ಠಾ ಬ್ರಹ್ಮಾಣಮಮಿತೌಜಸಂ ।
ಸ್ರಷ್ಟಾರಂ ಸರ್ವಭೂತಾನಾಂ ನಾರಾಯಣಪರಾಯಣಂ ॥ ೩೪ ॥

ಅಹಂಕಾರಸ್ತು ಮಹತಸ್ತಸ್ಮಾದ್ಭೂತಾನಿ ಜಜ್ಞಿರೇ ।
ಭೂತಭೇದಾಶ್ಚ ಭೂತೇಭ್ಯ ಇತಿ ಸರ್ಗಸ್ಸನಾತನಃ ॥ ೩೫ ॥

---

೩೩. ಸೃಷ್ಟಿಗೆ ಮೊದಲು ಸದಸದಾತ್ಮಕವಾದ ಅವ್ಯಕ್ತಸ್ವರೂಪವೊಂದೇ ಇದ್ದಿತು. ಅದೇ ಸಮಸ್ತಕ್ಕೂ ಮೂಲಕಾರಣವು. ಆದರಿಂದಲೇ ಸರ್ವೇಶ್ವರನು ಈ ಸಮಸ್ತ ವಿಶ್ವವನ್ನೂ ನಿರ್ಮಿಸಿದನು.

ಇಲ್ಲಿ ಸೃಷ್ಟಿಗೆ ಮೊದಲು ಇದ್ದ ಸ್ಥಿತಿಯನ್ನು ಶ್ರುತಿಯು ಹೀಗೆ ವರ್ಣಿಸಿರವುದು. "ನಾಸದಾಸೀನ್ನೋಽಸದಾಸೀತ್ತದಾನೀಂ ನಾಸೀದ್ರಜೋ ನೋ ವ್ಯೋಮಾ ಪರೋ ಯತ್" ಸೃಷ್ಟಿಗೆ ಮೊದಲು ಪರಬ್ರಹ್ಮವು ಅವ್ಯಕ್ತರೂಪದಿಂದ್ದಿತು. ಆಗ ಸತ್, ಅಸತ್ ಎಂದು ವ್ಯಕ್ತಾವ್ಯಕ್ತರೂಪಗಳೊಂದೂ ಇಲ್ಲದೆ ವಿಶ್ವವೆಲ್ಲವೂ ಏಕಾಕಾರವಾಗಿ ಸೂಕ್ಷ್ಮರೂಪವಾದ ಬ್ರಹ್ಮವಸ್ತುವಿನಿಂದ ಆವೃತವಾಗಿತ್ತು. ಪೃಥಿವ್ಯಾದಿಸ್ಥೂಲ ಪ್ರಪಂಚವೂ, ಆಕಾಶವೂ ಯಾವದೂ ಇರಲಿಲ್ಲ. ಸೂರ್ಯಚಂದ್ರರಿರಲಿಲ್ಲ, ರಾತ್ರಿ ಹಗಲುಗಳಿರಲಿಲ್ಲ. ಎಲ್ಲೆಲ್ಲಿಯೂ ಗಾಢಾಂಧಕಾರವೇ ವ್ಯಾಪಿಸಿತ್ತು. ಬಳಿಕ— "ಅಸದ್ವಾ ಇದಮಗ್ರ ಆಸೀತ್ । ತತೋ ವೈ ಸದಜಾಯತ" ಎಂದರೆ ಮೊದಲು ಅಸತ್ ಎಂಬ ಅವ್ಯಕ್ತಸ್ವರೂಪವೊಂದೇ ಇದ್ದಿತು. ಆದರಿಂದ ಸತ್ ಎಂದರೆ ವ್ಯಕ್ತ ರೂಪವು ಉಂಟಾಯಿತು. ಹೀಗೆ ವೇದಗಳಲ್ಲಿಯೂ ಉಪನಿಷತ್ತುಗಳಲ್ಲಿಯೂ ಜಗತ್ಸೃಷ್ಟಿಯು ಸೂಕ್ಷ್ಮವಾಗಿ ವಿವರಿಸಲ್ಪಟ್ಟಿರುವದು.

೩೪. ಆ ಪ್ರಧಾನವೇ ಸೃಷ್ಟಿಕರ್ತನಾದ ಬ್ರಹ್ಮನಾಯಿತು. ಮಹಾತೇಜಸ್ವಿಯಾದ ಬ್ರಹ್ಮನು ನಾರಾಯಣನ ಅನುಗ್ರಹದಿಂದ ಈ ಜಗತ್ತೆಲ್ಲವನ್ನೂ ಸೃಷ್ಟಿಸಿದನು. ಆವನಿಗೆ ಮಹತ್ ಎಂದು ಹೆಸರುಂಟು.

೩೫. ಆ ಮಹತ್ತಿನಿಂದ ಅಂದರೆ ಬ್ರಹ್ಮನಿಂದ ಅಹಂಕಾರವು ಜನಿಸಿತು. ಅಹಂಕಾರದಿಂದ ಐದು ಸೂಕ್ಷ್ಮಭೂತಗಳು ಜನಿಸಿದುವು. ಅವುಗಳಿಂದ ಪೃಥಿವಿ, ಜಲ, ತೇಜಸ್ಸು, ವಾಯು, ಆಕಾಶಗಳೆಂಬ ಐದು ಮಹಾಭೂತಗಳು ಜನಿಸಿದುವು. ಇದು ಸೃಷ್ಟ್ಯಾದಿಯ ಕ್ರಮವು.

shrinath.udupa@gmail.com

ವಿಸ್ತರಾವಯವಂ ಚೈವ ಯಥಾಪ್ರಜ್ಞಂ ಯಥಾಶ್ರುತಿ ।
ಕೀರ್ತ್ಯಮಾನಂ ಶೃಣುಧ್ವಂ ವಃ ಸರ್ವೇಷಾಂ ಕೀರ್ತಿವರ್ಧನಂ ॥ ೩೬ ॥

ಕೀರ್ತಿತಂ ಸ್ಥಿರಕೀರ್ತೀನಾಂ ಸರ್ವೇಷಾಂ ಪುಣ್ಯವರ್ಧನಂ ।
ತತಃ ಸ್ವಯಂಭೂರ್ಭಗವಾನ್ ಸಿಸೃಕ್ಷುರ್ವಿವಿಧಾಃ ಪ್ರಜಾಃ ॥ ೩೭ ॥

ಆಪ ಏವ ಸಸರ್ಜಾದೌ ತಾಸು ವೀರ್ಯಮಥಾಸೃಜತ್ ।
ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ ॥ ೩೮ ॥

ಅಯನಂ ತಸ್ಯ ತಾಃ ಪೂರ್ವಂ ತೇನ ನಾರಾಯಣಃ ಸ್ಮೃತಃ ।
ಹಿರಣ್ಯವರ್ಣಮಭವತ್ತದಂಡಮುದಕೇಶಯಂ ॥ ೩೯ ॥

ತತ್ರ ಜಜ್ಞೇ ಸ್ವಯಂ ಬ್ರಹ್ಮಾ ಸ್ವಯಂಭೂರಿತಿ ನಃ ಶ್ರುತಂ ।
ಹಿರಣ್ಯಗರ್ಭೋ ಭಗವಾನುಷಿತ್ವಾ ಪರಿವತ್ಸರಂ ॥ ೪೦ ॥

---

೩೬. ಸೃಷ್ಟಿಯ ಕ್ರಮವನ್ನು ಯಥಾವತ್ತಾಗಿ ನನಗೆ ತಿಳಿದಿರುವ ಮಟ್ಟಿಗೆ ಹೇಳುವೆನು. ಎಲ್ಲರೂ ಕೇಳಿರಿ. ಇದನ್ನು ಕೇಳಿದರೆ ಕೀರ್ತಿಯು ಹರಡುವುದು.

೩೭. ಈ ಕಥೆಯನ್ನು ಕೇಳಿ ಎಷ್ಟೋಜನಗಳು ಕೀರ್ತಿವಂತರಾಗಿರುವರು. ಮುಂದೆ ಭಗವಂತನಾದ ಬ್ರಹ್ಮನು ಪ್ರಜೆಗಳನ್ನು ಸೃಷ್ಟಿಸಲು ಮೊದಲು ಜಲವನ್ನು ಸೃಷ್ಟಿಸಿದನು. ಆ ಜಲದಲ್ಲಿ ತನ್ನ ವೀರ್ಯವನ್ನು ವಿಸರ್ಜಿಸಿದನು.

೩೮. ಆದಿನರನಾದ ಬ್ರಹ್ಮನಿಂದ ಮೊದಲು ಜನಿಸಿದುದರಿಂದ ಜಲಕ್ಕೆ "ನಾರ" ಎಂದು ಹೆಸರಾಯಿತು. ಆ ನಾರ (ಜಲ) ನಿಧಿಯಲ್ಲಿ ವಾಸಿಸುವುದರಿಂದ ಹರಿಗೆ ನಾರಾಯಣನೆಂದು ಹೆಸರಾಯಿತು.

೩೯. ಬ್ರಹ್ಮನು ನೀರಿನಲ್ಲಿ ವಿಸರ್ಜಿಸಿದ ಆ ವೀರ್ಯವು ಚಿನ್ನದ ಬಣ್ಣವುಳ್ಳ ಗೋಳವಾಯಿತು, ಬ್ರಹ್ಮಾಂಡವಾಯಿತು, ಆ ಬ್ರಹ್ಮಾಂಡದಲ್ಲಿಯೇ ಚತುರ್ಮುಖ ಬ್ರಹ್ಮನು ಜನಿಸಿದನೆಂದು ಕೇಳಿರುವೆವು.

೪೦. ಭಗವಂತನಾದ ಹಿರಣ್ಯಗರ್ಭಬ್ರಹ್ಮನು ಆ ಗೋಳದಲ್ಲಿ ಒಂದುವರ್ಷ ಕಾಲವಿದ್ದು ಅದನ್ನು ಸ್ವರ್ಗ ಭೂಮಿ ಎಂದು ಭಾಗವಾಗಿ ಮಾಡಿದನು.

shrinath.udupa@gmail.com

ತದಂಡಮಕರೋದ್ದ್ವೈಧಂ ದಿವಂ ಭುವಮಥಾಪಿ ವಾ ।
ತಯೋಶ್ಶಕಲಯೋರ್ಮಧ್ಯ ಆಕಾಶಮಕರೋತ್ಪ್ರಭುಃ ॥ ೪೧ ॥

ಅಪ್ಸು ಪಾರಿಪ್ಲವಾಂ ಪೃಥ್ವೀಂ ದಿಶಶ್ಚ ದಶಧಾ ದಧೇ ।
ತತ್ರ ಕಾಲಂ ಮನೋ ವಾಚಂ ಕಾಮಂ ಕ್ರೋಧಮಥೋ ರತಿಂ ॥ ೪೨ ॥

ಸಸರ್ಜ ಸೃಷ್ಟಿಂ ತದ್ರೂಪಾಂ ಸ್ರಷ್ಟುಮಿಚ್ಛನ್ ಪ್ರಜಾಪತೀನ್ ।
ಮರೀಚಿಮತ್ರ್ಯಂಗಿರಸೌ ಪುಲಸ್ತ್ಯಂ ಪುಲಹಂ ಕ್ರತುಂ ॥ ೪೩ ॥

ವಸಿಷ್ಠಂ ಚ ಮಹಾತೇಜಾಸ್ಸೋಽಸೃಜತ್ಸಪ್ತ ಮಾನಸಾನ್ ।
ಸಪ್ತ ಬ್ರಹ್ಮಾಣ ಇತ್ಯೇತೇ ಪುರಾಣೇ ನಿಶ್ಚಯಂ ಗತಾಃ ॥ ೪೪ ॥

ನಾರಾಯಣಾತ್ಮಕಾನಾಂ ತು ಸಪ್ತಾನಾಂ ಬ್ರಹ್ಮಜನ್ಮನಾಂ ।
ತತೋಽಸೃಜತ್ಪುರಾ ಬ್ರಹ್ಮಾ ರುದ್ರಂ ರೋಷಾತ್ಮಸಂಭವಂ ॥ ೪೫ ॥

---

೪೧. ಆ ಸ್ವರ್ಗ ಮತ್ತು ಭೂಮಿಗಳ ಮಧ್ಯದಲ್ಲಿ ಆಕಾಶವನ್ನು ಕಲ್ಪಿಸಿದನು. ಜಲರಾಶಿಯಮೇಲೆ ದ್ವೀಪದಂತೆ ಭೂಮಿಯನ್ನಿರಿಸಿದನು. ಆಮೇಲೆ ಎಂಟು ದಿಕ್ಕುಗಳನ್ನು ಕಲ್ಪಿಸಿದನು.

೪೨. ಆಮೇಲೆ ಮನಸ್ಸು, ಕಾಲ, ವಾಕ್ಕು, ಕಾಮ, ಕೋಪ, ಕ್ರೀಡೆ, ಇವುಗಳನ್ನೂ ಇವುಗಳುಳ್ಳ ಪ್ರಜೆಗಳನ್ನೂ ಸೃಷ್ಟಿಸಿದನು. ಮುಂದೆ ಸೃಷ್ಟಿಯು ನಡೆಯಲು ಪ್ರಜಾಪತಿಗಳನ್ನು ಸೃಷ್ಟಿಸಿದನು.

೪೩. ಮರೀಚಿಮುನಿ, ಅತ್ರಿಮುನಿ, ಅಂಗಿರಸ್ಸು, ಪುಲಸ್ತ್ಯಬ್ರಹ್ಮ, ಪುಲಹ, ಕ್ರತು, ವಸಿಷ್ಠಮುನಿಗಳೆಂಬ ಏಳುಜನ ಮಾನಸಕುಮಾರರನ್ನು ಆ ಬ್ರಹ್ಮನು ಸೃಷ್ಟಿಸಿದನು.

೪೪. ಈ ಏಳುಜನ ಬ್ರಹ್ಮಮಾನಸಪುತ್ರರೂ ನಾರಾಯಣಸ್ವರೂಪರು. ಇವರಿಗೆ "ಬ್ರಹ್ಮಜನ್ಮ" ರು ಎಂದೂ ಪುರಾಣಗಳಲ್ಲಿ ಕರೆಯುವರು.

೪೫–೪೬. ಆಮೇಲೆ ಬ್ರಹ್ಮನು ತನ್ನ ಕೋಪದಿಂದ ಕ್ರೋಧಮೂರ್ತಿಯಾದ ರುದ್ರನನ್ನು ಸೃಷ್ಟಿಸಿದನು. ಮತ್ತು ಸನತ್ಕುಮಾರನೆಂಬ ಮಹಾಜ್ಞಾನಿಯನ್ನು

shrinath.udupa@gmail.com

ಸನತ್ಕುಮಾರಂ ಚ ವಿಭುಂ ಪೂರ್ವೇಷಾಮಪಿ ಪೂರ್ವಜಂ ।
ಸಪ್ತಸ್ತೇತಾ ಅಜಾಯಂತ ಪ್ರಜಾ ರುದ್ರಾಶ್ಚ ಭೋ ದ್ವಿಜಾಃ ॥ ೪೬ ॥

ಸ್ಕಂದಸ್ಸನತ್ಕುಮಾರಶ್ಚ ತೇಜಸ್ಸಂಕ್ಷಿಪ್ಯ ತಿಷ್ಠತಃ ।
ತೇಷಾಂ ಸಪ್ತ ಮಹಾವಂಶಾ ದಿವ್ಯಾ ದೇವಗಣಾನ್ವಿತಾಃ ॥ ೪೭ ॥

ಕ್ರಿಯಾವಂತಃ ಪ್ರಜಾವಂತೋ ಮಹರ್ಷಿಭಿರಲಂಕೃತಾಃ ।
ವಿದ್ಯುತೋಽಶನಿಮೇಘಾಂಶ್ಚ ರೋಹಿತೇಂದ್ರಧನೂಂಷಿ ಚ ॥ ೪೮ ॥

ಪಯಾಂಸಿ ಚ ಸಸರ್ಜಾದೌ ಪರ್ಜನ್ಯಂ ಚ ಸಸರ್ಜ ಹ ।
ಋಚೋ ಯಜೂಂಷಿ ಸಾಮಾನಿ ನಿರ್ಮಮೇ ಯಜ್ಞಸಿದ್ಧಯೇ ॥ ೪೯ ॥

ಸಾಧ್ಯಾನಜನಯದ್ದೇವಾನಿತ್ಯೇವಮನುಸಂಜಗುಃ
ಉಚ್ಚಾವಚಾನಿ ಭೂತಾನಿ ಗಾತ್ರೇಭ್ಯಸ್ತಸ್ಯ ಜಜ್ಞಿರೇ । ॥ ೫೦ ॥

ಸೃಷ್ಟಿಸಿದನು. ಇವನು ಎಲ್ಲರಿಗಿಂತಲೂ ಹಿರಿಯನು. ಆಮೇಲೆ ಏಳುಜನ ಮಾನಸಕುಮಾರರು ಪ್ರಜೆಗಳನ್ನು ಸೃಷ್ಟಿಸಿದರು. ರುದ್ರನೂ ಕೆಲವರನ್ನು ಸೃಷ್ಟಿಸಿದನು.

೪೭. ರುದ್ರಪುತ್ರನಾದ ಸ್ಕಂದ ಮತ್ತು ಸನತ್ಕುಮಾರ ಇವರು ಜಿತೇಂದ್ರಿಯರಾಗಿದ್ದು ಪ್ರಜಾಸೃಷ್ಟಿಯನ್ನು ಮಾಡಲಿಲ್ಲವು. ಮರೀಚಿ ಮೊದಲಾದ ಏಳುಜನ ಮಾನಸಕುಮಾರರಿಂದ ದೇವತೆಗಳು ಮೊದಲಾದ ಏಳು ವಂಶಗಳು ಜನಿಸಿದುವು. ಆ ವಂಶಗಳಲ್ಲಿ ಜಿತೇಂದ್ರಿಯರಾದ ಮಹರ್ಷಿಗಳು ಜನಿಸಿದರು. ಪ್ರಜೆಗಳೆಲ್ಲರೂ ಕರ್ಮನಿಷ್ಠರು. ಅವರಿಂದ ಉತ್ತಮ ಪ್ರಜೆಗಳು ಜನಿಸಿದುವು.

೪೮–೪೯. ಅಮೇಲೆ ಬ್ರಹ್ಮನು ಮಿಂಚು, ಸಿಡಿಲು, ಮೇಘ, ನಾನಾಬಣ್ಣದ ಕಾಮನ ಬಿಲ್ಲು, ನೀರು, ಮಳೆ ಇವುಗಳನ್ನು ಸೃಷ್ಟಿಸಿದನು. ಯಜ್ಞಗಳಿಗಾಗಿ ಋಗ್ವೇದ, ಯಜುರ್ವೇದ, ಸಾಮವೇದಗಳನ್ನು ಹೊರಗೆಡುಹುವವನಾದನು.

೫೦. ಸಾಧ್ಯರೆಂಬ ದೇವತೆಗಳನ್ನು ಆ ಬ್ರಹ್ಮನು ಸೃಜಿಸಿದನೆಂದು ಹೇಳುವರು ಮುಂದೆ ಅವನ ಶರೀರಗಳಿಂದ ನಾನಾಜಾತಿಯ ಪ್ರಾಣಿಗಳು ಜನಿಸಿದುವು.

shrinath.udupa@gmail.com

ಆಪವಸ್ಯ ಪ್ರಜಾಸರ್ಗಂ ಸೃಜತೋ ಹಿ ಪ್ರಜಾಪತೇಃ
ಸೃಜ್ಯಮಾನಾಃ ಪ್ರಜಾ ನೈವ ವಿವರ್ಧಂತೇ ಯದಾ ತದಾ । ॥ ೫೧ ॥

ದ್ವಿಧಾಕೃತ್ವಾಽಽತ್ಮನೋ ದೇಹಮರ್ಧೇನ ಪುರುಷೋಽಭವತ್
ಅರ್ಧೇನ ನಾರೀ ತಸ್ಯಾಂ ತು ಸೋಽಸೃಜದ್ವಿವಿಧಾಃ ಪ್ರಜಾಃ । ॥ ೫೨ ॥

ದಿವಂ ಚ ಪೃಥಿವೀಂ ಚೈವ ಮಹಿಮ್ನಾ ವ್ಯಾಪ್ಯ ತಿಷ್ಠತಿ ।
ವಿರಾಜಮಸೃಜದ್ವಿಷ್ಣುಸ್ಸೋಽಸೃಜತ್ಪುರುಷಂ ವಿರಾಟ್ ॥ ೫೩ ॥

ಪುರುಷಂ ತಂ ಮನುಂ ವಿದ್ಯಾತ್ತಸ್ಯ ಮನ್ವಂತರಂ ಸ್ಮೃತಂ ।
ದ್ವಿತೀಯಂ ಮಾನಸಸ್ಯೈತನ್ಮನೋರಂತರಮುಚ್ಯತೇ ॥ ೫೪ ॥

---

೫೧. ಹೀಗೆ ಜಲವನ್ನು ಮೊದಲುಗೊಂಡು ಬ್ರಹ್ಮನು ಸೃಷ್ಟಿಯನ್ನು ಮಾಡುತ್ತಿರಲು ಅವನು ಸೃಷಿಸಿದಷ್ಟೇ ಪ್ರಜೆಗಳಾದರು. ಮುಂದೆ ಬೆಳೆಯಲೇ ಇಲ್ಲ.

೫೨. ಆಗ ಬ್ರಹ್ಮನು ತನ್ನ ಶರೀರವನ್ನು ಎರಡುಭಾಗಮಾಡಿ ಒಂದರಿಂದ ಪುರುಷನನ್ನೂ ಮತ್ತೊಂದುಭಾಗದಿಂದ ಸ್ತ್ರೀಯನ್ನೂ ನಿರ್ಮಿಸಿದನು. ಮುಂದೆ ಆ ಸ್ತ್ರೀಯಲ್ಲಿ ನಾನಾಜಾತಿಯ ಪ್ರಜೆಗಳನ್ನು ಸೃಷ್ಟಿಸಿದನು.

೫೩. ವಿಷ್ಣುವು ಸ್ವರ್ಗಭೂಮಿಗಳನ್ನು ವ್ಯಾಪಿಸಿರುವ ಮಹಾಮಹಿಮಾನಾದ ವಿರಾಟ್ಪುರುಷನನ್ನು ಸೃಜಿಸಿದನು. ಆ ವಿರಾಟ್ಪುರುಷನು ಪುರುಷನೋರ್ವನನ್ನು ಸೃಜಿಸಿದನು.

೫೪. ಆ ಪುರುಷನೇ ಮನುಚಕ್ರವರ್ತಿಯು. ಅವನ ಹೆಸರಿನಿಂದಲೇ ಮನ್ವಂತರಗಳಾದುವು. ಈಗ ವಿಷ್ಣುಮಾನಸಕುಮಾರನಾದ ಆ ಮನುವಿನ ಎರಡನೆಯ ಮನ್ವಂತರವು ನಡೆಯುತ್ತಿರುವುದು.

shrinath.udupa@gmail.com

ಸ ವೈರಾಜಃ ಪ್ರಜಾಸರ್ಗಂ ಸಸರ್ಜ ಪುರುಷಃ ಪ್ರಭುಃ ।
ನಾರಾಯಣವಿಸರ್ಗಸ್ಯ ಪ್ರಜಾಸ್ತಸ್ಯಾಪ್ಯಯೋನಿಜಾಃ ॥ ೫೫ ॥

ಆಯುಷ್ಮಾನ್ ಕೀರ್ತಿಮಾನ್ ಪುಣ್ಯಪ್ರಜಾವಾಂಶ್ಚ ಭವೇನ್ನರಃ ।
ಆದಿಸರ್ಗಂ ವಿದಿತ್ವೇಮಂ ಯಥೇಷ್ಟಾಂ ಚಾಪ್ನುಯಾದ್ಗತಿಂ ॥ ೫೬ ॥

ಇತಿ ಶ್ರೀಮಹಾಪುರಾಣೇ ಆದಿಬ್ರಹ್ಮೇ ಸೃಷ್ಟಿಕಥನವರ್ಣನಂ
ನಾಮ ಪ್ರಥಮೋಽಧ್ಯಾಯಃ

---

೫೫. ವಿರಾಟ್ಪುರುಷನ ಮಗನಾದಾ ಮನುವೂ ಪ್ರಜೆಗಳನ್ನು ಸೃಷ್ಟಿಸಿದನು. ನಾರಾಯಣನ ವಂಶದವನಾದ ಆ ಮನುವಿನ ಪ್ರಜೆಗಳು ಅಯೋನಿಜರು, ಮಾನಸ ಪುತ್ರರು. ಸ್ತ್ರೀ ಸಂಪರ್ಕದಿಂದ ಜನಿಸಿದವರಲ್ಲ.

೫೬. ಈ ಆದಿಸೃಷ್ಟಿಯನ್ನು ಕೇಳಿದವರು ದೀರ್ಘಾಯುಸ್ಸುಳ್ಳವರಾಗುವರು ಕೀರ್ತಿವಂತರಾಗುವರು, ಪುಣ್ಯವಂತರಾಗುವರು, ಒಳ್ಳೆಯ ಮಕ್ಕಳನ್ನು ಪಡೆಯುವರು, ಪರದಲ್ಲಿ ಉತ್ತಮಗತಿಯನ್ನೈದುವರು.

ಇಲ್ಲಿಗೆ ಶ್ರೀ ಬ್ರಹ್ಮಮಹಾಪುರಾಣದಲ್ಲಿ ಸೃಷ್ಟಿಕಥನಾರಂಭವೆಂಬ
ಒಂದನೆಯ ಅಧ್ಯಾಯವು ಮುಗಿದುದು.

shrinath.udupa@gmail.com

॥ ಶ್ರೀಃ ॥

॥ ಓಂ ತತ್ಸದ್ಬ್ರಹ್ಮಣೇನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ದ್ವಿತೀಯೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ಸ ಸೃಷ್ಟ್ವಾ ತು ಪ್ರಜಾಸ್ತ್ವೇವಮಾಪವೋ ವೈ ಪ್ರಜಾಪತಿಃ ।
ಲೇಭೇ ವೈ ಪುರುಷಃ ಪತ್ನೀಂ ಶತರೂಪಾಮಯೋನಿಜಾಂ ॥ ೧ ॥

ಆಪವಸ್ಯ ಮಹಿಮ್ನಾ ತು ದಿವಮಾವೃತ್ಯ ತಿಷ್ಠತಃ ।
ಧರ್ಮೇಣೈವ ಮುನಿಶ್ರೇಷ್ಠಾಃ ಶತರೂಪಾ ವ್ಯಜಾಯತ ॥ ೨ ॥

ಎರಡನೆಯ ಅಧ್ಯಾಯ.

೧. ಸೂತಮುನಿಯು ಹೇಳಿದನು:—ಪ್ರಜೇಶ್ವರನಾದ ಮನುವಿಗೆ "ಆಪವ" ನೆಂದೂ ಹೆಸರುಂಟು. ಆ ಮನುವು ಅಯೋನಿಜಳಾದ "ಶತರೂಪಾ" ಎಂಬುವಳನ್ನು ಮದುವೆಯಾದನು.

೨. ಆ ಮನುವಿನ ಧರ್ಮದ ಮಹಿಮೆಯು ಸ್ವರ್ಗವನ್ನೂ ವ್ಯಾಪಿಸಿದ್ದಿತು ಇಂತಹ ಮನುವಿನ ಧರ್ಮಮಹಿಮೆಯಿಂದಲೇ ಶತರೂಪಾದೇವಿಯು ಜನಿಸಿದಳು.

shrinath.udupa@gmail.com

ಸಾ ತು ವರ್ಷಾಯುತಂ ತಪ್ತ್ವಾ ತಪಃ ಪರಮದುಶ್ಚರಂ ।
ಭರ್ತಾರಂ ದೀಪ್ತತಪಸಂ ಪುರುಷಂ ಪ್ರತ್ಯಪದ್ಯತ ॥ ೩ ॥

ಸ ವೈ ಸ್ವಾಯಂಭುವೋ ವಿಪ್ರಾಃ ಪುರುಷೋ ಮನುರುಚ್ಯತೇ ।
ತಸ್ಯೈಕಸಪ್ತತಿಯುಗಂ ಮನ್ವಂತರಮಿಹೋಚ್ಯತೇ ॥ ೪ ॥

ವೈರಾಜಾತ್ಪುರುಷಾದ್ವೀರಂ ಶತರೂಪಾ ವ್ಯಜಾಯತ ।
ಪ್ರಿಯವ್ರತೋತ್ತಾನಪಾದೌ ವೀರಾತ್ಕಾಮ್ಯಾ ವ್ಯಜಾಯತ ॥ ೫ ॥

ಕಾಮ್ಯಾ ನಾಮ ಸುತಾ ಶ್ರೇಷ್ಠಾ ಕರ್ದಮಸ್ಯ ಪ್ರಜಾಪತೇಃ ।
ಕಾಮ್ಯಾಪುತ್ರಾಸ್ತು ಚತ್ವಾರಸ್ಸಮ್ರಾಟ್ಕುಕ್ಷಿರ್ವಿರಾಟ್ಪ್ರಭುಃ ॥ ೬ ॥

ಉತ್ತಾನಪಾದಂ ಜಗ್ರಾಹ ಪುತ್ರಮತ್ರಿಃ ಪ್ರಜಾಪತಿಃ ।
ಉತ್ತಾನಪಾದಾಚ್ಚತುರಸ್ಸೂನೃತಾ ಸುಷುವೇ ಸುತಾನ್ ॥ ೭ ॥

---

೩. ಆ ಶತರೂಪಾದೇವಿಯು ನೂರುವರ್ಷಗಳವರೆಗೆ ಘೋರವಾದ ತಪಸ್ಸನ್ನಾಚರಿಸಿ ಮಹಾತೇಜಸ್ವಿಯಾದ ಪುರುಷನೋರ್ವನನ್ನು ಪತಿಯನ್ನಾಗಿ ಪಡೆದಳು.

೪. ಆ ಪುರುಷನೇ ಸ್ವಾಯಂಭುವಮನುವು. ಒಂದೊಂದು ಮನ್ವಂತರದಲ್ಲಿ ಎಪ್ಪತ್ತೊಂದು ಯುಗಗಳು ಇರುವವು. ಇಂತಹ ಹದಿನಾಲ್ಕು ಮನ್ವಂತರಗಳಿರುವುವು.

೫. ವಿರಾಟ್ಪುರುಷನ ಮಗನಾದ ಮನುವಿನಿಂದ ಶತರೂಪಾದೇವಿಯು ವೀರನೆಂಬ ಕುಮಾರನನ್ನು ಹಡೆದಳು. ಆ ಕುಮಾರನಿಂದ ಕಾಮ್ಯಾದೇವಿಯು ಪ್ರಿಯವ್ರತ, ಉತ್ತಾನಪಾದರೆಂಬೀರ್ವರು ಮಕ್ಕಳನ್ನು ಹಡೆದಳು.

೬. ಈ ಕಾಮ್ಯಾದೇವಿಯು ಕರ್ದಮನೆಂಬ ಬ್ರಹ್ಮನ ಹಿರಿಯಮಗಳು. ಇವಳಿಂದ ಸಾಮ್ರಾಟ್, ಕುಕ್ಷಿ, ವಿರಾಟ್, ಪ್ರಭುಗಳೆಂಬ ಇನ್ನೂ ನಾಲ್ಕು ಮಕ್ಕಳು ಜನಿಸಿದರು.

೭. ಉತ್ತಾನಪಾದಕುಮಾರನನ್ನು ಅತ್ರಿಮುನಿಯು ತನ್ನ ಮಗನಾಗಿ ದತ್ತು ತೆಗೆದುಕೊಂಡನು. ಈ ಉತ್ತಾನಪಾದನಿಂದ ಸೂನೃತಾದೇವಿಯು ನಾಲ್ಕು ಮಕ್ಕಳನ್ನು ಹಡೆದಳು.

shrinath.udupa@gmail.com

ಧರ್ಮಸ್ಯ ಕನ್ಯಾ ಸುಶ್ರೋಣೀ ಸೂನೃತಾ ನಾಮ ವಿಶ್ರುತಾ ।
ಉತ್ಪನ್ನಾ ವಾಜಿಮೇಧೇನ ಧ್ರುವಸ್ಯ ಜನನೀ ಶುಭಾ ॥ ೮ ॥

ಧ್ರುವಂ ಚ ಕೀರ್ತಿಮಂತಂ ಚ ಆಯುಷ್ಮಂತಂ ವಸುಂ ತಥಾ ।
ಉತ್ತಾನಪಾದೋಽಜನಯತ್ಸೂನೃತಾಯಾಂ ಪ್ರಜಾಪತಿಃ ॥ ೯ ॥

ಧ್ರುವೋ ವರ್ಷಸಹಸ್ರಾಣಿ ತ್ರೀಣಿ ದಿವ್ಯಾನಿ ಭೋ ದ್ವಿಜಾಃ ।
ತಪಸ್ತೇಪೇ ಮಹಾಭಾಗಃ ಪ್ರಾರ್ಥಯನ್ ಸುಮಹದ್ಯಶಃ ॥ ೧೦ ॥

ತಸ್ಮೈ ಬ್ರಹ್ಮಾ ದದೌ ಪ್ರೀತಃ ಸ್ಥಾನಮಾತ್ಮಸಮಂ ಪ್ರಭುಃ ।
ಅಚಲಂ ಚೈವ ಪುರತಃ ಸಪ್ತರ್ಷೀಣಾಂ ಪ್ರಜಾಪತಿಃ ॥ ೧೧ ॥

ತಸ್ಯಾಭಿಮಾನಮೃದ್ಧಿಂ ಚ ಮಹಿಮಾನಂ ನಿರೀಕ್ಷ್ಯ ಚ ।
ದೇವಾಸುರಾಣಾಮಾಚಾರ್ಯಃ ಶ್ಲೋಕಂ ಪ್ರಾಗುಶನಾ ಜಗೌ ॥ ೧೨ ॥

---

೮. ಸೂನೃತಾದೇವಿಯು ಧರ್ಮರಾಜನ ಮಗಳು. ಅಶ್ವಮೇಧಯಾಗವನ್ನು ಮಾಡಿ ಧರ್ಮರಾಜನು ಈ ಪುತ್ರಿಯನ್ನು ಪಡೆದನು. ಇವಳೇ ಪ್ರಸಿದ್ಧನಾದ ಧ್ರುವಕುಮಾರನ ಮಾತೆಯು. ಪುರಾಣಗಳಲ್ಲಿ ಇವಳಿಗೆ ಸುನೀತಿ ಎಂದೂ ಹೆಸರುಂಟು.

೯. ಉತ್ತಾನಪಾದರಾಯನು ಸೂನೃತಾದೇವಿಯಲ್ಲಿ ಧ್ರುವ, ಕೀರ್ತಿಮಂತ, ಆಯುಷ್ಮಂತ, ವಸುಗಳೆಂಬ ನಾಲ್ವರು ಮಕ್ಕಳನ್ನು ಪಡೆದನು.

೧೦. ಧ್ರುವಕುಮಾರನು ಉತ್ತಮವಾದ ಕೀರ್ತಿಯನ್ನು ಪಡೆಯಲು ದೇವಮಾನದ ಮೂರು ಸಾವಿರ ವರ್ಷಗಳವರೆಗೆ ಬ್ರಹ್ಮನನ್ನು ಕುರಿತು ಘೋರತಪಸ್ಸನ್ನಾಚರಿಸಿದನು.

೧೧. ಆಗ ಬ್ರಹ್ಮನು ಪ್ರಸನ್ನನಾಗಿ ಆ ಧ್ರುವನಿಗೆ ತನ್ನ ಪದವಿಗೆ ಸಮಾನವಾದಂತಹ ಸ್ಥಿರವಾದ ಸ್ಥಾನವನ್ನು ಕೊಟ್ಟನು. ಸಪ್ತರ್ಷಿಗಳ ಸ್ಥಾನಕ್ಕಿಂತಲೂ ಮೊದಲು ಅಂದರೆ ಮೇಲುಭಾಗದಲ್ಲಿ ಧ್ರುವನ ಸ್ಥಾನ (ಮಂಡಲ) ವು ಇರುವುದು.

೧೨. ಈ ಧ್ರುವನ ಗೌರವವನ್ನೂ ಐಶ್ವರ್ಯವನ್ನೂ ಮಹಿಮೆಯನ್ನೂ ನೋಡಿ ದೇವಾಸುರರಿಗೆ ಆಚಾರ್ಯನಾದ ಭೃಗುಮಹರ್ಷಿಯು ಹೀಗೆ ಹೇಳಿರುವನು.

shrinath.udupa@gmail.com

ಅಹೋಽಸ್ಯ ತಪಸೋ ವೀರ್ಯಮಹೋ ಶ್ರುತಮಹೋಽದ್ಭುತಂ ।
ಯಮದ್ಯ ಪುರತಃ ಕೃತ್ವಾ ಧ್ರುವಂ ಸಪ್ತರ್ಷಯಃ ಸ್ಥಿತಾಃ ॥ ೧೩ ॥

ತಸ್ಮಾಚ್ಛ್ಲಿಷ್ಟಿಂ ಚ ಭವ್ಯಂ ಚ ಧ್ರುವಾಚ್ಛಂಭುರ್ವ್ಯಜಾಯತ ।
ಶ್ಲಿಷ್ಟೇರಾಧತ್ತ ಸುಚ್ಛಾಯಾ ಪಂಚ ಪುತ್ರಾನಕಲ್ಮಷಾನ್ ॥ ೧೪ ॥

ರಿಪುಂ ರಿಪುಂಜಯಂ ವೀರಂ ವೃಕಲಂ ವೃಕತೇಜಸಂ ।
ರಿಪೋರಾಧತ್ತ ಬೃಹತೀ ಚಕ್ಷುಷಂ ಸರ್ವತೇಜಸಂ ॥ ೧೫ ॥

ಅಜೀಜನತ್ಪುಷ್ಕರಿಣ್ಯಾಂ ವೈರಿಣ್ಯಾಂ ಚಾಕ್ಷುಷಂ ಮನುಂ ।
ಪ್ರಜಾಪತೇರಾತ್ಮಜಾಯಾಂ ವೀರಣಸ್ಯ ಮಹಾತ್ಮನಃ ॥ ೧೬ ॥

ಮನೋರಜಾಯಂತ ದಶ ನಡ್ವಲಾಯಾಂ ಮಹೌಜಸಃ ।
ಕನ್ಯಾಯಾಂ ಮುನಿಶಾರ್ದೂಲಾ ವೈರಾಜಸ್ಯ ಪ್ರಜಾಪತೇಃ ॥ ೧೭ ॥

---

೧೩. ಧ್ರುವನ ತಪಸ್ಸಿನ ಮಹಿಮೆಯು ಆಶ್ಚರ್ಯಕರವಾದುದು, ಮಹಾಜ್ಞಾನಿಯಿವನು. ಸಪ್ತರ್ಷಿಗಳೂ ಸಹ ಈ ಧ್ರುವನನ್ನು ಮುಂದಿಟ್ಟುಕೊಂಡಿರುವರು.

೧೪. ಆ ಧ್ರುವನಿಂದ ಶಂಭುದೇವಿಯು ಶ್ಲಿಷ್ಟಿ, ಭವ್ಯರೆಂಬೀರ್ವರು ಮಕ್ಕಳನ್ನು ಪಡೆದಳು. ಶ್ಲಿಷ್ಟಿಯಿಂದ ಸುಚ್ಛಾಯಾದೇವಿಯು, ರಿಪು, ರಿಪುಂಜಯ, ವೀರ, ವೃಕಲ, ವೃಕತೇಜಸರೆಂಬ ಐದುಮಂದಿ ಪುಣ್ಯಾತ್ಮರಾದ ಮಕ್ಕಳನ್ನು ಪಡೆದಳು.

೧೫-೧೬. ರಿಪುರಾಜನಿಂದ ಬೃಹತೀದೇವಿಯು ತೇಜಸ್ವಿಯಾದ ಚಕ್ಷುಷನೆಂಬ ಕುಮಾರನನ್ನು ಹಡೆದಳು. ಚಕ್ಷುಷನು ವೀರಬ್ರಹ್ಮನ ಮಗಳಾದ ಪುಷ್ಕರಿಣೀದೇವಿಯಲ್ಲಿ ಚಾಕ್ಷುಷಮನುವನ್ನು ಪಡೆದನು.

೧೭. ವಿರಾಟ್ಪುರುಷನ ಮಗನಾದ ಮನುಚಕ್ರವರ್ತಿಯಿಂದ ನಡ್ವಲಾದೇವಿಯಲ್ಲಿ ಮಹಾತೇಜಸ್ವಿಗಳಾದ ಹತ್ತುಮಕ್ಕಳು ಜನಿಸಿದರು.

shrinath.udupa@gmail.com

ಕುತ್ಸಃ ಪುರುಃ ಶತದ್ಯುಮ್ನಸ್ತಪಸ್ವೀ ಸತ್ಯವಾಕ್ಕವಿಃ ।
ಅಗ್ನಿಷ್ಟುದತಿರಾತ್ರಶ್ಚ ಸುದ್ಯುಮ್ನಶ್ಚೇತಿ ತೇ ನವ ॥ ೧೮ ॥

ಅಭಿಮನ್ಯುಶ್ಚ ದಶಮೋ ನಡ್ವಲಾಯಾಂ ಮಹೌಜಸಃ ।
ಪುರೋರಜನಯತ್ಪುತ್ರಾನ್ ಷಡಾಗ್ನೇಯಿ ಮಹಾಪ್ರಭಾನ್ ॥ ೧೯ ॥

ಅಂಗಂ ಸುಮನಸಂ ಸ್ವಾತಿಂ ಕ್ರತುಮಂಗಿರಸಂ ಮಯಂ ।
ಅಂಗಾತ್ಸುನೀಥಾಪತ್ಯಂ ವೈ ವೇನಮೇಕಂ ವ್ಯಜಾಯತ ॥ ೨೦ ॥

ಅಪಚಾರೇಣ ವೇನಸ್ಯ ಪ್ರಕೋಪಃ ಸುಮಹಾನಭೂತ್ ।
ಪ್ರಜಾರ್ಥಮೃಷಯೋ ಯಸ್ಯ ಮಮಂಥುರ್ದಕ್ಷಿಣಂ ಕರಂ ॥ ೨೧ ॥

ವೇನಸ್ಯ ಮಥಿತೇ ಪಾಣೌ ಸಂಬಭೂವ ಮಹಾನ್ನೃಪಃ ।
ತಂ ದೃಷ್ಟ್ವಾ ಮುನಯಃ ಪ್ರಾಹುರೇಷ ವೈ ಮುದಿತಾಃ ಪ್ರಜಾಃ ॥ ೨೨ ॥

---

೧೮. ಕುತ್ಸ, ಪುರು, ಶತದ್ಯುಮ್ನ, ತಪಸ್ವೀ, ಸತ್ಯವಾಕ್, ಕವಿ, ಅಗ್ನಿಷ್ಟುತ್, ಅತಿರಾತ್ರ, ಸುದ್ಯುಮ್ನ, ಅಭಿಮನ್ಯು. ಈ ಹತ್ತು ಮಂದಿಗಳು ನಡ್ವಲಾದೇವಿಯ ಮಕ್ಕಳು.

೧೯. ಪುರುವಿನಿಂದ ಆಗ್ನೇಯಿದೇವಿಯು ಅಂಗ, ಸುಮನಸ, ಸ್ವಾತಿ, ಕ್ರತು ಅಂಗಿರಸ, ಮಯರೆಂಬ ಆರುಮಂದಿ ಮಕ್ಕಳನ್ನು ಪಡೆದಳು.

೨೦. ಅಂಗರಾಜನಿಂದ ಸುನೀತಾದೇವಿಯಲ್ಲಿ ವೇನಕುಮಾರನು ಜನಿಸಿದನು ಈ ವೇನರಾಜನ ದುರಾಚಾರದಿಂದಲೂ ದಬ್ಬಾಳಿಕೆಯಿಂದಲೂ ಪ್ರಜೆಗಳಿಗೂ ಋಷಿಗಳಿಗೂ ತುಂಬಾ ಕೋಪವುಂಟಾಯಿತು.

೨೧–೨೨. ಲೋಕಕ್ಷೇಮಕ್ಕಾಗಿ ಆ ವೇನನನ್ನು ಋಷಿಗಳು ಸಂಹರಿಸಿದರು. ಆ ವೇನನಿಗೆ ಮಕ್ಕಳಿರಲಿಲ್ಲ. ಮಕ್ಕಳಿಗಾಗಿ ಋಷಿಗಳು ವೇನನ ಬಲಗೈಯನ್ನು ಕಡೆದರು. ಆಗ ಆ ಕೈಯ್ಯಿಂದ ತೇಜಸ್ವಿಯಾದ ಕುಮಾರನೋರ್ವನು ಜನಿಸಿದನು. ಅವನನ್ನು ನೋಡಿ ಮುನಿಗಳು ಜ್ಞಾನದೃಷ್ಟಿಯಿಂದ–

shrinath.udupa@gmail.com

ಕರಿಷ್ಯತಿ ಮಹಾತೇಜಾ ಯಶಶ್ಚ ಪ್ರಾಪ್ಸ್ಯತೇ ಮಹತ್ ।
ಸ ಧನ್ವೀ ಕವಚೀ ಜಾತೋ ಜ್ವಲಜ್ಜ್ವಲನಸನ್ನಿಭಃ ॥ ೨೩ ॥

ಪೃಥುರ್ವೈನ್ಯಸ್ತಥಾ ಚೇಮಾಂ ರರಕ್ಷ ಕ್ಷತ್ರಪೂರ್ವಜಃ ।
ರಾಜಸೂಯಾಭಿಷಿಕ್ತಾನಾಮಾದ್ಯಸ್ಸ ವಸುಧಾಧಿಪಃ ॥ ೨೪ ॥

ತಸ್ಮಾಚ್ಚೈವ ಸಮುತ್ಪನ್ನೌ ನಿಪುಣೌ ಸೂತಮಾಗಧೌ ।
ತೇನೇಯಂ ಗೌರ್ಮುನಿಶ್ರೇಷ್ಠಾ ದುಗ್ಧಾ ಸಸ್ಯಾನಿ ಭೂಭೃತಾ ॥ ೨೫ ॥

ಪ್ರಜಾನಾಂ ವೃತ್ತಿಕಾಮೇನ ದೇವೈಸ್ಸರ್ಷಿಗಣೈಸ್ಸಹ ।
ಪಿತೃಭಿರ್ದಾನವೈಶ್ಚೈವ ಗಂಧರ್ವೈರಪ್ಸರೋಗಣೈಃ ॥ ೨೬ ॥

ಸರ್ಪೈಃ ಪುಣ್ಯಜನೈಶ್ಚೈವ ವೀರುದ್ಭಿಃ ಪರ್ವತೈಸ್ತಥಾ ।
ತೇಷು ತೇಷು ಚ ಪಾತ್ರೇಷು ದುಹ್ಯಮಾನಾ ವಸುಂಧರಾ ॥ ೨೭ ॥

---

೨೩. ಜ್ವಲಿಸುವ ಅಗ್ನಿಯಂತೆ ತೇಜಸ್ವಿಯಾದ ಈ ಕುಮಾರನು ಉತ್ತಮ ಬಿಲ್ಲುಗಾರನೂ ವಜ್ರಕವಚವುಳ್ಳವನೂ ಆಗಿದ್ದು ಪ್ರಜೆಗಳನ್ನು ಸುಖವಾಗಿ ರಕ್ಷಿಸುವನು ಮತ್ತು ಮಹತ್ತಾದ ಯಶಸ್ಸನ್ನು ಸಂಪಾದಿಸುವನು ಎಂದನು.

೨೪. ಈ ವೇನಕುಮಾರನಿಗೆ ಪೃಥುವೆಂದು ಹೆಸರು. ಕ್ಷತ್ರಿಯರಲ್ಲಿ ಮೊದಲಿಗನಾದ ಇವನು ಪ್ರಜೆಗಳನ್ನು ಧರ್ಮದಿಂದ ಪಾಲಿಸಿದನು. ರಾಜಸೂಯಯಾಗವನ್ನು ಮಾಡಿದವರಲ್ಲಿ ಇವನು ಮೊದಲನೆಯವನು.

೨೫. ಈ ಪೃಥುಚಕ್ರವರ್ತಿಯಿಂದ ಸೂತ ಮತ್ತು ಮಾಗಧರೆಂಬ ಮಕ್ಕಳು ಜನಿಸಿದರು. ಎಲೈ ಮುನಿಗಳೇ, ಈ ಪೃಥುವೇ ಹಸುವಿನ ರೂಪವನ್ನು ಧರಿಸಿದ ಭೂಮಿಯಿಂದ ಪ್ರಜೆಗಳ ಜೀವನಕ್ಕಾಗಿ ಸಸ್ಯಮೊದಲಾದುವುಗಳನ್ನು ಕರೆದನು.

೨೬–೨೭. ಅಲ್ಲದೆ ಆಗ ದೇವತೆಗಳು, ಋಷಿಗಳು, ಪಿತೃಗಳು, ದಾನವರು, ಗಂಧರ್ವರು, ಅಪ್ಸರೆಯರು, ದೈತ್ಯರು, ಲತೆಗಳು, ಪರ್ವತಗಳು ಇವೆಲ್ಲವೂ ಗೋರೂಪವಾದ ಭೂಮಿಯನ್ನು ತಮ್ಮತಮ್ಮ ಪಾತ್ರೆಗಳಲ್ಲಿ ಕರೆದರು. ಭೂಮಿಯು ಅವರೆಲ್ಲರಿಗೂ ಬೇಕಾದ ವಸ್ತುಗಳನ್ನು ಹಾಲಿನಂತೆ ಕೊಟ್ಟಿತು. ಅದರಿಂದ ಅವರೆಲ್ಲರೂ ಜೀವನವನ್ನು ನಡೆಸುವವರಾದರು.

shrinath.udupa@gmail.com

ಪ್ರಾದಾದ್ಯಥೇಪ್ಸಿತಂ ಕ್ಷೀರಂ ತೇನ ಪ್ರಾಣಾನಧಾರಯರ್ |
ಪೃಥೋಸ್ತು ಪುತ್ರೌ ಧರ್ಮಜ್ಞೌ ಯಜ್ಞಾಂತೇಂತರ್ಧಿಪಾತಿನೌ ॥ ೨೮ ॥

ಶಿಖಂಡಿನೀ ಹವಿರ್ಧಾನಮಂತರ್ಧಾನಾದ್ವ್ಯಜಾಯತ |
ಹವಿರ್ಧಾನಾತ್ ಷಡಾಗ್ನೇಯೀ ಧಿಷಣಾऽಜನಯತ್ಸುತಾನ್ ॥ ೨೯ ॥

ಪ್ರಾಚೀನಬರ್ಹಿಷಂ ಶುಕ್ರಂ ಗಯಂ ಕೃಷ್ಣಂ ವ್ರಜಾಜಿನೌ |
ಪ್ರಾಚೀನಬರ್ಹಿರ್ಭಗವಾನ್ ಮಹಾನಾಸೀತ್ಪ್ರಜಾಪತಿಃ ॥ ೩೦ ॥

ಹವಿರ್ಧಾನಾನ್ಮುನಿಶ್ರೇಷ್ಠಾ ಯೇನ ಸಂವರ್ಧಿತಾಃ ಪ್ರಜಾಃ |
ಸಮುದ್ರತನಯಾಯಾಂ ತು ಕೃತದಾರೋऽಭವತ್ಪ್ರಭುಃ ॥ ೩೧ ॥

ಮಹತಸ್ತಪಸಃ ಪಾರೇ ಸವರ್ಣಾಯಾಂ ಪ್ರಜಾಪತಿಃ |
ಪ್ರಾಚೀನಬರ್ಹಿರ್ಭಗವಾನ್ ಪೃಥಿವೀತಲಚಾರಿಣೀಃ ॥ ೩೨ ॥

ಸವರ್ಣಾऽऽಧತ್ತ ಸಾಮುದ್ರೀ ದಶ ಪ್ರಾಚೀನಬರ್ಹಿಷಃ |
ಸರ್ವಾನ್ ಪ್ರಚೇತಸೋ ನಾಮ ಧನುರ್ವೇದಸ್ಯ ಪಾರಗಾನ್ ॥ ೩೩ ॥

---

೨೮. ಪೃಥುರಾಜನು ರಾಜಸೂಯಯಾಗವನ್ನು ಮಾಡಿದಮೇಲೆ ಅವನಿಗೆ ಅಂತರ್ಧಿಪಾತಿಗಳೆಂಬ ಈರ್ವರು ಮಕ್ಕಳು ಜನಿಸಿದರು. ಅಂತರ್ಧಿಯಿಂದ ಶಿಖಂಡಿನೀ ದೇವಿಯಲ್ಲಿ ಹವಿರ್ಧಾನನೆಂಬ ಮಗನು ಜನಿಸಿದನು.

೨೯. ಹವಿರ್ಧಾನನಿಂದ ಆಗ್ನೇಯದೇವಿಯು ಪ್ರಾಚಿನಬರ್ಹಿಷ, ಶುಕ್ರ, ಗಯ. ಕೃಷ್ಣ, ವ್ರಜ ಅಜಿನರೆಂಬ ಆರುಮಂದಿ ಮಕ್ಕಳನ್ನು ಪಡೆದಳು.

೩೦. ಹವಿರ್ಧಾನನ ಹಿರಿಯಮಗನಾದ ಪ್ರಾಚೀನಬರ್ಹಿಷನು ಮಹಾಮಹಿಮನಾಗಿದ್ದನು. ಅವನಿಂದ ಅನೇಕ ಮಕ್ಕಳು ಜನಿಸಿದರು.

೩೧–೩೨. ಪ್ರಜೇಶ್ವರನಾದ ಈ ಪ್ರಾಚೀನಬರ್ಹಿಷನು ಬಹುಕಾಲ ಮಹಾತಪಸ್ಸನ್ನಾಚರಿಸಿದನು. ಆಮೇಲೆ ಸಮುದ್ರನ ಮಗಳಾದ ಸವರ್ಣಾದೇವಿಯೆಂಬುವಳನ್ನು ಮದುವೆಯಾದನು.

೩೩. ಆ ಸವರ್ಣಾದೇವಿಯು ಪ್ರಾಚೀನಬರ್ಹಿಷನಿಂದ ಹತ್ತುಜನಮಕ್ಕಳನ್ನು ಪಡೆದಳು, ಅವರೆಲ್ಲರೂ ಧನುರ್ವೇದದಲ್ಲಿ ಪಂಡಿತರು. ಉತ್ತಮರಣಕೋವಿದರು. " ಪ್ರಚೇತಸ " ರೆಂದು ಅವರೆಲ್ಲರಿಗೂ ಹೆಸರು.

shrinath.udupa@gmail.com

ಅಪೃಥಗ್ಧರ್ಮಚರಣಾಸ್ತೇಽತಪ್ಯಂತ ಮಹತ್ತಪಃ ।
ದಶವರ್ಷಸಹಸ್ರಾಣಿ ಸಮುದ್ರಸಲಿಲೇಶಯಾಃ ॥ ೩೪ ॥

ತಪಶ್ಚರತ್ಸು ಪೃಥಿವೀಂ ಪ್ರಚೇತಸ್ಸು ಮಹೀರುಹಾಃ ।
ಅರಕ್ಷಮಾಣಾಮಾವವ್ರುರ್ಬಭೂವಾಥ ಪ್ರಜಾಕ್ಷಯಃ ॥ ೩೫ ॥

ನಾಶಕನ್ಮಾರುತೋ ವಾತುಂ ವೃತಂ ಖಮಭವದ್ದ್ರುಮೈಃ ।
ದಶವರ್ಷಸಹಸ್ರಾಣಿ ನ ಶೇಕುಶ್ಚೇಷ್ಟಿತುಂ ಪ್ರಜಾಃ ॥ ೩೬ ॥

ತದುಪಶ್ರುತ್ಯ ತಪಸಾ ಯುಕ್ತಾಸ್ಸರ್ವೇ ಪ್ರಚೇತಸಃ ।
ಮುಖೇಭ್ಯೋ ವಾಯುಮಗ್ನಿಂ ಚ ಸಸೃಜುರ್ಜಾತಮನ್ಯವಃ ॥ ೩೭ ॥

ಉನ್ಮೂಲಾನಥ ವೃಕ್ಷಾಂಸ್ತು ಕೃತ್ವಾ ವಾಯುರಶೋಷಯತ್ ।
ತಾನಗ್ನಿರದಹದ್ಘೋರ ಏವಮಾಸೀದ್ದ್ರುಮಕ್ಷಯಃ ॥ ೩೮ ॥

---

೩೪. ಆ ಹತ್ತುಮಂದಿ ಪ್ರಚೇತಸರೂ ಸಹ ಸಾಗರದ ನೀರಿನಲ್ಲಿ ನಿಂತು ಘೋರವಾದ ತಪಸ್ಸನ್ನು ಹತ್ತುಸಾವಿರ ವರ್ಷಗಳವರೆಗೆ ಮಾಡಿದರು.

೩೫. ಪ್ರಚೇತಸರು ಹೀಗೆ ಘೋರತಪಸ್ಸನ್ನಾಚರಿಸುತ್ತಿರಲು ಅವರ ತಪ್ರೋಜ್ವಾಲೆಯಿಂದ ಬೆಂದು ಮರಗಳೆಲ್ಲವೂ ಭೂಮಿಯಲ್ಲುರುಳಿದುವು. ಅನೇಕ ಪ್ರಜೆಗಳು ನಷ್ಟರಾದರು.

೩೬. ಗಾಳಿಯೂ ಬೀಸಲಾರದಾಯಿತು. ಭೂಮಿಯಲ್ಲಲ್ಲೆಲ್ಲಾ ಮರಗಳುರುಳಿಬಿದ್ದವು. ಆಗ ಹತ್ತುಸಾವಿರವರ್ಷಗಳೂ ಸಹ ಪ್ರಜೆಗಳು ಚಲಿಸಲೂ ಅಸಮರ್ಥರಾದರು.

೩೭. ಇದೆಲ್ಲವನ್ನೂ ನೋಡಿ ಆ ಪ್ರಚೇತಸರು ಮತ್ತೂ ಘೋರವಾದ ತಪಸ್ಸನ್ನಾಚರಿಸುತ್ತಾ ಕೋಪದಿಂದ ತಮ್ಮ ಮುಖಗಳಿಂದ ವಾಯುವನ್ನೂ ಅಗ್ನಿಯನ್ನೂ ತ್ಯಜಿಸಿದರು.

೩೮. ಆ ವಾಯುವು ಮರಗಳೆಲ್ಲವನ್ನೂ ಬುಡಸಹಿತವಾಗಿ ಕಿತ್ತುಹಾಕಿತು. ಅಗ್ನಿಯು ಆ ಮರಗಳೆಲ್ಲವನ್ನೂ ಸುಟ್ಟುಹಾಕಿತು. ಹೀಗೆ ಮರಗಳು ನಾಶವಾದುವು.

shrinath.udupa@gmail.com

ದ್ರುಮಕ್ಷಯಮಥೋ ಬುದ್ಧ್ವಾ ಕಿಂಚಿಚ್ಛಿಷ್ಟೇಷು ಶಾಖಿಷು ।
ಉಪಗಮ್ಯಾಬ್ರವೀದೇತಾಂಸ್ತದಾ ಸೋಮಃ ಪ್ರಜಾಪತೀನ್ ॥ ೩೯ ॥

ಕೋಪಂ ಯಚ್ಛಥ ರಾಜಾನಃ ಸರ್ವೇ ಪ್ರಾಚೀನಬರ್ಹಿಷಃ ।
ವೃಕ್ಷಶೂನ್ಯಾ ಕೃತಾ ಪೃಥ್ವೀ ಶಾಮ್ಯೇತಾಮಗ್ನಿಮಾರುತೌ ॥ ೪೦ ॥

ರತ್ನಭೂತಾ ಚ ಕನ್ಯೇಯಂ ವೃಕ್ಷಾಣಾಂ ವರವರ್ಣಿನೀ ।
ಭವಿಷ್ಯಂ ಜಾನತಾ ತಾತ ಧೃತಾ ಗರ್ಭೇಣ ವೈ ಮಯಾ ॥ ೪೧ ॥

ಮಾರಿಷಾ ನಾಮ ನಾಮ್ನೈಷಾ ವೃಕ್ಷಾಣಾಮಿತಿ ನಿರ್ಮಿತಾ ।
ಭಾರ್ಯಾ ವೋಽಸ್ತು ಮಹಾಭಾಗಾಃ ಸೋಮವಂಶವಿವರ್ಧಿನೀ ॥ ೪೨ ॥

ಯುಷ್ಮಾಕಂ ತೇಜಸೋಽರ್ಧೇನ ಮಮ ಚಾರ್ಧೇನ ತೇಜಸಃ ।
ಅಸ್ಯಾಮುತ್ಪತ್ಸ್ಯತೇ ವಿದ್ವಾನ್ ದಕ್ಷೋ ನಾಮ ಪ್ರಜಾಪತಿಃ ॥ ೪೩ ॥

---

೩೯. ಹೀಗೆ ಮರಗಳು ನಾಶವಾಗಿ ಕೆಲವೇ ಮರಗಳುಳಿದಿದ್ದವು. ಅವನ್ನು ನೋಡಿ ಚಂದ್ರನು ಬಂದು ಆ ಪ್ರಾಚೇತಸರನ್ನು ಕುರಿತು

೪೦. ಪ್ರಾಚೀಬರ್ಹಿಷನ ಮಕ್ಕಳಾದ ಎಲೈ ಪ್ರಚೇತಸರೇ, ಕೋಪವನ್ನು ಬಿಡಿರಿ, ಭೂಮಿಯಲ್ಲಿ ಮರಗಳೇ ಇಲ್ಲದಂತಾಗುತ್ತಿದೆ. ನೀವು ಸೃಜಿಸಿದ ಅಗ್ನಿವಾಯುಗಳನ್ನು ಶಾಂತಗೊಳಿಸಿ.

೪೧. ಈ ವೃಕ್ಷಗಳ ಕನ್ಯೆಯೋರ್ವಳಿರುವಳು, ಅವಳು ಸ್ತ್ರೀರತ್ನವಾಗಿರುವಳು. ಭವಿಷ್ಯವನ್ನು ತಿಳಿದು ನಾನು ಅವಳನ್ನು ನನ್ನ ಗರ್ಭದಲ್ಲಿ ಧರಿಸಿದ್ದೆನು.

೪೨. ವೃಕ್ಷಕನ್ಯೆಯಾದ ಅವಳಿಗೆ ಮಾರಿಷಾದೇವಿಯೆಂದು ಹೆಸರಿಟ್ಟಿರುವೆನು. ಎಲೈ ಮಹಾಮಹಿಮರೇ, ಆ ಕನ್ಯೆಯು ನಿಮ್ಮ ಭಾರ್ಯೆಯಾಗಿ ಚಂದ್ರವಂಶವನ್ನು ಬೆಳೆಸುವಳು.

೪೩. ನಿಮ್ಮ ಅರ್ಧತೇಜಸ್ಸಿನಿಂದಲೂ ನನ್ನ ಅರ್ಧತೇಜಸ್ಸಿನಿಂದಲೂ ಈ ಮಾರಿಷಾದೇವಿಯಲ್ಲಿ ವಿದ್ವಾಂಸನಾದ ದಕ್ಷನೆಂಬ ಪ್ರಜಾಪತಿಯು ಜನಿಸುವನು.

shrinath.udupa@gmail.com

ಸ ಇಮಾಂ ದಗ್ಧಭೂಯಿಷ್ಠಾಂ ಯುಷ್ಮತ್ತೇಜೋಮಯೇನ ವೈ ।
ಅಗ್ನಿನಾಗ್ನಿಸಮೋ ಭೂಯಃ ಪ್ರಜಾಸ್ಸಂವರ್ಧಯಿಷ್ಯತಿ ॥ ೪೪ ॥

ತತಸ್ಸೋಮಸ್ಯ ವಚನಾಜ್ಜಗೃಹುಸ್ತೇ ಪ್ರಚೇತಸಃ ।
ಸಂಹೃತ್ಯ ಕೋಪಂ ವೃಕ್ಷೇಭ್ಯಃ ಪತ್ನೀಂ ಧರ್ಮೇಣ ಮಾರಿಷಾಂ ॥ ೪೫ ॥

ದಶಭ್ಯಸ್ತು ಪ್ರಚೇತೋಭ್ಯೋ ಮಾರಿಷಾಯಾಂ ಪ್ರಜಾಪತಿಃ ।
ದಕ್ಷೋ ಜಜ್ಞೇ ಮಹಾತೇಜಾಃ ಸೋಮಸ್ಯಾಂಶೇನ ಭೋ ದ್ವಿಜಾಃ ॥ ೪೬ ॥

ಅಚರಾಂಶ್ಚ ಚರಾಂಶ್ಚೈವ ದ್ವಿಪದೋಽಥ ಚತುಷ್ಪದಃ ।
ಸ ಸೃಷ್ಟ್ವಾ ಮನಸಾ ದಕ್ಷಃ ಪಶ್ಚಾದಸೃಜತ ಸ್ತ್ರಿಯಃ ॥ ೪೭ ॥

ದದೌ ಸ ದಶ ಧರ್ಮಾಯ ಕಶ್ಯಪಾಯ ತ್ರಯೋದಶ ।
ಶಿಷ್ಟಾಸ್ಸೋಮಾಯ ರಾಜ್ಞೇ ಚ ನಕ್ಷತ್ರಾಖ್ಯಾ ದದೌ ಪ್ರಭುಃ ॥ ೪೮ ॥

---

೪೪. ಅಗ್ನಿಯಂತೆ ತೇಜಸ್ವಿಯಾದ ದಕ್ಷನು ನಿಮ್ಮ ತೇಜೋರೂಪವಾದ ಅಗ್ನಿಯಿಂದ ಸುಟ್ಟುಹೋದ ಭೂಮಿಯನ್ನೂ ಬಳಲಿದ ಪ್ರಜೆಗಳನ್ನೂ ರಕ್ಷಿಸುವನು. ಎಂದನು.

೪೫. ಚಂದ್ರನು ಹೀಗೆ ಹೇಳಲು ಆ ಪ್ರಚೇತಸರು ತಮ್ಮ ಕೋಪವನ್ನು ಬಿಟ್ಟು ವೃಕ್ಷಕನ್ಯೆಯಾದ ಮಾರಿಷಾದೇವಿಯನ್ನು ಧರ್ಮದಿಂದ ಮದುವೆಯಾದರು.

೪೬. ಆ ಹತ್ತುಮಂದಿ ಪ್ರಚೇತಸರಿಂದ ಮಾರಿಷಾದೇವಿಯಲ್ಲಿ ಮಹಾತೇಜಸ್ವಿಯಾದ ದಕ್ಷಬ್ರಹ್ಮನು ಚಂದ್ರನ ಅಂಶದಿಂದ ಜನಿಸಿದನು.

೪೭. ಆ ದಕ್ಷನು ಪರ್ವತವೊದಲಾದ ಸ್ಥಿರವಸ್ತುಗಳನ್ನೂ ಮನುಷ್ಯ ಮೊದಲಾದ ಎರಡುಕಾಲಿನ ಮತ್ತು ಹಸು ಮೊದಲಾದ ನಾಲ್ಕುಕಾಲುಗಳುಳ್ಳ ಪ್ರಾಣಿಗಳನ್ನೂ ಸೃಜಿಸಿದನು. ಆಮೇಲೆ ಸ್ತ್ರೀಯರನ್ನು ಸೃಜಿಸಿದನು.

೪೮. ಆ ದಕ್ಷನಿಗೆ ಐವತ್ತುಮಂದಿ ಹೆಣ್ಣುಮಕ್ಕಳು. ಅವರಲ್ಲಿ ಹತ್ತುಮಂದಿಯನ್ನು ಯಮಧರ್ಮನಿಗೆ ಮದುವೆಮಾಡಿಕೊಟ್ಟನು. ಕಶ್ಯಪಬ್ರಹ್ಮನಿಗೆ ಹದಿಮೂರುಮಂದಿ ಕನ್ಯೆಯರನ್ನು ಮದುವೆಮಾಡಿಕೊಟ್ಟನು. ಮಿಕ್ಕ ಇಪ್ಪತ್ತೇಳುಮಂದಿ ನಕ್ಷತ್ರಕನ್ಯೆಯರನ್ನು ಚಂದ್ರನಿಗೆ ಮದುವೆಮಾಡಿಕೊಟ್ಟನು.

shrinath.udupa@gmail.com

ತಾಸು ದೇವಾಃ ಖಗಾ ಗಾವೋ ನಾಗಾ ದಿತಿಜದಾನವಾಃ ।
ಗಂಧರ್ವಾಪ್ಸರಸಶ್ಚೈವ ಜಜ್ಞಿರೇಽನ್ಯಾಶ್ಚ ಜಾತಯಃ ॥ ೪೯ ॥

ತತಃ ಪ್ರಭೃತಿ ವಿಪ್ರೇಂದ್ರಾಃ ಪ್ರಜಾ ಮೈಥುನಸಂಭವಾಃ ।
ಸಂಕಲ್ಪಾದ್ದರ್ಶನಾತ್ಸ್ಪರ್ಶಾತ್ಪೂರ್ವೇಷಾಂ ಪ್ರೋಚ್ಯತೇ ಪ್ರಜಾ ॥ ೫೦ ॥

॥ ಮುನಯ ಊಚುಃ ॥

ದೇವಾನಾಂ ದಾನವಾನಾಂ ಚ ಗಂಧರ್ವೋರಗರಕ್ಷಸಾಂ ।
ಸಂಭವಸ್ತು ಶ್ರುತೋಽಸ್ಮಾಭಿರ್ದಕ್ಷಸ್ಯ ಚ ಮಹಾತ್ಮನಃ ॥ ೫೧ ॥

ಅಂಗುಷ್ಠಾದ್ಬ್ರಹ್ಮಣೋ ಜಜ್ಞೇ ದಕ್ಷಃ ಕಿಲ ಶುಭವ್ರತಃ ।
ವಾಮಾಂಗುಷ್ಠಾತ್ತಥಾ ಚೈವಂ ತಸ್ಯ ಪತ್ನೀ ವ್ಯಜಾಯತ ॥ ೫೨ ॥

ಕಥಂ ಪ್ರಾಚೇತಸತ್ವಂ ಸ ಪುನರ್ಲೇಭೇ ಮಹಾತಪಾಃ ।
ಏವಂ ನಸ್ಸಂಶಯಂ ಸೂತ ವ್ಯಾಖ್ಯಾತುಂ ತ್ವಮಿಹಾರ್ಹಸಿ ।

---

೪೯. ಆ ದಕ್ಷಪುತ್ರಿಯರಲ್ಲಿ ದೇವತೆಗಳು, ಪಕ್ಷಿಗಳು, ಪಶುಗಳು, ನಾಗಗಳು, ದೈತ್ಯರು, ದಾನವರು, ಗಂಧರ್ವರು, ಅಪ್ಸರೆಯರು. ಮೊದಲಾದ ಜಾತಿಯವರು ಜನಿಸಿದರು.

೫೦. ಎಲೈ ಮುನಿಗಳೇ, ಅದುಮೊದಲುಗೊಂಡು ಪ್ರಜೆಗಳು ಸ್ತ್ರೀಪುರುಷ ಸಂಪರ್ಕದಿಂದ ಜನಿಸುವರು ಹೀಗೆ ಮೊದಲು ಮನಸ್ಸಂಕಲ್ಪದಿಂದಲೂ, ಜ್ಞಾನದಿಂದಲೂ ಆಮೇಲೆ ಸ್ತ್ರೀಸಂಪರ್ಕದಿಂದಲೂ ಪ್ರಜೆಗಳು ಜನಿಸಿದರು.

೫೧. ಮುನಿಗಳು ಕೇಳಿದರು ;—ಓ ಸೂತಮುನಿ, ದೇವತೆಗಳು, ದಾನವರು, ಗಂಧರ್ವರು, ರಾಕ್ಷಸರು, ಇವರೆಲ್ಲರ ಮತ್ತು ಮಹಾತ್ಮನಾದ ದಕ್ಷಬ್ರಹ್ಮನ ಉತ್ಪತ್ತಿ ಕಥೆಯನ್ನು ಕೇಳಿದೆವು.

೫೨. ಆದರೆ ದಕ್ಷಬ್ರಹ್ಮನು ಬ್ರಹ್ಮನ ಬಲಕಾಲಿನ ಅಂಗುಷ್ಠದಿಂದಲೂ ಅವನ ಪತ್ನಿಯು ಎಡಗಾಲಿನ ಅಂಗುಷ್ಟದಿಂದಲೂ ಜನಿಸಿರುವರಲ್ಲವೇ ?

೫೩. ಹೀಗಿರಲು ಆ ದಕ್ಷನು ತಿರುಗಿ ಪ್ರಚೇತಸರ ಮಗನಾಗಿ ಹೇಗೆ ಜನಿಸಿದನು ? ಚಂದ್ರನ ಮಗಳ ಮಗನಾದ ಆ ದಕ್ಷನು ಆ ಚಂದ್ರನಿಗೇ ಹೆಣ್ಣುಕೊಟ್ಟ ಮಾವನು ಹೇಗಾದನು ? ಇದು ನಮಗೆ ಸಂದೇಹವಾಗಿ ಕಾಣುತ್ತಲಿದೆ. ಓ ಮುನಿ ? ಇದನ್ನು ಸರಿಯಾಗಿ ಹೇಳಬೇಕು ಎಂದರು

shrinath.udupa@gmail.com

ದೌಹಿತ್ರಶ್ಚೈವ ಸೋಮಸ್ಯ ಕಥಂ ಶ್ವಶುರತಾಂ ಗತಃ । ॥ ೫೩ ॥

॥ ಲೋಮಹರ್ಷಣ ಉವಾಚ ॥

ಉತ್ಪತ್ತಿಶ್ಚ ನಿರೋಧಶ್ಚ ನಿತ್ಯಂ ಭೂತೇಷು ಭೋ ದ್ವಿಜಾಃ ।
ಋಷಯೋಽತ್ರ ನ ಮುಹ್ಯಂತಿ ವಿದ್ಯಾವಂತಶ್ಚ ಯೇ ಜನಾಃ ॥ ೫೪ ॥

ಯುಗೇ ಯುಗೇ ಭವಂತ್ಯೇತೇ ಪುನರ್ದಕ್ಷಾದಯೋ ನೃಪಾಃ ।
ಪುನಶ್ಚೈವ ನಿರುಧ್ಯಂತೇ ವಿದ್ವಾಂಸ್ತತ್ರ ನ ಮುಹ್ಯತಿ ॥ ೫೫ ॥

ಜ್ಯೈಷ್ಠ್ಯಂ ಕಾನಿಷ್ಠ್ಯಮಪ್ಯೇಷಾಂ ಪೂರ್ವಂ ನಾಸೀದ್ದ್ವಿಜೋತ್ತಮಾಃ ।
ತಪ ಏವ ಗರೀಯೋಽಭೂತ್ಪ್ರಭಾವಶ್ಚೈವ ಕಾರಣಂ ॥ ೫೬ ॥

ಇಮಾಂ ವಿಸೃಷ್ಟಿಂ ದಕ್ಷಸ್ಯ ಯೋ ವಿದ್ಯಾತ್ಸಚರಾಚರಾಂ ।
ಪ್ರಜಾವಾನಾಯುರುತ್ತೀರ್ಣಃ ಸ್ವರ್ಗಲೋಕೇ ಮಹೀಯತೇ ॥ ೫೭ ॥

ಇತಿ ಶ್ರೀಮಹಾಪುರಾಣೇ ಬ್ರಾಹ್ಮೇ ಸೃಷ್ಟಿಕಥನವರ್ಣನಂ
ನಾಮ ದ್ವಿತೀಯೋಽಧ್ಯಾಯಃ

---

೫೪. ಸೂತಮುನಿಯಿಂತೆಂದನು :—ಎಲೈ ಮುನಿಗಳೇ, ಪ್ರಾಣಿಗಳು ತಮ್ಮ ತಮ್ಮ ಕರ್ಮಾನುಸಾರವಾಗಿ ನಿತ್ಯವೂ ಹುಟ್ಟುತ್ತಿರುವರು ಮತ್ತು ಸಾಯುತ್ತಲಿರುವರು. ಈ ವಿಷಯದಲ್ಲಿ ವಿದ್ಯಾವಂತರಾದವರು ಸಂದೇಹಗೊಳ್ಳುವುದಿಲ್ಲ.

೫೫. ಈ ದಕ್ಷನೊದಲಾದ ಅಧಿಕಾರಿಪುರುಷರು ಪ್ರತಿಯುಗಗಳಲ್ಲಿಯೂ ಜನಿಸುವರು ಮತ್ತು ಸಾಯುವರು. ತಿಳಿವಳಿಕೆಯುಳ್ಳವನು ಈ ವಿಷಯದಲ್ಲಿ ಸಂದೇಹವುಳ್ಳವನಾಗಲಾರನು.

೫೬. ಹಿಂದೆ ವಯಸ್ಸಿನಿಂದ ಹಿರಿಯತನವಾಗಲೀ ಕಿರಿಯತನವಾಗಲೀ ಇರಲಿಲ್ಲ. ತಪಸ್ಸು ಮತ್ತು ಪ್ರಭಾವಗಳಿಂದಲೇ ಹಿರಿಯಕಿರಿಯತನಗಳನ್ನಳೆಯುತ್ತಿದ್ದರು. ಹೆಚ್ಚಾದ ತಪಸ್ಸು ಮತ್ತು ಪ್ರಭಾವವುಳ್ಳವನೇ ಮಿಕ್ಕವರಿಗಿಂತ ಹಿರಿಯನೆಂದು ಪರಿಗಣಿಸುತ್ತಿದ್ದರು ಎಂದನು.

೫೭. ದಕ್ಷನ ಈ ಚರಾಚರಸೃಷ್ಟಿಯನ್ನು ಕೇಳಿದವರು ಉತ್ತಮವಾದ ಪ್ರಜೆಯುಳ್ಳವನೂ ದೀರ್ಘಾಯುವೂ ಆಗಿದ್ದು ಪರದಲ್ಲಿ ಸ್ವರ್ಗವನ್ನು ಪಡೆಯುವನು.

ಇಲ್ಲಿಗೆ ಶ್ರೀ ಬ್ರಹ್ಮಮಹಾಪುರಾಣದಲ್ಲಿ ಸೃಷ್ಟಿಕಥನಾರಂಭವೆಂಬ
ಎರಡನೆಯ ಅಧ್ಯಾಯವು ಮುಗಿದುದು.

shrinath.udupa@gmail.com

॥ ಶ್ರೀಃ ॥

॥ ಓಂ ತತ್ಸದ್ಬ್ರಹ್ಮಣೇನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ತೃತೀಯೋಽಧ್ಯಾಯಃ

॥ ಮುನಯ ಊಚುಃ ॥

ದೇವಾನಾಂ ದಾನವಾನಾಂ ಚ ಗಂಧರ್ವೋರಗರಕ್ಷಸಾಂ ।
ಉತ್ಪತ್ತಿಂ ವಿಸ್ತರೇಣೈವ ಲೋಮಹರ್ಷಣ ಕೀರ್ತಯ ॥ ೧ ॥

॥ ಲೋಮಹರ್ಷಣ ಉವಾಚ ॥

ಪ್ರಜಾಃ ಸೃಜೇತಿ ವ್ಯಾದಿಷ್ಟಃ ಪೂರ್ವಂ ದಕ್ಷಃ ಸ್ವಯಂಭುವಾ ।
ಯಥಾ ಸಸರ್ಜ ಭೂತಾನಿ ತಥಾ ಶೃಣುತ ಭೋ ದ್ವಿಜಾಃ ॥ ೨ ॥

ಮೂರನೆಯ ಅಧ್ಯಾಯ.

೧. ಮುನಿಗಳು ಕೇಳುವರು :—ಓ ಲೋಮಹರ್ಷಣಮುನಿಯೇ, ದೇವತೆಗಳು ರಾಕ್ಷಸರು ಗಂಧರ್ವರು ಮತ್ತು ಸರ್ಪಗಳು ಅಸುರರು ಇವರೆಲ್ಲರ ಉತ್ಪತ್ತಿಯನ್ನು ವಿಸ್ತಾರವಾಗಿ ವರ್ಣಿಸು ಎನ್ನಲು,

೨. ಲೋಮಹರ್ಷಣಮುನಿಯು ಹೇಳಿದನು—ಸೃಷ್ಟಿಗೆ ಆದಿಯಲ್ಲಿ ಬ್ರಹ್ಮದೇವನು ತನ್ನ ಪುತ್ರನಾದ ದಕ್ಷನಿಗೆ ಪ್ರಜೆಗಳನ್ನು ಸೃಷ್ಟಿಮಾಡುವಂತೆ ಅಪ್ಪಣೆ ಮಾಡಿದನು. ಎಲೈ ಬ್ರಾಹ್ಮಣೋತ್ತಮರೇ, ಮುಂದೆ ಆ ದಕ್ಷನು ಪ್ರಜೆಗಳನ್ನು ಸೃಷ್ಟಿಮಾಡಿದ ಕ್ರಮವನ್ನು ನಿಮಗೆ ಹೇಳುವೆನು, ಸಾವಧಾನದಿಂದ ಕೇಳಿರಿ.

shrinath.udupa@gmail.com

ಮಾನಸಾನ್ಯೇವ ಭೂತಾನಿ ಪೂರ್ವಮೇವಾಸೃಜತ್ಪ್ರಭುಃ ।
ಋಷೀನ್ ದೇವಾನ್ ಸಗಂಧರ್ವಾನಸುರಾನ್ ಯಕ್ಷರಾಕ್ಷಸಾನ್ ॥ ೩ ॥

ಯದಾಸ್ಯ ಮಾನಸೀ ವಿಪ್ರಾ ನ ವ್ಯವರ್ಧತ ವೈ ಪ್ರಜಾ ।
ತದಾ ಸಂಚಿಂತ್ಯ ಧರ್ಮಾತ್ಮಾ ಪ್ರಜಾಹೇತೋಃ ಪ್ರಜಾಪತಿಃ ॥ ೪ ॥

ಸ ಮೈಥುನೇನ ಧರ್ಮೇಣ ಸಿಸೃಕ್ಷುರ್ವಿವಿಧಾಃ ಪ್ರಜಾಃ ।
ಅಸಿಕ್ನೀಮಾವಹತ್ಪತ್ನೀಂ ವೀರಣಸ್ಯ ಪ್ರಜಾಪತೇಃ ॥ ೫ ॥

ಸುತಾಂ ಸುತಪಸಾ ಯುಕ್ತಾಂ ಮಹತೀಂ ಲೋಕಧಾರಿಣೀಂ ।
ಅಥ ಪುತ್ರಸಹಸ್ರಾಣಿ ವೈರಿಣ್ಯಾಂ ಪಂಚ ವೀರ್ಯವಾನ್ ॥ ೬ ॥

ಅಸಿಕ್ನ್ಯಾಂ ಜನಯಾಮಾಸ ದಕ್ಷ ಏವ ಪ್ರಜಾಪತಿಃ ।
ತಾಂಸ್ತು ದೃಷ್ಟ್ವಾ ಮಹಾಭಾಗಾನ್ ಸಂವಿವರ್ಧಯಿಷೂನ್ ಪ್ರಜಾಃ ॥ ೭ ॥

---

೩. ಮೊಟ್ಟಮೊದಲು ಆ ದಕ್ಷಬ್ರಹ್ಮನು ತನ್ನ ಮನಸ್ಸಂಕಲ್ಪದಿಂದಲೇ ಋಷಿಗಳನ್ನೂ ದೇವತೆಗಳನ್ನೂ ಗಂಧರ್ವರು, ಅಸುರರು, ಯಕ್ಷರು, ರಾಕ್ಷಸರು ಮುಂತಾದವರನ್ನೂ ಸೃಷ್ಟಿಸಿದನು.

೪. ಆದರೆ ಅವನ ಆ ಮಾನಸಸೃಷ್ಟಿಯು ಬೆಳೆಯದೇ ಹೆಚ್ಚುಕಾಲ ನಡೆಯದುದಾಯ್ತು. ಎಲೈ ಬ್ರಾಹ್ಮಣೋತ್ತಮರೇ, ಆಗ ಆ ದಕ್ಷಬ್ರಹ್ಮನು ಸ್ತ್ರೀಪುರುಷರ ಸಂಪರ್ಕದಿಂದಲೇ ಸೃಷ್ಟಿಯನ್ನು ನಡೆಯಿಸಲು ಇಚ್ಛೆಯುಳ್ಳವನಾದನು.

೫. ಮುಂದೆ ಆ ದಕ್ಷನು ವೀರಣಪ್ರಜಾಪತಿಯ ಮಗಳೂ ತಪಸ್ವಿನಿಯೂ, ತನ್ನ ಸೃಷ್ಟಿಗೆ ಅನುಕೂಲಳೂ ಆದ ಅಸಿಕ್ನೀದೇವಿಯನ್ನು ಮದುವೆಯಾದನು.

೬. ಆ ಅಸಿಕ್ನೀದೇವಿಯಲ್ಲಿ ದಕ್ಷಬ್ರಹ್ಮನು ಐದು ಸಾವಿರ (೫೦೦೦) ಮಕ್ಕಳನ್ನು ಸೃಷ್ಟಿಸಿದನು.

೭. ಆ ದಕ್ಷಪುತ್ರರೆಲ್ಲರೂ ಮಹಾತ್ಮರು. ಅವರೆಲ್ಲರೂ ತಮ್ಮ ತಂದೆಯಂತೆ ಸೃಷ್ಟಿಯನ್ನು ಮುಂದುವರಿಸಲಿಚ್ಛೆಯುಳ್ಳವರಾಗಿದ್ದರು. ಆಗ ದೇವಋಷಿಯಾದ ನಾರದಮುನಿಯು ಅವರ ಬಳಿಗೆ ಬಂದು ಮೃದುಮಾತಿನಿಂದ ಹೀಗೆ ಹೇಳಿದನು.

shrinath.udupa@gmail.com

ದೇವರ್ಷಿಃ ಪ್ರಿಯಸಂವಾದೋ ನಾರದಃ ಪ್ರಾಬ್ರವೀದಿದಂ ।
ನಾಶಾಯ ವಚನಂ ತೇಷಾಂ ಶಾಪಾಯೈವಾತ್ಮನಸ್ತಥಾ ॥ ೮ ॥

ಯಂ ಕಶ್ಯಪಃ ಸುತವರಂ ಪರಮೇಷ್ಠೀ ವ್ಯಜೀಜನತ್ ।
ದಕ್ಷಸ್ಯ ವೈ ದುಹಿತರಿ ದಕ್ಷಶಾಪಭಯಾನ್ಮುನಿಃ ॥ ೯ ॥

ಪೂರ್ವಂ ಸ ಹಿ ಸಮುತ್ಪನ್ನೋ ನಾರದಃ ಪರಮೇಷ್ಠಿನಃ ।
ಅಸಿಕ್ನ್ಯಾಮಥ ವೀರಿಣ್ಯಾಂ ಭೂಯೋ ದೇವರ್ಷಿಸತ್ತಮಃ ॥ ೧೦ ॥

ತಂ ಭೂಯೋ ಜನಯಾಮಾಸ ಪಿತೇವ ಮುನಿಪುಂಗವಂ ।
ತೇನ ದಕ್ಷಸ್ಯ ವೈ ಪುತ್ರಾ ಹರ್ಯಶ್ವಾ ಇತಿ ವಿಶ್ರುತಾಃ ॥ ೧೧ ॥

ನಿರ್ಮಥ್ಯ ನಾಶಿತಾಃ ಸರ್ವೇ ವಿಧಿನಾ ಚ ನ ಸಂಶಯಃ ।
ತಸ್ಯೋದ್ಯತಸ್ತದಾ ದಕ್ಷೋ ನಾಶಾಯಾಮಿತವಿಕ್ರಮಃ ॥ ೧೨ ॥

ಬ್ರಹ್ಮರ್ಷೀನ್ ಪುರತಃ ಕೃತ್ವಾ ಯಾಚಿತಃ ಪರಮೇಷ್ಠಿನಾ ।
ತತೋಽಭಿಸಂಧಿಶ್ಚಕ್ರೇ ವೈ ದಕ್ಷಸ್ಯ ಪರಮೇಷ್ಠಿನಾ ॥ ೧೩ ॥

೮-೧೦. ನಾರದನು ಬ್ರಹ್ಮದೇವನ ಮಾನಸಪುತ್ರನು. ಕಶ್ಯಪಬ್ರಹ್ಮನಿಗಿಂತಲೂ ಮೊದಲು ಜನಿಸಿದವನು. ಆದರೂ ಮುಂದೆ ಒಂದುಸಾರಿ ದಕ್ಷಬ್ರಹ್ಮನ ಶಾಪದ ಭಯದಿಂದ ಅವನ ಪತ್ನಿಯಾದ ಅಸಿಕ್ನೀದೇವಿಯಲ್ಲಿ ಜನ್ಮವೆತ್ತಿದನು. ಮತ್ತೊಂದುಸಾರಿ ದಕ್ಷಪುತ್ರಿಯಲ್ಲಿ ಕಶ್ಯಪನಿಂದ ಜನ್ಮತಾಳಿದನು. ಇಂತಹ ನಾರದನು ದಕ್ಷಪುತ್ರರಿಗೆ ಉಪದೇಶಮಾಡಿ ಅವರನ್ನೂ ನಾಶಮಾಡಿದನು. ತಾನೂ ಶಾಪಕ್ಕೊಳಗಾದನು.

೧೧. ಇಂತಹ ನಾರದಮುನಿಯು ಹರ್ಯಶ್ವರೆಂಬ ದಕ್ಷಪುತ್ರರನ್ನು ಉಪದೇಶಮಾಡಿ ಹಾಳುಮಾಡಿದನು. ಅವರ ಅದೃಷ್ಟವೂ ಹಾಗೆ ಇದ್ದಿತು.

೧೨. ಹೀಗೆ ತನ್ನ ಪುತ್ರರನ್ನು ನಾಶಮಾಡಿದ ನಾರದನನ್ನು ಶಪಿಸಲು ದಕ್ಷಬ್ರಹ್ಮನು ಉದ್ಯುಕ್ತನಾದನು. ಆಗ ಕಶ್ಯಪಬ್ರಹ್ಮನು ಬ್ರಹ್ಮರ್ಷಿಗಳ ಮಧ್ಯಸ್ಥಿಕೆಯನ್ನು ಮಾಡಿ ದಕ್ಷನನ್ನು ಸಮಾಧಾನ ಮಾಡಿದನು.

೧೩. ಆಗ ಕಶ್ಯಪಬ್ರಹ್ಮನು ದಕ್ಷನ ಸಮಾಧಾನಕ್ಕಾಗಿ "ನಿನ್ನ (ದಕ್ಷನ) ಪುತ್ರಿಯಲ್ಲಿ ನನ್ನಿಂದ (ಕಶ್ಯಪನಿಂದ) ನಾರದನು ತಿರುಗಿ ಜನ್ಮತಾಳಲಿ" ಎಂದು ಒಡಂಬಡಿಕೆಯನ್ನು ಮಾಡಿದನು.

shrinath.udupa@gmail.com

ಕನ್ಯಾಯಾಂ ನಾರದೋ ಮಹ್ಯಂ ತವ ಪುತ್ರೋ ಭವೇದಿತಿ ।
ತತೋ ದಕ್ಷಃ ಸುತಾಂ ಪ್ರಾದಾತ್ಪ್ರಿಯಾಂ ವೈ ಪರಮೇಷ್ಠಿನೇ
ಸ ತಸ್ಯಾಂ ನಾರದೋ ಜಜ್ಞೇ ಭೂಯಃ ಶಾಪಭಯಾದೃಷಿಃ ॥ ೧೪ ॥

॥ ಮುನಯ ಊಚುಃ ॥

ಕಥಂ ಪ್ರಣಾಶಿತಾಃ ಪುತ್ರಾ ನಾರದೇನ ಮಹರ್ಷಿಣಾ ।
ಪ್ರಜಾಪತೇಃ ಸೂತವರ್ಯ ಶ್ರೋತುಮಿಚ್ಛಾಮ ತತ್ತ್ವತಃ ॥ ೧೫ ॥

॥ ಲೋಮಹರ್ಷಣ ಉವಾಚ ॥

ದಕ್ಷಸ್ಯ ಪುತ್ರಾ ಹರ್ಯಶ್ವಾ ವಿವರ್ಧಯಿಷವಃ ಪ್ರಜಾಃ
ಸಮಾಗತಾ ಮಹಾವೀರ್ಯಾ ನಾರದಸ್ತಾನುವಾಚ ಹ ॥ ೧೬ ॥

॥ ನಾರದ ಉವಾಚ ॥

ಬಾಲಿಶಾ ಬತ ಯೂಯಂ ವೈ ನಾಸ್ಯಾ ಜಾನೀತ ವೈ ಭುವಃ ।
ಪ್ರಮಾಣಂ ಸ್ರಷ್ಟುಕಾಮಾ ವೈ ಪ್ರಜಾಃ ಪ್ರಾಚೇತಸಾತ್ಮಜಾಃ ॥ ೧೭ ॥

---

೧೪. ಆಮೇಲೆ ದಕ್ಷಬ್ರಹ್ಮನು ತನ್ನ ಪ್ರಿಯಪುತ್ರಿಯನ್ನು ಕಶ್ಯಪಬ್ರಹ್ಮನಿಗೆ ಮದುವೆ ಮಾಡಿಕೊಟ್ಟನು. ಆ ದಕ್ಷಪುತ್ರಿಯಲ್ಲಿ ದಕ್ಷನ ಭಯದಿಂದ ನಾರದ ಮುನಿಯು ತಿರುಗಿ ಜನ್ಮವೆತ್ತಿದನು ಎಂದನು.

೧೫. ಮುನಿಗಳು ಪ್ರಶ್ನಿಸಿದರು—ಓ ಪೌರಾಣಿಕೋತ್ತಮ, ನಾರದಮುನಿಯು ದಕ್ಷಪುತ್ರರನ್ನು ಹೇಗೆ ನಾಶಮಾಡಿದನು? ಈ ವಿಷಯವನ್ನು ಕೂಲಂಕಷವಾಗಿ ತಿಳಿಯಲಿಚ್ಛಿಸುವವು, ಹೇಳಬೇಕು ಎನ್ನಲು,

೧೬. ಲೋಮಹರ್ಷಣಮುನಿಯು ಹೇಳುವನು— "ಹರ್ಯಶ್ವ" ರೆಂಬ ದಕ್ಷಬ್ರಹ್ಮಪುತ್ರರು ಪ್ರಜೆಗಳನ್ನು ಸೃಷ್ಟಿಸಲು ಉದ್ಯುಕ್ತರಾದರು. ಅವರನ್ನು ಕುರಿತು ನಾರದನು

೧೭. ಎಲೈ ದಕ್ಷಪುತ್ರರೇ, ನಿಮಗೆ ತಿಳಿವಳಿಕೆಯೇಇಲ್ಲವಲ್ಲಾ. ಈ ಭೂಮಿಯ ಪ್ರಮಾಣವನ್ನು ನೀವು ತಿಳಿದಿಲ್ಲ. ಹೀಗಿದ್ದು ಈ ಭೂಮಿಯ ಮೇಲೂ ಕೆಳಗೂ ಮಧ್ಯದಲ್ಲೂ ಪ್ರಜೆಗಳನ್ನು ಹೇಗೆ ಸೃಷ್ಟಿಸುವಿರಿ? ಎಂದನು.

shrinath.udupa@gmail.com

ಅಂತರೂರ್ಧ್ವಮಧಶ್ಚೈವ ಕಥಂ ಸೃಜಥ ವೈ ಪ್ರಜಾಃ ।
ತೇ ತು ತದ್ವಚನಂ ಶ್ರುತ್ವಾ ಪ್ರಯಾತಾಃ ಸರ್ವತೋ ದಿಶಃ ॥ ೧೮ ॥

ಅದ್ಯಾಪಿ ನ ನಿವರ್ತಂತೇ ಸಮುದ್ರೇಭ್ಯ ಇವಾಪಗಾಃ ।
ಹರ್ಯಶ್ವೇಷ್ವಥ ನಷ್ಟೇಷು ದಕ್ಷಃ ಪ್ರಾಚೇತಸಃ ಪುನಃ ॥ ೧೯ ॥

ವೈರಿಣ್ಯಾಮಥ ಪುತ್ರಾಣಾಂ ಸಹಸ್ರಮಸೃಜತ್ಪ್ರಭುಃ ।
ವಿವರ್ಧಯಿಷವಸ್ತೇಽಪಿ ಶಬಲಾಶ್ವಾಸ್ತಥಾ ಪ್ರಜಾಃ ॥ ೨೦ ॥

ಪೂರ್ವೋಕ್ತಂ ವಚನಂ ತೇ ತು ನಾರದೇನ ಪ್ರಚೋದಿತಾಃ ।
ಅನ್ಯೋಽನ್ಯಮೂಚುಸ್ತೇ ಸರ್ವೇ ಸಮ್ಯಗಾಹ ಮಹಾನೃಷಿಃ ॥ ೨೧ ॥

ಭ್ರಾತೄಣಾಂ ಪದವೀಂ ಜ್ಞಾತುಂ ಗಂತವ್ಯಂ ನಾತ್ರ ಸಂಶಯಃ ।
ಜ್ಞಾತ್ವಾ ಪ್ರಮಾಣಂ ಪೃಥ್ವ್ಯಾಶ್ಚ ಸುಖಂ ಸ್ರಕ್ಷ್ಯಾಮಹೇ ಪ್ರಜಾಃ ॥ ೨೨ ॥

---

೧೮. ಹೀಗೆ ನಾರದನು ಹೇಳಿದ ಮಾತನ್ನು ಕೇಳಿ ಹರ್ಯಶ್ವರು ಭೂಮಿಯ ಪ್ರಮಾಣವನ್ನು ತಿಳಿಯಲು ದಿಕ್ಕುದಿಕ್ಕುಗಳಿಗೆ ಹೊರಟರು. ಆವರೆ ಅವರು ಕಡಲನ್ನು ಸೇರಿದ ನದಿಗಳಂತೆ ಇಂದಿಗೂ ತಿರುಗಿಬಂದಿಲ್ಲವು.

೧೯. ಹೀಗೆ ಹರ್ಯಶ್ವರು ನಾಶಹೊಂದಲು, ದಕ್ಷಬ್ರಹ್ಮನು ತಿರುಗಿ ತನ್ನ ಮಡದಿಯಾದ ಅಸಿಕ್ನೀದೇವಿಯಲ್ಲಿ ಸಾವಿರ ಮಕ್ಕಳನ್ನು ಸೃಷ್ಟಿಸಿದನು.

೨೦. ಆ ಮಕ್ಕಳ ಹೆಸರು ಶಬಲಾಶ್ವರೆಂದು. ಅವರೂ ಸಹ ತಂದೆಯ ಅಪ್ಪಣೆಯಂತೆ ಪ್ರಜೆಗಳನ್ನು ಸೃಷ್ಟಿಸಲುದ್ಯುಕ್ತರಾದರು ಅವರನ್ನು ಕುರಿತು ನಾರದನು ಹಿಂದೆ ಹರ್ಯಶ್ವರಿಗೆ ಹೇಳಿದಂತೆಯೇ ಹೇಳಿದನು.

೨೧–೨೨. ಆ ಶಬಲಾಶ್ವರು "ನಾರದಮುನಿಯ ಮಾತು ನಿಜವಾದುದು. ನಮ್ಮ ಸಹೋದರರ ಮಾರ್ಗವನ್ನು ಹುಡುಕಬೇಕು. ಭೂಮಿಯ ಪ್ರಮಾಣವನ್ನೂ ತಿಳಿಯಬೇಕು. ಆಗ ನಾವು ಸುಲಭವಾಗಿ ಸೃಷ್ಟಿಯನ್ನು ಮಾಡಬಹುದು" ಎಂದು ಪರಸ್ಪರ ಮಾತನಾಡಿಕೊಂಡು ನಿಶ್ಚಯಮಾಡಿದರು.

shrinath.udupa@gmail.com

ತೇಽಪಿ ತೇನೈವ ಮಾರ್ಗೇಣ ಪ್ರಯಾತಾಃ ಸರ್ವತೋ ದಿಶಂ ।
ಅದ್ಯಾಪಿ ನ ನಿವರ್ತಂತೇ ಸಮುದ್ರೇಭ್ಯ ಇವಾಪಗಾಃ ॥ ೨೩ ॥

ತದಾ ಪ್ರಭೃತಿ ವೈ ಭ್ರಾತಾ ಭ್ರಾತುರನ್ವೇಷಣೇ ದ್ವಿಜಾಃ ।
ಪ್ರಯಾತೋ ನಶ್ಯತಿ ಕ್ಷಿಪ್ರಂ ತನ್ನ ಕಾರ್ಯಂ ವಿಪಶ್ಚಿತಾ ॥ ೨೪ ॥

ತಾಂಶ್ಚೈವ ನಷ್ಟಾನ್ ವಿಜ್ಞಾಯ ಪುತ್ರಾನ್ ದಕ್ಷಃ ಪ್ರಜಾಪತಿಃ ।
ಷಷ್ಟಿಂ ತತೋಽಸೃಜತ್ಕನ್ಯಾ ವೈರಿಣ್ಯಾಮಿತಿ ನಃ ಶ್ರುತಂ ॥ ೨೫ ॥

ತಾಸ್ತದಾ ಪ್ರತಿಜಗ್ರಾಹ ಭಾರ್ಯಾರ್ಥಂ ಕಶ್ಯಪಃ ಪ್ರಭುಃ ।
ಸೋಮೋ ಧರ್ಮಶ್ಚ ಭೋ ವಿಪ್ರಾಸ್ತಥೈವಾನ್ಯೇ ಮಹರ್ಷಯಃ ॥ ೨೬ ॥

ದದೌ ಸ ದಶ ಧರ್ಮಾಯ ಕಶ್ಯಪಾಯ ತ್ರಯೋದಶ ।
ಸಪ್ತವಿಂಶತಿ ಸೋಮಾಯ ಚತಸ್ರೋಽರಿಷ್ಟನೇಮಿನೇ ॥ ೨೭ ॥

---

೨೩. ಆ ಶಬಲಾಶ್ವರೂ ಸಹ ತಮ್ಮ ಅಣ್ಣಂದಿರಂತೆ ಭೂಮಿಯ ಪ್ರಮಾಣವನ್ನು ತಿಳಿಯಲು ದಿಕ್ಕುದಿಕ್ಕುಗಳಿಗೆ ಹೊರಟುಹೋದರು. ಅವರೂ ಸಹ ಸಮುದ್ರವನ್ನು ಸೇರಿದ ನದಿಗಳಂತೆ ಇಂದಿಗೂ ವಾಪಸು ಬರಲಿಲ್ಲವು.

೨೪. ಎಲೈ ಬ್ರಾಹ್ಮಣೋತ್ತಮರೇ, ಅದುಮೊದಲುಗೊಂಡು ಸಹೋದರನು ಮರೆಯಾದ ಸಹೋದರನನ್ನು ಹುಡುಕಿಕೊಂಡು ಹೋದರೆ ಅವನೂ ತಿರುಗಿ ಬರುವುದಿಲ್ಲ. ಈ ಕಾರಣ ತಿಳಿದವನು ಇಂತಹ ಕಾರ್ಯವನ್ನು ಮಾಡಬಾರದು.

೨೫. ಹೀಗೆ ಶಬಲಾಶ್ವರೂ ನಾಶವಾಗಲು ಮುಂದೆ ದಕ್ಷಬ್ರಹ್ಮನು ಅಸಿಕ್ನಿಯಲ್ಲಿ ಅರವತ್ತು (೬೦) ಜನ ಪುತ್ರಿಯರನ್ನು ಸೃಷ್ಟಿಸಿದನು ಎಂದು ಕೇಳಿರುವೆವು.

೨೬. ಆ ದಕ್ಷಕನ್ಯೆಯರಲ್ಲಿ ಕೆಲವರನ್ನು ಕಶ್ಯಪಬ್ರಹ್ಮನು ಮದುವೆಯಾದನು. ಸೋಮನು (ಚಂದ್ರನು) ಕೆಲವರನ್ನೂ, ಧರ್ಮನು ಕೆಲವರನ್ನೂ ಮದುವೆಯಾದರು. ಹಾಗೆಯೇ ಕೆಲವರು ಋಷಿಗಳೂ ಸಹ ದಕ್ಷಕನ್ಯೆಯರನ್ನು ಮದುವೆಯಾದರು.

೨೭–೨೮. ಎಂದರೆ ದಕ್ಷನು ತನ್ನ ಕನ್ಯೆಯರಲ್ಲಿ ಧರ್ಮರಾಜನಿಗೆ ಹತ್ತು ಜನರನ್ನು ಮದುವೆ ಮಾಡಿಕೊಟ್ಟನು. ಹದಿಮೂರು ಜನರನ್ನು ಕಶ್ಯಪನಿಗೆ ಕೊಟ್ಟನು. ಚಂದ್ರನಿಗೆ ಇಪ್ಪತ್ತೇಳು ಜನರನ್ನು ಕೊಟ್ಟನು. ಅರಿಷ್ಟನೇಮಿ ಎಂಬುವ

shrinath.udupa@gmail.com

ದ್ವೇ ಚೈವ ಬಹುಪುತ್ರಾಯ ದ್ವೇ ಚೈವಾಂಗಿರಸೇ ತಥಾ ।
ದ್ವೇ ಕೃಶಾಶ್ವಾಯ ವಿದುಷೇ ತಾಸಾಂ ನಾಮಾನಿ ಮೇ ಶೃಣು ॥ ೨೮ ॥

ಅರುಂಧತೀ ವಸುರ್ಯಾಮೀ ಲಂಬಾ ಭಾನುರ್ಮರುತ್ವತೀ ।
ಸಂಕಲ್ಪಾ ಚ ಮುಹೂರ್ತಾ ಚ ಸಾಧ್ಯಾ ವಿಶ್ವಾ ಚ ಭೋ ದ್ವಿಜಾಃ ॥ ೨೯ ॥

ಧರ್ಮಪತ್ನ್ಯೋ ದಶ ತ್ವೇತಾಸ್ತಾಸ್ವಪತ್ಯಾನಿ ಬೋಧತ ।
ವಿಶ್ವೇದೇವಾಸ್ತು ವಿಶ್ವಾಯಾಃ ಸಾಧ್ಯಾ ಸಾಧ್ಯಾರ್ವ್ಯಜಾಯತ ॥ ೩೦ ॥

ಸಂಕಲ್ಪಾಯಾಸ್ತು ವಿಶ್ವಾತ್ಮಾ ಜಜ್ಞೇ ಸಂಕಲ್ಪ ಏವ ಹಿ ।
ನಾಗವೀಥ್ಯಾಂ ಚ ಯಾಮಿನ್ಯಾಂ ವೃಷಲಶ್ಚ ವ್ಯಜಾಯತ ॥ ೩೧ ॥

ಮರುತ್ವತ್ಯಾಂ ಮರುತ್ವಂತೋ ವಸೋಸ್ತು ವಸವಃ ಸುತಾಃ ।
ಭಾನೋಸ್ತು ಭಾನವಃ ಪುತ್ರಾ ಮುಹೂರ್ತಾಸ್ತು ಮುಹೂರ್ತಜಾಃ ॥ ೩೨ ॥

ನಿಗೆ ನಾಲ್ವರು ಕನ್ಯೆಯರನ್ನೂ ಕೊಟ್ಟನು. ಬಹುಪುತ್ರ ಮತ್ತು ಅಂಗಿರಸ್ ಎಂಬ ಮುನಿಗಳಿಗೆ ಇಬ್ಬರಿಬ್ಬರು ಕನ್ಯೆಯರನ್ನು ಕೊಟ್ಟನು. ಕೃಶಾಶ್ವನೆಂಬ ಋಷಿಗೆ ಈರ್ವರು ಕನ್ಯೆಯರನ್ನು ಮದುವೆಮಾಡಿಕೊಟ್ಟನು. ಆ ಕನ್ಯೆಯರ ಹೆಸರನ್ನು ಹೇಳುವೆನು ಕೇಳಿರಿ.

೩೦. ಅರುಂಧತೀ, ವಸುದೇವಿ, ಯಾಮಿದೇವಿ, ಲಂಬಾದೇವಿ, ಭಾನುದೇವಿ, ಮರುತ್ವತೀ ಸಂಕಲ್ಪಾ, ಮುಹೂರ್ತಾ, ಸಾಧ್ಯಾ, ವಿಶ್ವಾದೇವಿ, ಈ ಹತ್ತು ಜನರು ಧರ್ಮನ ಮಡದಿಯರು. ಅವರಲ್ಲಿ ಜನಿಸಿದ ಮಕ್ಕಳ ಹೆಸರನ್ನು ಹೇಳುವೆನು ಕೇಳಿರಿ.

೩೧. ವಿಶ್ವೇದೇವರು ವಿಶ್ವಾದೇವಿಯ ಮಕ್ಕಳು. ಸಾಧ್ಯಾದೇವಿಯು ಸಾಧ್ಯರನ್ನು ಹಡೆದಳು. ಸಂಕಲ್ಪಾದೇವಿಯು ಜಗನ್ಮಯನಾದ ಸಂಕಲ್ಪನನ್ನು ಹಡೆದಳು. ಯಾಮಿಯ ಮಗಳಾದ ನಾಗವೀಥಿಯು ವೃಷಲ (ಶೂದ್ರ) ನನ್ನು ಹಡೆದಳು.

೩೨. ಮರುತ್ವತಿಯಲ್ಲಿ ಮರುತ್ವಂತರೆಂಬುವರು ಜನಿಸಿದರು. ವಸುದೇವತೆಗಳು ವಸುದೇವಿಯ ಮಕ್ಕಳು. ಭಾನು (ಕಿರಣ)ಗಳು ಭಾನುದೇವಿಯ ಪುತ್ರರು. ಮುಹೂರ್ತಾದೇವಿಯಿಂದ ಮುಹೂರ್ತಗಳು ಜನಿಸಿದುವು.

shrinath.udupa@gmail.com

ಲಂಬಾಯಾಶ್ಚೈವ ಘೋಷೋಽಥ ನಾಗವೀಥೀ ಚ ಯಾಮಿಜಾ ।
ಪೃಥಿವೀ ವಿಷಯಂ ಸರ್ವಮರುಂಧತ್ಯಾಂ ವ್ಯಜಾಯತ ॥ ೩೩ ॥

ಪರಾ ಯಾಃ ಸೋಮಪತ್ನೀಶ್ಚ ದಕ್ಷಃ ಪ್ರಾಚೇತಸೋ ದದೌ ।
ಸರ್ವಾ ನಕ್ಷತ್ರನಾಮ್ನ್ಯಸ್ತಾ ಜ್ಯೋತಿಷೇ ಪರಿಕೀರ್ತಿತಾಃ ॥ ೩೪ ॥

ಯೇ ತ್ವನ್ಯೇ ಖ್ಯಾತಿಮಂತೋ ವೈ ದೇವಾ ಜ್ಯೋತಿಷ್ಪುರೋಗಮಾಃ ।
ವಸವೋಽಷ್ಟೌ ಸಮಾಖ್ಯಾತಾಸ್ತೇಷಾಂ ವಕ್ಷ್ಯಾಮಿ ವಿಸ್ತರಂ ॥ ೩೫ ॥

ಆಪೋ ಧ್ರುವಶ್ಚ ಸೋಮಶ್ಚ ಧವಶ್ಚೈವಾನಿಲೋಽನಲಃ ।
ಪ್ರತ್ಯೂಷಶ್ಚ ಪ್ರಭಾಸಶ್ಚ ವಸವೋ ನಾಮಭಿಃ ಸ್ಮೃತಾಃ ॥ ೩೬ ॥

ಆಪಸ್ಯ ಪುತ್ರೋ ವೈತಂಡ್ಯಃ ಶ್ರಮಃ ಶ್ರಾಂತೋ ಮುನಿಶ್ಚ ಹಿ ।
ಧ್ರುವಸ್ಯ ಪುತ್ರೋ ಭಗವಾನ್ ಕಾಲೋ ಲೋಕಪ್ರಕಾಲನಃ ॥ ೩೭ ॥

---

೩೩. ಲಂಬಾದೇವಿಯಿಂದ ಘೋಷ (ಧ್ವನಿ)ವು ಜನಿಸಿತು. ಯಾಮಿದೇವಿಯಿಂದ ನಾಗವೀಥಿ (ಪಾತಾಳ) ಯು ಜನಿಸಿತು. ಜಗತ್ತಿನಲ್ಲಿ ತೋರುವ ಮಿಕ್ಕ ವಿಷಯಗಳೆಲ್ಲವೂ ಅರುಂಧತಿಯಿಂದ ಜನಿಸಿದುವು.

೩೪. ದಕ್ಷನು ಚಂದ್ರನಿಗೆ ಮದುವೆಮಾಡಿಕೊಟ್ಟ ಕನ್ಯೆಯರಿಗೆ ನಕ್ಷತ್ರಗಳೆಂದು ಹೆಸರು. ಅವರ ಮಹಿಮೆಯು ಜ್ಯೋತಿಶ್ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ.

೩೫. ಮುಖ್ಯವಾಗಿ ಪ್ರಸಿದ್ಧರಾದ ಕೆಲವು ದೇವತೆಗಳ ಮತ್ತು ವಸುಗಳ ವಿಷಯವನ್ನು ವಿಸ್ತಾರವಾಗಿ ವರ್ಣಿಸುವೆನು.

೩೬. ಆಪದೇವ, ಧ್ರುವ, ಸೋಮ, ಧವ, ಅನಿಲ, ಅನಲ, ಪ್ರತ್ಯೂಷ, ಪ್ರಭಾಸ, ಇವರು ಎಂಟು ಜನಗಳು ವಸುದೇವತೆಗಳು.

೩೭. ಆಪದೇವನ ಪುತ್ರರು ವೈತಂಡ್ಯ, ಶ್ರಮ, ಶ್ರಾಂತರೆಂಬ ಮುನಿಗಳು. ಗಣನೆಯಿಂದ ಲೋಕವನ್ನೇ ಬದಲಾಯಿಸುವ ಮಹಾಮಹಿಮನಾದ ಕಾಲಪುರುಷನು ಧ್ರುವನ ಪುತ್ರನು.

shrinath.udupa@gmail.com

ಸೋಮಸ್ಯ ಭಗವಾನ್ ವರ್ಚಾ ವರ್ಚಸ್ವೀ ಯೇನ ಜಾಯತೇ ।
ಧವಸ್ಯ ಪುತ್ರೋ ದ್ರವಿಣೋ ಹುತಹವ್ಯವಹಸ್ತಥಾ ।
ಮನೋಹರಾಯಾಶ್ಶಿಶಿರಃ ಪ್ರಾಣೋಽಥ ರಮಣಸ್ತಥಾ ॥ ೩೮ ॥

ಅನಿಲಸ್ಯ ಶಿವಾ ಭಾರ್ಯಾ ತಸ್ಯಾಃ ಪುತ್ರೋ ಮನೋಜವಃ ।
ಅವಿಜ್ಞಾತಗತಿಶ್ಚೈವ ದ್ವೌ ಪುತ್ರಾವನಿಲಸ್ಯ ಚ ॥ ೩೯ ॥

ಅಗ್ನಿಪುತ್ರಃ ಕುಮಾರಸ್ತು ಶರಸ್ತಂಬೇ ಶ್ರಿಯಾ ವೃತಃ ।
ತಸ್ಯ ಶಾಖೋ ವಿಶಾಖಶ್ಚ ನೈಗಮೇಯಶ್ಚ ಪೃಷ್ಠಜಃ ॥ ೪೦ ॥

ಅಪತ್ಯಂ ಕೃತ್ತಿಕಾನಾಂ ತು ಕಾರ್ತಿಕೇಯ ಇತಿ ಸ್ಮೃತಃ ।
ಪ್ರತ್ಯೂಷಸ್ಯ ವಿದುಃ ಪುತ್ರಮೃಷಿಂ ನಾಮ್ನಾಥ ದೇವಲಂ ॥ ೪೧ ॥

ದ್ವೌ ಪುತ್ರೌ ದೇವಲಸ್ಯಾಪಿ ಕ್ಷಮಾವಂತೌ ಮನೀಷಿಣೌ ।
ಬೃಹಸ್ಪತೇಸ್ತು ಭಗಿನೀ ವರಸ್ತ್ರೀ ಬ್ರಹ್ಮವಾದಿನೀ ॥ ೪೨ ॥

---

೩೮. ವರ್ಚಾ ಎಂಬುವನು ಸೋಮನ ಪುತ್ರನು. ಆ ವರ್ಚನ ಅನುಗ್ರಹದಿಂದಲೇ ಮಾನವನು ವರ್ಚಸ್ವೀ (ಪ್ರಸಿದ್ಧ) ಯಾಗುವನು. ಧವದೇವನಿಗೆ ಮನೋಹರಾದೇವಿಯಲ್ಲಿ ದ್ರವಿಣ, ಹುತಹವ್ಯವಹ, ಶಿಶಿರ, ಪ್ರಾಣ, ರಮಣರೆಂಬ ಪುತ್ರರು ಜನಿಸಿರುವರು.

೩೯. ಅನಿಲ (ವಾಯು) ನ ಮಡದಿಯು ಶಿವಾದೇವಿಯು. ಅವಳಲ್ಲಿ ಮನೋಜವ, ಅವಿಜ್ಞಾತಗತಿ, ಎಂಬ ಈರ್ವರು ಮಕ್ಕಳು ಜನಿಸಿದರು.

೪೦. ಶರ (ಜೊಂಡು) ವನದಲ್ಲಿ ಜನಿಸಿದ ತೇಜಸ್ವಿಯಾದ ಷಣ್ಮುಖನು ಅಗ್ನಿ (ಅನಲ) ಯ ಪುತ್ರನು. ಆ ಷಣ್ಮುಖನಿಗೆ ಶಾಖ, ವಿಶಾಖ, ನೈಗಮೇಯರೆಂಬುವವರು ಮೂವರು ಮಕ್ಕಳು.

೪೧. ಕೃತ್ತಿಕಾದೇವಿಯರ ಪೋಷಣೆಯಿಂದ ಬೆಳೆದುದರಿಂದ ಆ ಷಣ್ಮುಖನಿಗೆ ಕಾರ್ತಿಕೇಯ ಎಂಬ ಹೆಸರೂ ಇರುವುದು. ದೇವಲನೆಂಬ ಋಷಿಯು ಪ್ರತ್ಯೂಷನ ಮಗನು.

೪೨-೪೩. ದೇವಲಮುನಿಗೆ ಈರ್ವರು ಮಕ್ಕಳು. ಅವರೀರ್ವರೂ ಶಾಂತರು ಮತ್ತು ಜ್ಞಾನಿಗಳು. ಬೃಹಸ್ಪತಿಗೆ ಓರ್ವ ಸಹೋದರಿಯಿದ್ದಳು. ಅವಳು ಬ್ರಹ್ಮ

shrinath.udupa@gmail.com

ಯೋಗಸಿದ್ಧಾ ಜಗತ್ ಕೃತ್ಸ್ನಮಸಕ್ತಾ ವಿಚಚಾರ ಹ ।
ಪ್ರಭಾಸಸ್ಯ ತು ಸಾ ಭಾರ್ಯಾ ವಸೂನಾಮಷ್ಟಮಸ್ಯ ತು ॥ ೪೩ ॥

ವಿಶ್ವಕರ್ಮಾ ಮಹಾಭಾಗೋ ಯಸ್ಯಾಂ ಜಜ್ಞೇ ಪ್ರಜಾಪತಿಃ ।
ಕರ್ತಾ ಶಿಲ್ಪಸಹಸ್ರಾಣಾಂ ತ್ರಿದಶಾನಾಂ ಚ ವಾರ್ಧಕಿಃ । ॥ ೪೪ ॥

ಭೂಷಣಾನಾಂ ಚ ಸರ್ವೇಷಾಂ ಕರ್ತಾ ಶಿಲ್ಪವತಾಂ ವರಃ ।
ಯಃ ಸರ್ವೇಷಾಂ ವಿಮಾನಾನಿ ದೈವತಾನಾಂ ಚಕಾರ ಹ ॥ ೪೫ ॥

ಮಾನುಷಾಶ್ಚೋಪಜೀವಂತಿ ಯಸ್ಯ ಶಿಲ್ಪಂ ಮಹಾತ್ಮನಃ ।
ಸುರಭೀ ಕಶ್ಯಪಾದ್ರುದ್ರಾನೇಕಾದಶ ವಿನಿರ್ಮಮೇ ॥ ೪೬ ॥

ಮಹಾದೇವಪ್ರಸಾದೇನ ತಪಸಾ ಭಾವಿತಾ ಸತೀ ।
ಅಜೈಕಪಾದಹಿರ್ಬುಧ್ನ್ಯಃ ತ್ವಷ್ಟಾ ರುದ್ರಶ್ಚ ವೀರ್ಯವಾನ್ ॥ ೪೭ ॥

ವಾದಿನಿಯು (ಆತ್ಮಚಿಂತನೆ ಮಾಡುವವಳು) ಯೋಗಸಿದ್ಧಿಯನ್ನವಳು ಪಡೆದಿದ್ದರಿಂದ ಅವಳಿಗೆ ಯೋಗಸಿದ್ಧಾಯೆಂದೂ ಹೆಸರು. ಇವಳು ಯೋಗಸಾಧನೆಗಾಗಿ ಜಗತ್ತೆಲ್ಲವನ್ನೂ ಸಂಚರಿಸಿದವಳು. ಇಂತಹ ಉತ್ತಮಸ್ತ್ರೀಯನ್ನು ವಸುಗಳಲ್ಲಿ ಎಂಟನೆಯವನಾದ ಪ್ರಭಾಸನು ಮದುವೆಯಾದನು.

೪೪. ಆ ಬೃಹಸ್ಪತಿಸಹೋದರಿಯಲ್ಲಿ ವಿಶ್ವಕರ್ಮನೆಂಬ ಮಹಾಮಹಿಮನು ಜನಿಸಿದನು. ಈ ವಿಶ್ವಕರ್ಮನು ನಾನಾಬಗೆಯ ಶಿಲ್ಪಗಳನ್ನು ರಚಿಸುವನು. ದೇವಶಿಲ್ಪಿಯವನು.

೪೫. ಇಂತಹ ದೇವಶಿಲ್ಪಿಯು ಅನೇಕ ಬಗೆಯ ಆಭರಣಗಳನ್ನು ರಚಿಸಿರುವನು. ದೇವತೆಗಳಿಗೆ ವಿಮಾನಗಳನ್ನು ನಿರ್ಮಿಸಿಕೊಟ್ಟವನವನು. ಇಂತಹ ಮಹಾತ್ಮನಾದ ದೇವಶಿಲ್ಪಿಯ ಶಿಲ್ಪವನ್ನನುಸರಿಸಿ ಮನುಷ್ಯರೂ ಶಿಲ್ಪವನ್ನು ರಚಿಸುವರು.

೪೬. ಸುರಭಿದೇವಿಯು ಮಹಾದೇವನನ್ನು ತಪಸ್ಸಿನಿಂದ ಪ್ರಸನ್ನಗೊಳಿಸಿ ಅವನ ಅನುಗ್ರಹದಿಂದ ಕಶ್ಯಪಬ್ರಹ್ಮನಿಂದ ಹನ್ನೊಂದುಜನ ರುದ್ರರನ್ನು ಪಡೆದಳು.

೪೭–೪೯. ಅಜೈಕಪಾತ್, ಅಹಿರ್ಬುಧ್ನ್ಯ, ತ್ವಷ್ಟಾ, ಪರಾಕ್ರಮಿಯಾದ ರುದ್ರ, ಅನೇಕರೂಪನಾದ ಹರ, ಜಯಶಾಲಿಯಾದ ತ್ರ್ಯಂಬಕ, ವೃಷಾಕಪಿ, ಶಂಭು, ಕಪರ್ದಿ

shrinath.udupa@gmail.com

ಹರಶ್ಚ ಬಹುರೂಪಶ್ಚ ತ್ರ್ಯಂಬಕಶ್ಚಾಪರಾಜಿತಃ ।
ವೃಷಾಕಪಿಶ್ಚ ಶಂಭುಶ್ಚ ಕಪರ್ದೀ ರೈವತಸ್ತಥಾ ॥ ೪೮ ॥

ಮೃಗವ್ಯಾಧಶ್ಚ ಶರ್ವಶ್ಚ ಕಪಾಲೀ ಚ ದ್ವಿಜೋತ್ತಮಾಃ ।
ಏಕಾದಶೈತೇ ವಿಖ್ಯಾತಾ ರುದ್ರಾಸ್ತ್ರಿಭುವನೇಶ್ವರಾಃ ॥ ೪೯ ॥

ಶತಂ ತ್ವೇವಂ ಸಮಾಖ್ಯಾತಂ ರುದ್ರಾಣಾಮಮಿತೌಜಸಾಂ ।
ಪುರಾಣೇ ಮುನಿಶಾರ್ದೂಲಾ ಯೈರ್ವ್ಯಾಪ್ತಂ ಸಚರಾಚರಂ ॥ ೫೦ ॥

ದಾರಾನ್ ಶೃಣುಧ್ವಂ ವಿಪ್ರೇಂದ್ರಾಃ ಕಶ್ಯಪಸ್ಯ ಪ್ರಜಾಪತೇಃ ।
ಅದಿತಿರ್ದಿತಿರ್ದನುಶ್ಚೈವ ಅರಿಷ್ಟಾ ಸುರಸಾ ಖಸಾ ॥ ೫೧ ॥

ಸುರಭಿರ್ವಿನತಾ ಚೈವ ತಾಮ್ರಾ ಕ್ರೋಧವಶಾ ಇರಾ ।
ಕದ್ರುರ್ಮುನಿಶ್ಚ ಭೋ ವಿಪ್ರಾಸ್ತಾಸ್ವಪತ್ಯಾನಿ ಬೋಧತ ॥ ೫೨ ॥

ಪೂರ್ವಮನ್ವಂತರೇ ಶ್ರೇಷ್ಠಾ ದ್ವಾದಶಾಸನ್ ಸುರೋತ್ತಮಾಃ ।
ತುಷಿತಾ ನಾಮ ತೇಽನ್ಯೋನ್ಯಮೂಚುರ್ವೈವಸ್ವತೇಽಂತರೇ ॥ ೫೩ ॥

ರೈವತ, ಮೃಗವ್ಯಾಧ, ಕಪಾಲವನ್ನು ಧರಿಸಿದ ಶರ್ವ, ಇವರು ಹನ್ನೊಂದು ಜನಗಳು ಜಗದೊಡೆಯರಾದ ರುದ್ರರು.

೫೦. ಮಹಾತೇಜಸ್ವಿಗಳಾದ ಈ ರುದ್ರರು ನೂರು ಜನಗಳಿರುವರೆಂದು ಪುರಾಣಗಳಲ್ಲಿ ಹೇಳಲ್ಪಟ್ಟಿದೆ. ಅಂತಹ ಈ ರುದ್ರರು ಜಗತ್ತೆಲ್ಲವನ್ನೂ ವ್ಯಾಪಿಸಿರುವರು.

೫೧–೫೨. ಎಲೈ ಬ್ರಾಹ್ಮಣೋತ್ತಮರೇ ಕಶ್ಯಪಬ್ರಹ್ಮನ ಮಡದಿಯರ ಹೆಸರನ್ನು ಹೇಳುವೆನು. ಅದಿತಿ, ದಿತಿ, ದನುದೇವಿ, ಅರಿಷ್ಟಾ, ಸುರಸಾ, ಖಸಾದೇವಿ, ಸುರಭಿದೇವಿ, ವಿನತಾದೇವಿ, ತಾಮ್ರಾದೇವಿ, ಕ್ರೋಧವಶಾದೇವಿ, ಇರಾದೇವಿ, ಕದ್ರುದೇವಿ, ಮುನಿದೇವಿ, ಇವರು ಕಶ್ಯಪನ ಮಡದಿಯರು. ಇವರಲ್ಲಿ ಜನಿಸಿದ ಪ್ರಜೆಗಳನ್ನು ಹೇಳುವೆನು.

೫೩. ಹಿಂದಿನ ವೈವಸ್ವತಮನ್ವಂತರದಲ್ಲಿ ತುಷಿತರೆಂದು ಪ್ರಸಿದ್ಧರಾದ ಹನ್ನೆರಡು ಜನ ದೇವತೆಗಳು ಇದ್ದರು. ಅವರು ಪರಸ್ಪರ ಹೀಗೆ ಯೋಚಿಸಿಕೊಂಡರು.

shrinath.udupa@gmail.com

ಉಪಸ್ಥಿತೇऽತಿಯಶಸಶ್ಚಾಕ್ಷುಷಸ್ಯಾಂತರೇ ಮನೋಃ ।
ಹಿತಾರ್ಥಂ ಸರ್ವಲೋಕಾನಾಂ ಸಮಾಗಮ್ಯ ಪರಸ್ಪರಂ ॥ ೩೪ ॥

ಆಗಚ್ಛತ ದ್ರುತಂ ದೇವಾ ಅದಿತಿಂ ಸಂಪ್ರವಿಶ್ಯ ವೈ ।
ಮನ್ವಂತರೇ ಪ್ರಸೂಯಾಮಸ್ತನ್ನಃ ಶ್ರೇಯೋ ಭವಿಷ್ಯತಿ ॥ ೩೫ ॥

॥ ಲೋಮಹರ್ಷಣ ಉವಾಚ ॥

ಏವಮುಕ್ತ್ವಾ ತು ತೇ ಸರ್ವೇ ಚಾಕ್ಷುಷಸ್ಯಾಂತರೇ ಮನೋಃ ।
ಮಾರೀಚಾತ್ಕಶ್ಯಪಾಜ್ಜಾತಾಸ್ತ್ವದಿತ್ಯಾ ದಕ್ಷಕನ್ಯಯಾ ॥ ೩೬ ॥

ತತ್ರ ವಿಷ್ಣುಶ್ಚ ಶಕ್ರಶ್ಚ ಜಜ್ಞಾತೇ ಪುನರೇವ ಹಿ ।
ಅರ್ಯಮಾ ಚೈವ ಧಾತಾ ಚ ತ್ವಷ್ಟಾ ಪೂಷಾ ತಥೈವ ಚ ॥ ೩೭ ॥

ವಿವಸ್ವಾನ್ ಸವಿತಾ ಚೈವ ಮಿತ್ರೋ ವರುಣ ಏವ ಚ ।
ಅಂಶೋ ಭಗಶ್ಚಾತಿತೇಜಾ ಆದಿತ್ಯಾ ದ್ವಾದಶ ಸ್ಮೃತಾಃ ॥ ೩೮ ॥

ಸಪ್ತವಿಂಶತಿ ಯಾಃ ಪ್ರೋಕ್ತಾಃ ಸೋಮಪತ್ನ್ಯೋ ಮಹಾವ್ರತಾಃ ।
ತಾಸಾಮಪತ್ಯಾನ್ಯಭವನ್ ದೀಪ್ತಾನ್ಯಮಿತತೇಜಸಃ ॥ ೩೯ ॥

೩೪-೩೫. ಎಲೈ ಸಹೋದರರೇ, ಮುಂದೆ ಮಹಾಯಶಸ್ಕರವಾದ ಚಾಕ್ಷುಷ ಮನ್ವಂತರವು ಬರಲಿರುವುದು. ಅದರಲ್ಲಿ ನಾವೆಲ್ಲರೂ ಅದಿತಿದೇವಿಯನ್ನು ಸೇರಿ ತಿರುಗಿ ಜನ್ಮವೆತ್ತೋಣ, ಅದರಿಂದ ನಮಗೆ ತುಂಬಾ ಶ್ರೇಯಸ್ಸಾಗುವುದು.

೩೬. ಲೋಮಹರ್ಷಣಮುನಿಯು ಹೇಳಿದನು:— ಹೀಗೆ ಯೋಚಿಸಿಕೊಂಡು ಆ ತುಷಿತರೆಂಬ ದೇವತೆಗಳೆಲ್ಲರೂ ಚಾಕ್ಷುಷಮನ್ವಂತರದಲ್ಲಿ ಮರೀಚಿಬ್ರಹ್ಮನ ಮಗನಾದ ಕಶ್ಯಪನಿಂದ ದಕ್ಷಪುತ್ರಿಯಾದ ಅದಿತಿದೇವಿಯಲ್ಲಿ ತಿರುಗಿ ಜನಿಸಿದರು.

೩೭-೩೮. ಆ ಅದಿತಿಯಲ್ಲಿ ವಿಷ್ಣು, ಇಂದ್ರ, ಅರ್ಯಮ, ಧಾತೃ, ತ್ವಷ್ಟೃ, ಪೂಷಣ, ವಿವಸ್ವಂತ, ಸವಿತೃ, ಮಿತ್ರ, ವರುಣ, ಅಂಶ, ಭಗರೆಂಬ ಹನ್ನೆರಡು ಜನ ದೇವತೆಗಳು ಪುನಃ ಜನ್ಮವೆತ್ತಿದರು. ಇವರಿಗೆ ಆದಿತ್ಯರೆಂದು ಹೆಸರು.

೩೯. ಹಿಂದೆ ಹೇಳಿದ ಚಂದ್ರನ ಮಡದಿಯರಾದ ಇಪ್ಪತ್ತೇಳುಜನ ದಕ್ಷಪುತ್ರಿಯರಲ್ಲಿ ಮಹಾತೇಜಸ್ವಿಗಳಾದ ಅನೇಕ ಮಕ್ಕಳು ಜನಿಸಿದರು.

shrinath.udupa@gmail.com

ಅರಿಷ್ಟನೇಮಿಪತ್ನೀನಾಮುಪತ್ಯಾನೀಹ ಷೋಡಶ ।
ಬಹುಪುತ್ರಸ್ಯ ವಿದುಷಶ್ಚತಸ್ರೋ ವಿದ್ಯುತಃ ಸ್ಮೃತಾಃ ॥ ೬೦ ॥

ಚಾಕ್ಷುಷಸ್ಯಾಂತರೇ ಪೂರ್ವೇ ಋಚೋ ಬ್ರಹ್ಮರ್ಷಿಸತ್ಕೃತಾಃ ।
ಕೃಶಾಶ್ವಸ್ಯ ಚ ದೇವರ್ಷೇರ್ದೇವಪ್ರಹರಣಾಃ ಸ್ಮೃತಾಃ ॥ ೬೧ ॥

ಏತೇ ಯುಗಸಹಸ್ರಾಂತೇ ಜಾಯಂತೇ ಪುನರೇವ ಹಿ ।
ಸರ್ವೇ ದೇವಗಣಾಶ್ಚಾತ್ರ ತ್ರಯಸ್ತ್ರಿಂಶತ್ತು ಕಾಮಜಾಃ ॥ ೬೨ ॥

ತೇಷಾಮಪಿ ಚ ಭೋ ವಿಪ್ರಾ ನಿರೋಧೋತ್ಪತ್ತಿರುಚ್ಯತೇ ।
ಯಥಾ ಸೂರ್ಯಸ್ಯ ಗಗನ ಉದಯಾಸ್ತಮಯಾವಿಹ ॥ ೬೩ ॥

ಏವಂ ದೇವನಿಕಾಯಾಸ್ತೇ ಸಂಭವಂತಿ ಯುಗೇ ಯುಗೇ ।
ದಿತ್ಯಾಃ ಪುತ್ರದ್ವಯಂ ಜಜ್ಞೇ ಕಶ್ಯಪಾದಿತಿ ನಃ ಶ್ರುತಂ ॥ ೬೪ ॥

---

೬೦. ಅರಿಷ್ಟನೇಮಿಯ ಮಡದಿಯಲ್ಲಿ ಹದಿನಾರು ಮಕ್ಕಳು ಜನಿಸಿದರು. ಬಹುಪುತ್ರನೆಂಬುವವನಿಗೆ ನಾಲ್ವರು ಪುತ್ರಿಯರು. ವಿದ್ಯುತ್ತುಗಳೆಂದು ಅವರ ಹೆಸರು.

೬೧. ಆ ಚಾಕ್ಷುಷಮನ್ವಂತರದಲ್ಲಿಯೇ ಬ್ರಹ್ಮರ್ಷಿಗಳು ಕಂಡುಹಿಡಿದ ಋಕ್ಕುಗಳು ಕೃಶಾಶ್ವಮುನಿಗೆ ಅಸ್ತ್ರಮಂತ್ರಗಳಾಗಿ ಗೋಚರಿಸಿದುವು.

೬೨. ಈ ಅಸ್ತ್ರಮಂತ್ರಗಳೂ ಸಹ ಸಾವಿರ ಯುಗಗಳು ಕಳೆಯಲು ತಿರುಗಿ ಜನಿಸುವುವು. ಈ ಎಲ್ಲ ಮೂವತ್ತುಮೂರು ದೇವತೆಗಳೂ ಸ್ತ್ರೀಪುರುಷಸಂಪರ್ಕದಿಂದಲೇ ಜನಿಸಿರುವರು.

೬೩. ಎಲೈ ಬ್ರಾಹ್ಮಣೋತ್ತಮರೇ, ಸೂರ್ಯನಿಗೆ ಆಕಾಶದಲ್ಲಿ ಉದಯಾಸ್ತಗಳಿರುವಂತೆ ಈ ದೇವತೆಗಳಿಗೂ ಪ್ರತಿಯೊಂದು ಯುಗದಲ್ಲಿ ಜನ್ಮ ಮತ್ತು ನಾಶಗಳಿರುವುವು.

೬೪. ದಿತಿದೇವಿಯಲ್ಲಿ ಕಶ್ಯಪನಿಂದ ಹಿರಣ್ಯಾಕ್ಷ ಹಿರಣ್ಯಕಶಿಪುಗಳೆಂಬ ಈರ್ವರು ಮಕ್ಕಳು ಜನಿಸಿದರೆಂದು ಕೇಳಿರುವೆವು.

shrinath.udupa@gmail.com

ಹಿರಣ್ಯಕಶಿಪುಶ್ಚೈವ ಹಿರಣ್ಯಾಕ್ಷಶ್ಚ ವೀರ್ಯವಾನ್ ।
ಸಿಂಹಿಕಾ ಚಾಭವತ್ಕನ್ಯಾ ವಿಪ್ರಚಿತ್ತೇಃ ಪರಿಗ್ರಹಃ ॥ ೧೫ ॥

ಸೈಂಹಿಕೇಯಾ ಇತಿ ಖ್ಯಾತಾ ಯಸ್ಯಾಃ ಪುತ್ರಾ ಮಹಾಬಲಾಃ ।
ಹಿರಣ್ಯಕಶಿಪೋಃ ಪುತ್ರಾಶ್ಚತ್ವಾರಃ ಪರಿಕೀರ್ತಿತಾಃ ॥ ೧೬ ॥

ಹ್ರಾದಶ್ಚ ಅನುಹ್ರಾದಶ್ಚ ಪ್ರಹ್ರಾದಶ್ಚೈವ ವೀರ್ಯವಾನ್ ।
ಸಂಹ್ರಾದಶ್ಚ ಚತುರ್ಥೋ ವೈ ಹ್ರಾದಪುತ್ರೋ ಹ್ರದಸ್ತಥಾ ॥ ೧೭ ॥

ಹ್ರದಸ್ಯ ಪುತ್ರೌ ದ್ವೌ ವೀರೌ ಶಿವಃ ಕಾಲಸ್ತಥೈವ ಚ ।
ವಿರೋಚನಶ್ಚ ಪ್ರಾಹ್ರಾದಿರ್ಬಲಿರ್ಜಜ್ಞೇ ವಿರೋಚನಾತ್ ॥ ೧೮ ॥

ಬಲೇಃ ಪುತ್ರಶತಂ ತ್ವಾಸೀದ್ಬಾಣಜ್ಯೇಷ್ಠಂ ತಪೋಧನಾಃ ।
ಧೃತರಾಷ್ಟ್ರಶ್ಚ ಸೂರ್ಯಶ್ಚ ಚಂದ್ರಮಾಶ್ಚಂದ್ರತಾಪನಃ ॥ ೧೯ ॥

ಕುಂಭನಾಭೋ ಗರ್ದಭಾಕ್ಷಃ ಕುಕ್ಷಿರಿತ್ಯೇವಮಾದಯಃ ।
ಬಾಣಸ್ತೇಷಾಮತಿಬಲೋ ಜ್ಯೇಷ್ಠಃ ಪಶುಪತೇಃ ಪ್ರಿಯಃ ॥ ೨೦ ॥

---

೧೫. ಆ ದಿತಿಗೆ ಸಿಂಹಿಕೆಯೆಂಬ ಮಗಳೂ ಜನಿಸಿದಳು. ಅವಳನ್ನು ವಿಪ್ರಚಿತ್ತಿಯು ಮದುವೆಯಾದರು. "ಸೈಂಹಿಕೇಯ" ರೆಂಬ ಮಹಾ ಪರಾಕ್ರಮಿಗಳು ಆ ಸಿಂಹಿಕೆಯ ಮಕ್ಕಳು.

೧೬-೧೭. ಹಿರಣ್ಯಕಶಿಪುವಿಗೆ ಹ್ರಾದ, ಅನುಹ್ರಾದ, ಪ್ರಹಾದ, ಸಂಹ್ರಾದರೆಂಬ ಪರಾಕ್ರಮಿಗಳಾದ ನಾಲ್ವರು ಮಕ್ಕಳು. ಅವರಲ್ಲಿ ಹ್ರಾದನ ಪುತ್ರನು ಹ್ರದನೆಂಬುವವನು

೧೮. ಆ ಹ್ರದನಿಗೆ ವೀರರಾದ ಶಿವ, ಕಾಲರೆಂಬ ಈರ್ವರು ಮಕ್ಕಳು. ಪ್ರಹ್ಲಾದನ ಮಗನು ವಿರೋಚನನು. ವಿರೋಚನನ ಮಗನು ಬಲಿಚಕ್ರವರ್ತಿಯು.

೧೯-೨೦. ಆ ಬಲಿಗೆ "ಧೃತರಾಷ್ಟ್ರ, ಸೂರ್ಯ, ಚಂದ್ರ, ಚಂದ್ರತಾಪನ, ಕುಂಭನಾಭ. ಗರ್ದಭಾಕ್ಷ, ಕುಕ್ಷಿ," ಮೊದಲಾದ ನೂರಜನ ಮಕ್ಕಳು. ಅವರಲ್ಲಿ ಬಾಣಾಸುರನು ಹಿರಿಯವನು, ಬಲಿಷ್ಠನು ಶಿವನ ಪ್ರಿಯಭಕ್ತನು.

shrinath.udupa@gmail.com

ಪುರಾ ಕಲ್ಪೇ ತು ಬಾಣೇನ ಪ್ರಸಾದ್ಯೋಮಾಪತಿಂ ಪ್ರಭುಂ ।
ಪಾರ್ಶ್ವತೋ ವಿಹರಿಷ್ಯಾಮಿ ಇತ್ಯೇವಂ ಯಾಚಿತೋ ವರಃ ॥ ೨೦ ॥

ಹಿರಣ್ಯಾಕ್ಷಸುತಾಶ್ಚೈವ ವಿದ್ವಾಂಸಶ್ಚ ಮಹಾಬಲಾಃ ।
ಬರ್ಭರಃ ಶಕುನಿಶ್ಚೈವ ಭೂತಸಂತಾಪನಸ್ತಥಾ ॥ ೨೧ ॥

ಮಹಾನಾಭಶ್ಚ ವಿಕ್ರಾಂತಃ ಕಾಲನಾಭಸ್ತಥೈವ ಚ ।
ಅಭವನ್ ದನುಪುತ್ರಾಶ್ಚ ಶತಂ ತೀವ್ರಪರಾಕ್ರಮಾಃ ॥ ೨೨ ॥

ತಪಸ್ವಿನೋ ಮಹಾವೀರ್ಯಾಃ ಪ್ರಾಧಾನ್ಯೇನ ಬ್ರವೀಮಿ ತಾನ್ ।
ದ್ವಿಮೂರ್ಧಾ ಶಂಕುಕರ್ಣಶ್ಚ ತಥಾ ಹಯಶಿರಾ ವಿಭುಃ ॥ ೨೩ ॥

ಅಯೋಮುಖಃ ಶಂಬರಶ್ಚ ಕಪಿಲೋ ವಾಮನಸ್ತಥಾ ।
ಮಾರೀಚಿರ್ಮಘವಾಂಶ್ಚೈವ ಇಲ್ವಲಃ ಸ್ವಸೃಮಸ್ತಥಾ ॥ ೨೪ ॥

ವಿಕ್ಷೋಭಣಶ್ಚ ಕೇತುಶ್ಚ ಕೇತುವೀರ್ಯಶತಹ್ರದೌ ।
ಇಂದ್ರಜಿತ್ಸರ್ವಜಿಚ್ಚೈವ ವಜ್ರನಾಭಸ್ತಥೈವ ಚ ॥ ೨೫ ॥

---

೨೦. ಹಿಂದಿನ ಕಲ್ಪದಲ್ಲಿ ಆ ಬಾಣನು ಪರಮೇಶ್ವರನನ್ನು ತಪಸ್ಸಿನಿಂದ ಪ್ರಸನ್ನಗೊಳಿಸಿ ಅವನ ಸಮೀಪದಲ್ಲಿಯೇ ವಿಹರಿಸುವ ವರವನ್ನು ಬೇಡಿಕೊಂಡು ರುದ್ರಗಣಗಳ ಸ್ಥಾನವನ್ನೇರಿದನು.

೨೧. ಹಿರಣ್ಯಾಕ್ಷನಿಗೆ ಬರ್ಭರ ಶಕುನಿ ಭೂತಸಂತಾಪನ ಮಹಾನಾಭ ವಿಕ್ರಾಂತ ಕಾಲನಾಭ ರೆಂಬುವವರು ಮಕ್ಕಳು. ಇವರೆಲ್ಲರೂ ವಿದ್ವಾಂಸರು, ಪರಾಕ್ರಮಿಗಳು.

೨೨. ಧನುದೇವಿಗೆ ನೂರುಜನ ಮಕ್ಕಳು. ಅವರೆಲ್ಲರೂ ಮಹಾಪರಾಕ್ರಮಿಗಳು. ತಪಸ್ವಿಗಳು. ಅವರಲ್ಲಿ ಮುಖ್ಯರಾದ ಕೆಲವರನ್ನು ಹೇಳುವೆನು.

೨೩-೨೮. ದ್ವಿಮೂರ್ಧಾ ಶಂಖುಕರ್ಣ ಹಯಶಿರಸ್ಸು ಅಯೋಮುಖ ಶಂಬರ ಕಪಿಲ ವಾಮನ ಮಾರೀಚಿ ಮಘವಂತ ಇಲ್ವಲ ಸ್ವಸೃಮ ವಿಕ್ಷೋಭಣ ಕೇತು ಕೇತುವೀರ್ಯ ಶತಪ್ರದ ಇಂದ್ರಜಿತು ಸರ್ವಜಿತು ವಜ್ರನಾಭ ಏಕಚಕ್ರ ತಾರಕ ವೈಶ್ವಾನರ ಪುಲೋಮ ವಿದ್ರಾವಣ ಮಹಾಶಿರಸ್ಸು ಸ್ವರ್ಭಾನು ವೃಷಪರ್ವಾ ವಿಪ್ರ

shrinath.udupa@gmail.com

ಏಕಚಕ್ರೋ ಮಹಾಬಾಹುಸ್ತಾರಕಶ್ಚ ಮಹಾಬಲಃ ।
ವೈಶ್ವಾನರಃ ಪುಲೋಮಾ ಚ ವಿದ್ರಾವಣಮಹಾಶಿರಾಃ ॥ ೭೭ ॥

ಸ್ವರ್ಭಾನುರ್ವೃಷಪರ್ವಾ ಚ ವಿಪ್ರಚಿತ್ತಿಶ್ಚ ವೀರ್ಯವಾನ್ ।
ಸರ್ವ ಏತೇ ದನೋಃ ಪುತ್ರಾಃ ಕಶ್ಯಪಾದಭಿಜಜ್ಞಿರೇ ॥ ೭೮ ॥

ವಿಪ್ರಚಿತ್ತಿಪ್ರಧಾನಾಸ್ತೇ ದಾನವಾಃ ಸುಮಹಾಬಲಾಃ ।
ಏತೇಷಾಂ ಪುತ್ರಪೌತ್ರಂ ತು ನ ತಚ್ಛಕ್ಯಂ ದ್ವಿಜೋತ್ತಮಾಃ ॥ ೭೯ ॥

ಪ್ರಸಂಖ್ಯಾತುಂ ಬಹುತ್ವಾಚ್ಚ ಪುತ್ರಪೌತ್ರಮನಂತಕಂ ।
ಸ್ವರ್ಭಾನೋಸ್ತು ಪ್ರಭಾ ಕನ್ಯಾ ಪುಲೋಮ್ನಸ್ತು ಶಚೀ ಸುತಾ ॥ ೮೦ ॥

ಉಪದೀಪ್ತಿರ್ಹಯಶಿರಾಃ ಶರ್ಮಿಷ್ಠಾ ವೃಷಪರ್ವಣಃ ।
ಪುಲೋಮಾ ಕಾಲಿಕಾ ಚೈವ ವೈಶ್ವಾನರಸುತೇ ಉಭೇ ॥ ೮೧ ॥

ಬಹ್ವಪತ್ಯೇ ಮಹಾಪತ್ಯೇ ಮರೀಚೇಸ್ತು ಪರಿಗ್ರಹಃ ।
ತಯೋಃ ಪುತ್ರಸಹಸ್ರಾಣಿ ಷಷ್ಟಿರ್ದಾನವನಂದನಾಃ ॥ ೮೨ ॥

ಚಿತ್ತಿ ಇವರೆಲ್ಲರೂ ದನುದೇವಿಯಲ್ಲಿ ಹುಟ್ಟಿದ ಕಶ್ಯಪಪುತ್ರರು. ಮಹಾಪರಾಕ್ರಮಿಗಳು.

೭೯. ಇವರಲ್ಲಿ ವಿಪ್ರಚಿತ್ತಿಯು ಮುಖ್ಯನು. ದಾನವರೆಂದು ಇವರಿಗೆ ಹೆಸರು. ದಾನವರ ಮಕ್ಕಳು ಮೊಮ್ಮಕ್ಕಳು ಬಹುಜನಗಳಿರುವರು. ಅವರೆಲ್ಲರನ್ನೂ ಎಣಿಸಿ ಹೇಳಲು ಸಾಧ್ಯವಿಲ್ಲ.

೮೦. ಪ್ರಭೆಯೆಂಬುವಳು ಸ್ವರ್ಭಾನುವಿನ ಮಗಳು. ಶಚಿದೇವಿಯು ಪುಲೋಮನ ಮಗಳು. ಉಪದೀಪ್ತಿಯು ಹಯಶಿರಸ್ಸಿನ ಮಗಳು. ವೃಷಪರ್ವನ ಮಗಳು ಶರ್ಮಿಷ್ಠೆಯೆಂಬುವಳು.

೮೧–೮೨. ಪುಲೋಮಾ ಕಾಲಿಕಾ ಎಂಬೀರ್ವರು ವೈಶ್ವಾನರನ ಕುಮಾರಿಕೆಯರು. ಇವರನ್ನು ಮರೀಚಿಯು ಮದುವೆಮಾಡಿಕೊಂಡನು. ಈ ಕನ್ಯೆಯರೀರ್ವರು ಅರವತ್ತು ಸಾವಿರ (೬೦,೦೦೦) ದಾನವರನ್ನು ಹಡೆದರು.

shrinath.udupa@gmail.com

ಚತುರ್ದಶಶತಾನನ್ಯಾನ್ ಹಿರಣ್ಯಪುರವಾಸಿನಃ ।
ಮರೀಚಿರ್ಜನಯಾಮಾಸ ಮಹತಾ ತಪಸಾನ್ವಿತಃ ॥ ೮೩ ॥

ಪೌಲೋಮಾಃ ಕಾಲಕೇಯಾಶ್ಚ ದಾನವಾಸ್ತೇ ಮಹಾಬಲಾಃ ।
ಅವಧ್ಯಾ ದೇವತಾನಾಂ ಹಿ ಹಿರಣ್ಯಪುರವಾಸಿನಃ ॥ ೮೪ ॥

ಪಿತಾಮಹಪ್ರಸಾದೇನ ಯೇ ಹತಾಃ ಸವ್ಯಸಾಚಿನಾ ।
ತತೋಽಪರೇ ಮಹಾವೀರ್ಯಾ ದಾನವಾಸ್ತ್ವತಿದಾರುಣಾಃ ॥ ೮೫ ॥

ಸಿಂಹಿಕಾಯಾಮಥೋತ್ಪನ್ನಾ ವಿಪ್ರಚಿತ್ತೇಸ್ಸುತಾಸ್ತಥಾ ।
ದೈತ್ಯದಾನವಸಂಯೋಗಾಜ್ಜಾತಾಸ್ತೀವ್ರಪರಾಕ್ರಮಾಃ ॥ ೮೬ ॥

ಸೈಂಹಿಕೇಯಾ ಇತಿ ಖ್ಯಾತಾಸ್ತ್ರಯೋದಶ ಮಹಾಬಲಾಃ ।
ವಂಶ್ಯಃ ಶಲ್ಯಶ್ಚ ಬಲಿನೌ ನಲಶ್ಚೈವ ತಥಾ ಬಲಃ ॥ ೮೭ ॥

ವಾತಾಪಿರ್ನಮುಚಿಶ್ಚೈವ ಇಲ್ವಲಃ ಸ್ವಸೃಮಸ್ತಥಾ ।
ಅಂಜಿಕೋ ನರಕಶ್ಚೈವ ಕಾಲನಾಭಸ್ತಥೈವ ಚ ॥ ೮೮ ॥

---

೮೩. ಮರೀಚಿಯು ಇನ್ನೂ ಸಾವಿರದ ನಾನೂರು (೧,೪೦೦) ದಾನವರನ್ನು ತನ್ನ ತಪೋಮಹಿಮೆಯಿಂದ ಸೃಷ್ಟಿಸಿದನು. ಅವರೆಲ್ಲರೂ ಹಿರಣ್ಯಪುರದಲ್ಲಿ ವಾಸಿಸುವವರು.

೮೪. ಪುಲೋಮದೇವಿಯ ಪುತ್ರರೂ, ಕಾಲಿಕೆಯ ಪುತ್ರರೂ, ಹಿರಣ್ಯಪುರವಾಸಿಗಳೂ ಆದ ಆ ದಾನವರೆಲ್ಲರೂ ದೇವತೆಗಳಿಗೂ ಅವಧ್ಯರು. ದೇವತೆಗಳು ಅವರನ್ನು ಕೊಲ್ಲಲು ಸಾಧ್ಯವಿಲ್ಲ. ಆದರೂ ಇಂದ್ರನು ಬ್ರಹ್ಮನ ಅನುಗ್ರಹದಿಂದ ಆ ದಾನವರನ್ನು ಸಂಹರಿಸಿದನು.

೮೫-೮೬. ಈ ದಾನವರಿಗಿಂತಲೂ ಪರಾಕ್ರಮಿಗಳಾದ ದಾನವರು ಕೆಲವರಿರುವರು. ಸಿಂಹಿಕೆಯಲ್ಲಿ ವಿಪ್ರಚಿತ್ತಿಯಿಂದ ಜನಿಸಿದ ದಾನವರು, ದಾನವರ ರಕ್ತಸಂಬಂಧವುಳ್ಳವರಾಗಿದ್ದು ಮಹಾಪರಾಕ್ರಮಿಗಳಾಗಿದ್ದರು.

೮೭-೮೯. ವಂಶ್ಯ ಶಲ್ಯ ನಲ ಬಲ ವಾತಾಪಿ ನಮುಚಿ ಇಲ್ವಲ ಸ್ವಸೃಮ ಅಂಜಿಕ ನರಕ ಕಾಲನಾಭ ಸರಮಾನ ಸ್ವರಕಲ್ಪ ಈ ಹದಿಮೂರುಜನ ದಾನವರು ವಿಪ್ರಚಿತ್ತಿಯ ಮಕ್ಕಳು. ಇವರಿಗೆ ಸೈಂಹಿಕೇಯರೆಂದೂ ಹೆಸರು. ಇವರು

shrinath.udupa@gmail.com

ಸರಮಾನಸ್ತಥಾ ಚೈವ ಸ್ವರಕಲ್ಪಶ್ಚ ವೀರ್ಯವಾನ್ ।
ಏತೇ ವೈ ದಾನವಾಃ ಶ್ರೇಷ್ಠಾ ದನೋರ್ವಂಶವಿವರ್ಧನಾಃ ॥ ೮೯ ॥

ತೇಷಾಂ ಪುತ್ರಾಶ್ಚ ಪೌತ್ರಾಶ್ಚ ಶತಶೋಽಥ ಸಹಸ್ರಶಃ ।
ಸಂಹ್ರಾದಸ್ಯ ತು ದೈತ್ಯಸ್ಯ ನಿವಾತಕವಚಾಃ ಕುಲೇ ॥ ೯೦ ॥

ಸಮುತ್ಪನ್ನಾಃ ಸುಮಹತಾ ತಪಸಾ ಭಾವಿತಾತ್ಮನಃ ।
ತಿಸ್ರಃ ಕೋಟ್ಯಃ ಸುತಾಸ್ತೇಷಾಂ ಮಣಿವತ್ಯಾಂ ನಿವಾಸಿನಃ ॥ ೯೧ ॥

ಅವಧ್ಯಾಸ್ತೇಽಪಿ ದೇವಾನಾಮರ್ಜುನೇನ ನಿಪಾತಿತಾಃ ।
ಷಟ್ಸುತಾಃ ಸುಮಹಾಭಾಗಾಸ್ತಾಮ್ರಾಯಾಃ ಪರಿಕೀರ್ತಿತಾಃ ॥ ೯೨ ॥

ಕ್ರೌಂಚೀ ಶ್ಯೇನೀ ಚ ಭಾಸೀ ಚ ಸುಗ್ರೀವೀ ಶುಚಿಗೃಧ್ರಿಕೇ ।
ಕ್ರೌಂಚೀ ತು ಜನಯಾಮಾಸ ಉಲೂಕಪ್ರತ್ಯುಲೂಕಕಾನ್ ॥ ೯೩ ॥

ಶ್ಯೇನೀ ಶ್ಯೇನಾಂಸ್ತಥಾ ಭಾಸೀ ಭಾಸಾನ್ ಗೃಧ್ರಾಂಶ್ಚ ಗೃಧ್ರ್ಯಪಿ ।
ಶುಚಿರೌದಕಾನ್ ಪಕ್ಷಿಗಣಾನ್ ಸುಗ್ರೀವೀ ತು ದ್ವಿಜೋತ್ತಮಾಃ ॥ ೯೪ ॥

ಮಹಾಪರಾಕ್ರಮಿಗಳು. ಇವರಿಂದ ದನುವಂಶವು ತುಂಬಾ ವೃದ್ಧಿಯನ್ನೈದಿತು. ಈ ದಾನವರ ಮಕ್ಕಳು ಮೊಮ್ಮಕ್ಕಳು ಸಹಸ್ರಾರು ಇರುವರು.

೯೦-೯೧. ಸಂಹ್ರಾದನು ಮಹಾತಪಸ್ಸನ್ನಾಚರಿಸಿ "ನಿವಾತಕವಚ" ರೆಂಬ ವೀರಪುತ್ರರನ್ನು ಪಡೆದನು. ಆ ನಿವಾತಕವಚರಿಗೆ ಮೂರುಕೋಟಿ ಮಕ್ಕಳು. ಅವರೆಲ್ಲರೂ ಮಣಿಪುರಿಯಲ್ಲಿ ವಾಸಿಸುತ್ತಿದ್ದರು. ದೇವತೆಗಳೂ ಅವರನ್ನು ಸಂಹರಿಸಲು ಸಾಧ್ಯವಿರಲಿಲ್ಲ. ಇಂತಹವರನ್ನು ಅರ್ಜುನನು (ದ್ವಾಪರಯುಗದಲ್ಲಿ) ನಾಶಮಾಡಿದನು.

೯೨. ತಾಮ್ರಾದೇವಿಗೆ ಕ್ರೌಂಚೀ ಶ್ಯೇನೀ ಭಾಸೀ ಸುಗ್ರೀವೀ ಶುಚಿದೇವಿ ಗೃಧ್ರಿಕಾದೇವೀ ಈ ಆರು ಜನರು ಪುತ್ರಿಯರು.

೯೩-೯೪. ಕ್ರೌಂಚಿಯು ಗೂಬೆಗಳನ್ನು ಸೃಷ್ಟಿಸಿದಳು. ಶ್ಯೇನಿಯು ಹದ್ದುಗಳನ್ನೂ, ಭಾಸೀದೇವಿಯು ಭಾಸಗಳನ್ನೂ, ಗೃಧ್ರಿದೇವಿಯು ಗಿಡುಗಗಳನ್ನೂ ಹಡೆದರು. ಶುಚಿಯೆಂಬುವವಳು ಜಲದಲ್ಲಿ ವಾಸಮಾಡುವ ಪಕ್ಷಿಗಳನ್ನು ಹಡೆದಳು.

shrinath.udupa@gmail.com

ಅಶ್ವಾನುಷ್ಟ್ರಾನ್ ಗರ್ದಭಾಂಶ್ಚ ತಾಮ್ರಾವಂಶಃ ಪ್ರಕೀರ್ತಿತಃ ।
ವಿನತಾಯಾಸ್ತು ದ್ವೌ ಪುತ್ರೌ ವಿಖ್ಯಾತೌ ಗರುಡಾರುಣೌ ॥ ೯೫ ॥

ಗರುಡಃ ಪತತಾಂ ಶ್ರೇಷ್ಠೋ ದಾರುಣಃ ಸ್ವೇನ ಕರ್ಮಣಾ ।
ಸುರಸಾಯಾಃ ಸಹಸ್ರಂ ತು ಸರ್ಪಾಣಾಮಮಿತೌಜಸಾಂ ॥ ೯೬ ॥

ಅನೇಕಶಿರಸಾಂ ವಿಪ್ರಾಃ ಖಚರಾಣಾಂ ಮಹಾತ್ಮನಾಂ ।
ಕಾದ್ರವೇಯಾಸ್ತು ಬಲಿನಃ ಸಹಸ್ರಮಮಿತೌಜಸಃ ॥ ೯೭ ॥

ಸುಪರ್ಣವಶಗಾ ನಾಗಾ ಜಜ್ಞಿರೇ ನೈಕಮಸ್ತಕಾಃ ।
ಯೇಷಾಂ ಪ್ರಧಾನಾಃ ಸತತಂ ಶೇಷವಾಸುಕಿತಕ್ಷಕಾಃ ॥ ೯೮ ॥

ಐರಾವತೋ ಮಹಾಪದ್ಮಃ ಕಂಬಲಾಶ್ವತರಾವುಭೌ ।
ಏಲಾಪತ್ರಶ್ಚ ಶಂಖಶ್ಚ ಕರ್ಕೋಟಕಧನಂಜಯೌ ॥ ೯೯ ॥

ಮಹಾನೀಲಮಹಾಕರ್ಣೌ ಧೃತರಾಷ್ಟ್ರಬಲಾಹಕೌ ।
ಕುಹರಃ ಪುಷ್ಪದಂಷ್ಟ್ರಶ್ಚ ದುರ್ಮುಖಃ ಸಂಮುಖಸ್ತಥಾ ॥ ೧೦೦ ॥

ಸುಗ್ರೀವಿದೇವಿಯು ಕುದುರೆ ಒಂಟೆಗಳು ಕತ್ತೆಗಳು ಇವುಗಳನ್ನು ಹಡೆದಳು. ಹೀಗೆ ಗೂಬೆಮೊದಲಾದುವು ತಾಮ್ರಾದೇವಿಯ ಕುಲದಲ್ಲಿ ಜನಿಸಿದವುಗಳು.

೯೬. ಪ್ರಸಿದ್ಧರಾದ ಗರುಡ ಮತ್ತು ಅರುಣರು ವಿನತೆಯ ಮಕ್ಕಳು. ಗರುಡನು ಪಕ್ಷಿರಾಜನು. ಮಹಾಸಾಹಸಿಯು.

೯೭. ಅನೇಕ ಹೆಡೆಗಳುಳ್ಳ, ಆಕಾಶದಲ್ಲಿ ಸಂಚರಿಸುವ ಸರ್ಪಗಳೆಲ್ಲವೂ ಸುರಸೆಯ ಮಕ್ಕಳು.

೯೮. ಸಾವಿರಾರು ನಾಗ (ಹಾವು) ಗಳೆಲ್ಲವೂ ಕದ್ರುದೇವಿಯ ಮಕ್ಕಳು. ಇವಕ್ಕೆ ಕಾದ್ರವೇಯರೆಂದೂ ಹೆಸರು. ಇವೆಲ್ಲವೂ ಗರುಡನಿಗಧೀನವಾಗಿರುವುವು. ಇವುಗಳಲ್ಲಿ ಶೇಷ ವಾಸುಕಿ ತಕ್ಷಕ ಇವರು ಮುಖ್ಯರಾದವರು.

೯೯–೧೦೧. ಐರಾವತ ಮಹಾಪದ್ಮ ಶಂಖ ಕರ್ಕೋಟಕ ಧನಂಜಯ ಕಂಬಲ ಅಶ್ವತರ ಏಲಾಪುತ್ರ ಮಹಾನೀಲ ಮಹಾಕರ್ಣ ಧೃತರಾಷ್ಟ್ರ ಬಲಾಹಕ

shrinath.udupa@gmail.com

ಶಂಖಶ್ಚ ಶಂಖಪಾಲಶ್ಚ ಕಪಿಲೋ ವಾಮನಸ್ತಥಾ ।
ನಹುಷಃ ಶಂಖರೋಮಾ ಚ ಮಣಿರಿತ್ಯೇವಮಾದಯಃ ॥ ೧೦೧ ॥

ತೇಷಾಂ ಪುತ್ರಾಶ್ಚ ಪೌತ್ರಾಶ್ಚ ಶತಶೋಽಥ ಸಹಸ್ರಶಃ ।
ಚತುರ್ದಶಸಹಸ್ರಾಣಿ ಕ್ರೂರಾಣಾಮನಿಲಾಶಿನಾಂ ॥ ೧೦೨ ॥

ಗಣಃ ಕ್ರೋಧವಶೋ ವಿಪ್ರಾಸ್ತಸ್ಯ ಸರ್ವೇ ಚ ದಂಷ್ಟ್ರಿಣಃ ।
ಸ್ಥಲಜಾಃ ಪಕ್ಷಿಣೋಽಬ್ಜಾಶ್ಚ ಧರಾಯಾಃ ಪ್ರಸವಾಃ ಸ್ಮೃತಾಃ ॥ ೧೦೩ ॥

ಗಾಸ್ತು ವೈ ಜನಯಾಮಾಸ ಸುರಭಿರ್ಮಹಿಷೀಸ್ತಥಾ ।
ಇರಾ ವೃಕ್ಷಲತಾ ವಲ್ಲೀಸ್ತೃಣಜಾತೀಶ್ಚ ಸರ್ವಶಃ ॥ ೧೦೪ ॥

ಖಸಾ ತು ಯಕ್ಷರಕ್ಷಾಂಸಿ ಮುನಿರಪ್ಸರಸಸ್ತಥಾ ।
ಅರಿಷ್ಟಾ ತು ಮಹಾಸಿದ್ಧಾ ಗಂಧರ್ವಾನಮಿತೌಜಸಃ ॥ ೧೦೫ ॥

ಕುಹರ ಪುಷ್ಪದಂಷ್ಟ್ರ ದುರ್ಮುಖ ಸುಮುಖ ಶಂಖ ಶಂಖಪಾಲ ಕಪಿಲ ವಾಮನ ನಹುಷ ಶಂಖರೋಮ ಮಣಿ ಮೊದಲಾದ ಸರ್ಪಗಳು ಕದ್ರುವಿನ ಮಕ್ಕಳು.

೧೦೨. ಈ ಸರ್ಪಗಳಲ್ಲಿ ಹದಿನಾಲ್ಕುಸಾವಿರ [೧೪,೦೦೦] ಕುಲಗಳಿರುವುವು. ಅವುಗಳ ಮಕ್ಕಳುಗಳು ಮೊಮ್ಮಕ್ಕಳು ಸಾವಿರಾರು ಇರುವುವು. ಈ ಸರ್ಪಗಳೆಲ್ಲಕ್ಕೂ ವಿಷಮಯವಾದ ಹಲ್ಲುಗಳಿರುವುವು. ಇವುಗಳಿಗೆ ಕೋಪ ಹೆಚ್ಚು.

೧೦೩-೧೦೪. ಭೂಮಿಸಂಚಾರಿಗಳೂ ಜಲಚಾರಿಗಳೂ ಆದ ಪಕ್ಷಿಗಳೆಲ್ಲವೂ ಧರಾದೇವಿಯಿಂದ ಜನಿಸಿದವುಗಳು· ಸುರಭಿ [ಕಾಮದೇನು] ಯು ಎತ್ತು ಹಸುಗಳನ್ನೂ, ಎಮ್ಮೆಕೋಣಗಳನ್ನೂ ಸೃಷ್ಟಿಸಿದಳು. ಇರಾದೇವಿಯು ಮರಗಿಡಗಳು. ಲತೆಗಳು ಹುಲ್ಲುಗಳು ಮುಂತಾದುವುಗಳನ್ನು ಸೃಜಿಸಿದಳು.

೧೦೫. ಖಸಾದೇವಿಯು ಯಕ್ಷರನ್ನೂ ರಾಕ್ಷಸರನ್ನೂ ಹಡೆದಳು. ಮುನಿದೇವಿಯು ಅಪ್ಸರೆಯರನ್ನು ಹಡೆದಳು. ಅರಿಷ್ಟಾದೇವಿಯು ಸಿದ್ಧರನ್ನೂ ಗಂಧರ್ವರನ್ನೂ ಹಡೆದಳು.

shrinath.udupa@gmail.com

ಏತೇ ಕಶ್ಯಪದಾಯಾದಾಃ ಕೀರ್ತಿತಾಃ ಸ್ಥಾಣುಜಂಗಮಾಃ ।
ಯೇಷಾಂ ಪುತ್ರಾಶ್ಚ ಪೌತ್ರಾಶ್ಚ ಶತಶೋಽಥ ಸಹಸ್ರಶಃ ॥ ೧೦೬ ॥

ಏಷ ಮನ್ವಂತರೇ ವಿಪ್ರಾಃ ಸರ್ಗಃ ಸ್ವಾರೋಚಿಷೇ ಸ್ಮೃತಃ ।
ವೈವಸ್ವತೇಽತಿಮಹತಿ ವಾರುಣೇ ವಿತತೇ ಕ್ರತೌ ॥ ೧೦೭ ॥

ಜುಹ್ವಾನಸ್ಯ ಬ್ರಹ್ಮಣೋ ವೈ ಪ್ರಜಾಸರ್ಗ ಇಹೋಚ್ಯತೇ ।
ಪೂರ್ವಂ ಯತ್ರ ಸಮುತ್ಪನ್ನಾನ್ ಬ್ರಹ್ಮರ್ಷೀನ್ ಸಪ್ತ ಮಾನಸಾನ್ ॥ ೧೦೮ ॥

ಪುತ್ರತ್ವೇ ಕಲ್ಪಯಾಮಾಸ ಸ್ವಯಮೇವ ಪಿತಾಮಹಃ ।
ತತೋ ವಿರೋಧೇ ದೇವಾನಾಂ ದಾನವಾನಾಂ ಚ ಭೋ ದ್ವಿಜಾಃ ॥ ೧೦೯ ॥

ದಿತಿರ್ವಿನಷ್ಟಪುತ್ರಾ ವೈ ತೋಷಯಾಮಾಸ ಕಶ್ಯಪಂ ।
ಕಶ್ಯಪಸ್ತು ಪ್ರಸನ್ನಾತ್ಮಾ ಸಮ್ಯಗಾರಾಧಿತಸ್ತಯಾ ॥ ೧೧೦ ॥

---

೧೦೬. ಹೀಗೆ ಹಿಂದೆ ಹೇಳಿದ ಸ್ಥಿರ [ಚಲಿಸದವು] ಚರ [ಚಲಿಸುವವು] ರೂಪವಾದ ವಸ್ತು ಮತ್ತು ಪ್ರಾಣಿಗಳೆಲ್ಲವೂ ಕಶ್ಯಪಬ್ರಹ್ಮನ ಸಂತತಿಗಳು. ಮುಂದೆ ಈ ಕಶ್ಯಪವಂಶದವರಿಂದಲೇ ಸಾವಿರಾರು ಮಕ್ಕಳು ಮೊಮ್ಮಕ್ಕಳು ಜನಿಸಿ ಸೃಷ್ಟಿಯು ಬೆಳೆಯಿತು.

೧೦೭. ಎಲೈ ಬ್ರಾಹ್ಮಣೋತ್ತಮರೇ, ಈ ಸೃಷ್ಟಿಯು ಸ್ವಾರೋಚಿಷಮನ್ವಂತರದಲ್ಲಿ ನಡೆದಂತಹುದು. ಮುಂದೆ ಮಹತ್ತಾದ ವೈವಸ್ವತಮನ್ವಂತರದಲ್ಲಿ ವರುಣ ಯಜ್ಞದಲ್ಲಿ ಹೋತೃವಾದ ಬ್ರಹ್ಮನಿಂದ ಜನಿಸಿದ ಪ್ರಜಾಸೃಷ್ಟಿಯನ್ನು ಹೇಳುವೆನು.

೧೦೮. ಈ ಮನ್ವಂತರದಲ್ಲಿ ಮೊದಲು ಜನಿಸಿದ ತನ್ನ ಮಾನಸಪುತ್ರರಾದ ಏಳುಜನ ಬ್ರಹ್ಮರ್ಷಿಗಳನ್ನು ಬ್ರಹ್ಮನು ಪುತ್ರೋತ್ಪಾನವನ್ನು ಮಾಡಿರಿ ಎಂದು ನಿಯಮಿಸಿದನು.

೧೦೯. ಆಮೇಲೆ ದೇವತೆಗಳಿಗೂ ದಾನವರಿಗೂ ವೈರವು ಬೆಳೆಯಿತು. ದೇವತೆಗಳು ದಾನವರನ್ನು ಸಂಹಾರಮಾಡಿದರು. ಹೀಗೆ ಪುತ್ರರನ್ನು ಕಳೆದುಕೊಂಡ ದಿತೀದೇವಿಯು ತಿರುಗಿ ಮಕ್ಕಳನ್ನು ಪಡೆಯಲು ಪತಿಯಾದ ಕಶ್ಯಪಬ್ರಹ್ಮನನ್ನು ಪ್ರಸನ್ನಗೊಳಿಸಿದಳು.

೧೧೦–೧೧೧. ಹೀಗೆ ದಿತಿಯಿಂದ ಆರಾಧಿಸಲ್ಪಟ್ಟು ಪ್ರಸನ್ನನಾದ ಕಶ್ಯಪನು

shrinath.udupa@gmail.com

ವರೇಣ ಛಂದಯಾಮಾಸ ಸಾ ಚ ವವ್ರೇ ವರಂ ತದಾ ।
ಪುತ್ರಮಿಂದ್ರವಧಾರ್ಥಾಯ ಸಮರ್ಥಮಮಿತೌಜಸಂ ॥ ೧೧೧ ॥

ಸ ಚ ತಸ್ಮೈ ವರಂ ಪ್ರಾದಾತ್ ಪ್ರಾರ್ಥಿತಃ ಸುಮಹಾತಪಾಃ ।
ದತ್ವಾ ಚ ವರಮುತ್ಯುಗ್ರೋ ಮಾರೀಚಸ್ತಮಭಾಷತ ॥ ೧೧೨ ॥

ಇಂದ್ರಂ ಪುತ್ರೋ ನಿಹಂತಾ ತೇ ಗರ್ಭಂ ವೈ ಶರದಾಂ ಶತಂ ।
ಯದಿ ಧಾರಯಸೇ ಶೌಚತತ್ಪರಾ ವ್ರತಮಾಸ್ಥಿತಾ ॥ ೧೧೩ ॥

ತಥೇತ್ಯಭಿಹಿತೋ ಭರ್ತಾ ತಯಾ ದೇವ್ಯಾ ಮಹಾತಪಾಃ ।
ಧಾರಯಾಮಾಸ ಗರ್ಭಂ ತು ಶುಚಿಃ ಸಾ ಮುನಿಸತ್ತಮಾಃ ॥ ೧೧೪ ॥

ತತೋಽಭ್ಯುಪಾಗಮುದ್ದಿಶ್ಯಾಂ ಗರ್ಭಮಾಧಾಯ ಕಶ್ಯಪಃ ।
ರೋಧಯರ್ಥ ವೈ ಗಣಂ ಶ್ರೇಷ್ಠಂ ದೇವಾನಾಮಮಿತೌಜಸಂ ॥ ೧೧೫ ॥

ಅವಳಿಗೆ ಬೇಕಾದ ವರವನ್ನು ನೀಡಿದನು. ಆ ದಿತಿಯು ಇಂದ್ರನನ್ನು ಕೊಲ್ಲಲು ಸಮರ್ಥನಾದ ಪುತ್ರನನ್ನು ಅನುಗ್ರಹಿಸಬೇಕೆಂದು ವರವನ್ನು ಬೇಡಿದಳು.

೧೧೨. ಮಹಾತಪಸ್ವಿಯಾದ ಕಶ್ಯಪನು ದಿತೀದೇವಿಗೆ ಆ ವರವನ್ನು ನೀಡಿ ಆಮೇಲೆ ಅವಳನ್ನು ಕುರಿತು,

೧೧೩. ಎಲೌ ದೇವಿ, ನೀನು ಪರಿಶುದ್ಧಳಾಗಿದ್ದು ನಿಯಮದಿಂದ ನೂರು ವರ್ಷಗಳವರೆಗೆ ಆ ಗರ್ಭವನ್ನು ಧರಿಸಿದರೆ ನಿನಗೆ ಇಂದ್ರನನ್ನು ಕೊಲ್ಲುವಂತಹ ಪುತ್ರನು ಜನಿಸುವನು ಎಂದನು.

೧೧೪. ದಿತಿಯು ಹಾಗೆಯೇ ಆಗಲಿ ಎಂದು ಒಪ್ಪಿಕೊಂಡು ನಿಯಮದಿಂದಲೂ ಶುದ್ಧತೆಯಿಂದಲೂ ಇದ್ದು ಗರ್ಭವನ್ನು ಧರಿಸಿದಳು.

೧೧೫–೧೧೬. ಆಗ ಕಶ್ಯಪನು ದೇವತೆಗಳೆಲ್ಲರ ಸಹಿಸಲಸಾಧ್ಯವಾದಂತ ತೇಜಸ್ಸನ್ನು ತೆಗೆದು ದಿತೀದೇವಿಯ ಗರ್ಭದಲ್ಲಿರಿಸಿ ತಾನು ತಪಸ್ಸಿಗಾಗಿ ಪರ್ವತದೆಡೆಗೆ

shrinath.udupa@gmail.com

ತೇಜಃ ಸಂಹೃತ್ಯ ದುರ್ಧರ್ಷಮವಧ್ಯಮಮರೈರಪಿ ।
ಜಗಾಮ ಪರ್ವತಾಯೈವ ತಪಸೇ ಸಂಶಿತವ್ರತಾಃ ॥ ೧೧೬ ॥

ತಸ್ಯಾಶ್ಚೈವಾಂತರಪ್ರೇಪ್ಸುರಭವತ್ಪಾಕಶಾಸನಃ ।
ಜಾತೇ ವರ್ಷಶತೇ ಚಾಸ್ಯಾ ದದರ್ಶಾಂತರಮಚ್ಯುತಃ ॥ ೧೧೭ ॥

ಅಕೃತ್ವಾ ಪಾದಯೋಃ ಶೌಚಂ ದಿತಿಃ ಶಯನಮಾವಿಶತ್ ।
ನಿದ್ರಾಂ ಚಾಹಾರಯಾಮಾಸ ತಸ್ಯಾಂ ಕುಕ್ಷಿಂ ಪ್ರವಿಶ್ಯ ಸಃ ॥ ೧೧೮ ॥

ವಜ್ರಪಾಣಿಸ್ತತೋ ಗರ್ಭಂ ಸಪ್ತಧಾ ತಂ ನ್ಯಕೃಂತಯತ್ ।
ಸ ಪಾಟ್ಯಮಾನೋ ಗರ್ಭೋಽಥ ವಜ್ರೇಣ ಪ್ರರುರೋದ ಹ ॥ ೧೧೯ ॥

ಮಾ ರೋದೀರಿತಿ ತಂ ಶಕ್ರಃ ಪುನಃ ಪುನರಥಾಬ್ರವೀತ್ ।
ಸೋಽಭವತ್ಸಪ್ತಧಾ ಗರ್ಭಸ್ತಮಿಂದ್ರೋ ರುಷಿತಃ ಪುನಃ ॥ ೧೨೦ ॥

ನಡೆದನು. ಆ ತೇಜಸ್ಸು ದೇವತೆಗಳಿಗೂ ಅವಧ್ಯ [ಕೊಲ್ಲಲಸಾಧ್ಯ] ವಾದುದಾಗಿ ಬೆಳೆಯತೊಡಗಿತು.

೧೧೭. ಆಗ ದೇವೇಂದ್ರನು ದಿತಿಯ ಆ ಗರ್ಭವನ್ನು ನಾಶಮಾಡಲು ಅನುಕೂಲವಾದ ಸಮಯವನ್ನು ನಿರೀಕ್ಷಿಸುತ್ತಿದ್ದನು. ಹೀಗಿರಲು ನೂರುವರ್ಷಗಳು ಕಳೆಯಲು ಅನುಕೂಲವಾದ ಸಮಯವು ಒದಗಿತು.

೧೧೮. ಒಂದು ದಿವಸ ದಿತಿಯು ಕಾಲನ್ನು ತೊಳೆಯದೆ ಹಾಸಿಗೆಯಲ್ಲಿ ಮಲಗಿ ನಿದ್ರಿಸಿದಳು. ಆಗ ಇಂದ್ರನು ಅವಳ ಉದರ [ಹೊಟ್ಟೆ] ವನ್ನು ಪ್ರವೇಶಿಸಿ ಗರ್ಭವನ್ನು ಏಳು ಭಾಗವಾಗಿ ಕತ್ತರಿಸಿದನು.

೧೧೯. ಹೀಗೆ ಇಂದ್ರನು ಕತ್ತರಿಸತೊಡಗಲು ಆ ಗರ್ಭವು ರೋದಿಸ (ಅಳ) ತೊಡಗಿತು. ಆಗ ಇಂದ್ರನು [ಮಾರೋದೀಃ ಎಂದರೆ] ಅಳಬೇಡ ಎಂದು ಹೇಳಿದರೂ ಅಳುತ್ತಲೇಇದ್ದುದರಿಂದ

೧೨೦. ಇಂದ್ರನು ಕೋಪದಿಂದ ಪುನಃ ಆ ಏಳುಭಾಗಗಳಲ್ಲಿ ಪ್ರಯೊಂದನ್ನೂ ಮತ್ತೆ ಏಳೇಳುಭಾಗಗಳಾಗಿ ಕತ್ತರಿಸಿದನು.

shrinath.udupa@gmail.com

ಏಕೈಕಂ ಸಪ್ತಧಾ ಚಕ್ರೇ ವಜ್ರೇಣೈವಾರಿಕರ್ಷಣಃ ।
ಮಾರುತೋ ನಾಮ ತೇ ದೇವಾ ಬಭೂವುರ್ದ್ವಿಜಸತ್ತಮಾಃ ॥ ೧೨೧ ॥

ಯಥೋಕ್ತಂ ವೈ ಮಘವತಾ ತಥೈವ ಮರುತೋಽಭವನ್ ।
ದೇವಾಶ್ಚೈಕೋನಪಂಚಾಶತ್ಸಹಾಯಾ ವಜ್ರಪಾಣಿನಃ ॥ ೧೨೨ ॥

ತೇಷಾಮೇವಂ ಪ್ರವೃತ್ತಾನಾಂ ಭೂತಾನಾಂ ದ್ವಿಜಸತ್ತಮಾಃ ।
ರೋಚಯನ್ ವೈ ಗಣಶ್ರೇಷ್ಠಾನ್ ದೇವಾನಾಮಮಿತೌಜಸಾಂ ॥ ೧೨೩ ॥

ನಿಕಾಯೇಷು ನಿಕಾಯೇಷು ಹರಿಃ ಪ್ರಾದಾತ್ ಪ್ರಜಾಪತೀನ್ ।
ಕ್ರಮಶಸ್ತಾನಿ ರಾಜ್ಯಾನಿ ಪೃಥುಪೂರ್ವಾಣಿ ಭೋ ದ್ವಿಜಾಃ ॥ ೧೨೪ ॥

ಸ ಹರಿಃ ಪುರುಷೋ ವೀರಃ ಕೃಷ್ಣೋ ಜಿಷ್ಣುಃ ಪ್ರಜಾಪತಿಃ ।
ಪರ್ಜನ್ಯಸ್ತಪನೋಽನಂತಸ್ತಸ್ಯ ಸರ್ವಮಿದಂ ಜಗತ್ ॥ ೧೨೫ ॥

---

೧೨೧. ರೋದಿಸುತ್ತಿರುವಾಗ ಮಾ ರುದಃ [ಅಳಬೇಡಿರಿ] ಎಂದು ಹೇಳಿದುದರಿಂದ ಆ ಏಳು ಗರ್ಭಗಳಿಗೂ "ಮಾರುತರು" [ಗಾಳಿಗಳು] ಎಂದು ಹೆಸರಾಯಿತು. ಅವರು ದೇವತೆಗಳಲ್ಲಿ ಸೇರಿಕೊಂಡರು.

೧೨೨. ಈ ನಲವತ್ತೊಂಭತ್ತು (೪೯) ಮರುತರೂ ಇಂದ್ರನಿಗೆ ಸಹಾಯಕರಾಗಿರುವರು.

೧೨೩. ಎಲೈ ಬ್ರಾಹ್ಮಣೋತ್ತಮರೇ, ಹೀಗೆ ಜನಿಸಿರುವ ಪ್ರಜೆಗಳು ಮತ್ತು ದೇವತೆಗಳು ಇವರೆಲ್ಲರಿಗೂ ಒಂದೊಂದು ಗಣ [ಗುಂಪು] ವನ್ನು ಮಾಡಿ ಹರಿಯು ಒಂದೊಂದು ಗಣಕ್ಕೆ ಒಬ್ಬೊಬ್ಬ ಬ್ರಹ್ಮನನ್ನು ನಿಯಮಿಸಿದನು.

೧೨೪. ಮುಂದೆ ಆ ಪ್ರಜೆಗಳು ರಾಜ್ಯಗಳನ್ನು ಕಟ್ಟಿಕೊಂಡು ಆಳತೊಡಗಿದರು. ಅವರಲ್ಲಿ ಮನು, ಪೃಥುಚಕ್ರವರ್ತಿ ಇವರು ಮುಖ್ಯರಾದವರು.

೧೨೫. ಆ ಹರಿಯು ಪುರುಷೋತ್ತಮನು. ವೀರನು. ಭಕ್ತಪ್ರಿಯನು. ಜಯಶೀಲನು, ಸೃಷ್ಟಿಕರ್ತನು. ಮಳೆ ಸೂರ್ಯ ಚಂದ್ರಸ್ವರೂಪನು. ಕೊನೆಯಲ್ಲಿ ಈ ಜಗತ್ತನ್ನೆಲ್ಲವನ್ನೂ ವ್ಯಾಪಿಸಿರುವನು.

shrinath.udupa@gmail.com

ಭೂತಸರ್ಗಮಿಮಂ ಸಮ್ಯಗ್ಜ್ಞಾನತೋ ದ್ವಿಜಸತ್ತಮಾಃ ।
ನಾಽಽವೃತ್ತಿಭಯಮಸ್ತೀಹ ಪರಲೋಕಭಯಂ ಕುತಃ ॥ ೧೨೬ ॥

ಇತಿ ಶ್ರೀಮಹಾಪುರಾಣೇ ಬ್ರಾಹ್ಮೇ ದೇವಾಸುರಾಣಾಮುತ್ಪತ್ತಿ
ಕಥನಂ ನಾಮ ತೃತೀಯೋಽಧ್ಯಾಯಃ

---

೧೨೬. ಎಲೈ ಬ್ರಾಹ್ಮಣೋತ್ತಮರೇ, ಈ ಸೃಷ್ಟಿಕ್ರಮವನ್ನು ಯಾರು ಕೇಳುವರೋ ಅವರು ಉತ್ತಮಗತಿಯನ್ನು ಹೊಂದುವರು. ತಿರುಗಿ ಅವರು ಈ ದುಃಖಮಯವಾದ ಈ ಜಗತ್ತಿನಲ್ಲಿ ಜನ್ಮವೆತ್ತುವುದಿಲ್ಲ.

ಇಲ್ಲಿಗೆ ಶ್ರೀ ಬ್ರಹ್ಮಮಹಾಪುರಾಣದಲ್ಲಿ ದೇವಾಸುರರ ಉತ್ಪತ್ತಿಕಥನವೆಂಬ
ಮೂರನೆಯ ಅಧ್ಯಾಯವು ಮುಗಿದುದು.

shrinath.udupa@gmail.com

॥ ಶ್ರೀಃ ॥

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಚತುರ್ಥೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ಅಭಿಷಿಚ್ಯಾಧಿರಾಜೇಂದ್ರಂ ಪೃಥುಂ ವೈನ್ಯಂ ಪಿತಾಮಹಃ ।
ತತಃ ಕ್ರಮೇಣ ರಾಜ್ಯಾನಿ ವ್ಯಪದೇಷ್ಟುಂ ಪ್ರಚಕ್ರಮೇ ॥ ೧ ॥

ದ್ವಿಜಾನಾಂ ವೀರುಧಾಂ ಚೈವ ನಕ್ಷತ್ರಗ್ರಹಯೋಸ್ತಥಾ ।
ಯಜ್ಞಾನಾಂ ತಪಸಾಂ ಚೈವ ಸೋಮಂ ರಾಜ್ಯೇಽಭ್ಯಷೇಚಯತ್ ॥ ೨ ॥

ನಾಲ್ಕನೆಯ ಅಧ್ಯಾಯ.

೧. ಲೋಮಹರ್ಷಣನು ಹೇಳಿದನು–ಎಲೈ ಬ್ರಾಹ್ಮಣೋತ್ತಮರೆ, ಬ್ರಹ್ಮನು ಮೊದಲು ವೇನನ ಮಗನಾದ ಪೃಥುವನ್ನು ಚಕ್ರವರ್ತಿಯಾಗಿ ಈ ಭೂಲೋಕವ ರಾಜ್ಯದಲ್ಲಿ ಅಭಿಷೇಕಮಾಡಿ ಆಮೇಲೆ ಕ್ರಮವಾಗಿ ಮಿಕ್ಕರಾಜರನ್ನು ಕಲ್ಪಿಸಿದನು.

೨. ಬ್ರಾಹ್ಮಣರು, ಲತೆಗಳು, ನಕ್ಷತ್ರಗಳು, ಗ್ರಹಗಳು, ಯಜ್ಞ, ತಪಸ್ಸುಗಳು ಇವುಗಳೆಲ್ಲಕ್ಕೂ ಚಂದ್ರನನ್ನು ರಾಜನನ್ನಾಗಿ ಮಾಡಿದನು.

shrinath.udupa@gmail.com

ಅಪಾಂ ತು ವರುಣಂ ರಾಜ್ಯೇ ರಾಜ್ಞಾಂ ವೈಶ್ರವಣಂ ಪತಿಂ ।
ಆದಿತ್ಯಾನಾಂ ತಥಾ ವಿಷ್ಣುಂ ವಸೂನಾಮಥ ಪಾವಕಂ ॥ ೩ ॥

ಪ್ರಜಾಪತೀನಾಂ ದಕ್ಷಂ ತು ಮರುತಾಮಥ ವಾಸವಂ ।
ದೈತ್ಯಾನಾಂ ದಾನವಾನಾಂ ಚ ಪ್ರಹ್ಲಾದಮಮಿತೌಜಸಂ ॥ ೪ ॥

ವೈವಸ್ವತಂ ಪಿತೃಣಾಂ ಚ ಯಮಂ ರಾಜ್ಯೇಽಭ್ಯಷೇಚಯತ್ ।
ಯಕ್ಷಾಣಾಂ ರಾಕ್ಷಸಾನಾಂ ಚ ಪಾರ್ಥಿವಾನಾಂ ತಥೈವ ಚ ॥ ೫ ॥

ಸರ್ವಭೂತಪಿಶಾಚಾನಾಂ ಗಿರಿಶಂ ಶೂಲಪಾಣಿನಂ ।
ಶೈಲಾನಾಂ ಹಿಮವಂತಂ ಚ ನದೀನಾಮಥ ಸಾಗರಂ ॥ ೬ ॥

ವಾರಣಾನಾಂ ತು ರಾಜಾನಮೈರಾವತಮಥಾದಿಶತ್ ।
ಉಚ್ಚೈಃಶ್ರವಸಮಶ್ವಾನಾಂ ಗರುಡಂ ಚೈವ ಪಕ್ಷಿಣಾಂ ॥ ೭ ॥

ಗಂಧರ್ವಾಣಾಮಧಿಪತಿಂ ಚಕ್ರೇ ಚಿತ್ರರಥಂ ಪ್ರಭುಂ ।
ನಾಗಾನಾಂ ವಾಸುಕಿಂ ಚಕ್ರೇ ಸರ್ಪಾಣಾಮಥ ತಕ್ಷಕಂ ॥ ೮ ॥

---

೩. ಜಲಗಳಿಗೆ ವರುಣನನ್ನೂ, ರಾಜರಿಗೆ ಕುಬೇರನನ್ನೂ ರಾಜರನ್ನಾಗಿ ಮಾಡಿದನು. ಆದಿತ್ಯರಿಗೆ ವಿಷ್ಣುವನ್ನೂ, ವಸುಗಳಿಗೆ ಅಗ್ನಿಯನ್ನೂ ಅಧಿಪತಿಗಳನ್ನಾಗಿ ಮಾಡಿದನು.

೪. ಬ್ರಹ್ಮರಿಗೆ ದಕ್ಷನನ್ನೂ, ದೇವತೆಗಳಿಗೆ ಇಂದ್ರನನ್ನೂ, ದೈತ್ಯದಾನವರಿಗೆ ಪ್ರಹ್ಲಾದನನ್ನೂ ಅಧಿಪತಿಗಳನ್ನಾಗಿ ಮಾಡಿದನು.

೫. ಯಮನನ್ನು ಪಿತೃಗಳಿಗೆ ರಾಜನನ್ನಾಗಿ ಮಾಡಿದನು. ಯಕ್ಷರು, ರಾಕ್ಷಸರು, ಮನುಷ್ಯರು, ಭೂತಗಳು, ಪಿಶಾಚಗಳು ಇವರೆಲ್ಲರಿಗೂ ಶೂಲಧರನಾದ ರುದ್ರನನ್ನು ಅಧಿಪತಿಯನ್ನಾಗಿ ಮಾಡಿದನು.

೬–೭. ಪರ್ವತಗಳಿಗೆ ಹಿಮವಂತನನ್ನೂ, ನದಿಗಳಿಗೆ ಸಮುದ್ರವನ್ನೂ ರಾಜರನ್ನಾಗಿ ಮಾಡಿದನು. ಕುದುರೆಗಳಿಗೆ ಉಚ್ಚೈಃಶ್ರವಸ್ಸನ್ನೂ, ಆನೆಗಳಿಗೆ ಐರಾವತವನ್ನೂ, ಪಕ್ಷಿಗಳಿಗೆ ಗರುಡನನ್ನೂ ರಾಜನನ್ನಾಗಿ ಮಾಡಿದನು.

೮. ಗಂಧರ್ವರಿಗೆ ಚಿತ್ರರಥನನ್ನು ರಾಜನನ್ನಾಗಿ ಮಾಡಿದನು. ನಾಗಗಳಿಗೆ ವಾಸುಕಿಯನ್ನೂ, ಸರ್ಪಗಳಿಗೆ ತಕ್ಷಕನನ್ನೂ ರಾಜರನ್ನಾಗಿ ಮಾಡಿದನು.

shrinath.udupa@gmail.com

ಮೃಗಾಣಾಮಥ ಶಾರ್ದೂಲಂ ಗೋವೃಷಂ ತು ಗವಾಂ ಪತಿಂ ।
ವನಸ್ಪತೀನಾಂ ರಾಜಾನಂ ಪ್ಲಕ್ಷಮೇವಾಭ್ಯಷೇಚಯತ್ ॥ ೯ ॥

ಏವಂ ವಿಭಜ್ಯ ರಾಜ್ಯಾನಿ ಕ್ರಮೇಣೈವ ಪಿತಾಮಹಃ ।
ದಿಶಾಂ ಪಾಲಾನಥ ತತಃ ಸ್ಥಾಪಯಾಮಾಸ ಸ ಪ್ರಭುಃ ॥ ೧೦ ॥

ಪೂರ್ವಸ್ಯಾಂ ದಿಶಿ ಪುತ್ರಂ ತು ವೈರಾಜಸ್ಯ ಪ್ರಜಾಪತೇಃ ।
ದಿಶಃ ಪಾಲಂ ಸುಧನ್ವಾನಂ ರಾಜಾನಂ ಸೋಽಭ್ಯಷೇಚಯತ್ ॥ ೧೧ ॥

ದಕ್ಷಿಣಸ್ಯಾಂ ದಿಶಿ ತಥಾ ಕರ್ದಮಸ್ಯ ಪ್ರಜಾಪತೇಃ ।
ಪುತ್ರಂ ಶಂಖಪದಂ ನಾಮ ರಾಜಾನಂ ಸೋಽಭ್ಯಷೇಚಯತ್ ॥ ೧೨ ॥

ಪಶ್ಚಿಮಸ್ಯಾಂ ದಿಶಿ ತಥಾ ರಜಸಃ ಪುತ್ರಮಚ್ಯುತಂ ।
ಕೇತುಮಂತಂ ಮಹಾತ್ಮಾನಂ ರಾಜಾನಂ ಸೋಽಭ್ಯಷೇಚಯತ್ ॥ ೧೩ ॥

---

೯. ಮೃಗಗಳಿಗೆ ಸಿಂಹವನ್ನು (ಹುಲಿ)ರಾಜನನ್ನಾಗಿ ಮಾಡಿದನು. ಹಸು ಮತ್ತು ಎತ್ತುಗಳಿಗೆ ಬೀಜದ ಹೋರಿಯನ್ನು ರಾಜನನ್ನಾಗಿ ಮಾಡಿದನು. ವನಸ್ಪತಿಗಳಿಗೆ ವಟವೃಕ್ಷವನ್ನು ರಾಜನನ್ನಾಗಿ ಮಾಡಿದನು.

೧೦. ಬ್ರಹ್ಮನು ಹೀಗೆ ರಾಜ್ಯಗಳನ್ನು ವಿಭಾಗಮಾಡಿ ಆಮೇಲೆ ದಿಕ್ಪಾಲಕರನ್ನು ಮುಂದೆ ಹೇಳುವಂತೆ ಸ್ಥಾಪಿಸಿದನು.

೧೧. ವೈರಾಜಬ್ರಹ್ಮನ ಮಗನಾದ ಸುಧನ್ವನನ್ನು ಪೂರ್ವದಿಕ್ಕಿಗೊಡೆಯನನ್ನಾಗಿ ಪಿತಾಮಹನು ನಿಯಮಿಸಿದನು.

೧೨. ಕರ್ದಮಪ್ರಜಾಪತಿಯ ಮಗನಾದ ಶಂಖಪದನೆಂಬುವವನ್ನು ದಕ್ಷಿಣ ದಿಕ್ಕಿಗೆ ರಾಜನನ್ನಾಗಿ ಮಾಡಿದನು.

೧೩. ರಜಸ್ಸೆಂಬ ಬ್ರಹ್ಮನ ಮಗನಾದ ಕೇತುಮಂತನೆಂಬ ಮಹಾತ್ಮನನ್ನು ಪಶ್ಚಿಮದಿಕ್ಕಿಗೆ ಒಡೆಯನನ್ನಾಗಿ ಮಾಡಿದನು.

shrinath.udupa@gmail.com

ತಥಾ ಹಿರಣ್ಯರೋಮಾಣಂ ಪರ್ಜನ್ಯಸ್ಯ ಪ್ರಜಾಪತೇಃ ।
ಉದೀಚ್ಯಾಂ ದಿಶಿ ದುರ್ಧರ್ಷಂ ರಾಜಾನಂ ಸೋಽಭ್ಯಷೇಚಯತ್ ॥ ೧೪ ॥

ತೈರಿಯಂ ಪೃಥಿವೀ ಸರ್ವಾ ಸಸ್ತದ್ವೀಪಾ ಸಪತ್ತನಾ ।
ಯಥಾಪ್ರದೇಶಮದ್ಯಾಪಿ ಧರ್ಮೇಣ ಪ್ರತಿಪಾಲ್ಯತೇ ॥ ೧೫ ॥

ರಾಜಸೂಯಾಭಿಷಿಕ್ತಸ್ತು ಪೃಥುರೇತೈರ್ನರಾಧಿಪೈಃ ।
ವೇದದೃಷ್ಟೇನ ವಿಧಿನಾ ರಾಜಾ ರಾಜ್ಯೇ ನರಾಧಿಪಃ ॥ ೧೬ ॥

ತತೋ ಮನ್ವಂತರೇಽತೀತೇ ಚಾಕ್ಷುಷೇಽಮಿತತೇಜಸಿ ।
ವೈವಸ್ವತಾಯ ಮನವೇ ಪೃಥಿವ್ಯಾಂ ರಾಜ್ಯಮಾದಿಶತ್ ॥ ೧೭ ॥

ತಸ್ಯ ವಿಸ್ತಾರಮಾಖ್ಯಾಸ್ಯೇ ಮನೋರ್ವೈವಸ್ವತಸ್ಯ ಹಿ ।
ಭವತಾಂ ಚಾನುಕೂಲ್ಯಾಯ ಯದಿ ಶ್ರೋತುಮಿಹೇಚ್ಛಥ ।
ಮಹದೇತದಧಿಷ್ಠಾನಂ ಪುರಾಣೇ ತದಧಿಷ್ಠಿತಂ ॥ ೧೮ ॥

---

೧೪. ಪರ್ಜನ್ಯನೆಂಬ ಬ್ರಹ್ಮನ ಮಗನೂ ಮಹಾಪರಾಕ್ರಮಿಯೂ ಆದ ಹಿರಣ್ಯರೋಮನನ್ನು ಉತ್ತರದಿಕ್ಕಿಗೊಡೆಯನನ್ನಾಗಿ ಮಾಡಿದನು.

೧೫. ಹೀಗೆ ಬ್ರಹ್ಮನಿಂದ ನಿಯಮಿಸಲ್ಪಟ್ಟ ಈ ರಾಜರು, ಏಳು ದ್ವೀಪಗಳು ಮತ್ತೂ ಅನೇಕ ಪಟ್ಟಣಗಳು ಇವುಗಳನ್ನೊಳಗೊಂಡ ಈ ಭೂಮಿಯಲ್ಲಿ ತಮ್ಮ ತಮ್ಮ ಪ್ರದೇಶಗಳಲ್ಲಿ ಧರ್ಮದಿಂದ ಪರಿಪಾಲನೆಮಾಡುತ್ತಲಿರುವರು.

೧೬. ಪೃಥುಚಕ್ರವರ್ತಿಯು ಈ ಎಲ್ಲ ರಾಜರ ಸಹಾಯದಿಂದ ರಾಜ್ಯವನ್ನಾಳುತ್ತಾ, ಶ್ರೌತವಿಧಿಯಂತೆ ರಾಜಸೂಯಯಾಗವನ್ನು ಮಾಡಿದನು.

೧೭. ಅನಂತರ ಈ ಚಾಕ್ಷುಷಮನ್ವಂತರವು ಕಳೆದು ವೈವಸ್ವತಮನ್ವಂತರವು ಬರಲು, ಸೂರ್ಯನ ಮಗನಾದ ಮನುವಿಗೆ ಭುವನ ರಾಜ್ಯವನ್ನು ಬ್ರಹ್ಮನು ಕೊಟ್ಟನು.

೧೮. ಆ ವೈವಸ್ವತಮನುವಿನ ವಿಸ್ತಾರವಾದ ಚರಿತೆಯನ್ನು ಹೇಳುವೆನು. ನಿಮಗೆ ಕೇಳಲು ಇಚ್ಛೆಯಿದ್ದರೆ ಹೇಳುವೆನು, ಅದನ್ನು ತಿಳಿದರೆ ನಿಮಗೆ ತುಂಬ ಅನುಕೂಲವುಂಟು. ವೈವಸ್ವತಮನುವಿನ ಚರಿತ್ರೆಯು ಮಿಕ್ಕ ಪುರಾಣಗಳಲ್ಲಿ ಮಹತ್ವದಿಂದ ಕೂಡಿರುವುದು.

shrinath.udupa@gmail.com

॥ ಮುನಯ ಊಚುಃ ॥

ವಿಸ್ತರೇಣ ಪೃಥೋರ್ಜನ್ಮ ಲೋಮಹರ್ಷಣ ಕೀರ್ತಯ
ಯಥಾ ಮಹಾತ್ಮನಾ ತೇನ ದುಗ್ಧಾವೇಯಂ ವಸುಂಧರಾ ॥ ೧೯ ॥

ಯಥಾ ವಾಪಿ ನೃಭಿರ್ದುಗ್ಧಾ ಯಥಾ ದೇವೈರ್ಮಹರ್ಷಿಭಿಃ ।
ಯಥಾ ದೈತ್ಯೈಶ್ಚ ನಾಗೈಶ್ಚ ಯಥಾ ಯಕ್ಷೈರ್ಯಥಾ ದ್ರುಮೈಃ ॥ ೨೦ ॥

ಯಥಾ ಶೈಲೈಃ ಪಿಶಾಚೈಶ್ಚ ಗಂಧರ್ವೈಶ್ಚ ದ್ವಿಜೋತ್ತಮೈಃ ।
ರಾಕ್ಷಸೈಶ್ಚ ಮಹಾಸತ್ತ್ವೈರ್ಯಥಾ ದುಗ್ಧಾ ವಸುಂಧರಾ ॥ ೨೧ ॥

ತೇಷಾಂ ಪಾತ್ರವಿಶೇಷಾಂಶ್ಚ ವಕ್ತುಮರ್ಹಸಿ ಸುವ್ರತ ।
ವತ್ಸಕ್ಷೀರವಿಶೇಷಾಂಶ್ಚ ದೋಗ್ಧಾರಂ ಚಾನುಪೂರ್ವಶಃ ॥ ೨೨ ॥

ಯಸ್ಮಾಚ್ಚ ಕಾರಣಾತ್ಪಾಣಿರ್ವೇನಸ್ಯ ಮಥಿತಃ ಪುರಾ ।
ಕ್ರುದ್ಧೈರ್ಮಹರ್ಷಿಭಿಸ್ತಾತ ಕಾರಣಂ ತಚ್ಚ ಕೀರ್ತಯ ॥ ೨೩ ॥

---

೧೯. ಮುನಿಗಳು ಕೇಳುವರು—ಓ ಲೋಮಹರ್ಷಣಮುನಿ, ಭೂಮಿಯನ್ನೇ ಹಸುವನ್ನು ಕರೆದಂತೆ ಕರೆದ ಪೃಥುಚಕ್ರವರ್ತಿಯ ಚರಿತ್ರೆಯೇನು?

೨೦–೨೧. ಮನುಷ್ಯರು, ದೇವತೆಗಳು, ಮರಗಳು, ಮಹರ್ಷಿಗಳು, ದೈತ್ಯರು ನಾಗಗಳು, ಯಕ್ಷರು, ಪರ್ವತಗಳು, ಪಿಶಾಚಗಳು. ಗಂಧರ್ವರು, ಬ್ರಾಹ್ಮಣರು, ರಾಕ್ಷಸರು ಇವರೆಲ್ಲರೂ ಹಸುರೂಪವನ್ನು ಧರಿಸಿದ ಭೂಮಿಯನ್ನು ಕರೆದರಷ್ಟೆ. ಇವರೆಲ್ಲರೂ ಹೇಗೆ ಕರೆದರು ?

೨೨. ಇವರು ಕರೆದ ವಸ್ತುಗಳಾಗುವುವು? ಯಾವ ಯಾವ ಪಾತ್ರೆಗಳಲ್ಲಿ ಕರೆದರು? ಕರೆಯುವುದಕ್ಕೆ ಸಹಾಯವಾಗಿ ಕರುಗಳು ಯಾರು ಯಾರು ಆಗಿದ್ದರು? ಕರೆದವರು ಯಾರು ಯಾರು? ಇದೆಲ್ಲವನ್ನೂ ಹೇಳುವುದಲ್ಲದೆ,

೨೩. ಮಹರ್ಷಿಗಳು ಕೋಪಗೊಂಡು ವೇನರಾಜನ ಕೈಗಳನ್ನು ಮಥಿಸಲು (ಪೀಡಿಸಲು) ಕಾರಣವೇನು? ಇದನ್ನೂ ಹೇಳಬೇಕೆನಲು,

shrinath.udupa@gmail.com

॥ ಲೋಮಹರ್ಷಣ ಉವಾಚ ॥

ಶೃಣುಧ್ವಂ ಕೀರ್ತಯಿಷ್ಯಾಮಿ ಪೃಥೋರ್ವೈನ್ಯಸ್ಯ ವಿಸ್ತರಂ ।
ಏಕಾಗ್ರಾಃ ಪ್ರಯತಾಶ್ಚೈವ ಪುಣ್ಯಾರ್ಥಂ ವೈ ದ್ವಿಜರ್ಷಭಾಃ ॥ ೨೪ ॥

ನಾಶುಚೇಃ ಕ್ಷುದ್ರಮನಸೋ ನಾಶಿಷ್ಯಸ್ಯಾವ್ರತಸ್ಯ ಚ ।
ಕೀರ್ತಯೇಯಮಿದಂ ವಿಪ್ರಾಃ ಕೃತಘ್ನಾಯಾಹಿತಾಯ ಚ ॥ ೨೫ ॥

ಸ್ವರ್ಗ್ಯಂ ಯಶಸ್ಯಮಾಯುಷ್ಯಂ ಧನ್ಯಂ ವೇದೈಶ್ಚ ಸಮ್ಮಿತಂ ।
ರಹಸ್ಯಮೃಷಿಭಿಃ ಪ್ರೋಕ್ತಂ ಶೃಣುಧ್ವಂ ವೈ ಯಥಾತಥಂ ॥ ೨೬ ॥

ಯಶ್ಚೇಮಂ ಕೀರ್ತಯೇನ್ನಿತ್ಯಂ ಪೃಥೋರ್ವೈನ್ಯಸ್ಯ ವಿಸ್ತರಂ ।
ಬ್ರಾಹ್ಮಣೇಭ್ಯೋ ನಮಸ್ಕೃತ್ಯ ನ ಸ ಶೋಚೇತ್ಕೃತಾಕೃತಂ ॥ ೨೭ ॥

ಆಸೀದ್ಧರ್ಮಸ್ಯ ಸಂಗೋಪ್ತಾ ಪೂರ್ವಮತ್ರಿಸಮಃ ಪ್ರಭುಃ ।
ಅತ್ರಿವಂಶೇ ಸಮುತ್ಪನ್ನಸ್ತ್ವಂಗೋ ನಾಮ ಪ್ರಜಾಪತಿಃ ॥ ೨೮ ॥

---

೨೪. ಲೋಮಹರ್ಷಣನಿಂತೆಂದನು:—ಎಲೈ ಬ್ರಾಹ್ಮಣೋತ್ತಮರೇ, ವೇನನ ಮಗನಾದ ಪೃಥುಚಕ್ರವರ್ತಿಯ ಚರಿತ್ರೆಯನ್ನು ಹೇಳುವೆನು. ಸಾವಧಾನತೆಯಿಂದಲೂ ಕೇಳಿರಿ. ಅದರಿಂದ ನಿಮಗೆ ಪುಣ್ಯವುಂಟಾಗುವುದು.

೨೫. ಶೋಬಚನಿಗೂ ಕೆಟ್ಟಮನಸ್ಸುಳ್ಳವನಿಗೂ ಅವಿನೀತನಿಗೂ ಆಚಾರವಿಲ್ಲದವನಿಗೂ ಕೃತಘ್ನನಿಗೂ ಪಾಪಿಗೂ ಈ ಪುಣ್ಯಚರಿತ್ರೆಯನ್ನು ಹೇಳಬಾರದು.

೨೬. ಈ ಚರಿತ್ರೆಯನ್ನು ಕೇಳಿದರೆ ಸ್ವರ್ಗವು ಲಭಿಸುವುದು. ಕೀರ್ತಿಯುಂಟಾಗುವುದು. ಸಂಪತ್ತು ಬರುವುದು. ಇದು ವೇದಗಳಂತೆ ಪವಿತ್ರವಾದುದು. ಎಲೈ ಮುನಿಗಳೇ, ಇಂತಹ ಚರಿತ್ರೆಯನ್ನು ಕೇಳಿರಿ.

೨೭. ಪೃಥುಚಕ್ರವರ್ತಿಯ ಈ ಚರಿತ್ರವನ್ನು ಬ್ರಾಹ್ಮಣರಿಂದ ಕೇಳಿದರೆ ಯಾವತರಹೆಯ ದುಃಖವೂ ಬರುವುದಿಲ್ಲ.

೨೮. ಹಿಂದೆ ಅತ್ರಿಮುನಿಯ (ಚಂದ್ರ) ವಂಶದಲ್ಲಿ ತೇಜಸ್ವಿಯಾದ ಅಂಗರಾಜನೆಂಬ ಅರಸನಿದ್ದನು. ಅವನು ಧರ್ಮದಿಂದ ರಾಜ್ಯವನ್ನಾಳುತ್ತಿದ್ದನು.

shrinath.udupa@gmail.com

ತಸ್ಯ ಪುತ್ರೋಽಭವದ್ವೇನೋ ನಾತ್ಯರ್ಥಂ ಧರ್ಮಕೋವಿದಃ ।
ಜಾತೋ ಮೃತ್ಯುಸುತಾಯಾಂ ವೈ ಸುನೀಥಾಯಾಂ ಪ್ರಜಾಪತಿಃ ॥ ೨೯ ॥

ಸ ಮಾತಾಮಹದೋಷೇಣ ತೇನ ಕಾಲಾತ್ಮಜಾತ್ಮಜಃ ।
ಸ್ವಧರ್ಮಂ ಪೃಷ್ಠತಃ ಕೃತ್ವಾ ಕಾಮಲೋಭೇಷ್ವವರ್ತತ ॥ ೩೦ ॥

ಮರ್ಯಾದಾಂ ಭೇದಯಾಮಾಸ ಧರ್ಮೋಪೇತಾಂ ಸ ಪಾರ್ಥಿವಃ ।
ವೇದಧರ್ಮಾನತಿಕ್ರಮ್ಯ ಸೋಽಧರ್ಮನಿರತೋಽಭವತ್ ॥ ೩೧ ॥

ನಿಃಸ್ವಾಧ್ಯಾಯವಷಟ್ಕಾರಾಃ ಪ್ರಜಾಸ್ತಸ್ಮಿನ್ ಪ್ರಜಾಪತೌ ।
ಪ್ರವೃತ್ತಂ ನ ಪಪುಸ್ಸೋಮಂ ಹುತಂ ಯಜ್ಞೇಷು ದೇವತಾಃ ॥ ೩೨ ॥

ನ ಯಷ್ಟವ್ಯಂ ನ ಹೋತವ್ಯಮಿತಿ ತಸ್ಯ ಪ್ರಜಾಪತೇಃ ।
ಆಸೀತ್ಪ್ರತಿಜ್ಞಾ ಕ್ರೂರೇಯಂ ವಿನಾಶೇ ಪ್ರತ್ಯುಪಸ್ಥಿತೇ ॥ ೩೩ ॥

---

೨೯. ಆ ಅಂಗರಾಜನ ಮಗನೇ ಅಧರ್ಮಿಯಾದ ವೇನನು. ಈ ವೇನನ ತಾಯಿಯು ಮೃತ್ಯುದೇವನ ಮಗಳಾದ ಸುನೀಥಾದೇವಿಯು.

೩೦. ಆ ವೇನನು ಬಾಲ್ಯದಲ್ಲಿ ಮೃತ್ಯುವಿನ ಮನೆಯಲ್ಲಿಯೇ ಬೆಳೆದುದರಿಂದ ಅವನ ದೋಷಗಳೆಲ್ಲವೂ ಈ ವೇನನಿಗೆ ಬಂದವು. ಅವನು ತನ್ನ ಧರ್ಮವನ್ನು ಬಿಟ್ಟು ಕಾಮ [ಸ್ತ್ರೀಸುಖ] ಲೋಭ [ದುರಾಸೆ] ಗಳನ್ನು ಪೂರ್ತಿಮಾಡಿಕೊಳ್ಳುವುದರಲ್ಲಿ ಆಸಕ್ತನಾಗಿದ್ದನು.

೩೧. ಧರ್ಮಮಾರ್ಗವನ್ನೇ ಹಾಳುಮಾಡಿದನು. ವೇದಧರ್ಮಗಳನ್ನು ತಿರಸ್ಕರಿಸಿ ಆ ವೇನರಾಜನು ತನ್ನ ಮನಬಂದಂತೆ ವರ್ತಿಸುತ್ತಿದ್ದನು.

೩೨. ಅವನ ರಾಜ್ಯದಲ್ಲಿ ಪ್ರಜೆಗಳು ವೇದಾಧ್ಯಯನವನ್ನು ಮಾಡಲವಕಾಶವಿರಲಿಲ್ಲ. ದೇವಪೂಜೆ ಯಾಗಗಳು ನಡೆಯುತ್ತಲೇ ಇರಲಿಲ್ಲ.

೩೩-೩೪. ಆಯುಸ್ಸು ತೀರಿದ ಆ ವೇನನು "ನಾನೇ ಯಾಗವು, ಯಾಗಮಾಡುವವನೂ ಮಾಡಿಸುವವನೂ ನಾನೇ. ನನ್ನನ್ನೇ ಕುರಿತು ಯಾಗವನ್ನು ಮಾಡಬೇಕು.

shrinath.udupa@gmail.com

ಅಹಮಿಜ್ಯಶ್ಚ ಯಷ್ಟಾ ಚ ಯಜ್ಞಶ್ಚೇತಿ ಕ್ರತೂದ್ವಹ ।
ಮಯಿ ಯಜ್ಞೋ ವಿಧಾತವ್ಯೋ ಮಯಿ ಹೋತವ್ಯಮಿತ್ಯಪಿ ॥ ೩೪ ॥

ತಮತಿಕ್ರಾಂತಮರ್ಯಾದಮಾದದಾನಮಸಾಂಪ್ರತಂ ।
ಊಚುರ್ಮಹರ್ಷಯಸ್ಸರ್ವೇ ಮರೀಚಿಪ್ರಮುಖಾಸ್ತದಾ ॥ ೩೫ ॥

ವಯಂ ದೀಕ್ಷಾಂ ಪ್ರವೇಕ್ಷ್ಯಾಮಃ ಸಂವತ್ಸರಗಣಾನ್ ಬಹೂನ್ ।
ಅಧರ್ಮಂ ಕುರು ಮಾ ವೇನ ಏಷ ಧರ್ಮಃ ಸನಾತನಃ ॥ ೩೬ ॥

ನಿಧನೇಽತ್ರೇಃ ಪ್ರಸೂತಸ್ತ್ವಂ ಪ್ರಜಾಪತಿರಸಂಶಯಂ ।
ಪ್ರಜಾಶ್ಚ ಪಾಲಯಿಷ್ಯೇಽಹಮಿತೀಹ ಸಮಯಃ ಕೃತಃ ॥ ೩೭ ॥

ತಾಂಸ್ತಥಾ ಬ್ರುವತಃ ಸರ್ವಾನ್ ಮಹರ್ಷೀನಬ್ರವೀತ್ತದಾ ।
ವೇನಃ ಪ್ರಹಸ್ಯ ದುರ್ಬುದ್ಧಿರಿಮಮರ್ಥಮನರ್ಥವಿತ್ ॥ ೩೮ ॥

ಅದು ಬಿಟ್ಟು ಬೇರೆ ದೇವತೆಗಳನ್ನು ಕುರಿತು ಯಾಗಗಳನ್ನೂ ಮಾಡಕೂಡದು. ಹೋಮಗಳನ್ನೂ ಮಾಡಕೂಡದು" ಹೀಗೆಂದು ಆಜ್ಞೆಯನ್ನು ಸಾರಿದ್ದನು.

೩೫. ಹೀಗೆ ಧರ್ಮಮಾರ್ಗವನ್ನು ಮೀರಿ ನಡೆಯುತ್ತಲಿರುವ ಪಾಪಿಷ್ಠನಾದ ವೇನನನ್ನು ಕುರಿತು ಒಂದುದಿನ ಮರೀಚಿಮುನಿ ಮೊದಲಾದ ಮಹರ್ಷಿಗಳು ಹೀಗೆ ಹೇಳಿದರು.

೩೬. ಎಲೈ ವೇನರಾಜನೆ, ನಾವು ಇನ್ನು ಅನೇಕ ವರ್ಷಗಳವರೆಗೆ ಯಜ್ಞದೀಕ್ಷೆಯನ್ನು ವಹಿಸುವೆವು. ಆಗ ನೀನು ಅಧರ್ಮವನ್ನು ಮಾಡಬೇಡ. ಅನಾದಿಯಾದ ವೇದಧರ್ಮವನ್ನು ಹಾಳುಮಾಡಬೇಡ.

೩೭. ನೀನು ಪವಿತ್ರವಾದ ಅತ್ರಿವಂಶದಲ್ಲಿ ಜನಿಸಿರುವೆ. ಸಿಂಹಾಸನವೇರುವಾಗ ನೀನು "ಧರ್ಮದಿಂದ ಪ್ರಜೆಗಗನ್ನು ಪಾಲಿಸುವೆ" ನೆಂದು ಅಭಿವಚನವನ್ನು ಕೊಟ್ಟಿರುವೆ. ಆ ನಿನ್ನ ವಚನವನ್ನು ಮೀರಬೇಡ ಎಂದರು.

೩೮. ಮಹರ್ಷಿಗಳು ಹೇಳಿದ ಆ ಮಾತನ್ನು ಕೇಳಿ ಪಾಪಿಯೂ ದುಷ್ಟನೂ ಆದ ವೇನನು ಹಾಸ್ಯಮಾಡಿ ಇಂತೆಂದರು—

shrinath.udupa@gmail.com

॥ ವೇನ ಉವಾಚ ॥

ಸ್ರಷ್ಟಾ ಧರ್ಮಸ್ಯ ಕಶ್ಚಾನ್ಯಃ ಶ್ರೋತವ್ಯಂ ಕಸ್ಯ ವಾ ಮಯಾ ।
ಶ್ರುತವೀರ್ಯತಪಸ್ಸತ್ಯೈರ್ಮಯಾ ವಾ ಕಃ ಸಮೋ ಭುವಿ ॥ ೩೯ ॥

ಪ್ರಭವಂ ಸರ್ವಭೂತಾನಾಂ ಧರ್ಮಾಣಾಂ ಚ ವಿಶೇಷತಃ ।
ಸಮ್ಮೂಢಾ ನ ವಿದುರ್ನೂನಂ ಭವಂತೋ ಮಾಂ ವಿಚೇತಸಃ ॥ ೪೦ ॥

ಇಚ್ಛನ್ ದಹೇಯಂ ಪೃಥಿವೀಂ ಪ್ಲಾವಯೇಯಂ ಜಲೈಸ್ತಥಾ ।
ದ್ಯಾಂ ವೈ ಭುವಂ ಚ ರುಂಧೇಯಂ ನಾತ್ರ ಕಾರ್ಯಾ ವಿಚಾರಣಾ ॥ ೪೧ ॥

ಯದಾ ನ ಶಕ್ಯತೇ ಮೋಹಾದವಲೇಪಾಚ್ಚ ಪಾರ್ಥಿವಃ ।
ಅಪನೇತುಂ ತದಾ ವೇನಃ ಕ್ರುದ್ಧಾಶ್ಚ ಪರಮರ್ಷಯಃ ॥ ೪೨ ॥

ತಂ ನಿಗೃಹ್ಯ ಮಹಾತ್ಮಾನೋ ವಿಸ್ಫುರಂತಂ ಮಹಾಬಲಂ ।
ತತೋಽಸ್ಯ ಸವ್ಯಮೂರುಂ ತೇ ಮಮಂಥುರ್ಜಾತಮನ್ಯವಃ ॥ ೪೩ ॥

---

೩೯. ಎಲೈ ಮುನಿಗಳೇ, ಧರ್ಮವನ್ನು ನನ್ನ ಹೊರತು ಇನ್ಯಾರು ಸೃಷ್ಟಿಸುವವರು ? ಆದ ಕಾರಣ ನಾನಾರ ಮಾತನ್ನೂ ಕೇಳಬೇಕಾಗಿಲ್ಲ. ಶಾಸ್ತ್ರ ಪರಾಕ್ರಮ ತಪಸ್ಸುಗಳಲ್ಲಿ ನನ್ನ ಸಮಾನರು ಯಾರೂ ಇಲ್ಲ.

೪೦. ನಾನೇ ಪ್ರಾಣಿಗಳನ್ನು ಸೃಷ್ಟಿಸುವವನು. ಧರ್ಮವನ್ನು ನಿರ್ಮಿಸುವವನು. ಮೂಢರಾದ ನೀವು ನನ್ನ ಮಹಿಮೆಯನ್ನು ತಿಳಿದಿಲ್ಲ.

೪೧. ನಾನಿಚ್ಛಿಸಿದ್ದರೆ ಭೂಮಿಯನ್ನು ಭಸ್ಮಮಾಡುವೆನು. ನೀರಿನಿಂದ ಮುಳುಗಿಸಬಲ್ಲೆನು. ಆಕಾಶಪಾತಾಳಗಳನ್ನು ತಡೆದು ನಿಲ್ಲಿಸಬಲ್ಲೆನು. ಇದರಲ್ಲಿ ಸಂಶಯವಿಲ್ಲ ಎಂದು ಅಹಂಕಾರದಿಂದ ನುಡಿದನು.

೪೨. ಹೀಗೆ ವೇನರಾಜನು ಮೂಢತನದಿಂದಲೂ ದುರಹಂಕಾರದಿಂದಲೂ ಋಷಿಗಳ ಮಾತನ್ನು ತಿರಸ್ಕರಿಸಲು ಆಗ ಆ ಮಹರ್ಷಿಗಳು ಕೋಪಕೊಂಡು

೪೩. ಬಲಿಷ್ಠನಾದ ಆ ವೇನನನ್ನು ಹಿಡಿದುಕೊಂಡು ಕೋಪದಿಂದ ಅವನ ತೊಡೆಯನ್ನು ಮಥನಮಾಡಿದರು [ಕಡೆದರು].

shrinath.udupa@gmail.com

ತಸ್ಮಿನ್ನಿಮಥ್ಯಮಾನೇ ವೈ ರಾಜ್ಞ ಊರೌ ತು ಜಜ್ಞಿವಾನ್ ।
ಹ್ರಸ್ವೋಽತಿಮಾತ್ರಃ ಪುರುಷಃ ಕೃಷ್ಣಶ್ಚೇತಿ ಬಭೂವ ಹ ॥ ೪೪ ॥

ಸ ಭೀತಃ ಪ್ರಾಂಜಲಿರ್ಭೂತ್ವಾ ತಸ್ಥಿವಾನ್ ದ್ವಿಜಸತ್ತಮಾಃ ।
ತಮತ್ರಿರ್ವಿಹ್ವಲಂ ದೃಷ್ಟ್ವಾ ನಿಷೀದೇತ್ಯಬ್ರವೀತ್ತದಾ ॥ ೪೫ ॥

ನಿಷಾದವಂಶಕರ್ತಾಸೌ ಬಭೂವ ವದತಾಂ ವರಾಃ ।
ಧೀವರಾನಸೃಜಚ್ಚಾಪಿ ವೇನಕಲ್ಮಷಸಂಭವಾನ್ ॥ ೪೬ ॥

ಯೇ ಚಾನ್ಯೇ ವಿಂಧ್ಯನಿಲಯಾಸ್ತಥಾ ಪರ್ವತಸಂಶ್ರಯಾಃ ।
ಅಧರ್ಮರುಚಯೋ ವಿಪ್ರಾಸ್ತೇ ಸರ್ವೇ ವೇನಕಲ್ಮಷಾಃ ॥ ೪೭ ॥

ತತಃ ಪುನರ್ಮಹಾತ್ಮಾನಃ ಪಾಣಿಂ ವೇನಸ್ಯ ದಕ್ಷಿಣಂ ।
ಅರಣೀಮಿವ ಸಂರಬ್ಧಾ ಮಮಂಥುರ್ಜಾತಮನ್ಯವಃ ॥ ೪೮ ॥

---

೪೪. ಮುನಿಗಳು ವೇನನ ತೊಡೆಯನ್ನು ಕಡೆಯುತ್ತಿರಲು ಅದರಿಂದ ಕುಳ್ಳನಾದ ಪುರುಷನೋರ್ವನು ಜನಿಸಿದನು. ಆ ಪುರುಷನು ಕಪ್ಪುಬಣ್ಣದವನಾಗಿದ್ದನು.

೪೫. ಆ ಪುರುಷನು ಭಯಗೊಂಡು ಕೈಗಳನ್ನು ಜೋಡಿಸಿಕೊಂಡು ನಿಂತನು. ಆಗ ಅವನನ್ನು ನೋಡಿ ಅತ್ರಿಮುನಿಯು ನಿಷೀದ-ಎಂದರೆ, ಕುಳಿತುಕೋ ಎಂದು ಹೇಳಿದನು.

೪೬. ಆ ಪುರುಷನೇ ನಿಷಾದ [ಬೇಡ] ರಿಗೆ ಮೂಲ ಪುರುಷನು. [ಅತ್ರಿಮುನಿಯು "ನಿಷೀದ-ಕುಳಿತುಕೋ" ಎಂದು ಮೊದಲು ಹೇಳಿದುದರಿಂದ ಅವನ ವಂಶದವರಿಗೆ ನಿಷಾದರೆಂಬ ಹೆಸರು ಬಂದಿತು.] ಇವರೆಲ್ಲರೂ ವೇನರಾಜನ ಪಾಪದಿಂದ ಜನಿಸಿದಂತವರು.

೪೭. ಎಲೈ ಬ್ರಾಹ್ಮಣೋತ್ತಮರೇ, ಪಾಪಕರ್ಮಿಗಳಾಗಿದ್ದು ವಿಂಧ್ಯ ಮೊದಲಾದ ಬೆಟ್ಟಗಳಲ್ಲಿ ಬೇಡರ ವೃತ್ತಿಯಲ್ಲಿರುವಂತಹವರೆಲ್ಲರೂ ವೇನರಾಜನ ಪಾಪದಿಂದ ಜನಿಸಿದವರು.

೪೮. ಬಳಿಕ ಆ ಮಹರ್ಷಿಗಳು ವೇನರಾಜನ ಬಲಗೈಯನ್ನು ಅರಣಿ [ಅಗ್ನಿಯನ್ನು ಕರೆಯುವ ಶಮೀಕಟ್ಟಿಗೆ] ಯನ್ನು ಕಡೆಯುವಂತೆ ಕೋಪದಿಂದ ಕಡೆದರು.

shrinath.udupa@gmail.com

ಪೃಥುಸ್ತಸ್ಮಾತ್ಸಮುತ್ಪನ್ನಃ ಕರಾಜ್ಜ್ವಲನಸನ್ನಿಭಃ ।
ದೀಪ್ಯಮಾನಃ ಸ್ವವಪುಷಾ ಸಾಕ್ಷಾದಗ್ನಿರಿವ ಜ್ವಲನ್ ॥ ೪೯ ॥

ಅಥ ಸೋಽಜಗವಂ ನಾಮ ಧನುರ್ಗೃಹ್ಯ ಮಹಾರವಂ ।
ಶರಾಂಶ್ಚ ದಿವ್ಯಾನ್ರಕ್ಷಾರ್ಥಂ ಕವಚಂ ಚ ಮಹಾಪ್ರಭಂ ॥ ೫೦ ॥

ತಸ್ಮಿನ್ ಜಾತೇಽಥ ಭೂತಾನಿ ಸಂಪ್ರಹೃಷ್ಟಾನಿ ಸರ್ವಶಃ ।
ಸಮಾಪೇತುರ್ಮಹಾಭಾಗಾ ವೇನಸ್ತು ತ್ರಿದಿವಂ ಯಯೌ ॥ ೫೧ ॥

ಸಮುತ್ಪನ್ನೇನ ಭೋ ವಿಪ್ರಾಃ ಸತ್ಪುತ್ರೇಣ ಮಹಾತ್ಮನಾ ।
ತ್ರಾತಃ ಸ ಪುರುಷವ್ಯಾಘ್ರಃ ಪುನ್ನಾಮ್ನೋ ನರಕಾತ್ತದಾ ॥ ೫೨ ॥

ತಂ ಸಮುದ್ರಾಶ್ಚ ನದ್ಯಶ್ಚ ರತ್ನಾನ್ಯಾದಾಯ ಸರ್ವಶಃ ।
ತೋಯಾನಿ ಚಾಭಿಷೇಕಾರ್ಥಂ ಸರ್ವ ಏವೋಪತಸ್ಥಿರೇ ॥ ೫೩ ॥

---

೪೯. ಮುನಿಗಳು ವೇನನ ಬಲಗೈಯನ್ನು ಮಥಿಸುತ್ತಿರಲು ಅದರಿಂದ ಪೃಥುಕುಮಾರನು ಜನಿಸಿದನು. ಅವನು ಅಗ್ನಿಯಂತೆ ಪ್ರಕಾಶಿಸುತ್ತಿದ್ದನು .

೫೦. ಆ ಪೃಥುವು ಅಜಗವವೆಂಬ ಮಹಾಧನುಸ್ಸನ್ನು ಧರಿಸಿದ್ದನು. ಅನೇಕ ಮಹಾಸ್ತ್ರಗಳನ್ನೂ ದಿವ್ಯಕವಚವನ್ನು ಧರಿಸಿದ್ದನು.

೫೧-೫೨. ಆ ಪೃಥುಕುಮಾರನು ಜನಿಸಲು ಪ್ರಾಣಿಗಳೆಲ್ಲವೂ ಸಂತೋಷವುಳ್ಳವಾದವು. ಮುನಿಗಳು ಹರ್ಷದಿಂದ ತಮ್ಮಾಶ್ರಮಗಳಿಗೆ ತೆರಳಿದರು. ಸತ್ಪುತ್ರನಾದ ಆ ಪೃಥುಕುಮಾರನು ಜನಿಸಿದುದರಿಂದ ವೇನರಾಜನು ಪುತ್ ಎಂಬ ನರಕದಿಂದಲುದ್ಧರಿಸಲ್ಪಟ್ಟು ಸ್ವರ್ಗವನ್ನೇರಿದನು.

೫೩. ಸಮುದ್ರಗಳೂ ನದಿಗಳೂ ಸಹ ರತ್ನಗಳನ್ನೂ ಪವಿತ್ರವಾದ ಜಲವನ್ನೂ ತೆಗೆದುಕೊಂಡು ಪೃಥುಚಕ್ರವರ್ತಿಗೆ ರಾಜ್ಯಾಭಿಷೇಕಮಾಡಲು ನೆರೆದವು.

shrinath.udupa@gmail.com

ಪಿತಾಮಹಶ್ಚ ಭಗವಾನ್ ದೇವೈರಾಂಗಿರಸೈಸ್ಸಹ ।
ಸ್ಥಾವರಾಣಿ ಚ ಭೂತಾನಿ ಜಂಗಮಾನಿ ಚ ಸರ್ವಶಃ ॥ ೫೪ ॥

ಸಮಾಗಮ್ಯ ತದಾ ವೈನ್ಯಮಭ್ಯಷಿಂಚನ್ನರಾಧಿಪಂ ।
ಮಹತಾ ರಾಜರಾಜೇನ ಪ್ರಜಾಸ್ತೇನಾನುರಂಜಿತಾಃ ॥ ೫೫ ॥

ಸೋಽಭಿಷಿಕ್ತೋ ಮಹಾತೇಜಾ ವಿಧಿವದ್ಧರ್ಮಕೋವಿದೈಃ ।
ಆಧಿರಾಜ್ಯೇ ತದಾ ರಾಜ್ಞಾಂ ಪೃಥುರ್ವೈನ್ಯಃ ಪ್ರತಾಪವಾನ್ ॥ ೫೬ ॥

ಪಿತ್ರಾಪರಂಜಿತಾಸ್ತಸ್ಯ ಪ್ರಜಾಸ್ತೇನಾನುರಂಜಿತಾಃ ।
ಅನುರಾಗಾತ್ತತಸ್ತಸ್ಯ ನಾಮ ರಾಜಾಭ್ಯಜಾಯತ ॥ ೫೭ ॥

ಆಪಸ್ತಸ್ತಂಭಿರೇ ತಸ್ಯ ಸಮುದ್ರಮಭಿಯಾಸ್ಯತಃ ।
ಪರ್ವತಾಶ್ಚ ದದುರ್ಮಾರ್ಗಂ ಧ್ವಜಭಂಗಶ್ಚ ನಾಭವತ್ ॥ ೫೮ ॥

---

೫೪. ಭಗವಂತನಾದ ಬ್ರಹ್ಮನೂ ದೇವತೆಗಳೂ ಮಹರ್ಷಿಗಳೂ ಮಿಕ್ಕ ಪ್ರಾಣಿಗಳೆಲ್ಲವೂ ಬಂದು ಪೃಥುಚಕ್ರವರ್ತಿಗೆ ರಾಜ್ಯಾಭಿಷೇಕಮಾಡಿದರು.

೫೫-೫೬. ಹೀಗೆ ಧರ್ಮಜ್ಞರಿಂದ ಚಕ್ರವರ್ತಿಯಾಗಿ ಅಭಿಷೇಕಿಸಲ್ಪಟ್ಟ ಆ ಪರಾಕ್ರಮಿಯಾದ ಪ್ರಥುಚಕವರ್ತಿಯು ತನ್ನ ಪ್ರಜೆಗಳನ್ನು ಪ್ರೀತಿಯಿಂದ ಆಳತೊಡಗಿದನು.

೫೭. ತನ್ನ ತಂದೆಯಿಂದ ತೊಂದರೆಗೊಳಗಾದ ಪ್ರಜೆಗಳನ್ನು ಆ ಪೃಥು ಚಕ್ರವರ್ತಿಯು ಅನುರಾಗದಿಂದ [ಪ್ರೀತಿಯಿಂದ] ಆಳುತ್ತಿದ್ದುದರಿಂದ ಅವನು ನಿಜವಾದ ರಾಜನಾದನು. ಆಗಿನಿಂದ ರಾಜನೆಂದರೆ ಪ್ರಜೆಗಳನ್ನು ಸಂತೋಷಗೊಳಿಸುವವನು ಎಂದು ರೂಢಿಯಾಯಿತು.

೫೮. ಆ ಪೃಥುಚಕ್ರವರ್ತಿಯು ಸಮುದ್ರಕ್ಕೆ ತೆರಳುವಾಗ ನದಿಯಾಗಲೀ ಸಮುದ್ರವಾಗಲಿ ಅವನ ಪ್ರಯಾಣಕ್ಕೆ ಅಡ್ಡಿ ಮಾಡುತ್ತಿರಲಿಲ್ಲ. ಪರ್ವತಗಳೂ ಅವನ ಪ್ರಯಾಣಕ್ಕೆ ಅನುಕೂಲವನ್ನು ಮಾಡುತ್ತಿದ್ದವು. ಎಲ್ಲಿಯೂ ಧ್ವಜವು ಭಂಗವಾಗುತ್ತಿರಲಿಲ್ಲ.

shrinath.udupa@gmail.com

ಅಕೃಷ್ಟಪಚ್ಯಾ ಪೃಥಿವೀ ಸಿಧ್ಯಂತ್ಯನ್ನಾನಿ ಚಿಂತನಾತ್ ।
ಸರ್ವಕಾಮದುಘಾ ಗಾವಃ ಪುಟಕೇ ಪುಟಕೇ ಮಧು ॥ ೫೯ ॥

ಏತಸ್ಮಿನ್ನೇವ ಕಾಲೇ ತು ಯಜ್ಞೇ ಪೈತಾಮಹೇ ಶುಭೇ ।
ಸೂತಃ ಸೂತ್ಯಾಂ ಸಮುತ್ಪನ್ನಃ ಸೌತ್ಯೇಽಹನಿ ಮಹಾಮತಿಃ ॥ ೬೦ ॥

ತಸ್ಮಿನ್ನೇವ ಮಹಾಯಜ್ಞೇ ಜಜ್ಞೇ ಪ್ರಾಜ್ಞೋಽಥ ಮಾಗಧಃ ।
ಪೃಥೋಃ ಸ್ತವಾರ್ಥಂ ತೌ ತತ್ರ ಸಮಾಹೂತೌ ಮಹರ್ಷಿಭಿಃ ॥ ೬೧ ॥

ತಾವೂಚುರ್ಋಷಯಸ್ಸರ್ವೇ ಸ್ತೂಯತಾಮೇಷ ಪಾರ್ಥಿವಃ ।
ಕರ್ಮೈತದನುರೂಪಂ ವಾಂ ಪಾತ್ರಂ ಚಾಯಂ ನರಾಧಿಪಃ ॥ ೬೨ ॥

ತಾವೂಚತುಸ್ತದಾ ಸರ್ವಾಂಸ್ತಾನೃಷೀನ್ ಸೂತಮಾಗಧೌ ।
ಆವಾಂ ದೇವಾನೃಷೀಂಶ್ಚೈವ ಪ್ರೀಣಯಾವಃ ಸ್ವಕರ್ಮಭಿಃ ॥ ೬೩ ॥

---

೫೯. ಪ್ರಥುವಿನ ರಾಜ್ಯದಲ್ಲಿ ವ್ಯವಸಾಯವಿಲ್ಲದೇ ಪೈರುಬೆಳೆಯುತ್ತಿದ್ದಿತು. ಅನೇಕಬಗೆಯ ಆಹಾರವಸ್ತುಗಳು ಸ್ಮರಣೆಮಾಡಿದರೇ ಸಿದ್ಧಿಸುತ್ತಿದ್ದುವು. ಹಸುಗಳು ಚನ್ನಾಗಿ ಹಾಲುಕರೆಯುತ್ತಿದ್ದುವು. ಪ್ರತಿಯೊಂದು ಪೊಟರೆಗಳಲ್ಲಿಯೂ ತುಂಬಿಗಳು ಜೇನುತುಪ್ಪವನ್ನು ಮಾಡುತ್ತಿದ್ದುವು.

೬೦. ಇದೇ ಕಾಲದಲ್ಲಿ ಮಹಾಯಾಗವೊಂದು ನಡೆಯುತ್ತಿರುವಾಗ "ಸುತ್ಯಾಹವೆಂಬ" ಹೆಸರುಳ್ಳ ದಿನದಲ್ಲಿ ಸೂತನೆಂಬುವನು [ಸ್ತೋತ್ರಮಾಡುವವನು] ಜನಿಸಿದನು.

೬೧. ಅದೇ ಮಹಾಯಜ್ಞದಲ್ಲಿ ಮಾಗಧನೆಂಬ ಸ್ತೋತ್ರಪಂಡಿತನೂ ಜನಿಸಿದನು. ಆ ಸೂತಮಾಗಧರೀರ್ವರನ್ನೂ, ಪ್ರಥುಚಕ್ರವರ್ತಿಯನ್ನು ಸ್ತುತಿಸಲೋಸ್ಕರ ಮಹರ್ಷಿಗಳು ಅಲ್ಲಿಗೆ [ಪ್ರಥುವಿನ ಬಳಿಗೆ] ಕರೆಸಿದರು.

೬೨. ಆ ಸೂತಮಾಗಧರನ್ನು ಕುರಿತು ಋಷಿಗಳು ಎಲೈ ವಿದ್ವಾಂಸರೇ, ಈ ಚಕ್ರವರ್ತಿಯನ್ನು ಸ್ತುತಿಸಿರಿ, ಇವನನ್ನು ಸ್ತುತಿಸುವುದು ನಿಮಗೆ ಯೋಗ್ಯವಾಗಿದೆ ಈ ಪೃಥುವೂ ಸಹ ಸ್ತೋತ್ರಕ್ಕೆ ಯೋಗ್ಯನಾಗಿರುವನು ಎನ್ನಲು,

೬೩-೬೪. ಆಗ ಆ ಸೂತಮಾಗಧರಿಂತೆಂದರು :—ಓ ಋಷಿಗಳೇ, ನಾವು ದೇವತೆಗಳನ್ನೂ ಋಷಿಗಳನ್ನೂ ಅವರವರ ಸತ್ಕರ್ಮಗಳಿಗನುಸಾರವಾಗಿ

shrinath.udupa@gmail.com

ನ ಚಾಸ್ಯ ವಿದ್ಮೋ ವೈ ಕರ್ಮ ನಾಮ ವಾ ಲಕ್ಷಣಂ ಯಶಃ ।
ಸ್ತೋತ್ರಂ ಯೇನಾಸ್ಯ ಕುರ್ಯಾವ ರಾಜ್ಞಸ್ತೇಜಸ್ವಿನೋ ದ್ವಿಜಾಃ ॥ ೬೪ ॥

ಋಷಿಭಿಸ್ತೌ ನಿಯುಕ್ತೌ ತು ಭವಿಷ್ಯೈಃ ಸ್ತೂಯತಾಮಿತಿ ।
ಯಾನಿ ಕರ್ಮಾಣಿ ಕೃತವಾನ್ ಪೃಥುಃ ಪಶ್ಚಾನ್ಮಹಾಬಲಃ ॥ ೬೫ ॥

ತತಃ ಪ್ರಭೃತಿ ವೈ ಲೋಕೇ ಸ್ತವೇಷು ಮುನಿಸತ್ತಮಾಃ ।
ಆಶೀರ್ವಾದಾಃ ಪ್ರಯುಜ್ಯಂತೇ ಸೂತಮಾಗಧವಂದಿಭಿಃ ॥ ೬೬ ॥

ತಯೋಃ ಸ್ತವಾಂತೇ ಸುಪ್ರೀತಃ ಪೃಥುಃ ಪ್ರಾದಾತ್ಪ್ರಜೇಶ್ವರಃ ।
ಅನೂಪದೇಶಂ ಸೂತಾಯ ಮಗಧಂ ಮಾಗಧಾಯ ಚ ॥ ೬೭ ॥

ತಂ ದೃಷ್ಟ್ವಾ ಪರಮಪ್ರೀತಾಃ ಪ್ರಜಾಃ ಪ್ರೋಚುರ್ಮನೀಷಿಣಃ ।
ವೃತ್ತೀನಾಮೇಷ ವೋ ದಾತಾ ಭವಿಷ್ಯತಿ ನರಾಧಿಪಃ ॥ ೬೮ ॥

ಸ್ತುತಿಸುವೆವು. ಆದರೆ ಈ ರಾಜನ ಸತ್ಕರ್ಮವನ್ನಾಗಲೀ ಹೆಸರನ್ನಾಗಲಿ ಲಕ್ಷಣವನ್ನಾಗಲೀ ನಾವು ತಿಳಿದಿಲ್ಲ. ಹೀಗಿದ್ದು ನಾವು ಈ ರಾಜನನ್ನು ಸ್ತುತಿಸುವುದು ಹೇಗೆ?

೬೫. ಆಗ ಋಷಿಗಳು ಆ ಸೂತಮಾಗಧರನ್ನು "ಕುರಿತು" ಮುಂದೆ ಪೃಥುರಾಜನು ಮಾಡಬಹುದಾದ ಕಾರ್ಯಗಳನ್ನು ಕುರಿತು ಸ್ತೋತ್ರಮಾಡಿರಿ ಎಂದು ಆಜ್ಞಾಪಿಸಿದರು.

೬೬. ಎಲೈ ಋಷಿಶ್ರೇಷ್ಠರೇ, ಅದುಮೊದಲುಗೊಂಡು ಸೂತಮಾಗಧರು ಮತ್ತು ವಂದಿ [ಹೊಗಳುಭಟ್ಟ] ಗಳು ಸ್ತೋತ್ರಗಳಲ್ಲಿ ಸತ್ಕಾರ್ಯಗಳು ಮುಂದಾಗುವಂತೆ ಆಶೀರ್ವಾದಗಳನ್ನು ಮಾಡುತ್ತಾರೆ.

೬೭. ಆ ಸೂತಮಾಗಧರು ಅದರಂತೆ ಸ್ತುತಿಸಲು ಪೃಥುಚಕ್ರವರ್ತಿಯು ಹರ್ಷಗೊಂಡವನಾಗಿ ಸೂತನಿಗೆ ಅನೂಪವೆಂಬ ದೇಶವನ್ನೂ ಮಾಗಧನಿಗೆ ಮಗಧ ದೇಶವನ್ನೂ ಬಹುಮಾನವಾಗಿ ಕೊಟ್ಟನು.

೬೮. ಹೀಗೆ ಸೂತಮಾಗಧರಿಗೆ ದಾನಕೊಟ್ಟುದುದನ್ನು ನೋಡಿ ಪ್ರಜೆಗಳು ಹರ್ಷಗೊಂಡು " ಈ ನಮ್ಮ ರಾಜನು ನಮಗೆ ಯೋಗ್ಯವಾದ ವೃತ್ತಿ ಜೀವನ ಮತ್ತು ದಾನಗಳನ್ನು ಕೊಡುವನು ಎಂದು ಹೇಳಿದರು.

shrinath.udupa@gmail.com

ತತೋ ವೈನ್ಯಂ ಮಹಾತ್ಮಾನಂ ಪ್ರಜಾಃ ಸಮಭಿದುದ್ರುವುಃ ।
ತ್ವಂ ನೋ ವೃತ್ತಿಂ ವಿಧತ್ಸ್ವೇತಿ ಮಹರ್ಷಿವಚನಾತ್ತದಾ ॥ ೧೯ ॥

ಸೋಽಭಿದ್ರುತಃ ಪ್ರಜಾಭಿಸ್ತು ಪ್ರಜಾಹಿತಚಿಕೀರ್ಷಯಾ ।
ಧನುರ್ಗೃಹ್ಯ ಪೃಷತ್ಕಾಂಶ್ಚ ಪೃಥಿವೀಮಾದ್ರವದ್ಬಲೀ ॥ ೨೦ ॥

ತತೋ ವೈನ್ಯಭಯತ್ರಸ್ತಾ ಗೌರ್ಭೂತ್ವಾ ಪ್ರಾದ್ರವನ್ಮಹೀ ।
ತಾಂ ಪೃಥುರ್ಧನುರಾದಾಯ ದ್ರವಂತೀಮನ್ವಧಾವತ ॥ ೨೧ ॥

ಸಾ ಲೋಕಾನ್ ಬ್ರಹ್ಮಲೋಕಾದೀನ್ ಗತ್ವಾ ವೈನ್ಯಭಯಾತ್ತದಾ ।
ಪ್ರದದರ್ಶಾಗ್ರತೋ ವೈನ್ಯಂ ಪ್ರಗೃಹೀತಶರಾಸನಂ ॥ ೨೨ ॥

ಜ್ವಲದ್ಭಿರ್ನಿಶಿತೈರ್ಬಾಣೈರ್ದೀಪ್ತತೇಜಸಮಂತತಃ ।
ಮಹಾಯೋಗಂ ಮಹಾತ್ಮಾನಂ ದುರ್ಧರ್ಷಮಮರೈರಪಿ ॥ ೨೩ ॥

---

೧೯. ಬಳಿಕ ಮಹರ್ಷಿಗಳ ಪ್ರೇರಣೆಯಂತೆ ಪ್ರಜೆಗಳೆಲ್ಲರೂ ಪೃಥುಚಕ್ರವರ್ತಿಯನ್ನು ಕುರಿತು "ಓ ರಾಜಾ ನಮಗೆ ಜೀವನವನ್ನು ಕಲ್ಪಿಸು" ಎಂದು ಕೇಳಿಕೊಂಡರು.

೨೦. ಹೀಗೆ ಪ್ರಜೆಗಳು ಕೇಳಿಕೊಳ್ಳಲು ಅವರ ಕ್ಷೇಮಕ್ಕಾಗಿ ಪರಾಕ್ರಮಿಯಾದ ಆ ರಾಜನು ಧನುರ್ಬಾಣಗಳನ್ನು ಹಿಡಿದುಕೊಂಡು ಭೂಮಿಯನ್ನು ಬೆದರಿಸಿಕೊಂಡುಹೋದನು.

೨೧. ಆಗ ಭೂಮಿಯು ಹೆದರಿ ಹಸುವಿನ ರೂಪವನ್ನು ಧರಿಸಿ ಓಡತೊಡಗಿದಳು. ಧನುರ್ಧಾರಿಯಾದ ಪೃಥುವು ಆ ಭೂಮಿಯ ಬೆನ್ನಟ್ಟಿ ನಡೆದನು.

೨೨. ಆ ಭೂದೇವಿಯು ಬ್ರಹ್ಮಲೋಕ ಮುಂತಾದ ಲೋಕಗಳೆಲ್ಲವನ್ನೂ ಪೃಥುವಿನ ಭಯದಿಂದ ಸಂಚರಿಸಿದಳು. ಅಲ್ಲೆಲ್ಲಾ ಅವಳಿಗೆ ಧನುರ್ಬಾಣವನ್ನು ಧರಿಸಿದ ಪೃಥುಚಕ್ರವರ್ತಿಯು ಎದುರಿಗೆ ಕಾಣಿಸಿದನು.

೨೩. ಪ್ರಕಾಶಿಸುತ್ತಿರುವ ಹರಿತವಾದ ಬಾಣಗಳಿಂದ ಆ ರಾಜಿಸುತ್ತಿದ್ದ ಮಹಾಯೋಗಿಯೂ ಮಹಾತ್ಮನೂ ಆದ ಆ ರಾಜನನ್ನು ದೇವತೆಗಳು ಸಹಿಸಲಾರದಾದರು. ಇಂತಹ ಪರಾಕ್ರಮವುಳ್ಳ ಆ ಪೃಥುವು ಭೂದೇವಿಯನ್ನು ಬೆನ್ನಟ್ಟಿ ಹೋಗುತ್ತಿದ್ದನು.

shrinath.udupa@gmail.com

ಅಲಭಂತೀ ತು ಸಾ ತ್ರಾಣಂ ವೈನ್ಯಮೇವಾನ್ವಪದ್ಯತ ।
ಕೃತಾಂಜಲಿಪುಟಾ ಭೂತ್ವಾ ಪೂಜ್ಯಾ ಲೋಕೈಸ್ತ್ರಿಭಿಸ್ತದಾ ॥ ೨೪ ॥

ಉವಾಚ ವೈನ್ಯಂ ನಾಧರ್ಮಂ ಸ್ತ್ರೀವಧೇ ಪರಿಪಶ್ಯಸಿ ।
ಕಥಂ ಧಾರಯಿತಾ ಚಾಸಿ ಪ್ರಜಾ ರಾಜನ್ವಿನಾ ಮಯಾ ॥ ೨೫ ॥

ಮಯಿ ಲೋಕಾಃ ಸ್ಥಿತಾ ರಾಜನ್ ಮಯೇದಂ ಧಾರ್ಯತೇ ಜಗತ್ ।
ಮದ್ವಿನಾಶೇ ವಿನಶ್ಯೇಯುಃ ಪ್ರಜಾಃ ಪಾರ್ಥಿವ ವಿದ್ಧಿ ತತ್ ॥ ೨೬ ॥

ನ ಮಾಮರ್ಹಸಿ ಹಂತುಂ ವೈ ಶ್ರೇಯಶ್ಚೇತ್ತ್ವಂ ಚಿಕೀರ್ಷಸಿ ।
ಪ್ರಜಾನಾಂ ಪೃಥಿವೀಪಾಲ ಶೃಣು ಚೇದಂ ವಚೋ ಮಮ ॥ ೨೭ ॥

ಉಪಾಯತಃ ಸಮಾರಬ್ಧಾಃ ಸರ್ವೇ ಸಿಧ್ಯಂತ್ಯುಪಕ್ರಮಾಃ ।
ಉಪಾಯಂ ಪಶ್ಯ ಯೇನ ತ್ವಂ ಧಾರಯೇಥಾಃ ಪ್ರಜಾಮಿಮಾಂ ॥ ೨೮ ॥

---

೨೪. ಜಗತ್ಪೂಜ್ಯಳಾದ ಆ ಭೂದೇವಿಯು ರಕ್ಷಿಸುವವರಾರನ್ನೂ ಕಾಣದೆ ಪೃಥುಚಕ್ರವರ್ತಿಯನ್ನೇ ವಿನಯದಿಂದ ಅಂಜಲಿಯನ್ನು ಧರಿಸಿ ಮರೆಹೊಕ್ಕಳು.

೨೫. ಅಲ್ಲದೆ ಆ ಭೂದೇವಿಯು ಪೃಥುವನ್ನು ಕುರಿತು ಓ ರಾಜನೆ, ಸ್ತ್ರೀಯನ್ನು ಕೊಲ್ಲುವದು ಪಾಪಕರವಲ್ಲವೇ? ಮತ್ತು ನನ್ನನ್ನು ಕೊಂದರೆ ಪ್ರಜೆಗಳನ್ನು ನೀನು ಆಳುವುದು ಹೇಗೆ?

೨೬. ಓ ರಾಜ, ಲೋಕಗಳೆಲ್ಲವೂ ನನ್ನಲ್ಲಿಯೇ ಇರುವವು. ಜಗತ್ತೆಲ್ಲವನ್ನೂ ನಾನೇ ಧರಿಸಿರುವೆನು. ಹೀಗಿರಲು ನಾನು ನಷ್ಟಳಾದರೆ ಪ್ರಜೆಗಳೆಲ್ಲರೂ ನಾಶವಾಗುವರು.

೨೭. ಪ್ರಜೆಗಳಿಗೆ ಶ್ರೇಯಸ್ಸನ್ನು ಮಾಡಬೇಕೆಂದಿದ್ದರೆ ನನ್ನನ್ನು ಕೊಲ್ಲಲಾಗದು. ಇದಕ್ಕೆ ನಾನೊಂದು ಉಪಾಯವನ್ನು ಹೇಳುವೆನು ಕೇಳು.

೨೮. ಉಪಾಯದಿಂದ ನಡೆದರೆ ಎಲ್ಲಾ ಕಾರ್ಯಗಳೂ ಸಿದ್ಧಿಸುವವು. ಈ ಪ್ರಜೆಗಳನ್ನು ತೊಂದರೆಯಿಲ್ಲದೆ ರಕ್ಷಿಸಲು ನೀನು ಉಪಾಯವನ್ನು ಯೋಚಿಸಿ ಅದರಂತೆ ಮಾಡು

shrinath.udupa@gmail.com

ಹತ್ವಾಪಿ ಮಾಂ ನ ಶಕ್ತಸ್ತ್ವಂ ಪ್ರಜಾನಾಂ ಪೋಷಣೇ ನೃಪ ।
ಅನುಕೂಲಾ ಭವಿಷ್ಯಾಮಿ ಯಚ್ಛ ಕೋಪಂ ಮಹಾಮತೇ ॥ ೭೯ ॥

ಅವಧ್ಯಾಂ ಚ ಸ್ತ್ರಿಯಂ ಪ್ರಾಹುಸ್ತಿರ್ಯಗ್ಯೋನಿಗತೇಷ್ವಪಿ ।
ಯದ್ಯೇವಂ ಪೃಥಿವೀಪಾಲ ನ ಧರ್ಮಂ ತ್ಯಕ್ತುಮರ್ಹಸಿ ॥ ೮೦ ॥

ಏವಂ ಬಹುವಿಧಂ ವಾಕ್ಯಂ ಶ್ರುತ್ವಾ ರಾಜಾ ಮಹಾಮನಾಃ ।
ಕೋಪಂ ನಿಗೃಹ್ಯ ಧರ್ಮಾತ್ಮಾ ವಸುಧಾಮಿದಮಬ್ರವೀತ್ ॥ ೮೧ ॥

॥ ಪೃಥುರುವಾಚ ॥

ಏಕಸ್ಯಾರ್ಥೇ ತು ಯೋ ಹನ್ಯಾದಾತ್ಮನೋ ವಾ ಪರಸ್ಯ ವಾ ।
ಬಹೂನ್ ವಾ ಪ್ರಾಣಿನೋಽನಂತಂ ಭವೇತ್ತಸ್ಯೇಹ ಪಾತಕಂ ॥ ೮೨ ॥

ಸುಖಮೇಧಂತಿ ಬಹವೋ ಯಸ್ಮಿಂಸ್ತು ನಿಹತೇಽಶುಭೇ ।
ತಸ್ಮಿನ್ ಹತೇ ನಾಸ್ತಿ ಭದ್ರೇ ಪಾತಕಂ ಚೋಪಪಾತಕಂ ॥ ೮೩ ॥

---

೭೯. ನನ್ನನ್ನು ಕೊಂದರೂ ನೀನು ಪ್ರಜೆಗಳನ್ನು ರಕ್ಷಿಸಲಾರೆ. ಆದ ಕಾರಣ ಓ ರಾಜ, ಕೋಪವನ್ನು ಬಿಡು. ಪ್ರಜಾಪಾಲನೆಯಲ್ಲಿ ನಿನಗೆ ನಾನು ಸಹಾಯಕಳಾಗುವೆನು.

೮೦. ಪಶುಗಳಲ್ಲಾದರೂ ಸಹ ಸ್ತ್ರೀಯನ್ನು ಕೊಲ್ಲಬಾರದು ಎಂದು ಹಿರಿಯರು ಹೇಳುವರು. ಹೀಗಿರಲು ನೀನು ಸ್ತ್ರೀವಧವನ್ನು ಮಾಡಬಾರದು.

೮೧. ಹೀಗೆ ಭೂದೇವಿಯು ಹೇಳಿದ ಮಾತುಗಳನ್ನು ಕೇಳಿ ಉದಾರಹೃದಯನಾದ ಪೃಥುವು ಕೋಪವನ್ನು ಬಿಟ್ಟು ಇಂತೆಂದನು.

೮೨. ಎಲೌ ಭೂದೇವಿ, ತನಗಾಗಲೀ ಇನ್ನೊಬ್ಬನಿಗಾಗಲೀ ಒಬ್ಬನ ಹಿತಕ್ಕೋಸ್ಕರವಾಗಿ ಅನೇಕ ಜನಗಳನ್ನು ಹಿಂಸಿಸುವುದು ಮಹಾಪಾಪವು.

೮೩. ದುಷ್ಟನಾದ ಓರ್ವನ ಮರಣದಿಂದ ಅನೇಕ ಜನಗಳಿಗೆ ಸುಖವಾಗುವಂತಿದ್ದರೆ ಆಗ ಮಾತ್ರ ಆ ದುಷ್ಟನನ್ನು ಕೊಲ್ಲಬಹುದು. ಅದರಿಂದ ಯಾವ ಪಾಪವೂ ಬರಲಾರದು.

shrinath.udupa@gmail.com

ಸೋऽಹಂ ಪ್ರಜಾನಿಮಿತ್ತಂ ತ್ವಾಂ ಹನಿಷ್ಯಾಮಿ ವಸುಂಧರೇ ।
ಯದಿ ಮೇ ವಚನಾನ್ನಾದ್ಯ ಕರಿಷ್ಯಸಿ ಜಗದ್ಧಿತಂ ॥ ೮೪ ॥

ತ್ವಾಂ ನಿಹತ್ಯಾದ್ಯ ಬಾಣೇನ ಮಚ್ಛಾಸನಪರಾಙ್ಮುಖೀಂ ।
ಆತ್ಮಾನಂ ಪ್ರಥಯಿತ್ವಾಹಂ ಪ್ರಜಾ ಧಾರಯಿತಾ ಸ್ವಯಂ ॥ ೮೫ ॥

ಸಾ ತ್ವಂ ಶಾಸನಮಾಸ್ಥಾಯ ಮಮ ಧರ್ಮಭೃತಾಂ ವರೇ ।
ಸಂಜೀವಯ ಪ್ರಜಾಸ್ಸರ್ವಾಃ ಸಮರ್ಥಾ ಹ್ಯಸಿ ಧಾರಣೇ ॥ ೮೬ ॥

ದುಹಿತೃತ್ವಂ ಚ ಮೇ ಗಚ್ಛ ತತ ಏನಮಹಂ ಶರಂ ।
ನಿಯಚ್ಛೇಯಂ ತ್ವದ್ವಧಾರ್ಥಮುದ್ಯತಂ ಘೋರದರ್ಶನಂ ॥ ೮೭ ॥

॥ ವಸುಧೋವಾಚ ॥

ಸರ್ವಮೇತದಹಂ ವೀರ ವಿಧಾಸ್ಯಾಮಿ ನ ಸಂಶಯಃ ।
ವತ್ಸಂ ತು ಮಮ ಸಂಪಶ್ಯ ಕ್ಷರೇಯಂ ಯೇನ ವತ್ಸಲಾ ॥ ೮೮ ॥

---

೮೪. ಎಲೌ ವಸುಂಧರೆ, ಈಗ ನೀನು ಪ್ರಜೆಗಳಿಗೆ ಹಿತವನ್ನು ಮಾಡಲಾರೆ ಯಾದರೆ ಅನೇಕ ಪ್ರಜೆಗಳ ಹಿತಕ್ಕೋಸುಗ ನಾನು ನಿನ್ನನ್ನು ಸಂಹರಿಸುವೆನು.

೮೫. ನನ್ನ ಆಜ್ಞೆಯನ್ನು ನೀನು ಮೀರಿದರೆ ನಿನ್ನನ್ನು ಸಂಹರಿಸಿ ನನ್ನ ಶಕ್ತಿಯಿಂದಲೇ ಈ ಪ್ರಜೆಗಳನ್ನು ಧರಿಸಿ ಕಾಪಾಡುವೆನು.

೮೬. ಆದ ಕಾರಣ ಎಲೌ ಪೃಥುವಿ, ಧರ್ಮಮೂರ್ತಿಯಾದ ನೀನು ನನ್ನ ಅಪ್ಪಣೆಯಂತೆ ಪ್ರಜೆಗಳೆಲ್ಲರನ್ನೂ ಬದುಕಿಸುವವಳಾಗು. ಜಗತ್ತನ್ನು ಧರಿಸಲು ನೀನೇ ಸಮರ್ಥಳು.

೮೭. ನನ್ನ ಮಗಳಂತೆ ವರ್ತಿಸಿ (ನನ್ನ ಮಗಳಾಗು, ಪೃಥಿವಿಯಾಗು, ಪೃಥು ವಿನ ಮಗಳು ಪೃಥಿವಿ ಎಂದರ್ಥ) ಪ್ರಜೆಗಳಿಗೆ ಅನುಕೂಲಳಾದರೆ ನಿನ್ನ ಸಂಹರಿಸ ಲುದ್ಯುಕ್ತವಾದ ಈ ಭಯಂಕರವಾದ ಬಾಣವನ್ನು ಉಪಸಂಹರಿಸುವೆನು.

೮೮. ವಸುಂಧರೆಯು ಹೇಳಿದಳು.—ಎಲೈ ರಾಜನೇ, ನಿನ್ನಪ್ಪಣೆಯೆಲ್ಲವನ್ನೂ ನಡೆಸುವೆನು. ಆದರೆ ನಾನು ಹಾಲು ಕರೆಯುವುದಕ್ಕೆ ವತ್ಸ (ಕರು) ನು ಬೇಕು. ಕರು ವನ್ನು ನೋಡಿ ಪ್ರೀತಿಯಿಂದ ಹಸುವು ಹಾಲು ಸುರಿಸುವಂತೆ ನಾನೂ ಹಾಲು ಸುರಿಸುವೆನು.

shrinath.udupa@gmail.com
ಸಮಾಂ ಚ ಕುರು ಸರ್ವತ್ರ ಮಾಂ ತ್ವಂ ಧರ್ಮಭೃತಾಂ ವರ ।
ಯಥಾ ವಿಸ್ಯಂದಮಾನಂ ಮೇ ಕ್ಷೀರಂ ಸರ್ವತ್ರ ಭಾವಯೇತ್ ॥ ೮೯ ॥

॥ ಲೋಮಹರ್ಷಣ ಉವಾಚ ॥

ತತ ಉತ್ಸಾರಯಾಮಾಸ ಶೈಲಾನ್ಶತಸಹಸ್ರಶಃ ।
ಧನುಷ್ಕೋಟ್ಯಾ ತದಾ ವೈನ್ಯಸ್ತೇನ ಶೈಲಾ ವಿವರ್ಧಿತಾಃ ॥ ೯೦ ॥

ನ ಹಿ ಪೂರ್ವವಿಸರ್ಗೇ ವೈ ವಿಷಮೇ ಪೃಥಿವೀತಲೇ ।
ಸಂವಿಭಾಗಃ ಪುರಾಣಾಂ ವಾ ಗ್ರಾಮಾಣಾಂ ವಾಽಭವತ್ತದಾ ॥ ೯೧ ॥

ನ ಸಸ್ಯಾಣಿ ನ ಗೋರಕ್ಷ್ಯಂ ನ ಕೃಷಿರ್ನ ವಣಿಕ್ಪಥಃ ।
ನೈವ ಸತ್ಯಾನೃತಂ ಚಾಽಽಸೀನ್ನ ಲೋಭೋ ನ ಚ ಮತ್ಸರಃ ॥ ೯೨ ॥

ವೈವಸ್ವತೇಽಂತರೇ ತಸ್ಮಿನ್ ಸಾಂಪ್ರತಂ ಸಮುಪಸ್ಥಿತೇ ।
ವೈನ್ಯಾತ್ಪ್ರಭೃತಿ ವೈ ವಿಪ್ರಾಃ ಸರ್ವಸ್ಯೈತಸ್ಯ ಸಂಭವಃ ॥ ೯೩ ॥

---

೮೯. ಓ ರಾಜನೇ ಮೊದಲು ಗುಂಡಾದ ನನ್ನ ಶರೀರವನ್ನು ಸಮನಾಗಿ ಮಾಡು. ಇಲ್ಲದಿದ್ದರೆ ಹಾಲು ಎಲ್ಲೆಡೆಯಲ್ಲಿಯೂ ಬಿದ್ದು ಚೆಲ್ಲಿಹೋಗಬಹುದು.

೯೦. ಲೋಮಹರ್ಷಣಮುನಿಯು ಹೇಳಿದನು.—ಬಳಿಕ ಪೃಥುರಾಜನು ಭೂಮಿಯ ಮಧ್ಯದಲ್ಲಿ ಅವ್ಯವಸ್ಥೆಯಿಂದಿದ್ದ ಪರ್ವತಗಳನ್ನೆಲ್ಲಾ ತನ್ನ ಧನುಸ್ಸಿನ ತುದಿಯಿಂದ ಭೂಮಿಯ ಕೊನೆಗೆ ತೆಗೆದೊಗೆದನು. ಮುಂದೆ ಆ ಪರ್ವತಗಳು ದೊಡ್ಡದಾಗಿ ಬೆಳೆದವು.

೯೧. ಹಿಂದಿನ ಸೃಷ್ಟಿಯಲ್ಲಿ ಭೂಮಿಯಲ್ಲಿ ಅಲ್ಲಲ್ಲಿ ಬೆಟ್ಟಗಳು ತುಂಬಿದ್ದು ನಗರಗಳಾಗಲೀ ಗ್ರಾಮಗಳಾಗಲೀ ವ್ಯವಸ್ಥೆಯಿಂದ ಇರಲಿಲ್ಲ.

೯೨. ಆಗ ಸಸ್ಯಗಳಾಗಲೀ ಹಸುಗಳನ್ನು ಮೇಯಿಸಲೋಸುಗ ಇಟ್ಟಿರುವ ಬೀಳು (ಹುಲ್ಲುಗಳಿಂದ ತುಂಬಿದ ಬಯಲು) ಗಳಾಗಲೀ ಇರಲಿಲ್ಲ. ವ್ಯಸಾಯವೂ ವ್ಯಾಪಾರವೂ ಆ ಸೃಷ್ಟಿಯಲ್ಲಿರಲಿಲ್ಲ. ಸುಳ್ಳು, ದುರಾಸೆ, ಅಸೂಯೆ ಇದಾವುದೂ ಮೊದಲಸೃಷ್ಟಿಯಲ್ಲಿರಲಿಲ್ಲ.

೯೩. ಎಲೈ ಬ್ರಾಹ್ಮಣರೇ, ಮುಂದೆ ವೈವಸ್ವತಮನ್ವಂತರವು ಪ್ರಾರಂಭವಾಗಲು ಪೃಥುಚಕ್ರವರ್ತಿಯಿಂದ ಮೊದಲುಗೊಂಡು ಇದೆಲ್ಲವೂ ಉಂಟಾದುವು.

shrinath.udupa@gmail.com

ಯತ್ರ ಯತ್ರ ಸ್ವಯಂ ತಸ್ಯಾ ಭೂಮೇರಾಸೀತ್ತದಾ ದ್ವಿಜಾಃ ।
ತತ್ರ ತತ್ರ ಪ್ರಜಾಃ ಸರ್ವಾ ನಿವಾಸಂ ಸಮರೋಚಯನ್ ॥ ೯೪ ॥

ಆಹಾರಃ ಫಲಮೂಲಾನಿ ಪ್ರಜಾನಾಮಭವತ್ತದಾ ।
ಕೃಚ್ಛ್ರೇಣ ಮಹತಾ ಯುಕ್ತ ಇತ್ಯೇವಮನುಶುಶ್ರುಮ ॥ ೯೫ ॥

ಸ ಕಲ್ಪಯಿತ್ವಾ ವತ್ಸಂ ತು ಮನುಂ ಸ್ವಾಯಂಭುವಂ ಪ್ರಭುಂ ।
ಸ್ವಪಾಣೌ ಪುರುಷವ್ಯಾಘ್ರೋ ದುದೋಹ ಪೃಥಿವೀಂ ತತಃ ॥ ೯೬ ॥

ಸಸ್ಯಜಾತಾನಿ ಸರ್ವಾಣಿ ಪೃಥುರ್ವೈನ್ಯಃ ಪ್ರತಾಪವಾನ್ ।
ತೇನಾನ್ನೇನ ಪ್ರಜಾಃ ಸರ್ವಾ ವರ್ತಂತೇಽದ್ಯಾಪಿ ಸರ್ವಶಃ ॥ ೯೭ ॥

ಋಷಯಶ್ಚ ತದಾ ದೇವಾಃ ಪಿತರೋಽಥ ಸರೀಸೃಪಾಃ ।
ದೈತ್ಯಾ ಯಕ್ಷಾಃ ಪುಣ್ಯಜನಾ ಗಂಧರ್ವಾಃ ಪರ್ವತಾ ನಗಾಃ ॥ ೯೮ ॥

ಏತೇ ಪುರಾ ದ್ವಿಜಶ್ರೇಷ್ಠಾ ದುದುಹುರ್ಧರಣೀಂ ಕಿಲ ।
ಕ್ಷೀರಂ ವತ್ಸಶ್ಚ ಪಾತ್ರಂ ಚ ತೇಷಾಂ ದೋಗ್ಧಾ ಪೃಥಕ್ಪೃಥಕ್ ॥ ೯೯ ॥

---

೯೪. ಪೃಥುವು ಭೂಮಿಯನ್ನು ಸಮ (ಬಯಲು) ವಾಗಿ ಮಾಡಲು ಆ ಪ್ರದೇಶಗಳಲ್ಲಿ ಪ್ರಜೆಗಳು ಮನೆಗಳನ್ನು ಕಟ್ಟಿಕೊಂಡು ವಾಸಮಾಡತೊಡಗಿದರು.

೯೫. ಸೃಷ್ಟಿಯ ಮೊದಲು ಪ್ರಜೆಗಳು ಗೆಡ್ಡೆಗೆಣಸು ಹಣ್ಣುಹಂಪಲಗಳನ್ನು ತಿಂದು ಜೀವಿಸುತ್ತಿದ್ದರು. ಹೀಗೆ ಆಹಾರಸೇವನೆಯು ಕಷ್ಟತರವಾಗಿತ್ತು ಎಂದು ಕೇಳಿರುವೆವು.

೯೬. ಆಮೇಲೆ ಪೃಥುಚಕ್ರವರ್ತಿಯು ಸ್ವಾಯಂಭುವಮನುವನ್ನು ಕರುವನ್ನಾಗಿ ಮಾಡಿಕೊಂಡು ಭೂಮಿಯನ್ನು ತನ್ನ ಕೈಯಿಂದಲೇ ಕರೆದನು.

೯೭. ಎಲ್ಲಾ ಬಗೆಯ ಸಸ್ಯಗಳನ್ನೂ ಪೃಥುಚಕ್ರವರ್ತಿಯು ಕರೆದನು. ಆ ಸಸ್ಯಗಳಿಂದಲೇ ಪ್ರಜೆಗಳು ಈಗಲೂ ಜೀವಿಸುತ್ತಲಿರುವರು.

೯೮-೯೯. ಋಷಿಗಳು, ದೇವತೆಗಳು, ಪಿತೃಗಳು, ಸರ್ಪಗಳು, ದೈತ್ಯರು, ಯಕ್ಷರು, ದಾನವರು, ಗಂಧರ್ವರು, ಪರ್ವತಗಳು ಇವರೆಲ್ಲರೂ ಆಗ ಭೂಮಿಯನ್ನು ಕರೆದರು. ಇವರೆಲ್ಲರೂ ಕರೆಯುವ ಪಾತ್ರೆ, ಕರು, ಕರೆಯುವವನು ಇವರೆಲ್ಲರನ್ನೂ ಬೇರೆಬೇರೆ ಮಾಡಿಕೊಂಡಿದ್ದರು.

shrinath.udupa@gmail.com

ಋಷೀಣಾಮಭವತ್ಸೋಮೋ ವತ್ಸೋ ದೋಗ್ಧಾ ಬೃಹಸ್ಪತಿಃ ।
ಕ್ಷೀರಂ ತೇಷಾಂ ತಪೋ ಬ್ರಹ್ಮ ಪಾತ್ರಂ ಛಂದಾಂಸಿ ಭೋ ದ್ವಿಜಾಃ ॥೧೦೦॥

ದೇವಾನಾಂ ಕಾಂಚನಂ ಪಾತ್ರಂ ವತ್ಸಸ್ತೇಷಾಂ ಶತಕ್ರತುಃ ।
ಕ್ಷೀರಮೋಜಸ್ಕರಂ ಚೈವ ದೋಗ್ಧಾ ಚ ಭಗವಾನ್ ರವಿಃ ॥ ೧೦೧ ॥

ಪಿತೄಣಾಂ ರಾಜತಂ ಪಾತ್ರಂ ಯಮೋ ವತ್ಸಃ ಪ್ರತಾಪವಾನ್ ।
ಅಂತಕಶ್ಚಾಭವದ್ದೋಗ್ಧಾ ಕ್ಷೀರಂ ತೇಷಾಂ ಸುಧಾ ಸ್ಮೃತಾ ॥ ೧೦೨ ॥

ನಾಗಾಗಾಂ ತಕ್ಷಕೋ ವತ್ಸಃ ಪಾತ್ರಂ ಚಾಲಾಬುಸಂಜ್ಞಕಂ ।
ದೋಗ್ಧಾ ತ್ವೈರಾವತೋ ನಾಗಸ್ತೇಷಾಂ ಕ್ಷೀರಂ ವಿಷಂ ಸ್ಮೃತಂ ॥ ೧೦೩ ॥

ಅಸುರಾಣಾಂ ಮಧುರ್ದೋಗ್ಧಾ ಕ್ಷೀರಂ ಮಾಯಾಮಯಂ ಸ್ಮೃತಂ ।
ವಿರೋಚನಸ್ತು ವತ್ಸೋಽಭೂದಾಯಸಂ ಪಾತ್ರಮೇವ ಚ ॥ ೧೦೪ ॥

---

೧೦೦. ಋಷಿಗಳಿಗೆ ಚಂದ್ರನು ಕರುವಾಗಿದ್ದನು. ಬೃಹಸ್ಪತಿಯು ಕರೆಯುವವನು, ತಪಸ್ಸು ಅಧ್ಯಯನ ಇವೇ ಹಾಲು. ಛಂದಸ್ಸುಗಳೇ ಪಾತ್ರೆಯು.

೧೦೧. ದೇವತೆಗಳಿಗೆ ಚಿನ್ನದ ಪಾತ್ರೆಯು. ಇಂದ್ರನು ಕರುವಾಗಿದ್ದನು. ವೀರ್ಯ [ಅಮೃತ] ವೇ ಹಾಲು, ಸೂರ್ಯನು ಕರೆಯುವವನು.

೧೦೨. ಪಿತೃದೇವತೆಗಳಿಗೆ ಬೆಳ್ಳಿಯ ಪಾತ್ರೆಯು. ಪ್ರತಾಪಿಯಾದ ಯಮನು ಕರುವಾಗಿದ್ದನು, ಮೃತ್ಯುವು ಕರೆಯುವವನಾಗಿದ್ದನು. ಸುಧೆಯೇ ಹಾಲು.

೧೦೩. ಸರ್ಪಗಳಿಗೆ ತಕ್ಷಕನೇ ಕರುವಾಗಿದ್ದನು. ಅಲಾಬು [ಸೋರೆಬುರುಡೆ ಅಥವಾ ದವಡೆಯಲ್ಲಿರುವ ವಿಷದಗಂಟು] ವೆಂಬುದು ಪಾತ್ರೆಯಾಗಿತ್ತು. ಐರಾವತವೆಂಬ ಸರ್ಪವು ಕರೆಯುವುದಾಗಿತ್ತು. ವಿಷವೇ ಹಾಲು.

೧೦೪. ದೈತ್ಯದಾನವರಿಗೆ ಮಧುವೆಂಬ ಅಸುರನೇ ಕರೆಯುವವನಾಗಿದ್ದನು. ಮಾಯೆಗಳೇ ಹಾಲು, ವಿರೋಚನನು ಕರುವಾಗಿದ್ದನು. ಪಾತ್ರೆಯು ಲೋಹಮಯವಾದುದು.

shrinath.udupa@gmail.com

ಯಕ್ಷಾಣಾಮಾಮಪಾತ್ರಂ ತು ವತ್ಸೋ ವೈಶ್ರವಣಃ ಪ್ರಭುಃ ।
ದೋಗ್ಧಾ ರಜತನಾಭಸ್ತು ಕ್ಷೀರಾಂತರ್ಧಾನಮೇವ ಚ ॥ ೧೦೫ ॥

ಸುಮಾಲೀ ರಾಕ್ಷಸೇಂದ್ರಾಣಾಂ ವತ್ಸಃ ಕ್ಷೀರಂ ಚ ಶೋಣಿತಂ ।
ದೋಗ್ಧಾ ರಜತನಾಭಸ್ತು ಕಪಾಲಂ ಪಾತ್ರಮೇವ ಚ ॥ ೧೦೬ ॥

ಗಂಧರ್ವಾಣಾಂ ಚಿತ್ರರಥೋ ವತ್ಸಃ ಪಾತ್ರಂ ಚ ಪಂಕಜಂ ।
ದೋಗ್ಧಾ ಚ ಸುರುಚಿಃ ಕ್ಷೀರಂ ತೇಷಾಂ ಗಂಧಃ ಶುಚಿಃ ಸ್ಮೃತಃ ॥ ೧೦೭ ॥

ಶೈಲಂ ಪಾತ್ರಂ ಪರ್ವತಾನಾಂ ಕ್ಷೀರಂ ರತ್ನೌಷಧೀಸ್ತಥಾ ।
ವತ್ಸಸ್ತು ಹಿಮವಾನಾಸೀದ್ದೋಗ್ಧಾ ಮೇರುರ್ಮಹಾಗಿರಿಃ ॥ ೧೦೮ ॥

ಪ್ಲಕ್ಷೋ ವತ್ಸಸ್ತು ವೃಕ್ಷಾಣಾಂ ದೋಗ್ಧಾ ಶಾಲಸ್ತು ಪುಷ್ಪಿತಃ ।
ಪಾಲಾಶಪಾತ್ರಂ ಕ್ಷೀರಂ ಚ ಛಿನ್ನದಗ್ಧಪ್ರರೋಹಣಂ ॥ ೧೦೯ ॥

---

೧೦೫. ಯಕ್ಷರಿಗೆ ಮಣ್ಣಿನಪಾತ್ರೆಯು. ಕುಬೇರನೇ ಕರುವಾಗಿದ್ದನು, ರಜತನಾಭನೆಂಬುವವನು ಕರೆಯುವವನಾಗಿದ್ದನು. ಅಂತರ್ಧಾನ ಎಂದರೆ ಮರೆಯಾಗುವ ವಿದ್ಯೆ ಅಥವಾ ಅಣಿಮಾ ಮೊದಲಾದ ಎಂಟು ಸಿದ್ಧಿಗಳೇ ಯಕ್ಷರು ಕರೆದುಕೊಂಡ ಹಾಲು.

೧೦೬. ರಾಕ್ಷಸರಿಗೆ ಸುಮಾಲಿ ಎಂಬುವವನು ಕರುವು. ರಕ್ತವೇ ಹಾಲು. ರಜತನಾಭನು ಕರೆಯುವವನು. ಕಪಾಲವೇ ಪಾತ್ರೆಯು.

೧೦೭. ಗಂಧರ್ವರು ಭೂಮಿಯನ್ನು ಕರೆಯುವಾಗ ಚಿತ್ರರಥನು ಕರುವಾದನು. ಕಮಲವು ಪಾತ್ರೆ. ಸುರುಚಿಯೆಂಬುವವನು ಕರೆಯುವವನು. ಸುಗಂಧವೇ ಹಾಲು.

೧೦೮. ಪರ್ವತಗಳು ಕರೆಯುವಾಗ ಬೆಟ್ಟಗಳೇ ಪಾತ್ರೆಯು. ರತ್ನಗಳು ಮತ್ತು ಓಷಧಿಲತೆಗಳು ಹಾಲು. ಹಿಮವಂತನು ಕರುವಾಗಿದ್ದನು. ಮಹಾಗಿರಿಯಾದ ಮೇರುವು ಕರೆಯುವವನಾಗಿದ್ದನು.

೧೦೯. ಮರಗಳು ಕರೆಯುವಾಗ ಅಶ್ವತ್ಥವೃಕ್ಷವು ಕರುವಾಗಿತ್ತು. ಶಾಲ [ಆಲ] ತರುವು ಕರೆಯುವುದಾಗಿತ್ತು. ಮುತ್ತುಗದ ಪಾತ್ರೆ. ಕತ್ತರಿಸಿದ ಮತ್ತು ಸುಟ್ಟುಹೋದ ಮರಗಳು ಚಿಗುರುವಂತಹ ಹಾಲು ಕರೆಯಲ್ಪಟ್ಟಿತು.

shrinath.udupa@gmail.com

ಸೇಯಂ ಧಾತ್ರೀ ವಿಧಾತ್ರೀ ಚ ಪಾವನೀ ಚ ವಸುಂಧರಾ ।
ಚರಾಚರಸ್ಯ ಸರ್ವಸ್ಯ ಪ್ರತಿಷ್ಠಾ ಯೋನಿರೇವ ಚ ॥ ೧೧೦ ॥

ಸರ್ವಕಾಮದುಘಾ ದೋಗ್ಧ್ರೀ ಸರ್ವಸಸ್ಯಪ್ರರೋಹಣೀ ।
ಆಸೀದಿಯಂ ಸಮುದ್ರಾಂತಾ ಮೇದಿನೀ ಪರಿವಿಶ್ರುತಾ ॥ ೧೧೧ ॥

ಮಧುಕೈಟಭಯೋಃ ಕೃತ್ಸ್ನಾ ಮೇದಸಾ ಸಮಭಿಪ್ಲುತಾ ।
ತೇನೇಯಂ ಮೇದಿನೀ ದೇವೀ ಉಚ್ಯತೇ ಬ್ರಹ್ಮವಾದಿಭಿಃ ॥ ೧೧೨ ॥

ತತೋಽಭ್ಯುಗಮನಾದ್ರಾಜ್ಞಃ ಪೃಥೋರ್ವೈನ್ಯಸ್ಯ ಭೋ ದ್ವಿಜಾಃ ।
ದುಹಿತೃತ್ವಮನುಪ್ರಾಪ್ತಾ ದೇವೀ ಪೃಥ್ವೀತಿ ಚೋಚ್ಯತೇ ॥ ೧೧೩ ॥

ಪೃಥುನಾ ಪ್ರವಿಭಕ್ತಾ ಚ ಶೋಧಿತಾ ಚ ವಸುಂಧರಾ ।
ಸಸ್ಯಾಕರವತೀ ಸ್ಫೀತಾ ಪುರಪತ್ತನಶಾಲಿನೀ ॥ ೧೧೪ ॥

---

೧೧೦. ಈ ಭೂಮಿಯು ಎಲ್ಲ ಜಗತ್ತನ್ನೂ ಧರಿಸುವಳು. ಸೃಷ್ಟಿಸುವಳು. ರತ್ನಗಳಿಗೆ ನಿಧಿಯು. ತುಂಬ ಪವಿತ್ರಗಳು. ಜಗತ್ತಿಗೆಲ್ಲಕ್ಕೂ ಆಶ್ರಯಳು ಮತ್ತು ಕಾರಣಳು.

೧೧೧. ನಮಗೆ ಬೇಕಾದ ವಸ್ತುಗಳನ್ನೆಲ್ಲಾ ಈ ಭೂಮಿಯು ನೀಡುವಳು. ಇವಳಲ್ಲಿ ಸಸ್ಯಗಳೆಲ್ಲವೂ ಬೆಳೆಯುವವು. ಸಮುದ್ರದವರೆಗೂ ಈ ಭೂಮಿಯು ವ್ಯಾಪಿಸಿರುವಳು.

೧೧೨. ಮಧು ಮತ್ತು ಕೈಟಭರೆಂಬ ದೈತ್ಯರ ಮೇದಸ್ಸು [ಕೊಬ್ಬು] ಗಳಿಂದ ಈ ಭೂಮಿಯು ವ್ಯಾಪಿಸಲ್ಪಟ್ಟಿರುವಳು. ಆದಕಾರಣ " ಮೇದಿನೀ " ಎಂದು ಬ್ರಹ್ಮಾದಿಗಳು ಇವಳನ್ನು ಕರೆದಿರುವರು.

೧೧೩. ಆಮೇಲೆ ಪೃಥುರಾಜನ ಅಪ್ಪಣೆಯನ್ನು ಮಗಳಂತೆ ಪಾಲಿಸಿದುದರಿಂದ ಈ ಭೂಮಿಗೆ " ಪೃಥಿವೀ " ಎಂದೂ ಹೆಸರು ಬಂದಿತು,

೧೧೪. ಪೃಥುರಾಜನು ಈ ಭೂಮಿಯನ್ನು ಶೋಧಿಸಿ ಜನಗಳಿಗೆ ಬೇಕಾದ ವಸ್ತುಗಳು ಲಭಿಸುವಂತೆ ಮಾಡಿದನು. ವಿಭಾಗಿಸಿ ಸರಿಮಾಡಿ ನಗರಗ್ರಾಮಗಳು ಆಗುವಂತೆ ಮಾಡಿದನು. ಮತ್ತು ಈ ಭೂಮಿಯು ಸಸ್ಯ ಮರಗಳಿಂದಲೂ, ನಗರ ಪಟ್ಟಣಗಳಿಂದಲೂ, ಕೂಡಿದ್ದಿತು.

shrinath.udupa@gmail.com

ಏವಂ ಪ್ರಭಾವೋ ವೈನ್ಯಃ ಸ ರಾಜಾಽಽಸೀದ್ರಾಜಸತ್ತಮಃ ।
ನಮಸ್ಯಶ್ಚೈವ ಪೂಜ್ಯಶ್ಚ ಭೂತಗ್ರಾಮೈರ್ನ ಸಂಶಯಃ ॥ ೧೧೫ ॥

ಬ್ರಾಹ್ಮಣೈಶ್ಚ ಮಹಾಭಾಗೈರ್ವೇದವೇದಾಂಗಪಾರಗೈಃ ।
ಪೃಥುರೇವ ನಮಸ್ಕಾರ್ಯೋ ಬ್ರಹ್ಮಯೋನಿಃ ಸನಾತನಃ ॥ ೧೧೬ ॥

ಪಾರ್ಥಿವೈಶ್ಚ ಮಹಾಭಾಗೈಃ ಪಾರ್ಥಿವತ್ವಮಿಹೇಚ್ಛುಭಿಃ ।
ಆದಿರಾಜೋ ನಮಸ್ಕಾರ್ಯಃ ಪೃಥುರ್ವೈನ್ಯಃ ಪ್ರತಾಪವಾನ್ ॥ ೧೧೭ ॥

ಯೋಧೈರಪಿ ಚ ವಿಕ್ರಾಂತೈಃ ಪ್ರಾಪ್ತುಕಾಮೈರ್ಜಯಂ ಯುಧಿ ।
ಆದಿರಾಜೋ ನಮಸ್ಕಾರ್ಯೋ ಯೋಧಾನಾಂ ಪ್ರಥಮೋ ನೃಪಃ ॥ ೧೧೮ ॥

ಯೋ ಹಿ ಯೋದ್ಧಾ ರಣಂ ಯಾತಿ ಕೀರ್ತಯಿತ್ವಾ ಪೃಥುಂ ನೃಪಂ ।
ಸ ಘೋರರೂಪಾತ್ಸಂಗ್ರಾಮಾತ್ಕ್ಷೇಮೀ ಭವತಿ ಕೀರ್ತಿಮಾನ್ ॥ ೧೧೯ ॥

---

೧೧೫. ಹೀಗೆ ಪೃಥುಚಕ್ರವರ್ತಿಯು ಇಂತಹ ಮಹಿಮೆಯುಳ್ಳವನಾಗಿದ್ದನು. ಪ್ರಾಣಿಗಳಿಂದ ನಿತ್ಯವೂ ನಮಸ್ಕರಿಸಲೂ, ಪೂಜಿಸಲೂ ಯೋಗ್ಯನಾಗಿದ್ದನು.

೧೧೬. ಬಹ್ಮರ್ಷಿಗಳ ಮಹಿಮೆಯಿಂದ ಜನಿಸಿದ ಆ ಪೃಥುಚಕ್ರವರ್ತಿಯು ವೇದ ಮತ್ತು ವೇದಾಂಗಗಳಲ್ಲಿ ಪಂಡಿತರಾದ ಬಾಹ್ಮಣರಿಂದಲೂ ನಮಸ್ಕರಿಸಲ್ಪಡಲು ಯೋಗ್ಯನಾಗಿದ್ದನು.

೧೧೭. ರಾಜ್ಯವು ಸ್ಥಿರವಾಗಿ ಉಳಿಯಬೇಕೆನ್ನುವ ರಾಜರೂ ಮುಂದೆ ರಾಜತ್ವವನ್ನು ಬಯಸುವ ರಾಜರೂ ಸಹ ಮೊದಲನೆಯ ರಾಜನೂ ಪ್ರತಾಪಿಯೂ ಆದ ಪೃಥುಚಕ್ರವರ್ತಿಯನ್ನು ನಮಸ್ಕರಿಸಬೇಕು.

೧೧೮. ಯುದ್ಧದಲ್ಲಿ ಜಯಪಡೆಯಬೇಕೆನ್ನುವ ವೀರಭಟರೂ ಸಹ ಆದಿ ರಾಜನಾದ ಆ ಪೃಥುವನ್ನು ನಮಸ್ಕರಿಸಬೇಕು. ಆ ಪೃಥುವು ವೀರಯೋಧರಲ್ಲಿ ಮೊದಲನೆಯವನು.

೧೧೯. ವೀರಯೋಧನು ರಣಕ್ಕೆ ತೆರಳುವಾಗ ಪೃಥುಚಕ್ರವರ್ತಿಯನ್ನು ಭಕ್ತಿಯಿಂದ ಧ್ಯಾನಿಸಿ ತೆರಳಿದರೆ ಆ ಯುದ್ಧದಲ್ಲಿ ಅಪಾಯವೇನೂ ಆಗಲಾರದು. ಜಯವೂ, ಕೀರ್ತಿಯೂ, ಲಭಿಸುವುದು.

shrinath.udupa@gmail.com

ವೈಶ್ಯೈರಪಿ ಚ ವಿತ್ತಾಢ್ಯೈರ್ವೈಶ್ಯವೃತ್ತಿವಿಧಾಯಿಭಿಃ ।
ಪೃಥುರೇವ ನಮಸ್ಕಾರ್ಯೋ ವೃತ್ತಿದಾತಾ ಮಹಾಯಶಾಃ ॥ ೧೨೦ ॥

ತಥೈವ ಶೂದ್ರೈಃ ಶುಚಿಭಿಸ್ತ್ರಿವರ್ಣಪರಿಚಾರಿಭಿಃ ।
ಪೃಥುರೇವ ನಮಸ್ಕಾರ್ಯಃ ಶ್ರೇಯಃ ಪರಮಿಹೇಪ್ಸುಭಿಃ ॥ ೧೨೧ ॥

ಏತೇ ವತ್ಸವಿಶೇಷಾಶ್ಚ ದೋಗ್ಧಾರಃ ಕ್ಷೀರಮೇವ ಚ ।
ಪಾತ್ರಾಣಿ ಚ ಮಯೋಕ್ತಾನಿ ಕಿಂ ಭೂಯೋ ವರ್ಣಯಾಮಿ ವಃ ॥ ೧೨೨ ॥

ಇತಿ ಶ್ರೀ ಮಹಾಪುರಾಣೇ ಬ್ರಾಹ್ಮೇ ಪೃಥೋರ್ಜನ್ಮಮಾಹಾತ್ಮ್ಯ
ಕಥನಂ ನಾಮ ಚತುರ್ಥೋಽಧ್ಯಾಯಃ

---

೧೨೦. ಧನಿಕರೂ ವ್ಯಾಪಾರಗಾರರೂ ಆದ ವೈಶ್ಯರು ಆ ಪೃಥುವನ್ನು ನಮಸ್ಕರಿಸಬೇಕು. ಮೊದಮೊದಲು ಆ ರಾಜನೇ ವೃತ್ತಿ, ವ್ಯಾಪಾರವನ್ನು ಕಲ್ಪಿಸಿದವನು.

೧೨೧. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣದವರನ್ನು ಸೇವಿಸುವ ಶೂದ್ರರೂ ಸಹ ಪೃಥುಚಕ್ರವರ್ತಿಯನ್ನು ನಮಸ್ಕರಿಸಬೇಕು. ಅದರಿಂದ ಅವರಿಗೆ ಶ್ರೇಯಸ್ಸಾಗುವುದು.

೧೨೨. ಎಲೈ ಬ್ರಾಹ್ಮಣೋತ್ತಮರೇ ಹೀಗೆ ಹಸುವಿನ ರೂಪವನ್ನು ಧರಿಸಿದ ಭೂಮಿಯನ್ನು ಕರೆಯುವಾಗ ಜನಗಳು ಮಾಡಿಕೊಂಡ ಕರುಗಳನ್ನೂ, ಕರೆಯುವವರನ್ನೂ, ಕರೆದ ಹಾಲನ್ನೂ, ಪಾತ್ರೆಗಳನ್ನೂ ಹೇಳಿರುತ್ತೇನೆ. ಮುಂದೆ ಮತ್ತೇನನ್ನು ಹೇಳಲಿ? ಎಂದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಪೃಥುರಾಜನ ಜನ್ಮಕಥನವೆಂಬ
ನಾಲ್ಕನೆಯ ಅಧ್ಯಾಯವು ಮುಗಿದುದು.

shrinath.udupa@gmail.com

॥ ಶ್ರೀಃ ॥

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚಮೋಽಧ್ಯಾಯಃ

॥ ಋಷಯ ಊಚುಃ ॥

ಮನ್ವಂತರಾಣಿ ಸರ್ವಾಣಿ ವಿಸ್ತರೇಣ ಮಹಾಮತೇ ।
ತೇಷಾಂ ಪೂರ್ವವಿಸೃಷ್ಟಿಂ ಚ ಲೋಮಹರ್ಷಣ ಕೀರ್ತಯ ॥ ೧ ॥

ಯಾವಂತೋ ಮನವಶ್ಚೈವ ಯಾವಂತಂ ಕಾಲಮೇವ ಚ ।
ಮನ್ವಂತರಾಣಿ ಭೋಃ ಸೂತ ಶ್ರೋತಮಿಚ್ಛಾಮ ತತ್ತ್ವತಃ ॥ ೨ ॥

ಐದನೆಯ ಅಧ್ಯಾಯವು

೧. ಋಷಿಗಳು ಕೇಳಿದರು:— ಬುದ್ಧಿಶಾಲಿಯಾದ ಓ ಲೋಮಹರ್ಷಣ ಮುನಿ, ಈಗ ನೀನು ಮನ್ವಂತರಗಳೆಲ್ಲವನ್ನೂ ಅವುಗಳ ಹಿಂದಿನ ಸೃಷ್ಟಿಯನ್ನೂ ವಿಸ್ತರಿಸಿ ಹೇಳಬೇಕು.

೨. ಮನುಗಳೆಷ್ಟು? ಒಂದೊಂದು ಮನ್ವಂತರಗಳ ಕಾಲವೆಷ್ಟು? ಇವೆಲ್ಲವನ್ನೂ ಕೇಳಲಿಚ್ಛಿಸುವೆವು ಹೇಳಬೇಕು ಎನ್ನಲು

shrinath.udupa@gmail.com

॥ ಲೋಮಹರ್ಷಣ ಉವಾಚ ॥

ನ ಶಕ್ಯೋ ವಿಸ್ತರೋ ವಿಪ್ರಾ ವಕ್ತುಂ ವರ್ಷಶತೈರಪಿ ।
ಮನ್ವಂತರಾಣಾಂ ಸರ್ವೇಷಾಂ ಸಂಕ್ಷೇಪಾಚ್ಛೃಣುತ ದ್ವಿಜಾಃ ॥ ೩ ॥

ಸ್ವಾಯಂಭುವೋ ಮನುಃ ಪೂರ್ವಂ ಮನುಃ ಸ್ವಾರೋಚಿಷಸ್ತಥಾ ।
ಉತ್ತಮಸ್ತಾಮಸಶ್ಚೈವ ರೈವತಶ್ಚಾಕ್ಷುಷಸ್ತಥಾ ॥ ೪ ॥

ವೈವಸ್ವತಶ್ಚ ಭೋ ವಿಪ್ರಾಃ ಸಾಂಪ್ರತಂ ಮನುರುಚ್ಯತೇ ।
ಸಾವರ್ಣಿಶ್ಚ ಮನುಸ್ತದ್ವದ್ರೈಭ್ಯೋ ರೌಚ್ಯಸ್ತಥೈವ ಚ ॥ ೫ ॥

ತಥೈವ ಮೇರುಸಾವರ್ಣ್ಯಶ್ಚತ್ವಾರೋ ಮನವಃ ಸ್ಮೃತಾಃ ।
ಅತೀತಾ ವರ್ತಮಾನಾಶ್ಚ ತಥೈವಾನಾಗತಾ ದ್ವಿಜಾಃ ॥ ೬ ॥

ಕೀರ್ತಿಕಾ ಮನವಸ್ತುಭ್ಯಂ ಮಯೈವೈತೇ ಯಥಾ ಶ್ರುತಾಃ ।
ಋಷೀಂಸ್ತೇಷಾಂ ಪ್ರವಕ್ಷ್ಯಾಮಿ ಪುತ್ರಾನ್ದೇವಗಣಾಂಸ್ತಥಾ ॥ ೭ ॥

---

೩. ಲೋಮಹರ್ಷಣಮುನಿಯು ಹೇಳಿದನು:—ಎಲೈ ಮುನಿಗಳೇ, ಮನ್ವಂತರಗಳೆಲ್ಲವನ್ನೂ ವಿಸ್ತಾರವಾಗಿ ವರ್ಣಿಸಲು ನೂರು ವರ್ಷಗಳಾದರೂ ಸಾಲದು. ಆದುದರಿಂದ ಸಂಕ್ಷೇಪವಾಗಿ ಹೇಳುವೆನು ಕೇಳಿರಿ.

೪. ಸ್ವಾಯಂಭುವಮನುವು ಮೊದಲನೆಯವನು. ಆಮೇಲೆ ಸ್ವಾರೋಚಿಷಮನು, ಉತ್ತಮಮನುವು, ತಾಮಸಮನು, ರೈವತಮನು, ಚಾಕ್ಷುಷಮನುಗಳು ಕ್ರಮವಾಗಿ ಬರುವರು.

೫–೬. ವೈವಸ್ವತಮನ್ವಂತರವು ಈಗ ನಡೆಯುತ್ತಿರುವುದು. ಮುಂದೆ ಸಾವರ್ಣಿಮನು, ಸೂರ್ಯಸಾವರ್ಣಿ, ದಕ್ಷಸಾವರ್ಣಿ, ಮೇರುಸಾವರ್ಣಿ, ರುದ್ರಸಾವರ್ಣಿಗಳೆಂಬ ಮನ್ವಂತರಗಳು ಬರುವವು ಹೀಗೆ ಹದಿನಾಲ್ಕು [೧೪] ಮನುಗಳು

೭. ಎಲೈ ಋಷಿಗಳೇ, ನಾನು ತಿಳಿದಿರುವಂತೆ ಮನುಗಳನ್ನು ಹೇಳಿರುವೆನು. ಈಗ ಆ ಮನುಗಳ ಪುತ್ರರನ್ನೂ, ಮನ್ವಂತರದ ಋಷಿಗಳನ್ನೂ, ದೇವತೆಗಳನ್ನೂ, ಹೇಳುವೆನು.

shrinath.udupa@gmail.com

ಮರೀಚಿರತ್ರಿರ್ಭಗವಾನಂಗಿರಾಃ ಪುಲಹಃ ಕ್ರತುಃ ।
ಪುಲಸ್ತ್ಯಶ್ಚ ವಸಿಷ್ಠಶ್ಚ ಸಪ್ತೈತೇ ಬ್ರಹ್ಮಣಃ ಸುತಾಃ ॥ ೮ ॥

ಉತ್ತರಸ್ಯಾಂ ದಿಶಿ ತಥಾ ದ್ವಿಜಾಃ ಸಪ್ತರ್ಷಯಸ್ತಥಾ ।
ಆಗ್ನೀಧ್ರಶ್ಚಾಗ್ನಿಬಾಹುಶ್ಚ ಮೇಧ್ಯೋ ಮೇಧಾತಿಥಿರ್ವಸುಃ ॥ ೯ ॥

ಜ್ಯೋತಿಷ್ಮಾನ್ ದ್ಯುತಿಮಾನ್ ಹವ್ಯಃ ಸವಲಃ ಪುತ್ರಸಂಜ್ಞಕಃ ।
ಮನೋಃ ಸ್ವಾಯಂಭುವಸ್ಯೈತೇ ದಶ ಪುತ್ರಾ ಮಹೌಜಸಃ ॥ ೧೦ ॥

ಏತದ್ವೈ ಪ್ರಥಮಂ ವಿಪ್ರಾ ಮನ್ವಂತರಮುದಾಹೃತಂ ।
ಔರ್ವೋ ವಸಿಷ್ಠಪುತ್ರಶ್ಚ ಸ್ತಂಬಃ ಕಶ್ಯಪ ಏವ ಚ ॥ ೧೧ ॥

ಪ್ರಾಣೋ ಬೃಹಸ್ಪತಿಶ್ಚೈವ ದತ್ತೋಽತ್ರಿಶ್ಚ್ಯವನಸ್ತಥಾ ।
ಏತೇ ಮಹರ್ಷಯೋ ವಿಪ್ರಾ ವಾಯುಪ್ರೋಕ್ತಾ ಮಹಾವ್ರತಾಃ ॥ ೧೨ ॥

ದೇವಾಶ್ಚ ತುಷಿತಾ ನಾಮ ಸ್ಮೃತಾಃ ಸ್ವಾರೋಚಿಷೇಽಂತರೇ ।
ಹವಿಷ್ಮಾನ್ ಸುಕೃತಿರ್ಜ್ಯೋತಿರಾಪೋ ಮೂರ್ತಿರಪಿ ಸ್ಮೃತಃ ॥ ೧೩ ॥

---

೮. ಮರೀಚಿಮುನಿ, ಅತ್ರಿಮುನಿ, ಅಂಗಿರಸ್ಸು, ಪುಲಹ, ಕ್ರತುಮುನಿ, ಪುಲಸ್ತ್ಯ, ವಸಿಷ್ಠಋಷಿ, ಈ ಏಳುಜನಗಳು ಬ್ರಹ್ಮನ ಮಾನಸಪುತ್ರರು.

೯–೧೦. ಉತ್ತರದಿಕ್ಕಿನಲ್ಲಿಯೂ ಹೀಗೆಯೇ ಸಪ್ತರ್ಷಿಗಳಿರುವರು. ಆಗ್ನೀಧ್ರ ಅಗ್ನಿಬಾಹು, ಮೇಧ್ಯ, ಮೇಧಾತಿಥಿ, ವಸು, ಜ್ಯೋತಿಷ್ಮಾನ್, ದ್ಯುತಿಮಾನ್, ಹವ್ಯ, ಸಬಲ, ಪುತ್ರ, ಈ ಹತ್ತು ಜನಗಳು ಸ್ವಾಯಂಭುವಮನುವಿನ ಮಕ್ಕಳು.

೧೧–೧೨. ಈ ಸ್ವಾಯಂಭುವ ಮನ್ವಂತರವೇ ಮೊದಲನೆಯದು. ಔರ್ವ ಮುನಿ, ವಸಿಷ್ಠನ ಮಕ್ಕಳು, ಸ್ತಂಬಋಷಿ, ಕಶ್ಯಪ, ಪ್ರಾಣಋಷಿ, ಬೃಹಸ್ಪತಿ, ದತ್ತಾತ್ರೇಯ, ಅತ್ರಿ, ಚ್ಯವನ ಈ ಮಹರ್ಷಿಗಳು ಸ್ವಾರೋಚಿಷಮನ್ವಂತರದವರು. ಇವರ ಮಹಿಮೆಯು ವಾಯುಪುರಾಣದಲ್ಲಿ ವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ.

೧೩-೧೪. ತುಷಿತರೆಂಬ ದೇವತೆಗಳು ಸ್ವಾರೋಚಿಷಮನ್ವಂತರದವರು,

shrinath.udupa@gmail.com

ಪ್ರತೀತಶ್ಚ ನಭಸ್ಯಶ್ಚ ನಭ ಊರ್ಜಸ್ತಥೈವ ಚ ।
ಸ್ವಾರೋಚಿಷಸ್ಯ ಪುತ್ರಾಸ್ತೇ ಮನೋರ್ವಿಪ್ರಾ ಮಹಾತ್ಮನಃ ॥ ೧೪ ॥

ಕೀರ್ತಿತಾಃ ಪೃಥಿವೀಪಾಲಾ ಮಹಾವೀರ್ಯಪರಾಕ್ರಮಾಃ ।
ದ್ವಿತೀಯಮೇತತ್ಕಥಿತಂ ವಿಪ್ರಾ ಮನ್ವಂತರಂ ಮಯಾ ॥ ೧೫ ॥

ಇದಂ ತೃತೀಯಂ ವಕ್ಷ್ಯಾಮಿ ತದ್ಬುಧ್ಯಧ್ವಂ ದ್ವಿಜೋತ್ತಮಾಃ ।
ವಸಿಷ್ಠಪುತ್ರಾಃ ಸಪ್ತಾಽಽಸನ್ವಾಸಿಷ್ಠಾ ಇತಿ ವಿಶ್ರುತಾಃ ॥ ೧೬ ॥

ಹಿರಣ್ಯಗರ್ಭಸ್ಯ ಸುತಾ ಊರ್ಜಾ ಜಾತಾಃ ಸುತೇಜಸಃ ।
ಋಷಯೋಽತ್ರ ಮಯಾ ಪ್ರೋಕ್ತಾಃ ಕೀರ್ತ್ಯಮಾನಾನ್ನಿಬೋಧತ ॥ ೧೭ ॥

ಔತ್ತಮೇಯಾನ್ಮುನಿಶ್ರೇಷ್ಠಾ ದಶ ಪುತ್ರಾನ್ಮನೋರಿಮಾನ್ ।
ಇಷ ಊರ್ಜಸ್ತನೂರ್ಜಸ್ತು ಮಧುರ್ಮಾಧವ ಏವ ಚ ॥ ೧೮ ॥

ಶುಚಿಃ ಶುಕ್ರಃ ಸಹಶ್ಚೈವ ನಭಸ್ಯೋ ನಭ ಏವ ಚ ।
ಭಾನವಸ್ತತ್ರ ದೇವಾಶ್ಚ ಮನ್ವಂತರಮುದಾಹೃತಂ ॥ ೧೯ ॥

ಹವಿಷ್ಮ, ಸುಕೃತಿ, ಜ್ಯೋತಿಸ್ಸು, ಆಪದೇವ, ಮೂರ್ತಿ, ಪ್ರತೀತ, ನಭಸ್ಯ, ನಭಸ್ಸು, ಊರ್ಜ ಇವರು ಸ್ವಾರೋಚಿಷಮನುವಿನ ಮಕ್ಕಳು.

೧೫. ಇವರೆಲ್ಲರೂ ಮಹಾಪರಾಕ್ರಮಿಗಳಾದ ರಾಜರಾಗಿದ್ದರು. ಈ ಸ್ವಾರೋಚಿಷಮನ್ವಂತರವು ಎರಡನೆಯ ಮನ್ವಂತರವು.

೧೬. ಈಗ ಮೂರನೆಯ ಉತ್ತಮಮನ್ವಂತರವನ್ನು ಹೇಳುವೆನು. ಈ ಮನ್ವಂತರದಲ್ಲಿ ವಸಿಷ್ಠ ಋಷಿಯ ಮಕ್ಕಳಾದ ವಾಸಿಷ್ಠರೆಂಬ ಮಹರ್ಷಿಗಳಿದ್ದರು.

೧೭. ಮತ್ತು ಈ ಮನ್ವಂತರದಲ್ಲಿ ಬ್ರಹ್ಮನ ಮಕ್ಕಳಾದ "ಊರ್ಜ" ರೆಂಬ ತೇಜಸ್ವಿಗಳಾದ ಋಷಿಗಳೂ ಇದ್ದರು.

೧೮-೧೯. ಇಷ, ಊರ್ಜ, ತನೂರ್ಜ, ಮಧು, ಮಾಧವ, ಶುಚಿ, ಶುಕ್ರ, ಸಹ, ನಭಸ್ಯ, ನಭ ಈ ಹತ್ತುಜನಗಳು ಉತ್ತಮಮನುವಿನ ಪುತ್ರರು. ಭಾನು [ಆದಿತ್ಯರು] ಗಳು ಈ ಮನ್ವಂತರದ ದೇವತೆಗಳು. ಹೀಗೆ ಉತ್ತಮಮನ್ವಂತರವನ್ನು ಹೇಳಿರುವೆನು.

shrinath.udupa@gmail.com

ಮನ್ವಂತರಂ ಚತುರ್ಥಂ ವಃ ಕಥಯಿಷ್ಯಾಮಿ ಸಾಂಪ್ರತಂ ।
ಕಾವ್ಯಃ ಪೃಥುಸ್ತಥೈವಾಗ್ನಿರ್ಜಹ್ನುರ್ಧಾತಾ ದ್ವಿಜೋತ್ತಮಾಃ ॥ ೨೦ ॥

ಕಪೀವಾನಕಪೀವಾಂಶ್ಚ ತತ್ರ ಸಪ್ತರ್ಷಯೋ ದ್ವಿಜಾಃ ।
ಪುರಾಣೇ ಕೀರ್ತಿತಾ ವಿಪ್ರಾಃ ಪುತ್ರಾಃ ಪೌತ್ರಾಶ್ಚ ಭೋ ದ್ವಿಜಾಃ ॥ ೨೧ ॥

ತಥಾ ದೇವಗಣಾಶ್ಚೈವ ತಾಮಸಸ್ಯಾಂತರೇ ಮನೋಃ ।
ದ್ಯುತಿಸ್ತಪಸ್ಯಃ ಸುತಪಾಸ್ತಪೋಭೂತಃ ಸನಾತನಃ ॥ ೨೨ ॥

ತಪೋರತಿರಕಲ್ಮಾಷಸ್ತನ್ವೀ ಧನ್ವೀ ಪರಂತಪಃ ।
ತಾಮಸಸ್ಯ ಮನೋರೇತೇ ದಶ ಪುತ್ರಾಃ ಪ್ರಕೀರ್ತಿತಾಃ ॥ ೨೩ ॥

ವಾಯುಪ್ರೋಕ್ತಾ ಮುನಿಶ್ರೇಷ್ಠಾಶ್ಚತುರ್ಥಂ ಚೈತದಂತರಂ ।
ದೇವಬಾಹುರ್ಯದುಧ್ರಶ್ಚ ಮುನಿರ್ವೇದಶಿರಾಸ್ತಥಾ ॥ ೨೪ ॥

---

೨೦. ಈಗ ನಾಲ್ಕನೆಯ ತಾಮಸಮನ್ವಂತರವನ್ನು ವರ್ಣಿಸುವೆನು. ಕಾವ್ಯ, ಪೃಥು, ಅಗ್ನಿ, ಜಹ್ನು, ಧಾತೃ, ಕಪೀವಾನ್, ಅಕಪೀವಾನ್, ಎಂಬ ಏಳುಜನ ಋಷಿಗಳು ನಾಲ್ಕನೆಯ ಮನ್ವಂತರದವರು.

೨೧. ನಾಲ್ಕನೆಯ ಮನುವಿನ ಪುತ್ರರು ಮತ್ತು ಪೌತ್ರ [ಮೊಮ್ಮಕ್ಕಳು] ರನ್ನು ಮಿಕ್ಕ ಪುರಾಣಗಳಲ್ಲಿ ವಿಶದವಾಗಿ ವರ್ಣಿಸಿರುತ್ತೆ. ತಾಮಸಮನ್ವಂತರದ ದೇವತೆಗಳನ್ನೂ ಆ ಪುರಾಣಗಳಲ್ಲಿ ವರ್ಣಿಸಿರುತ್ತೆ.

೨೨-೨೩. ದ್ಯುತಿ, ತಪಸ್ಯ, ಸುತಪ, ತಪೋಭೂತ, ಸನಾತನ, ತಪೋರತಿ, ಅಕಲ್ಮಾಷ, ತನ್ವಿ, ಧನ್ವಿ, ಪರಂತಪ ಈ ಹತ್ತುಜನಗಳು ತಾಮಸಮನುವಿನ ಮಕ್ಕಳು. ಈ ನಾಲ್ಕನೆಯ ಮನ್ವಂತರವನ್ನು ವಾಯುಪುರಾಣದಲ್ಲಿ ವಿಸ್ತಾರವಾಗಿ ವರ್ಣಿಸಿರುತ್ತೆ.

೨೪-೨೫. ದೇವಬಾಹು, ಯದುಧ್ರ, ವೇದಶಿರಸ್ಸು, ಹಿರಣ್ಯರೋಮ,

shrinath.udupa@gmail.com

ಹಿರಣ್ಯರೋಮಾ ಪರ್ಜನ್ಯ ಊರ್ಧ್ವಬಾಹುಶ್ಚ ಸೋಮಜಃ ।
ಸತ್ಯನೇತ್ರಸ್ತಥಾಽಽತ್ರೇಯ ಏತೇ ಸಪ್ತರ್ಷಯೋಽಪರೇ ॥ ೨೫ ॥

ದೇವಾಶ್ಚಾಭೂತರಜಸಸ್ತಥಾ ಪ್ರಕೃತಯಃ ಸ್ಮೃತಾಃ ।
ವಾರಿಪ್ಲವಶ್ಚ ರೈಭ್ಯಶ್ಚ ಮನೋರಂತರಮುಚ್ಯತೇ ॥ ೨೬ ॥

ಅಥ ಪುತ್ರಾನಿಮಾಂಸ್ತಸ್ಯ ಬುಧ್ಯಧ್ವಂ ಗದತೋ ಮಮ ।
ಧೃತಿಮಾನವ್ಯಯೋ ಯುಕ್ತಸ್ತತ್ತ್ವದರ್ಶೀ ನಿರುತ್ಸುಕಃ ॥ ೨೭ ॥

ಆರಣ್ಯಶ್ಚ ಪ್ರಕಾಶಶ್ಚ ನಿರ್ಮೋಹಃ ಸತ್ಯವಾಕ್ಕೃತೀ ।
ರೈವತಸ್ಯ ಮನೋಃ ಪುತ್ರಾಃ ಪಂಚಮಂ ಚೈತದಂತರಂ ॥ ೨೮ ॥

ಷಷ್ಠಂ ತು ಸಂಪ್ರವಕ್ಷ್ಯಾಮಿ ತದ್ಬುಧ್ಯಧ್ವಂ ದ್ವಿಜೋತ್ತಮಾಃ ।
ಭೃಗುರ್ನಭೋ ವಿವಸ್ವಾಂಶ್ಚ ಸುಧಾಮಾ ವಿರಜಾಸ್ತಥಾ ॥ ೨೯ ॥

ಪರ್ಜನ್ಯ, ಊರ್ಧ್ವಬಾಹು, ಸತ್ಯನೇತ್ರ ಈ ಏಳುಜನ ಋಷಿಗಳು ಐದನೆಯ ಮನ್ವಂತರದವರು.

೨೬. ಭೂತರಜಸ್ಸುಗಳೆಂಬುವವರು ಐದನೇ ಮನ್ವಂತರದ ದೇವತೆಗಳು. ಪ್ರಕೃತಿ [ಮಾತೃಕೆಯರು] ಗಳೂ ಆ ಮನ್ವಂತರದ ದೇವಿಯರು. ಪಾರಿಪ್ಲವಮುನಿ, ರೈಭ್ಯರೆಂಬುವವರು ಪ್ರಸಿದ್ಧರಾದ ಮುನಿಗಳು.

೨೭-೨೮. ಈಗ ಐದನೆಯ ಮನುವಿನ ಮಕ್ಕಳನ್ನು ಹೇಳುವೆನು. ಧೃತಿಮಾ, ಅವ್ಯಯ, ಯುಕ್ತಃ, ತತ್ವದರ್ಶೀ, ನಿರುತ್ಸಕಃ, ಆರಣ್ಯ, ಪ್ರಕಾಶ, ನಿರ್ಮೋಹ, ಸತ್ಯವಾಕ್ಕು, ಕೃತಿ ಈ ಹತ್ತುಜನಗಳು ರೈವತಮನುವಿನ ಮಕ್ಕಳು, ಈ ರೈವತಮನ್ವಂತರವೇ ಐದನೆಯ ಮನ್ವಂತರವು.

೨೯. ಈಗ ಆರನೆಯ ಮನ್ವಂತರವನ್ನು ವರ್ಣಿಸುವೆನು. ಭೃಗುಮುನಿ, ನಭಮುನಿ, ವಿವಸ್ವಾಮುನಿ, ಸುಧಾಮಮುನಿ, ವಿರಜಮುನಿ, ಅತಿನಾಮ, ಸಹಿಷ್ಣು ಮುನಿ ಈ ಏಳು ಜನಗಳು ಆರನೆಯ ಮನ್ವಂತರದ ಋಷಿಗಳು.

shrinath.udupa@gmail.com

ಅತಿನಾಮಾ ಸಹಿಷ್ಣುಶ್ಚ ಸಪ್ತೈತೇ ಚ ಮಹರ್ಷಯಃ ।
ಚಾಕ್ಷುಷಸ್ಯಾಂತರೇ ವಿಪ್ರಾ ಮನೋರ್ದೇವಾಸ್ತ್ವಿಮೇ ಸ್ಮೃತಾಃ ॥ ೩೦ ॥

ಆಬಾಲಪ್ರಥಿತಾಸ್ತೇ ವೈ ಪೃಥಕ್ತ್ವೇನ ದಿವೌಕಸಃ ।
ಲೇಖಾಶ್ಚ ನಾಮತೋ ವಿಪ್ರಾಃ ಪಂಚ ದೇವಗಣಾಃ ಸ್ಮೃತಾಃ ॥ ೩೧ ॥

ಋಷೇರಂಗಿರಸಃ ಪುತ್ರಾ ಮಹಾತ್ಮಾನೋ ಮಹೌಜಸಃ ।
ನಾಡ್ವಲೇಯಾ ಮುನಿಶ್ರೇಷ್ಠಾ ದಶ ಪುತ್ರಾಸ್ತು ವಿಶ್ರುತಾಃ ॥ ೩೨ ॥

ರುರುಪ್ರಭೃತಯೋ ವಿಪ್ರಾಶ್ಚಾಕ್ಷುಷಸ್ಯಾಂತರೇ ಮನೋಃ ।
ಷಷ್ಠಂ ಮನ್ವಂತರಂ ಪ್ರೋಕ್ತಂ ಸಪ್ತಮಂ ತು ನಿಬೋಧತ ॥ ೩೩ ॥

ಅತ್ರಿರ್ವಸಿಷ್ಠೋ ಭಗವಾನ್ಕಶ್ಯಪಶ್ಚ ಮಹಾನೃಷಿಃ ।
ಗೌತಮೋಽಥ ಭರದ್ವಾಜೋ ವಿಶ್ವಾಮಿತ್ರಸ್ತಥೈವ ಚ ॥ ೩೪ ॥

ತಥೈವ ಪುತ್ರೋ ಭಗವಾನೃಚೀಕಸ್ಯ ಮಹಾತ್ಮನಃ ।
ಸಪ್ತಮೋ ಜಮದಗ್ನಿಶ್ಚ ಋಷಯಃ ಸಾಂಪ್ರತಂ ದಿವಿ ॥ ೩೫ ॥

೩೦-೩೧. ಆರನೆಯದಾದ ಚಾಕ್ಷುಷಮನ್ವಂತರದ ದೇವತೆಗಳಾದ ಇಂದ್ರನೇ ಮೊದಲಾದವರು ಎಲ್ಲರಿಗೂ ತಿಳಿದಿರುವರು, ಅಲ್ಲದೇ " ಲೇಖ " ರೆಂದು ಪ್ರಸಿದ್ಧರಾದ ಐದು ದೇವಗಣಗಳೂ ಇರುವರು.

೩೨-೩೩. ಅಂಗೀರಸಋಷಿಯ ಮಕ್ಕಳಾದ " ನಾಡ್ವಲೇಯ " ರೆಂಬ ಹೆಸರುಳ್ಳ ಮಹಾತಪಸ್ವಿಗಳಾದ ಮುನಿಗಳೂ ಆರನೇ ಮನ್ವಂತರದವರು. ಮತ್ತು " ರುರು ಕುಮಾರ " ಮೊದಲಾದ ಹತ್ತು ಜನಗಳು ಚಾಕ್ಷುಷಮನುವಿನ ಮಕ್ಕಳು. ಚಾಕ್ಷುಷ ಮನ್ವಂತರವೇ ಆರನೆಯ ಮನ್ವಂತರವು. ಇನ್ನು ಏಳನೆಯ ಮನ್ವಂತರವನ್ನು ವರ್ಣಿಸುವೆನು.

೩೪-೩೫. ಅತ್ರಿಮುನಿ ಭಗವಾನ್‌ವಸಿಷ್ಠ ಕಶ್ಯಪಮಹರ್ಷಿ ಗೌತಮಋಷಿ ಭರದ್ವಾಜಮುನಿ ವಿಶ್ವಾಮಿತ್ರಋಷಿ ಋಚೀಕಮುನಿಯ ಮಗನಾದ ಜಮದಗ್ನಿ ಈ ಸಪ್ತ [ಏಳು] ಋಷಿಗಳು ಏಳನೆಯ ವೈವಸ್ವತಮನ್ವಂತರದವರು. ಈ ಋಷಿಗಳು ಈಗ ಗಗನದಲ್ಲಿ ನಕ್ಷತ್ರರೂಪದಿಂದ ಕಾಣಿಸುತ್ತಲಿರುವರು.

shrinath.udupa@gmail.com

ಸಾಧ್ಯಾ ರುದ್ರಾಶ್ಚ ವಿಶ್ವೇ ಚ ವಸವೋ ಮರುತಸ್ತಥಾ ।
ಆದಿತ್ಯಾಶ್ಚಾಶ್ವಿನೌ ಚಾಪಿ ದೇವೌ ವೈವಸ್ವತೌ ಸ್ಮೃತೌ ॥ ೩೬ ॥

ಮನೋರ್ವೈವಸ್ವತಸ್ಯೈತೇ ವರ್ತಂತೇ ಸಾಂಪ್ರತೇಽಂತರೇ ।
ಇಕ್ಷ್ವಾಕುಪ್ರಮುಖಾಶ್ಚೈವ ದಶ ಪುತ್ರಾ ಮಹಾತ್ಮನಃ ॥ ೩೭ ॥

ಏತೇಷಾಂ ಕೀರ್ತಿತಾನಾಂ ತು ಮಹರ್ಷೀಣಾಂ ಮಹೌಜಸಾಂ ।
ತೇಷಾಂ ಪುತ್ರಾಶ್ಚ ಪೌತ್ರಾಶ್ಚ ದಿಕ್ಷು ಸರ್ವಾಸು ಭೋ ದ್ವಿಜಾಃ ॥ ೩೮ ॥

ಮನ್ವಂತರೇಷು ಸರ್ವೇಷು ಪ್ರಾಗಾಸನ್ಸಪ್ತ ಸಪ್ತಕಾಃ ।
ಲೋಕೇ ಧರ್ಮವ್ಯವಸ್ಥಾರ್ಥಂ ಲೋಕಸಂರಕ್ಷಣಾಯ ಚ ॥ ೩೯ ॥

ಮನ್ವಂತರೇ ವ್ಯತಿಕ್ರಾಂತೇ ಚತ್ವಾರಃ ಸಪ್ತಕಾ ಗಣಾಃ ।
ಕೃತ್ವಾ ಕರ್ಮ ದಿವಂ ಯಾಂತಿ ಬ್ರಹ್ಮಲೋಕಮನಾಮಯಂ ॥ ೪೦ ॥

---

೩೬. ಸಾಧ್ಯರು ಏಕಾದಶರುದ್ರರು ವಿಶ್ವೇದೇವರು ವಸುಗಳು ಮರುತ್ತು [ಗಾಳಿ] ಗಳು ದ್ವಾದಶಾದಿತ್ಯರು ಅಶ್ವಿನೀದೇವತೆಗಳು ಇವರೆಲ್ಲರೂ ವೈವಸ್ವತಮನ್ವಂತರದ ದೇವತೆಗಳು.

೩೭. ಈ ದೇವತೆಗಳೆಲ್ಲರೂ ಈಗ ನಡೆಯುತ್ತಲಿರುವ ವೈವಸ್ವತಮನ್ವಂತರದಲ್ಲಿ ಇರುವರು. ಇಕ್ಷ್ವಾಕು ಮೊದಲಾದ ಹತ್ತು ಜನ ರಾಜರು ವೈವಸ್ವತಮನುವಿನ ಮಕ್ಕಳು.

೩೮. ಈಗ ಹೇಳಿದ ಅತ್ರಿಯೇ ಮೊದಲಾದ ಸಪ್ತರ್ಷಿಗಳ ವಂಶದ ಮಕ್ಕಳು ಮೊಮ್ಮಕ್ಕಳುಗಳು ದಿಕ್ಕುದಿಕ್ಕುಗಳಲ್ಲಿ ಇರುವರು.

೩೯. ಎಲ್ಲಾ ಮನ್ವಂತರಗಳ ಆದಿಯಲ್ಲಿಯೂ ಈ ಸಪ್ತರ್ಷಿಗಳು ಜಗತ್ತಿನಲ್ಲಿ ಧರ್ಮವ್ಯವಸ್ಥೆಯನ್ನು ಮಾಡಲೂ ಅದರ ಮೂಲಕ ಲೋಕವನ್ನು ರಕ್ಷಿಸಲೂ ಸಹ ಜನ್ಮವೆತ್ತುವರು.

೪೦. ಪ್ರತಿಯೊಂದು ಮನ್ವಂತರಗಳು ಕಳೆಯಲು ಈ ಸಪ್ತಋಷಿಗಳಲ್ಲಿ ನಾಲ್ವರು ತಮ್ಮ ಧರ್ಮಕಾರ್ಯವನ್ನು ನಿರ್ವಹಿಸಿ ಸುಖಮಯವಾದ ಬ್ರಹ್ಮಲೋಕಕ್ಕೆ ತೆರಳುವರು.

shrinath.udupa@gmail.com

ತತೋಽನ್ಯೇ ತಪಸಾ ಯುಕ್ತಾಃ ಸ್ಥಾನಂ ತತ್ಪೂರಯನ್ತ್ಯುತ ।
ಅತೀತಾ ವರ್ತಮಾನಾಶ್ಚ ಕ್ರಮೇಣೈತೇನ ಭೋ ದ್ವಿಜಾಃ ॥ ೪೧ ॥

ಅನಾಗತಾಶ್ಚ ಸಪ್ತೈತೇ ಸ್ಮೃತಾ ದಿವಿ ಮಹರ್ಷಯಃ ।
ಮನೋರಂತರಮಾಸಾದ್ಯ ಸಾವರ್ಣಸ್ಯೇಹ ಭೋ ದ್ವಿಜಾಃ । ॥ ೪೨ ॥

ರಾಮೋ ವ್ಯಾಸಸ್ತಥಾಽಽತ್ರೇಯೋ ದೀಪ್ತಿಮಂತೋ ಬಹುಶ್ರುತಾಃ ।
ಭಾರದ್ವಾಜಸ್ತಥಾ ದ್ರೌಣಿರಶ್ವತ್ಥಾಮಾ ಮಹಾದ್ಯುತಿಃ ॥ ೪೩ ॥

ಗೌತಮಶ್ಚಾಜರಶ್ಚೈವ ಶರದ್ವಾನ್ನಾಮ ಗೌತಮಃ ।
ಕೌಶಿಕೋ ಗಾಲವಶ್ಚೈವ ಔರ್ವಃ ಕಾಶ್ಯಪ ಏವ ಚ ॥ ೪೪ ॥

ಏತೇ ಸಪ್ತ ಮಹಾತ್ಮಾನೋ ಭವಿಷ್ಯಾ ಮುನಿಸತ್ತಮಾಃ
ವೈರೀ ಚೈವಾಧ್ವರೀವಾಂಶ್ಚ ಶಮನೋ ಧೃತಿಮಾರ್ನ ವಸುಃ ॥ ೪೫ ॥

ಅರಿಷ್ಟಶ್ಚಾಪ್ಯಧೃಷ್ಟಶ್ಚ ವಾಜೀ ಸುಮತಿರೇವ ಚ ।
ಸಾವರ್ಣಸ್ಯ ಮನೋಃ ಪುತ್ರಾ ಭವಿಷ್ಯಾ ಮುನಿಸತ್ತಮಾಃ ॥ ೪೬ ॥

---

೪೧. ಆಗ ಮಿಕ್ಕ ಮಹಾತಪಸ್ವಿಗಳಾದ ಋಷಿಗಳು ಆ ನಾಲ್ಕು ಸ್ಥಾನಗಳನ್ನೇರುವರು. ಹಿಂದಿದ್ದ ಋಷಿಗಳೂ ಈಗಿನವರೂ ಸೇರಿ ಮುಂದೆ ಧರ್ಮಕಾರ್ಯವನ್ನು ನಿರ್ವಹಿಸುವರು.

೪೨–೪೪. ಈ ಸಪ್ತಋಷಿಗಳಲ್ಲದ ಕೆಲವರು ಮಹರ್ಷಿಗಳು ಸಾವರ್ಣಿಮನ್ವಂತರದಲ್ಲಿ ಅವತರಿಸುವರು. ಅವರಾರೆಂದರೆ—ಪರಶುರಾಮ, ಆತ್ರೇಯಸಗೋತ್ರದ ವ್ಯಾಸಮುನಿ, ಭರದ್ವಾಜಗೋತ್ರದ, ಅಶ್ವತ್ಥಾಮ, ಗೌತಮಗೋತ್ರದ, ಅಜರಮುನಿ ಮತ್ತು ಶರದ್ವಾನ್‌ಮುನಿ, ಕೌಶಿಕಗೋತ್ರದ ಗಾಲವಮುನಿ ಕಾಶ್ಯಪಗೋತ್ರದ ಔರ್ವಮುನಿ ಈ ಏಳುಜನ ಮಹರ್ಷಿಗಳು [ಮುಂದೆ] ಧರ್ಮಸ್ಥಾಪನೆಗಾಗಿ ಜನ್ಮವನ್ನೆತ್ತುವರು.

೪೫–೪೬. ವೈರಿ, ಅಧ್ವರೀವಾನ್ ಶಮನ ಧೃತಿಮಂತ ವಸು ಅರಿಷ್ಟ ಅಧೃಷ್ಟ ವಾಜೀ ಸುಮತಿ ಈ ಒಂಬತ್ತು ಜನಗಳು ಸಾವರ್ಣಿಮನುವಿನ ಪುತ್ರರಾಗಿ ಜನಿಸುವರು.

shrinath.udupa@gmail.com

ಏತೇಷಾಂ ಕಲ್ಯಮುತ್ಥಾಯ ಕೀರ್ತನಾತ್ಸುಖಮೇಧತೇ ।
ಯಶಶ್ಚಾಽಽಪ್ನೋತಿ ಸುಮಹದಾಯುಷ್ಮಾಂಶ್ಚ ಭವೇನ್ನರಃ ॥ ೪೭ ॥

ಏತಾನ್ಯುಕ್ತಾನಿ ಭೋ ವಿಪ್ರಾಃ ಸಪ್ತಸಪ್ತ ಚ ತತ್ತ್ವತಃ ।
ಮನ್ವಂತರಾಣಿ ಸಂಕ್ಷೇಪಾಚ್ಛೃಣುತಾನಾಗತಾನ್ಯಪಿ ॥ ೪೮ ॥

ಸಾವರ್ಣಾ ಮನವೋ ವಿಪ್ರಾಃ ಪಂಚ ತಾಂಶ್ಚ ನಿಬೋಧತ ।
ಏಕೋ ವೈವಸ್ವತಸ್ತೇಷಾಂ ಚತ್ವಾರಸ್ತು ಪ್ರಜಾಪತೇಃ ॥ ೪೯ ॥

ಪರಮೇಷ್ಠಿಸುತಾ ವಿಪ್ರಾ ಮೇರುಸಾವರ್ಣ್ಯತಾಂ ಗತಾಃ ।
ದಕ್ಷಸ್ಯೈತೇ ಹಿ ದೌಹಿತ್ರಾಃ ಪ್ರಿಯಾಯಾಸ್ತನಯಾ ನೃಪಾಃ ॥ ೫೦ ॥

ಮಹತಾ ತಪಸಾ ಯುಕ್ತಾ ಮೇರುಪೃಷ್ಠೇ ಮಹೌಜಸಃ ।
ರುಚೇಃ ಪ್ರಜಾಪತೇಃ ಪುತ್ರೋ ರೌಚ್ಯೋ ನಾಮ ಮನುಃ ಸ್ಮೃತಃ ॥ ೫೧ ॥

---

೪೭. ಈ ಸಾವರ್ಣಿಕುಮಾರರನ್ನು ದಿನವೂ ಉಷಃಕಾಲದಲ್ಲಿದ್ದು ಸ್ಮರಿಸಿದರೆ ನರನಿಗೆ ಸುಖವು ಲಭಿಸುವುದು. ಯಶಸ್ಸು ಬರುವುದು. ಆಯುಸ್ಸು ಹೆಚ್ಚಾಗುವುದು.

೪೮. ಎಲೈ ಬ್ರಾಹ್ಮಣೋತ್ತಮರೇ, ಈವರೆಗೆ ನಿಮಗೆ ಏಳು ಮನ್ವಂತರಗಳನ್ನು ಸಂಕ್ಷೇಪವಾಗಿ ವರ್ಣಿಸಿ ಹೇಳಿರುವೆನು. ಇನ್ನು ಮುಂದೆ ಬರುವ ಮನ್ವಂತರಗಳನ್ನು ಹೇಳುವೆನು ಕೇಳಿರಿ.

೪೯. ಸಾವರ್ಣ್ಯಮನುಗಳು ಐದು ಜನಗಳು. ಅವರಲ್ಲಿ ಒಬ್ಬನು ವೈವಸ್ವತ ಮನುವು. ಮಿಕ್ಕನಾಲ್ವರು ಪ್ರಜಾಪತಿಯ ಮಕ್ಕಳು.

೫೦. ಬ್ರಹ್ಮನ ಮಕ್ಕಳೇ ಸಾವರ್ಣಿಮನುಗಳಾಗಿರುವರು. ದಕ್ಷಬ್ರಹ್ಮನ ಮಗಳಾದ ಪ್ರಿಯಾದೇವಿಯ ಮಕ್ಕಳುಗಳಿವರು. ಇವರೆಲ್ಲರೂ ರಾಜರು.

೫೧. ಈ ಸಾವರ್ಣಿಗಳೆಲ್ಲರೂ ಮೇರುಪರ್ವತದ ತಪ್ಪಲಲ್ಲಿ ಘೋರತಪಸ್ಸನ್ನಾಚರಿಸಿರುವರು [ಆದ ಕಾರಣ ಇವರಿಗೆ ಮೇರುಸಾವರ್ಣಿಗಳೆಂದು ಹೆಸರು] ರುಚಿಯೆಂಬ ಪ್ರಜಾಪತಿಯ ಪುತ್ರನು ರೌಚ್ಯನೆಂಬ ಮನುವು. ಅವನು ರುಚಿಪತ್ನಿಯಾದ ಭೂತಿದೇವಿಯಲ್ಲಿ ಜನಿಸಿದುದರಿಂದ ಭೌತ್ಯ ಎಂಬ ಹೆಸರೂ ಅವನಿಗಿರುವುದು.

shrinath.udupa@gmail.com

ಭೂತ್ಯಾಂ ಚೋತ್ಪಾದಿತೋ ದೇವ್ಯಾಂ ಭೌತ್ಯೋ ನಾಮ ರುಚೇಃ ಸುತಃ ।
ಅನಾಗತಾಶ್ಚ ಸಪ್ತೈತೇ ಕಲ್ಪೇಽಸ್ಮಿನ್ಮನವಃ ಸ್ಮೃತಾಃ ॥ ೫೨ ॥

ತೈರಿಯಂ ಪೃಥಿವೀ ಸರ್ವಾ ಸಪ್ತದ್ವೀಪಾ ಸಪತ್ತನಾ ।
ಪೂರ್ಣಂ ಯುಗಸಹಸ್ರಂ ತು ಪರಿಪಾಲ್ಯಾ ದ್ವಿಜೋತ್ತಮಾಃ ॥ ೫೩ ॥

ಪ್ರಜಾಪತಿಶ್ಚ ತಪಸಾ ಸಂಹಾರಂ ತೇಷು ನಿತ್ಯಶಃ ।
ಯುಗಾನಿ ಸಪ್ತತಿಸ್ತಾನಿ ಸಾಗ್ರಾಣಿ ಕಥಿತಾನಿ ಚ ॥ ೫೪ ॥

ಕೃತತ್ರೇತಾದಿಯುಕ್ತಾನಿ ಮನೋರಂತರಮುಚ್ಯತೇ ।
ಚತುರ್ದಶೈತೇ ಮನವಃ ಕಥಿತಾಃ ಕೀರ್ತಿವರ್ಧನಾಃ ॥ ೫೫ ॥

ವೇದೇಷು ಸಪುರಾಣೇಷು ಸರ್ವೇಷು ಪ್ರಭವಿಷ್ಣವಃ ।
ಪ್ರಜಾನಾಂ ಪತಯೋ ವಿಪ್ರಾ ಧನ್ಯಮೇಷಾಂ ಪ್ರಕೀರ್ತನಂ ॥ ೫೬ ॥

೫೨-೫೩. ಈ ಏಳು ಮನುಗಳು ಮುಂದೆ ಬರತಕ್ಕವರು. ಅವರೆಲ್ಲರೂ ಏಳು ದ್ವೀಪಗಳು ಮತ್ತು ನಗರಗಳನ್ನೊಳಗೊಂಡ ಈ ಭೂಮಿಯನ್ನು ಸಾವಿರಯುಗಗಳು ಮುಗಿಯುವವರೆಗೆ ಪಾಲಿಸುವರು. ಬ್ರಹ್ಮನ ನಿಯಮದಂತೆ ಆ ಮನ್ವಂತರಗಳಲ್ಲಿ ನಿತ್ಯವೂ ಲಯವು ನಡೆಯುತ್ತಲೇ ಇರುವುದು.

೫೪. ಕೃತಯುಗ ಮೊದಲಾದ ಎಪ್ಪತ್ತು [೭೦] ಯುಗಗಳಿಗೆ ಒಂದು ಮನ್ವಂತರವಾಗುವುದು. [ಮನ್ವಂತರ ಎಂದರೆ ಮನುವಿನ ಆಳ್ವಿಕೆಯ ಕಾಲ ಎಂದರ್ಥ].

೫೫-೫೬. ಒಟ್ಟು ಹದಿನಾಲ್ಕು ಮನುಗಳಿರುವರು. ಇವರು ವೇದಗಳಲ್ಲಿಯೂ ಪುರಾಣಗಳಲ್ಲಿಯೂ ವರ್ಣಿಸಲ್ಪಟ್ಟಿರುವರು. ಇವರೆಲ್ಲರೂ ಭೂಪತಿಗಳು. ಈ ಮನುಗಳನ್ನು ಕೀರ್ತನಮಾಡಿದರೆ ಇಷ್ಟಾರ್ಥಸಿದ್ಧಿಯಾಗುವುದು.

shrinath.udupa@gmail.com

ಮನ್ವಂತರೇಷು ಸಂಹಾರಾಃ ಸಂಹಾರಾಂತೇಷು ಸಂಭವಾಃ ।
ನ ಶಕ್ಯತೇಽಂತಸ್ತೇಷಾಂ ವೈ ವಕ್ತುಂ ವರ್ಷಶತೈರಪಿ ॥ ೫೭ ॥

ವಿಸರ್ಗಸ್ಯ ಪ್ರಜಾನಾಂ ವೈ ಸಂಹಾರಸ್ಯ ಚ ಭೋ ದ್ವಿಜಾಃ ।
ಮನ್ವಂತರೇಷು ಸಂಹಾರಾಃ ಶ್ರೂಯಂತೇ ದ್ವಿಜಸತ್ತಮಾಃ ॥ ೫೮ ॥

ಸಶೇಷಾಸ್ತತ್ರ ತಿಷ್ಠಂತಿ ದೇವಾಃ ಸಪ್ತರ್ಷಿಭಿಃ ಸಹ ।
ತಪಸಾ ಬ್ರಹ್ಮಚರ್ಯೇಣ ಶ್ರುತೇನ ಚ ಸಮನ್ವಿತಾಃ ॥ ೫೯ ॥

ಪೂರ್ಣೇ ಯುಗಸಹಸ್ರೇ ತು ಕಲ್ಪೋ ನಿಃಶೇಷ ಉಚ್ಯತೇ ।
ತತ್ರ ಭೂತಾನಿ ಸರ್ವಾಣಿ ದಗ್ಧಾನ್ಯಾದಿತ್ಯರಶ್ಮಿಭಿಃ ॥ ೬೦ ॥

ಬ್ರಹ್ಮಾಣಮಗ್ರತಃ ಕೃತ್ವಾ ಸಹಾಽಽದಿತ್ಯಗಣೈರ್ದ್ವಿಜಾಃ ।
ಪ್ರವಿಶಂತಿ ಸುರಶ್ರೇಷ್ಠಂ ಹರಿನಾರಾಯಣಂ ಪ್ರಭುಂ ॥ ೬೧ ॥

---

೫೭. ಈ ಮನ್ವಂತರಗಳ ಮಧ್ಯದಲ್ಲಿ ಲಯವು ನಡೆಯುವುದು. ಸೃಷ್ಟಿಯಾಗುವುದು. ಇದನ್ನೆಲ್ಲಾ ವರ್ಣಿಸಲು ನೂರುವರ್ಷಗಳಾದರೂ ಸಾಲದು.

೫೮. ಈ ಮನ್ವಂತರಗಳಲ್ಲಿ ಸಾಮಾನ್ಯತರಹೆಯ ಲಯವಾಗುವುದು. ದೇವತೆಗಳೂ ದೇವಋಷಿಗಳೂ ಲಯವನ್ನು ಹೊಂದುವುದಿಲ್ಲ.

೫೯. ತಪಸ್ಸಿನಿಂದಲೂ ಬ್ರಹ್ಮಚರ್ಯದಿಂದಲೂ ವೇದಾಧ್ಯಯನದಿಂದಲೂ ಕೂಡಿರುವ ಕೆಲವರು ಮಹರ್ಷಿಗಳು ಮನ್ವಂತರಗಳಲ್ಲಿ ಲಯವನ್ನು ಹೊಂದುವುದಿಲ್ಲ.

೬೦. ಸಾವಿರ ಯುಗಗಳು ಕಳೆದರೆ ಒಂದು ಕಲ್ಪವು ಮುಗಿಯುವುದು. ಆಗ ಮಹಾಪ್ರಲಯವಾಗುವುದು. ಆ ಪ್ರಲಯದಲ್ಲಿ ಪ್ರಾಣಿಗಳೆಲ್ಲರೂ ಪ್ರಳಯಸೂರ್ಯನ ಕಿರಣಗಳಿಂದ ಭಸ್ಮವಾಗುವರು.

೬೧. ಬ್ರಹ್ಮನನ್ನು ಮುಂದೆಮಾಡಿಕೊಂಡು ಆಗ ಆದಿತ್ಯರೊಡನೆ ದೇವತೆಗಳೂ ಮಹರ್ಷಿಗಳೂ ಸಹ ದೇವಶ್ರೇಷ್ಠನಾದ ಭಗವಾನ್ ನಾರಾಯಣನ ಶರೀರವನ್ನು ಪ್ರವೇಶಿಸುವರು.

shrinath.udupa@gmail.com

ಸ್ರಷ್ಟಾರಂ ಸರ್ವಭೂತಾನಾಂ ಕಲ್ಪಾಂತೇಷು ಪುನಃ ಪುನಃ ।
ಅವ್ಯಕ್ತಃ ಶಾಶ್ವತೋ ದೇವಸ್ತಸ್ಯ ಸರ್ವಮಿದಂ ಜಗತ್ ॥ ೬೨ ॥

ಅತ್ರ ವಃ ಕೀರ್ತಯಿಷ್ಯಾಮಿ ಮನೋರ್ವೈವಸ್ವತಸ್ಯ ವೈ ।
ವಿಸರ್ಗಂ ಮುನಿಶಾರ್ದೂಲಾಃ ಸಾಂಪ್ರತಸ್ಯ ಮಹಾದ್ಯುತೇಃ ॥ ೬೩ ॥

ಅತ್ರ ವಂಶಪ್ರಸಂಗೇನ ಕಥ್ಯಮಾನಂ ಪುರಾತನಂ ।
ಯತ್ರೋತ್ಪನ್ನೋ ಮಹಾತ್ಮಾ ಸ ಹರಿರ್ವೃಷ್ಣಿಕುಲೇ ಪ್ರಭುಃ ॥ ೬೪ ॥

ಇತಿ ಶ್ರೀಮಹಾಪುರಾಣೇ ಬ್ರಾಹ್ಮೇ ಮನ್ವಂತರಕೀರ್ತನಂ ನಾಮ
ಪಂಚಮೋಽಧ್ಯಾಯಃ

---

೬೨. ಆ ನಾರಾಯಣನು ತಿರುಗಿ ಮತ್ತೊಂದು ಕಲ್ಪದ ಆದಿಯಲ್ಲಿ ಸೃಷ್ಟಿ ಮಾಡುವನು, ಆ ದೇವನು ಇಂದ್ರಿಯಗಳಿಗೆ ನಿಲುಕದವನು, ನಿತ್ಯನು, ಈ ಜಗತ್ತೆಲ್ಲವೂ ಆ ದೇವನದೇ ಆಗಿರುವುದು.

೬೩. ಎಲೈ ಬ್ರಾಹ್ಮಣೋತ್ತಮರೇ, ನಿಮಗೆ ಈಗ ನಡೆಯುತ್ತಲಿರುವ ವೈವಸ್ವತಮನ್ವಂತರದಲ್ಲಿನ ಸೃಷ್ಟಿಕ್ರಮವನ್ನು ಹೇಳುವೆನು.

೬೪. ಇಲ್ಲಿ ವಂಶಪ್ರಸಂಗದಿಂದ ಪುಣ್ಯಕಥೆಯೊಂದನ್ನು ಹೇಳುವೆನು. ಈ ಮನ್ವಂತರದಲ್ಲಿ ಮಹಾತ್ಮನಾದ ನಾರಾಯಣನು ಯಾದವಕುಲದಲ್ಲಿ ಅವತರಿಸಿದನು.

ಇಲ್ಲಿಗೆ ಶ್ರೀ ಬ್ರಹ್ಮಮಹಾಪುರಾಣದಲ್ಲಿ ಮನ್ವಂತರಕೀರ್ತನವೆಂಬ
ಐದನೆಯ ಅಧ್ಯಾಯವು ಮುಗಿದುದು

shrinath.udupa@gmail.com

॥ ಶ್ರೀಃ ॥

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಷಷ್ಠೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ವಿವಸ್ವಾನ್ಕಶ್ಯಪಾಜ್ಜಜ್ಞೇ ದಾಕ್ಷಾಯಣ್ಯಾಂ ದ್ವಿಜೋತ್ತಮಾಃ ।
ತಸ್ಯ ಭಾರ್ಯಾಽಭವತ್ಸಂಜ್ಞಾ ತ್ವಾಷ್ಟ್ರೀ ದೇವೀ ವಿವಸ್ವತಃ ॥ ೧ ॥

ಸುರೇಶ್ವರೀತಿ ವಿಖ್ಯಾತಾ ತ್ರಿಷು ಲೋಕೇಷು ಭಾವಿನೀ ।
ಸಾ ವೈ ಭಾರ್ಯಾ ಭಗವತೋ ಮಾರ್ತಂಡಸ್ಯ ಮಹಾತ್ಮನಃ ॥ ೨ ॥

ಆರನೆಯ ಅಧ್ಯಾಯವು

೧. ಲೋಮಹರ್ಷಣಮುನಿಯು ಹೇಳಿದನು:— ಎಲೈ ಬ್ರಾಹ್ಮಣೋತ್ತಮರೆ, ಸೂರ್ಯನು ಕಶ್ಯಪನಿಂದ ಅದಿತಿದೇವಿಯಲ್ಲಿ ಜನಿಸಿದನು. ತ್ವಷ್ಟೃದೇವನ ಮಗಳಾದ ಸಂಜ್ಞಾದೇವಿಯು ಸೂರ್ಯನ ಹೆಂಡತಿ.

೨. ಭಗವಂತನಾದ ಸೂರ್ಯದೇವನ ಪತ್ನಿಯಾದ ಈ ಸಂಜ್ಞಾದೇವಿಯು ಸುರೇಶ್ವರಿ (ದೇವೇಶ್ವರಿ) ಯೆಂದು ಪ್ರಸಿದ್ಧಳಾಗಿರುವಳು.

shrinath.udupa@gmail.com

ಭರ್ತೃರ್ರೂಪೇಣ ನಾತುಷ್ಯದ್ರೂಪಯೌವನಶಾಲಿನೀ ।
ಸಂಜ್ಞಾ ನಾಮ ಸುತಪಸಾ ಸುದೀಪ್ತೇನ ಸಮನ್ವಿತಾ ॥ ೩ ॥

ಆದಿತ್ಯಸ್ಯ ಹಿ ತದ್ರೂಪಂ ಮಂಡಲಸ್ಯ ಸುತೇಜಸಾ ।
ಗಾತ್ರೇಷು ಪರಿದಗ್ಧಂ ವೈ ನಾತಿಕಾಂತಮಿವಾಭವತ್ ॥ ೪ ॥

ನ ಖಲ್ವಯಂ ಮೃತೋಽಣ್ಡಸ್ಯ ಇತಿ ಸ್ನೇಹಾದಭಾಷತ ।
ಅಜಾನನ್ಕಾಶ್ಯಪಸ್ತಸ್ಮಾನ್ಮಾರ್ತಾಂಡ ಇತಿ ಚೋಚ್ಯತೇ ॥ ೫ ॥

ತೇಜಸ್ತ್ವಭ್ಯಧಿಕಂ ತಸ್ಯ ನಿತ್ಯಮೇವ ವಿವಸ್ವತಃ ।
ಯೇನಾತಿತಾಪಯಾಮಾಸ ತ್ರೀನ್ಲೋಕಾನ್ಕಶ್ಯಪಾತ್ಮಜಃ ॥ ೬ ॥

ತ್ರೀಣ್ಯಪತ್ಯಾನಿ ಭೋ ವಿಪ್ರಾಃ ಸಂಜ್ಞಾಯಾಂ ತಪತಾಂ ವರಃ ।
ಆದಿತ್ಯೋ ಜನಯಾಮಾಸ ಕನ್ಯಾಂ ದ್ವೌ ಚ ಪ್ರಜಾಪತೀ ॥ ೭ ॥

೩–೪. ಸುಂದರವಾದ ರೂಪಯೌವನಗಳಿಂದ ಕೂಡಿದ ಆ ಸಂಜ್ಞಾದೇವಿಯು ತನ್ನ ಪತಿಯಾದ ಸೂರ್ಯನ ಉಗ್ರರೂಪದಿಂದ ಸಂತೋಷಗೊಳ್ಳಲಿಲ್ಲ. ಸೂರ್ಯನ ತೇಜಸ್ಸನ್ನು ಸಹಿಸಲೂ ಆಗಲಿಲ್ಲ. ಆಮೇಲೆ ಅವಳು ಘೋರತಪಸ್ಸನ್ನಾಚರಿಸಿ ಸೂರ್ಯನ ತೇಜಸ್ಸು ಕಡಿಮೆಯಾಗುವಂತೆ ಮಾಡಿದಳು. ಅದರಿಂದ ಸೂರ್ಯನ ತೇಜಸ್ಸು ಸ್ವಲ್ಪ ಕಮ್ಮಿಯಾದಂತೆ ತೋರಿತು.

೫. ಆಗ ಸಂಜ್ಞೆಯು ಆದರೂ ಈ ಅಂಡ (ಸೂರ್ಯಬಿಂಬ) ವು ಮೃತ (ನಾಶ) ವಾಗಲಿಲ್ಲವಲ್ಲ? ಎಂದು ಹಾಸ್ಯಕ್ಕಾಗಿ ನುಡಿದಳು. ಇದರ ರಹಸ್ಯವು ಸೂರ್ಯನಿಗೆ ತಿಳಿಯಲಿಲ್ಲ. ಈ ಕಾರಣದಿಂದ ಸೂರ್ಯನಿಗೆ ಮಾರ್ತಾಂಡನೆಂದು ಹೆಸರಾಯಿತು.

೬. ಇಷ್ಟಾದರೂ ಆ ಸೂರ್ಯನ ತೇಜಸ್ಸು ದಿನದಿನವೂ ಹೆಚ್ಚಾಗುತ್ತಲೇ ಇದ್ದಿತು. ಆ ತೇಜಸ್ಸಿನಿಂದ ಸೂರ್ಯನು ಮೂರುಲೋಕಗಳನ್ನೂ ಸಂತಾಪಗೊಳಿಸುತ್ತಿದ್ದನು.

೭. ಸಂಜ್ಞಾದೇವಿಯಲ್ಲಿ ಸೂರ್ಯನಿಗೆ ಮೂವರು ಮಕ್ಕಳಾದರು. ಅವರಲ್ಲಿ ಓರ್ವಳು ಪುತ್ರಿ, ಮತ್ತೀರ್ವರು ಪ್ರಜಾಪತಿಗಳು.

shrinath.udupa@gmail.com

ಮನುರ್ವೈವಸ್ವತಃ ಪೂರ್ವಂ ಶ್ರಾದ್ಧದೇವಃ ಪ್ರಜಾಪತಿಃ ।
ಯಮಶ್ಚ ಯಮುನಾ ಚೈವ ಯಮಜೌ ಸಂಬಭೂವತುಃ ॥ ೮ ॥

ಶ್ಯಾಮವರ್ಣಂ ತು ತದ್ರೂಪಂ ಸಂಜ್ಞಾ ದೃಷ್ಟ್ವಾ ವಿವಸ್ವತಃ ।
ಅಸಹಂತೀ ತು ಸ್ವಾಂ ಛಾಯಾಂ ಸವರ್ಣಾಂ ನಿರ್ಮಮೇ ತತಃ ॥ ೯ ॥

ಮಾಯಾಮಯೀ ತು ಸಾ ಸಂಜ್ಞಾ ತಸ್ಯಾಂ ಛಾಯಾಸಮುತ್ಥಿತಾಂ ।
ಪ್ರಾಂಜಲಿಃ ಪ್ರಣತಾ ಭೂತ್ವಾ ಛಾಯಾ ಸಂಜ್ಞಾಂ ದ್ವಿಜೋತ್ತಮಾಃ ॥ ೧೦ ॥

ಉವಾಚ ಕಿಂ ಮಯಾ ಕಾರ್ಯಂ ಕಥಯಸ್ವ ಶುಚಿಸ್ಮಿತೇ ।
ಸ್ಥಿತಾಽಸ್ಮಿ ತವ ನಿರ್ದೇಶೇ ಶಾಧಿ ಮಾಂ ವರವರ್ಣಿನಿ ॥ ೧೧ ॥

॥ ಸಂಜ್ಞೋವಾಚ ॥

ಅಹಂ ಯಾಸ್ಯಾಮಿ ಭದ್ರಂ ತೇ ಸ್ವಮೇವ ಭವನಂ ಪಿತುಃ ।
ತ್ವಯೈವ ಭವನೇ ಮಹ್ಯಂ ವಸ್ತವ್ಯಂ ನಿರ್ವಿಶಂಕಯಾ ॥ ೧೨ ॥

---

೮. ವೈವಸ್ವತಮನುವು ಸೂರ್ಯನ ಹಿರಿಯಮಗನು. ಶ್ರಾದ್ಧದೇವ (ಯಮ ಧರ್ಮರಾಜನು) ನು ಎರಡನೆಯವನು. ಯಮ, ಯಮುನಾ, ಇವರೀರ್ವರು ಶ್ರಾದ್ಧದೇವನ ಮಕ್ಕಳು. (ಮಿಕ್ಕ ಪುರಾಣಗಳಲ್ಲಿ ಯಮುನೆ ಮತ್ತು ಯಮದೇವ ಇವರು ಸೂರ್ಯಪುತ್ರರೆಂದು ಹೇಳಿರುತ್ತದೆ.)

೯. ಆಮೇಲೆ ಸಂಜ್ಞಾದೇವಿಯು ಪತಿಯಾದ ಸೂರ್ಯನ ಕಪ್ಪಾದ (ಅಂದರೆ ನೋಡಿದೊಡನೆ -ಕಣ್ಣಿಗೆ ಕತ್ತಲೆಗಟ್ಟುವಂತೆ ಮಾಡುವ ಉಗ್ರವಾದ) ರೂಪವನ್ನು ನೋಡಿ ಸಹಿಸಲಾರದವಳಾಗಿ ಅವಳು ತನ್ನಂತೆಯೇ ರೂಪವುಳ್ಳ ತನ್ನ ಛಾಯೆ (ನೆರಳು) ಯನ್ನು ನಿರ್ಮಿಸಿದಳು. ಅವಳೇ ಛಾಯಾದೇವಿಯು.

೧೦–೧೧. ಹೀಗೆ ಮಾಯೆಯನ್ನು ಬಲ್ಲ ಆ ಸಂಜ್ಞೆಯು ತನ್ನ ಮಾಯೆಯಿಂದ ಛಾಯಾದೇವಿಯನ್ನು ನಿರ್ಮಿಸಿದಳು. ಆ ಛಾಯಾದೇವಿಯು ಸಂಜ್ಞೆಗೆ ನಮಸ್ಕರಿಸಿ ಎಲೌ ಸುಂದರಿ, ನಾನು ಮಾಡಬೇಕಾದುದೇನು? ನಿನ್ನಪ್ಪಣೆಗೆ ಅಧೀನಳಾಗಿರುವೆನು, ನಾನು ಮಾಡಬೇಕಾದುದನ್ನು ಹೇಳು, ಮಾಡುವೆನು ಎನ್ನಲು,

೧೨. ಸಂಜ್ಞಾದೇವಿಯು ಹೇಳಿದಳು:— ಎಲೌ ಛಾಯಾದೇವಿ, ನಾನು ನನ್ನ ತಂದೆಯ ಮನೆಗೆ ತೆರಳುವೆನು. ನೀನು ಈ ನನ್ನ ಮನೆಯಲ್ಲಿ ನನಗೆ ಬದಲಾಗಿ ಯಾವ ಭಯವೂ ಇಲ್ಲದೇ ಇದ್ದುಕೊಂಡು,

shrinath.udupa@gmail.com

ಇಮೌ ಚ ಬಾಲಕೌ ಮಹ್ಯಂ ಕನ್ಯಾ ಚೇಯಂ ಸುಮಧ್ಯಮಾ ।
ಸಂಭಾವ್ಯಾಸ್ತೇ ನ ಚಾಽಽಖ್ಯೇಯಮಿದಂ ಭಗವತೇ ಕ್ವಚಿತ್ ॥ ೧೩ ॥

॥ ಸವರ್ಣೋವಾಚ ॥

ಆ ಕಚಗ್ರಹಣಾದ್ದೇವಿ ಆ ಶಾಪಾನ್ನೈವ ಕರ್ಹಿಚಿತ್ ।
ಆಖ್ಯಾಸ್ಯಾಮಿ ನಮಸ್ತುಭ್ಯಂ ಗಚ್ಛ ದೇವಿ ಯಥಾಸುಖಂ ॥ ೧೪ ॥

॥ ಲೋಮಹರ್ಷಣ ಉವಾಚ ॥

ಸಮಾದಿಶ್ಯ ಸವರ್ಣಾಂ ತು ತಥೇತ್ಯುಕ್ತಾ ತಯಾ ಚ ಸಾ ।
ತ್ವಷ್ಟುಃ ಸಮೀಪಮಗಮದ್ವ್ರೀಡಿತೇವ ತಪಸ್ವಿನೀ ॥ ೧೫ ॥

ಪಿತುಃ ಸಮೀಪಗಾ ಸಾ ತು ಪಿತ್ರಾ ನಿರ್ಭರ್ತ್ಸಿತಾ ಶುಭಾ ।
ಭರ್ತುಃ ಸಮೀಪಂ ಗಚ್ಛೇತಿ ನಿಯುಕ್ತಾ ಚ ಪುನಃ ಪುನಃ ॥ ೧೬ ॥

---

೧೩. ಈ ನನ್ನ ಚಿಕ್ಕ ಮಕ್ಕಳೀರ್ವರನ್ನೂ, ಸುಂದರಿಯಾದ ಮಗಳನ್ನೂ, ಪ್ರೀತಿಯಿಂದ ಸಲಹಬೇಕು. ಈ ರಹಸ್ಯವನ್ನು ಸೂರ್ಯದೇವನಿಗೆ ತಿಳಿಸಕೂಡದು ಎಂದಳು.

೧೪. ಸವರ್ಣಾ [ಸಂಜ್ಞೆಯಂತೆ ವರ್ಣವುಳ್ಳ ಛಾಯಾ] ದೇವಿಯು ಹೇಳಿದಳು—ಎಲೌ ದೇವಿ [ಸೂರ್ಯನು] ಜುಟ್ಟುಹಿಡಿದು ಕೇಳುವಂತಹ ಸಂದರ್ಭಬರುವರೆಗೂ, ಶಾಪಕೊಡುವ ಸನ್ನಿವೇಶಬರುವವರೆಗೂ ಈ ರಹಸ್ಯವನ್ನು ಹೇಳುವುದಿಲ್ಲ. ಸುಖವಾಗಿ ನೀನು ತೆರಳುಎಂದು ಹೇಳಿದಳು.

೧೫. ಸೂತಮುನಿಯು ಹೇಳಿದನು.—ಹೀಗೆ ಸವರ್ಣಾ [ಛಾಯಾ] ದೇವಿಯಿಂದ ವಚನವನ್ನು ತೆಗೆದುಕೊಂಡು ಸಂಜ್ಞಾದೇವಿಯು ತನ್ನ ಕರ್ಮಕ್ಕೆ ನಾಚಿಕೊಂಡವಳಾಗಿ ತನ್ನ ತಂದೆಯಾದ ತ್ವಷ್ಟೃಬ್ರಹ್ಮನ ಮನೆಗೆ ತೆರಳಿದಳು.

೧೬. ತಂದೆಯ ಬಳಿಗೆ ಹೋದೊಡನೆ ಅವನು ಸಂಜ್ಞೆಯನ್ನು ಗದರಿಸಿ "ನಿನ್ನ ಪತಿಯಬಳಿಗೆ ಹೋಗು" ಎಂದು ಬುದ್ಧಿವಾದ ಹೇಳಿದನು.

shrinath.udupa@gmail.com

ಆಗಚ್ಛದ್ವಡವಾ ಭೂತ್ವಾಽಽಚ್ಛಾದ್ಯ ರೂಪಮನಿಂದಿತಾ ।
ಕುರೂನಥೋತ್ತರಾನ್ಗತ್ವಾ ತೃಣಾನ್ಯಥ ಚಚಾರ ಹ ॥ ೧೭ ॥

ದ್ವಿತೀಯಾಯಾಂ ತು ಸಂಜ್ಞಾಯಾಂ ಸಂಜ್ಞೇಯಮಿತಿ ಚಿಂತಯನ್ ।
ಆದಿತ್ಯೋ ಜನಯಾಮಾಸ ಪುತ್ರಮಾತ್ಮಸಮಂ ತದಾ ॥ ೧೮ ॥

ಪೂರ್ವಜಸ್ಯ ಮನೋರ್ವಿಪ್ರಾಃ ಸದೃಶೋಽಯಮಿತಿ ಪ್ರಭುಃ ।
ಮನುರೇವಾಭವನ್ನಾಮ್ನಾ ಸಾವರ್ಣ ಇತಿ ಚೋಚ್ಯತೇ ॥ ೧೯ ॥

ದ್ವಿತೀಯೋ ಯಃ ಸುತಸ್ತಸ್ಯಾಃ ಸ ವಿಜ್ಞೇಯಃ ಶನೈಶ್ಚರಃ ।
ಸಂಜ್ಞಾ ತು ಪಾರ್ಥಿವೀ ವಿಪ್ರಾಃ ಸ್ವಸ್ಯ ಪುತ್ರಸ್ಯ ವೈ ತದಾ ॥ ೨೦ ॥

ಚಕಾರಾಭ್ಯಧಿಕಂ ಸ್ನೇಹಂ ನ ತಥಾ ಪೂರ್ವಜೇಷು ವೈ ।
ಮನುಸ್ತಸ್ಯಾಃ ಕ್ಷಮತ್ತತ್ತು ಯಮಸ್ತಸ್ಯಾ ನ ಚಕ್ಷಮೇ ॥ ೨೧ ॥

---

೧೭. ಆಗ ಆ ಸಂಜ್ಞೆಯು ತನ್ನ ರೂಪವನ್ನು ಮಾರ್ಪಡಿಸಿ ವಡವಾ [ಕುದುರೆ] ರೂಪವನ್ನು ಧರಿಸಿ ಉತ್ತರ ಕುರುದೇಶಗಳಿಗೆ ಹೋಗಿ ಅಲ್ಲಿ ಹುಲ್ಲು ಮೇಯುತ್ತಾ ಜೀವಿಸುತ್ತಿದ್ದಳು.

೧೮. ಇತ್ತಲಾಗಿ ಸೂರ್ಯನು ಸಂಜ್ಞಾದೇವಿಯ ಛಾಯೆಯಾದ ಎರಡನೇ ಸಂಜ್ಞೆಯನ್ನು ನಿಜವಾದ ಸಂಜ್ಞೆಯೆಂದು ತಿಳಿದಿದ್ದು ಅವಳಲ್ಲಿ ತನ್ನಂತೆ ತೇಜಸ್ವಿಯಾದ ಪುತ್ರನೊಬ್ಬನನ್ನು ಪಡೆದನು.

೧೯. ಎಲೈ ಬ್ರಾಹ್ಮಣರೇ, ಈ ಸೂರ್ಯಪುತ್ರನು ಮೊದಲಿನ ವೈವಸ್ವತಮನುವಿನಂತೆಯೇ ಇದ್ದುದರಿಂದ ಸಾವರ್ಣಮನು [ಮನುವಿಗೆ ಸಮಾನವಾದವನು ಎಂದರ್ಥ] ಎಂದು ಅವನಿಗೆ ಹೆಸರಾಯಿತು.

೨೦. ಶನೈಶ್ಚರನು ಸೂರ್ಯನಿಗೆ ಸಂಜ್ಞೆಯಲ್ಲಿ ಹುಟ್ಟಿದಎರಡನೇ ಮಗನು. ಈ ಸಂಜ್ಞಾದೇವಿಯು ತನ್ನ ಮಕ್ಕಳಲ್ಲಿಯೇ ಹೆಚ್ಚಾದ ಪ್ರೀತಿಯುಳ್ಳವಳಾಗಿದ್ದಳು. ಮೊದಲನೆ ಸಂಜ್ಞೆಯ ಮಕ್ಕಳಾದ ವೈವಸ್ವತಮನು ಮತ್ತುಯಮ ಇವರಲ್ಲಿ ಪ್ರೀತಿಯನ್ನಿಟ್ಟಿರಲೇ ಇಲ್ಲ.

೨೧. ಸಂಜ್ಞಾದೇವಿಯ ಈ ಭೇದವನ್ನು ವಿವೇಕಿಯಾದ ವೈವಸ್ವತಮನುವು ಸಹಿಸಿದನು. ಆದರೆ ಯಮನು ಸಹಿಸಲಿಲ್ಲ.

shrinath.udupa@gmail.com

ಸ ವೈ ರೋಷಾಚ್ಚ ಬಾಲ್ಯಾಚ್ಚ ಭಾವಿನೋಽರ್ಥಸ್ಯ ವಾಽನಘಾ ।
ಪದಾ ಸಂತರ್ಜಯಾಮಾಸ ಸಂಜ್ಞಾಂ ವೈವಸ್ವತೋ ಯಮಃ ॥ ೨೨ ॥

ತಂ ಶಶಾಪ ತತಃ ಕ್ರೋಧಾತ್ಸಾವರ್ಣಜನನೀ ತದಾ ।
ಚರಣಃ ಪತತಾಮೇಷ ತವೇತಿ ಭೃಶದುಃಖಿತಾ ॥ ೨೩ ॥

ಯಮಸ್ತು ತತ್ಪಿತುಃ ಸರ್ವಂ ಪ್ರಾಂಜಲಿಃ ಪ್ರತ್ಯವೇದಯತ್ ।
ಭೃಶಂ ಶಾಪಭಯೋದ್ವಿಗ್ನಃ ಸಂಜ್ಞಾ ವಾಕ್ಯೈರ್ವಿಶಂಕಿತಃ ॥ ೨೪ ॥

ಶಾಪೋಯಂ ವಿನಿವರ್ತೇತ ಪ್ರೋವಾಚ ಪಿತರಂ ದ್ವಿಜಾಃ ।
ಮಾತ್ರಾ ಸ್ನೇಹೇನ ಸರ್ವೇಷು ವರ್ತಿತವ್ಯಂ ಸುತೇಷು ವೈ ॥ ೨೫ ॥

ಸೇಯಮಸ್ಮಾನಪಾಸ್ಯೇಹ ವಿವಸ್ವನ್ಸಂಬುಭೂಷತಿ ।
ತಸ್ಯಾಂ ಮಯೋದ್ಯತಃ ಪಾದೋ ನ ತು ದೇಹೇ ನಿಪಾತಿತಃ ॥ ೨೬ ॥

---

೨೨. ಆ ಯಮನು ರೋಷದಿಂದಲೋ ಇಲ್ಲವೇ ಹುಡುಗತನದಿಂದಲೋ ಅಥವಾ ಅದೃಷ್ಟವಶದಿಂದಲೋ ಸಂಜ್ಞಾದೇವಿಯನ್ನು ಗದರಿಸಿ ಕಾಲಿನಿಂದ ಒದೆಯುವನೆಂದು ತುಂಬಾ ಹೆದರಿಸಿದನು.

೨೩. ಆಗ ಆ ಎರಡನೆಯ ಸಂಜ್ಞಾದೇವಿಯು ತುಂಬಾ ದುಃಖಗೊಂಡವಳಾಗಿ " ಎಲೈ ಮೂರ್ಖ ಈ ನಿನ್ನ ಕಾಲು ಬಿದ್ದುಹೋಗಲಿ ಎಂದು ಯಮನನ್ನು ಶಪಿಸಿದಳು.

೨೪. ಆಗ ಯಮನು ಸಂಜ್ಞೆಯು ಕೊಟ್ಟ ಶಾಪದಿಂದ ತುಂಬಾ ಭಯಗೊಂಡವನಾಗಿ ತನ್ನ ತಂದೆಯಾದ ಸೂರ್ಯನನ್ನು ಕುರಿತು ವಿನಯದಿಂದ ಹೀಗೆ ಹೇಳಿದನು. ಎಲೈ ಬ್ರಾಹ್ಮಣೋತ್ತಮರೇ, ತಾಯಿಯ ಶಾಪವನ್ನು ಹೋಗಲಾಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ಆ ಯಮನು ತಂದೆಯನ್ನು ಕುರಿತು ಹೀಗೆ ಹೇಳಿದನು.

೨೫. ಯಮನು ಹೇಳಿದನು—ಓ ಸೂರ್ಯನೇ ತಾಯಿಯಾದವಳು ಮಕ್ಕಳೆಲ್ಲರಲ್ಲಿಯೂ ಒಂದೇ ವಿಧವಾದ ಪ್ರೀತಿಯಿಂದಿರಬೇಕು, ಆದರೆ ನಮ್ಮ ಈ ತಾಯಿಯು ನಮ್ಮಲ್ಲಿ ಭೇದವನ್ನೆಣಿಸುತ್ತಲಿರುವಳು.

೨೬. ಈ ಕಾರಣ ಅವಳನ್ನು ಹೆದರಿಸಲು ನಾನು ಕಾಲನ್ನು ತೋರಿಸಿದೆನು. ಆದರೆ ಕಾಲಿನಿಂದ ಒದೆಯಲಿಲ್ಲ. ಬಾಲ್ಯದಿಂದಲೋ, ಚಪಲತೆಯಿಂದಲೋ, ಅಜ್ಞಾನದಿಂದಲೋ ಈ ಕಾರ್ಯವನ್ನು ಮಾಡಿದೆನು. ಅದನ್ನು ನೀನು ಕ್ಷಮಿಸು.

shrinath.udupa@gmail.com

ಬಾಲ್ಯಾದ್ವಾ ಯದಿ ವಾ ಲೌಲ್ಯಾನ್ಮೋಹಾತ್ತತ್ಕ್ಷಂತುಮರ್ಹಸಿ ।
ಶಪ್ತೋಽಹಮಸ್ಮಿ ಲೋಕೇಶ ಜನನ್ಯಾ ತಪತಾಂ ವರ ।
ತವ ಪ್ರಸಾದಾಚ್ಚರಣೋ ನ ಪತೇನ್ಮಮ ಗೋಪತೇ ॥ ೨೭ ॥

॥ ವಿವಸ್ವಾನುವಾಚ ॥

ಅಸಂಶಯಂ ಪುತ್ರ ಮಹದ್ಭವಿಷ್ಯತ್ಯತ್ರ ಕಾರಣಂ ।
ಯೇನ ತ್ವಾಮಾವಿಶತ್ಕ್ರೋಧೋ ಧರ್ಮಜ್ಞಂ ಸತ್ಯವಾದಿನಂ ॥ ೨೮ ॥

ನ ಶಕ್ಯಮೇತನ್ಮಿಥ್ಯಾ ತು ಕರ್ತುಂ ಮಾತೃವಚಸ್ತವ ।
ಕೃಮಯೋ ಮಾಂಸಮಾದಾಯ ಯಾಸ್ಯಂತ್ಯವನಿಮೇವ ಚ ॥ ೨೯ ॥

ಕೃತಮೇವಂ ವಚಸ್ತಥ್ಯಂ ಮಾತುಸ್ತವ ಭವಿಷ್ಯತಿ ।
ಶಾಪಸ್ಯ ಪರಿಹಾರೇಣ ತ್ವಂ ಚ ತ್ರಾತೋ ಭವಿಷ್ಯಸಿ ॥ ೩೦ ॥

ಆದಿತ್ಯಶ್ಚಾಬ್ರವೀತ್ಸಂಜ್ಞಾಂ ಕಿಮರ್ಥಂ ತನಯೇಷು ವೈ ।
ತುಲ್ಯೇಷ್ವಭ್ಯಧಿಕಃ ಸ್ನೇಹ ಏಕಸ್ಮಿನ್ ಕ್ರಿಯತೇ ತ್ವಯಾ ॥ ೩೧

---

೨೭. ಓ ಜಗದೀಶ್ವರ, ನನ್ನ ತಾಯಿಯು ನನ್ನನ್ನು ಶಪಿಸಿರುವಳು. ನೀನು ಅನುಗ್ರಹಿಸಿ ನನ್ನ ಕಾಲು ಬೀಳದಂತೆ ಮಾಡು.

೨೮. ಸೂರ್ಯನು ಹೇಳಿದನು—ಎಲೈ ಮಗನೇ, ಧರ್ಮವನ್ನು ಬಲ್ಲವನೂ ಸತ್ಯವಂತನೂ ಆದ ನೀನು ಹೀಗೆ ತಾಯಿಯಲ್ಲಿ ಕೋಪಗೊಂಡಿರುವೆ, ಇದಕ್ಕೆ ಸರಿಯಾದ ಕಾರಣವು ಬೇರೆ ಇರಬೇಕು.

೨೯. ಆದರೆ ನಿನಗುಂಟಾದ ಈ ಮಾತೃಶಾಪವನ್ನು ಹೋಗಲಾಡಿಸಲು ಸಾಧ್ಯವಿಲ್ಲವು. ನಿನ್ನ ಕಾಲಿನ ಮಾಂಸವನ್ನು ಕ್ರಿಮಿಗಳು ಕಿತ್ತುಕೊಂಡು ಭೂಮಿಗೆ ಹೋಗುವವು.

೩೦. ಹೀಗಾದರೆ ನಿನ್ನ ತಾಯಿಯ ಮಾತು ನಡೆದಂತಾಗುವುದು, ನೀನೂ ಶಾಪಪರಿಹಾರವನ್ನು ಹೊಂದಿ ಸುಖಿಯಾಗುವೆ.

೩೧. ಬಳಿಕ ಸೂರ್ಯನು ಸಂಜ್ಞೆಯನ್ನು ಕುರಿತು ಹೀಗೆ ಕೇಳಿದನು.— ಎಲೌ ದೇವಿ, ನಿನ್ನ ಮಕ್ಕಳೆಲ್ಲರಲ್ಲಿಯೂ ಸರಿಯಾದ ಪ್ರೀತಿಯನ್ನು ತೋರಿಸದೆ ಒಬ್ಬನಲ್ಲಿಯೇ ಹೆಚ್ಚಾದ ಪ್ರೀತಿಯನ್ನು ತೋರಿಸಲು ಕಾರಣವೇನು ?

shrinath.udupa@gmail.com

ಸಾ ತತ್ಪರಿಹರಂತೀ ತು ನಾಽಽಚಚಕ್ಷೇ ವಿವಸ್ವತೇ ।
ಸ ಚಾಽಽತ್ಮಾನಂ ಸಮಾಧಾಯ ಯೋಗಾತ್ತಥ್ಯಮುಪಶ್ಯತ ॥ ೩೨ ॥

ತಾಂ ಶಪ್ತುಕಾಮೋ ಭಗವಾನ್ನಾ ಶಪನ್ಮುನಿಸತ್ತಮಾಃ ।
ಮೂರ್ಧಜೇಷು ನಿಜಗ್ರಾಹ ಸ ತು ತಾಂ ಮುನಿಸತ್ತಮಾಃ ॥ ೩೩ ॥

ತತಃ ಸರ್ವಂ ಯಥಾವೃತ್ತಮಾಚಚಕ್ಷೇ ವಿವಸ್ವತೇ ।
ವಿವಸ್ವಾನಥ ತಚ್ಛ್ರುತ್ವಾ ಕ್ರುದ್ಧಸ್ತ್ವಷ್ಟಾರಮಭ್ಯಗಾತ್ ॥ ೩೪ ॥

ದೃಷ್ಟ್ವಾ ತು ತಂ ಯಥಾನ್ಯಾಯಮರ್ಚಯಿತ್ವಾ ವಿಭಾವಸುಂ ।
ನಿರ್ದಗ್ಧುಕಾಮಂ ರೋಷೇಣ ಸಾಂತ್ವಯಾಮಾಸ ವೈ ತದಾ ॥ ೩೫ ॥

॥ ತ್ವಷ್ಟೋವಾಚ ॥

ತವಾತಿತೇಜಸಾಽಽವಿಷ್ಟಮಿದಂ ರೂಪಂ ನ ಶೋಭತೇ ।
ಅಸಹಂತೀ ಚ ಸಂಜ್ಞಾ ಸಾ ವನೇ ಚರತಿ ಶಾಡ್ವಲೇ ॥ ೩೬ ॥

---

೩೨. ಆದರೆ ಆ ಸಂಜ್ಞೆಯು ಸೂರ್ಯನಿಗೆ ನಿಜವಾದ ಕಾರಣವನ್ನು ಸೂಚಿಸಲಿಲ್ಲ. ಆಗ ಸೂರ್ಯನು ಯೋಚಿಸಿ ಜ್ಞಾನದೃಷ್ಟಿಯಿಂದ ನಿಜಾಂಶವನ್ನು ತಿಳಿದನು.

೩೩. ಸೂರ್ಯನು ಆಗ ಆ ಸಂಜ್ಞೆಯನ್ನು ಶಪಿಸಲಿಚ್ಛೆಯುಳ್ಳವನಾದರೂ ಶಪಿಸಲಿಲ್ಲ. ಅವಳ ಜುಟ್ಟುಗಳನ್ನು ಹಿಡಿದುಕೊಂಡು ಬಲಾತ್ಕಾರದಿಂದ “ನಿಜಾಂಶವನ್ನು ಹೇಳು” ಎಂದು ಅವಳನ್ನು ನಿರ್ಬಂಧಮಾಡಿದನು.

೩೪. ಆಗ ಸಂಜ್ಞಾದೇವಿಯು ಭಯದಿಂದ ಹಿಂದೆ ನಡೆದ ಸಮಾಚಾರವೆಲ್ಲವನ್ನೂ ಹೇಳಿದಳು. ಅದನ್ನು ಕೇಳಿ ಸೂರ್ಯನು ಕೋಪಗೊಂಡು ಮಾವನಾದ ತ್ವಷ್ಟ್ರುಬ್ರಹ್ಮನಬಳಿಗೆ ಹೋಗಲು,

೩೫. ಮಹಾಕೋಪ ಭಸ್ಮಮಾಡುವವನಂತೆ ಬಂದ ಆ ಸೂರ್ಯನನ್ನು ತ್ವಷ್ಟೃಬ್ರಹ್ಮನು ಪೂಜಿಸಿ ಸಮಾಧಾನಮಾಡಿದನು.

೩೬. ತ್ವಷ್ಟೃಬ್ರಹ್ಮನು ಹೇಳಿದನು.—ಓ ಸೂರ್ಯ, ನಿನ್ನ ತೇಜಸ್ಸು ಉಗ್ರವಾಗಿರುವುದು. ಇಂತಹ ತೇಜಸ್ಸನ್ನು ಸಹಿಸಲಾರದೆ ಸಂಜ್ಞೆಯು ವನಕ್ಕೆ ಹೋಗಿರುವಳು.

shrinath.udupa@gmail.com

ದೃಷ್ಟ್ವಾ ಹಿ ತಾಂ ಭವಾನದ್ಯ ಸ್ವಾಂ ಭಾರ್ಯಾಂ ಶುಭಚಾರಿಣೀಂ ।
ಶ್ಲಾಘ್ಯಾಂ ಯೋಗಬಲೋಪೇತಾಂ ಯೋಗಮಾಸ್ಥಾಯ ಗೋಪತೇ ॥೩೭॥

ಅನುಕೂಲಂ ತು ತೇ ದೇವ ಯದಿ ಸ್ಯಾನ್ಮಮ ಸಂಮತಂ ।
ರೂಪಂ ನಿರ್ವರ್ತಯಾಮ್ಯದ್ಯ ತವ ಕಾಂತಮರಿಂದಮ ॥ ೩೮ ॥

ತತೋಽಭ್ಯುಪಗಮಾತ್ತ್ವಷ್ಟಾ ಮಾರ್ತಂಡಸ್ಯ ವಿವಸ್ವತಃ ।
ಭ್ರಮಿಮಾರೋಪ್ಯ ತತ್ತೇಜಃ ಶಾಂತಯಾಮಾಸ ಭೋ ದ್ವಿಜಾಃ ॥ ೩೯ ॥

ತತೋ ನಿರ್ಭಾಸಿತಂ ರೂಪಂ ತೇಜಸಾ ಸಂಹತೇನ ವೈ ।
ಕಾಂತಾತ್ಕಾಂತತರಂ ದ್ರಷ್ಟುಮಧಿಕಂ ಶುಶುಭೇ ತದಾ ॥ ೪೦ ॥

ದದರ್ಶ ಯೋಗಮಾಸ್ಥಾಯ ಸ್ವಾಂ ಭಾರ್ಯಾಂ ವಡವಾಂ ತತಃ ।
ಅಧೃಷ್ಯಾಂ ಸರ್ವಭೂತಾನಾಂ ತೇಜಸಾ ನಿಯಮೇನ ಚ ॥ ೪೧ ॥

---

೩೭. ಅವಳು ಯೋಗವನ್ನಾಚರಿಸುತ್ತಾ ವನದಲ್ಲಿರುವಳು. ಇಂತಹ ಸನ್ಮಾರ್ಗದಲ್ಲಿರುವ ನಿನ್ನ ಪತ್ನಿಯನ್ನು ನೀನು ಈಗ ಯೋಗದೃಷ್ಟಿಯಿಂದ ನೋಡಬಹುದು.

೩೮. ಓ ದೇವ, ನನ್ನ ಇಷ್ಟವನ್ನು ನೀನು ಮನ್ನಿಸುವೆಯಾದರೆ ನಿನ್ನ ಈ ಉಗ್ರರೂಪವನ್ನು ಬದಲಾಯಿಸಿ ಸುಂದರರೂಪವನ್ನು ಮಾಡುವೆನು ಎಂದನು.

೩೯. ಎಲೈ ಬ್ರಾಹ್ಮಣೋತ್ತಮರೆ, – ಮುಂದೆ ಸೂರ್ಯನು ತ್ವಷ್ಟೃವಿನ ಆ ಕಾರ್ಯವನ್ನು ಒಪ್ಪಿಕೊಳ್ಳಲು ತ್ವಷ್ಟೃಬ್ರಹ್ಮನು ತೇಜೋಮಯವಾದ ಸಾಣೆಯ ಚಕ್ರಕ್ಕೆ ಸೂರ್ಯಬಿಂಬವನ್ನು ಹಿಡಿದು ಅವನ ತೇಜಸ್ಸನ್ನು ಕಡಿಮೆಮಾಡಿದನು.

೪೦. ಆಗ ಸೂರ್ಯನ ರೂಪವು ಪ್ರಕಾಶಮಯವಾಗಿದ್ದಿತಲ್ಲದೇ ನೋಡಲು ತುಂಬಾ ಸುಂದರವಾದುದಾಯಿತು.

೪೧. ಆಮೇಲೆ ಸೂರ್ಯನು ತಪಸ್ಸಿನಿಂದಲೂ ತೇಜಸ್ಸಿನಿಂದಲೂ ಜಗತ್ತನ್ನು ಮೀರಿಸಿ ವಡವಾರೂಪವನ್ನು ಧರಿಸಿರುವ ತನ್ನ ಪತ್ನಿ ಸಂಜ್ಞಾದೇವಿಯನ್ನು ಯೋಗ ದೃಷ್ಟಿಯಿಂದ ನೋಡಿದನು.

shrinath.udupa@gmail.com

ವಡವಾವಪುಷಾ ವಿಪ್ರಾಶ್ಚರಂತೀಮಕುತೋಭಯಾಂ ।
ಸೋಽಶ್ವರೂಪೇಣ ಭಗವಾಂಸ್ತಾಂ ಮುಖೇ ಸಮಭಾವಯತ್ ॥ ೪೨ ॥

ಮೈಥುನಾಯ ವಿಚೇಷ್ಟಂತೀಂ ಪರಪುಂಸೋಽವಶಂಕಯಾ ।
ಸಾ ತನ್ನಿರವಮುಚ್ಛುಕ್ರಂ ನಾಸಿಕಾಭ್ಯಾಂ ವಿವಸ್ವತಃ ॥ ೪೩ ॥

ದೇವೌ ತಸ್ಯಾಮಜಾಯೇತಾಮಶ್ವಿನೌ ಭಿಷಜಾಂ ವರೌ ।
ನಾಸತ್ಯಶ್ಚೈವ ದಸ್ರಶ್ಚ ಸ್ಮೃತೌ ದ್ವಾವಶ್ವಿನಾವಿತಿ ॥ ೪೪ ॥

ಮಾರ್ತಂಡಸ್ಯಾಽಽತ್ಮಜಾವೇತಾವಷ್ಟಮಸ್ಯ ಪ್ರಜಾಪತೇಃ ।
ತಾಂ ತು ರೂಪೇಣ ಕಾಂತೇನ ದರ್ಶಯಾಮಾಸ ಭಾಸ್ಕರಃ ॥ ೪೫ ॥

ಸಾ ತು ದೃಷ್ಟ್ವೈವ ಭರ್ತಾರಂ ತುತೋಷ ಮುನಿಸತ್ತಮಾಃ ।
ಯಮಸ್ತು ಕರ್ಮಣಾ ತೇನ ಭೃಶಂ ಪೀಡಿತಮಾನಸಃ ॥ ೪೬ ॥

---

೪೨. ಯಾವ ಭಯವೂ ಇಲ್ಲದೇ ವಡವಾರೂಪದಿಂದ ಸಂಚರಿಸುತ್ತಿರುವ ಆ ಸಂಜ್ಞೆಯನ್ನು ಸೂರ್ಯನು ತಾನೂ ಕುದುರೆ ರೂಪವನ್ನು ಧರಿಸಿ ಅವಳ ಮುಖದಲ್ಲಿ ಸಂಭೋಗವನ್ನು ಮಾಡಿದನು.

೪೩. ಆಗ ಸಂಜ್ಞೆಯು ಸೂರ್ಯನನ್ನು ಪರಪುರುಷನೆಂದು ತಿಳಿದು ಅವನ ವೀರ್ಯವನ್ನು ಮೂಗಿನಿಂದ ಹೊರಗೆಹಾಕಿದಳು.

೪೪. ಆ ವೀರ್ಯದಿಂದ ಮಕ್ಕಳೀರ್ವರು ಜನಿಸಿದರು. ಅವರು ದೇವವೈದ್ಯ ರಾದ ಅಶ್ವಿನೀಕುಮಾರರು. ಒಬ್ಬನ ಹೆಸರು ನಾಸತ್ಯ ಮತ್ತೊಬ್ಬನ ಹೆಸರು" ದಸ್ರ " ಎಂದು.

೪೫. ಈ ಅಶ್ವಿನೀದೇವತೆಗಳು ಎಂಟನೆಯ ಪ್ರಜಾಪತಿಯಾದ ಸೂರ್ಯನ ಮಕ್ಕಳು. ಆಮೇಲೆ ಸೂರ್ಯನು ಸಂಜ್ಞಾದೇವಿಗೆ ತನ್ನ ಸುಂದರರೂಪದಿಂದ ಕಾಣಿಸಿಕೊಂಡನು.

೪೬. ಅಷ್ಟು ಸುಂದರರೂಪನಾದ ಪತಿಯನ್ನು ನೋಡಿ ಸಂಜ್ಞಾದೇವಿಯು ಹರ್ಷಗೊಂಡಳು. ಇತ್ತಲಾಗಿ ಯಮನು ತನ್ನ ಕರ್ಮದಿಂದ ನೊಂದವನಾಗಿ ಪ್ರಜೆಗಳನ್ನು ಧರ್ಮದಿಂದ ಪಾಲಿಸುತ್ತಾ ಧರ್ಮರಾಜನಾದನು.

shrinath.udupa@gmail.com

ಧರ್ಮೇಣ ರಂಜಯಾಮಾಸ ಧರ್ಮರಾಜ ಇಮಾಃ ಪ್ರಜಾಃ ।
ಸ ಲೇಭೇ ಕರ್ಮಣಾ ತೇನ ಶುಭೇನ ಪರಮದ್ಯುತಿಃ ॥ ೪೭ ॥

ಪಿತೃಣಾಮಾಧಿಪತ್ಯಂ ಚ ಲೋಕಪಾಲತ್ವಮೇವ ಚ ।
ಮನುಃ ಪ್ರಜಾಪತಿಸ್ತ್ವಾಸೀತ್ಸಾವರ್ಣಿಃ ಸ ತಪೋಧನಾಃ ॥ ೪೮ ॥

ಭಾವ್ಯಃ ಸಮಾಗತೇ ತಸ್ಮಿನ್ಮನುಃ ಸಾವರ್ಣಿಕೇಽನ್ತರೇ ।
ಮೇರುಪೃಷ್ಠೇ ತಪೋ ನಿತ್ಯಮದ್ಯಾಪಿ ಸ ಚರತ್ಯುತ ॥ ೪೯ ॥

ಭ್ರಾತಾ ಶನೈಶ್ಚರಸ್ತಸ್ಯ ಗ್ರಹತ್ವಂ ಸ ತು ಲಬ್ಧವಾನ್ ।
ತ್ವಷ್ಟಾ ತು ತೇಜಸಾ ತೇನ ವಿಷ್ಣೋಶ್ಚಕ್ರಮಕಲ್ಪಯತ್ ॥ ೫೦ ॥

ತದಪ್ರತಿಹತಂ ಯುದ್ಧೇ ದಾನವಾಂತಚಿಕೀರ್ಷಯಾ ।
ಯವೀಯಸೀ ತು ಸಾಽಪ್ಯಾಸೀದ್ಯಮೀ ಕನ್ಯಾ ಯಶಸ್ವಿನೀ ॥ ೫೧ ॥

---

೪೭. ಇಂತಹ ಧರ್ಮಪಾಲನೆಯಿಂದ ಆ ಯಮನು ಪಿತೃಗಳಿಗೆ ಅಧಿಪತಿಯಾದನು. ಲೋಕಪಾಲಕನೂ ಆದನು.

೪೮. ಸಾವರ್ಣಿಮನುವು ಮುಂದೆ ಬರುವ ಸಾವರ್ಣಿಮನ್ವಂತರದಲ್ಲಿ ಚಕ್ರವರ್ತಿಯಾಗುವನು.

೪೯. ಆ ಸಾವರ್ಣಿಮನುವು ಈಗಲೂ ಮೇರುಪರ್ವತದ ತಪ್ಪಲಿನಲ್ಲಿ ತಪಸ್ಸು ಮಾಡುತ್ತಲಿರುವನು. ಅವನ ಸಹೋದರನಾದ ಶನೈಶ್ವರನು ನವಗ್ರಹಗಳಲ್ಲಿ ಒಬ್ಬನಾದವನು.

೫೦. ತಷ್ಟೃಬ್ರಹ್ಮನು ಸಾಣೆಹಿಡಿದು ತೆಗೆದ ಸೂರ್ಯನ ತೇಜಸ್ಸಿನಿಂದ ದಾನವರ ಸಂಹಾರಕ್ಕಾಗಿ ವಿಷ್ಣುಚಕ್ರವನ್ನು ನಿರ್ಮಿಸಿದನು.

೫೧. ಕೊನೆಯವಳಾದ ಸೂರ್ಯಪುತ್ರಿಯು ಮುಂದೆ ಲೋಕವನ್ನು ಪವಿತ್ರ ಮಾಡುವಂತಹ “ ಯಮುನಾ ” ಎಂಬ ಪವಿತ್ರ ನದಿಯಾದಳು.

shrinath.udupa@gmail.com

ಅಭವಚ್ಚ ಸರಿಚ್ಛ್ರೇಷ್ಠಾ ಯಮುನಾ ಲೋಕಪಾವನೀ ।
ಮನುರಿತ್ಯುಚ್ಯತೇ ಲೋಕೇ ಸಾವರ್ಣ ಇತಿ ಚೋಚ್ಯತೇ ॥ ೫೨ ॥

ದ್ವಿತೀಯೋ ಯಃ ಸುತಸ್ತಸ್ಯ ಮನೋರ್ಭ್ರಾತಾ ಶನೈಶ್ಚರಃ ।
ಗ್ರಹತ್ವಂ ಸ ಚ ಲೇಭೇ ವೈ ಸರ್ವಲೋಕಾಭಿಪೂಜಿತಃ ॥ ೫೩ ॥

ಯ ಇದಂ ಜನ್ಮ ದೇವಾನಾಂ ಶೃಣುಯಾನ್ನರಸತ್ತಮಃ ।
ಆಪದಂ ಪ್ರಾಪ್ಯ ಮುಚ್ಯೇತ ಪ್ರಾಪ್ನುಯಾಚ್ಚ ಮಹದ್ಯಶಃ ॥ ೫೪ ॥

ಇತಿ ಶ್ರೀ ಮಹಾಪುರಾಣೇ ಬ್ರಾಹ್ಮೇ ಆದಿತ್ಯೋತ್ಪತ್ತಿಕಥನಂ
ನಾಮ ಷಷ್ಠೋಽಧ್ಯಾಯಃ

೫೧–೫೨. ಸೂರ್ಯನ ಎರಡನೆಯ ಮಗನನ್ನು ಮನುವೆಂತಲೂ ಸಾವರ್ಣನೆಂತಲೂ ಕರೆಯುವರು. ಆವನ ಸಹೋದರನಾದ ಶನೈಶ್ಚರನು ಹಿಂದೆ ಹೇಳಿದಂತೆ ಗ್ರಹತ್ವವನ್ನು ಹೊಂದಿ ಜನಗಳಿಂದ ನಿತ್ಯವೂ ಪೂಜಿಸಲ್ಪಡುವನು.

೫೪. ದೇವತೆಗಳ ಈ ಉತ್ಪತ್ತಿಕ್ರಮವನ್ನು ಯಾವನು ಕೇಳುವನೋ ಅವನು ಎಲ್ಲಾ ವಿಪತ್ತುಗಳಿಂದಲೂ ಪಾರಾಗಿ ಕೀರ್ತಿವಂತನಾಗುವನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಆದಿತ್ಯೋತ್ಪತ್ತಿಕಥನವೆಂಬ
ಆರನೆಯ ಅಧ್ಯಾಯವು ಮುಗಿದುದು.

shrinath.udupa@gmail.com

॥ ಶ್ರೀಃ ॥

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತಮೋಽಧ್ಯಾಯಃ

ಲೋಮಹರ್ಷಣ ಉವಾಚ

ಮನೋರ್ವೈವಸ್ವತಸ್ಯಾಽಽಸನ್ಪುತ್ರಾ ವೈ ನವ ತತ್ಸಮಾಃ ।
ಇಕ್ಷ್ವಾಕುಶ್ಚೈವ ನಾಭಾಗೋ ಧೃಷ್ಟಃ ಶರ್ಯಾತಿರೇವ ಚ ॥ ೧ ॥

ನರಿಷ್ಯಂತಶ್ಚ ಷಷ್ಠೋ ವೈ ಪ್ರಾಂಶೂ ರಿಷ್ಟಶ್ಚ ಸಪ್ತಮಃ ।
ಕರೂಷಶ್ಚ ಪೃಷಧ್ರಶ್ಚ ನವೈ ತೇ ಮುನಿಸತ್ತಮಾಃ ॥ ೨ ॥

ಅಕರೋತ್ಪುತ್ರಕಾಮಸ್ತು ಮನುರಿಷ್ಟಿಂ ಪ್ರಜಾಪತಿಃ ।
ಮಿತ್ರಾವರುಣಯೋರ್ವಿಪ್ರಾಃ ಪೂರ್ವಮೇವ ಮಹಾಮತಿಃ ॥ ೩ ॥

ಏಳನೆಯ ಅಧ್ಯಾಯವು

೧-೨. ಲೋಮಹರ್ಷಣಮುನಿಯು ಹೇಳಿದನು.—ಎಲೈ ಬ್ರಾಹ್ಮಣೋತ್ತಮರೇ, ವೈವಸ್ವಮನುವಿಗೆ ಒಂಭತ್ತುಜನ ಮಕ್ಕಳು. "ಇಕ್ಷ್ವಾಕು ನಾಭಾಗ ಧೃಷ್ಟ ಶರ್ಯಾತಿ ನರಿಷ್ಯಂತ ಪ್ರಾಂಶು ಕರೂಷ ಪೃಷಧ್ರ" ಇವರೇ ಒಂಭತ್ತುಜನ ವೈವಸ್ವತ ಮನುವಿನ ಮಕ್ಕಳು.

೩. ಆಮೇಲೆ ಆ ಮನುವು ಪುತ್ರರನ್ನು ಪಡೆಯಲೋಸುಗ ಮಿತ್ರಾವರುಣರೆಂಬ ದೇವತೆಗಳನ್ನುದ್ದೇಶಿಸಿ ಪುತ್ರಕಾಮೇಷ್ಟಿಯನ್ನು ಮಾಡಿದನು.

shrinath.udupa@gmail.com

ಅನುತ್ಪನ್ನೇಷು ಬಹುಷು ಪುತ್ರೇಷ್ವೇತೇಷು ಭೋ ದ್ವಿಜಾಃ ।
ತಸ್ಯಾಂ ಚ ವರ್ತಮಾನಾಯಾಮಿಷ್ಟ್ಯಾಂ ಚ ದ್ವಿಜಸತ್ತಮಾಃ ॥ ೪ ॥

ಮಿತ್ರಾವರುಣಯೋರಂಶೇ ಮನುರಾಹುತಿಮಾವಹತ್ ।
ತತ್ರ ದಿವ್ಯಾಂಬರಧರಾ ದಿವ್ಯಾಭರಣಭೂಷಿತಾ ॥ ೫ ॥

ದಿವ್ಯಸಂಹನನಾ ಚೈವ ಇಲಾ ಜಜ್ಞ ಇತಿ ಶ್ರುತಿಃ ।
ತಾಮಿಲೇತ್ಯೇವ ಹೋವಾಚ ಮನುರ್ದಂಡಧರಸ್ತದಾ ॥ ೬ ॥

ಅನುಗಚ್ಛಸ್ವ ಮಾಂ ಭದ್ರೇ ತಮಿಲಾ ಪ್ರತ್ಯುವಾಚ ಹ ।
ಧರ್ಮಯುಕ್ತಮಿದಂ ವಾಕ್ಯಂ ಪುತ್ರಕಾಮಂ ಪ್ರಜಾಪತಿಂ ॥ ೭ ॥

ಇಲೋವಾಚ

ಮಿತ್ರಾವರುಣಯೋರಂಶೇ ಜಾತಾಽಸ್ಮಿ ವದತಾಂ ವರ ।
ತಯೋಃ ಸಕಾಶಂ ಯಾಸ್ಯಾಮಿ ನ ಮಾಂ ಧರ್ಮಹತಾಂ ಕುರು ॥ ೮ ॥

---

೪. ಎಲೈ ಬ್ರಾಹ್ಮಣೋತ್ತಮರೇ ಮನುವು ಈ ಯಾಗವನ್ನು ಮಾಡುವಾಗ ಮೇಲೆ ಹೇಳಿದ ಮಕ್ಕಳು ಜನಿಸಿರಲಿಲ್ಲ. ಆ ಯಾಗದಲ್ಲಿ ಅವನು ಮಿತ್ರಾವರುಣ ದೇವತೆಗಳಿಗೆ ಆಹುತಿಯನ್ನು ಕೊಟ್ಟನು.

೫. ಆಗ ಆ ಯಾಗದಲ್ಲಿ ದಿವ್ಯವಾದ ಬಟ್ಟೆಯನ್ನುಟ್ಟು ಅಲಂಕಾರಯುಕ್ತಳೂ ಸುಂದರಿಯೂ ಆದ ಇಲಾದೇವಿಯು ಜನಿಸಿದಳು ಎಂದು ಕೇಳಿರುವೆವು.

೬-೭. ಆಗ ಮನುರಾಜನು ಆ ಇಲಾದೇವಿಯನ್ನು ಕುರಿತು ಎಲೌ ಇಲಾ ಕುಮಾರಿ, ನನ್ನನ್ನು [ಮಗಳಾಗಿ] ಅನುಸರಿಸು ಎಂದು ಹೇಳಲು, ಅವಳು ಪುತ್ರ ಕಾಮನಾದ ಆ ರಾಜನನ್ನು ಕುರಿತು ಇಂತೆಂದಳು.

೮. ಇಲಾದೇವಿಯು ಹೇಳಿದಳು.—ಓ ರಾಜ, ನಾನು ಮಿತ್ರಾವರುಣರ ಅಂಶ ದಿಂದ ಜನಿಸಿರುವೆನು. ಆದ ಕಾರಣ ಅವರ ಬಳಿಗೇ ತೆರಳುವೆನು. ನೀನು ನನ್ನನ್ನು ಇಲ್ಲಿರುವಂತೆ ನಿರ್ಬಂಧಪಡಿಸಿ ಅಧರ್ಮವು ನನಗೆ ಬರುವಂತೆ ಮಾಡಬೇಡ ಎಂದಳು.

shrinath.udupa@gmail.com

ಸೈವಮುಕ್ತ್ವಾ ಮನುಂ ದೇವಂ ಮಿತ್ರಾವರುಣಯೋರಿಲಾ ।
ಗತ್ವಾಽಂತಿಕಂ ವರಾರೋಹಾ ಪ್ರಾಂಜಲಿರ್ವಾಕ್ಯಮಬ್ರವೀತ್ ॥ ೯ ॥

ಇಲೋವಾಚ

ಅಂಶೇಽಸ್ಮಿ ಯುವಯೋರ್ಜಾತಾ ದೇವೌ ಕಿಂ ಕರವಾಣಿ ವಾಂ ।
ಮನುನಾ ಚಾಹಮುಕ್ತಾ ವಾ ಅನುಗಚ್ಛಸ್ವ ಮಾಮಿತಿ ॥ ೧೦ ॥

ತೌ ತಥಾವಾದಿನೀಂ ಸಾಧ್ವೀಮಿಲಾಂ ಧರ್ಮಪರಾಯಣಾಂ ।
ಮಿತ್ರಶ್ಚ ವರುಣಶ್ಚೋಭಾವೂಚತುಸ್ತಾಂ ದ್ವಿಜೋತ್ತಮಾಃ ॥ ೧೧ ॥

ಮಿತ್ರಾವರುಣಾವೂಚತುಃ

ಅನೇನ ತವ ಧರ್ಮೇಣ ಪ್ರಶ್ರಯೇಣ ದಮೇನ ಚ ।
ಸತ್ಯೇನ ಚೈವ ಸುಶ್ರೋಣಿ ಪ್ರೀತೌ ಸ್ವೋ ವರವರ್ಣಿನೀ ॥ ೧೨ ॥

ಆವಯೋಸ್ತ್ವಂ ಮಹಾಭಾಗೇ ಖ್ಯಾತಿಂ ಕನ್ಯೇತಿ ಯಾಸ್ಯಸಿ । ॥ ೧೩ ॥

---

೯. ಹೀಗೆ ಮನುವಿಗೆ ಹೇಳಿ ಆ ಇಲಾದೇವಿಯು ಮಿತ್ರಾವರುಣರಬಳಿಗೆ ತೆರಳಿ ಅವರನ್ನು ಕುರಿತು ವಿನಯದಿಂದ

೧೦. ಓ ದೇವತೆಗಳೇ, ನಾನು ನಿಮ್ಮ ಅಂಶದಿಂದ ಜನಿಸಿರುವೆನು. ಈಗ ನಾನು ಮಾಡಬೇಕಾದುದೇನು ? ಈಗ ಮನುವು ತನ್ನನ್ನನುಸರಿಸುವಂತೆ ನನಗೆ ಹೇಳುತ್ತಿರುವನು ಎಂದಳು.

೧೧. ಹೀಗೆ ಹೇಳುತ್ತಲಿರುವ ಧರ್ಮನಿಷ್ಠಳೂ ಸತ್ಯವತಿಯೂ ಆದ ಇಲಾದೇವಿಯನ್ನು ಕುರಿತು ಮಿತ್ರಾವರುಣರು

೧೨. ಎಲೌ ಇಲಾದೇವಿ, ನಿನ್ನ ಈ ಧರ್ಮನಿಷ್ಠತೆಯಿಂದಲೂ, ವಿನಯದಿಂದಲೂ, ನಿಯಮದಿಂದಲೂ, ಸತ್ಯದಿಂದಲೂ, ನಾವು ತುಂಬಾ ಸಂತಸಗೊಂಡೆವು.

೧೩. ಎಲೌ ಭಾಗ್ಯವಂತಳೇ, ನೀನು ನಮ್ಮ [ಮಿತ್ರಾವರುಣರ] ಕನ್ಯೆಯೆಂದೇ ಪ್ರಸಿದ್ಧಿಯನ್ನು ಲೋಕದಲ್ಲಿ ಹೊಂದುವೆ.

shrinath.udupa@gmail.com

ಮನೋರ್ವಂಶಕರಃ ಪುತ್ರಸ್ತ್ವಮೇವ ಚ ಭವಿಷ್ಯಸಿ ।
ಸುದ್ಯುಮ್ನ ಇತಿ ವಿಖ್ಯಾತಸ್ತ್ರಿಷು ಲೋಕೇಷು ಶೋಭನೇ ॥ ೧೪ ॥

ಜಗತ್ಪ್ರಿಯೋ ಧರ್ಮಶೀಲೋ ಮನೋರ್ವಂಶವಿವರ್ಧನಃ ।
ನಿವೃತ್ತಾ ಸಾ ತು ತಚ್ಛ್ರುತ್ವಾ ಗಚ್ಛಂತೀ ಪಿತುರಂತಿಕಾತ್ ॥ ೧೫ ॥

ಬುಧೇನಾಂತರಮಾಸಾದ್ಯ ಮೈಥುನಾಯೋಪಮನ್ತ್ರಿತಾ ।
ಸೋಮಪುತ್ರಾದ್ಬುಧಾದ್ವಿಪ್ರಾಸ್ತಸ್ಯಾಂ ಜಜ್ಞೇ ಪುರೂರವಾಃ ॥ ೧೬ ॥

ಜನಯಿತ್ವಾ ತತಃ ಸಾ ತಮಿಲಾ ಸುದ್ಯುಮ್ನತಾಂ ಗತಾ ।
ಸುದ್ಯುಮ್ನಸ್ಯ ತು ದಾಯಾದಾಸ್ತ್ರಯಃ ಪರಮಧಾರ್ಮಿಕಾಃ ॥ ೧೭ ॥

ಉತ್ಕಲಶ್ಚ ಗಯಶ್ಚೈವ ವಿನತಾಶ್ವಶ್ಚ ಭೋ ದ್ವಿಜಾಃ ।
ಉತ್ಕಲಸ್ಯೋತ್ಕಲಾ ವಿಪ್ರಾ ವಿನತಾಶ್ವಸ್ಯ ಪಶ್ಚಿಮಾಃ ॥ ೧೮ ॥

---

೧೪. ಮುಂದೆ ನೀನು ಮನುವಿನ ಪುತ್ರನಾಗಿಯೇ ಜನಿಸಿ ಸುದ್ಯುಮ್ನನೆಂಬ ಹೆಸರಿನಿಂದ ಪ್ರಸಿದ್ಧಿಹೊಂದುವೆ. ಆ ಸುದ್ಯುಮ್ನಕುಮಾರನು ಜಗತ್ತಿಗೆ ಸಂತೋಷವನ್ನುಂಟುಮಾಡುವವನೂ, ಧರ್ಮನಿಷ್ಠನೂ, ಮನುವಂಶವನ್ನು ಬೆಳಸುವವನೂ ಆಗುವನು ಎಂದರು.

೧೫–೧೬. ಆಮೇಲೆ ಪಿತೃವರುಣರಿಂದ ಅಪ್ಪಣೆಯನ್ನು ಪಡೆದು ಇಲಾ ದೇವಿಯು ಹೊರಟಳು. ಆಗ ಚಂದ್ರನ ಮಗನಾದ ಬುಧನು ದಾರಿಯಲ್ಲಿ ಸಂಧಿಸಿ ಅವಳನ್ನು ಮೈಥುನ [ಸಂಭೋಗ] ಕ್ಕೆ ಕರೆದನು. ಮುಂದೆ ಬುಧನಿಂದ ಆ ಇಲಾ ದೇವಿಯಲ್ಲಿ ಪುರೂರವನು ಜನಿಸಿದನು.

೧೭. ಪುರೂರವನನ್ನು ಹಡೆದು ಮುಂದೆ ಆ ಇಲಾದೇವಿಯು ಮನುಪುತ್ರನಾದ ಸುದ್ಯುಮ್ನನಾಗಿ ಜನಿಸಿದಳು. ಆ ಸುದ್ಯುಮ್ನನಿಗೆ "ಉತ್ಕಲ, ಗಯ, ವಿನತಾಶ್ವ" ರೆಂಬ ಧಾರ್ಮಿಕರಾದ ಮೂರುಜನ ಮಕ್ಕಳು ಜನಿಸಿದರು.

೧೮. ಉತ್ಕಲರಾಜನು ಉತ್ಕಲವೆಂಬ ದೇಶವನ್ನು ಆಳತೊಡಗಿದನು. ವಿನತಾಶ್ವನು ಪೂರ್ವ ಮತ್ತು ಪಶ್ಚಿಮದಿಕ್ಕುಗಳ ದೇಶವನ್ನಾಳಿದನು. ಗಯಕುಮಾರನು ಗಯೆಯನ್ನು ಆಳಿದನು.

shrinath.udupa@gmail.com

ದಿಕ್ಪೂರ್ವಾ ಮುನಿಶಾರ್ದೂಲಾ ಗಯಸ್ಯ ತು ಗಯಾ ಸ್ಮೃತಾ ।
ಪ್ರವಿಷ್ಟೇ ತು ಮನೌ ವಿಪ್ರಾ ದಿವಾಕರಮರಿಂದಮಂ ॥ ೧೯ ॥

ದಶಧಾ ತತ್ಪುನಃ ಕ್ಷತ್ರಮಕರೋತ್ಪೃಥಿವೀಮಿಮಾಂ ।
ಇಕ್ಷ್ವಾಕುರ್ಜ್ಯೇಷ್ಠದಾಯಾದೋ ಮಧ್ಯದೇಶಮವಾಪ್ತವಾನ್ ॥ ೨೦ ॥

ಕನ್ಯಾಭಾವಾತ್ತು ಸುದ್ಯುಮ್ನೋ ನೈತದ್ರಾಜ್ಯಮವಾಪ್ತವಾನ್ ।
ವಸಿಷ್ಟವಚನಾತ್ತ್ವಾಸೀತ್ಪ್ರತಿಷ್ಠಾನೇ ಮಹಾತ್ಮನಃ ॥ ೨೧ ॥

ಪ್ರತಿಷ್ಠಾ ಧರ್ಮರಾಜಸ್ಯ ಸುದ್ಯುಮ್ನಸ್ಯ ದ್ವಿಜೋತ್ತಮಾಃ ।
ತತ್ಪುರೂರವಸೇ ಪ್ರಾದಾದ್ರಾಜ್ಯಂ ಪ್ರಾಪ್ಯ ಮಹಾಯಶಾಃ ॥ ೨೨ ॥

ಮಾನವೇಯೋ ಮುನಿಶ್ರೇಷ್ಠಾಃ ಸ್ತ್ರೀಪುಂಸೋರ್ಲಕ್ಷಣೈರ್ಯುತಃ ।
ಧೃತವಾಂಸ್ತಾಮಿಲೇತ್ಯೇವಂ ಸುದ್ಯುಮ್ನೇತಿ ಚ ವಿಶ್ರುತಃ ॥ ೨೩ ॥

---

೧೯. ವೈವಸ್ವತಮನುವು ಸೂರ್ಯನನ್ನು ಸೇರಲು [ಮರಣವನ್ನು ಹೊಂದಲು] ಮುಂದೆ ಅವನ ಹತ್ತುಜನ ಮಕ್ಕಳು ಈ ಭೂಮಿಯನ್ನು ಹತ್ತು ಭಾಗವಾಗಿ ಮಾಡಿಕೊಂಡು ಬೇರೆಬೇರೆಯಾಗಿ ಆಳತೊಡಗಿದರು.

೨೦. ಹಿರಿಯುವನಾದ ಇಕ್ಷ್ವಾಕುಕುಮಾರನು ಭೂಮಿಯ ಮಧ್ಯದೇಶವನ್ನು ಆಳತೊಡಗಿದನು. ಸುದ್ಯುಮ್ನನು ಇಲಾದೇವಿಯ ಅವತಾರವಾದುದರಿಂದಲೂ ಪುರುಷ ಭಾವವು ಅವನಲ್ಲಿಲ್ಲದ್ದರಿಂದಲೂ ಅವನಿಗೆ ರಾಜ್ಯವು ಲಭಿಸಲಿಲ್ಲ.

೨೧. ಆದರೆ ಕುಲಪುರೋಹಿತನಾದ ವಸಿಷ್ಠಮುನಿಯ ಮಾತಿನಂತೆ ಆ ಸುದ್ಯುಮ್ನನು ಪ್ರತಿಷ್ಠಾನಗರವನ್ನು ಪಡೆದು ಅಲ್ಲಿ ರಾಜ್ಯವಾಳುತ್ತಿದ್ದನು.

೨೨ ಆಮೇಲೆ ಆ ರಾಜ್ಯನ್ನು ಸುದ್ಯುಮ್ನನು ಪುರೂರವನಿಗೆ ಕೊಟ್ಟನು.

೨೩. ಎಲೈ ಬ್ರಾಹ್ಮಣೋತ್ತಮರೇ. ಆ ಸುದ್ಯುಮ್ನನು ಸ್ತ್ರೀಪುರುಷರೀರ್ವರ ಲಕ್ಷಣಗಳಿಂದಲೂ ಕೂಡಿದ್ದನು. ಆದಕಾರಣ ಅವನು ಇಲಾದೇವಿ, ಪ್ರದ್ಯುಮ್ನ ಎಂಬ ಎರಡು ಹೆಸರುಗಳಿಂದಲೂ ಕರೆಯಲ್ಪಡುತ್ತಿದ್ದನು.

shrinath.udupa@gmail.com

ನಾರಿಷ್ಯಂತಾಃ ಶಕಾಃ ಪುತ್ರಾ ನಾಭಾಗಸ್ಯ ತು ಭೋ ದ್ವಿಜಾಃ ।
ಅಂಬರೀಷೋಽಭವತ್ಪುತ್ರಃ ಪಾರ್ಥಿವರ್ಷಭಸತ್ತಮಃ ॥ ೨೪ ॥

ಧೃಷ್ಟಸ್ಯ ಧಾರ್ಷ್ಟಕಂ ಕ್ಷತ್ರಂ ರಣದೃಪ್ತಂ ಬಭೂವ ಹ ।
ಕರೂಷಸ್ಯ ಚ ಕಾರೂಷಾಃ ಕ್ಷತ್ರಿಯಾ ಯುದ್ಧದುರ್ಮದಾಃ ॥ ೨೫ ॥

ನಾಭಾಗಧೃಷ್ಟಪುತ್ರಾಶ್ಚ ಕ್ಷತ್ರಿಯಾ ವೈಶ್ಯತಾಂ ಗತಾಃ ।
ಪ್ರಾಂಶೋರೇಕೋಽಭವತ್ಪುತ್ರಃ ಪ್ರಜಾಪತಿರಿತಿ ಸ್ಮೃತಃ ॥ ೨೬ ॥

ನರಿಷ್ಯಂತಸ್ಯ ದಾಯಾದೋ ರಾಜಾ ದಂಡಧರೋ ಯಮಃ ।
ಶರ್ಯಾತೇರ್ಮಿಥುನಂ ತ್ವಾಸೀದಾನರ್ತೋ ನಾಮ ವಿಶ್ರುತಃ ॥ ೨೭ ॥

ಪುತ್ರಃ ಕನ್ಯಾ ಸುಕನ್ಯಾ ಚ ಯಾ ಪತ್ನೀ ಚ್ಯವನಸ್ಯ ಹ ।
ಆನರ್ತಸ್ಯ ತು ದಾಯಾದೋ ರೈವೋ ನಾಮ ಮಹಾದ್ಯುತಿಃ ॥ ೨೮ ॥

---

೨೪. ಶಕರೆಂಬುವರು ನರಿಷ್ಯಂತನ ಮಕ್ಕಳು. ರಾಜೋತ್ತಮನಾದ ಅಂಬರೀಷನು ನಾಭಾಗನ ಮಗನು.

೨೫. ಧೃಷ್ಟನಿಗೆ ಧಾರ್ಷ್ಟಕರೆಂಬ ವೀರರಾದ ಕ್ಷತ್ರಿಯರು ಮಕ್ಕಳು ಜನಿಸಿದರು. ಮಹಾವೀರರಾದ "ಕಾರೂಷ" ರೆಂಬುವವರು ಕರೂಷರಾಜನಿಂದ ಜನಿಸಿದರು.

೨೬. ನಾಭಾಗ ಮತ್ತು ಧೃಷ್ಟನ ಮಕ್ಕಳು ಮುಂದೆ ತಮ್ಮ ಕರ್ಮದಿಂದ ವೈಶ್ಯರಾದರು. ಪ್ರಾಂಶುರಾಜನಿಗೆ ಪ್ರಜಾಪತಿ ಯೆಂಬುವವನು ಮಗನು.

೨೭. ಪಾಪಿಗಳಿಗೆ ಶಿಕ್ಷೆಯನ್ನು ವಿಧಿಸುವ ಯಮರಾಜನು ನರಿಷ್ಯಂತನ ಮಗನು. ಶರ್ಯಾತಿರಾಜನಿಗೆ ಮಕ್ಕಳಿಬ್ಬರು. ಆನರ್ತನು ಮೊದಲನೆಯವನು, ಎರಡನೆಯವಳು ಚ್ಯವನಋಷಿಯ ಪತ್ನಿಯಾದ ಸುಕನ್ಯಾದೇವಿಯು.

೨೮. ಆನರ್ತನ ಮಗನು ರೈವನೆಂಬರಾಜನು. ಅವನು ಆನರ್ತರಾಜ್ಯವಾದ ಕುಶಸ್ಥಲಿಯನ್ನು ಆಳುತ್ತಿದ್ದನು.

shrinath.udupa@gmail.com

ಆನರ್ತವಿಷಯಶ್ಚೈವ ಪುರೀ ಚಾಸ್ಯ ಕುಶಸ್ಥಲೀ ।
ರೈವಸ್ಯ ರೈವತಃ ಪುತ್ರಃ ಕಕುದ್ಮೀ ನಾಮ ಧಾರ್ಮಿಕಃ ॥ ೨೯ ॥

ಜ್ಯೇಷ್ಠಃ ಪುತ್ರಃ ಸ ತಸ್ಯಾಽಸೀದ್ರಾಜ್ಯಂ ಪ್ರಾಪ್ಯ ಕುಶಸ್ಥಲೀಂ ।
ಸ ಕನ್ಯಾಸಹಿತಃ ಶ್ರುತ್ವಾ ಗಾಂಧರ್ವಂ ಬ್ರಹ್ಮಣೋಽಂತಿಕೇ ॥ ೩೦ ॥

ಮುಹೂರ್ತಭೂತಂ ದೇವಸ್ಯ ತಸ್ಥೌ ಬಹುಯುಗಂ ದ್ವಿಜಾಃ ।
ಆಜಗಾಮ ಸ ಚೈವಾಥ ಸ್ವಾಂ ಪುರೀಂ ಯಾದವೈರ್ವೃತಾಂ ॥ ೩೧ ॥

ಕೃತಾಂ ದ್ವಾರವತೀಂ ನಾಮ ಬಹುದ್ವಾರಾಂ ಮನೋರಮಾಂ ।
ಭೋಜವೃಷ್ಣ್ಯಂಧಕೈರ್ಗುಪ್ತಾಂ ವಸುದೇವಪುರೋಗಮೈಃ ॥ ೩೨ ॥

ತತ್ರೈವ ರೈವತೋ ಜ್ಞಾತ್ವಾ ಯಥಾತತ್ತ್ವಂ ದ್ವಿಜೋತ್ತಮಾಃ ।
ಕನ್ಯಾಂ ತಾಂ ಬಲದೇವಾಯ ಸುಭದ್ರಾಂ ನಾಮ ರೇವತೀಂ ॥ ೩೩ ॥

---

೨೯. ರೈವನಿಗೆ ರೈವತ :ಕಕುದ್ಮೀ ಎಂಬಿಬ್ಬರು ಮಕ್ಕಳಿದ್ದರು. ಧಾರ್ಮಿಕನೂ ಹಿರಿಯನೂ ಆದ ಆ ರೈವತನು ಕುಶಸ್ಥಲಿಯನ್ನು ಆಳುತ್ತಿದ್ದನು.

೩೦. ಆ ರೈವತನಿಗೆ ಕನ್ಯೆಯೊರ್ವಳಿದ್ದಳು. ಅವಳಿಗೆ ಬಹಳಕಾಲದ ವರೆಗೆ ಅನುರೂಪನಾದ ವರನು ಸಿಗಲಿಲ್ಲವು. ಆಗ ರೈವತನು ಮಗಳನ್ನು ಕರೆದುಕೊಂಡು ಅವಳಿಗೆ ಅನುರೂಪನಾದ ವರನಾರೆಂದು ಕೇಳಲು ಬ್ರಹ್ಮಲೋಕಕ್ಕೆ ಹೋಗಿ ಅಲ್ಲಿ ಒಂದು ಮುಹೂರ್ತಕಾಲ ಇದ್ದನು. ಬಹ್ಮನ ಆ ಒಂದು ಮುಹೂರ್ತದಲ್ಲಿ ಅನೇಕ ಯುಗಗಳು ಕಳೆದು ಹೋದವು.

೩೧-೩೨. ಮಗಳಿಗೆ ಅನುರೂಪನಾದ ವರನನ್ನು ತಿಳಿದುಕೊಂಡು ರೈವತನು ಬ್ರಹ್ಮಲೋಕದಿಂದ ತನ್ನ ಪುರಿಗೆ ಬಂದನು. ಆಗ ಆ ನಗರಿಯು ಬದಲಾಗಿ ಅನೇಕ ಬಾಗಿಲುಗಳುಳ್ಳ, ಮನೋಹರವಾದ ದ್ವಾರವತಿ ಯಾಗಿತ್ತು. ಆ ದ್ವಾರವತಿ ಯನ್ನು ವಸುದೇವ ಮೊದಲಾದ ಯಾದವರು ಪಾಲಿಸುತ್ತಿದ್ದರು, [ಅನೇಕದ್ವಾರಗಳುಳ್ಳದ್ದರಿಂದ ಅದಕ್ಕೆ ದ್ವಾರವತಿಯೆಂದು ಹೆಸರು].

೩೩-೩೪. ಅಲ್ಲಿ ತಾನು ಬ್ರಹ್ಮಲೋಕಕ್ಕೆ ತೆರಳಿದಾಗ ಬಹುಯುಗಗಳು ಕಳೆದು ತನ್ನ ಪುರಿಯು ದ್ವಾರವತಿಯಾದುದನ್ನು ತಿಳಿದು ಆ ರೈವತನು ಆಮೇಲೆ

shrinath.udupa@gmail.com

ದತ್ವಾ ಜಗಾಮ ಶಿಖರಂ ಮೇರೋಸ್ತಪಸಿ ಸಂಸ್ಥಿತಃ ।
ರೇಮೇ ರಾಮೋಽಪಿ ಧರ್ಮಾತ್ಮಾ ರೇವತ್ಯಾ ಸಹಿತಃ ಸುಖೀ ॥ ೩೪ ॥

ಮುನಯ ಊಚುಃ

ಕಥಂ ಬಹುಯುಗೇ ಕಾಲೇ ಸಮತೀತೇ ಮಹಾಮತೇ ।
ನ ಜರಾ ರೇವತೀಂ ಪ್ರಾಪ್ತಾ ರೈವತಂ ಚ ಕಕುದ್ಮಿನಂ ॥ ೩೫ ॥

ಮೇರುಂ ಗತಸ್ಯ ವಾ ತಸ್ಯ ಶರ್ಯಾತೇಃ ಸಂತತಿಃ ಕಥಂ ।
ಸ್ಥಿತಾ ಪೃಥಿವ್ಯಾಮದ್ಯಾಪಿ ಶ್ರೋತುಮಿಚ್ಛಾಮ ತತ್ತ್ವತಃ ॥ ೩೬ ॥

ಲೋಮಹರ್ಷಣ ಉವಾಚ

ನ ಜರಾ ಕ್ಷುತ್ಪಿಪಾಸಾ ವಾ ನ ಮೃತ್ಯುರ್ಮುನಿಸತ್ತಮಾಃ ।
ಋತುಚಕ್ರಂ ಪ್ರಭವತಿ ಬ್ರಹ್ಮಲೋಕೇ ಸದಾನಘಾಃ ।
ಕಕುದ್ಮಿನಃ ಸ್ವರ್ಲೋಕಂ ತು ರೈವತಸ್ಯ ಗತಸ್ಯ ಹ ॥ ೩೭ ॥

ಹೃತಾ ಪುಣ್ಯಜನೈರ್ವಿಪ್ರಾ ರಾಕ್ಷಸೈಃ ಸಾ ಕುಶಸ್ಥಲೀ ।
ತಸ್ಯ ಭ್ರಾತೃಶತಂ ತ್ವಾಸೀದ್ಧಾರ್ಮಿಕಸ್ಯ ಮಹಾತ್ಮನಃ ॥ ೩೮ ॥

ತನ್ನ ಮಗಳಾದ ರೇವತೀದೇವಿಯನ್ನು ಬಲರಾಮನಿಗೆ ಮದುವೆಮಾಡಿಕೊಟ್ಟನು. ಆಮೇಲೆ ಆ ರೈವತನು ತಪಸ್ಸಿಗಾಗಿ ಮೇರುಶಿಖರಕ್ಕೆ ತೆರಳಿದನು. ಬಲರಾಮನು ರೇವತಿಯೊಡನೆ ವಿಹರಿಸುತ್ತಾ ಸುಖಿಯಾಗಿದ್ದನು.

೩೫. ಮುನಿಗಳು ಕೇಳಿದರು.—ಓ ಸೂತಮುನಿ, ರೇವತೀರೈವತರು ಬ್ರಹ್ಮನ ಬಳಿಗೆ ತೆರಳಿ ತಿರುಗಿಬರುವಾಗ ಅನೇಕಯುಗಗಳು ಕಳೆದುದರಿಂದ ಅವರು ತಿರುಗಿ ಬರುವಾಗ ಮುದುಕರಾಗಿರಲಿಲ್ಲವೇ ?

೩೬. ಶರ್ಯಾತಿಯ ಮಮ್ಮಗನಾದ ರೈವತನು ಮೇರುಪರ್ವತಕ್ಕೆ ತಪಸ್ಸಿಗೆ ತೆರಳಿದನೆಂದಮೇಲೆ ಮುಂದೆ ಅವನ ವಂಶವು ಬೆಳೆದುದು ಹೇಗೆ? ಇದರ ತತ್ತ್ವವನ್ನೂ ಕೇಳಲಿಚ್ಛಿಸುವೆವು ಎನ್ನಲು

೩೭. ಸೂತಮುನಿಯು ಹೇಳಿದನು.—ಎಲೈ ಬ್ರಾಹ್ಮಣರೇ, ಬ್ರಹ್ಮಲೋಕದಲ್ಲಿ ಮುಪ್ಪಾಗಲೀ, ಹಸಿವು ನೀರಡಕೆಗಳಾಗಲೀ, ಮರಣವಾಗಲೀ ಇರುವುದಿಲ್ಲ. ಬ್ರಹ್ಮಲೋಕದ ಮಹಿಮೆಯಂತಹುದು. ಋತುಚಕ್ರ [ಧರ್ಮಚಕ್ರ] ವು ಸದಾ ಅಲ್ಲಿ ಶೋಭಿಸುತ್ತಿರುವುದು.

೩೮ ರೈವತನು ದಿವಂಗತನಾಗಲು ಕುಶಸ್ಥಲಿಯನ್ನು ರಾಕ್ಷಸರು ಆಕ್ರಮಿಸಿದರು.

shrinath.udupa@gmail.com

ತದ್ವಧ್ಯಮಾನಂ ರಕ್ಷೋಭಿರ್ದಿಶಃ ಪ್ರಾಕ್ರಾಮದಚ್ಯುತಾಃ ।
ವಿದ್ರುತಸ್ಯ ಚ ವಿಪ್ರೇಂದ್ರಾಸ್ತಸ್ಯ ಭ್ರಾತೃಶತಸ್ಯ ವೈ ॥ ೩೯ ॥

ಅನ್ವವಾಯಸ್ತು ಸುಮಹಾಂಸ್ತತ್ರ ತತ್ರ ದ್ವಿಜೋತ್ತಮಾಃ ।
ತೇಷಾಂ ಹ್ಯೇತೇ ಮುನಿಶ್ರೇಷ್ಠಾಃ ಶರ್ಯಾತಾ ಇತಿ ವಿಶ್ರುತಾಃ ॥ ೪೦ ॥

ಕ್ಷತ್ರಿಯಾ ಗುಣಸಂಪನ್ನಾ ದಿಕ್ಷು ಸರ್ವಾಸು ವಿಶ್ರುತಾಃ ।
ಶರ್ವಶಃ ಸರ್ವಗಹನಂ ಪ್ರವಿಷ್ಟಾಸ್ತೇ ಮಹೌಜಸಃ ॥ ೪೧ ॥

ನಾಭಾಗಾರಿಷ್ಟಪುತ್ರೌ ದ್ವೌ ವೈಶ್ಯೌ ಬ್ರಾಹ್ಮಣತಾಂ ಗತೌ ।
ಕರೂಷಸ್ಯ ತು ಕಾರೂಷಾಃ ಕ್ಷತ್ರಿಯಾ ಯುದ್ಧದುರ್ಮದಾಃ ॥ ೪೨ ॥

ಪೃಷಧ್ರೋ ಹಿಂಸಯಿತ್ವಾ ತು ಗುರೋರ್ಗಾಂ ದ್ವಿಜಸತ್ತಮಾಃ ।
ಶಾಪಾಚ್ಛೂದ್ರತ್ವಮಾಪನ್ನೋ ನವೈತೇ ಪರಿಕೀರ್ತಿತಾಃ ॥ ೪೩ ॥

ಆ ರೈವತನಿಗೆ ನೂರುಮಂದಿ ಸಹೋದರರಿದ್ದರು. ಅವರು ರಾಕ್ಷಸರಿಂದ ಪೀಡಿಸಲ್ಪಟ್ಟವರಾಗಿ ದಿಕ್ಕುದಿಕ್ಕುಗಳಿಗೆ ಓಡಿಹೋದರು.

೩೯. ದಿಕ್ಕುದಿಕ್ಕುಗಳಿಗೆ ಓಡಿಹೋದ ಆ ರೈವತಸಹೋದರರ ಸಂತತಿಯು ಅಲ್ಲಲ್ಲಿ ಬೆಳೆದು ನೆಲಸಿತು.

೪೦-೪೧. ಆ ಸಂತತಿಯವರಿಗೆ “ ಶರ್ಯಾತ ” ರೆಂದು ಹೆಸರು, ಅವರೆಲ್ಲರೂ ಗುಣಶಾಲಿಗಳು, ಪರಾಕ್ರಮಿಗಳು. ಇವರೆಲ್ಲರೂ ರಾಕ್ಷಸರ ಭಯದಿಂದ ದಿಕ್ಕುದಿಕ್ಕುಗಳಲ್ಲಿ ಅರಣ್ಯವನ್ನು ಸೇರಿದರು.

೪೨. ನಾಭಾಗ ರಿಷ್ಟ ಇವರೀರ್ವರ ಮಕ್ಕಳು. ವೈಶ್ಯರಾಗಿದ್ದವರು ತಮ್ಮ ತಮ್ಮ ತಪೋಮಹಿಮೆಯಿಂದ ಬ್ರಾಹ್ಮಣರಾದರು. ಕರೂಷನ ಮಕ್ಕಳಾದ ಕಾರೂಷರು ಕ್ಷತ್ರಿಯರು ಮತ್ತು ಮಹಾವೀರರು.

೪೩. ಪೃಷಧ್ರನು ಗುರು [ವಸಿಷ್ಠ] ವಿನ ಹಸು [ಕಾಮಧೇನು] ವನ್ನು ಹಿಂಸಿಸಿ ಅವನ ಶಾಪದಿಂದ ಶೂದ್ರನಾದನು. ಎಲೈ ವಿಪ್ರರೇ ಹೀಗೆ ನಿಮಗೆ ವೈವಸ್ವತಮನುವಿನ ಒಂಭತ್ತು ಮಕ್ಕಳ ಚರಿತವನ್ನು ಸಂಕ್ಷೇಪವಾಗಿ ಹೇಳಿರುವೆನು.

shrinath.udupa@gmail.com

ವೈವಸ್ವತಸ್ಯ ತನಯೋ ಮನೋರ್ವೈ ಮುನಿಸತ್ತಮಾಃ ।
ಕ್ಷುವತಸ್ತು ಮನೋರ್ವಿಪ್ರಾ ಇಕ್ಷ್ವಾಕುರಭವತ್ಸುತಃ ॥ ೪೪ ॥

ತಸ್ಯ ಪುತ್ರಶತಂ ತ್ವಾಸೀದಿಕ್ಷ್ವಾಕೋರ್ಭೂರಿದಕ್ಷಿಣಂ ।
ತೇಷಾಂ ವಿಕುಕ್ಷಿರ್ಜ್ಯೇಷ್ಠಸ್ತು ವಿಕುಕ್ಷಿತ್ವಾದಯೋಧತಾಂ ॥ ೪೫ ॥

ಪ್ರಾಪ್ತಃ ಪರಮಧರ್ಮಜ್ಞ ಸೋಽಯೋಧ್ಯಾಧಿಪತಿಃ ಪ್ರಭುಃ ।
ಶಕುನಿಪ್ರಮುಖಾಸ್ತಸ್ಯ ಪುತ್ರಾಃ ಪಂಚಶತಂ ಸ್ಮೃತಾಃ ॥ ೪೬ ॥

ಉತ್ತರಾಪಥದೇಶಸ್ಯ ರಕ್ಷಿತಾರೋ ಮಹಾಬಲಾಃ ।
ಚತ್ವಾರಿಂಶದ್ದಶಾಷ್ಟೌ ಚ ದಕ್ಷಿಣಸ್ಯಾಂ ತಥಾ ದಿಶಿ ॥ ೪೭ ॥

ವಶಾತಿಪ್ರಮುಖಾಶ್ಚಾನ್ಯೇ ರಕ್ಷಿತಾರೋ ದ್ವಿಜೋತ್ತಮಾಃ ।
ಇಕ್ಷ್ವಾಕುಸ್ತು ವಿಕುಕ್ಷಿಂ ವಾ ಅಷ್ಟಕಾಯಾಮಥಾಽಽದಿಶತ್ ॥ ೪೮ ॥

---

೪೪. ಆ ಮನುವಿನ ಮಗನಾದ ಇಕ್ಷ್ವಾಕುವಿಗೆ ನೂರುಜನ ಮಕ್ಕಳಿದ್ದರು. ಅವರೆಲ್ಲರೂ ಮಹಾದಾನಶೀಲರು, ಉದಾರಿಗಳು.

೪೫. ಆ ನೂರುಜನಗಳಲ್ಲಿ ವಿಕುಕ್ಷಿಯೆಂಬುವನು ಹಿರಿಯವನು. ಅವನು ವಿಕುಕ್ಷಿ [ವೀರರಿಗುಚಿತವಾದ ನಡುವಿಲ್ಲದವನು] ಯಾದುದರಿಂದ ವೀರಯೋಧನಾಗಿರಲಿಲ್ಲ. ಧರ್ಮನಿಷ್ಠನಾದ ಆ ವಿಕುಕ್ಷಿಯು ಅಯೋಧ್ಯೆಯಲ್ಲಿ ರಾಜ್ಯವಾಳಿದನು.

೪೬. ಆ ವಿಕುಕ್ಷಿಗೆ ಶಕುನಿ ಮೊದಲಾದ ಐದುನೂರು [೫೦೦] ಮಂದಿ ಮಕ್ಕಳು. ಅವರಲ್ಲಿ ಕೆಲವರು ಭಾರತದ ಉತ್ತರಾಪಥವನ್ನು ಆಳುತ್ತಿದ್ದರು.

೪೭. ಅವರಲ್ಲಿ ಐವತ್ತೆಂಟು [೫೮] ಜನರು ವಶಾತಿ ಮೊದಲಾದ ವಿಕುಕ್ಷಿ ಪುತ್ರರು ದಕ್ಷಿಣದೇಶವನ್ನು ಆಳುತ್ತಿದ್ದರು.

೪೮. ಒಂದುದಿನ ಇಕ್ಷ್ವಾಕುವು ಅಷ್ಟಕಶ್ರಾದ್ಧಕ್ಕಾಗಿ ಮೃಗಗಳನ್ನು ಕೊಂದು ಮಾಂಸವನ್ನು ತೆಗೆದುಕೊಂಡು ಬಾ ಎಂದು ವಿಕುಕ್ಷಿಯನ್ನು ವನಕ್ಕೆ ಕಳುಹಿಸಿದನು.

shrinath.udupa@gmail.com

ಮಾಂಸಮಾನಯ ಶ್ರಾದ್ಧಾರ್ಥಂ ಮೃಗಾನ್ ಹತ್ವಾ ಮಹಾಬಲ ।
ಶ್ರಾದ್ಧಕರ್ಮಣಿ ಚೋದ್ದಿಷ್ಟೋ ಅಕೃತೇ ಶ್ರಾದ್ಧಕರ್ಮಣಿ ॥ ೪೯ ॥

ಭಕ್ಷಯಿತ್ವಾ ಶಶಂ ವಿಪ್ರಾ ಶಶಾದೊ ಮೃಗಯಾಂ ಗತಃ ।
ಇಕ್ಷ್ವಾಕುಣಾ ಪರಿತ್ಯಕ್ತೋ ವಸಿಷ್ಠವಚನಾತ್ಪ್ರಭುಃ ॥ ೫೦ ॥

ಇಕ್ಷ್ವಾಕೌ ಸಂಸ್ಥಿತೇ ವಿಪ್ರಾಃ ಶಶಾದಸ್ತು ನೃಪೋಽಭವತ್ ।
ಶಶಾದಸ್ಯ ತು ದಾಯಾದಃ ಕಕುತ್ಸ್ಥೋ ನಾಮ ವೀರ್ಯವಾನ್ ॥ ೫೧ ॥

ಅನೇನಾಸ್ತು ಕಕುತ್ಸ್ಥಸ್ಯ ಪೃಥುಶ್ಚಾನೇನಸಃ ಸ್ಮೃತಃ ।
ವಿಷ್ಟರಾಶ್ವಃ ಪೃಥೋಃ ಪುತ್ರಸ್ತಸ್ಮಾದಾರ್ದ್ರಸ್ತ್ವಜಾಯತ ॥ ೫೨ ॥

ಆರ್ದ್ರಸ್ಯ ಯುವನಾಶ್ವಸ್ತು ಶ್ರಾವಸ್ತಸ್ತತ್ಸುತೋ ದ್ವಿಜಾಃ ।
ಜಜ್ಞೇ ಶ್ರಾವಸ್ತಕೋ ರಾಜಾ ಶ್ರಾವಸ್ತೀ ಯೇನ ನಿರ್ಮಿತಾ ॥ ೫೩ ॥

---

೪೯. ವಿಕುಕ್ಷಿಯು ವನದಲ್ಲಿ ಬೇಟೆಯಾಡಿ ಮೃಗಗಳನ್ನು ಕೊಂದು ಬಹಳ ಹಸಿವುಗೊಂಡುದರಿಂದ ಶ್ರಾದ್ಧಕ್ಕಾಗಿ ಕೊಂದಿದ್ದ ಶಶ [ಮೊಲ] ದ ಮಾಂಸವನ್ನು ತಿಂದನು. ಆದರಿಂದ ಅವನಿಗೆ "ಶಶಾದ" ನೆಂದು ಮುಂದೆ ಹೆಸರಾಯಿತು.

೫೦. ಶ್ರಾದ್ಧಕ್ಕಾಗಿ ಮೀಸಲಾಗಿದ್ದ ಮಾಂಸವನ್ನು ತಿಂದ ಆ ವಿಕುಕ್ಷಿಯನ್ನು ಇಕ್ಷ್ವಾಕುವು ವಸಿಷ್ಠಮುನಿಯ ಮಾತಿನಂತೆ ರಾಜ್ಯದಿಂದ ಓಡಿಸಿದನು.

೫೧. ಮುಂದೆ ಇಕ್ಷ್ವಾಕುವು ದಿವಂಗತನಾಗಲು ಆ ಶಶಾದ [ವಿಕುಕ್ಷಿ] ನೇ ಅಯೋಧ್ಯೆಗೆ ರಾಜನಾದನು. ಆಗ ಅವನಿಗೆ ಕಕುತ್ಸ್ಥನೆಂಬ ಪರಾಕ್ರಮಿಯಾದ ಪುತ್ರನು ಜನಿಸಿದನು.

೫೨. ಕಕುತ್ಸ್ಥನ ಮಗನು ಅನೇನಾ ಎಂಬುವವನು. ಪೃಥುವೆಂಬುವವನು ಅನೇನರಾಜನ ಮಗನು. ಆ ಪೃಥುವಿನ ಮಗನು ವಿಷ್ಟರಾಶ್ವನೆಂಬುವನು. ಆ ವಿಷ್ಟರಾಶ್ವನಿಂದ ಆರ್ದ್ರನೆಂಬ ಪುತ್ರನು ಜನಿಸಿದನು.

೫೩. ಆರ್ದ್ರರಾಜನ ಮಗನು ಯುವನಾಶ್ವನು. ಶ್ರಾವಸ್ತನೆಂಬುವನು ಯುವನಾಶ್ವನ ಮಗನು. ಆ ಶ್ರಾವಸ್ತನು ಶ್ರಾವಸ್ತೀ ಯೆಂಬ ನಗರಿಯನ್ನು ನಿರ್ಮಿಸಿ ಅಲ್ಲಿ ರಾಜ್ಯವಾಳುತ್ತಿದ್ದನು.

shrinath.udupa@gmail.com

ಶ್ರಾವಸ್ತಸ್ಯ ತು ದಾಯಾದೋ ಬೃಹದಶ್ವೋ ಮಹೀಪತಿಃ ।
ಕುವಲಾಶ್ವಃ ಸುತಸ್ತಸ್ಯ ರಾಜಾ ಪರಮಧಾರ್ಮಿಕಃ ॥ ೫೪ ॥

ಯಃ ಸ ಧುಂಧುವಧಾದ್ರಾಜಾ ಧುಂಧುಮಾರತ್ವಮಾಗತಃ ॥ ೫೫ ॥

॥ ಮುನಯ ಊಚುಃ ॥

ಧುಂಧೋರ್ವಧಂ ಮಹಾಪ್ರಾಜ್ಞ ಶ್ರೋತುಮಿಚ್ಛಾಮ ತತ್ತ್ವತಃ ।
ಯದ್ವಧಾತ್ಕುವಲಾಶ್ವೋಽಸೌ ಧುಂಧುಮಾರತ್ವಮಾಗತಃ ॥ ೫೬ ॥

॥ ಲೋಮಹರ್ಷಣ ಉವಾಚ ॥

ಕುವಲಾಶ್ವಸ್ಯ ಪುತ್ರಾಣಾಂ ಶತಮುತ್ತಮಧನ್ವಿನಾಂ ।
ಸರ್ವೇ ವಿದ್ಯಾಸು ನಿಷ್ಣಾತಾ ಬಲವಂತೋ ದುರಾಸದಾಃ ॥ ೫೭ ॥

ಬಭೂವುರ್ಧಾರ್ಮಿಕಾಃ ಸರ್ವೇ ಯಜ್ವಾನೋ ಭೂರಿದಕ್ಷಿಣಾಃ ।
ಕುವಲಾಶ್ವಂ ಪಿತಾ ರಾಜ್ಯೇ ಬೃಹದಶ್ವೋ ನ್ಯಯೋಜಯತ್ ॥ ೫೮ ॥

೫೪-೫೫. ಬೃಹದಶ್ವನೆಂಬುವವನು ಶ್ರಾವಸ್ತನ ಮಗನು. ಬೃಹದಶ್ವನ ಮಗನು ಕುವಲಾಶ್ವನು. ಅವನು ಮಹಾಧಾರ್ಮಿಕನಾದ ರಾಜನಾಗಿದ್ದನು. ಮುಂದೆ ಅವನು ಧುಂಧುವೆಂಬ ಶತ್ರುರಾಜನನ್ನು ಸಂಹರಿಸಿ ಧುಂಧುಮಾರನೆಂಬ ಹೆಸರನ್ನು ಪಡೆದನು.

೫೬. ಮುನಿಗಳು ಕೇಳಿದರು.—ಓ ಬುದ್ಧಿಶಾಲಿಯಾದ ಸೂತನೇ, ಯಾವನನ್ನು ಕೊಂದು ಕುವಲಾಶ್ವನು ಧುಂಧುಮಾರನೆಂಬ ಬಿರುದನ್ನು ಪಡೆದನೋ ಆ ಧುಂಧುವಿನ ಸಂಹಾರವನ್ನು ಕೇಳಲಿಚ್ಛಿಸುವೆವು ದಯವಿಟ್ಟು ಹೇಳುಎನ್ನಲು,

೫೭. ಸೂತಮುನಿಯು ಹೇಳಿದನು.—ಎಲೈ ಬ್ರಾಹ್ಮಣೋತ್ತಮರೇ, ಆ ಕುವಲಾಶ್ವನಿಗೆ ನೂರುಮಂದಿ ಮಕ್ಕಳಿದ್ದರು. ಅವರೆಲ್ಲರೂ ಉತ್ತಮಬಿಲ್ಲುಗಾರರು. ವಿದ್ಯಾವಂತರು. ಬಲಶಾಲಿಗಳು. ಧಾರ್ಮಿಕರು. ಅನೇಕ ಯಾಗಗಳನ್ನು ಮಾಡಿ ಚೆನ್ನಾಗಿ ದಾನಮಾಡುತ್ತಿದ್ದರು. ಮಹಾ ಉದಾರಿಗಳು.

೫೮. ಕುವಲಾಶ್ವನನ್ನು ಅವನ ತಂದೆಯಾದ ಬೃಹದಶ್ವನು ರಾಜ್ಯದಲ್ಲಿ ಸ್ಥಾಪಿಸಿ ತಾನು ತಪಸ್ಸಿಗಾಗಿ ವನಕ್ಕೆ ಹೋದನು.

shrinath.udupa@gmail.com

ಪುತ್ರಸಂಕ್ರಾಮಿತಶ್ರೀಸ್ತು ವನಂ ರಾಜಾ ವಿವೇಶ ಹ ।
ತಮುತ್ತಂಕೋಽಥ ವಿಪ್ರರ್ಷಿಃ ಪ್ರಯಾಂತಂ ಪ್ರತ್ಯವಾರಯತ್ ॥ ೫೯ ॥

॥ ಉತ್ತಂಕ ಉವಾಚ ॥

ಭವತಾ ರಕ್ಷಣಂ ಕಾರ್ಯಂ ತಚ್ಚ ಕರ್ತುಂ ತ್ವಮರ್ಹಸಿ ।
ನಿರುದ್ವಿಗ್ನಸ್ತಪಶ್ಚರ್ತುಂ ನ ಹಿ ಶಕ್ನೋಮಿ ಪಾರ್ಥಿವ ॥ ೬೦ ॥

ಮಮಾಽಽಶ್ರಮಸಮೀಪೇ ವೈ ಸಮೇಷು ಮರುಧನ್ವಸು ।
ಸಮುದ್ರೋ ವಾಲುಕಾಪೂರ್ಣ ಉದ್ದಾಲಕ ಇತಿ ಸ್ಮೃತಃ ॥ ೬೧ ॥

ದೇವತಾನಾಮವಧ್ಯಶ್ಚ ಮಹಾಕಾಯೋ ಮಹಾಬಲಃ ।
ಅಂತರ್ಭೂಮಿಗತಸ್ತತ್ರ ವಾಲುಕಾಂತರ್ಹಿತೋ ಮಹಾನ್ ॥ ೬೨ ॥

ರಾಕ್ಷಸಸ್ಯ ಮಧೋಃ ಪುತ್ರೋ ಧುಂಧುರ್ನಾಮ ಮಹಾಸುರಃ ।
ಶೇತೇ ಲೋಕವಿನಾಶಾಯ ತಪ ಆಸ್ಥಾಯ ದಾರುಣಂ ॥ ೬೩ ॥

---

೫೯. ವನಕ್ಕೆ ತೆರಳುತ್ತಲಿರುವ ಆ ಬೃಹದಶ್ವನನ್ನು ಉತ್ತಂಕನೆಂಬ ಮಹರ್ಷಿಯು ತಡೆದು.

೬೦. ಎಲೈ ರಾಜ! ರಾಜನಾದವನು ಪ್ರಜೆಗಳನ್ನು ಆಪತ್ತಿನಿಂದ ರಕ್ಷಿಸಬೇಕು. ಅದನ್ನು ಈಗ ನೀನು ಮಾಡಬೇಕಾಗಿರುವುದು. ನನ್ನ ತಪಸ್ಸಿಗೆ ತುಂಬಾ ತೊಂದರೆಯುಂಟಾಗಿದೆ. ಅದನ್ನು ನೀನು ಪರಿಹರಿಸಬೇಕು.

೬೧. ನನ್ನ ಆಶ್ರಮಸಮೀಪದಲ್ಲಿ ಮರುಪ್ರದೇಶವಿರುವುದು. ಅದು ಸಮುದ್ರದಂಡೆಯಲ್ಲಿದ್ದು ಮರಳಿನಿಂದ ತುಂಬಿರುವುದು. ಆ ಪ್ರದೇಶಕ್ಕೆ ಉದ್ದಾಲಕವೆಂದು ಹೆಸರು.

೬೨. ಅಲ್ಲಿ ಓರ್ವ ರಾಕ್ಷಸನಿರುವನು, ಅವನು ದೊಡ್ಡ ಶರೀರವುಳ್ಳವನಾಗಿದ್ದು ಮಹಾ ಬಲಿಷ್ಠನಾಗಿರುವನು. ಮಾಯಾವಿಯಾದ ಆ ಅಸುರನು ಆ ಪ್ರದೇಶದಲ್ಲಿ ಮರಳುಗಳ ಮಧ್ಯಭಾಗದಲ್ಲಿ ಅಡಗಿಕೊಂಡಿರುವನು.

೬೩. ಆ ಅಸುರನು ಮಧುರಾಕ್ಷಸನ ಮಗನು. ಧುಂಧುವೆಂದು ಅವನ ಹೆಸರು. ಅವನು ಲೋಕನಾಶಕ್ಕಾಗಿ ಅಲ್ಲಿ ಘೋರ ತಪಸ್ಸನ್ನು ಆಚರಿಸುತ್ತಲಿರುವನು.

shrinath.udupa@gmail.com

ಸಂವತ್ಸರಸ್ಯ ಪರ್ಯಂತೇ ಸ ನಿಶ್ವಾಸಂ ವಿಮುಂಚತಿ ।
ಯದಾ ತದಾ ಮಹೀ ತತ್ರ ಚಲತಿ ಸ್ಮ ನರಾಧಿಪ ॥ ೬೪ ॥

ತಸ್ಯ ನಿಃಶ್ವಾಸವಾತೇನ ರಜ ಉದ್ಧೂಯತೇ ಮಹತ್ ।
ಆದಿತ್ಯಪಥಮಾವೃತ್ಯ ಸಪ್ತಾಹಂ ಭೂಮಿಕಂಪನಂ ॥ ೬೫ ॥

ಸವಿಸ್ಫುಲಿಂಗಂ ಸಾಂಗಾರಂ ಸಧೂಮಮತಿದಾರುಣಂ ।
ತೇನ ತಾತ ನ ಶಕ್ನೋಮಿ ತಸ್ಮಿನ್ ಸ್ಥಾತುಂ ಸ್ವ ಆಶ್ರಮೇ ॥ ೬೬ ॥

ತಂ ವಾರಯ ಮಹಾಕಾಯಂ ಲೋಕಾನಾಂ ಹಿತಕಾಮ್ಯಯಾ ।
ಲೋಕಾಃ ಸ್ವಸ್ಥಾ ಭವಂತ್ಯದ್ಯ ತಸ್ಮಿನ್ವಿನಿಹತೇ ತ್ವಯಾ ॥ ೬೭ ॥

ತ್ವಂ ಹಿ ತಸ್ಯ ವಧಾಯೈಕಃ ಸಮರ್ಥಃ ಪೃಥಿವೀಪತೇ ।
ವಿಷ್ಣುನಾ ಚ ವರೋ ದತ್ತೋ ಮಹ್ಯಂ ಪೂರ್ವಯುಗೇ ನೃಪ ॥ ೬೮ ॥

ಯಸ್ತಂ ಮಹಾಸುರಂ ರೌದ್ರಂ ಹನಿಷ್ಯತಿ ಮಹಾಬಲಂ ।
ತಸ್ಯ ತ್ವಂ ವರದಾನೇನ ತೇಜಶ್ಚಾऽऽಪ್ಯಾಯಯಿಷ್ಯಸಿ ॥ ೬೯ ॥

---

೬೪. ಅವನು ತಪಸ್ಸುಮಾಡುತ್ತಲಿದ್ದು ವರ್ಷಕ್ಕೊಮ್ಮೆ ನಿಟ್ಟುಸಿರೊಂದನ್ನು ಬಿಡುವನು. ಆಗ ಆ ನಿಟ್ಟುಸಿರಿನ ವೇಗದಿಂದ ಭೂಮಿಯು ಅಲುಗಾಡುವುದು.

೬೫. ಆ ರಾಕ್ಷಸನ ನಿಟ್ಟುಸಿರಿನ ಗಾಳಿಯಿಂದ ಹೆಚ್ಚಾಗಿ ಧೂಳೆದ್ದು ಸೂರ್ಯ ಮಂಡಲವನ್ನು ವ್ಯಾಪಿಸುತ್ತದೆ. ಆಗ ಏಳುದಿನಗಳ ವರೆಗೆ ಭೂಕಂಪವಾಗುತ್ತದೆ ಮತ್ತು ಬೆಂಕಿಕೆಂಡಗಳನ್ನು ಭೂಮಿಯು ಉಗುಳುತ್ತ ಹೊಗೆಯೇಳುತ್ತದೆ.

೬೬-೬೭. ಈ ಕಾರಣದಿಂದ ನಾನು ನನ್ನ ಆಶ್ರಮದಲ್ಲಿ ಇರಲುಸಾಧ್ಯವಿಲ್ಲ. ಎಲೈ ತಂದೆ ಲೋಕಕ್ಷೇಮಕ್ಕಾಗಿ ಭೀಮಕಾಯನಾದ ಆ ಅಸುರನನ್ನು ಸಂಹರಿಸು. ಅವನನ್ನು ಸಂಹರಿಸಿದರೆ ಜನಗಳು ಸುಖಿಗಳಾಗುವರು.

೬೮-೬೯. ಎಲೈ ರಾಜನೆ, ಅವನನ್ನು ಕೊಲ್ಲಲು ನೀನೊಬ್ಬನೇ ಸಮರ್ಥನು. ಹಿಂದಿನ ಯುಗದಲ್ಲಿ ಹರಿಯು " ಈ ಭಯಂಕರನೂ ಬಲಿಷ್ಠನೂ ಕ್ರೂರನೂ ಆದ ರಾಕ್ಷಸನನ್ನು ಯಾವನು ಕೊಲ್ಲುವನೋ ಅವನಿಗೆ ನೀನು ವರವನ್ನು ಕೊಟ್ಟು ಅವನ ತೇಜಸ್ಸನ್ನು ಹೆಚ್ಚಿಸುವ ಮಹಿಮೆಯುಳ್ಳವನಾಗುವೆ " ಎಂದು ನನಗೆ ವರ ವನ್ನು ಕೊಟ್ಟಿರುವನು.

shrinath.udupa@gmail.com

ನ ಹಿ ಧುಂಧುರ್ಮಹಾತೇಜಾಸ್ತೇಜಸ್ಯಾಲ್ಪೇನ ಶಕ್ಯತೇ ।
ನಿರ್ದಗ್ಧುಂ ಪೃಥಿವೀಪಾಲ ಚಿರಂ ಯುಗಶತೈರಪಿ ॥ ೭೦ ॥

ವೀರ್ಯಂ ಚ ಸುಮಹತ್ತಸ್ಯ ದೇವೈರಪಿ ದುರಾಸದಂ ।
ಸ ಏವಮುಕ್ತೋ ರಾಜರ್ಷಿರುತ್ತಂಕೇನ ಮಹಾತ್ಮನಾ
ಕುವಲಾಶ್ವಂ ಸುತಂ ಪ್ರಾದಾತ್ತಸ್ಮೈ ಧುಂಧುನಿಬರ್ಹಣೇ ॥ ॥ ೭೧ ॥

॥ ಬೃಹದಶ್ವ ಉವಾಚ ॥

ಭಗವನ್ನ್ಯಸ್ತಶಸ್ತ್ರೋಽಹಮಯಂ ತು ತನಯೋ ಮಮ ।
ಭವಿಷ್ಯತಿ ದ್ವಿಜಶ್ರೇಷ್ಠ ಧುಂಧುಮಾರೋ ನ ಸಂಶಯಃ ॥ ೭೨ ॥

ಸ ತಂ ವ್ಯಾದಿಶ್ಯ ತನಯಂ ರಾಜರ್ಷಿರ್ಧುಂಧುಮಾರಣೇ ।
ಜಗಾಮ ಪರ್ವತಾಯೈವ ನೃಪತಿಃ ಸಂಶಿತವ್ರತಃ ॥ ೭೩ ॥

॥ ಲೋಮಹರ್ಷಣ ಉವಾಚ ॥

ಕುವಲಾಶ್ವಸ್ತು ಪುತ್ರಾಣಾಂ ಶತೇನ ಸಹ ಭೋ ದ್ವಿಜಾಃ ।
ಪ್ರಾಯಾದುತ್ತಂಕಸಹಿತೋ ಧುಂಧೋಸ್ತಸ್ಯ ನಿಬರ್ಹಣೇ ॥ ೭೪ ॥

---

೭೦. ಮಹಾವೀರನಾದ ಆ ಧುಂಧುವನ್ನು ಸಾಮಾನ್ಯವಾದ ಪರಾಕ್ರಮದಿಂದ ಸಂಹರಿಸಲು ನೂರು ಯುಗಗಳಾದರೂ ಸಾಧ್ಯವಿಲ್ಲ. ಮಹಾಪರಾಕ್ರಮಿಯಾದ ಅವನನ್ನು ದೇವತೆಗಳೂ ಸೋಲಿಸಲಾರರು ಎಂದನು.

೭೧. ಹೀಗೆ ಮಹಾತ್ಮನಾದ ಉತ್ತಂಕಮುನಿಯು ಹೇಳಲು ರಾಜರ್ಷಿಯಾದ ಬೃಹದಶ್ವನು ತನ್ನ ಮಗನಾದ ಕುವಲಾಶ್ವನನ್ನು ಧುಂಧುವನ್ನು ಕೊಲ್ಲಲೋಸುಗ ಆ ಮುನಿಗೆ ಒಪ್ಪಿಸಿ

೭೨. ಬೃಹದಶ್ವನು ಹೇಳಿದನು:—ಓ ಭಗರ್ವ, ನಾನು ಶಸ್ತ್ರಗಳನ್ನು ಪರಿತ್ಯಾಗಮಾಡಿರುವೆನು. ಈ ನನ್ನ ಮಗನು ಧುಂಧುವನ್ನು ಸಂಹರಿಸಿ ಕೀರ್ತಿವಂತನಾಗುವನು. ಆದುದರಿಂದ ಇವನನ್ನೂ ಕಳುಹಿಸಿರುವೆನು ಎಂದನು.

೭೩. ಹೀಗೆ ಪುತ್ರನನ್ನು ಧುಂಧುಸಂಹಾರಮಾಡಲು ನಿಯಮಿಸಿ ರಾಜರ್ಷಿಯಾದ ಬೃಹದಶ್ವನು ತಪಸ್ಸಿಗಾಗಿ ಪರ್ವತಕ್ಕೆ ತೆರಳಿದನು.

೭೪. ಸೂತಮುನಿಯು ಹೇಳಿದನು.—ಆಮೇಲೆ ಕುವಲಾಶ್ವನು ವೀರರಾದ ತನ್ನ ನೂರುಮಂದಿ ಮಕ್ಕಳೊಡನೆ ಧುಂಧುವನ್ನು ಸಂಹರಿಸಲು ಉತ್ತಂಕಮುನಿಯ ಜೊತೆಯಲ್ಲಿ ಹೊರಟನು.

shrinath.udupa@gmail.com

ತಮಾವಿಶತ್ತದಾ ವಿಷ್ಣುಸ್ತೇಜಸಾ ಭಗವಾನ್ ಪ್ರಭುಃ ।
ಉತ್ತಂಕಸ್ಯ ನಿಯೋಗಾದ್ವೈ ಲೋಕಾನಾಂ ಹಿತಕಾಮ್ಯಯಾ ॥ ೭೫ ॥

ತಸ್ಮಿನ್ ಪ್ರಯಾತೇ ದುರ್ಧರ್ಷೇ ದಿವಿ ಶಬ್ದೋ ಮಹಾನಭೂತ್ ।
ಏಷ ಶ್ರೀಮಾನವಧ್ಯೋಽದ್ಯ ಧುಂಧುಮಾರೋ ಭವಿಷ್ಯತಿ ॥ ೭೬ ॥

ದಿವ್ಯೈರ್ಗಂಧೈಶ್ಚ ಮಾಲ್ಯೈಶ್ಚ ತಂ ದೇವಾಃ ಸಮವಾಕಿರನ್ ।
ದೇವದುಂದುಭಯಶ್ಚೈವ ಪ್ರಣೇದುರ್ದ್ವಿಜಸತ್ತಮಾಃ ॥ ೭೭ ॥

ಸ ಗತ್ವಾ ಜಯತಾಂ ಶ್ರೇಷ್ಠಸ್ತನಯೈಃ ಸಹ ವೀರ್ಯವಾನ್ ।
ಸಮುದ್ರಂ ಖಾನಯಾಮಾಸ ವಾಲುಕಾಂತರಮವ್ಯಯಂ ॥ ೭೮ ॥

ತಸ್ಯ ಪುತ್ರೈಃ ಖನದ್ಭಿಶ್ಚ ವಾಲುಕಾಂತರ್ಹಿತಸ್ತದಾ ।
ಧುಂಧುರಾಸಾದಿತೊ ವಿಪ್ರಾ ದಿಶಮಾವೃತ್ಯ ಪಶ್ಚಿಮಾಂ ॥ ೭೯ ॥

---

೭೫. ಆಗ ಭಗವಂತನಾದ ಹರಿಯು ಉತ್ತಂಕಮುನಿಯ ಮಾತಿನಂತೆ ಲೋಕಕ್ಷೇಮಕ್ಕಾಗಿ ಆ ಕುವಲಾಶ್ವನ ಶರೀರದಲ್ಲಿ ತೇಜೋರೂಪದಿಂದ ಪ್ರವೇಶಿಸಿದನು.

೭೬. ವಿಷ್ಣುವು ಕುವಲಾಶ್ವನ ಶರೀರವನ್ನು ಪ್ರವೇಶಿಸಲು ಆಕಾಶದಲ್ಲಿ ಮಹಾಶಬ್ದವು ಕೇಳಿಸಿತು. "ಈ ಪರಾಕ್ರಮಿಯಾದ ಕುವಲಾಶ್ವನು ಈಗ ಶತ್ರುಗಳಿಗೆ ಅವಧ್ಯನಾದನು. ಇವನು ಧುಂಧುವನ್ನು ಸಂಹರಿಸುವನು" ಎಂದು ದೇವತೆಗಳು ಮಾತನಾಡಿಕೊಂಡರು.

೭೭. ಸುಮನೋಹರವಾದ ಗಂಧಗಳನ್ನೂ ನಂದನವನದ ಪುಷ್ಪಗಳನ್ನೂ ದೇವತೆಗಳು ಆ ಕುವಲಾಶ್ವನಮೇಲೆ ಸುರಿದರು. ದೇವದುಂಧುಭಿಗಳು ಮೊಳಗಿದುವು.

೭೮. ಮಹಾವೀರನಾದ ಆ ಕುವಲಾಶ್ವನು ತನ್ನ ಪುತ್ರರೊಡನೆ ಸಮುದ್ರದೆಡೆಗೆ ತೆರಳಿ ಅದರ ಮರಳುಪ್ರದೇಶವನ್ನು ತೋಡಿಸಿದನು.

೭೯. ಕುವಲಾಶ್ವನ ಮಕ್ಕಳು ಮರಳುಪ್ರದೇಶವನ್ನು ತೋಡಲು ಅದರ ಮಧ್ಯದಲ್ಲಿ ಪಶ್ಚಿಮದಿಕ್ಕನ್ನಾವರಿಸಿ ಕುಳಿತಿದ್ದ ಧುಂಧುರಾಕ್ಷಸನು ಕಾಣಿಸಿದನು.

shrinath.udupa@gmail.com

ಮುಖಜೇನಾಗ್ನಿನಾ ಕ್ರೋಧಾಲ್ಲೋಕಾನುದ್ವರ್ತಯನ್ನಿವ ।
ವಾರಿಸುಸ್ರಾವವೇಗೇನ ಮಹೋದಧಿರಿವೋದಯೇ ॥ ೮೦ ॥

ಸೌಮುಸ್ಯ ಮುನಿಶಾರ್ದೂಲಾ ವರೋರ್ಮಿಕಲಿಲೋ ಮಹಾನ್ ।
ತಸ್ಯ ಪುತ್ರಶತಂ ದಗ್ಧಂ ತ್ರಿಭಿರೂನಂ ತು ರಕ್ಷಸಾ ॥ ೮೧ ॥

ತತಃ ಸ ರಾಜಾ ದ್ಯುತಿಮಾನ್ರಾಕ್ಷಸಂ ತಂ ಮಹಾಬಲಂ ।
ಆಸಸಾದ ಮಹಾತೇಜಾ ಧುಂಧುಂ ಧುಂಧುವಿನಾಶನಃ ॥ ೮೨ ॥

ತಸ್ಯ ವಾರಿಮಯಂ ವೇಗಮಾಪೀಯ ಸ ನರಾಧಿಪಃ ।
ಯೋಗೀ ಯೋಗೇನ ವಹ್ನಿಂ ಚ ಶಮಯಾಮಾಸ ವಾರಿಣಾ ॥ ೮೩ ॥

ನಿಹತ್ಯ ತಂ ಮಹಾಕಾಯಂ ಬಲೇನೋದಕರಾಕ್ಷಸಂ ।
ಉತ್ತಂಕಂ ದರ್ಶಯಾಮಾಸ ಕೃತಕರ್ಮಾ ನರಾಧಿಪಃ ॥ ೮೪ ॥

---

೮೦. ಆಗ ಆ ಅಸುರನು ಲೋಕವನ್ನು ನಾಶಮಾಡುವಂತೆ ಮುಖದಿಂದ ಅಗ್ನಿಯನ್ನುಗುಳುತ್ತಾ ಚಂದ್ರೋದಯಕಾಲದಲ್ಲಿನ ಸಮುದ್ರದಂತೆ ನೀರನ್ನು ಸುರಿಸಿದನು.

೮೧. ಕುವಲಾಶ್ವನ [೯೭] ತೊಂಭತ್ತೇಳುಮಂದಿ ಮಕ್ಕಳನ್ನೂ ತನ್ನ ಮುಖಾಗ್ನಿಯಿಂದ ನಾಶಮಾಡಿದನು.

೮೨–೮೩. ಆಮೇಲೆ ಆ ಕುವಲಾಶ್ವರಾಜನು ಧುಂಧುವನ್ನು ಕೊಲ್ಲಲೋಸುಗ ಅವನ ಬಳಿಗೆ ಬಂದು ಆ ರಾಕ್ಷಸನ ಜಲವೇಗವನ್ನು ತನ್ನ ಯೋಗಶಕ್ತಿಯಿಂದ ಕುಡಿದು ಅಗ್ನಿಯನ್ನು ನಾಶಮಾಡಿದನು.

೮೪. ಬಳಿಕ ಆ ಭೀಮಕಾಯನಾದ ಜಲರಾಕ್ಷಸನನ್ನು ಕೊಂದು ಕುವಲಾಶ್ವನು ಕೃತಕೃತ್ಯನಾಗಿ ಉತ್ತಂಕಮುನಿಯನ್ನು ಕಂಡು ನಮಸ್ಕರಿಸಿದನು.

shrinath.udupa@gmail.com

ಉತ್ತಂಕಸ್ತು ವರಂ ಪ್ರಾದಾತ್ತಸ್ಮೈ ರಾಜ್ಞೇ ಮಹಾತ್ಮನೇ ।
ವದೌ ತಸ್ಯಾಕ್ಷಯಂ ವಿತ್ತಂ ಶತ್ರುಭಿಶ್ಚಾಪರಾಜಿತಂ ॥ ೮೫ ॥

ಧರ್ಮೇ ರತಿಂ ಚ ಸತತಂ ಸ್ವರ್ಗೇ ವಾಸಂ ತಥಾಽಕ್ಷಯಂ ।
ಪುತ್ರಾಣಾಂ ಚಾಕ್ಷಯಾನ್ಲೋಕಾನ್ ಸ್ವರ್ಗೇ ಯೇ ರಕ್ಷಸಾ ಹತಾಃ ॥ ೮೬ ॥

ತಸ್ಯ ಪುತ್ರಾಸ್ತ್ರಯಃ ಶಿಷ್ಟಾ ದೃಢಾಶ್ವೋ ಜ್ಯೇಷ್ಠ ಉಚ್ಯತೇ ।
ಚಂದ್ರಾಶ್ವಕಪಿಲಾಶ್ವೌ ತು ಕನೀಯಾಂಸೌ ಕುಮಾರಕೌ ॥ ೮೭ ॥

ಧೌಂಧುಮಾರೇರ್ದೃಢಾಶ್ವಸ್ಯ ಹರ್ಯಶ್ವಶ್ಚಾಽಽತ್ಮಜಃ ಸ್ಮೃತಃ ।
ಹರ್ಯಶ್ವಸ್ಯ ನಿಕುಂಭೋಽಭೂತ್ಕ್ಷತ್ರಧರ್ಮರತಃ ಸದಾ ॥ ೮೮ ॥

ಸಂಹತಾಶ್ವೋ ನಿಕುಂಭಸ್ಯ ಸುತೋ ರಣವಿಶಾರದಃ ।
ಅಕೃಶಾಶ್ವಕೃಶಾಶ್ವೌ ತು ಸಂಹತಾಶ್ವಸುತೌ ದ್ವಿಜಾಃ ॥ ೮೯ ॥

---

೮೫. ಉತ್ತಂಕಮುನಿಯು ಸಂತುಷ್ಟನಾಗಿ ಮಹಾತ್ಮನಾದ ಆ ರಾಜನಿಗೆ ಶತ್ರುಗಳ ಭಯಬರದಂತೆಯೂ ಅಪಾರವಾದ ಸಂಪತ್ತು ಸ್ಥಿರವಾಗಿರುವಂತೆಯೂ ವರವನ್ನನುಗ್ರಹಿಸಿದನು.

೮೬. ಸದಾ ಧರ್ಮದಲ್ಲಿ ಆಸಕ್ತಿಯಿರುವಂತೆಯೂ ಕೊನೆಯಲ್ಲಿ ಅಕ್ಷಯವಾದ ಸ್ವರ್ಗಲೋಕವಾಸವು ಲಭಿಸುವಂತೆಯೂ ಅನುಗ್ರಹಿಸಿದನು. ಮತ್ತು ರಾಕ್ಷಸನಿಂದ ಸಂಹರಿಸಲ್ಪಟ್ಟ ಅವನ ೯೭ ಮಂದಿ ಪುತ್ರರಿಗೆ ಅಕ್ಷಯವಾದ ಪುಣ್ಯಲೋಕವು ಲಭಿಸುವಂತೆಯೂ ವರವನ್ನು ಕೊಟ್ಟನು.

೮೭. ಆ ಕುವಲಾಶ್ವನ ಮಕ್ಕಳಲ್ಲಿ ಉಳಿದವರು ಮೂರುಜನರು. ಅವರಲ್ಲಿ ದೃಢಾಶ್ವನೆಂಬುವನು ಹಿರಿಯವನು. ಚಂದ್ರಾಶ್ವ, ಕಪಿಲಾಶ್ವ ರೆಂಬೀರ್ವರು ಕಿರಿಯರು.

೮೮. ಧುಂಧುಮಾರನ ಮಗನಾದ ದೃಢಾಶ್ವನಿಗೆ ಹರ್ಯಶ್ವನೆಂಬುವನು ಮಗನು. ಆ ಹರ್ಯಶ್ವನಿಗೆ ನಿಕುಂಭನೆಂಬುವನು ಮಗನು. ಆ ನಿಕುಂಭನು ಸದಾ ಕ್ಷತ್ರಿಯಧರ್ಮವನ್ನನುಸರಿಸಿ ಧರ್ಮದಿಂದ ರಾಜ್ಯವನ್ನಾಳುತ್ತಿದ್ದನು.

೮೯. ಸಂಹತಾಶ್ವನೆಂಬುವನು ನಿಕುಂಭನ ಮಗನು. ಅವನು ವೀರನಾಗಿದ್ದನು. ಅಕೃಶಾಶ್ವ ಮತ್ತು ಕೃಶಾಶ್ವರು ಸಂಹತಾಶ್ವನ ಮಕ್ಕಳು.

shrinath.udupa@gmail.com

ತಸ್ಯ ಹೈಮವತೀ ಕನ್ಯಾ ಸತಾಂ ಮತಾ ದೃಷದ್ವತೀ ।
ವಿಖ್ಯಾತಾ ತ್ರಿಷು ಲೋಕೇಷು ಪುತ್ರಶ್ಚಾಸ್ಯಾಃ ಪ್ರಸೇನಜಿತ್ ॥ ೯೦ ॥

ಲೇಭೇ ಪ್ರಸೇನಜಿದ್ಭಾರ್ಯಾಂ ಗೌರೀಂ ನಾಮ ಪವಿತ್ರತಾಂ ।
ಅಭಿಶಸ್ತಾ ತು ಸಾ ಭರ್ತ್ರಾ ನದೀ ವೈ ಬಾಹುದಾಽಭವತ್ ॥ ೯೧ ॥

ತಸ್ಯ ಪುತ್ರೋ ಮಹಾನಾಸೀದ್ಯುವನಾಶ್ವೋ ನರಾಧಿಪಃ ।
ಮಾಂಧಾತಾ ಯುವನಾಶ್ವಸ್ಯ ತ್ರಿಲೋಕವಿಜಯೀ ಸುತಃ ॥ ೯೨ ॥

ತಸ್ಯ ಚೈತ್ರರಥೀ ಭಾರ್ಯಾ ಶಶಬಿಂದೋಃ ಸುತಾಽಭವತ್ ।
ಸಾಧ್ವೀ ಬಿಂದುಮತೀ ನಾಮ ರೂಪೇಣಾಸದೃಶೀ ಭುವಿ ॥ ೯೩ ॥

ಪತಿವ್ರತಾ ಚ ಜ್ಯೇಷ್ಠಾ ಚ ಭ್ರಾತೄಣಾಮಯುತಸ್ಯ ವೈ ।
ತಸ್ಯಾಮುತ್ಪಾದಯಾಮಾಸ ಮಾಂಧಾತಾ ದ್ವೌ ಸುತೌ ದ್ವಿಜಾಃ ॥ ೯೪ ॥

---

೯೦. ಸಂಹತಾಶ್ವನಿಗೆ ಹೈಮವತೀ ಎಂಬ ಮಗಳಿದ್ದಳು. ದೃಷದ್ವತೀ ಎಂದೂ ಅವಳಗೆ ಮತ್ತೊಂದು ಹೆಸರು. ಅವಳು ಮಹಾಸಾಧ್ವಿಯೆಂದು ಪ್ರಸಿದ್ಧಳಾಗಿದ್ದಳು. ಪ್ರಸೇನ ಜಿತ್ ಎಂಬುವನು ಆ ದೃಷದ್ವತಿಯ ಮಗನು.

೯೧. ಆ ಪ್ರಸೇನಜಿತನು ಗೌರಿ ಎಂಬ ಪತಿವ್ರತೆಯಾದ ಸ್ತ್ರೀಯನ್ನು ಮದುವೆಯಾದನು. ಆಮೇಲೆ ಆ ಗೌರಿಯು ಯಾವುದೋ ಕಾರಣದಿಂದ ಪತಿಯಿಂದ ಶಪಿಸಲ್ಪಟ್ಟವಳಾಗಿ ಬಾಹುದಾ ಎಂಬ ನದಿಯಾದಳು.

೯೨. ಆ ಪ್ರಸೇನಜಿತನ ಮಗನು ಯುವನಾಶ್ವನು. ಮಾಂಧಾತೃರಾಜನು ಯುವನಾಶ್ವನಮಗಳು. ಆ ಮಾಂಧಾತನು ಮೂರು ಲೋಕಗಳನ್ನೂ ಜಯಿಸಿ ಚಕ್ರವರ್ತಿಯಾಗಿದ್ದನು.

೯೩. ಆ ಮಾಂಧಾತನು ಶಶಬಿಂದುವಿನ ಮಗಳಾದ ಬಿಂದುಮತಿಯೆಂಬುವಳನ್ನು ಮದುವೆಯಾದನು. ಅವಳಿಗೆ ಚೈತ್ರರಥೀ ಎಂದು ಇನ್ನೊಂದು ಹೆಸರು. ಆ ಬಿಂದುಮತಿಯು ಪತಿವ್ರತೆಯಾಗಿದ್ದುದಲ್ಲದೇ ತುಂಬಾ ರೂಪವತಿಯಾಗಿದ್ದಳು ಮತ್ತು ಅವಳು ಶಶಬಿಂದುವಿನ ಹತ್ತುಸಾವಿರ ಮಕ್ಕಳಲ್ಲಿ ಹಿರಿಯವಳಾಗಿದ್ದಳು.

೯೪. ಆ ಬಿಂದುಮತಿಯಲ್ಲಿ ಮಾಂಧಾತನು ಪುರುಕುತ್ಸ ಮತ್ತು ಮುಚುಕುಂದರೆಂಬ ಧರ್ಮಿಷ್ಠರಾದ ಮಕ್ಕಳನ್ನು ಪಡೆದನು.

shrinath.udupa@gmail.com

ಪುರುಕುತ್ಸಂ ಚ ಧರ್ಮಜ್ಞಂ ಮುಚುಕುಂದಂ ಚ ಪಾರ್ಥಿವಂ ।
ಪುರುಕುತ್ಸಸುತಸ್ತ್ವಾಸೀತ್ತ್ರಸದಸ್ಯುರ್ಮಹೀಪತಿಃ ॥ ೯೫ ॥

ನರ್ಮದಾಯಾಮಥೋತ್ಪನ್ನಃ ಸಂಭೂತಸ್ತಸ್ಯ ಚಾತ್ಮಜಃ ।
ಸಂಭೂತಸ್ಯ ತು ದಾಯಾದಸ್ತ್ರಿಧನ್ವಾ ರಿಪುಮರ್ದನಃ ॥ ೯೬ ॥

ರಾಜ್ಞಸ್ತ್ರಿಧನ್ವನಸ್ತ್ವಾಸೀದ್ವಿದ್ವಾಂಸ್ತ್ರಯ್ಯಾರುಣಃ ಪ್ರಭುಃ ।
ತಸ್ಯ ಸತ್ಯವ್ರತೋ ನಾಮ ಕುಮಾರೋಽಭೂನ್ಮಹಾಬಲಃ ॥ ೯೭ ॥

ಪರಿಗ್ರಹಣಮಂತ್ರಾಣಾಂ ವಿಘ್ನಂ ಚಕ್ರೇ ಸುದುರ್ಮತಿಃ ।
ಯೇನ ಭಾರ್ಯಾ ಕೃತೋದ್ವಾಹಾ ಹೃತಾ ಚೈವ ಪರಸ್ಯ ಹ ॥ ೯೮ ॥

ಬಾಲ್ಯಾತ್ಕಾಮಾಚ್ಚ ಮೋಹಾಚ್ಚ ಸಾಹಸಾಚ್ಚಾಪಲೇನ ಚ ।
ಜಹಾರ ಕನ್ಯಾಂ ಕಾಮಾರ್ತಃ ಕಸ್ಯಚಿತ್ಪುರವಾಸಿನಃ ॥ ೯೯ ॥

ಅಧರ್ಮಶಂಕುನಾ ತೇನ ತಂ ಸ ತ್ರಯ್ಯಾರುಣೋಽತ್ಯಜತ್ ।
ಅಪಧ್ವಂಸೇತಿ ಬಹುಶೋ ವದನ್ ಕ್ರೋಧಸಮನ್ವಿತಃ ॥ ೧೦೦ ॥

೯೫-೯೬. ತ್ರಸದಸ್ಯುವೆಂಬುವನು ಪುರುಕುತ್ಸನಿಗೆ ನರ್ಮದಾದೇವಿಯೆಂಬ ಪತ್ನಿಯಲ್ಲಿ ಜನಿಸಿದ ಮಗನು. ಸಂಭೂತನೆಂಬುವನು ತ್ರಸದಸ್ಯುವಿನ ಮಗನು. ಸಂಭೂತನ ಮಗನು ತ್ರಿಧನ್ವಾ ಎಂಬ ವೀರಕುಮಾರನು.

೯೭. ತ್ರಿಧನ್ವರಾಜನಿಗೆ ವಿದ್ವಾಂಸನಾದ ತ್ರಯ್ಯಾರುಣ ನೆಂಬ ಮಗನಿದ್ದನು. ಆ ತ್ರಯ್ಯಾರುಣನಿಗೆ ಸತ್ಯವ್ರತನೆಂಬ ವೀರಕುಮಾರನು ಜನಿಸಿದನು.

೯೮. ಆ ಸತ್ಯವ್ರತನು ದುಷ್ಟನಾಗಿದ್ದು ವಿವಾಹಮಂತ್ರಗಳಿಗೆ ವಿಘ್ನವನ್ನುಂಟುಮಾಡಿದನು. ಅವನು ಓರ್ವ ಪರಸ್ತ್ರೀಯನ್ನು ಅಪಹರಿಸಿಕೊಂಡು ಬಂದು ಮದುವೆಮಾಡಿಕೊಂಡಿದ್ದನು.

೯೯. ಆ ಸತ್ಯವ್ರತನು ಕಾಮಿಯಾಗಿದ್ದು ಹುಡುಗತನದಿಂದಲೂ ಮೋಹದಿಂದಲೂ ಕಾಮದಿಂದಲೂ ಚಾಪಲ್ಯದಿಂದಲೂ ಸಹ ಕೂಡಿ ಓರ್ವಪಟ್ಟಣಿಗನ ಕನ್ಯೆಯನ್ನು ಬಲಾತ್ಕಾರದಿಂದ ಅಪಹರಿಸಿದನು.

೧೦೦. ಹೀಗೆ ಅಧರ್ಮಿಯಾದ ಆ ಸತ್ಯವ್ರತನನ್ನು ತಂದೆಯಾದ ತ್ರಯ್ಯಾರುಣನು ಹಾಳಾಗಿ ಹೋಗು ಎಂದು ಕೋಪದಿಂದ ಗದರಿಸಿ ರಾಜ್ಯವನ್ನು ಬಿಟ್ಟು ಹೋಗುವಂತೆ ಆಜ್ಞೆಮಾಡಿದನು.

shrinath.udupa@gmail.com

ಸೋಽಬ್ರವೀತ್ಪಿತರಂ ತ್ಯಕ್ತಃ ಕ್ವ ಗಚ್ಛಾಮೀತಿ ವೈ ಮುಹುಃ ।
ಪಿತಾ ಚ ತಮಥೋವಾಚ ಶ್ವಪಾಕೈಃ ಸಹ ವರ್ತಯ ॥ ೧೦೧ ॥

ನಾಹಂ ಪುತ್ರೇಣ ಪುತ್ರಾರ್ಥೀ ತ್ವಯಾಽದ್ಯ ಕುಲಪಾಂಸನ ।
ಇತ್ಯುಕ್ತಃ ಸ ನಿರಾಕ್ರಾಮನ್ನಗರಾದ್ವಚನಾತ್ಪಿತುಃ ॥ ೧೦೨ ॥

ನ ಚ ತಂ ವಾರಯಾಮಾಸ ವಸಿಷ್ಠೋ ಭಗವಾನೃಷಿಃ ।
ಸ ತು ಸತ್ಯವ್ರತೋ ವಿಪ್ರಾಃ ಶ್ವಪಾಕಾವಸಥಾಂತಿಕೇ ॥ ೧೦೩ ॥

ಪಿತ್ರಾ ತ್ಯಕ್ತೋಽವಸದ್ಧೀರಃ ಪಿತಾಽಪ್ಯಸ್ಯ ವನಂ ಯಯೌ ।
ತತಸ್ತಸ್ಮಿಂಸ್ತು ವಿಷಯೇ ನಾವರ್ಷತ್ಪಾಕಶಾಸನಃ ॥ ೧೦೪ ॥

ಸಮಾ ದ್ವಾದಶ ಭೋ ವಿಪ್ರಾಸ್ತೇನಾಧರ್ಮೇಣ ವೈ ತದಾ ।
ದಾರಾಂಸ್ತು ತಸ್ಯ ವಿಷಯೇ ವಿಶ್ವಾಮಿತ್ರೋ ಮಹಾತಪಾಃ ॥ ೧೦೫ ॥

ಸಂನ್ಯಸ್ಯ ಸಾಗರಾಂತೇ ತು ಚಕಾರ ವಿಪುಲಂ ತಪಃ ।
ತಸ್ಯ ಪತ್ನೀ ಗಲೇ ಬಧ್ವಾ ಮಧ್ಯಮಂ ಪುತ್ರಮೌರಸಂ ॥ ೧೦೬ ॥

---

೧೦೧. ಆಗ ಅವನು ತಂದೆಯನ್ನು ಕುರಿತು ಎಲ್ಲಿಗೆ ಹೋಗಲಿ ಎಂದು ಕೇಳಿದನು. ತಂದೆಯು ಕೋಪದಿಂದ ಹೊಲೆಯರೊಡನೆ ವಾಸಮಾಡು. ನಿನ್ನಂತಹ ಕುಲದೂಷಕನಾದ ಮಗನು ನನಗೆ ಬೇಡವೇಬೇಡ ಎಂದು ಹೇಳಿದನು.

೧೦೨. ಹೀಗೆ ತಂದೆಯು ಹೇಳಲು ಆ ಸತ್ಯವ್ರತನು ನಗರದಿಂದ ಹೊರಟು ಹೋದನು. ಹಿಂದುಮುಂದಿನ ಆಗುಹೋಗುಗಳನ್ನು ಬಲ್ಲ ವಸಿಷ್ಠಮುನಿಯು ಸತ್ಯವ್ರತನ ರಾಜ್ಯತ್ಯಾಗವನ್ನು ತಡೆಯಲಿಲ್ಲ.

೧೦೩. ಎಲೈ ಬ್ರಾಹ್ಮಣರೇ, ತಂದೆಯಿಂದ ಬಿಡಲ್ಪಟ್ಟ ಆ ಧೀರನಾದ ಸತ್ಯವ್ರತನು ಹರಿಜನರ ಸಹವಾಸದಲ್ಲಿಯೇ ವಾಸಮಾಡತೊಡಗಿದನು. ಅವನ ತಂದೆಯಾದ ತ್ರಯ್ಯಾರುಣಿಯೂ ಸಹ ಆಮೇಲೆ ವೈರಾಗ್ಯದಿಂದ ಕಾಡಿಗೆ ತೆರಳಿದನು.

೧೦೪. ಸತ್ಯವ್ರತನು ಆಚರಿಸಿದ ಆ ಅಧರ್ಮದಿಂದ ಆ ದೇಶದಲ್ಲಿ ಹನ್ನೆರಡು ವರ್ಷಗಳವರೆಗೆ ಮಳೆಯೇ ಆಗಲಿಲ್ಲ.

೧೦೫. ಆಗ ವಿಶ್ವಾಮಿತ್ರಮುನಿಯು ತನ್ನ ಪತ್ನಿಯನ್ನು ಆ ದೇಶದಲ್ಲಿ ಬಿಟ್ಟು ತಪವನ್ನಾಚರಿಸಲು ಸಮುದ್ರದ ತೀರಕ್ಕೆ ತೆರಳಿದನು.

೧೦೬. ಆ ವಿಶ್ವಾಮಿತ್ರನ ಹೆಂಡತಿಯು ಜೀವನವನ್ನು ನಡೆಸಲು ಸಾಧ್ಯವಿಲ್ಲದೇ ತನ್ನ ನಡುವಿನ ಮಗನನ್ನು ಕತ್ತಿನಲ್ಲಿ ಕಟ್ಟಿಕೊಂಡು ನೂರು ಗೋವುಗಳಿಗೆ

shrinath.udupa@gmail.com

ಶೇಷಸ್ಯ ಭರಣಾರ್ಥಾಯ ವ್ಯಕ್ರೀಣಾದ್ಗೋಶತೇನ ವೈ ।
ತಂ ಚ ಬದ್ಧಂ ಗಲೇ ದೃಷ್ಟ್ವಾ ವಿಕ್ರಯಾರ್ಥಂ ನೃಪಾತ್ಮಜಃ ॥ ೧೦೭ ॥

ಮಹರ್ಷಿಪುತ್ರಂ ಧರ್ಮಾತ್ಮಾ ಮೋಕ್ಷಯಾಮಾಸ ಭೋ ದ್ವಿಜಾಃ ।
ಸತ್ಯವ್ರತೋ ಮಹಾಬಾಹುರ್ಭರಣಂ ತಸ್ಯ ಚಾಕರೋತ್ ॥ ೧೦೮ ॥
ವಿಶ್ವಾಮಿತ್ರಸ್ಯ ತುಷ್ಟ್ಯರ್ಥಮನುಕಂಪಾರ್ಥಮೇವ ಚ ।

ಸೋಽಭವದ್ಗಾಲವೋ ನಾಮ ಗಲೇ ಬಂಧಾನ್ಮಹಾತಪಾಃ ॥ ೧೦೯ ॥
ಮಹರ್ಷಿಃ ಕೌಶಿಕೋ ಧೀಮಾಂಸ್ತೇನ ವೀರೇಣ ಮೋಕ್ಷಿತಃ ॥

ಇತಿ ಶ್ರೀಮಹಾಪುರಾಣೇ ಬ್ರಾಹ್ಮೇ ಸೂರ್ಯವಂಶನಿರೂಪಣಂ ನಾಮ
ಸಪ್ತಮೋಽಧ್ಯಾಯಃ

ಮಾರಲುದ್ಯುಕ್ತಳಾದಳು [ಹಿಂದಿನ ಕಾಲದಲ್ಲಿ ಮಾರುವ ವಸ್ತುವನ್ನು ಕತ್ತಿನಲ್ಲಿ ಕಟ್ಟಿಕೊಂಡು ಮಾರುವ ರೂಢಿಯಿದ್ದಿತು.]

೧೦೭. ಹೀಗೆ ವಿಕ್ರಯಕ್ಕಾಗಿ ಕತ್ತಿನಲ್ಲಿ ಕಟ್ಟಲ್ಪಟ್ಟಿರುವ ಆ ಋಷಿಪುತ್ರನನ್ನು ಸತ್ಯವ್ರತನು ಧರ್ಮಬುದ್ಧಿಯಿಂದ ವಿಶ್ವಾಮಿತ್ರನ ಹೆಂಡತಿಗೆ ಜೀವನಕ್ಕೆ ಧನಧಾನ್ಯಗಳನ್ನು ಒದಗಿಸಿ ಬಿಡಿಸಿದನು.

೧೦೮. ಹೀಗೆ ಆ ಸತ್ಯವ್ರತನು ವಿಶ್ವಾಮಿತ್ರಮುನಿಗೆ ಪ್ರೀತಿಯುಂಟಾಗುವುದಕ್ಕಾಗಿಯೂ ತನ್ಮೂಲಕ ಅವನ ಅನುಗ್ರಹವನ್ನು ಸಂಪಾದಿಸುವುದಕ್ಕಾಗಿಯೂ ಅವನ ಪುತ್ರನನ್ನು ವಿಕ್ರಯದಿಂದ ತಪ್ಪಿಸಿದನು.

೧೦೯. ವಿಶ್ವಾಮಿತ್ರಮುನಿಯು ಆ ಸುತನು ಹೀಗೆ ವಿಕ್ರಯಕ್ಕಾಗಿ ಗಲ [ಕತ್ತು] ದಲ್ಲಿ ಕಟ್ಟಲ್ಪಟ್ಟುದರಿಂದ ಅವನಿಗೆ ಮುಂದೆ ಗಾಲವನೆಂದು ಹೆಸರಾಯಿತು ಹೀಗೆ ಆ ಗಾಲವಮುನಿಯು ಸತ್ಯವ್ರತನಿಂದ ಉದ್ಧಾರಮಾಡಲ್ಪಟ್ಟನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಸೂರ್ಯವಂಶನಿರೂಪಣವೆಂಬ
ಏಳನೆಯ ಅಧ್ಯಾಯವು ಮುಗಿದುದು.

shrinath.udupa@gmail.com

॥ ಶ್ರೀಃ ॥

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಅಷ್ಟಮೋಽಧ್ಯಾಯಃ

ಲೋಮಹರ್ಷಣ ಉವಾಚ

ಸತ್ಯವ್ರತಸ್ತು ಭಕ್ತ್ಯಾ ಚ ಕೃಪಯಾ ಚ ಪ್ರತಿಜ್ಞಯಾ ।
ವಿಶ್ವಾಮಿತ್ರಕಳತ್ರಂ ತು ಬಭಾರ ವಿನಯೇ ಸ್ಥಿತಃ ॥ ೧ ॥

ಹತ್ವಾ ಮೃಗಾನ್ವರಾಹಾಂಶ್ಚ ಮಹಿಷಾಂಶ್ಚ ವನೇಚರಾನ್ ।
ವಿಶ್ವಾಮಿತಾಶ್ರಮಾಭ್ಯಾಶೇ ಮಾಂಸಂ ವೃಕ್ಷೇ ಬಬಂಧ ಚ ॥ ೨ ॥

ಎಂಟನೆಯ ಅಧ್ಯಾಯವು

೧. ಸೂತಮುನಿಯು ಹೇಳಿದನು.—ಎಲೈ ಬ್ರಾಹ್ಮಣೋತ್ತಮರೆ, ಮುಂದೆ ಸತ್ಯವ್ರತನು ಭಕ್ತಿಯಿಂದಲೂ ಕರುಣೆಯಿಂದಲೂ ಸ್ಥೈರ್ಯದಿಂದಲೂ ವಿನಯದಿಂದಲೂ, ಸಹ ವಿಶ್ವಾಮಿತ್ರಮುನಿಯ ಹೆಂಡತಿ ಮಕ್ಕಳನ್ನು ಕಾಪಾಡಿದನು.

೨. ಕಾಡಿನ ಮೃಗಗಳನ್ನೂ ಹಂದಿಗಳನ್ನೂ ಕೋಣಗಳನ್ನೂ ಕೊಂದು ಅವುಗಳ ಮಾಂಸವನ್ನು ವಿಶ್ವಾಮಿತ್ರಮುನಿಯ ಆಶ್ರಮದ ಬಳಿಯಲ್ಲಿರಿಸುತ್ತಿದ್ದನು.

shrinath.udupa@gmail.com

ಉಪಾಂಶುವ್ರತಮಾಸ್ಥಾಯ ದೀಕ್ಷಾಂ ದ್ವಾದಶವಾರ್ಷಿಕೀಂ ।
ಪಿತುರ್ನಿಯೋಗಾದವಸತ್ತಸ್ಮಿನ್ವನಗತೇ ನೃಪೇ ॥ ೩ ॥

ಅಯೋಧ್ಯಾಂ ಚೈವ ರಾಜ್ಯಂ ಚ ತಥೈವಾಂತಃಪುರಂ ಮುನಿಃ ।
ಯಾಜ್ಯೋಪಾಧ್ಯಾಯಸಂಯೋಗಾದ್ವಸಿಷ್ಠಃ ಪರ್ಯರಕ್ಷತ ॥ ೪ ॥

ಸತ್ಯವ್ರತಸ್ತು ಬಾಲ್ಯಾಚ್ಚ ಭಾವಿನೋಽರ್ಥಸ್ಯ ವೈ ಬಲಾತ್ ।
ವಸಿಷ್ಠೇಽಭ್ಯಧಿಕಂ ಮನ್ಯುಂ ಧಾರಯಾಮಾಸ ನಿತ್ಯಶಃ ॥ ೫ ॥

ಪಿತ್ರಾ ಹಿ ತಂ ತದಾ ರಾಷ್ಟ್ರಾತ್ತ್ಯಜ್ಯಮಾನಂ ಪ್ರಿಯಂ ಸುತಂ ।
ನಿವಾರಯಾಮಾಸ ಮುನಿರ್ಬಹುನಾ ಕಾರಣೇನ ನ ॥ ೬ ॥

---

೩. ತಂದೆಯಾದ ತ್ರಯ್ಯಾರುಣಿಯು ರಾಜ್ಯವನ್ನು ಬಿಟ್ಟು ಅರಣ್ಯಕ್ಕೆ ತೆರಳಿದ ಮೇಲೂ ಸಹ ಆ ಸತ್ಯವ್ರತನು ತಂದೆಯ ಮಾತನ್ನು ಪಾಲಿಸುತ್ತಾ ಹನ್ನೆರಡು ವರ್ಷಗಳ ವರೆಗೆ ಕಾಡಿನಲ್ಲಿ ಅಜ್ಞಾತವಾಸವನ್ನು ಮಾಡಿದನು.

೪. ಆ ಕಾಲದಲ್ಲಿ ಅಯೋಧ್ಯೆಯನ್ನೂ ರಾಜ್ಯವನ್ನೂ ಅಂತಃಪುರವನ್ನೂ ಸಹ ಕುಲಪುರೋಹಿತನಾದ ವಸಿಷ್ಠಮುನಿಯು ರಕ್ಷಿಸಿದನು.

೫. ಆದರೆ ಸತ್ಯವ್ರತನು ತಿಳಿವಳಿಕೆಯಿಲ್ಲದುದರಿಂದಲೋ ಮುಂದಾಗತಕ್ಕ ಕಾರ್ಯದ ಬಲದಿಂದಲೋ ವಸಿಷ್ಠಮುನಿಯಲ್ಲಿ ಸದಾ ದ್ವೇಷಬುದ್ಧಿಯನ್ನಿಟ್ಟುಕೊಂಡಿದ್ದನು. [ತನ್ನ ರಾಜ್ಯತ್ಯಾಗಕ್ಕೂ ಆ ಮೂಲಕ ತನ್ನ ತಂದೆಯು ವನಕ್ಕೆ ತೆರಳುವುದಕ್ಕೂ ವಸಿಷ್ಠಮುನಿಯೇ ಕಾರಣವೆಂದು ತಪ್ಪಾಗಿ ತಿಳಿದು ಸತ್ಯವ್ರತನು ಆ ಮುನಿಯಲ್ಲಿ ದ್ವೇಷಬುದ್ಧಿಯುಳ್ಳವನಾಗಿದ್ದನು].

೬. ತನ್ನ ತಂದೆಯು ತನ್ನನ್ನು ರಾಜ್ಯದಿಂದೋಡಿಸುವಾಗ ವಸಿಷ್ಠನು ತಡೆಯಬಹುದಾಗಿದ್ದರೂ ತಡೆಯಲಿಲ್ಲವೆಂಬ ಕಾರಣದಿಂದಲೂ ಆ ಮುನಿಯಲ್ಲಿ ದ್ವೇಷವಿಟ್ಟಿದ್ದನು.

shrinath.udupa@gmail.com

ಪಾಣಿಗ್ರಹಣಮಂತ್ರಾಣಾಂ ನಿಷ್ಠಾ ಸ್ಯಾತ್ಸಪ್ತಮೇ ಪದೇ ।
ನ ಚ ಸತ್ಯವ್ರತಸ್ತಸ್ಮಾದ್ಧೃತವಾನ್ಸಪ್ತಮೇ ಪದೇ ॥ ೭ ॥

ಜಾನನ್ಧರ್ಮಂ ವಸಿಷ್ಠಸ್ತು ನ ಮಾಂ ತ್ರಾತೀತಿ ಭೋ ದ್ವಿಜಾಃ ।
ಸತ್ಯವ್ರತಸ್ತದಾ ರೋಷಂ ವಸಿಷ್ಠೇ ಮನಸಾಕರೋತ್ ॥ ೮ ॥

ಗುಣಬುದ್ಧ್ಯಾ ತು ಭಗವಾನ್ ವಸಿಷ್ಠಃ ಕೃತವಾಂಸ್ತಥಾ ।
ನ ಚ ಸತ್ಯವ್ರತಸ್ತಸ್ಯ ತಮುಪಾಂಶುಮಬುಧ್ಯತ ॥ ೯ ॥

ತಸ್ಮಿನ್ನಪರಿತೋಷಶ್ಚ ಪಿತುರಾಸೀನ್ಮಹಾತ್ಮನಃ ।
ತೇನ ದ್ವಾದಶ ವರ್ಷಾಣಿ ನಾವರ್ಷತ್ಪಾಕಶಾಸನಃ ॥ ೧೦ ॥

ತೇನ ತ್ವಿದಾನೀಂ ವಿಹಿತಾಂ ದೀಕ್ಷಾಂ ತಾಂ ದುರ್ವಹಾಂ ಭುವಿ ।
ಕುಲಸ್ಯ ನಿಷ್ಕೃತಿರ್ವಿಪ್ರಾಃ ಕೃತಾ ಸಾ ವೈ ಭವೇದಿತಿ ॥ ೧೧ ॥

---

೭. ಪಾಣಿಗ್ರಹಣ ಮಂತ್ರಗಳಲ್ಲಿ ಏಳನೆಯ ಪದದಲ್ಲಿ ಪ್ರತಿಷ್ಠೆ [ಮಂತ್ರ ರಹಸ್ಯ] ಯು ಇರುವುದು. ಸತ್ಯವ್ರತನು ಪಾಣಿಗ್ರಹಣ [ಮದುವೆ] ಮಂತ್ರಗಳನ್ನು ಕೆಡಿಸಿದರೂ ಆ ಏಳನೆಯ ಪದವನ್ನು ಕೆಡಿಸಿರಲಿಲ್ಲವು.

೮. ಇದೆಲ್ಲ ರಹಸ್ಯರನ್ನು ತಿಳಿದಿದ್ದರೂ ವಸಿಷ್ಠಮುನಿಯು ತಾನು [ಸತ್ಯವ್ರತನು] ರಾಜ್ಯದಿಂದ ಓಡಿಸಲ್ಪಡುವುದನ್ನು ತಡಯಲಿಲ್ಲನೆಂದು ಅವನು ವಸಿಷ್ಠಮುನಿಯಲ್ಲಿ ದ್ವೇಷಬುದ್ಧಿಯುಳ್ಳವನಾಗಿದ್ದನು.

೯. ಆದರೆ ಸರ್ವಜ್ಞನಾದ ವಸಿಷ್ಠಮುನಿಯು ಸತ್ಯವ್ರತನು ಕಾಡಿಗೆ ಹೋಗುವುದರಿಂದ ವಿಶ್ವಾಮಿತ್ರಮುನಿಯ ಹೆಂಡತಿಗೆ ಸಹಾಯವಾದಂತೆ ಅನುಕೂಲವೇ ಆಗುವುದು ಮತ್ತು ಸತ್ಯವ್ರತನಿಗೂ ಒಳ್ಳೆಯದಾಗುವುದು ಎಂದು ತಿಳಿದಿದ್ದುದರಿಂದ ಅವನ ರಾಜ್ಯತ್ಯಾಗವನ್ನು ತಡೆಯಲಿಲ್ಲ. ಸತ್ಯವ್ರತನು ಈ ರಹಸ್ಯವನ್ನು ತಿಳಿಯದೇ ವಸಿಷ್ಠಮುನಿಯಲ್ಲಿ ದ್ವೇಷವನ್ನು ತಳೆದನು.

೧೦. ಅಲ್ಲದೇ ಸತ್ಯವ್ರತನ ತಂದೆಗೆ ಅವನಲ್ಲಿ ಅವನ ಅಧರ್ಮಾಚರಣೆಯಿಂದ ಕೋಪವುಂಟಾಗಿದ್ದಿತು. ಈ ಕಾರಣದಿಂದ ಆ ರಾಜ್ಯದಲ್ಲಿ ಹನ್ನೆರಡುವರ್ಷಗಳವರೆಗೆ ಮಳೆಯೇ ಆಗಲಿಲ್ಲ.

೧೧–೧೨. ಸತ್ಯವ್ರತನು ಹನ್ನೆರಡುವರ್ಷಗಳ ವರೆಗೆ ಕಾಡಿನಲ್ಲಿ ಧರ್ಮದಿಂದ ವ್ರತವನ್ನು ಆಚರಿಸಿದರೆ ಅವನ ಕುಲವೂ ಪವಿತ್ರವಾಗುವುದು ಎಂದು ತಿಳಿದೂ

shrinath.udupa@gmail.com

ನ ತಂ ವಸಿಷ್ಠೋ ಭಗವಾನ್ ಪಿತ್ರಾ ತ್ಯಕ್ತಂ ನ್ಯವಾರಯತ್ ।
ಅಭಿಷೇಕ್ಷ್ಯಾಮ್ಯಹಂ ಪುತ್ರಮಸ್ಯೇತ್ಯೇವಂಮತಿರ್ಮುನಿಃ ॥ ೧೨ ॥

ಸ ತು ದ್ವಾದಶ ವರ್ಷಾಣಿ ತಾಂ ದೀಕ್ಷಾಮುವಹದ್ಬಲೀ ।
ಅವಿದ್ಯಮಾನೇ ಮಾಂಸೇ ತು ವಸಿಷ್ಠಸ್ಯ ಮಹಾತ್ಮನಃ ॥ ೧೩ ॥

ಸರ್ವಕಾಮದುಘಾಂ ದೋಗ್ಧ್ರೀಂ ಸ ದದರ್ಶ ನೃಪಾತ್ಮಜಃ ।
ತಾಂ ವೈ ಕ್ರೋಧಾಚ್ಚ ಮೋಹಾಚ್ಚ ಶ್ರಮಾಚ್ಚೈವ ಕ್ಷುಧಾಽನ್ವಿತಃ ॥ ೧೪ ॥

ದೇಶಧರ್ಮಗತೋ ರಾಜಾ ಜಘಾನ ಮುನಿಸತ್ತಮಾಃ ।
ತನ್ಮಾಂಸಂ ಸ ಸ್ವಯಂ ಚೈವ ವಿಶ್ವಾಮಿತ್ರಸ್ಯ ಚಾಽಽತ್ಮಜಾನ್ ॥ ೧೫ ॥

ಭೋಜಯಾಮಾಸ ತಚ್ಛ್ರುತ್ವಾ ವಸಿಷ್ಠೋಽಪ್ಯಸ್ಯ ಚುಕ್ರುಧೇ ॥ ೧೬ ॥

ವಸಿಷ್ಠಮುನಿಯು ಅವನ ರಾಜ್ಯಪರಿತ್ಯಾಗವನ್ನು ತಡೆಯಲಿಲ್ಲ. ಇವನಲ್ಲದಿದ್ದರೆ ಇವನ [ಸತ್ಯವ್ರತನ] ಮಗನನ್ನಾದರೂ ರಾಜ್ಯದಲ್ಲಿ ಅಭಿಷೇಕಮಾಡಿ ಪ್ರತಿಷ್ಠೆಮಾಡುವೆನು ಎಂದು ವಸಿಷ್ಠನು ನಿಶ್ಚಯಿಸಿಕೊಂಡಿದ್ದನು.

೧೩. ಆ ಸತ್ಯವ್ರತನು ಹನ್ನೆರಡುವರ್ಷಗಳ ವರೆಗೆ ವಿಶ್ವಾಮಿತ್ರಪತ್ನಿಗೆ ಆಹಾರವನ್ನು ಒದಗಿಸುತ್ತಾ ವ್ರತವನ್ನು ಪಾಲಿಸಿದನು. ಹೀಗಿರಲು ಒಂದುದಿನ ಆಹಾರವು ಎಲ್ಲಿಯೂ ಸಿಕ್ಕದಿರಲು ವಸಿಷ್ಠಮುನಿಯ ಹಸುವೊಂದನ್ನು ನೋಡಿದನು.

೧೪. ಆ ವಸಿಷ್ಠನ ಹಸುವನ್ನು ನೋಡಿ ಅವನ ಮೇಲಿನ ಕೋಪದಿಂದಲೂ ಅಜ್ಞಾನದಿಂದಲೂ ಹಸಿವಿನ ಬಾಧೆಯಿಂದಲೂ ಆ ಹಸುವನ್ನು ಆಹಾರಕ್ಕಾಗಿ ಸಂಹರಿಸಿದನು. ಆ ದುರ್ಭಿಕ್ಷಕಾಲದಲ್ಲಿ ಜನರು ಸಿಕ್ಕಿದುದನ್ನು ಬಡಿದು ತಿನ್ನುತ್ತಿದ್ದರು. ಈ ಸತ್ಯವ್ರತನೂ ಹಾಗೇ ಮಾಡಿದನು.

೧೫. ಆ ಗೋಮಾಂಸವನ್ನು ಸತ್ಯವ್ರತನು ತಾನೇ ವಿಶ್ವಾಮಿತ್ರನ ಹೆಂಡತಿ ಮಕ್ಕಳಿಗೆ ಬಡಿಸಿದನು. ಇದನ್ನು ಕೇಳಿ ವಸಿಷ್ಠಮುನಿಯು ಆ ಸತ್ಯವ್ರತನಲ್ಲಿ ತುಂಬಾ ಕೋಪಗೊಂಡು

೧೬–೧೮. ಎಲೈ ಕ್ರೂರ ! ನೀನು ಈಗಈ ಎರಡು ಪಾಪಗಳನ್ನು ಮಾಡದೇ ಇದ್ದಿದ್ದರೆ ನಿನ್ನ ಮೊದಲಿನ ಪಾಪವನ್ನು ಹೋಗಲಾಡಿಸುತ್ತಿದ್ದೆನು. ನೀನು ತಂದೆಗೆ

shrinath.udupa@gmail.com

ವಸಿಷ್ಠ ಉವಾಚ

ಪಾತಯೇಯಮಹಂ ಕ್ರೂರ ತವ ಶಂಕುಮಸಂಶಯಂ ।
ಯದಿ ತೇ ದ್ವಾವಿಮೌ ಶಂಕೂ ನ ಸ್ಯಾತಾಂ ವೈ ಕೃತೌ ಪುನಃ ॥ ೧೭ ॥

ಪಿತುಶ್ಚಾಪರಿತೋಷೇಣ ಗುರುದೋಗ್ಧ್ರೀವಧೇನ ಚ ।
ಅಪ್ರೋಕ್ಷಿತೋಪಯೋಗಾಚ್ಚ ತ್ರಿವಿಧಸ್ತೇ ವ್ಯತಿಕ್ರಮಃ ॥ ೧೮ ॥

ಏವಂ ತ್ರೀಣ್ಯಸ್ಯ ಶಂಕೂನಿ ತಾನಿ ದೃಷ್ಟ್ವಾ ಮಹಾತಪಾಃ ।
ತ್ರಿಶಂಕುರಿತಿ ಹೋವಾಚ ತ್ರಿಶಂಕುಸ್ತೇನ ಸ ಸ್ಮೃತಃ ॥ ೧೯ ॥

ವಿಶ್ವಾಮಿತ್ರಸ್ಯ ದಾರಾಣಾಮನೇನ ಭರಣಂ ಕೃತಂ ।
ತೇನ ತಸ್ಮೈ ವರಂ ಪ್ರಾದಾನ್ಮುನಿಃ ಪ್ರೀತಸ್ತ್ರಿಶಂಕವೇ ॥ ೨೦ ॥

ಛಂದ್ಯಮಾನೋ ವರೇಣಾಥ ವರಂ ವವ್ರೇ ನೃಪಾತ್ಮಜಃ ।
ಸಶರೀರೋ ವ್ರಜೇ ಸ್ವರ್ಗಮಿತ್ಯೇವಂ ಯಾಚಿತೋ ವರಃ ॥ ೨೧ ॥

ದುಃಖವನ್ನುಂಟುಮಾಡಿದುದು, ಗುರುವಿನ ಹಸುವನ್ನು ಕೊಂದುದು, ಪರರ ವಸ್ತುವನ್ನು [ಸ್ತ್ರೀಯನ್ನು] ಉಪಯೋಗಿಸಿದುದು [ಅಥವಾ ಅಪವಿತ್ರವಾದ ಆಹಾರವನ್ನು ಸೇವಿಸುವುದು] ಈ ಮೂರು ಪಾಪಗಳನ್ನೂ ಆಚರಿಸಿರುವೆ.

೧೯. ಹೀಗೆ ಸತ್ಯವ್ರತನು ಮೂರು ಪಾಪಗಳನ್ನಾಚರಿಸಿದುದರಿಂದ ಅವನನ್ನು ತ್ರಿಶಂಕು [ಮೂರು ಪಾಪಗಳನ್ನಾಚರಿಸಿದವನು] ವೆಂದು ಹೆಸರಿಟ್ಟು ಜರಿದನು. ಅದರಿಂದ ಅವನಿಗೆ ಮುಂದೆ ತ್ರಿಶಂಕುವೆಂದೇ ಹೆಸರಾಯಿತು.

೨೦. ಹನ್ನೆರಡುವರ್ಷಗಳವರೆಗೆ ವಿಶ್ವಾಮಿತ್ರನ ಪತ್ನೀಪುತ್ರರನ್ನು ಆ ತ್ರಿಶಂಕುವು ಕಾಪಾಡಿದುದರಿಂದ ಆ ಮುನಿಯು ಸಂತಸಗೊಂಡು ಅವನಿಗೆ ಬೇಕಾದ ವರವನ್ನು ಕೇಳು ಕೊಡುವೆನೆಂದನು.

೨೧. ಆಗ ತ್ರಿಶಂಕುವು ತಾನು ಈ ಮಾನುಷಶರೀರದಿಂದಲೇ ಸ್ವರ್ಗಕ್ಕೆ ಹೋಗುವಂತೆ ಅನುಗ್ರಹಿಸಬೇಕೆಂದು ವರವನ್ನು ವಿಶ್ವಾಮಿತ್ರನೊಡನೆ ಕೇಳಿಕೊಂಡನು.

shrinath.udupa@gmail.com

ಅನಾವೃಷ್ಟಿಭಯೇ ತಸ್ಮಿನ್ ಗತೇ ದ್ವಾದಶವಾರ್ಷಿಕೇ ।
ಪಿತ್ರ್ಯೇ ರಾಜ್ಯೇಽಭಿಷಿಚ್ಯಾಥ ಯಾಜಯಾಮಾಸ ಪಾರ್ಥಿವಂ ॥ ೨೨ ॥

ಮಿಷತಾಂ ದೇವತಾನಾಂ ಚ ವಸಿಷ್ಠಸ್ಯ ಚ ಕೌಶಿಕಃ ।
ದಿವಮಾರೋಪಯಾಮಾಸ ಸಶರೀರಂ ಮಹಾತಪಾಃ ॥ ೨೩ ॥

ತಸ್ಯ ಸತ್ಯರಥಾ ನಾಮ ಪತ್ನೀ ಕೈಕಯವಂಶಜಾ ।
ಕುಮಾರಂ ಜನಯಾಮಾಸ ಹರಿಶ್ಚಂದ್ರಮಕಲ್ಮಷಂ ॥ ೨೪ ॥

ಸ ವೈ ರಾಜಾ ಹರಿಶ್ಚಂದ್ರಸ್ತ್ರೈಶಂಕವ ಇತಿ ಸ್ಮೃತಃ ।
ಆಹರ್ತಾ ರಾಜಸೂಯಸ್ಯ ಸಮ್ರಾಡಿತಿ ಹ ವಿಶ್ರುತಃ ॥ ೨೫ ॥

ಹರಿಶ್ಚಂದ್ರಸ್ಯ ಪುತ್ರೋಽಭೂದ್ರೋಹಿತೋ ನಾಮ ಪಾರ್ಥಿವಃ ।
ಹರಿತೋ ರೋಹಿತಸ್ಯಾಥ ಚಂಚುರ್ಹಾರಿತ ಉಚ್ಯತೇ ॥ ೨೬ ॥

---

೨೨. ಹನ್ನೆರಡುವರ್ಷದ ಆ ಬರಗಾಲವು ಕಳೆಯಲು ತ್ರಿಶಂಕುರಾಜನನ್ನು ಅವನ ತಂದೆಯ ರಾಜ್ಯದಲ್ಲಿ ವಿಶ್ವಾಮಿತ್ರಮುನಿಯು ಪ್ರತಿಷ್ಠಿಸಿ, ಮಾನುಷಶರೀರದಿಂದಲೇ ಸ್ವರ್ಗವನ್ನು ಪಡೆಯಲೋಸುಗ ಯಾಗವನ್ನು ಮಾಡಿಸಿದನು.

೨೩. ಮಹಾತಪಸ್ವಿಯಾದ ಆ ವಿಶ್ವಾಮಿತ್ರನು ತ್ರಿಶಂಕುವನ್ನು ಮನುಷ್ಯ ಶರೀರದಿಂದಲೇ ದೇವತೆಗಳು ಮತ್ತು ವಸಿಷ್ಠಮುನಿ ಇವರೆಲ್ಲರೂ ನೋಡುತ್ತಿದ್ದಂತೆಯೇ ಸ್ವರ್ಗಕ್ಕೆ ಏರಿಸಿದನು.

೨೪. ಆ ತ್ರಿಶಂಕುವಿಗೆ ಕೇಕಯರಾಜನ ಮಗಳಾದ ಸತ್ಯರಥಾದೇವಿ ಎಂಬ ಹೆಂಡತಿಯಿದ್ದಳು. ಅವಳು ಸತ್ಯಪ್ರತಿಜ್ಞನಾದ ಹರಿಶ್ಚಂದ್ರನೆಂಬ ಕುವರನನ್ನು ಹಡೆದಳು.

೨೫. ಹರಿಶ್ಚಂದ್ರರಾಜನು ಚಕ್ರವರ್ತಿಯಾಗಿದ್ದು ರಾಜಸೂಯಯಾಗವನ್ನು ಮಾಡಿದನು.

೨೬. ರೋಹಿತಾಶ್ವನು ಹರಿಶ್ಚಂದ್ರನ ಮಗನು. ಹರಿತನು ರೋಹಿತಾಶ್ವನ ಮಗನು. ಚಂಚುಕುಮಾರನೆಂಬುವನು ಹರಿತರಾಜನ ಮಗನು.

shrinath.udupa@gmail.com

ವಿಜಯಶ್ಚ ಮುನಿಶ್ರೇಷ್ಠಾಶ್ಚಂಚುಪುತ್ರೋ ಬಭೂವ ಹ ।
ಜೇತಾ ಸ ಸರ್ವಪೃಥಿವೀಂ ವಿಜಯಸ್ತೇನ ಸ ಸ್ಮೃತಃ || ೨೭ ||

ರುರುಕಸ್ತನಯಸ್ತಸ್ಯ ರಾಜಾ ಧರ್ಮಾರ್ಥಕೋವಿದಃ ।
ರುರುಕಸ್ಯ ವೃಕಃ ಪುತ್ರೋ ವೃಕಾದ್ಬಾಹುಸ್ತು ಜಜ್ಞಿವಾನ್ || ೨೮ ||

ಹೈಹಯಾಸ್ತಾಲಜಂಘಾಶ್ಚ ನಿರಸ್ಯಂತಿ ಸ್ಮ ತಂ ನೃಪಂ ।
ತತ್ಪತ್ನೀ ಗರ್ಭಮಾದಾಯ ಔರ್ವಸ್ಯಾಽಽಶ್ರಮಮಾವಿಶತ್ || ೨೯ ||

ನಾಸತ್ಯೋ ಧಾರ್ಮಿಕಶ್ಚೈವ ಸ ಹ ಧರ್ಮಯುಗೇಽಭವತ್ ।
ಸಗರಸ್ತು ಸುತೋ ಬಾಹೋರ್ಯಜ್ಞೇ ಸಹ ಗರೇಣ ವೈ || ೩೦ ||

ಔರ್ವಸ್ಯಾಽಽಶ್ರಮಮಾಸಾದ್ಯ ಭಾರ್ಗವೇಣಾಭಿ ರಕ್ಷಿತಃ ।
ಆಗ್ನೇಯಮಸ್ತ್ರಂ ಲಬ್ಧ್ವಾ ಚ ಭಾರ್ಗವಾತ್ಸಗರೋ ನೃಪಃ || ೩೧ ||

---

೨೭. ಆ ಚಂಚುರಾಜನ ಮಗನು ವಿಜಯಕುಮಾರನು. ಅವನು ಭೂಮಿಯನ್ನೆಲ್ಲವನ್ನೂ ಜಯಿಸಿದುದರಿಂದ ವಿಜಯ ಎಂದು ಅವನಿಗೆ ಹೆಸರಾಯಿತು.

೨೮. ರುರುಕನೆಂಬುವನು ವಿಜಯನ ಮಗನು. ಅವನು ಧರ್ಮಿಷ್ಠನಾದ ರಾಜನಾಗಿದ್ದನು. ವೃಕನೆಂಬುವನು ರುರುಕನ ಮಗನು. ಬಾಹುವೆಂಬುವನು ವೃಕರಾಜನ ಮಗನು.

೨೯. ಆ ಬಾಹುರಾಜನನ್ನು ಹೈಹಯರು ಮತ್ತು ತಾಲಜಂಘರೆಂಬ ಶತ್ರುಗಳು ಜಯಿಸಿ ರಾಜ್ಯಬಿಡಿಸಿ ಓಡಿಸಿದರು. ಆ ರಾಜನಿಗೆ ಇಬ್ಬರು ಹೆಂಡರಿದ್ದರು. ಅವರಲ್ಲೋರ್ವಳು ಗರ್ಭವತಿಯಾಗಿದ್ದು ಅದರ ರಕ್ಷಣೆಗಾಗಿ ಔರ್ವಮುನಿಯ ಆಶ್ರಮಕ್ಕೆ ತೆರಳಿದಳು.

೩೦. ಆ ಔರ್ವಮುನಿಯು ಸತ್ಯವಂತನೂ, ಧಾರ್ಮಿಕನೂ ಆಗಿದ್ದನು. ಅವನ ಆಶ್ರಯದಲ್ಲಿ ಅವನ ಅನುಗ್ರಹದಿಂದ ಬಾಹುರಾಜನ ಮಗನಾದ ಸಗರರಾಜನು ಜನಿಸಿದನು. ಅವನ ತಾಯಿಯು ಗರ್ಭವತಿಯಾಗಿದ್ದಾಗ ಅವಳ ಸವತಿಯು ಅಸೂಯೆಯಿಂದ ಗರ (ವಿಷ) ವನ್ನು ಗರ್ಭನಾಶಕ್ಕಾಗಿ ಉಣಿಸಿದ್ದಳು. ಆದರೂ ಆ ಔರ್ವಮುನಿಯ ಅನುಗ್ರಹದಿಂದ ಗರ್ಭನಾಶವಾಗದೆ ಕುಮಾರನು ವಿಷದ ಚಿಹ್ನೆಯುಳ್ಳವನಾಗಿಯೇ ಜನಿಸಿದನು. ಆದ್ದರಿಂದ ಅವನಿಗೆ "ಸಗರ" ಎಂದು ಹೆಸರಾಯಿತು.

shrinath.udupa@gmail.com

ಜಿಗಾಯ ಪೃಥಿವೀಂ ಹತ್ವಾ ತಾಲಜಂಘಾನ್ ಸಹೈಹಯಾನ್ ।
ಶಕಾನಾಂ ಪಹ್ನವಾನಾಂ ಚ ಧರ್ಮಂ ನಿರಸದಚ್ಯುತಃ ॥
ಕ್ಷತ್ರಿಯಾಣಾಂ ಮುನಿಶ್ರೇಷ್ಠಾಃ ಪಾರದಾನಾಂ ಚ ಧರ್ಮವಿತ್ ॥ ೩೨ ॥

ಮುನಯ ಊಚುಃ

ಕಥಂ ಸ ಸಗರೋ ಜಾತೋ ಗರೇಣೈವ ಸಹಾಚ್ಯುತಃ ।
ಕಿಮರ್ಥಂ ಚ ಶಕಾದೀನಾಂ ಕ್ಷತ್ರಿಯಾಣಾಂ ಮಹೌಜಸಾಂ ॥ ೩೩ ॥

ಧರ್ಮಾನ್ಕುಲೋಚಿತಾನ್ ರಾಜಾ ಕ್ರುದ್ಧೋ ನಿರಸದಚ್ಯುತಃ ।
ಏತನ್ನಃ ಸರ್ವಮಾಚಕ್ಷ್ವ ವಿಸ್ತರೇಣ ಮಹಾಮತೇ ॥ ೩೪ ॥

॥ ಲೋಮಹರ್ಷಣ ಉವಾಚ ॥

ಬಾಹೋರ್ವ್ಯಸನಿನಃ ಪೂರ್ವಂ ಹೃತಂ ರಾಜ್ಯಮಭೂತ್ಕಿಲ ।
ಹೈಹಯೈಸ್ತಾಲಜಂಘೈಶ್ಚ ಶಕೈಃ ಸಾರ್ಧಂ ದ್ವಿಜೋತ್ತಮಾಃ ॥ ೩೫ ॥

---

೩೧. ಹೀಗೆ ಭಾರ್ಗವ (ಔರ್ವ] ಮುನಿಯಿಂದ ರಕ್ಷಿಸಲ್ಪಟ್ಟ ಆ ಸಗರನು ಆ ಮುನಿಯಿಂದ ಆಗ್ನೇಯಾಸ್ತ್ರವನ್ನು ಪಡೆದು ಅದರಿಂದ ತನ್ನ ಶತ್ರುಗಳಾದ ಹೈಹಯ ರಾಜರನ್ನೂ ತಾಲಜಂಘರನ್ನೂ ಜಯಿಸಿದನು.

೩೨. ಧರ್ಮಜ್ಞನಾದ ಆ ಸಗರನು ವಿದೇಶಿಯರಾದ ಶಕರು, ಪಹ್ನವರು, ಪಾರದರು ಇವರನ್ನು ಸೋಲಿಸಿ ಭಾರತದಲ್ಲಿ ಹರಡುತ್ತಿದ್ದ ಅವರ ಧರ್ಮವನ್ನು ತೊಲಗಿಸಿದನು.

೩೩–೩೪. ಮುನಿಗಳು ಪ್ರಶ್ನಿಸಿದರು.—ಓ ಸೂತಮುನಿಯೇ! ಆ ಸಗರ ರಾಜನು ವಿಷದೊಡನೆಯೇ ಯಾವ ತೊಂದರೆಯೂ ಇಲ್ಲದೆ ಹೇಗೆ ಜನಿಸಿದನು? ಮುಂದೆ ಅವನು ಶಕರೇ ಮೊದಲಾದ ಕ್ಷತ್ರಿಯರ ಕುಲಕ್ಕುಚಿತವಾದ ಧರ್ಮವನ್ನು ಕೋಪದಿಂದ ಹೋಗಲಾಡಿಸುದುದು ಏಕೆ? ಇದೆಲ್ಲವನ್ನೂ ನಮಗೆ ವಿಸ್ತರಿಸು

೩೫. ಸೂತಮುನಿಯು ಹೇಳಿದನು.—ಎಲೈ ಬ್ರಾಹ್ಮಣೋತ್ತಮರೇ ಬಾಹು ರಾಜನು ಕಾಮುಕನಾಗಿದ್ದು ರಾಜ್ಯಕಾರ್ಯದಲ್ಲಿ ಹೆಚ್ಚುಗಮನಕೊಡದಿದ್ದುದರಿಂದ ಹೈಹಯರೂ, ತಾಲಜಂಘರೂ, ಶಕರೂ ಸಹ ಅವನ ರಾಜ್ಯವನ್ನು ಅಪಹರಿಸಿದರಷ್ಟೆ.

shrinath.udupa@gmail.com

ಯವನಾಃ ಪಾರದಾಶ್ಚೈವ ಕಾಂಭೋಜಾಃ ಪಹ್ಲವಾಸ್ತಥಾ ।
ಏತೇ ಹ್ಯಪಿ ಗಣಾಃ ಪಂಚ ಹೈಹಯಾರ್ಥೇ ಪರಾಕ್ರಮನ್ ॥ ೩೬ ॥

ಹೃತರಾಜ್ಯಸ್ತದಾ ರಾಜಾ ಸ ವೈ ಬಾಹುರ್ವನಂ ಯಯೌ ।
ಪತ್ನ್ಯಾ ಚಾನುಗತೋ ದುಃಖೀ ತತ್ರ ಪ್ರಾಣಾನವಾಸೃಜತ್ ॥ ೩೭ ॥

ಪತ್ನೀ ತು ಯಾದವೀ ತಸ್ಯ ಸ ಗರ್ಭಾ ಪೃಷ್ಠತೋಽನ್ವಗಾತ್ ।
ಸಪತ್ನ್ಯಾ ಚ ಗರಸ್ತಸ್ಯೈ ದತ್ತಃ ಪೂರ್ವಂ ಕಿಲಾನಘಾಃ ॥ ೩೮ ॥

ಸಾ ತು ಭರ್ತುಶ್ಚಿತಾಂ ಕೃತ್ವಾ ವನೇ ತಾಮಭ್ಯರೋಹತ ।
ಔರ್ವಸ್ತಾಂ ಭಾರ್ಗವೋ ವಿಪ್ರಾಃ ಕಾರುಣ್ಯಾತ್ಸಮವಾರಯತ್ ॥ ೩೯ ॥

ತಸ್ಯಾಽಽಶ್ರಮೇ ಚ ಗರ್ಭಃ ಸ ಗರೇಣೈವ ಸಹಾಚ್ಯುತಃ ।
ವ್ಯಜಾಯತ ಮಹಾಬಾಹುಃ ಸಗರೋ ನಾಮ ಪಾರ್ಥಿವಃ ॥ ೪೦ ॥

---

೩೬. ಆಗ ಯವನರು, ಪಾರದರು, ಕಾಂಭೋಜರಾಜರು, ಪಹ್ಲವರು, ಶಕರು ಈ ಐದು ಗಣ (ಗುಂಪು–ಜಾತಿ) ದ ರಾಜರು ಹೈಹಯರಾಜನಿಗೆ ಸಹಾಯವಾಗಿ ಯುದ್ಧಮಾಡಿದರು.

೩೭. ಆಗ ರಾಜ್ಯವನ್ನು ಕಳೆದುಕೊಂಡು ಬಾಹುರಾಜನು ದುಃಖಿತನಾಗಿ ಹೆಂಡತಿಯೊಡನೆ ವನಕ್ಕೆ ಹೋದನು. ಕೊನೆಗೆ ದುಃಖದಿಂದ ಅಲ್ಲಿಯೇ ಪ್ರಾಣ ಬಿಟ್ಟನು.

೩೮. ಆ ಬಾಹುವಿನ ಪತ್ನಿಯಾದ ಯಾದವೀದೇವಿಯು ಗರ್ಭವತಿಯಾಗಿದ್ದು ಕಾಡಿಗೆ ಅವನೊಡನೆ ತೆರಳಿದಳು. ಈ ಮೊದಲು ಅವಳ ಸವತಿಯು ಅಸೂಯೆಯಿಂದ ಅವಳಿಗೆ ವಿಷವನ್ನು ಮೋಸದಿಂದ ಉಣಿಸಿದ್ದಳು.

೩೯. ಕಾಡಿನಲ್ಲಿ ಪತಿಯು ಮರಣಹೊಂದಲು ಆ ಯಾದವಿಯು ಚಿತೆಯನ್ನು ರಚಿಸಿ ತಾನೂ ಅದರಲ್ಲಿ ಬಿದ್ದು ಪತಿಯೊಡನೆ ಸಹಗಮನ ಮಾಡುವುದಕ್ಕೆ ಸಿದ್ಧಳಾದಳು. ಆಗ ಭಾರ್ಗವಮುನಿಯು ಕರುಣೆಯಿಂದ ಸಹಗವನಮಾಡದಂತೆ ಅವಳನ್ನು ತಡೆದನು.

೪೦. ಆ ಮುನಿಯ ಆಶ್ರಮದಲ್ಲಿ ಅವನ ಅನುಗ್ರಹದಿಂದ ಯಾವ ತೊಂದರೆಯೂ ಇಲ್ಲದೆ ವಿಷದ ಚಿಹ್ನೆಯೊಡನೆ “ ಸಗರ ” ನೆಂಬ ರಾಜನು ಯಾದವಿಯಿಂದ ಜನಿಸಿದನು.

shrinath.udupa@gmail.com

ಔರ್ವಸ್ತು ಜಾತಕರ್ಮಾದೀಂಸ್ತಸ್ಯ ಕೃತ್ವಾ ಮಹಾತ್ಮನಃ ।
ಅಧ್ಯಾಪ್ಯ ವೇದಶಾಸ್ತ್ರಾಣಿ ತತೋಽಸ್ತ್ರಂ ಪ್ರತ್ಯಪಾದಯತ್ ॥ ೪೧ ॥

ಆಗ್ನೇಯಂ ತು ಮಹಾಭಾಗಾ ಅಮರೈರಪಿ ದುಃಸಹಂ ।
ಸ ತೇನಾಸ್ತ್ರಬಲೇನಾಽಽಜೌ ಬಲೇನ ಚ ಸಮನ್ವಿತಃ ॥ ೪೨ ॥

ಹೈಹಯಾನ್ನಿಜಘಾನಾಽಽಶು ಕ್ರುದ್ಧೋ ರುದ್ರಃ ಪಶೂನಿವ ।
ಆಜಹಾರ ಚ ಲೋಕೇಷು ಕೀರ್ತಿಂ ಕೀರ್ತಿಮತಾಂ ವರಃ ॥ ೪೩ ॥

ತತಃ ಶಕಾಂಶ್ಚ ಯವನಾತ್ಕಾಂಭೋಜಾನ್ ಪಾರದಾಂಸ್ತಥಾ ।
ಪಹ್ನವಾಂಶ್ಚೈವ ನಿಃಶೇಷಾನ್ ಕರ್ತುಂ ವ್ಯವಸಿತೋ ನೃಪಃ ॥ ೪೪ ॥

ತೇ ವಧ್ಯಮಾನಾ ವೀರೇಣ ಸಗರೇಣ ಮಹಾತ್ಮನಾ ।
ವಸಿಷ್ಠಂ ಶರಣಂ ಗತ್ವಾ ಪ್ರಣಿಪೇತುರ್ಮನೀಷಿಣಂ ॥ ೪೫ ॥

---

೪೧. ಔರ್ವನೆಂಬ ಭಾರ್ಗವ ಮುನಿಯು ಮುಂದೆ ಆ ಕುಮಾರನಿಗೆ ಜಾತಕರ್ಮ ಮೊದಲಾದ ಸಂಸ್ಕಾರಗಳನ್ನು ಮಾಡಿ ವೇದಶಾಸ್ತ್ರಗಳನ್ನು ಹೇಳಿಕೊಟ್ಟು ಆಮೇಲೆ ಆಗ್ನೇಯಾಸ್ತ್ರವನ್ನು ಉಪದೇಶಿಸಿದನು.

೩೨–೪೩. ಆ ಆಗ್ನೇಯಾಸ್ತ್ರವನ್ನು ದೇವತೆಗಳೂ ಸಹಿಸಲಾರರು. ಸಗರನು ಆ ಅಸ್ತ್ರದ ಬಲದಿಂದಲೂ ಪರಾಕ್ರಮದಿಂದಲೂ ಹೈಹಯರನ್ನು ಪ್ರಳಯಕಾಲದಲ್ಲಿ ರುದ್ರನು ಪಶುಗಳನ್ನು ಸಂಹರಿಸುವಂತೆ ಕೋಪದಿಂದ ಸಂಹರಿಸಿದನು. ಮತ್ತು ಅದರಿಂದ ಲೋಕದಲ್ಲಿ ಸ್ಥಿರವಾದ ಕೀರ್ತಿಯನ್ನು ಸಂಪಾದಿಸಿದನು.

೪೪. ಆಮೇಲೆ ಆ ಸಗರನು ಶಕರನ್ನೂ, ಯವನರನ್ನೂ, ಕಾಂಭೋಜರನ್ನೂ ಪಾರದರನ್ನೂ, ಪಹ್ನವರನ್ನೂ ಸಂಹರಿಸತೊಡಗಿದನು.

೪೫. ಆ ಶಕರು ಮೊದಲಾದವರು ವೀರನಾದ ಸಗರಚಕ್ರವರ್ತಿಯಿಂದ ಹಿಂಸಿಸಲ್ಪಟ್ಟವರಾಗಿ ಕಂಗೆಟ್ಟು ವಸಿಷ್ಠಮಹರ್ಷಿಯನ್ನು ಮರೆಹೊಕ್ಕು ಬೇಡಿಕೊಂಡರು.

shrinath.udupa@gmail.com

ವಸಿಷ್ಠಸ್ತ್ವಥ ತಾನ್ದೃಷ್ಟ್ವಾ ಸಮಯೇನ ಮಹಾದ್ಯುತಿಃ ।
ಸಗರಂ ವಾರಯಾಮಾಸ ತೇಷಾಂ ದತ್ವಾಽಭಯಂ ತದಾ ॥ ೪೬ ॥

ಸಗರಃ ಸ್ವಾಂ ಪ್ರತಿಜ್ಞಾಂ ತು ಗುರೋರ್ವಾಕ್ಯಂ ನಿಶಮ್ಯ ಚ ।
ಧರ್ಮಂ ಜಘಾನ ತೇಷಾಂ ವೈ ವೇಷಾನನ್ಯಾಂಶ್ಚಕಾರ ಹ ॥ ೪೭ ॥

ಅರ್ಧಂ ಶಕಾನಾಂ ಶಿರಸೋ ಮುಂಡಯಿತ್ವಾ ವ್ಯಸರ್ಜಯತ್ ।
ಯವನಾನಾಂ ಶಿರಃ ಸರ್ವಂ ಕಾಂಭೋಜಾನಾಂ ತಥೈವ ಚ ॥ ೪೮ ॥

ಪಾರದಾ ಮುಕ್ತಕೇಶಾಶ್ಚ ಪಹ್ಲವಾಃ ಶ್ಮಶ್ರುಧಾರಿಣಃ ।
ನಿಃಸ್ವಾಧ್ಯಾಯವಷಟ್ಕಾರಾಃ ಕೃತಾಸ್ತೇನ ಮಹಾತ್ಮನಾ ॥ ೪೯ ॥

ಶಕಾ ಯವನಕಾಂಬೋಜಾಃ ಪಾರದಾಶ್ಚ ದ್ವಿಜೋತ್ತಮಾಃ ।
ಕೋಣಿಸರ್ಪಾ ಮಾಹಿಷಕಾ ದರ್ವಾಶ್ಚೋಲಾಃ ಸಕೇರಲಾಃ ॥ ೫೦ ॥

ಮಹಾತಪಸ್ವಿಯಾದ ವಸಿಷ್ಠನು ತನ್ನ ಮರೆಹೊಕ್ಕ ಆ ಶತ್ರುರಾಜರನ್ನು ನೋಡಿ ಕರುಣೆಯಿಂದ ಅಭಯವನ್ನು ಕೊಟ್ಟು ಅವರನ್ನು ಸಗರನು ಕೊಲ್ಲದಿರುವಂತೆ ತಡೆದನು. ಮತ್ತು ಅವರಿಗೆ ಬದಲಾಗಿ ಅವರ ಧರ್ಮವನ್ನು ಹಾಳುಮಾಡುವಂತೆ ನಿಯಮಮಾಡಿದನು.

೪೭. ಆಗ ಸಗರನು ಗುರುವಿನ ಮಾತನ್ನು ಕೇಳಿ ಅದರಂತೆ ಶಕರು ಮೊದಲಾದವರನ್ನು ಕೊಲ್ಲದೆ ಅವರ ಧರ್ಮವನ್ನು ಹಾಳುಮಾಡಿ ವೇಷವನ್ನು ಬದಲಾಯಿಸುವಂತೆ ಮಾಡಿ ತನ್ನ ಪ್ರತಿಜ್ಞೆಯನ್ನು ಪೂರಯಿಸಿಕೊಂಡನು.

೪೮. ಶಕರ ತಲೆಯನ್ನು ಅರ್ಧಬೋಳಿಸಿ ಓಡಿಸಿದನು. ಯವನರು ಮತ್ತು ಕಾಂಬೋಜರ ತಲೆಯೆಲ್ಲವನ್ನೂ ಬೋಳಿಸಿ ಕಳುಹಿಸಿದನು.

೪೯. ಪಾರದರಾಜರಿಗೆ ತಲೆಗೂದಲನ್ನು ಪೂರ ಬಿಡಿಸಿದನು. ಪಹ್ಲವರು ಗಡ್ಡವನ್ನು ಮಾತ್ರ ಧರಿಸುವಂತೆ ಮಾಡಿದನು. ಮತ್ತು ಅವರೆಲ್ಲರಿಗೂ ವೇದಾಧ್ಯಯನ ಮತ್ತು ಯಾಗಗಳಲ್ಲಿ ಅಧಿಕಾರವಿಲ್ಲದಂತೆ ಮಾಡಿದನು.

೫೦-೫೧. ಶಕರು, ಯವನಕಾಂಭೋಜರು, ಪಾರದಪಹ್ಲವರು, ಕೋಣಿಸರ್ಪರು, ಮಾಹಿಷಕರು, ದರ್ವರು, ಚೋಲದೇಶದವರು, ಕೇರಲರಾಜರು ಇವರೆ

shrinath.udupa@gmail.com

ಸರ್ವೇ ತೇ ಕ್ಷತ್ರಿಯಾ ವಿಪ್ರಾ ಧರ್ಮಸ್ತೇಷಾಂ ನಿರಾಕೃತಃ ।
ವಸಿಷ್ಠವಚನಾದ್ರಾಜ್ಞಾ ಸಗರೇಣ ಮಹಾತ್ಮನಾ ॥ ೫೧ ॥

ಸ ಧರ್ಮವಿಜಯೀ ರಾಜಾ ವಿಜಿತ್ಯೇಮಾಂ ವಸುಂಧರಾಂ ।
ಅಶ್ವಂ ಪ್ರಚಾರಯಾಮಾಸ ವಾಜಿಮೇಧಾಯ ದೀಕ್ಷಿತಃ ॥ ೫೨ ॥

ತಸ್ಯ ಚಾರಯತಃ ಸೋಽಶ್ವಃ ಸಮುದ್ರೇ ಪೂರ್ವದಕ್ಷಿಣೇ ।
ವೇಲಾಸಮೀಪೇಽಪಹೃತೋ ಭೂಮಿಂ ಚೈವ ಪ್ರವೇಶಿತಃ ॥ ೫೩ ॥

ಸ ತಂ ದೇಶಂ ತದಾ ಪುತ್ರೈಃ ಖಾನಯಾಮಾಸ ಪಾರ್ಥಿವಃ ।
ಆಸೇದುಸ್ತೇ ತದಾ ತತ್ರ ಖನ್ಯಮಾನೇ ಮಹಾರ್ಣವೇ ॥ ೫೪ ॥

ತಮಾದಿಪುರುಷಂ ದೇವಂ ಹರಿಂ ಕೃಷ್ಣಂ ಪ್ರಜಾಪತಿಂ ।
ವಿಷ್ಣುಂ ಕಪಿಲರೂಪೇಣ ಸ್ವಪಂತಂ ಪುರುಷಂ ತದಾ ॥ ೫೫ ॥

ಲ್ಲರೂ ಕ್ಷತ್ರಿಯರು. ಮಹಾತ್ಮನೂ, ವೀರನೂ ಆದ ಸಗರನು ವಸಿಷ್ಠಮುನಿಯ ಮಾತಿನಂತೆ ಅವರಾರನ್ನೂ ಸಂಹರಿಸದೆ ಅವರ ಧರ್ಮವನ್ನು ಹಾಳುಮಾಡಿದನು.

೫೨. ಆಮೇಲೆ ಧರ್ಮಿಷ್ಠನಾದ ಆ ಸಗರನು ಭೂಮಿಯನ್ನೆಲ್ಲಾ ಜಯಿಸಿ ಅಶ್ವಮೇಧಯಾಗದಲ್ಲಿ ದೀಕ್ಷಿತನಾಗಿ ಯಾಗದ ಕುದುರೆಯನ್ನು ಶಾಸ್ತ್ರದಂತೆ ದೇಶ ಸಂಚಾರಕ್ಕೆ ರಕ್ಷಕರೊಡನೆ ಕಳುಹಿಸಿದನು.

೫೩. ದೇಶವನ್ನು ಸಂಚರಿಸುತ್ತಲಿರುವ ಅವನ ಕುದುರೆಯನ್ನು ಇಂದ್ರನು ಮೋಸದಿಂದ ಪೂರ್ವ, ದಕ್ಷಿಣ ಸಮುದ್ರಗಳ ದಡದಲ್ಲಿ ಅಪಹರಿಸಿ ಭೂಮಿಯ ಒಳಗೆ ಪ್ರವೇಶಿಸಿದನು.

೫೪. ಆಗ ಸಗರನು ಮಕ್ಕಳಿಗೆ ಆಜ್ಞೆಮಾಡಿ ಭೂಮಿಯನ್ನು ಅಗೆಸಿದನು. ಆಗ ಭೂಮಿಯವಳಗೆ ಸಮುದ್ರಪ್ರದೇಶದಲ್ಲಿ ಕುದುರೆಯು ಸಿಕ್ಕಿತು.

೫೫. ಕುದುರೆಯ ಸಮೀಪದಲ್ಲಿ ಪುರಾಣಪುರುಷನೂ, ಜ್ಞಾನಜ್ಯೋತಿಪ್ರಕಾಶ ಸ್ವರೂಪನೂ, ಭಕ್ತರ ಪಾಪಗಳನ್ನು ನಾಶಮಾಡುವಂತಹವನೂ, ಜಗತ್ತನ್ನು ಸೃಷ್ಟಿಸುವವನೂ ಆದ ಹರಿಯು ಕಪಿಲಮುನಿಯ ರೂಪದಿಂದ ಸಮಾಧಿಯಲ್ಲಿ ಕುಳಿತಿದ್ದನು.

shrinath.udupa@gmail.com

ತಸ್ಯ ಚಕ್ಷುಸ್ಸಮುತ್ಥೇನ ತೇಜಸಾ ಪ್ರತಿಬುಧ್ಯತಃ ।
ದಗ್ಧಾಃ ಸರ್ವೇ ಮುನಿಶ್ರೇಷ್ಠಾಶ್ಚತ್ವಾರಸ್ತ್ವವಶೇಷಿತಾಃ ॥ ೫೬ ॥

ಬರ್ಹಿಕೇತುಃ ಸುಕೇತುಶ್ಚ ತಥಾ ಧರ್ಮರಥೋ ನೃಪಃ ।
ಶೂರಃ ಪಂಚನದಶ್ಚೈವ ತಸ್ಯ ವಂಶಕರಾ ನೃಪಾಃ ॥ ೫೭ ॥

ಪ್ರಾದಾಚ್ಚ ತಸ್ಮೈ ಭಗವಾನ್ ಹರಿರ್ನಾರಾಯಣೋ ವರಂ ।
ಅಕ್ಷಯಂ ವಂಶಮಿಕ್ಷ್ವಾಕೋಃ ಕೀರ್ತಿಂ ಚಾಪ್ಯನಿವರ್ತಿನೀಂ ॥ ೫೮ ॥

ಪುತ್ರಂ ಸಮುದ್ರಂ ಚ ವಿಭುಃ ಸ್ವರ್ಗೇ ವಾಸಂ ತಥಾಽಕ್ಷಯಂ ।
ಸಮುದ್ರಶ್ಚಾರ್ಘಮಾದಾಯ ವವಂದೇ ತಂ ಮಹೀಪತಿಂ ॥ ೫೯ ॥

---

೫೬. ಸಗರನ ಮಕ್ಕಳು ಭೂಮಿನ್ನಗೆದು ಕುದುರೆಯನ್ನು ಹುಡುಕುವ ಗದ್ದಲದಲ್ಲಿ ಆ ಕಪಿಲಮುನಿಗೆ ಸಮಾಧಿ ಭಂಗವಾಯಿತು. ಆಗ ಆ ಮುನಿಯು ಕಣ್ಣು ಬಿಡಲು ಅದರ ತೇಜಸ್ಸಿನಿಂದ ಆ ಸಗರಪುತ್ರರೆಲ್ಲರೂ ಸುಟ್ಟುಹೋದರು. ಅವರಲ್ಲಿ ನಾಲ್ವರು ಮಾತ್ರ ಉಳಿದರು.

೫೭. ಬರ್ಹಿಕೇತು, ಸುಕೇತು, ಧರ್ಮರಥ, ಪಂಚನದ ಈ ನಾಲ್ವರೇ ಉಳಿದ ಸಗರಪುತ್ರರು. ಅವರಿಂದ ಮುಂದೆ ಸಗರನ ಸಂತತಿಯು ಬೆಳೆಯಿತು.

೫೮. ನಾರಾಯಣಾವತಾರನಾದ ಭಗವಾನ್ ಕಪಿಲಮುನಿಯು ಆ ಸಗರನಿಗೆ ಅವನ ಇಕ್ಷ್ವಾಕುವಂಶವು ಸ್ಥಿರವಾಗಿ ವೃದ್ಧಿಹೊಂದುವಂತೆಯೂ, ಸ್ಥಿರವಾದ ಕೀರ್ತಿಯುಳ್ಳದ್ದಾಗುವಂತೆಯೂ ವರವನ್ನು ಕೊಟ್ಟನು. ಮತ್ತು ಸಮುದ್ರನು ಸಗರಪುತ್ರರು ಭೂಮಿಯನ್ನಗೆದುದರಿಂದಾದುದರಿಂದ ಆ ಸಮುದ್ರನು ಸಗರನ ಪುತ್ರನೆಂದು [ಸಾಗರ] ಕರೆಯಲ್ಪಡುವಂತೆಯೂ ಸಗರನಿಗೆ ಸ್ಥಿರವಾಗಿ ಸ್ವರ್ಗವಾಸವು ಲಭಿಸುವಂತೆಯೂ ವರವನ್ನು ಅನುಗ್ರಹಿಸಿದನು.

೫೯. ಸಮುದ್ರನೂ ಸಹ ಮಣಿರತ್ನಮಯವಾದ ಖಿಲ್ಲತ್ತನ್ನು ತಂದು ಸಗರರಾಜನಿಗರ್ಪಿಸಿ ನಮಸ್ಕರಿಸಿದನು. ಆಮೇಲೆ ಸಮುದ್ರನು ಹರಿಯ ಆಜ್ಞೆಯಂತೆ ಸಗರಪುತ್ರ [ಸಾಗರ] ನೆಂದು ಕರೆಯಲ್ಪಟ್ಟನು.

shrinath.udupa@gmail.com

ಸಾಗರತ್ವಂ ಚ ಲೇಭೇ ಸ ಕರ್ಮಣಾ ತೇನ ತಸ್ಯ ಹ ।
ತಂ ಚಾಽಽಶ್ವಮೇಧಿಕಂ ಸೋಽಶ್ವಂ ಸಮುದ್ರಾದುಪಲಬ್ಧವಾನ್ ॥ ೬೦ ॥

ಆಜಹಾರಾಶ್ವಮೇಧಾನಾಂ ಶತಂ ಸ ಸುಮಹಾತಪಾಃ ।
ಪುತ್ರಾಣಾಂ ಚ ಸಹಸ್ರಾಣಿ ಷಷ್ಟಿಸ್ತಸ್ಯೇತಿ ನಃ ಶ್ರುತಂ ॥ ೬೧ ॥

॥ ಮುನಯ ಊಚುಃ ॥

ಸಗರಸ್ಯಾಽಽತ್ಮಜಾ ವೀರಾಃ ಕಥಂ ಜಾತಾ ಮಹಾಬಲಾಃ ।
ವಿಕ್ರಾಂತಾಃ ಷಷ್ಟಿಸಾಹಸ್ರಾ ವಿಧಿನಾ ಕೇನ ಸತ್ತಮ ॥ ೬೨ ॥

॥ ಲೋಮಹರ್ಷಣ ಉವಾಚ ॥

ದ್ವೇ ಭಾರ್ಯೇ ಸಗರಸ್ಯಾಽಽಸ್ತಾಂ ತಪಸಾ ದಗ್ಧಕಿಲ್ಬಿಷೇ ।
ಜ್ಯೇಷ್ಠಾ ವಿದರ್ಭದುಹಿತಾ ಕೇಶಿನೀ ನಾಮ ನಾಮತಃ ॥ ೬೩ ॥

ಕನೀಯಸೀ ತು ಮಹತೀ ಪತ್ನೀ ಪರಮಧರ್ಮಿಣೀ ।
ಅರಿಷ್ಟನೇಮಿದುಹಿತಾ ರೂಪೇಣಾಪ್ರತಿಮಾ ಭುವಿ ॥ ೬೪ ॥

---

೬೦. ಆಮೇಲೆ ಸಗರನು ಸಮುದ್ರನಿಂದ ತನ್ನ ಅಶ್ವಮೇಧದ ಕುದುರೆಯನ್ನು ಪಡೆದು ಯಾಗವನ್ನು ಪೂರಯಿಸಿದನು. ಹೀಗೆ ಆ ಮಹಾರಾಜನು ನೂರು ಅಶ್ವಮೇಧ ಯಾಗಗಳನ್ನು ಮಾಡಿದನು,

೬೧. ಆ ಸಗರನಿಗೆ ಅರವತ್ತುಸಾವಿರ (೬೦,೦೦೦) ಮಕ್ಕಳು ಎಂದು ಕೇಳಿರುವೆನು.

೬೨. ಮುನಿಗಳು ಪ್ರಶ್ನಿಸಿದರು.—ಓ ಸರ್ವಜ್ಞನಾದ ಸೂತಮುನಿಯೇ ! ಸಗರನಿಗೆ ಬಲಿಷ್ಠರೂ, ವೀರರೂ ಆದ ಅರವತ್ತುಸಾವಿರ (೬೦,೦೦೦) ಮಕ್ಕಳು ಹೇಗೆ ಜನಿಸಿದರು?

೬೩. ಸೂತಮುನಿಯು ಹೇಳಿದನು.—ಎಲೈ ಮುನಿಗಳೇ ಸಗರರಾಜನಿಗೆ ಈರ್ವರು ಪತ್ನಿಯರಿದ್ದರು. ಅವರೀರ್ವರೂ ತಪಸ್ವಿನಿಗಳಾಗಿದ್ದು ಪರಿಶುದ್ಧರಾಗಿದ್ದರು. ಅವರಲ್ಲಿ ಹಿರಿಯವಳು ವಿದರ್ಭರಾಜನ ಮಗಳಾದ ಕೇಶಿನೀದೇವಿಯು.

೬೪. ಕಿರಿಯವಳು ಅರಿಷ್ಟನೇಮಿರಾಜನ ಮಗಳು. ಸುಮತಿಯೆಂದು ಅವಳ ಹೆಸರು. ಅವಳು ತುಂಬಾ ಸುಂದರಿಯೂ ಧರ್ಮಿಷ್ಠಳೂ ಆಗಿದ್ದಳು.

shrinath.udupa@gmail.com

ಔರ್ವಸ್ತಾಭ್ಯಾಂ ವರಂ ಪ್ರಾದಾತ್ತದ್ಬುಧ್ಯಧ್ವಂ ದ್ವಿಜೋತ್ತಮಾಃ ।
ಷಷ್ಟಿಂ ಪುತ್ರಸಹಸ್ರಾಣಿ ಗೃಹ್ಣಾತ್ವೇಕಾ ನಿತಂಬಿನೀ ॥ ೬೫ ॥

ಏಕಂ ವಂಶಧರಂ ತ್ವೇಕಾ ಯಥೇಷ್ಟಂ ವರಯತ್ವಿತಿ ।
ತತ್ರೈಕಾ ಜಗೃಹೇ ಪುತ್ರಾನ್ ಷಷ್ಟಿಸಾಹಸ್ರಸಂಮಿತಾನ್ ॥ ೬೬ ॥

ಏಕಂ ವಂಶಧರಂ ತ್ವೇಕಾ ತಥೇತ್ಯಾಹ ತತೋ ಮುನಿಃ ।
ರಾಜಾ ಪಂಚಜನೋ ನಾಮ ಬಭೂವ ಸ ಮಹಾದ್ಯುತಿಃ ॥ ೬೭ ॥

ಇತರಾ ಸುಷುವೇ ತುಂಬೀಂ ಬೀಜಪೂರ್ಣಾಮಿತಿ ಶ್ರುತಿಃ ।
ತತ್ರ ಷಷ್ಟಿಸಹಸ್ರಾಣಿ ಗರ್ಭಾಸ್ತೇ ತಿಲಸಂಮಿತಾಃ ॥ ೬೮ ॥

ಸಂಬಭೂವುರ್ಯಥಾಕಾಲಂ ವವೃಧುಶ್ಚ ಯಥಾಸುಖಂ ।
ಘೃತಪೂರ್ಣೇಷು ಕುಂಭೇಷು ತಾನ್ ಗರ್ಭಾನ್ನಿದಧೇ ತತಃ ॥ ೬೯ ॥

---

೬೫. ಅವರಿಗೆ ಬಹಳದಿನಗಳ ವರೆಗೆ ಮಕ್ಕಳಾಗದಿರಲು ಔರ್ವಮುನಿಯ ಬಳಿಗೆ ಹೋಗಿ ತಮಗೆ ಮಕ್ಕಳಾಗುವಂತೆ ವರವನ್ನು ಅನುಗ್ರಹಿಸಬೇಕೆಂದು ಬೇಡಿಕೊಂಡರು. ಆ ಮುನಿಯು ನಿಮ್ಮಿರ್ವರಲ್ಲಿ ಯಾವಳಾದರೂ ಓರ್ವಳು ಅರವತ್ತು ಸಾವಿರ ಮಕ್ಕಳನ್ನು ಪಡೆಯಲಿ, ಮತ್ತೋರ್ವಳು ಸಂತತಿಯನ್ನು ಬೆಳೆಯಿಸುವನಾದ ಓರ್ವ ಮಗನನ್ನು ಪಡೆಯಲಿ ಎಂದು ಅನುಗ್ರಹಿಸಿದನು.

೬೬-೬೭. ಅವರಲ್ಲಿ ಒಬ್ಬಳಾದ ಸುಮತಿಯು ಅರವತ್ತು ಸಾವಿರ ಮಕ್ಕಳನ್ನು ಪಡೆಯುವೆನೆಂದು ಒಪ್ಪಿಕೊಂಡಳು. ಮತ್ತೋರ್ವಳಾದ ಕೇಶಿನಿಯು ವಂಶಕರನಾದೋರ್ವ ಮಗನನ್ನು ಪಡೆಯುಲು ಒಪ್ಪಿಕೊಂಡಳು. ಔರ್ವಮುನಿಯು ಅದರಂತೆ ಅನುಗ್ರಹಿಸಿದನು. ವಂಶಕರನಾದೊಬ್ಬಮಗನು ಪಂಚಜನನೆಂಬುವವನು ತೇಜಸ್ವಿಯಾದವನು ರಾಜನಾಗಿ ಹುಟ್ಟಿದನು.

೬೮ ಮತ್ತೋರ್ವಳಾದ ಸುಮತಿಯು ನವಮಾಸಗಳು ತುಂಬುವುದರೊಳಗೇ ಗರ್ಭಬೀಜದಿಂದ ತುಂಬಿದ ಪಿಂಡವನ್ನು ಪಡೆದಳು. ಅದರಲ್ಲಿ ಎಳ್ಳಿನಷ್ಟು ಚಿಕ್ಕದಾದ ಅರವತ್ತು ಸಾವಿರ ಗರ್ಭಪಿಂಡಗಳಿದ್ದುವು ಎಂದು ಕೇಳಿರುವೆನು.

೬೯. ಸಗರರಾಜನು ಆ ಗರ್ಭಗಳನ್ನು ತುಪ್ಪದಿಂದ ತುಂಬಿದ ಕಲಶಗಳಲ್ಲಿ ಇಡಿಸಿ ರಕ್ಷಿಸಿದನು. ಆ ಗರ್ಭಗಳು ದಿನದಿನಕ್ಕೆ ಬೆಳೆಯತೊಡಗಿದುವು.

shrinath.udupa@gmail.com

ಧಾತ್ರೀಶ್ಚೈಕೈಕಶಃ ಪ್ರಾದಾತ್ತಾವತೀಃ ಪೋಷಣೇ ನೃಪಃ ।
ತತೋ ದಶಸು ಮಾಸೇಷು ಸಮುತ್ತಸ್ಥುರ್ಯಥಾಕ್ರಮಂ ॥ ೨೦ ॥

ಕುಮಾರಾಸ್ತೇ ಯಥಾಕಾಲಂ ಸಗರಪ್ರೀತಿವರ್ಧನಾಃ ।
ಷಷ್ಟಿಪುತ್ರಸಹಸ್ರಾಣಿ ತಸ್ಯೈವಮಭವನ್ ದ್ವಿಜಾಃ ॥ ೨೧ ॥

ಗರ್ಭಾದಲಾಬೂಮಧ್ಯಾದ್ವೈ ಜಾತಾನಿ ಪೃಥಿವೀಪತೇಃ ।
ತೇಷಾಂ ನಾರಾಯಣಂ ತೇಜಃ ಪ್ರವಿಷ್ಟಾನಾಂ ಮಹಾತ್ಮನಾಂ ॥ ೨೨ ॥

ಏಕಃ ಪಂಚಜನೋ ನಾಮ ಪುತ್ರೋ ರಾಜಾ ಬಭೂವ ಹ ।
ಶೂರಃ ಪಂಚಜನಸ್ಯಾಽಽಸೀದಂಶುಮಾನ್ನಾಮ ವೀರ್ಯವಾನ್ ॥ ೨೩ ॥

ದಿಲೀಪಸ್ತಸ್ಯ ತನಯಃ ಖಟ್ವಾಂಗ ಇತಿ ವಿಶ್ರುತಃ ।
ಯೇನ ಸ್ವರ್ಗಾದಿಹಾಽಽಗತ್ಯ ಮುಹೂರ್ತಂ ಪ್ರಾಪ್ಯ ಜೀವಿತಂ ॥ ೨೪ ॥

---

೨೦. ಆ ಅರವತ್ತು ಸಾವಿರ ಗರ್ಭಗಳನ್ನೂ ಪೋಷಿಸಲು ಅರವತ್ತುಸಾವಿರ ದಾದಿಯರನ್ನು ರಾಜನು ನಿಯಮಿಸಿದನು. ಕ್ರಮವಾಗಿ ಹತ್ತುಮಾಸಗಳು ಕಳೆಯಲು ಆ ಅರವತ್ತುಸಾವಿರ ಮಕ್ಕಳು ಆ ಗರ್ಭಗಳಿಂದ ಹೊರಗೆ ಬಂದರು.

೨೧. ಆ ಅರವತ್ತುಸಾವಿರ ಮಕ್ಕಳೂ ದಿನದಿನವೂ ಬೆಳೆಯುತ್ತಾ ತಮ್ಮ ಆಟಪಾಟಗಳಿಂದ ತಂದೆಯಾದ ಸಗರರಾಜನಿಗೆ ತುಂಬಾ ಸಂತೋಷವನ್ನುಂಟು ಮಾಡಿದರು.

೨೨. ಹೀಗೆ ಗರ್ಭಪಿಂಡವಾಗಿ ಜನಿಸಿ ಆಮೇಲೆ ಬೆಳೆದ ಆ ಸಗರಪುತ್ರರು ಮುಂದೆ ಕಪಿಲಮುನಿಯ ತೇಜಸ್ಸಿನಿಂದ ನಷ್ಟರಾದರು.

೨೩. ಕೇಶಿನಿಯ ಮಗನಾದ ಪಂಚಜನನು ರಾಜನಾದನು. ಅವನ ಮಗನು ವೀರನಾದ ಅಂಶುಮಂತನು. ಅವನು ಮಹಾಬಲಶಾಲಿಯೂ ಆಗಿದ್ದನು.

೨೪. ದಿಲೀಪರಾಜನು ಆ ಪಂಚಜನನ ಮಗನು. ಖಟ್ವಾಂಗನೆಂಬ ದೇವ [ರುದ್ರಗಣ] ನು ಸ್ವರ್ಗದಿಂದ ದಿಲೀಪನಾಗಿ ಅವತರಿಸಿ ರಾಜ್ಯವಾಳಿದನು ಎಂದು ಪ್ರಸಿದ್ಧಿಯಿರುತ್ತದೆ. ಆ ದಿಲೀಪನು ಸತ್ಯಪ್ರಜ್ಞನಾಗಿದ್ದು ಮೂರುಲೋಕಗಳಲ್ಲಿ ಪ್ರಸಿದ್ಧನಾಗಿದ್ದನು.

shrinath.udupa@gmail.com

ತ್ರಯೋಽಭಿಸಂಧಿತಾ ಲೋಕಾ ಬುಧ್ಯಾ ಸತ್ಯೇನ ಚಾನಘಾಃ ।
ದಿಲೀಪಸ್ಯ ತು ದಾಯಾದೋ ಮಹಾರಾಜೋ ಭಗೀರಥಃ ॥ ೭೫ ॥

ಯಃ ಸ ಗಂಗಾಂ ಸರಿಚ್ಛ್ರೇಷ್ಠಾಮವಾತಾರಯತ ಪ್ರಭುಃ ।
ಸಮುದ್ರಮಾನಯಚ್ಚೈನಾಂ ದುಹಿತೃತ್ವೇಽಸ್ಯಕಲ್ಪಯತ್ ॥ ೭೬ ॥

ತಸ್ಮಾದ್ಭಾಗೀರಥೀ ಗಂಗಾ ಕಥ್ಯತೇ ವಂಶಚಿಂತಕೈಃ ।
ಭಗೀರಥಸುತೋ ರಾಜಾ ಶ್ರುತ ಇತ್ಯಭಿವಿಶ್ರುತಃ ॥ ೭೭ ॥

ನಾಭಾಗಸ್ತು ಶ್ರುತಸ್ಯಾಽಽಸೀತ್ಪುತ್ರಃ ಪರಮಧಾರ್ಮಿಕಃ ।
ಅಂಬರೀಷಸ್ತು ನಾಭಾಗಿಃ ಸಿಂಧುದ್ವೀಪಪಿತಾಽಭವತ್ ॥ ೭೮ ॥

ಅಯುತಾಜಿತ್ತು ದಾಯಾದಃ ಸಿಂಧುದ್ವೀಪಸ್ಯ ವೀರ್ಯವಾನ್ ।
ಆಯುತಾಜಿತ್ಸುತಸ್ತ್ವಾಸೀದೃತುಪರ್ಣೋ ಮಹಾಯಶಾಃ ॥ ೭೯ ॥

ದಿವ್ಯಾಕ್ಷಹೃದಯಜ್ಞೋ ವೈ ರಾಜಾ ನಲಸಖೋ ಬಲೀ ।
ಋತುಪರ್ಣಸುತಸ್ತ್ವಾಸೀದಾರ್ತ್ತಪರ್ಣಿರ್ಮಹಾಯಶಾಃ ॥ ೮೦ ॥

೭೫-೭೬. ಭಗೀರಥಮಹಾರಾಜನು ದಿಲೀಪನ ಮಗನು. ಈ ಭಗೀರಥನು ದೇವಲೋಕದಿಂದ ಗಂಗಾನದಿಯನ್ನು ಭೂಮಿಗೆ ಕರೆದುಕೊಂಡು ಬಂದು ಸಮುದ್ರಕ್ಕೆ ಸೇರುವಂತೆ ಮಾಡಿದನು. ಮತ್ತು ಆ ಗಂಗೆಯನ್ನು ತನ್ನ ಪುತ್ರಿಯಾಗಿ ಮಾಡಿದ ಕಾರಣದಿಂದ ಇತಿಹಾಸವನ್ನು ಬಲ್ಲವರು ಗಂಗೆಯನ್ನು ಭಾಗೀರಥೀ ಎಂದು ಕರೆಯುವರು.

೭೭-೭೮. ಶ್ರುತನೆಂಬುವವನು ಭಗೀರಥನ ಮಗನು. ಶ್ರುತರಾಜನ ಮಗನು ಮಹಾಧರ್ಮಿಷ್ಠನಾದ ನಾಭಾಗರಾಜನು. ನಾಭಾಗನ ಮಗನು ಅಂಬರೀಷರಾಜನು. ಅವನ ಮಗನು ಸಿಂಧುದ್ವೀಪನೆಂಬುವವನು.

೭೯. ಅಯುತಾಜಿತು ಎಂಬುವವನು ಸಿಂಧುದ್ವೀಪನ ಮಗನು. ಯಶಸ್ವಿಯಾದ ಋತುಪರ್ಣರಾಜನು ಆ ಅಯುತಾಜಿತುರಾಜನ ಮಗನು.

೮೦. ಈ ಋತುಪರ್ಣರಾಜನು ದ್ಯೂತ [ಪಗಡೆಯಾಟ] ದ ರಹಸ್ಯವನ್ನು ಬಲ್ಲವನಾಗಿದ್ದನು ಮತ್ತು ನಲಚಕ್ರವರ್ತಿಯ ಮಿತ್ರನಾಗಿದ್ದನು. ಋತುಪರ್ಣನ ಮಗನು ಆರ್ತ್ತಪರ್ಣಿರಾಜನು. ಅವನು ಮಹಾ ಕೀರ್ತಿವಂತನಾಗಿದ್ದನು.

shrinath.udupa@gmail.com

ಸುದಾಸಸ್ತಸ್ಯ ತನಯೋ ರಾಜಾ ಇಂದ್ರಸಖೋಽಭವತ್ ।
ಸುದಾಸಸ್ಯ ಸುತಃ ಪ್ರೋಕ್ತಃ ಸೌದಾಸೋ ನಾಮ ಪಾರ್ಥಿವಃ ॥ ೮೧ ॥

ಖ್ಯಾತಃ ಕಲ್ಮಾಷಪಾದೋ ವೈ ರಾಜಾ ಮಿತ್ರಸಹೋಽಭವತ್ ।
ಕಲ್ಮಾಷಪಾದಸ್ಯ ಸುತಃ ಸರ್ವಕರ್ಮೇತಿ ವಿಶ್ರುತಃ ॥ ೮೨ ॥

ಅನರಣ್ಯಸ್ತು ಪುತ್ರೋಽಭೂದ್ವಿಶ್ರುತಃ ಸರ್ವಕರ್ಮಣಃ ।
ಅನರಣ್ಯಸುತೋ ನಿಘ್ನೋ ನಿಘ್ನತೋ ದ್ವೌ ಬಭೂವತುಃ ॥ ೮೩ ॥

ಅನಮಿತ್ರೋ ರಘುಶ್ಚೈವ ಪಾರ್ಥಿವರ್ಷಭಸತ್ತಮೌ ।
ಅನಮಿತ್ರಸುತೋ ರಾಜಾ ವಿದ್ವಾನ್ ದುಲಿದುಹೋಽಭವತ್ ॥ ೮೪ ॥

ದಿಲೀಪಸ್ತನಯಸ್ತಸ್ಯ ರಾಮಸ್ಯ ಪ್ರಪಿತಾಮಹಃ ।
ದೀರ್ಘಬಾಹುರ್ದಿಲೀಪಸ್ಯ ರಘುರ್ನಾಮ್ನಾ ಸುತೋಽಭವತ್ ॥ ೮೫ ॥

---

೮೧. ಋತುಪರ್ಣರಾಜನ ಮಗನು ಸುದಾಸನೆಂಬುವನು. ಪರಾಕ್ರಮಿಯಾದ ಈ ಸುದಾಸನು ದೇವೇಂದ್ರನ ಸ್ನೇಹಿತನಾಗಿದ್ದನು. ಸುದಾಸನ ಮಗನು ಸೌದಾಸನೆಂಬುವನು.

೮೨. ಈ ಸೌದಾಸರಾಜನ ಮಗನು ಕಲ್ಮಾಷಪಾದನೆಂಬುವನು. ಇವನು ಪರಾಕ್ರಮದಿಂದ ಶತ್ರುರಾಜರನ್ನೆಲ್ಲಾ ಜಯಿಸಿದ್ದನು. ಸರ್ವಕರ್ಮನೆಂಬುವನು ಕಲ್ಮಾಷಪಾದನ ಮಗನು.

೮೩. ಆ ಸರ್ವಕರ್ಮರಾಜನ ಮಗನು ಅನರಣ್ಯರಾಜನು. ನಿಘ್ನನೆಂಬುವನು ಅನರಣ್ಯನ ಮಗನು. ಆ ನಿಘ್ನರಾಜನಿಂದ ಅನಮಿತ್ರ, ರಘುಗಳೆಂಬ ಇಬ್ಬರು ಶ್ರೇಷ್ಠ ಚಕ್ರವರ್ತಿಗಳು ಜನಿಸಿದರು.

೮೪–೮೫. ಮಹಾಜ್ಞಾನಿಯಾದ ದುಲಿದುಹನೆಂಬರಾಜನು ಅನಮಿತ್ರರಾಜನ ಮಗನು. ರಾಮನ ಮುತ್ತಜ್ಜನಾದ ದಿಲೀಪರಾಜನು ದುಲಿದುಹರಾಜನ ಮಗನು.

shrinath.udupa@gmail.com

ಅಯೋಧ್ಯಾಯಾಂ ಮಹಾರಾಜೋ ಯಃ ಪುರಾಽಽಸೀನ್ಮಹಾಬಲಃ ।
ಅಜಸ್ತು ರಾಘವೋ ಜಜ್ಞೇ ತಥಾ ದಶರಥೋಽಸ್ಯಜಾತ್ ॥ ೮೬ ॥

ರಾಮೋ ದಶರಥಾಜ್ಜಜ್ಞೇ ಧರ್ಮಾತ್ಮಾ ಸುಮಹಾಯಶಾಃ ।
ರಾಮಸ್ಯ ತನಯೋ ಜಜ್ಞೇ ಕುಶ ಇತ್ಯಭಿಸಂಜ್ಞಿತಃ ॥ ೮೭ ॥

ಅತಿಥಿಸ್ತು ಕುಶಾಜ್ಜಜ್ಞೇ ಧರ್ಮಾತ್ಮಾ ಸುಮಹಾಯಶಾಃ ।
ಅತಿಥೇಸ್ತ್ವಭವತ್ಪುತ್ರೋ ನಿಷಧೋ ನಾಮ ವೀರ್ಯವಾನ್ ॥ ೮೮ ॥

ನಿಷಧಸ್ಯ ನಲಃ ಪುತ್ರೋ ನಭಃ ಪುತ್ರೋ ನಲಸ್ಯ ತು ।
ನಭಸ್ಯ ಪುಂಡರೀಕಸ್ತು ಕ್ಷೇಮಧನ್ವಾ ತತಃ ಸ್ಮೃತಃ ॥ ೮೯ ॥

ಆ ದಿಲೀಪರಾಜನಿಗೆ ಆಜಾನುಬಾಹುವೂ ವೀರನೂ ಆದ ರಘುಮಹಾರಾಜನು ಮಗನು.

೮೬. ಈ ರಘುಮಹಾರಾಜನು ಮಹಾಪರಾಕ್ರಮಿಯಾಗಿದ್ದು ಅಯೋಧ್ಯೆಯಲ್ಲಿ ರಾಜ್ಯವಾಳುತ್ತಿದ್ದನು. ರಘುವಿನ ಮಗನು ಅಜಮಹಾರಾಜನು. ಅಜರಾಜನ ಮಗನು ದಶರಥಮಹಾರಾಜನು.

೮೭. ದಶರಥಮಹಾರಾಜನ ಮಗನು ಪ್ರಸಿದ್ಧನೂ ಧರ್ಮಾತ್ಮನೂ ಆದ ಶ್ರೀರಾಮನು. ಆ ರಾಮನಿಂದ ಕುಶನೆಂಬುವನು ಜನಿಸಿದನು.

೮೮. ಕುಶನಿಂದ ಧರ್ಮಾತ್ಮನೂ ಯಶಸ್ವಿಯೂ ಆದ ಅತಿಥಿರಾಜನು ಜನಿಸಿದನು. ನಿಷಧನೆಂಬ ವೀರನಾದ ರಾಜನು ಅತಿಥಿಯ ಮಗನು.

೮೯. ನಿಷಧರಾಜನ ಮಗನು ನಲಚಕ್ರವರ್ತಿಯು. ನಭನೆಂಬುವವನು ನಲನ ಮಗನು. ನಲರಾಜನ ಮಗನು ಪುಂಡರೀಕನೆಂಬುವನು. ಕ್ಷೇಮಧನ್ವ ಎಂಬುವನು ಪುಂಡರೀಕರಾಜನ ಮಗನು.

shrinath.udupa@gmail.com

ಕ್ಷೇಮಧನ್ವಸುತಸ್ತ್ವಾಸೀದ್ದೇವಾನೀಕಃ ಪ್ರತಾಪವಾನ್ ।
ಆಸೀದಹೀನಗುರ್ನಾಮ ದೇವಾನೀಕಾತ್ಮಜಃ ಪ್ರಭುಃ ॥ ೯೦ ॥

ಅಹೀನಗೋಽಸ್ತು ದಾಯಾದಃ ಸುಧನ್ವಾ ನಾಮ ಪಾರ್ಥಿವಃ ।
ಸುಧನ್ವನಃ ಸುತಶ್ಚಾಪಿ ತತೋ ಜಜ್ಞೇ ಶಲೋ ನೃಪಃ ॥ ೯೧ ॥

ಉಕ್ಥ್ಯೋ ನಾಮ ಸ ಧರ್ಮಾತ್ಮಾ ಶಲಪುತ್ರೋ ಬಭೂವ ಹ ।
ವಜ್ರನಾಭಃ ಸುತಸ್ತಸ್ಯ ನಲಸ್ತಸ್ಯ ಮಹಾತ್ಮನಃ ॥ ೯೨ ॥

ನಲೌ ದ್ವಾವೇವ ವಿಖ್ಯಾತೌ ಪುರಾಣೇ ಮುನಿಸತ್ತಮಾಃ ।
ವೀರಸೇನಾತ್ಮಜಶ್ಚೈವ ಯಶ್ಚೈಕ್ಷ್ವಾಕುಕುಲೋದ್ವಹಃ ॥ ೯೩ ॥

ಇಕ್ಷ್ವಾಕುವಂಶಪ್ರಭವಾಃ ಪ್ರಾಧಾನ್ಯೇನ ಪ್ರಕೀರ್ತಿತಾಃ ।
ಏತೇ ವಿವಸ್ವತೇ ವಂಶೇ ರಾಜಾನೋ ಭೂರಿತೇಜಸಃ ॥ ೯೪ ॥

---

೯೦. ದೇವಾನೀಕನೆಂಬುವನು ಕ್ಷೇಮಧನ್ವನ ಮಗನು. ಪ್ರತಾಪಿಯಾದಾ ಕ್ಷೇಮಧನ್ವನ ಮಗನು ಅಹೀನಗು ಎಂಬ ರಾಜನು.

೯೧. ಸುಧನ್ವನೆಂಬ ರಾಜನು ಅಹೀನಗುರಾಜನ ಮಗನು. ಆ ಸುಧನ್ವ ರಾಜನ ಮಗನು ಶಲನೆಂಬ ರಾಜನು.

೯೨. ಶಲರಾಜನ ಮಗನು ಉಕ್ಥ್ಯನೆಂಬ ರಾಜನು. ಧರ್ಮಾತ್ಮನಾದ ಈ ಉಕ್ಥ್ಯರಾಜನ ಮಗನು ವಜ್ರನಾಭನು. ವಜ್ರನಾಭನ ಮಗನು ನಲರಾಜನು.

೯೩. ಎಲೈ ಮುನಿಶ್ರೇಷ್ಠರೇ, ಪುರಾಣದಲ್ಲಿ ಈರ್ವರು ನಲಮಹಾರಾಜರು ಪ್ರಸಿದ್ಧರಾಗಿರುವರು. ಅವರಲ್ಲಿ ಓರ್ವನು ವೀರಸೇನನ ಮಗನಾದ ನಲಚಕ್ರವರ್ತಿಯು. ಮತ್ತೊಬ್ಬನು ಇಕ್ಷ್ವಾಕು ಕುಲದಲ್ಲಿ ಜನಿಸಿದ ನಲಮಹಾರಾಜನು.

೯೪. ಇಕ್ಷ್ವಾಕುರಾಜನ ವಂಶದವರಾದ ರಾಜರಲ್ಲಿ ಪ್ರಧಾನರಾದವರನ್ನು ಹೇಳಿರುವೆನು. ಮಹಾಪರಾಕ್ರಮಿಗಳಾದ ಈ ರಾಜರು ಸೂರ್ಯವಂಶದವರು.

shrinath.udupa@gmail.com

ಪಠನ್ನನ್ಯಾಗಿಮಾಂ ಸೃಷ್ಟಿಮಾದಿತ್ಯಸ್ಯ ವಿವಸ್ವತಃ ।
ಶ್ರಾದ್ಧದೇವಸ್ಯ ದೇವಸ್ಯ ಪ್ರಜಾನಾಂ ಪುಷ್ಟಿದಸ್ಯ ಚ ।
ಪ್ರಜಾವಾನೇತಿ ಸಾಯುಜ್ಯಮಾದಿತ್ಯಸ್ಯ ವಿವಸ್ವತಃ ॥ ೯೫ ॥

ಇತಿ ಶ್ರೀಮಹಾಪುರಾಣೇ ಬ್ರಾಹ್ಮೇ ಆದಿತ್ಯವಂಶಾನುಕೀರ್ತನಂ
ನಾಮಾಷ್ಟಮೋಽಧ್ಯಾಯಃ

---

೯೫. ಕರ್ಮಸಾಕ್ಷಿಯೂ ಭಕ್ತಿಯಿಂದ ಜನಗಳಿಂದ ಅರ್ಚಿಸಲ್ಪಡತಕ್ಕವನೂ ಜನಗಳಿಗೆ ಪುಷ್ಟಿ (ಆರೋಗ್ಯ) ವನ್ನು ಕೊಡುವವನೂ ಆದ ಸೂರ್ಯದೇವನ ವಂಶವಿವರಣೆಯನ್ನೂ ಸೃಷ್ಟಿಕ್ರಮವನ್ನೂ ಓದುವವನು ಮತ್ತು ಕೇಳುವವನು ಇಹದಲ್ಲಿ ಒಳ್ಳೆಯ ಸಂತತಿಯನ್ನು ಪಡೆಯುವನು, ಪರದಲ್ಲಿ ಸೂರ್ಯಲೋಕವನ್ನು ಹೊಂದುವನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಆದಿತ್ಯವಂಶಕೀರ್ತನವೆಂಬ
ಎಂಟನೆಯ ಅಧ್ಯಾಯವು ಮುಗಿದುದು.

shrinath.udupa@gmail.com

॥ ಶ್ರೀಃ ॥

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ನವಮೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ಪಿತಾ ಸೋಮಸ್ಯ ಭೋ ವಿಪ್ರಾ ಜಜ್ಞೇಽತ್ರಿರ್ಭಗವಾನೃಷಿಃ ।
ಬ್ರಹ್ಮಣೋ ಮಾನಸಾತ್ಪೂರ್ವಂ ಪ್ರಜಾಸರ್ಗಂ ವಿಧಿತ್ಸತಃ ॥ ೧ ॥

ಅನುತ್ತರಂ ನಾಮ ತಪೋ ಯೇನ ತಪ್ತಂ ಹಿ ತತ್ಪುರಾ ।
ತ್ರೀಣಿ ವರ್ಷಸಹಸ್ರಾಣಿ ದಿವ್ಯಾನೀತಿ ಹಿ ನಃ ಶ್ರುತಂ । ॥ ೨ ॥

ಊರ್ಧ್ವಮಾಚಕ್ರಮೇ ತಸ್ಯ ರೇತಃ ಸೋಮತ್ವಮೀಯಿವತ್ ।
ನೇತ್ರಾಭ್ಯಾಂ ವಾರಿ ಸುಸ್ರಾವ ದಶಧಾ ದ್ಯೋತಯನ್ ದಿಶಃ ॥ ೩ ॥

ಒಂಭತ್ತನೆಯ ಅಧ್ಯಾಯವು.

೧. ಲೋಮಹರ್ಷಣನಿಂತೆಂದನು.—ವಿಪ್ರರೇ ಶೌನಕಾದಿಮುನಿಗಳೇ, ಕೇಳಿ. ಸೃಷ್ಟಿಗೆ ಮೊದಲು ಬ್ರಹ್ಮನು ಸೃಷ್ಟಿಯನ್ನು ಮಾಡಬೇಕೆಂದು ಹವಣಿಸುತ್ತಿರುವಾಗ ಚಂದ್ರನ ತಂದೆಯಾದ ಅತ್ರಿಮಹರ್ಷಿಯು ಅವನ ಮನಸ್ಸಿನಿಂದ ಜನಿಸಿದನು.

೨. ಆ ಅತ್ರಿಮಹರ್ಷಿಯು ಹಿಂದೆ ಮೂರುಸಾವಿರ ದೇವವರ್ಷಗಳ ವರೆಗೆ ಅನುತ್ತರವೆಂಬ ತಪಸ್ಸನ್ನು ಮಾಡಿದನು ಎಂದು ನಾವು ಕೇಳಿರುವೆವು.

೩. ಆಗ ಅತ್ರಿಮುನಿಯ ರೇತಸ್ಸು ಮೇಲಕ್ಕೆ ಬಂದು ಚಂದ್ರನ ರೂಪವನ್ನು ಧರಿಸಿತು. ಮುನಿಯ ಕಣ್ಣುಗಳಿಂದ ನೀರು ಹತ್ತು ಪ್ರಕಾರವಾಗಿ ಹೊರಟು ಹತ್ತು ದಿಕ್ಕುಗಳನ್ನೂ ಬೆಳಗುತ್ತಾ ಸುರಿಯಿತು.

shrinath.udupa@gmail.com

ತಂ ಗರ್ಭಂ ವಿಧಿನಾಽಽದಿಷ್ಟಾ ದಶ ದೇವ್ಯೋ ದಧುಸ್ತತಃ ।
ಸಮೇತ್ಯ ಧಾರಯಾಮಾಸುರ್ನ ಚ ತಾಃ ಸಮಶಕ್ನುವನ್ ॥ ೪ ॥

ಯದಾ ನ ಧಾರಣೇ ಶಕ್ತಾಸ್ತಸ್ಯ ಗರ್ಭಸ್ಯ ತಾ ದಿಶಃ ।
ತತಸ್ತಾಭಿಃ ಸ ತ್ಯಕ್ತಸ್ತು ನಿಪಪಾತ ವಸುಂಧರಾಂ ॥ ೫ ॥

ಪತಿತಂ ಸೋಮಮಾಲೋಕ್ಯ ಬ್ರಹ್ಮಾ ಲೋಕಪಿತಾಮಹಃ ।
ರಥಮಾರೋಪಯಾಮಾಸ ಲೋಕಾನಾಂ ಹಿತಕಾಮ್ಯಯಾ ॥ ೬ ॥

ತಸ್ಮಿನ್ನಿಪತಿತೇ ದೇವಾಃ ಪುತ್ರೇಽತ್ರೇಃ ಪರಮಾತ್ಮನಿ ।
ತುಷ್ಟುವುರ್ಬ್ರಹ್ಮಣಃ ಪುತ್ರಾಸ್ತಥಾಽನ್ಯೇ ಮುನಿಸತ್ತಮಾಃ ॥ ೭ ॥

ತಸ್ಯ ಸಂಸ್ತೂಯಮಾನಸ್ಯ ತೇಜಃ ಸೋಮಸ್ಯ ಭಾಸ್ವತಃ ।
ಆಪ್ಯಾಯನಾಯ ಲೋಕಾನಾಂ ಭಾವಯಾಮಾಸ ಸರ್ವತಃ ॥ ೮ ॥

---

೪. ಆ ಚಂದ್ರರೂಪವಾದ ಗರ್ಭವನ್ನು ಬ್ರಹ್ಮನಿಂದ ನಿಯಮಿತರಾಗಿ ಹತ್ತು ಜನ ದೇವಸ್ತ್ರೀಯರು ಧರಿಸಿದರು. ಆದರೆ ಅದರ ತೇಜಸ್ಸನ್ನು ಸಹಿಸಲಸಮರ್ಥರಾದರು.

೫. ಹೀಗೆ ಆ ಗರ್ಭವನ್ನು ಧರಿಸಲಾರದೆ-ಆ ಹತ್ತುಮಂದಿ ದೇವತಾಸ್ತ್ರೀಯರು ಅದನ್ನು ಕೆಳಗೆ ಬಿಟ್ಟರು. ಆಗ ಆ ಗರ್ಭವು ಭೂಮಿಯಲ್ಲಿ ಬಿದ್ದಿತು.

೬. ಭೂಮಿಗೆ ಬಿದ್ದ ಚಂದ್ರನನ್ನು ನೋಡಿ ಲೋಕಪಿತಾಮಹನಾದ ಬ್ರಹ್ಮನು ಲೋಕಹಿತಕ್ಕಾಗಿ ಅವನನ್ನು ರಥದಮೇಲಕ್ಕೆ ಹತ್ತಿಸಿದನು.

೭-೮. ಅತ್ರಿಮುನಿಯ ಪುತ್ರನೂ ಪರಮಾತ್ಮನೂ ಆದ ಚಂದ್ರನು ಭೂಮಿಗೆ ಬೀಳಲು ದೇವತೆಗಳೂ ಬ್ರಹ್ಮನ ಪುತ್ರರೂ ಮಹರ್ಷಿಗಳೂ ಆ ಚಂದ್ರನನ್ನು ಸ್ತುತಿಸತೊಡಗಲು ಆಗ ಚಂದ್ರನ ತೇಜಸ್ಸು ಲೋಕಕ್ಕೆ ಸಂತೋಷವನ್ನುಂಟುಮಾಡಲೋಸುಗ ಎಲ್ಲೆಡೆಯಲ್ಲಿಯೂ ಹರಡಿತು.

shrinath.udupa@gmail.com

ಸ ತೇನ ರಥಮುಖ್ಯೇನ ಸಾಗರಾಂತಾಂ ವಸುಂಧರಾಂ ।
ತ್ರಿಃಸಪ್ತಕೃತ್ವೋಽತಿಯಶಾಶ್ಚಕಾರಾಭಿಪ್ರದಕ್ಷಿಣಾಂ ॥ ೯ ॥

ತಸ್ಯ ಯಚ್ಚ್ಯರಿತಂ ತೇಜಃ ಪೃಥಿವೀಮನ್ವಪದ್ಯತ ।
ಓಷಧ್ಯಸ್ತಾಃ ಸಮುದ್ಭೂತಾ ಯಾಭಿಃ ಸಂಧಾರ್ಯತೇ ಜಗತ್ ॥ ೧೦ ॥

ಸ ಲಬ್ಧತೇಜಾ ಭಗವಾನ್ಸಂಸ್ತವೈಶ್ಚ ಸ್ವಕರ್ಮಭಿಃ ।
ತಪಸ್ತೇಪೇ ಮಹಾಭಾಗಃ ಪದ್ಮಾನಾಂ ದರ್ಶನಾಯ ಸಃ ॥ ೧೧ ॥

ತತಸ್ತಸ್ಮೈ ದದೌ ರಾಜ್ಯಂ ಬ್ರಹ್ಮಾ ಬ್ರಹ್ಮವಿದಾಂ ವರಃ ।
ಬೀಜೌಷಧೀನಾಂ ವಿಪ್ರಾಣಾಮಪಾಂ ಚ ಮುನಿಸತ್ತಮಾಃ ॥ ೧೨ ॥

ಸ ತತ್ಪ್ರಾಪ್ಯ ಮಹಾರಾಜ್ಯಂ ಸೋಮಃ ಸೌಮ್ಯವತಾಂ ವರಃ ।
ಸಮಾಜಹ್ರೇ ರಾಜಸೂಯಂ ಸಹಸ್ರಶತದಕ್ಷಿಣಂ ॥ ೧೩ ॥

---

೯. ಬ್ರಹ್ಮನು ಕೊಟ್ಟ ರಥದಿಂದ ಆ ಚಂದ್ರನು ಭೂಮಿಯೆಲ್ಲವನ್ನೂ ಇಪ್ಪತ್ತೊಂದು ಬಾರಿ ಪ್ರದಕ್ಷಿಣಾಕಾರವಾಗಿ ಸುತ್ತಿದನು.

೧೦. ಭೂಮಿಯಲ್ಲಿ ಬಿದ್ದ ಆ ಚಂದ್ರನ ಸ್ವಲ್ಪತೇಜಸ್ಸಿನಿಂದಲೇ ಓಷಧಿಲತೆಗಳು ಜನಿಸಿದುವು. ಆ ಲತೆಗಳು ಈಗಲೂ ಜನಗಳನ್ನು ಆಪತ್ತುಗಳಿಂದ ಕಾಪಾಡುತ್ತಿರುವವು.

೧೧. ದೇವತೆಗಳ ಸ್ತೋತ್ರಗಳಿಂದಲೂ ತನ್ನ ಕರ್ಮಗಳಿಂದಲೂ ತೇಜಸ್ಸನ್ನು ಪಡೆದ ಆ ಚಂದ್ರನು ಪದ್ಮಗಳನ್ನು ನೋಡಲೋಸುಗ ತಪಸ್ಸನ್ನು ಮಾಡಿದನು.

೧೨. ಆಮೇಲೆ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ಬ್ರಹ್ಮನು ಆ ಚಂದ್ರನನ್ನು ಬೀಜಗಳಿಗೂ, ಓಷಧಿಗಳಿಗೂ, ಲತೆಗಳಿಗೂ, ನೀರುಗಳಿಗೂ, ಬ್ರಾಹ್ಮಣರಿಗೂ ರಾಜನನ್ನಾಗಿ ಮಾಡಿದನು.

೧೩. ಹೀಗೆ ರಾಜ್ಯವನ್ನು ಪಡೆದು ಶಾಂತರೂಪನಾದ ಚಂದ್ರನು ಕೋಟಿ ದಕ್ಷಿಣೆಗಳುಳ್ಳ ರಾಜಸೂಯಯಾಗವನ್ನು ಮಾಡಿದನು.

shrinath.udupa@gmail.com

ದಕ್ಷಿಣಾಮದದಾತ್ಸೋಮಸ್ತ್ರೀನ್ ಲೋಕಾನಿತಿ ನಃ ಶ್ರುತಂ ।
ತೇಭ್ಯೋ ಬ್ರಹ್ಮರ್ಷಿಮುಖ್ಯೇಭ್ಯಃ ಸದಸ್ಯೇಭ್ಯಶ್ಚ ಭೋ ದ್ವಿಜಾಃ ॥ ೧೪ ॥

ಹಿರಣ್ಯಗರ್ಭೋ ಬ್ರಹ್ಮಾಽತ್ರಿರ್ಭೃಗುಶ್ಚ ಋತ್ವಿಜೋಽಭವತ್ ।
ಸದಸ್ಯೋಽಭೂದ್ಧರಿಸ್ತತ್ರ ಮುನಿಭಿರ್ಬಹುಭಿರ್ವೃತಃ ॥ ೧೫ ॥

ತಂ ಸಿನೀಶ್ಚ ಕುಹೂಶ್ಚೈವ ದ್ಯುತಿಃ ಪುಷ್ಟಿಃ ಪ್ರಭಾ ವಸುಃ ।
ಕೀರ್ತಿರ್ಧೃತಿಶ್ಚ ಲಕ್ಷ್ಮೀಶ್ಚ ನವ ದೇವ್ಯಃ ಸಿಷೇವಿರೇ ॥ ೧೬ ॥

ಪ್ರಾಪ್ಯಾವಭೃತಮವ್ಯಗ್ರಂ ಸರ್ವದೇವರ್ಷಿಪೂಜಿತಃ ।
ವಿರರಾಜಾಧಿರಾಜೇಂದ್ರೋ ದಶಧಾ ಭಾಸಯನ್ದಿಶಃ ॥ ೧೭ ॥

ತಸ್ಯ ತತ್ಪ್ರಾಪ್ಯ ದುಷ್ಪ್ರಾಪ್ಯಮೈಶ್ವರ್ಯಮೃಷಿಸತ್ಕೃತಂ ।
ವಿಬಭ್ರಾಮ ಮತಿಸ್ತಾತಾವಿನಯಾದನಯಾಹೃತಾ ॥ ೧೮ ॥

---

೧೪. ಆ ಯಾಗದಲ್ಲಿ ಋತ್ವಿಜರಾದ ಮತ್ತು ಸದಸ್ಯರಾದ ಬ್ರಹ್ಮರ್ಷಿಗಳಿಗೆ ಮೂರು ಲೋಕಗಳನ್ನೂ ದಕ್ಷಿಣೆಯಾಗಿ ಕೊಟ್ಟನೆಂದು ಕೇಳಿರುವೆನು.

೧೫. ಮತ್ತು ಆ ಯಾಗದಲ್ಲಿ ಹಿರಣ್ಯಗರ್ಭ (ಬ್ರಹ್ಮ) ನು ಬಹ್ಮನಾಗಿದ್ದನು. ಅತ್ರಿಮುನಿ ಮತ್ತು ಭೃಗುಮುನಿ ಇವರು ಋತ್ವಿಜರಾಗಿದ್ದರು. ನಾರಾಯಣನು ಮುನಿಗಳೊಡನೆ ಸದಸ್ಯನಾಗಿದ್ದನು.

೧೬. ಆ ಚಂದ್ರನನ್ನು ಸಿನೀದೇವಿ, ಕುಹೂದೇವಿ, ದ್ಯುತಿ, ಪುಷ್ಟಿ, ಪ್ರಭಾ ವಸು, ಕೀರ್ತಿ, ಧೃತಿ, ಲಕ್ಷ್ಮಿ ಈ ಒಂಭತ್ತುಮಂದಿ ದೇವಸ್ತ್ರೀಯರು ಸೇವಿಸಿದರು.

೧೭. ಆಮೇಲೆ ಚಂದ್ರನು ಯಾಗದಲ್ಲಿ ಅವಭೃಥಸ್ನಾನವನ್ನು ಮಾಡಿ ದೇವತೆಗಳಿಂದಲೂ, ಋಷಿಗಳಿಂದಲೂ, ಪೂಜಿತನಾಗಿ ತನ್ನ ತೇಜಸ್ಸಿನಿಂದ ಹತ್ತುದಿಕ್ಕುಗಳನ್ನೂ ಬೆಳಗುತ್ತಾ ಪ್ರಕಾಶಿಸಿದನು.

೧೮. ಹೀಗೆ ಯಾರೂ ಪಡೆಯಲಾರದಂತಹ ಐಶ್ವರ್ಯವನ್ನು ಪಡೆದು ಋಷಿಗಳಿಂದ ಸೇವಿಸಲ್ಪಡುತ್ತಾ ಚಂದ್ರನು ಐಶ್ವರ್ಯಮದದಿಂದ ಕೆಟ್ಟದಾರಿಗಿಳಿದನು.

shrinath.udupa@gmail.com

ಬೃಹಸ್ಪತೇಃ ಸ ವೈ ಭಾರ್ಯಾಮೈಶ್ವರ್ಯಮದಮೋಹಿತಃ ।
ಜಹಾರ ತರಸಾ ಸೋಮೋ ವಿಮತ್ಯಾಂಗಿರಸಃ ಸುತಂ ॥ ೧೯ ॥

ಸ ಯಾಚ್ಯಮಾನೋ ದೇವೈಶ್ಚ ತಥಾ ದೇವರ್ಷಿಭಿರ್ಮುಹುಃ ।
ನೈವ ವ್ಯಸರ್ಜಯತ್ತಾರಾಂ ತಸ್ಮಾ ಅಂಗಿರಸೇ ತದಾ ॥ ೨೦ ॥

ಉಶನಸ್ತಸ್ಯ ಜಗ್ರಾಹ ಪಾರ್ಷ್ಣಿಮಂಗಿರಸಸ್ತಥಾ ।
ರುದ್ರಶ್ಚ ಪಾರ್ಷ್ಣಿಂ ಜಗ್ರಾಹ ಗೃಹೀತ್ವಾಽಜಗವಂ ಧನುಃ ॥ ೨೧ ॥

ತೇನ ಬ್ರಹ್ಮಶಿರೋ ನಾಮ ಪರಮಾಸ್ತ್ರಂ ಮಹಾತ್ಮನಾ ।
ಉದ್ದಿಶ್ಯ ದೇವಾನುತ್ಸೃಷ್ಟಂ ಯೇನೈಷಾಂ ನಾಶಿತಂ ಯಶಃ ॥ ೨೨ ॥

ತತ್ರ ತದ್ಯುದ್ಧಮಭವತ್ಪ್ರಖ್ಯಾತಂ ತಾರಕಾಮಯಂ ।
ದೇವಾನಾಂ ದಾನವಾನಾಂ ಚ ಲೋಕಕ್ಷಯಕರಂ ಮಹತ್ ॥ ೨೩ ॥

---

೧೯. ಅಂಗಿರಸಮುನಿಯ ಮಗನೂ ದೇವಗುರುವೂ ಆದ ಬೃಹಸ್ಪತಿಯ ಪತ್ನಿಯಾದ ತಾರಾದೇವಿಯನ್ನು ಐಶ್ವರ್ಯಮದದಿಂದ ಕೊಬ್ಬಿದ ಆ ಚಂದ್ರನು ಅಪಹರಿಸಿದನು.

೨೦. ದೇವತೆಗಳೂ, ದೇವಮುನಿಗಳೂ ಎಷ್ಟು ಹೇಳಿದರೂ ಸಹ ಆ ಚಂದ್ರನು ತಾರಾದೇವಿಯನ್ನು ಹಿಂದಕ್ಕೆ ಒಪ್ಪಿಸಲಿಲ್ಲ.

೨೧. ಆಗ ಅಂಗಿರಸಮುನಿಯ ಮತ್ತೊಬ್ಬ ಪುತ್ರನಾದ ಶುಕ್ರಾಚಾರ್ಯನು ಚಂದ್ರನ ಪಕ್ಷವನ್ನು ವಹಿಸಿದನು. ರುದ್ರನೂ ಸಹ ಭಯಂಕರವಾದ ಅಜಗವವೆಂಬ ಧನುಸ್ಸನ್ನು ಹಿಡಿದು ಚಂದ್ರನ ಪಕ್ಷವನ್ನು ಸೇರಿದನು.

೨೨. ಮಹಾತ್ಮನಾದ ಆ ರುದ್ರನು ಬ್ರಹ್ಮಶಿರವೆಂಬ ಮಹಾಸ್ತ್ರವನ್ನು ದೇವತೆಗಳ ಮೇಲೆ ಪ್ರಯೋಗಿಸಿದನು. ಆದರಿಂದ ದೇವತೆಗಳ ಶಕ್ತಿಯೆಲ್ಲವೂ ಉಡುಗಿ ಹೋಯಿತು.

೨೩. ಆಗ ಅಲ್ಲಿ ತಾರಾದೇವಿಯ ನಿಮಿತ್ತವಾಗಿ ದೇವತೆಗಳಿಗೂ ದಾನವರಿಗೂ ಮಹಾ ಯುದ್ಧವಾಯಿತು. ಆದರಿಂದ ಲೋಕವೆಲ್ಲವೂ ಹಾಳಾಗುವ ಸ್ಥಿತಿಗೆ ಬಂದಿತು.

shrinath.udupa@gmail.com

ತತ್ರ ಶಿಷ್ಟಾಸ್ತು ಯೇ ದೇವಾಸ್ತುಷಿತಾಶ್ಚೈವ ಯೇ ದ್ವಿಜಾಃ ।
ಬ್ರಹ್ಮಾಣಂ ಶರಣಂ ಜಗ್ಮುರಾದಿದೇವಂ ಸನಾತನಂ ॥ ೨೪ ॥

ತದಾ ನಿವಾರ್ಯೋಶನಸಂ ತಂ ವೈ ರುದ್ರಂ ಚ ಶಂಕರಂ ।
ದದಾವಂಗಿರಸೇ ತಾರಾಂ ಸ್ವಯಮೇವ ಪಿತಾಮಹಃ ॥ ೨೫ ॥

ತಾಮಂತಃ ಪ್ರಸವಾಂ ದೃಷ್ಟ್ವಾ ಕ್ರುದ್ಧಃ ಪ್ರಾಹ ಬೃಹಸ್ಪತಿಃ ।
ಮದೀಯಾಯಾಂ ನ ತೇ ಯೋನೌ ಗರ್ಭೋ ಧಾರ್ಯಃ ಕಥಂಚನ ॥ ೨೬॥

ಇಷೀಕಾಸ್ತಂಬಮಾಸಾದ್ಯ ಗರ್ಭಂ ಸಾ ಚೋತ್ಸಸರ್ಜ ಹ ।
ಜಾತಮಾತ್ರಃ ಸ ಭಗವಾನ್ ದೇವಾನಾಮಾಕ್ಷಿಪದ್ವಪುಃ ॥ ೨೭ ॥

ತತಃ ಸಂಶಯಮಾಪನ್ನಾಸ್ತಾರಾಮೂಚುಃ ಸುರೋತ್ತಮಾಃ ।
ಸತ್ಯಂ ಬ್ರೂಹಿ ಸುತಃ ಕಸ್ಯ ಸೋಮಸ್ಯಾಥ ಬೃಹಸ್ಪತೇಃ ॥ ೨೮ ॥

---

೨೪. ಆ ಯುದ್ಧದಲ್ಲಿ ಮೃತರಾಗಿ ಉಳಿದ ತುಷಿತರೆಂಬ ಕೆಲವು ದೇವತೆಗಳು ಮತ್ತು ದೇವರ್ಷಿಗಳು, ಪುರಾಣಪುರುಷನೂ, ಆದಿದೇವನೂ ಆದ ಬ್ರಹ್ಮನನ್ನು ಮರೆ ಹೊಕ್ಕರು.

೨೫. ಆಗ ಪಿತಾಮಹನು ಶುಕ್ರಾಚಾರ್ಯನನ್ನೂ ಶಂಕರನನ್ನೂ ಯುದ್ಧ ಮಾಡಬೇಡಿರೆಂದು ತಡೆದು ತಾನೇ ತಾರಾದೇವಿಯನ್ನು ಚಂದ್ರನಿಂದ ಬಿಡಿಸಿ ಬೃಹಸ್ಪತಿಗೆ ಕೊಡಿಸಿದನು.

೨೬. ಆಗ ತಾರಾದೇವಿಯು ಗರ್ಭವತಿಯಾಗಿದ್ದಳು. ಅದನ್ನು ನೋಡಿ ಬೃಹಸ್ಪತಿಯು ಕೋಪಗೊಂಡು ಎಲೌ ದುಷ್ಟೆ, ನನ್ನ ಸ್ತ್ರೀಯಾದ ನೀನು ಯೋನಿಯಲ್ಲ ಪರಪುರುಷನ ವೀರ್ಯದಿಂದುಂಟಾದ ಗರ್ಭವನ್ನು ಧರಿಸಕೂಡದು ಎಂದು ಆಜ್ಞೆಮಾಡಿದನು.

೨೭. ಆಗ ತಾರಾದೇವಿಯು ಆ ಗರ್ಭವನ್ನು ಜೊಂಡಿನವನದಲ್ಲಿ ತ್ಯಜಿಸಿದಳು. ಹುಟ್ಟಿದೊಡನೆಯೇ ಆ ಗರ್ಭವು ಪ್ರಕಾಶಮಾನವಾದ ದೇವಗತೆಗಳ ರೂಪವನ್ನು ತಾಳಿತು.

೨೮. ಆಗ ದೇವತೆಗಳು ಸಂದೇಹವುಳ್ಳವರಾಗಿ ತಾರಾದೇವಿಯನ್ನು ಕುರಿತು ಎಲೌ ತಾರೆ, ನಿಜವನ್ನು ಹೇಳು. ಈ ಕುಮಾರನು ಯಾರ ಮಗನು? ಚಂದ್ರನಿಂದ ಜನಿಸಿದವನೋ? ಅಲ್ಲವೇ ಬೃಹಸ್ಪತಿಯಿಂದ ಜನಿಸಿದವನೋ? ಎಂದು ಕೇಳಿದರು.

shrinath.udupa@gmail.com

ಪೃಚ್ಛ್ಯಮಾನಾ ಯದಾ ದೇವೈರ್ನಾऽऽಹ ಸಾ ವಿಬುಧಾರ್ ಕಿಲ ।
ತದಾ ತಾಂ ಶಪ್ತುಮಾರಬ್ಧಃ ಕುಮಾರೋ ದಸ್ಯುಹಂತಮಃ ॥ ೨೯ ॥

ತಂ ನಿವಾರ್ಯ ತತೋ ಬ್ರಹ್ಮಾ ತಾರಾಂ ಪಪ್ರಚ್ಛ ಸಂಶಯಂ ।
ಯದತ್ರ ತಥ್ಯಂ ತದ್ಬ್ರೂಹಿ ತಾರೇ ಕಸ್ಯ ಸುತಸ್ತ್ವಯಂ ॥ ೩೦ ॥

ಉವಾಚ ಪ್ರಾಂಜಲಿಃ ಸಾ ತಂ ಸೋಮಸ್ಯೇತಿ ಪಿತಾಮಹಂ ।
ತವಾ ತಂ ಮೂರ್ಧ್ನಿ ಚಾऽऽಘ್ರಾಯ ಸೋಮೋ ರಾಜಾ ಸುತಂ ಪ್ರತಿ ॥

ಬುಧ ಇತ್ಯಕರೋನ್ನಾಮ ತಸ್ಯ ಬಾಲಸ್ಯ ಧೀಮತಃ ।
ಪ್ರತಿಕೂಲಂ ಚ ಗಗನೇ ಸಮಭ್ಯುತ್ತಿಷ್ಠತೇ ಬುಧಃ ॥ ೩೨ ॥

ಉತ್ಪಾದಯಾಮಾಸ ತದಾ ಪುತ್ರಂ ವೈರಾಜಪುತ್ರಿಕಂ ।
ತಸ್ಯಾಪತ್ಯಂ ಮಹಾತೇಜಾ ಬಭೂವೈಲಃ ಪುರೂರವಾಃ ॥ ೩೩ ॥

೨೯-೩೦. ದೇವತೆಗಳು ಕೇಳಿದುದಕ್ಕೆ ತಾರಾದೇವಿಯು ಏನನ್ನೂ ಹೇಳದೆ ಮೌನದಿಂದಿದ್ದಳು. ಆಗ ಅವಳಿಂದ ಜನಿಸಿದ ಕುಮಾರನು ಕೋಪಗೊಂಡು ಅವಳನ್ನು ಶಪಿಸಲುದ್ಯುಕ್ತನಾಗಲು ಅದನ್ನು ತಡದು ಬ್ರಹ್ಮನು—ಎಲೌ ತಾರೇ, ಈ ಕುಮಾರನು ಯಾರ ಮಗನು? ನಿಜವನ್ನು ಮರೆಮಾಚದೆ ಹೇಳು ಎಂದು ನಿರ್ಭಂಧಪಡಿಸಲು ಆಗ ಆ ತಾರಾದೇವಿಯು ವಿನಯದಿಂದ ಬ್ರಹ್ಮನನ್ನು ಕುರಿತು ಇವನು ಚಂದ್ರನ ಮಗನು ಎಂದು ಹೇಳಿದಳು

೩೧-೩೨. ಅದನ್ನು ಕೇಳಿ ಚಂದ್ರನು ಪ್ರೀತಿಯಿಂದ ಕುಮಾರನನ್ನಪ್ಪಿಕೊಂಡು ಶಿರವನ್ನಾಘ್ರಾಣಿಸಿ ಅವನಿಗೆ ಬುಧನೆಂಬ ಹೆಸರನ್ನಿಟ್ಟನು. ಗ್ರಹರೂಪದಲ್ಲಿರುವ ಆ ಬುಧನು ಗಗನದಲ್ಲಿ ಸಾಮಾನ್ಯವಾಗಿ ಚಂದ್ರನಿಗೆದುರಾಗಿಯೇ ಉದಯಿಸುವನು.

೩೩. ತೇಜಸ್ವಿಯಾದ ಆ ಬುಧನು ಮಿತ್ರಾವರುಣರ ಪುತ್ರಿಯಾದ ಇಲಾದೇವಿಯಲ್ಲಿ ಪುರೂರವ ಕುಮಾರನನ್ನು ಉತ್ಪಾದನೆಮಾಡಿದನು.

shrinath.udupa@gmail.com

ಊರ್ವಶ್ಯಾಂ ಜಜ್ಞಿರೇ ಯಸ್ಯ ಪುತ್ರಾಃ ಸಪ್ತ ಮಹಾತ್ಮನಃ ।
ಏತತ್ಸೋಮಸ್ಯ ವೋ ಜನ್ಮ ಕೀರ್ತಿತಂ ಕೀರ್ತಿವರ್ಧನಂ ॥ ೩೪ ॥

ವಂಶಮಸ್ಯ ಮುನಿಶ್ರೇಷ್ಠಾಃ ಕೀರ್ತ್ಯಮಾನಂ ನಿಬೋಧತ ।
ಧನ್ಯಮಾಯುಷ್ಯಮಾರೋಗ್ಯಂ ಪುಣ್ಯಂ ಸಂಕಲ್ಪಸಾಧನಂ ॥ ೩೫ ॥

ಸೋಮಸ್ಯ ಜನ್ಮ ಶ್ರುತ್ವೈವ ಪಾಪೇಭ್ಯೋ ವಿಪ್ರಮುಚ್ಯತೇ ॥ ೩೬ ॥

ಇತಿ ಶ್ರೀಮಹಾಪುರಾಣೇ ಬ್ರಾಹ್ಮೇ ಸೋಮೋತ್ಪತ್ತಿಕಥನಂ
ನಾಮ ನವಮೋಽಧ್ಯಾಯಃ

೩೪. ಮಹಾತ್ಮನಾದ ಆ ಪುರೂರವರಾಜನಿಗೆ ಊರ್ವಶೀದೇವಿಯಲ್ಲಿ ಏಳು ಜನ ಮಕ್ಕಳು ಜನಿಸಿದರು. ಎಲೈ ಮುನಿಗಳೇ ಹೀಗೆ ನಿಮಗೆ ಚಂದ್ರನ ಜನ್ಮ ಚರಿತ್ರೆಯನ್ನು ಹೇಳಿರುವೆನು. ಇದನ್ನು ಕೇಳಿದರೆ ಕೀರ್ತಿಯು ಲಭಿಸುವುದು.

೩೫-೩೬. ಮುಂದೆ ಚಂದ್ರವಂಶವನ್ನು ವಿಸ್ತರಿಸಿ ಹೇಳುವೆನು. ಅದನ್ನು ಕೇಳಿದರೆ ಕೀರ್ತಿಯೂ, ಗೌರವವೂ, ದೀರ್ಘಾಯುಸ್ಸೂ, ಆರೋಗ್ಯವೂ, ಪುಣ್ಯವೂ, ಲಭಿಸುವುದಲ್ಲದೆ ಕೇಳಿದವರ ಪಾಪವೂ ನಾಶವನ್ನೈದುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಸೋಮೋತ್ಪತ್ತಿಕಥನವೆಂಬ
ಒಂಭತ್ತನೆಯ ಅಧ್ಯಾಯವು ಮುಗಿದುದು.

shrinath.udupa@gmail.com

॥ ಶ್ರೀಃ ॥

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ದಶಮೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ಬುಧಸ್ಯ ತು ಮುನಿಶ್ರೇಷ್ಠಾ ವಿದ್ವಾನ್ ಪುತ್ರಃ ಪುರೂರವಾಃ ।
ತೇಜಸ್ವೀ ದಾನಶೀಲಶ್ಚ ಯಜ್ವಾ ವಿಪುಲದಕ್ಷಿಣಃ ॥ ೧ ॥

ಬ್ರಹ್ಮವಾದೀ ಪರಾಕ್ರಾಂತಃ ಶತ್ರುಭಿರ್ಯುಧಿ ದುರ್ದಮಃ ।
ಆಹರ್ತಾ ಚಾಗ್ನಿಹೋತ್ರಸ್ಯ ಯಜ್ಞಾನಾಂ ಚ ಮಹೀಪತಿಃ ॥ ೨ ॥

ಹತ್ತನೆಯ ಅಧ್ಯಾಯವು

೧. ಸೂತಮುನಿ ಇಂತೆಂದನು.—ಎಲೈ ಮುನಿಶ್ರೇಷ್ಠರೇ ಕೇಳಿ. ಬುಧನ ಪುತ್ರನಾದ ಪುರೂರವನು ದೊಡ್ಡ ವಿದ್ವಾಂಸನಾಗಿದ್ದನು. ತೇಜಸ್ವಿಯೂ ಉದಾರನೂ ಆಗಿದ್ದನು. ಅನೇಕ ಯಾಗಗಳನ್ನು ಮಾಡಿ ತುಂಬಾ ದಕ್ಷಿಣೆಯನ್ನು ಕೊಡುತ್ತಿದ್ದನು.

೨. ಮತ್ತು ಆತ್ಮತತ್ವವನ್ನು ಬಲ್ಲವನಾಗಿದ್ದನು. ಯುದ್ಧದಲ್ಲಿ ಎಂದೂ ಶತ್ರುಗಳಿಗೆ ಸೋಲದಂತಹ ಪರಾಕ್ರಮಿಯಾಗಿದ್ದನು. ಆತನು ನಿತ್ಯವೂ ಅಗ್ನಿಹೋತ್ರವನ್ನು ವಿಧಿವತ್ತಾಗಿ ಮಾಡುತ್ತಲಿದ್ದನು.

shrinath.udupa@gmail.com

ಸತ್ಯವಾದೀ ಪುಣ್ಯಮತಿಃ ಸಂಮ್ಯಕ್ಸಂವೃತಮೈಥುನಃ ।
ಅತೀವ ತ್ರಿಷು ಲೋಕೇಷು ಯಶಸಾsಪ್ರತಿಮಃ ಸದಾ ॥ ೩ ॥

ತಂ ಬ್ರಹ್ಮವಾದಿನಂ ಶಾಂತಂ ಧರ್ಮಜ್ಞಂ ಸತ್ಯವಾದಿನಂ ।
ಉರ್ವಶೀ ವರಯಾಮಾಸ ಹಿತ್ವಾ ಮಾನಂ ಯಶಸ್ವಿನೀ ॥ ೪ ॥

ತಯಾ ಸಹಾವಸದ್ರಾಜಾ ದಶವರ್ಷಾಣಿ ಪಂಚ ಚ ।
ಷಟ್ಪಂಚ ಸಪ್ತಚಾಷ್ಟೌಚ ದಶ ಚಾಷ್ಟೌ ಚ ಭೋ ದ್ವಿಜಾಃ ॥ ೫ ॥

ವನೇ ಚೈತ್ರರಥೇ ರಮ್ಯೇ ತಥಾ ಮಂದಾಕಿನೀ ತಟೇ ।
ಅಲಕಾಯಾಂ ವಿಶಾಲಾಯಾಂ ನಂದನೇ ಚ ವನೋತ್ತಮೇ ॥ ೬ ॥

ಉತ್ತರಾನ್ಸ ಕುರೂನ್ಪ್ರಾಪ್ಯ ಮನೋರಮಫಲದ್ರುಮಾನ್ ।
ಗಂಧಮಾದನಪಾದೇಷು ಮೇರುಶೃಂಗೇ ತಥೋತ್ತರೇ ॥ ೭ ॥

---

೩. ಮತ್ತು ಸತ್ಯವಾದಿಯೂ ಪವಿತ್ರವಾದ ಮನಸ್ಸುಳ್ಳವನೂ ಆಗಿದ್ದನು. ಪುಣ್ಯವಂತನಾದ ಆವನು ಕಾಮಸುಖವನ್ನು ಚನ್ನಾಗಿ ಅನುಭವಿಸಿದವನು. ಅವನ ಕೀರ್ತಿಯು ಮೂರುಲೋಕಗಳಲ್ಲಿಯೂ ಹರಡಿತ್ತು.

೪. ಬ್ರಹ್ಮವಾದಿಯೂ, ಶಾಂತನೂ, ಧರ್ಮಿಷ್ಠನೂ, ಸತ್ಯವಾದಿಯೂ ಅದ ಈ ಪುರೂರವನನ್ನು ನೋಡಿ ಊರ್ವಶಿಯೆಂಬ ಅಪ್ಸರೆಯು ಅವನ ಗುಣಗಳಿಗೆ ಸೋತು ತಾನು ದೇವತೆಯೆಂಬ ಅಭಿಮಾನವನ್ನೂ ತೊರೆದು ಆವನನ್ನು ವರಿಸಿದಳು.

೫. ಆ ಊರ್ವಶಿಯೊಡನೆ ಪುರೂರವರಾಜನು ಐವತ್ತೊಂಭತ್ತು ವರ್ಷಗಳ ವರೆಗೆ ಕಾಮಸುಖವನ್ನನುಭವಿಸುತ್ತಾ ವಿಹರಿಸಿದನು.

೬-೮. ಮನೋಹರವಾದ ಚೈತ್ರರಥವೆಂಬ ಉದ್ಯಾನ, ಗಂಗಾನದಿಯ ಸುಂದರವಾದ ತೀರ, ಅಲಕಾನಗರಿ, ನಂದನವನ, ಉತ್ತರಕುರುದೇಶದಲ್ಲಿನ ಮನೋಹರವಾಗಿ ಮರಗಿಡಗಳು ಹೂವಳ್ಳಿಗಳು ಇವುಗಳಿಂದ ಕೂಡಿರುವ ಗಂಧಮಾದನಪರ್ವತದ ತಪ್ಪಲು, ಮೇರುಪರ್ವತದ ಉತ್ತರದಿಕ್ಕಿನ ಸುಂದರವಾದ ಶಿಖರ, ಮುಂತಾದ

shrinath.udupa@gmail.com

ಏತೇಷು ವನಮುಖ್ಯೇಷು ಸುರೈರಾಚರಿತೇಷು ಚ ।
ಉರ್ವಶ್ಯಾ ಸಹಿತೋ ರಾಜಾ ರೇಮೇ ಪರಮಯಾ ಮುದಾ ॥ ೮ ॥

ದೇಶೇ ಪುಣ್ಯತಮೇ ಚೈವ ಮಹರ್ಷಿಭಿರಭಿಷ್ಟುತೇ
ರಾಜ್ಯಂ ಸ ಕಾರಯಾಮಾಸ ಪ್ರಯಾಗೇ ಪೃಥಿವೀಪತಿಃ ॥ ೯ ॥

ಏವಂ ಪ್ರಭಾವೋ ರಾಜಾಽಸೀದೈಲಸ್ತು ನರಸತ್ತಮಃ ।
ಉತ್ತರೇ ಜಾಹ್ನವೀತೀರೇ ಪ್ರತಿಷ್ಠಾನೇ ಮಹಾಯಶಾಃ ॥ ೧೦ ॥

॥ ಲೋಮಹರ್ಷಣ ಉವಾಚ ॥

ಐಲಪುತ್ರಾ ಬಭೂವುಸ್ತೇ ಸಪ್ತ ದೇವಸುತೋಪಮಾಃ ।
ಗಂಧರ್ವಲೋಕೇ ವಿದಿತಾ ಆಯುರ್ಧೀಮಾನಮಾವಸುಃ ॥ ೧೧ ॥

ವಿಶ್ವಾಯುಶ್ಚೈವ ಧರ್ಮಾತ್ಮಾ ಶ್ರುತಾಯುಶ್ಚ ತಥಾಽಪರಃ ।
ದೃಢಾಯುಶ್ಚ ವನಾಯುಶ್ಚ ಬಹ್ವಾಯುಶ್ಚೋರ್ವಶೀಸುತಾಃ ॥ ೧೨ ॥

ದೇವತೆಗಳು ವಿಹರಿಸುವ ಸುಂದರಪ್ರದೇಶಗಳಲ್ಲೆಲ್ಲಾ ಆ ಪುರೂರವನು ಊರ್ವಶಿಯೊಡನೆ ವಿಹರಿಸಿದನು.

೯. ಪವಿತ್ರವೂ, ಮಹರ್ಷಿಗಳಿಂದ ಸೇವಿಸಲ್ಪಡುತ್ತಿರುವುದೂ ಆದಂತಹ ಪ್ರಯಾಗದಲ್ಲಿ ಆ ಪುರೂರವನು ರಾಜ್ಯವನ್ನಾಳುತ್ತಿದ್ದನು.

೧೦. ರಾಜೋತ್ತಮನಾದ ಪುರೂರವರಾಜನು ಮೇಲೆಹೇಳಿದಂತಹ ಪ್ರಭಾವವುಳ್ಳವನಾಗಿದ್ದು ಗಂಗಾನದಿಯ ಉತ್ತರದಡದಲ್ಲಿರುವ ಪ್ರತಿಷ್ಠಾ (ಪ್ರಯಾಗ) ನಗರದಲ್ಲಿ ರಾಜ್ಯವಾಳುತ್ತಿದ್ದನು.

೧೧-೧೨. ಪುರೂರವನ ಮಕ್ಕಳು ಏಳು ಮಂದಿ. ಅವರು ದೇವಕುಮಾರರಂತೆ ಗಂಧರ್ವಲೋಕದಲ್ಲಿ ವಿಹರಿಸುತ್ತಿದ್ದರು. ಆಯು, ಬುದ್ಧಿಶಾಲಿಯಾದ ಅಮಾವಸು, ಧರ್ಮಾತ್ಮನಾದ ವಿಶ್ವಾಯು, ಶ್ರುತಾಯು, ದೃಢಾಯು, ವನಾಯು, ಬಹ್ವಾಯು ಎಂಬ ಏಳುಮಂದಿಯೂ ಊರ್ವಶಿಯಲ್ಲಿ ಜನಿಸಿದ ಪುರೂರವ ಪುತ್ರರು.

shrinath.udupa@gmail.com

ಅಮಾವಸೋಸ್ತು ದಾಯಾದೋ ಭೀಮೋ ರಾಜಾಽಥ ರಾಜರಾಟ್ ।
ಶ್ರೀಮಾನ್ಭೀಮಸ್ಯ ದಾಯಾದೋ ರಾಜಾಽಸೀತ್ಕಾಂಚನಪ್ರಭಃ ॥ ೧೩ ॥

ವಿದ್ವಾಂಸ್ತು ಕಾಂಚನಸ್ಯಾಪಿ ಸುಹೋತ್ರೋಽಭೂನ್ಮಹಾಬಲಃ ।
ಸುಹೋತ್ರಸ್ಯಾಭವಜ್ಜಹ್ನುಃ ಕೇಶಿನ್ಯಾ ಗರ್ಭಸಂಭವಃ ॥ ೧೪ ॥

ಆಜಹ್ರೇ ಯೋ ಮಹತ್ಸತ್ರಂ ಸರ್ಪಮೇಧಂ ಮಹಾಮಖಂ ।
ಪತಿಲೋಭೇನ ಯಂ ಗಂಗಾ ಪತಿತ್ವೇನ ಸಸಾರ ಹ ॥ ೧೫ ॥

ನೇಚ್ಛತಃ ಪ್ಲಾವಯಾಮಾಸ ತಸ್ಯ ಗಂಗಾ ತದಾ ಸದಃ ।
ಸ ತಯಾ ಪ್ಲಾವಿತಂ ದೃಷ್ಟ್ವಾ ಯಜ್ಞವಾಟಂ ಸಮಂತತಃ ॥ ೧೬ ॥

ಸೌಹೋತ್ರಿರಶಪದ್ಗಂಗಾಂ ಕ್ರುದ್ಧೋ ರಾಜಾ ದ್ವಿಜೋತ್ತಮಾಃ ।
ಏಷ ತೇ ವಿಫಲಂ ಯತ್ನಂ ಪಿಬನ್ನಂಭಃ ಕರೋಮ್ಯಹಂ ॥ ೧೭ ॥

---

೧೩. ಅಮಾವಸುವಿನ ಮಗನು ಭೀಮಚಕ್ರವರ್ತಿಯು, ಭೀಮಚಕ್ರವರ್ತಿಯ ಮಗನು ಶ್ರೀಮಂತನಾದ ಕಾಂಚನಪ್ರಭನೆಂಬುವನು.

೧೪. ವಿದ್ವಾಂಸನೂ, ಬಲಿಷ್ಠನೂ ಆಗಿದ್ದ ಸುಹೋತ್ರನೆಂಬುವವನು ಕಾಂಚನಪ್ರಭನ ಸುತನು. ಆ ಸುಹೋತ್ರನಿಂದ ಕೇಶಿನೀದೇವಿಯಲ್ಲಿ ಜಹ್ನು ಮಹರ್ಷಿಯು ಜನಿಸಿದನು.

೧೫. ಈ ಜಹ್ನುವು ಮಹತ್ತಾದ ಸರ್ಪಯಾಗವನ್ನು ಮಾಡಿದನು, ಸುಂದರನಾದ ಈ ಮುನಿಯನ್ನು ಗಂಗಾದೇವಿಯು ಪತಿಯನ್ನಾಗಿ ಪಡೆಯಲು ಪ್ರಯತ್ನಿಸಿದಳು.

೧೬. ಆದರೆ ಗಂಗೆಯನ್ನು ಮದುವೆಯಾಗಲು ಜಹ್ನುಮುನಿಯು ಒಪ್ಪದಿರಲು ಅವಳು ಕೋಪಗೊಂಡು ತನ್ನ ಪ್ರವಾಹದಿಂದ ಅವನ ಯಜ್ಞಶಾಲೆಯನ್ನು ಮುಳುಗಿಸಿದಳು. ಇದನ್ನು ನೋಡಿ ಜಹ್ನುವು ಕೋಪದಿಂದ—

೧೭-೧೮. ಎಲೌ ಗಂಗೆ, ನಿನ್ನ ಈ ದುಷ್ಟ ಪ್ರಯತ್ನವನ್ನು ವ್ಯರ್ಥಮಾಡುವೆನು. ನಿನ್ನ ಪ್ರವಾಹದ ಜಲವೆಲ್ಲವನ್ನೂ ಕುಡಿಯುವೆನು. ನಿನ್ನ ಈ ಗರ್ವಕ್ಕೆ ತಕ್ಕ ಫಲವನ್ನನುಭವಿಸು ಎಂದು ಹೇಳಿ ಗಂಗಾನದಿಯ ಜಲವೆಲ್ಲವನ್ನೂ ಪಾನ

shrinath.udupa@gmail.com

ಅಸ್ಯ ಗಂಗೇऽವಲೇಪಸ್ಯ ಸದ್ಯಃ ಫಲಮವಾಪ್ನು ಹಿ ।
ಜಹ್ನು ರಾಜರ್ಷಿಣಾ ಪೀತಾಂ ಗಂಗಾಂ ದೃಷ್ಟ್ವಾ ಮಹರ್ಷಯಃ ॥ ೧೮ ॥

ಉಪಮನ್ಯುರ್ಮಹಾಭಾಗಾಂ ದುಹಿತೃತ್ವೇನ ಜಾಹ್ನವೀಂ ।
ಯುವನಾಶ್ವಸ್ಯ ಪುತ್ರೀಂ ತು ಕಾವೇರೀಂ ಜಹ್ನು ರಾವಹತ್ ॥ ೧೯ ॥

ಯುವನಾಶ್ವಸ್ಯ ಶಾಪೇನ ಗಂಗಾರ್ಧೇನ ವಿನಿರ್ಗತಾ ।
ಕಾವೇರೀಂ ಸರಿತಾಂ ಶ್ರೇಷ್ಠಾಂ ಜಹ್ನೋರ್ಭಾರ್ಯಾಮನಿಂದಿತಾಂ ॥ ೨೦ ॥

ಜಹ್ನುಸ್ತು ದಯಿತಂ ಪುತ್ರಂ ಸುನದ್ಯಂ ನಾಮ ಧಾರ್ಮಿಕಂ ।
ಕಾವೇರ್ಯಾಂ ಜನಯಾಮಾಸ ಅಜಕಸ್ತಸ್ಯ ಚಾತ್ಮಜಃ ॥ ೨೧ ॥

ಅಜಕಸ್ಯ ತು ದಾಯಾದೋ ಬಲಾಕಾಶ್ವೋ ಮಹೀಪತಿಃ ।
ಬಭೂವ ಮೃಗಯಾಶೀಲಃ ಕುಶಸ್ತಸ್ಯಾऽತ್ಮಜೋऽಭವತ್ ॥ ೨೨ ॥

ಮಾಡಲು ಅದನ್ನು ನೋಡಿ ಮಹರ್ಷಿಗಳು ಗಂಗೆಯನ್ನು ನಿನ್ನ ಪುತ್ರಿಯಾಗಿ ಮಾಡು ವೆವೆಂದು ಹೇಳಿ ಮುನಿಯನ್ನು ಸಮಾಧಾನಗೊಳಿಸಿ ಜಾಹ್ನವಿ (ಜಹ್ನುವಿನ ಪುತ್ರಿ) ಯೆಂದು ಗಂಗಾನದಿಯನ್ನು ಕರೆದು ಆ ನದಿಯನ್ನು ಜಹ್ನುವಿನಿಂದ ಬಿಡಿಸಿ ಮುಂವಕ್ಕೆ ತರಿಸಿದರು.

೧೯-೨೦. ಯುವನಾಶ್ವನ ಮಗಳಾದ ಕಾವೇರಿಯನ್ನು ಜಹ್ನುಮುನಿಯು ಮದುವೆಯಾದನು. ಯುವನಾಶ್ವನ ಶಾಪದಿಂದ ಗಂಗೆಯು ಜಹ್ನುಮುನಿಯ ಪತ್ನಿಯೂ, ಉತ್ತಮನದಿಯೂ ಆದ ಕಾವೇರಿಯನ್ನು ಅರ್ಧಭಾಗದಿಂದ ಸೇರಿದಳು.

೨೧. ಜಹ್ನುಮುನಿಯು ಕಾವೇರಿಯಲ್ಲಿ ಧರ್ಮಿಷ್ಠನಾದ ಸುನದ್ಯನೆಂಬ ಪುತ್ರ ನನನ್ನು ಪಡೆದನು. ಅಜಕನೆಂಬುವನು ಸುನದ್ಯರಾಜನ ಮಗನು.

೨೨. ಬಲಾಕಾಶ್ವನೆಂಬುವನು ಅಜರಾಜನ ಮಗನು. ಅವನು ಬೇಟೆಯಲ್ಲಿ ಸದಾ ನಿರತನಾಗಿರುತ್ತಿದ್ದನು. ಕುಶನೆಂಬುವನು ಬಲಾಕಾಶ್ವರಾಜನ ಮಗನು.

shrinath.udupa@gmail.com

ಕುಶಪುತ್ರಾ ಬಭೂವುರ್ಹಿ ಚತ್ವಾರೋ ದೇವವರ್ಚಸಃ ।
ಕುಶಿಕಃ ಕುಶನಾಭಶ್ಚ ಕುಶಾಂಬೋ ಮೂರ್ತಿಮಾಂಸ್ತಥಾ ॥ ೨೩ ॥

ಬಲ್ಲವೈಃ ಸಹ ಸಂವೃದ್ಧೋ ರಾಜಾ ವನಚರಃ ಸದಾ ।
ಕುಶಿಕಸ್ತು ತಪಸ್ತೇಪೇ ಪುತ್ರಮಿಂದ್ರಸಮಂ ಪ್ರಭುಃ ॥ ೨೪ ॥

ಲಭೇಯಮಿತಿ ತಂ ಶಕ್ರಸ್ತ್ರಾಸಾದಭ್ಯೇತ್ಯ ಜಜ್ಞಿವಾನ್ ।
ಪೂರ್ಣೇ ವರ್ಷಸಹಸ್ರೇ ವೈ ತತಃ ಶಕ್ರೋ ಹ್ಯಪಶ್ಯತ ॥ ೨೫ ॥

ಅತ್ಯುಗ್ರತಪಸಂ ದೃಷ್ಟ್ವಾ ಸಹಸ್ರಾಕ್ಷಃ ಪುರಂದರಃ ।
ಸಮರ್ಥಃ ಪುತ್ರಜನನೇ ಸ್ವಯಮೇವಾಸ್ಯ ಶಾಶ್ವತಃ ॥ ೨೬ ॥

ಪುತ್ರಾರ್ಥಂ ಕಲ್ಪಯಾಮಾಸ ದೇವೇಂದ್ರಃ ಸುರಸತ್ತಮಃ ।
ಸ ಗಾಧಿರಭವದ್ರಾಜಾ ಮಘವಾನ್ ಕೌಶಿಕಃ ಸ್ವಯಂ ॥ ೨೭ ॥

ಪೌರಾ ಯಸ್ಯಾಭವದ್ಭಾರ್ಯಾ ಗಾಧಿಸ್ತಸ್ಯಾಮಜಾಯತ ।
ಗಾಧೇಃ ಕನ್ಯಾ ಮಹಾಭಾಗ ನಾಮ್ನಾ ಸತ್ಯವತೀ ಶುಭಾ ॥ ೨೮ ॥

---

೨೩. ದೇವತೆಗಳಂತೆ ತೇಜಸ್ವಿಗಳಾದ ಕುಶಿಕ, ಕುಶನಾಭ, ಕುಶಾಂಬ, ಮೂರ್ತಿಮಾನ್ ಎಂಬ ನಾಲ್ವರೂ ಕುಶರಾಜನ ಮಕ್ಕಳು.

೨೪–೨೭. ಬಲ್ಲವರೊಡನೆ ಬೆಳೆದು ಸದಾ ವನದಲ್ಲಿಯೇ ಸಂಚರಿಸುತ್ತಿದ್ದ ಕುಶರಾಜನು ಇಂದ್ರನಂತಹ ಮಗನನ್ನು ಪಡೆಯಬೇಕೆಂದು ಸಾವಿರ ವರ್ಷಗಳ ವರೆಗೆ ಘೋರತಪಸ್ಸನ್ನು ಆಚರಿಸಿದನು. ಇವನ ಘೋರ ತಪಸ್ಸನ್ನು ನೋಡಿ ಇಂದ್ರನು ಸಂತುಷ್ಟನಾಗಿ ಕುಶಿಕನ ಹೆಂಡತಿಯಾದ ಪೌರಾದೇವಿಯಲ್ಲಿ ತಾನೇ ಗಾಧಿರಾಜನೆಂಬ ಹೆಸರಿನಿಂದ ಅವನ ಪುತ್ರನಾಗಿ ಜನಿಸಿದನು.

೨೮. ಆ ಗಾಧಿರಾಜನಿಗೆ ಓರ್ವ ಮಗಳಿದ್ದಳು. ಅವಳ ಹೆಸರು ಸತ್ಯವತಿ ಎಂದು. ಅವಳನ್ನು ಶುಕ್ಲಾಚಾರ್ಯನ ಮಗನಾದ ಋಚೀಕಮುನಿಗೆ ಮದುವೆ ಮಾಡಿ ಕೊಟ್ಟನು.

shrinath.udupa@gmail.com

ತಾಂ ಗಾಧಿಃ ಕಾವ್ಯಪುತ್ರಾಯ ಋಚೀಕಾಯ ದದೌ ಪ್ರಭುಃ ।
ತಸ್ಯಾಃ ಪ್ರೀತಃ ಸ ವೈ ಭರ್ತಾ ಭಾರ್ಗವೋ ಭೃಗುನಂದನಃ ॥ ೨೯ ॥

ಪುತ್ರಾರ್ಥಂ ಸಾಧಯಾಮಾಸ ಚರುಂ ಗಾಧೇಸ್ತಥೈವ ಚ ।
ಉವಾಚಾಹೂಯ ತಾಂ ಭಾರ್ಯಾಮೃಚೀಕೋ ಭಾರ್ಗವಸ್ತದಾ ॥ ೩೦ ॥

ಉಪಯೋಜ್ಯಶ್ಚರುರಯಂ ತ್ವಯಾ ಮಾತ್ರಾ ಸ್ವಯಂ ಶುಭೇ ।
ತಸ್ಯಾಂ ಜನಿಷ್ಯತೇ ಪುತ್ರೋ ದೀಪ್ತಿಮಾನ್ ಕ್ಷತ್ರಿಯರ್ಷಭಃ ॥ ೩೧ ॥

ಅಜೇಯಃ ಕ್ಷತ್ರಿಯೈರ್ಲೋಕೇ ಕ್ಷತ್ರಿಯರ್ಷಭಸೂದನಃ ।
ತವಾಪಿ ಪುತ್ರಂ ಕಲ್ಯಾಣಿ ಧೃತಿಮಂತಂ ತಪೋಧನಂ ॥ ೩೨ ॥

ಶಮಾತ್ಮಕಂ ದ್ವಿಜಶ್ರೇಷ್ಠಂ ಚರುರೇಷ ವಿಧಾಸ್ಯತಿ ।
ಏವಮುಕ್ತ್ವಾ ತು ತಾಂ ಭಾರ್ಯಾಮೃಚೀಕೋ ಭೃಗುನಂದನಃ ॥ ೩೩ ॥

೨೯. ಆ ಸತ್ಯವತಿಯ ಪತಿಭಕ್ತಿಗೆ ಸಂತುಷ್ಟನಾಗಿ ಪತಿಯಾದ ಋಚೀಕ ಮುನಿಯು ಅವಳಿಗೂ ಅವಳ ತಂದೆಯಾದ ಗಾಧಿರಾಜನಿಗೂ ಮಹಾತ್ಮರಾದ ಪುತ್ರರು ಜನಿಸುವಂತೆ ಮಂತ್ರಪೂತವಾದ ಚರುವನ್ನು ಸಿದ್ಧಪಡಿಸಿ,

೩೦. ತನ್ನ ಪತ್ನಿಯನ್ನು ಕರೆದು ಎಲೌ ದೇವಿ, ಈ ಚರುವಿನ ಎರಡುಭಾಗಗಳಲ್ಲಿ ಒಂದನ್ನು ನೀನೂ, ಮತ್ತೊಂದನ್ನು ನಿನ್ನ ತಾಯಿಯೂ ಭಕ್ಷಿಸಿರಿ.

೩೧. ನಿನ್ನ ತಾಯಿಗಾಗಿ ಕೊಟ್ಟಿರುವ ಈ ಚರುಸೇವನೆಯಿಂದ ನಿನ್ನ ತಾಯಿಯಲ್ಲಿ ಓರ್ವ ತೇಜಸ್ವಿಯಾದ ಮಗನು ಈ ಚರುವಿನ ಪ್ರಭಾವದಿಂದ ಜನಿಸುವನು, ಅವನು ವೀರಕ್ಷತ್ರಿಯರನ್ನೆಲ್ಲರನ್ನೂ ಸಂಹರಿಸುವನು, ಅವನನ್ನು ಕ್ಷತ್ರಿಯರು ಯಾರೂ ಜಯಿಸಲಾರರು.

೩೨. ಎಲೌ ಭದ್ರೆ, ನಿನಗಾಗಿ ಕೊಟ್ಟಿರುವ ಈ ಮತ್ತೊಂದು ಭಾಗದ ಚರುಸೇವನೆಯಿಂದ ನಿನಗೂ ಜಿತೇಂದ್ರಿಯನೂ ತಪಸ್ವಿಯೂ ಶಾಂತನೂ ಆದ ಮಹರ್ಷಿಯು ಜನಿಸುವನು, ಎಂದನು.

೩೩. ಹೀಗೆ ಪತ್ನಿಗೆ ಹೇಳಿ ಚರುವಿನ ಎರಡುಭಾಗಗಳನ್ನು ಅವಳ ವಶಕ್ಕೆ ಕೊಟ್ಟು ಋಚೀಕಮುನಿಯು ತಪಸ್ಸು ಮಾಡುವುದಕ್ಕಾಗಿ ವನಕ್ಕೆ ಹೊರಟು ಹೋದನು.

shrinath.udupa@gmail.com

ತಪಸ್ಯಭಿರತೋ ನಿತ್ಯಮರಣ್ಯಂ ಪ್ರವಿವೇಶ ಹ ।
ಗಾಧಿಃ ಸದಾರಸ್ತು ತದಾ ಋಚೀಕಾಶ್ರಮಮಭ್ಯಗಾತ್ ॥ ೩೪ ॥

ತೀರ್ಥಯಾತ್ರಾಪ್ರಸಂಗೇನ ಸುತಾಂ ದ್ರಷ್ಟುಂ ನರೇಶ್ವರಃ ।
ಚರುದ್ವಯಂ ಗೃಹೀತ್ವಾ ಸಾ ಋಷೇಃ ಸತ್ಯವತೀ ತದಾ ॥ ೩೫ ॥

ಚರುಮಾದಾಯ ಯತ್ನೇನ ಸಾ ತು ಮಾತ್ರೇ ನ್ಯವೇದಯತ್ ।
ಮಾತಾ ತು ತಸ್ಯಾ ದೈವೇನ ದುಹಿತ್ರೇ ಸ್ವಂ ಚರುಂ ದದೌ ॥ ೩೬ ॥

ತಸ್ಯಾಶ್ಚರುಮಥಾಜ್ಞಾನಾದಾತ್ಮಸಂಸ್ಥಂ ಚಕಾರ ಹ ।
ಅಥ ಸತ್ಯವತೀ ಸರ್ವಂ ಕ್ಷತ್ರಿಯಾಂತಕರಂ ತದಾ ॥ ೩೭ ॥

ಧಾರಯಾಮಾಸ ದೀಪ್ತೇನ ವಪುಷಾ ಘೋರದರ್ಶನಾ ।
ತಾಮೃಚೀಕಸ್ತತೋ ದೃಷ್ಟ್ವಾ ಯೋಗೇನಾಭ್ಯುಪಸೃತ್ಯ ಚ ॥ ೩೮ ॥

---

೩೪. ಆ ಸಮಯದಲ್ಲಿ ತೀರ್ಥಯಾತ್ರೆಗಾಗಿ ಹೆಂಡತಿಯೊಡನೆ ಹೊರಟಿದ್ದ ಗಾಧಿರಾಜನು ಋಚೀಕಮುನಿಯ ಆಶ್ರಮಕ್ಕೆ ಮಗಳನ್ನು ನೋಡಲು ಬಂದನು.

೩೫. ಆಗ ಸತ್ಯವತಿಯು ತನ್ನ ಪತಿಯಾದ ಋಚೀಕನು ಸಿದ್ಧಮಾಡಿಟ್ಟ ಚರುಗಳೆರಡನ್ನು ತೆಗೆದುಕೊಂಡು ಅದರ ಮಹಿಮೆಯನ್ನು ಹೇಳಿ ತನ್ನ ತಾಯಿಗೆ ಕೊಟ್ಟಳು.

೩೬. ಸತ್ಯವತಿಯ ತಾಯಿಯು ಅದೃಷ್ಟವಶದಿಂದ ತಿಳಿಯದೇ ತನಗಾಗಿ ನಿರ್ಮಿಸಿದ್ದ ಚರುವನ್ನು ಮಗಳಿಗೆ ಕೊಟ್ಟಳು. ತನ್ನ ಮಗಳಿಗಾಗಿ ನಿರ್ಮಿಸಿದ್ದ ಚರುವನ್ನು ತಾನು ಭಕ್ಷಿಸಿದಳು.

೩೭. ಆಮೇಲೆ ಸತ್ಯವತಿಯು ಆ ಚರುವಿನ ಮಹಿಮೆಯಿಂದ ಕ್ಷತ್ರಿಯರಿಗೆ ಮೃತ್ಯುಪ್ರಾಯವಾದಂತಹ ಗರ್ಭವನ್ನು ಧರಿಸಿದಳು. ಗರ್ಭದ ಪ್ರಭಾವದಿಂದ ಆಗ ಅವಳು ನೋಡಲೂ ಭಯಂಕರಳಾಗಿದ್ದಳು.

೩೮. ಅಂತಹ ಸತ್ಯವತಿಯನ್ನು ನೋಡಿ ಋಚೀಕಮುನಿಯು ಯೋಗದೃಷ್ಟಿಯಿಂದ ನಡೆದುದನ್ನು ತಿಳಿದು ತನ್ನ ಹೆಂಡತಿಯನ್ನು ಕುರಿತು,

shrinath.udupa@gmail.com
ತತೋಽಬ್ರವೀದ್ದ್ವಿಜಶ್ರೇಷ್ಠಃ ಸ್ವಾಂ ಭಾರ್ಯಾಂ ವರವರ್ಣಿನೀಂ ।
ಮಾತ್ರಾಸಿ ವಂಚಿತಾ ಭದ್ರೇ ಚರುವ್ಯತ್ಯಾಸ ಹೇತುನಾ ॥ ೩೯ ॥

ಜನಿಷ್ಯತಿ ಹಿ ಪುತ್ರಸ್ತೇ ಕ್ರೂರಕರ್ಮಾತಿದಾರುಣಃ ।
ಭ್ರಾತಾ ಜನಿಷ್ಯತೇ ಚಾಪಿ ಬ್ರಹ್ಮಭೂತಸ್ತಪೋಧನಃ ॥ ೪೦ ॥

ವಿಶ್ವಂ ಹಿ ಬ್ರಹ್ಮ ತಪಸಾ ಮಯಾ ತಸ್ಮಿನ್ಸಮರ್ಪಿತಂ ।
ಏವಮುಕ್ತಾ ಮಹಾಭಾಗಾ ಭರ್ತ್ರಾ ಸತ್ಯವತೀ ತದಾ ॥ ೪೧ ॥

ಪ್ರಸಾದಯಾಮಾಸ ಪತಿಂ ಪುತ್ರೋ ಮೇ ನೇದೃಶೋ ಭವೇತ್ ।
ಬ್ರಾಹ್ಮಣಾಪಸದಸ್ತ್ವತ್ತ ಇತ್ಯುಕ್ತೋ ಮುನಿರಬ್ರವೀತ್ ॥ ೪೨ ॥

॥ ಋಚೀಕ ಉವಾಚ ॥

ನೈಷಃ ಸಂಕಲ್ಪಿತಃ ಕಾಮೋ ಮಯಾ ಭದ್ರೇ ತಥಾಸ್ತ್ವಿತಿ ।
ಉಗ್ರಕರ್ಮಾ ಭವೇತ್ಪುತ್ರಃ ಪಿತುರ್ಮಾತುಶ್ಚ ಕಾರಣಾತ್ ॥ ೪೩ ॥

---

೩೯. ಎಲೌ ಸತ್ಯವತಿ, ನಿನ್ನ ತಾಯಿಯಿಂದ ನಿನಗೆ ಮೋಸವಾಗಿರುವುದು. ತಾಯಿಯು ಉಪಯೋಗಿಸಬೇಕಾದ ಚರುವನ್ನು ನೀನು ಉಪಯೋಗಿಸಿರುವೆ, ಇದರಿಂದ ನಿನಗೆ ಕ್ರೂರವಾದ ಕರ್ಮವನ್ನು ಮಾಡುವವನೂ ಮಹಾಭಯಂಕರನೂ ಆದ ಮಗನು ಜನಿಸುವನು.

೪೦. ನಿನ್ನ ಸಹೋದರನು ತಪಸ್ವಿಯೂ ಬ್ರಹ್ಮಜ್ಞಾನಿಯೂ ಆದಂತಹವನು. ಜನಿಸುವನು. ನಾನು ಆ ತಪಸ್ಸಿನಿಂದ ಬ್ರಾಹ್ಮಣ್ಯವೆಲ್ಲವೂ ಅವನಲ್ಲಿ ಆವಿರ್ಭವಿಸುವಂತೆ ಚರುವನ್ನು ನಿರ್ಮಿಸಿದ್ದೆನು. ಆ ಚರುವನ್ನು ಭಕ್ಷಿಸಿದ ನಿನ್ನ ತಾಯಿಯು ಅಂತಹ ಮಗನನ್ನು ಪಡೆಯುವಳು ಎಂದನು.

೪೧-೪೨. ಹೀಗೆ ಪತಿಯು ಹೇಳಲು ಪತಿವ್ರತೆಯಾದ ಸತ್ಯವತಿಯು ಪತಿಯನ್ನು ಪ್ರಸನ್ನಗೊಳಿಸಿ ಓ ಸ್ವಾಮಿ, ನಿನ್ನಿಂದ ನನ್ನ ಉದರದಲ್ಲಿ ಅಂತಹ ಕ್ರೂರಕರ್ಮನಾದ ಬ್ರಾಹ್ಮಣಾಧಮನು ಜನಿಸಬಾರದು ಹಾಗೆ ಅನುಗ್ರಹಿಸು ಎಂದು ಕೇಳಿಕೊಳ್ಳಲು,

೪೩. ಋಚೀಕಮುನಿ ಇಂತೆಂದನು.—ಎಲೌ ಕಲ್ಯಾಣಿ, ನಿನಗೆ ಅಂತಹ ಪುತ್ರನು ಜನಿಸಬೇಕೆಂದು ನಾನು ಕಲ್ಪಿಸಿರಲಿಲ್ಲ. ಆದರೆ ನಿಮ್ಮ ತಾಯಿಯ ವಂಚನೆಯಿಂದ ಕ್ರೂರನಾದ ಮಗನು ಜನಿಸುವನು ಎನ್ನಲು

shrinath.udupa@gmail.com

ಪುನಃ ಸತ್ಯವತೀ ವಾಕ್ಯಮೇವಮುಕ್ತ್ವಾಽಬ್ರವೀದಿದಂ ।
ಇಚ್ಛಂಲ್ಲೋಕಾನಪಿ ಮುನೇ ಸೃಜೇಥಾಃ ಕಿಂ ಪುನಃ ಸುತಂ ॥ ೪೪ ॥

ಶಮಾತ್ಮಕಮೃಜುಂ ತ್ವಂ ಮೇ ಪುತ್ರಂ ದಾತುಮಿಹಾರ್ಹಸಿ ।
ಕಾಮಮೇವಂ ವಿಧಃ ಪೌತ್ರೋ ಮಮ ಸ್ಯಾತ್ತವ ಚ ಪ್ರಭೋ ॥ ೪೫ ॥

ಯದ್ಯನ್ಯಥಾ ನ ಶಕ್ಯಂ ವೈ ಕರ್ತುಮೇತದ್ವಿಜೋತ್ತಮ ।
ತತಃ ಪ್ರಸಾದಮಕರೋತ್ಸ ತಸ್ಯಾಸ್ತಪಸೋ ಬಲಾತ್ ॥ ೪೬ ॥

ಪುತ್ರೇ ನಾಸ್ತಿ ವಿಶೇಷೋ ಮೇ ಪೌತ್ರೇ ವಾ ವರವರ್ಣಿನಿ ।
ತ್ವಯಾ ಯಥೋಕ್ತಂ ವಚನಂ ತಥಾ ಭದ್ರೇ ಭವಿಷ್ಯತಿ ॥ ೪೭ ॥

ತತಃ ಸತ್ಯವತೀ ಪುತ್ರಂ ಜನಯಾಮಾಸ ಭಾರ್ಗವಂ ।
ತಪಸ್ಯಭಿರತಂ ದಾಂತಂ ಜಮದಗ್ನಿಂ ಸಮಾತ್ಮಕಂ ॥ ೪೮ ॥

---

೪೪. ಸತ್ಯವತಿಯು ಮತ್ತಿಂತೆಂದಳು.—ಓ ಸ್ವಾಮಿ, ನೀನು ಮನಸ್ಸು ಮಾಡಿದರೆ ಮತ್ತೊಂದು ಪ್ರಪಂಚವನ್ನೇ ಸೃಷ್ಟಿಸಬಲ್ಲೆ. ಇಂತಹ ಸಾಮರ್ಥ್ಯವುಳ್ಳ ನಿನಗೆ ಓರ್ವ ಪುತ್ರನನ್ನು ಸೃಷ್ಟಿಸುವುದು ಹೆಚ್ಚೇ? ಆದುದರಿಂದ ಶಾಂತನೂ ತಪೋಧನನೂ ಆದಂತಹ ಮಗನು ನನಗೆ ಜನಿಸುವಂತೆ ಅನುಗ್ರಹಿಸು.

೪೫. ಓ ಸ್ವಾಮಿ, ಇದನ್ನು ವ್ಯತ್ಯಾಸಮಾಡಲು ಸಾಧ್ಯವಿಲ್ಲದಿದ್ದರೆ ನಮ್ಮ ಮೊಮ್ಮಗನು ಅಂತಹ ಕ್ರೂರಕರ್ಮನಾಗಲಿ. ಇಷ್ಟುಮಾತ್ರ ನೀನು ಮಾಡಬೇಕು ಎಂದು ಪ್ರಾರ್ಥಿಸಲು,

೪೬–೪೭. ಋಚೀಕನು ತನ್ನ ತಪೋಮಹಿಮೆಯಿಂದ ಪತ್ನಿಯು ಹೇಳಿದಂತೆ ಮಾಡಿದನು, ಮತ್ತೂ ಪತ್ನಿಯನ್ನು ಕುರಿತು—ಎಲೌ ಸತ್ಯವತಿ, ಪುತ್ರನೂ ಪೌತ್ರನೂ ಒಂದೇ, ನೀನು ಹೇಳಿದಂತೆ ಪೌತ್ರನು ಕ್ರೂರಕರ್ಮನಾಗುವನು ಎಂದು ಹೇಳಿದನು.

೪೮. ಮುಂದೆ ಸತ್ಯವತಿಯು ಪತಿಯ ಅನುಗ್ರಹದಿಂದ ತಪಸ್ವಿಯೂ ಜಿತೇಂದ್ರಿಯನೂ ಶಾಂತನೂ ಆದ ಜಮದಗ್ನಿಮುನಿಯನ್ನು ಹಡೆದಳು.

shrinath.udupa@gmail.com

ಭೃಗೋರ್ಜಗತ್ಯಾಂ ವಂಶೇಽಸ್ಮಿನ್ ಜಮದಗ್ನಿರಜಾಯತ ।
ಸಾ ಹಿ ಸತ್ಯವತೀ ಪುಣ್ಯಾ ಸತ್ಯಧರ್ಮಪರಾಯಣಾ ॥ ೪೯ ॥

ಕೌಶಿಕೀತಿ ಸಮಾಖ್ಯಾತಾ ಪ್ರವೃತ್ತೇಯಂ ಮಹಾನದೀ ।
ಇಕ್ಷ್ವಾಕುವಂಶಪ್ರಭವೋ ರೇಣುರ್ನಾಮ ನರಾಧಿಪಃ ॥ ೫೦ ॥

ತಸ್ಯ ಕನ್ಯಾ ಮಹಾಭಾಗಾ ಕಾಮಲೀ ನಾಮ ರೇಣುಕಾ ।
ರೇಣುಕಾಯಾಂ ತು ಕಾಮಲ್ಯಾಂ ತಪೋವಿದ್ಯಾ ಸಮನ್ವಿತಃ ॥ ೫೧ ॥

ಆರ್ಚೀಕೋ ಜನಯಾಮಾಸ ಜಾಮದಗ್ನ್ಯಂ ಸುದಾರುಣಂ ।
ಸರ್ವವಿದ್ಯಾಂತಗಂ ಶ್ರೇಷ್ಠಂ ಧನುರ್ವೇದಸ್ಯ ಪಾರಗಂ ॥ ೫೨ ॥

ರಾಮಂ ಕ್ಷತ್ರಿಯಹಂತಾರಂ ಪ್ರದೀಪ್ತಮಿವ ಪಾವಕಂ ।
ಔರ್ವಸ್ಯೈವಮೃಚೀಕಸ್ಯ ಸತ್ಯವತ್ಯಾಂ ಮಹಾಯಶಾಃ ॥ ೫೩ ॥

---

೪೯. ಹೀಗೆ ಭೃಗುಋಷಿಯ ಪವಿತ್ರವಾದ ವಂಶದಲ್ಲಿ ಜಮದಗ್ನಿಯು ಜನಿಸಿದನು. ಅವನ ತಾಯಿಯಾದ ಸತ್ಯವತಿಯು, ಸತ್ಯಪರಳೂ, ಧರ್ಮಿಷ್ಠಳೂ ಆಗಿದ್ದಳು. ಆಮೇಲೆ ಅವಳು ಕೌಶಿಕೀ ಎಂಬ ಮಹಾನದಿಯಾದಳು.

೫೦. ಇಕ್ಷ್ವಾಕುವಂಶದಲ್ಲಿ ರೇಣುವೆಂಬ ರಾಜನಿದ್ದನು. ಅವನಿಗೆ ಕಾಮಾಲೀ ಎಂಬ ಮಗಳಿದ್ದಳು. ಅವಳಿಗೆ ರೇಣುಕೆಯೆಂದೂ ಹೆಸರಿದ್ದಿತು.

೫೧. ಆ ರೇಣುಕೆಯನ್ನು ತಪಸ್ವಿಯೂ, ವಿದ್ಯಾವಂತನೂ ಆದ ಜಮದಗ್ನಿಯು ಮದುವೆಯಾಗಿ ಅವಳಲ್ಲಿ ಕ್ಷತ್ರಿಯ ಭಯಂಕರನಾದ ಪರಶುರಾಮನು ಹುಟ್ಟಿದನು.

೫೨. ಕ್ಷತ್ರಿಯಮೃತ್ಯುವಾದ ಆ ಭಾರ್ಗವರಾಮನು ಉರಿಯುತ್ತಿರುವ ಅಗ್ನಿಯಂತೆ ತೇಜಸ್ವಿಯಾಗಿದ್ದನು. ಸಕಲ ವಿದ್ಯೆಗಳನ್ನೂ ಓದಿದ್ದನು. ಧನುರ್ವೇದವನ್ನು ಶಂಕರನ ಮುಖದಿಂದಲೇ ಸಂಪೂರ್ಣವಾಗಿ ತಿಳಿದುಕೊಂಡಿದ್ದನು.

೫೩. ಹಿಂದೆ ಹೇಳಿದಂತೆ ಋಚೀಕಮುನಿಗೆ ಸತ್ಯವತಿಯಲ್ಲಿ ತಪೋಮಹಿಮೆಯಿಂದ ಬ್ರಹ್ಮಜ್ಞಾನಿಯಾದ ಜಮದಗ್ನಿಯು ಜನಿಸಿದನಷ್ಟೆ.

shrinath.udupa@gmail.com

ಜಮದಗ್ನಿಸ್ತಪೋವೀರ್ಯಾಜ್ಜಜ್ಞೇ ಬ್ರಹ್ಮವಿದಾಂ ವರಃ ।
ಮಧ್ಯಮಶ್ಚ ಶುನಶ್ಶೇಫಃ ಶುನಃ ಪುಚ್ಛಃ ಕನಿಷ್ಠಕಃ ॥ ೫೪ ॥

ವಿಶ್ವಾಮಿತ್ರಂ ತು ದಾಯಾದಂ ಗಾಧಿಃ ಕುಶಿಕನಂದನಃ ।
ಜನಯಾಮಾಸ ಪುತ್ರಂ ತು ತಪೋವಿದ್ಯಾಶಮಾತ್ಮಕಂ ॥ ೫೫ ॥

ಪ್ರಾಪ್ಯ ಬ್ರಹ್ಮರ್ಷಿಸಮತಾಂ ಯೋಽಯಂ ಬ್ರಹ್ಮರ್ಷಿತಾಂ ಗತಃ
ವಿಶ್ವಾಮಿತ್ರಸ್ತು ಧರ್ಮಾತ್ಮಾ ನಾಮ್ನಾ ವಿಶ್ವರಥಃ ಸ್ಮೃತಃ ॥ ೫೬ ॥

ಜಜ್ಞೇ ಭೃಗುಪ್ರಸಾದೇನ ಕೌಶಿಕಾದ್ವಂಶವರ್ಧನಃ ।
ವಿಶ್ವಾಮಿತ್ರಸ್ಯ ಚ ಸುತಾ ದೇವರಾತಾದಯಃ ಸ್ಮೃತಾಃ ॥ ೫೭ ॥

ಪ್ರಖ್ಯಾತಾಸ್ತ್ರಿಷು ಲೋಕೇಷು ತೇಷಾಂ ಸಾಮಾನ್ಯತಃ ಪರಂ ।
ದೇವರಾತಃ ಕತಿಶ್ಚೈವ ಯಸ್ಮಾತ್ಕಾತ್ಯಾಯನಾಃ ಸ್ಮೃತಾಃ ॥ ೫೮ ॥

---

೫೪. ಆ ಜಮದಗ್ನಿಗೆ ಇನ್ನಿಬ್ಬರು ಸಹೋದರರು ಜನಿಸಿದರು. ಎರಡನೆಯವನು ಶುನಃಶೇಫನೆಂಬುವವನು, ಶುನಃಪುಚ್ಛನು ಕಿರಿಯವನು.

೫೫. ಕುಶಿಕಪುತ್ರನಾದ ಗಾಧಿರಾಜನಿಗೆ ತಪಸ್ವಿಯೂ, ವಿದ್ಯಾವಂತನೂ, ಶಾಂತನೂ ಆದಂಹ ವಿಶ್ವಾಮಿತ್ರನೆಂಬ ಪುತ್ರನು ಜನಿಸಿದನು.

೫೬. ಧರ್ಮಾತ್ಮನಾದ ಆ ವಿಶ್ವಾಮಿತ್ರನು ಬಹ್ಮರ್ಷಿಯಂತೆ ನಿಷ್ಠನಾಗಿದ್ದು ಕೊನೆಗೆ ತನ್ನ ತಪೋಮಹಿಮೆಯಿಂದ ಬ್ರಹ್ಮರ್ಷಿಯೇ ಆದನು. ತನ್ನ ಕಾರ್ಯಗಳಿಂದ ಜಗತ್ತಿಗೇ ಹಿತವನ್ನು ಮಾಡುವವನಾದ ಆ ಮುನಿಯು ಋಚೀಕಮುನಿಯ ಅನುಗ್ರಹದಿಂದ ಗಾಧಿಪುತ್ರನಾಗಿ ಜನಿಸಿ ಕುಶಿಕವಂಶವನ್ನು ವೃದ್ಧಿಮಾಡಿದನು.

೫೭. ದೇವರಾತನೊದಲಾದವರು ವಿಶ್ವಾಮಿತ್ರನ ಮಕ್ಕಳು: ಅವರು ತುಂಬಾ ಪ್ರಸಿದ್ಧರಾದವರು.

೫೮–೬೦. ದೇವರಾತ, ಕತಿ, ಹಿರಣ್ಯಾಕ್ಷ, ರೇಣು, ರೇಣುಕ, ಸಾಂಕೃತಿ, ಗಾಲವ, ಮುದ್ಗಲ, ಮಧುಚ್ಛಂದ, ಜಯ, ದೇವಲ, ಅಷ್ಟಕ, ಕಚ್ಛಪ, ಹಾರೀತ,

shrinath.udupa@gmail.com

ಶಾಲಾವತ್ಯಾಂ ಹಿರಣ್ಯಾಕ್ಷೋ ರೇಣುರ್ಜಜ್ಞೇಽಥ ರೇಣುಕಃ ।
ಸಾಂಕೃತಿರ್ಗಾಲವಶ್ಚೈವ ಮುದ್ಗಲಿಶ್ಚೈವ ವಿಶ್ರುತಃ ॥ ೫೯ ॥

ಮಧುಚ್ಛಂದೋ ಜಯಶ್ಚೈವ ದೇವಲಶ್ಚ ತಥಾಽಷ್ಟಕಃ ।
ಕಚ್ಛಪೋ ಹಾರಿತಶ್ಚೈವ ವಿಶ್ವಾಮಿತ್ರಸ್ಯ ತೇ ಸುತಾಃ ॥ ೬೦ ॥

ತೇಷಾಂ ಖ್ಯಾತಾನಿ ಗೋತ್ರಾಣಿ ಕೌಶಿಕಾನಾಂ ಮಹಾತ್ಮನಾಂ ।
ಪಾಣಿನೋ ಬಭ್ರವಶ್ಚೈವ ಧ್ಯಾನಜಪ್ಯಾಸ್ತಥೈವ ಚ ॥ ೬೧ ॥

ಪಾರ್ಥಿವಾ ದೇವರಾತಾಶ್ಚ ಶಾಲಂಕಾಯನಬಾಷ್ಕಲಾಃ ।
ಲೋಹಿತಾ ಯಮದೂತಾಶ್ಚ ತಥಾ ಕಾರೂಷಕಾಃ ಸ್ಮೃತಾಃ ॥ ೬೨ ॥

ಪೌರವಸ್ಯ ಮುನಿಶ್ರೇಷ್ಠಾ ಬ್ರಹ್ಮರ್ಷೇಃ ಕೌಶಿಕಸ್ಯ ಚ ।
ಸಂಬಂಧೋಽಪ್ಯಸ್ಯ ವಂಶೇಽಸ್ಮಿನ್ ಬ್ರಹ್ಮಕ್ಷತ್ರಸ್ಯ ವಿಶ್ರುತಃ ॥ ೬೩ ॥

ವಿಶ್ವಾಮಿತ್ರಾತ್ಮಜಾತಾನಾಂ ಶುನಶ್ಶೇಫೋಽಗ್ರಜಃ ಸ್ಮೃತಃ ।
ಭಾರ್ಗವಃ ಕೌಶಿಕತ್ವಂ ಹಿ ಪ್ರಾಪ್ತಃ ಸ ಮುನಿಸತ್ತಮಃ ॥ ೬೪ ॥

ಇವರು ಶಾಲಾವತಿಯಲ್ಲಿ ವಿಶ್ವಾಮಿತ್ರನಿಗೆ ಜನಿಸಿದ ಮಕ್ಕಳು. ಕತಿಮುನಿಯಿಂದ ಕಾತ್ಯಾಯನರೆಂಬ ಮುನಿಗಳು ಜನಿಸಿದರು. ಈ ಮಹಾತ್ಮರಾದ ವಿಶ್ವಾಮಿತ್ರ ಪುತ್ರರ ಗೋತ್ರಗಳು ಈಗಲೂ ಪ್ರಸಿದ್ಧವಾಗಿರುವುವು.

೬೧-೬೩. ವಿಶ್ವಾಮಿತ್ರನ ಮಕ್ಕಳಲ್ಲಿ ಕೆಲವರು ರಾಜರಾಗಿದ್ದರು. ದೇವರಾತ, ಶಾಂಕಲಾಯನ, ಬಾಷ್ಕಲ, ಲೋಹಿತ, ಯಮದೂತ, ಕಾರೂಷ ಮುಂತಾದವರು ಮಹರ್ಷಿಗಳಾಗಿದ್ದರು. ಹೀಗೆ ಬ್ರಹ್ಮರ್ಷಿಯಾದ ವಿಶ್ವಾಮಿತ್ರನ ವಂಶದಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯ ಇವರೀರ್ವರ ಸಂಬಂಧವೂ ಇದ್ದಿತು.

೬೪. ಭಾರ್ಗವವಂಶದಲ್ಲಿ ಜನಿಸಿದ ಅನಾಥನಾದ ಶುನಶ್ಶೇಫನನ್ನು ವಿಶ್ವಾಮಿತ್ರನು ಪರಿಗ್ರಹಿಸಿ ತನ್ನ ಮಕ್ಕಳಲ್ಲಿ ಹಿರಿಯವನನ್ನಾಗಿ ಮಾಡಿಕೊಂಡನು. ವಿಶ್ವಾಮಿತ್ರನ ಅನುಗ್ರಹದಿಂದ ಆ ಶುನಃಶೇಫನು ಕೌಶಿಕವಂಶವನ್ನು ಸೇರಿದರು.

shrinath.udupa@gmail.com

ವಿಶ್ವಾಮಿತ್ರಸ್ಯ ಪುತ್ರಸ್ತು ಶುನಶ್ಶೇಫೋಽಭವತ್ಕಿಲ ।
ಹರಿದಶ್ವಸ್ಯ ಯಜ್ಞೇ ತು ಪಶುತ್ವೇ ವಿನಿಯೋಜಿತಃ ॥ ೬೫ ॥

ದೇವೈರ್ದತ್ತಃ ಶುನಶ್ಶೇಫೋ ವಿಶ್ವಾಮಿತ್ರಾಯ ವೈ ಪುನಃ ।
ದೇವೈರ್ದತ್ತಃ ಸ ವೈ ಯಸ್ಮಾದ್ದೇವರಾತಸ್ತತೋಽಭವತ್ ॥ ೬೬ ॥

ದೇವವರಾತಾದಯಃ ಸಪ್ತ ವಿಶ್ವಾಮಿತ್ರಸ್ಯ ವೈ ಸುತಾಃ ।
ದೃಷದ್ವತೀಸುತಶ್ಚಾಪಿ ವೈಶ್ವಾಮಿತ್ರಸ್ತಥಾಽಷ್ಟಕಃ ॥ ೬೭ ॥

ಅಷ್ಟಕಸ್ಯ ಸುತೋ ಲೌಹಿಃ ಪ್ರೋಕ್ತೋ ಜಹ್ನುಗಣೋ ಮಯಾ ।
ಅತ ಊರ್ಧ್ವಂ ಪ್ರವಕ್ಷ್ಯಾಮಿ ವಂಶಮಾಯೋರ್ಮಹಾತ್ಮನಃ ॥ ೬೮ ॥

ಇತಿ ಶ್ರೀ ಮಹಾಪುರಾಣೇ ಆದಿಬ್ರಾಹ್ಮೇ ಸೋಮವಂಶೇಽಮಾವಸು ವಂಶಾನುಕೀರ್ತನಂ ನಾಮ ದಶಮೋಽಧ್ಯಾಯಃ

---

೬೫. ವಿಶ್ವಾಮಿತ್ರನ ಪುತ್ರನಾಗುವ ಮೊದಲು ಶುನಃಶೇಫನು ಹರಿದಶ್ವನೆಂಬ ರಾಜನ ಯಜ್ಞದಲ್ಲಿ ಪಶುವಾಗಿ ನಿಯಮಿಸಲ್ಪಟ್ಟಿದ್ದನು.

೬೬. ವಿಶ್ವಾಮಿತ್ರನುಪದೇಶಿಸಿದ ಮಂತ್ರಗಳಿಂದ ಶುನಃಶೇಫನು ದೇವತೆಗಳನ್ನು ಸ್ತುತಿಸಲು ಅವರು ಸುಪ್ರೀತರಾಗಿ ಅವನನ್ನು ಪಶುವಾಗಿ ಸ್ವೀಕರಿಸದೇ ಬಿಡುಕಿಸಿ ವಿಶ್ವಾಮಿತ್ರಮುನಿಗೆ ಕೊಟ್ಟರು. ಹೀಗೆ ದೇವತೆಗಳು ಕೊಟ್ಟುದುದರಿಂದ ಅವನಿಗೆ ದೇವರಾತನೆಂಬ ಹೆಸರಾಯಿತು.

೬೭. ದೇವರಾತನೇ ಮೊದಲಾದ ಏಳು ಜನರು ವಿಶ್ವಾಮಿತ್ರನಿಗೆ ಮಕ್ಕಳು. ದೃಷದ್ವತಿಯಲ್ಲಿ ಹುಟ್ಟಿದ ಅಷ್ಟಕನೆಂಬುವನು ಎಂಟನೆಯ ಮಗನು.

೬೮. ಆ ಅಷ್ಟಕನ ಮಗನು ಲೌಹಿಯೆಂಬುವನು. ಎಲೈ ಮುನಿಗಳೇ, ಹೀಗೆ ನಿಮಗೆ ಜಹ್ನುಮುನಿಯ ವಂಶವನ್ನು ಹೇಳಿರುವೆನು. ಮುಂದೆ ಮಹಾತ್ಮನಾದ ಆಯುರಾಜನ ವಂಶವನ್ನು ಹೇಳುವೆನು ಎಂದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಸೋಮವಂಶಾನುಕೀರ್ತನವೆಂಬ ಹತ್ತನೆಯ ಅಧ್ಯಾಯವು ಮುಗಿದುದು.

shrinath.udupa@gmail.com

॥ ಶ್ರೀಃ ॥

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕಾದಶೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ಆಯೋಃ ಪುತ್ರಾಶ್ಚ ತೇ ಪಂಚ ಸರ್ವೇ ವೀರಾ ಮಹಾರಥಾಃ ।
ಸ್ವರ್ಭಾನುತನಯಾಯಾಂ ಚ ಪ್ರಭಾಯಾಂ ಜಜ್ಞಿರೇ ನೃಪಾಃ ॥ ೧ ॥

ನಹುಷಃ ಪ್ರಥಮಂ ಜಜ್ಞೇ ವೃದ್ಧಶರ್ಮಾ ತತಃ ಪರಂ ।
ರಂಭೋ ರಜಿರನೇನಾಶ್ಚ ತ್ರಿಷು ಲೋಕೇಷು ವಿಶ್ರುತಾಃ ॥ ೨ ॥

ಹನ್ನೊಂದನೆಯ ಅಧ್ಯಾಯವು

೧. ಸೂತಮುನಿಯು ಹೇಳಿದನು.—ಎಲೈ ಮುನಿಗಳೇ ಆಯುರಾಜನಿಗೆ ಸ್ವರ್ಭಾನುವಿನ ಎಂದರೆ ರಾಹುವಿನ ಮಗಳಾದ ಪ್ರಭಾದೇವಿಯಲ್ಲಿ ಐದು ಮಂದಿ ಮಕ್ಕಳು ಜನಿಸಿದರು. ಅವರೆಲ್ಲರೂ ವೀರರೂ ಮಹಾರಥರೂ ಆದ ಮಹಾರಾಜರಾಗಿದ್ದರು.

೨. ಮೊದಲು ನಹುಷನು ಜನಿಸಿದನು, ಆಮೇಲೆ ವೃದ್ಧಶರ್ಮ, ರಂಭ, ರಜಿ, ಅನೇನಾ ಎಂಬ ರಾಜರು ಜನಿಸಿದರು. ಇವರೆಲ್ಲರೂ ಬಹಳ ಪ್ರಸಿದ್ಧರಾದವರು.

shrinath.udupa@gmail.com

ರಜಿಃ ಪುತ್ರಶತಾನೀಹ ಜನಯಾಮಾಸ ಪಂಚ ವೈ ।
ರಾಜೇಯಮಿತಿ ವಿಖ್ಯಾತಂ ಕ್ಷತ್ರಮಿಂದ್ರಭಯಾವಹಂ ॥ ೩ ॥

ಯತ್ರ ದೇವಾಸುರೇ ಯುದ್ಧೇ ಸಮುತ್ಪನ್ನೇ ಸುದಾರುಣೇ ।
ದೇವಾಶ್ಚೈವಾಸುರಾಶ್ಚೈವ ಪಿತಾಮಹಮಥಾಬ್ರುವನ್ ॥ ೪ ॥

॥ ದೇವಾಸುರಾ ಊಚುಃ ॥

ಆವಯೋರ್ಭಗವನ್ ಯುದ್ಧೇ ಕೋ ವಿಜೇತಾ ಭವಿಷ್ಯತಿ ।
ಬ್ರೂಹಿ ನಃ ಸರ್ವಭೂತೇಶ ಶ್ರೋತುಮಿಚ್ಛಾಮ ತತ್ತ್ವತಃ ॥ ೫ ॥

॥ ಬ್ರಹ್ಮೋವಾಚ ॥

ಯೇಷಾಮರ್ಥಾಯ ಸಂಗ್ರಾಮೇ ರಜಿರಾತ್ತಾಯುಧಃ ಪ್ರಭುಃ ।
ಯೋತ್ಸ್ಯತೇ ತೇ ವಿಜೇಷ್ಯಂತಿ ತ್ರೀನ್ ಲೋಕಾನ್ನಾತ್ರಸಂಶಯಃ ॥ ೬ ॥

ಯತೋ ರಜಿರ್ಧೃತಿಸ್ತತ್ರ ಶ್ರೀಶ್ಚ ತತ್ರ ಯತೋ ಧೃತಿಃ ।
ಯತೋ ಧೃತಿಶ್ಚ ಶ್ರೀಶ್ಚೈವ ಧರ್ಮಸ್ತತ್ರ ಜಯಸ್ತಥಾ ॥ ೭ ॥

---

೩. ಅವರಲ್ಲಿ ರಜಿರಾಜನು ಐನೂರುಮಂದಿ ಮಕ್ಕಳನ್ನು ಪಡೆದನು. ಅವರೆಲ್ಲರೂ ರಾಜೇಯರು ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದು ಇಂದ್ರನಿಗೂ ಭಯವನ್ನುಂಟುಮಾಡುವಂತಹ ವೀರಕ್ಷತ್ರಿಯರಾಗಿದ್ದರು.

೪. ಹಿಂದೊಮ್ಮೆ ದೇವತೆಗಳಿಗೂ ಅಸುರರಿಗೂ ಭಯಂಕರವಾದ ಯುದ್ಧವು ಪ್ರಾಪ್ತವಾಗಲು ದೇವತೆಗಳೂ, ಅಸುರರೂ ಸಹ ಬ್ರಹ್ಮನನ್ನು ಕುರಿತು,

೫. ಜಗದೊಡೆಯನಾದ ಓ ಬ್ರಹ್ಮನೇ ನಮ್ಮಿಬ್ಬರಲ್ಲಿ ಯಾರು ಗೆಲ್ಲುವರು ನಿಶ್ಚಯವಾಗಿ ಹೇಳು ಎಂದು ಕೇಳಲು.

೬. ಬ್ರಹ್ಮನು ಹೇಳಿದನು.—ರಜಿರಾಜನು ಯಾರ ಸಹಾಯಕ್ಕೆ ನಿಂತು ಯುದ್ಧಮಾಡುವನೋ ಅವರೇ ಜಯಿಸುವರು. ಅವರು ಮೂರು ಲೋಕಗಳನ್ನೂ ಜಯಿಸಬಲ್ಲರು. ಇದರಲ್ಲಿ ಸಂಶಯವಿಲ್ಲ.

೭. ರಜಿರಾಜನಿದ್ದಲ್ಲಿ ಧೈರ್ಯವಿರುವುದು. ಧೈರ್ಯವಿದ್ದಲ್ಲಿ ಲಕ್ಷ್ಮಿಯಿರುವಳು. ಧೈರ್ಯ ಮತ್ತು ಲಕ್ಷ್ಮಿ ಇವುಗಳಿದ್ದಲ್ಲಿ ಧರ್ಮವೂ ಜಯವೂ ಇದ್ದೇ ಇರುವುದು ಎಂದನು.

shrinath.udupa@gmail.com

ತೇ ದೇವಾ ದಾನವಾಃ ಪ್ರೀತಾ ದೇವೇನೋಕ್ತಾ ರಜಿಂ ತದಾ ।
ಅಭ್ಯಯುರ್ಜಯಮಿಚ್ಛಂತೋ ವೃಣ್ವಾನಾಸ್ತಂ ನರರ್ಷಭಂ ॥ ೮ ॥

ಸ ಹಿ ಸ್ವರ್ಭಾನುದೌಹಿತ್ರಃ ಪ್ರಭಾಯಾಂ ಸಮುಪದ್ಯತ ।
ರಾಜಾ ಪರಮತೇಜಸ್ವೀ ಸೋಮವಂಶವಿವರ್ಧನಃ ॥ ೯ ॥

ತೇ ಹೃಷ್ಟಮನಸಃ ಸರ್ವೇ ರಜಿಂ ವೈ ದೇವದಾನವಾಃ ।
ಊಚುರಸ್ಮಜ್ಜಯಾಯ ತ್ವಂ ಗೃಹಾಣ ವರಕಾರ್ಮುಕಂ ॥ ೧೦ ॥

ಅಥೋವಾಚ ರಜಿಸ್ತತ್ರ ತಯೋರ್ವೈ ದೇವದೈತ್ಯಯೋಃ ।
ಅರ್ಥಜ್ಞಃ ಸ್ವಾರ್ಥಮುದ್ದಿಶ್ಯ ಯಶಃ ಸ್ವಂ ಚ ಪ್ರಕಾಶಯನ್ ॥ ೧೧ ॥

॥ ರಜಿರುವಾಚ ॥

ಯದಿ ದೈತ್ಯಗಣಾನ್ ಸರ್ವಾನ್ ಜಿತ್ವಾ ವೀರ್ಯೇಣ ವಾಸವಃ ।
ಇಂದ್ರೋ ಭವಾಮಿ ಧರ್ಮೇಣ ತತೋ ಯೋತ್ಸ್ಯಾಮಿ ಸಂಯುಗೇ॥ ೧೨॥

---

೮. ಬ್ರಹ್ಮನ ಈ ಮಾತನ್ನು ಕೇಳಿ ಸಂತುಷ್ಟರಾಗಿ ದೇವತೆಗಳೂ, ರಾಕ್ಷಸರೂ ಸಹ ತಮಗೇ ಜಯವಾಗಬೇಕೆಂಬ ಬಯಕೆಯಿಂದ ರಜಿಯು ತಮ್ಮ ಕಡೆಗೆ ಬರುವಂತೆ ಕೇಳಿಕೊಳ್ಳಲು ಆ ರಾಜನ ಬಳಿಗೆ ಬಂದರು.

೯. ಆ ರಜಿರಾಜನು ರಾಹುವಿನ ಮಗಳಾದ ಪ್ರಭೆಯಲ್ಲಿ ಜನಿಸಿದ್ದು ಮಹಾ ತೇಜಸ್ವಿಯೂ, ವೀರನೂ ಚಂದ್ರವಂಶವರ್ಧಕನೂ ಆಗಿದ್ದನು. ಈ ವಿಷಯವು ನಿಮಗೆ ತಿಳಿದೇ ಇದೆ.

೧೦. ದೇವತೆಗಳೂ ದಾನವರೂ ಸಂತೋಷದಿಂದ ರಜಿರಾಜನ ಬಳಿಗೆ ಬಂದು ಅವನನ್ನು ಕುರಿತು ಓ ರಾಜನೇ ನೀನು ನಮಗೇ ಜಯವನ್ನುಂಟುಮಾಡಲು ನಿನ್ನ ಉತ್ತಮಧನಸ್ಸನ್ನು ಹಿಡಿದು ನಮ್ಮೊಡನೆ ಸೇರಿ ಯುದ್ಧಮಾಡು ಎಂದು ಕೇಳಿ ಕೊಂಡರು.

೧೧. ಆಗ ರಾಜನೀತಿಯನ್ನು ತಿಳಿದ ರಜಿಯು ತನ್ನ ಪ್ರಯೋಜನವನ್ನು ದ್ದೇಶಿಸಿಯೂ, ಯಶಸ್ಸನ್ನು ಪ್ರಕಾಶಪಡಿಸಲೋಸುಗವೂ, ಆ ದೇವದಾನವರನ್ನು ಕುರಿತು ಹೀಗೆ ಹೇಳಿದನು.

೧೨. ರಜಿರಾಜನು ಹೇಳಿದನು.—ನಾನು ದಾನವರೆಲ್ಲರನ್ನೂ ಇಂದ್ರನಂತೆ ಜಯಿಸಿದರೆ ನನಗೆ ಇಂದ್ರಪದವಿಯನ್ನು ಕೊಡಬೇಕು. ಹಾಗಾದರೆ ದೇವತೆಗಳೊಡನೆ ಸೇರಿ ಯುದ್ಧಮಾಡುವೆನು.

shrinath.udupa@gmail.com

ದೇವಾಃ ಪ್ರಥಮತೋ ವಿಪ್ರಾಃ ಪ್ರತೀಯುರ್ಹೃಷ್ಟಮಾನಸಾಃ ।
ಏವಂ ಯಥೇಷ್ಟಂ ನೃಪತೇ ಕಾಮಃ ಸಂಪದ್ಯತಾಂ ತವ ॥ ೧೩ ॥

ಶ್ರುತ್ವಾ ಸುರಗಣಾನಾಂ ತು ವಾಕ್ಯಂ ರಾಜಾ ರಜಿಸ್ತದಾ ।
ಪಪ್ರಚ್ಛಾಸುರಮುಖ್ಯಾಂಸ್ತು ಯಥಾ ದೇವಾನಪೃಚ್ಛತ ॥ ೧೪ ॥

ದಾನವಾ ದರ್ಪಸಂಪೂರ್ಣಾಃ ಸ್ವಾರ್ಥಮೇವಾವಗಮ್ಯ ಹ ।
ಪ್ರತ್ಯೂಚುಸ್ತಂ ನೃಪವರಂ ಸಾಭಿಮಾನಮಿದಂ ವಚಃ ॥ ೧೫ ॥

॥ ದಾನವಾ ಊಚುಃ ॥

ಅಸ್ಮಾಕಮಿಂದ್ರಃ ಪ್ರಹ್ಲಾದೋ ಯಸ್ಯಾರ್ಥೇ ವಿಜಯಾಮಹೇ ।
ಅಸ್ಮಿಂಸ್ತು ಸಮರೇ ರಾಜಂಸ್ತಿಷ್ಠ ತ್ವಂ ರಾಜಸತ್ತಮ ॥ ೧೬ ॥

ಸ ತಥೇತಿ ಬ್ರುವನ್ನೇವ ದೇವೈರಪ್ಯತಿಚೋದಿತಃ ।
ಭವಿಷ್ಯಸೀಂದ್ರೋ ಜಿತ್ವೈನಂ ದೇವೈರುಕ್ತಸ್ತು ಪಾರ್ಥಿವಃ ॥ ೧೭ ॥

---

೧೩. ದೇವತೆಗಳು ರಜಿಯ ಆ ಮಾತನ್ನು ಒಪ್ಪಿಕೊಂಡು ತಾವೇ ಮುಂಚಿತವಾಗಿ ಎಲೈ ರಾಜನೇ ? ನಿನ್ನಿಷ್ಟದಂತೆಯೇ ಆಗಲಿ ಎಂದು ಹೇಳಿದರು.

೧೪. ದೇವತೆಗಳ ಮಾತನ್ನು ಕೇಳಿ ರಜಿರಾಜನು ಅಸುರರನ್ನೂ ಕುರಿತು ನೀವು ನನ್ನನ್ನು ನಿಮ್ಮ ಇಂದ್ರನನ್ನಾಗಿ ಸ್ವೀಕರಿಸಿದರೆ ಯುದ್ಧದಲ್ಲಿ ನಿಮ್ಮೊಡನೆ ಸೇರಿ ದೇವತೆಗಳನ್ನು ಸೋಲಿಸುವೆನು ಎಂದು ಹೇಳಿದನು.

೧೫. ದಾನವರು ದರ್ಪದಿಂದ ಕೂಡಿದವರಾಗಿ ಸ್ವಾರ್ಥವನ್ನೇ ಪ್ರಧಾನವಾಗಿಟ್ಟುಕೊಂಡು ಆ ರಾಜನನ್ನು ಕುರಿತು ಗರ್ವದಿಂದ ಹೀಗೆ ಹೇಳಿದರು.

೧೬. ದಾನವರು ಹೇಳಿದರು.—ಎಲೈ ರಾಜವರ ? ನಮಗೆ ಪ್ರಹ್ಲಾದನೇ ಇಂದ್ರನು, ಅವನಿಗಾಗಿಯೇ ಈಗ ಯುದ್ಧಮಾಡುತ್ತಲಿರುವೆವು. ಇಂದ್ರಪದವಿಯನ್ನು ನಿನಗೆ ಕೊಡಲಾರೆವು. ಈ ಯುದ್ಧದಲ್ಲಿ ನಮಗೆ ಸಹಾಯಮಾಡು.

೧೭. ದಾನವರ ಮಾತನ್ನು ಒಪ್ಪಿಕೊಳ್ಳುತ್ತಿದ್ದ ರಜಿರಾಜನು ರಾಕ್ಷಸರನ್ನು ಗೆದ್ದರೆ ನೀನೇ ಇಂದ್ರನಾಗುವಿಯೆಂದು ಬಲವಂತಮಾಡುತ್ತಿರುವ ದೇವತೆಗಳ ಕಡೆಗೆ ಸೇರಿ ದೇವೇಂದ್ರನೂ ಜಯಿಸಲಾರದ ದಾನವರೆಲ್ಲರನ್ನೂ ಸಂಹರಿಸಿದನು.

shrinath.udupa@gmail.com

ಜಘಾನ ದಾನವಾ೯ ಸರ್ವಾನ್ಯೇಽವಧ್ಯಾ ವಜ್ರಪಾಣಿನಃ ।
ಸ ವಿಪ್ರನಷ್ಟಾಂ ದೇವಾನಾಂ ಪರಮಶ್ರೀಃ ಶ್ರಿಯಂ ವಶೀ ॥ ೧೮ ॥

ನಿಹತ್ಯ ದಾನವಾ೯ ಸರ್ವಾನಾಜಹಾರ ರಜಿಃ ಪ್ರಭುಃ ।
ತತೋ ರಜಿಂ ಮಹಾವೀರ್ಯಂ ದೇವೈಸ್ಸಹ ಶತಕ್ರತುಃ ॥ ೧೯ ॥

ರಜಿಪುತ್ರೋಽಹಮಿತ್ಯುಕ್ತ್ವಾ ಪುನರೇವಾಬ್ರವೀದ್ವಚಃ ।
ಇಂದ್ರೋಽಸಿ ತಾತ ದೇವಾನಾಂ ಸರ್ವೇಷಾಂ ನಾತ್ರ ಸಂಶಯಃ । ॥ ೨೦ ॥

ಯಸ್ಯಾಹಮಿಂದ್ರಃ ಪುತ್ರಸ್ತೇ ಖ್ಯಾತಿಂ ಯಾಸ್ಯಾಮಿ ಕರ್ಮಭಿಃ ।
ಸ ತು ಶಕ್ರವಚಃ ಶ್ರುತ್ವಾ ವಂಚಿತಸ್ತೇನ ಮಾಯಯಾ ॥ ೨೧ ॥

ತಥೈವೇತ್ಯಬ್ರವೀದ್ರಾಜಾ ಪ್ರೀಯಮಾಣಃ ಶತಕ್ರತುಂ ।
ತಸ್ಮಿಂಸ್ತು ದೇವೈಃ ಸದೃಶೇ ದಿವಂ ಪ್ರಾಪ್ತೇ ಮಹೀಪತೌ ॥ ೨೨ ॥

೧೮. ಹಿಗೆ ಆ ರಜಿರಾಜನು ದಾನವರೆಲ್ಲರನ್ನೂ ಸಂಹರಿಸಿ ದೇವತೆಗಳ ನಷ್ಟವಾದ ರಾಜ್ಯಲಕ್ಷ್ಮಿಯನ್ನು ತಿರುಗಿ ಸಂಪಾದಿಸಿಕೊಟ್ಟನು.

೧೯. ಆಗ ದೇವೇಂದ್ರನು ಮಹಾವೀರನಾದ ರಜಿಯನ್ನು ದೇವತೆಗಳೊಡನೆ ಓಲೈಸಿ ತಾನು ರಜಿರಾಜನ ಪುತ್ರನು ಎಂದು ಹೇಳಿಕೊಂಡು ಹೀಗೆ ಹೇಳಿದನು.

೨೦. ಇಂದ್ರನು ಹೇಳಿದನು.—ಓ ತಂದೆ? ನೀನು ದೇವತೆಗಳೆಲ್ಲರಿಗೂ ಇಂದ್ರನಾಗಿರುವೆ. ನಾನು ನಿನ್ನ ಪುತ್ರನಾಗಿದ್ದು ನಿನಗನುಕೂಲವಾದ ಕಾರ್ಯಗಳನ್ನು ಮಾಡುತ್ತಾ ಕೀರ್ತಿಗಳಿಸುವೆನು.

೨೧. ಆ ರಜಿರಾಜನು ಇಂದ್ರನ ಮೋಸದ ಮಾತಿಗೆ ಮಾಯೆಯಿಂದ ಮಾರುಹೋಗಿ ಹಾಗೇಯೇ ಆಗಲಿ ಎಂದು ಸಂತೋಷದಿಂದ ಇಂದ್ರನಿಗೆ ಹೇಳಿದನು.

೨೨. ದೇವತೆಗಳಿಗೆ ಸಮಾನನಾದ ಆ ರಜಿರಾಜನು ದಿವಂಗತನಾಗಲು ಅವನ ಮಕ್ಕಳು ಸ್ವರ್ಗವು ತಮ್ಮ ತಂದೆಯದಾದುದರಿಂದ ತಮಗೂ ಅದರಲ್ಲಿ ಭಾಗವಿದೆ ಯೆಂದು ವಾದಿಸಿ ಬಲದಿಂದ ಇಂದ್ರನಿಂದ ಸ್ವರ್ಗರಾಜ್ಯವನ್ನು ಕಿತ್ತುಕೊಂಡರು.

shrinath.udupa@gmail.com

ಪಾಯೊದ್ಯಮಿಂದ್ರಾದಾಜಹ್ರೂ ರಾಜ್ಯಂ ತತ್ತನಯಾ ರಜೇಃ ।
ಪಂಚ ಪುತ್ರಶತಾನ್ಯಸ್ಯ ತದ್ವೈ ಸ್ಥಾನಂ ಶತಕ್ರತೋಃ ॥ ೨೩ ॥

ಸಮಾಕ್ರಾಮಂತ ಬಹುಧಾ ಸ್ವರ್ಗಲೋಕಂ ತ್ರಿವಿಷ್ಟಪಂ ।
ತೇ ಯದಾ ತು ಸ್ವಸಂಮೂಢಾ ರಾಗೋನ್ಮತ್ತಾ ವಿಧರ್ಮಿಣಃ ॥ ೨೪ ॥

ಬ್ರಹ್ಮದ್ವಿಷಶ್ಚ ಸಂವೃತ್ತಾ ಹತವೀರ್ಯಪರಾಕ್ರಮಾಃ ।
ತತೋ ಲೇಭೇ ಸ್ವಮೈಶ್ವರ್ಯಮಿಂದ್ರಃ ಸ್ಥಾನಂ ತಥೋತ್ತಮಂ ॥ ೨೫ ॥

ಹತ್ವಾ ರಜಿಸುತಾನ್ ಸರ್ವಾನ್ಕಾಮಕ್ರೋಧಪರಾಯಣಾನ್ ।
ಯ ಇದಂ ಚ್ಯಾವನಂ ಸ್ಥಾನಾತ್ಪ್ರತಿಷ್ಠಾನಂ ಶತಕ್ರತೋಃ ॥ ೨೬ ॥

ಶೃಣುಯಾದ್ಧಾರಯೇದ್ವಾऽಪಿ ನ ಸ ದೌರ್ಗತ್ಯಮಾಪ್ನುಯಾತ್ ।

---

೨೩. ರಾಜಿರಾಜನ ಆ ಐನೂರುಮಂದಿ ಶೂರರಾದ ಮಕ್ಕಳು ಇಂದ್ರನ ಸ್ಥಾನವಾದ ಅಮರಾವತಿಯನ್ನು ತಮ್ಮ ಪರಾಕ್ರಮದಿಂದ ಆಕ್ರಮಿಸಿದರು.

೨೪. ಆದರೆ ಅವರು ಬಹಳಕಾಲ ಸ್ವರ್ಗರಾಜ್ಯವನ್ನನುಭವಿಸಲಿಲ್ಲ. ಅಲ್ಲಿ ಆ ರಜಿಪುತ್ರರು ಐಶ್ವರ್ಯಮದದಿಂದ ಮೂಢರಾಗಿ, ಕಾಮುಕರೂ ಧರ್ಮವನ್ನು ಬಿಟ್ಟವರೂ ಆದರು. ಬ್ರಾಹ್ಮಣದ್ವೇಷಿಗಳಾದರು. ಅದರಿಂದ ಅವರ ಮೊದಲಿನ ಬಲವೂ ಪರಾಕ್ರಮವೂ ನಷ್ಟವಾದುವು.

೨೫. ಆಗ ದೇವೇಂದ್ರನು ಕಾಮಕ್ರೋಧಗಳಿಂದ ತುಂಬಿ ವಿಧರ್ಮಿಗಳಾದ ಆ ರಜಿಪುತ್ರರೆಲ್ಲರನ್ನೂ ಸಂಹರಿಸಿ ತನ್ನ ಐಶ್ವರ್ಯವನ್ನೂ ಅಮರಾವತಿಯನ್ನೂ ತಿರುಗಿ ಪಡೆದನು.

೨೬. ಯಾವನು ಈ ಇಂದ್ರನು ತನ್ನ ಸ್ಥಾನವನ್ನು ಕಳೆದುಕೊಂಡು ತಿರುಗಿ ಸಂಪಾದಿಸಿದ ಇತಿಹಾಸವನ್ನು ಕೇಳುವನೋ ಅಥವಾ ಓದುವನೋ ಅವನು ಎಂದೆಂದಿಗೂ ದುರ್ಗತಿ (ವಿಪತ್ತು) ಯನ್ನು ಹೊಂದುವುದಿಲ್ಲ.

shrinath.udupa@gmail.com

॥ ಲೋಮಹರ್ಷಣ ಉವಾಚ ॥

ರಂಭೋಽನಪತ್ಯಸ್ತ್ವಾಸೀಚ್ಚ ವಂಶಂ ವಕ್ಷ್ಯಾಮ್ಯನೇನಸಃ ।
ಅನೇನಸಃ ಸುತೋ ರಾಜಾ ಪ್ರತಿಕ್ಷತ್ರೋ ಮಹಾಯಶಾಃ ॥ ೨೭ ॥

ಪ್ರತಿಕ್ಷತ್ರಸುತಶ್ಚಾಽಽಸೀತ್ಸಂಜಯೋ ನಾಮ ವಿಶ್ರುತಃ ।
ಸಂಜಯಸ್ಯ ಜಯಃ ಪುತ್ರೋ ವಿಜಯಸ್ತಸ್ಯ ಚಾಽಽತ್ಮಜಃ ॥ ೨೮ ॥

ವಿಜಯಸ್ಯ ಕೃತಿಃ ಪುತ್ರಸ್ತಸ್ಯ ಹರ್ಯತ್ವತಃ ಸುತಃ ।
ಹರ್ಯತತ್ವಸುತೋ ರಾಜಾ ಸಹದೇವಃ ಪ್ರತಾಪವಾನ್ ॥ ೨೯ ॥

ಸಹದೇವಸ್ಯ ಧರ್ಮಾತ್ಮಾ ನದೀನ ಇತಿ ವಿಶ್ರುತಃ ।
ನದೀನಸ್ಯ ಜಯತ್ಸೇನೋ ಜಯತ್ಸೇನಸ್ಯ ಸಂಕೃತಿಃ ॥ ೩೦ ॥

ಸಂಕೃತೇರಪಿ ಧರ್ಮಾತ್ಮಾ ಕ್ಷತ್ರವೃದ್ಧೋ ಮಹಾಯಶಾಃ ।
ಅನೇನಸಃ ಸಮಾಖ್ಯಾತಾಃ ಕ್ಷತ್ರವೃದ್ಧಸ್ಯ ಚಾಪರಃ ॥ ೩೧ ॥

---

೨೭. ಲೋಮಹರ್ಷಣಮುಯು ಹೇಳಿದನು:–ಆಯುವಿನ ಮಿಕ್ಕ ಮಕ್ಕಳಲ್ಲಿ ರಂಭನಿಗೆ ಮಕ್ಕಳಿಲ್ಲವು. ಆ ಕಾರಣ ಅನೇನಸರಾಜನ ವಂಶವನ್ನು ಹೇಳುವೆನು. ಪ್ರತಿಕ್ಷತ್ರನೆಂಬ ಕೀರ್ತಿಶಾಲಿಯಾದರಾಜನು ಅನೇನಸನ ಮಗನು.

೨೮. ಪ್ರತಿಕ್ಷತ್ರನ ಮಗನು ಸಂಜಯನೆಂಬುವನು. ಆ ಸಂಜಯನ ಮಗನು ಜಯನು. ಆ ಜಯನ ಮಗನು ವಿಜಯನೆಂಬುವನು.

೨೯. ವಿಜಯನ ಮಗನು ಕೃತಿಯು, ಕೃತಿರಾಜನ ಮಗನು ಹರ್ಯತ್ವತನು ಹರ್ಯತ್ವರಾಜನ ಮಗನು ಪ್ರತಾಪಶಾಲಿಯಾದ ಸಹದೇವ ಮಹಾರಾಜನು.

೩೦. ಸಹದೇವನಿಗೆ ನದೀನನು ಮಗನು. ಧರ್ಮಾತ್ಮನಾದ ಆ ನದೀನನಿಗೆ ಜಯತ್ಸೇನನೆಂಬುವವನು ಪುತ್ರನು. ಜಯತ್ಸೇನನ ಮಗನು ಸಂಕೃತಿರಾಜನು.

೩೧. ಸಂಕೃತಿಯ ಮಗನು ಧರ್ಮಾತ್ಮನಾದ ಕ್ಷತ್ರವೃದ್ಧರಾಜನು. ಹೀಗೆ ಅನೇನಸನ ವಂಶವನ್ನು ಹೇಳಿಯಾಯಿತು. ಮುಂದೆ ಕೀರ್ತಿವಂತನಾದ ಕ್ಷತ್ರವೃದ್ಧನ ವಂಶವನ್ನು ಹೇಳುವೆನು ಕೇಳಿರಿ.

shrinath.udupa@gmail.com

ಕ್ಷತ್ರವೃದ್ಧಾತ್ಮಜಸ್ತತ್ರ ಸುನಹೋತ್ರೋ ಮಹಾಯಶಾಃ ।
ಸುನಹೋತ್ರಸ್ಯ ದಾಯಾದಾಸ್ತ್ರಯಃ ಪರಮಧಾರ್ಮಿಕಾಃ ॥ ೩೨ ॥

ಕಾಶಃ ಶಲಶ್ಚ ದ್ವಾವೇತೌ ತಥಾ ಗೃತ್ಸಮದಃ ಪ್ರಭುಃ ।
ಪುತ್ರೋ ಗೃತ್ಸಮದಸ್ಯಾಪಿ ಶುನಕೋ ಯಸ್ಯ ಶೌನಕಃ ॥ ೩೩ ॥

ಬ್ರಾಹ್ಮಣಾಃ ಕ್ಷತ್ರಿಯಾಶ್ಚೈವ ವೈಶ್ಯಾಃ ಶೂದ್ರಾಸ್ತಥೈವ ಚ ।
ಶಲಾತ್ಮಜ ಆರ್ಷ್ಟಿಸೇನಸ್ತನಯಸ್ತಸ್ಯ ಕಾಶ್ಯಪಃ ॥ ೩೪ ॥

ಕಾಶಸ್ಯ ಕಾಶಿಪೋ ರಾಜಾ ಪುತ್ರೋ ದೀರ್ಘತಪಾಸ್ತಥಾ ।
ಧನುಸ್ತು ದೀರ್ಘತಪಸೋ ವಿದ್ವಾನ್ ಧನ್ವಂತರಿಸ್ತತಃ ॥ ೩೫ ॥

ತಪಸೋಽಂತೇ ಸುಮಹತೋ ಜಾತೋ ವೃದ್ಧಸ್ಯ ಧೀಮತಃ ।
ಪುನರ್ಧನ್ವಂತರಿರ್ದೇವೋ ಮಾನುಷೇಷ್ವಿಹ ಜನ್ಮನಿ ॥ ೩೬ ॥

---

೩೨. ಕ್ಷತ್ರವೃದ್ಧನ ಮಗನು ಯಶಸ್ವಿಯಾದ ಸುನಹೋತ್ರನು. ಸುನಹೋತ್ರನಿಗೆ ಧಾರ್ಮಿಕರಾದ ಕೌಶ, ಶಲ, ಗೃತ್ಸಮದರೆಂಬ ಮೂರು ಜನರು ಮಕ್ಕಳು.

೩೩. ಗೃತ್ಸಮದನ ಮಗನು ಶುನಕನು. ಈ ಶುನಕನ ಗೋತ್ರದಲ್ಲಿ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ಬಹಳಮಂದಿ ಜನಿಸಿದರು.

೩೪. ಆರ್ಷ್ಟಿಸೇನನೆಂಬುವನು ಶಲನ ಮಗನು. ಆರ್ಷ್ಟಿಸೇನನ ಮಗನು ಕಾಶ್ಯಪನು. ಕಾಶ್ಯಪನ ಮಗನು ದೀರ್ಘತಪನು, ಅವನು ಕಾಶಿಯನ್ನಾಳುತ್ತಿದ್ದನು. ಮಹಾ ತಪಸ್ವಿಯಾಗಿದ್ದನು.

೩೫. ದೀರ್ಘತಪಸನ ಮಗನು ಧನುರಾಜನು. ಧನುವಿನ ಮಗನು ಆಯುರ್ವೇದ ವಿದ್ವಾಂಸನಾದ ಧನ್ವಂತರಿಯು, ಧನುರಾಜನು ಬಹುಕಾಲ ತಪಸ್ಸುಮಾಡಿ ವೃದ್ಧಾಪ್ಯದಲ್ಲಿ ಈ ಧನ್ವಂತರಿಯನ್ನು ಮಗನನ್ನಾಗಿ ಪಡೆದನು.

೩೬. ಧನ್ವಂತರೀದೇವನು ಧನುವಿನ ತಪಸ್ಸಿಗೆ ಮೆಚ್ಚಿ ಅವನ ಮನೆಯಲ್ಲಿ ಮನುಷ್ಯರೂಪದಿಂದ ಅವತರಿಸಿದನು.

shrinath.udupa@gmail.com

ತಸ್ಯ ಗೇಹೇ ಸಮುತ್ಪನ್ನೋ ದೇವೋ ಧನ್ವಂತರಿಸ್ತದಾ ।
ಕಾಶಿರಾಜೋ ಮಹಾರಾಜಃ ಸರ್ವರೋಗಪ್ರಣಾಶನಃ ॥ ೩೭ ॥

ಆಯುರ್ವೇದಂ ಭರದ್ವಾಜಾತ್ಪ್ರಾಪ್ಯೇಹ ಸ ಭಿಷಕ್ಕ್ರಿಯಃ ।
ತಮಷ್ಟಧಾ ಪುನರ್ವ್ಯಸ್ಯ ಶಿಷ್ಯೇಭ್ಯಃ ಪ್ರತ್ಯಪಾದಯತ್ ॥ ೩೮ ॥

ಧನ್ವಂತರೇಸ್ತು ತನಯಃ ಕೇತುಮಾನಿತಿ ವಿಶ್ರುತಃ ।
ಅಥ ಕೇತುಮತಃ ಪುತ್ರೋ ವೀರೋ ಭೀಮರಥಃ ಸ್ಮೃತಃ ॥ ೩೯ ॥

ಪುತ್ರೋ ಭೀಮರಥಸ್ಯಾಪಿ ದಿವೋದಾಸಃ ಪ್ರಜೇಶ್ವರಃ ।
ದಿವೋದಾಸಸ್ತು ಧರ್ಮಾತ್ಮಾ ವಾರಾಣಸ್ಯಧಿಪೋಽಭವತ್ ॥ ೪೦ ॥

ಏತಸ್ಮಿನ್ನೇವ ಕಾಲೇ ತು ಪುರೀಂ ವಾರಾಣಸೀಂ ದ್ವಿಜಾಃ ।
ಶೂನ್ಯಾಂ ನಿವೇಶಯಾಮಾಸ ಕ್ಷೇಮಕೋ ನಾಮ ರಾಕ್ಷಸಃ ॥ ೪೧ ॥

---

೩೭. ಆ ಧನ್ವಂತರಿಯು ಕಾಶಿರಾಜನಾಗಿದ್ದು ಭರದ್ವಾಜಮುನಿಯಿಂದ ಆಯುರ್ವೇದವನ್ನು ಅಭ್ಯಾಸಮಾಡಿ ಮಹಾರಾಜನಾಗಿದ್ದರೂ ಅವನು ಸಾಮಾನ್ಯವೈದ್ಯನಂತೆ ಕರುಣೆಯಿಂದ ಪ್ರಜೆಗಳ ರೋಗಗಳೆಲ್ಲವನ್ನೂ ನಾಶಮಾಡುತ್ತಿದ್ದನು.

೩೮. ಆಯುರ್ವೇದವನ್ನು ಧನ್ವತರಿಯು ಎಂಟುಭಾಗವಾಗಿ ಮಾಡಿ ಎಂಟು ಜನ ಶಿಷ್ಯರಿಗೆ ಉಪದೇಶಿಸಿದನು.

೩೯. ಧನ್ವಂತರಿಯ ಮಗನು ಕೇತುಮಾನ್ ಎಂಬುವವನು, ಕೇತುಮಂತನ ಮಗನು ವೀರನಾದ ಭೀಮರಥನೆಂಬುವವನು.

೪೦. ಭೀಮರಥನ ಮಗನು ದಿವೋದಾಸಮಹಾರಾಜನು, ಅವನು ತುಂಬಾ ಧರ್ಮಾತ್ಮನಾಗಿದ್ದು ಕಾಶಿಯಲ್ಲಿ ರಾಜ್ಯವಾಳುತ್ತಿದ್ದನು.

೪೧. ಇದೇ ಕಾಲದಲ್ಲಿ ಕಾಶಿಯನ್ನು ಕ್ಷೇಮಕನೆಂಬ ರಾಕ್ಷಸನು ಆಕ್ರಮಿಸಿ ಹಾಳುಮಾಡುತ್ತಿದ್ದನು.

shrinath.udupa@gmail.com

ಶಪ್ತಾ ಹಿ ಸಾ ಮತಿಮತಾ ನಿಕುಂಭೇನ ಮಹಾತ್ಮನಾ ।
ಶೂನ್ಯಾ ವರ್ಷಸಹಸ್ರಂ ವೈ ಭವಿತ್ರೀ ತು ನ ಸಂಶಯಃ ॥ ೪೨ ॥

ತಸ್ಯಾಂ ಹಿ ಶಪ್ತಮಾತ್ರಾಯಾಂ ದಿವೋದಾಸಃ ಪ್ರಜೇಶ್ವರಃ ।
ವಿಷಯಾಂತೇ ಪುರೀಂ ರಮ್ಯಾಂ ಗೋಮತ್ಯಾಂ ಸನ್ನ್ಯವೇಶಯತ್ ॥ ೪೩ ॥

ಭದ್ರಶ್ರೇಣ್ಯಸ್ಯ ಪೂರ್ವಂ ತು ಪುರೀ ವಾರಾಣಸೀ ಅಭೂತ್ ।
ಭದ್ರಶ್ರೇಣ್ಯಸ್ಯ ಪುತ್ರಾಣಾಂ ಶತಮುತ್ತಮಧನ್ವಿನಾಂ ॥ ೪೪ ॥

ಹತ್ವಾ ನಿವೇಶಯಾಮಾಸ ದಿವೋದಾಸೋ ನರಾಧಿಪಃ ।
ಭದ್ರಶ್ರೇಣ್ಯಸ್ಯ ತದ್ರಾಜ್ಯಂ ಹೃತಂ ಯೇನ ಬಲೀಯಸಾ ॥ ೪೫ ॥

ಭದ್ರಶ್ರೇಣ್ಯಸ್ಯ ಪುತ್ರಸ್ತು ದುರ್ದಮೋ ನಾಮ ವಿಶ್ರುತಃ ।
ದಿವೋದಾಸೇನ ಬಾಲೇತಿ ಘೃಣಯಾ ಸ ವಿಸರ್ಜಿತಃ ॥ ೪೬ ॥

ಹೈಹಯಸ್ಯ ತು ದಾಯಾದ್ಯಂ ಹೃತವಾನ್ ವೈ ಮಹೀಪತಿಃ ।
ಆಜಹ್ರೇ ಪಿತೃದಾಯಾದ್ಯಂ ದಿವೋದಾಸಹೃತಂ ಬಲಾತ್ ॥ ೪೭ ॥

---

೪೨. ಹಿಂದೆ ನಿಕುಂಭನೆಂಬ ತಪಸ್ವಿಯು ಕಾಶಿಯು ಸಾವಿರವರ್ಷಗಳವರೆಗೆ ಶೂನ್ಯವಾಗಿ ಹೋಗಲಿ ಎಂದು ಶಪಿಸಿದ್ದನು.

೪೩. ಹೀಗೆ ವಾರಾಣಸಿಗೆ ಶಾಪಬಂದಮೇಲೆ ದಿವೋದಾಸನು ರಾಜಧಾನಿಯನ್ನು ಬೇರೆದೇಶದ ಗೋಮತಿಯೆಂಬಲ್ಲಿ ರಮ್ಯವಾಗಿ ನಿರ್ಮಿಸಿದನು.

೪೪–೪೫. ಹಿಂದೆ ಭದ್ರಶ್ರೇಣ್ಯನೆಂಬ ರಾಜನು ಕಾಶಿಯನ್ನಾಳುತ್ತಿದ್ದನು. ಶೂರನಾದ ದಿವೋದಾಸನು ಭದ್ರಶ್ರೇಣ್ಯನ ನೂರುಮಂದಿ ಮಕ್ಕಳನ್ನು ಸಂಹರಿಸಿ ಕಾಶಿಯರಾಜ್ಯವನ್ನು ತನ್ನ ವಶಪಡಿಸಿಕೊಂಡನು.

೪೬. ಅಲ್ಲದೆ ಆ ಭದ್ರಶ್ರೇಣ್ಯನ ದುರ್ದಮನೆಂಬ ಮಗನನ್ನು ಬಾಲಕನೆಂದು ಕರುಣೆಯಿಂದ ಕೊಲ್ಲದೆ ಬಿಟ್ಟುಬಿಟ್ಟನು.

೪೭. ದುರ್ದಮನೆಂಬ ಆ ಬಾಲನು ಮುಂದೆ ಬೆಳೆದು ದೊಡ್ಡವನಾಗಿ ಹೈಹಯನ ರಾಜ್ಯವನ್ನು ದಿವೋದಾಸನು ಅಪಹರಿಸಿದ ತನ್ನ ತಂದೆಯ ರಾಜ್ಯವನ್ನು ಪರಾಕ್ರಮದಿಂದ ಆಕ್ರಮಿಸಿದನು.

shrinath.udupa@gmail.com

ಭದ್ರಶ್ರೇಣ್ಯಸ್ಯ ಪುತ್ರೇಣ ದುರ್ದಮೇನ ಮಹಾತ್ಮನಾ ।
ವೈರಸ್ಯಾಂತೋ ಮಹಾಭಾಗಾಃ ಕೃತಶ್ಚಾಽತ್ಮೀಯ ತೇಜಸಾ ॥ ೪೮ ॥

ದಿವೋದಾಸಾದ್ದೃಷದ್ವತ್ಯಾಂ ವೀರೋ ಜಜ್ಞೇ ಪ್ರತರ್ದನಃ ।
ತೇನ ಬಾಲೇನ ಪುತ್ರೇಣ ಪ್ರಹೃತಂ ತು ಪುನರ್ಬಲಂ ॥ ೪೯ ॥

ಪ್ರತರ್ದನಸ್ಯ ಪುತ್ರೌ ದ್ವೌ ವತ್ಸಭಾರ್ಗೌ ಸುವಿಶ್ರುತೌ ।
ವತ್ಸಪುತ್ರೋ ಹ್ಯಲರ್ಕಸ್ತು ಸಂನತಿಸ್ತಸ್ಯ ಚಾಽತ್ಮಜಃ ॥ ೫೦ ॥

ಅಲರ್ಕಸ್ತಸ್ಯ ಪುತ್ರಸ್ತು ಬ್ರಹ್ಮಣ್ಯಃ ಸತ್ಯಸಂಗರಃ
ಅಲರ್ಕಂ ಪ್ರತಿ ರಾಜರ್ಷಿ ಶ್ಲೋಕೋ ಗೀತಃ ಪುರಾತನೈಃ । ॥ ೫೧ ॥

ಷಷ್ಟಿವರ್ಷಸಹಸ್ರಾಣಿ ಷಷ್ಟಿವರ್ಷಶತಾನಿ ಚ ।
ಯುವಾ ರೂಪೇಣ ಸಂಪನ್ನಃ ಪ್ರಾಗಾಸೀಚ್ಚ ಕುಲೋದ್ವಹಃ ॥ ೫೨ ॥

೪೮. ಭದ್ರಶ್ರೇಣ್ಯನ ಮಗನಾದ ಮಹಾತ್ಮನಾದ ದುರ್ದಮನು ಹೀಗೆ ತನ್ನ ತೇಜಸ್ಸಿನಿಂದ ದಿವೋದಾಸನ ಮೇಲಿನ ವೈರವನ್ನು ತೀರಿಸಿಕೊಂಡನು.

೪೯. ದಿವೋದಾಸನಿಂದ ದೃಷದ್ವತೀದೇವಿಯಲ್ಲಿ ಜನಿಸಿದ್ಧ ವೀರನಾದ ಪ್ರತರ್ದನಕುಮಾರನು ದುರ್ದಮನ ರಾಜ್ಯವನ್ನಪಹರಿಸಿ ಅವನ ಮೇಲಿನ ಸೇಡನ್ನು ತೀರಿಸಿಕೊಂಡನು.

೫೦. ಪ್ರದರ್ತನಿಗೆ ವತ್ಸ ಭರ್ಗರೆಂಬೀರ್ವರು ಮಕ್ಕಳು. ವತ್ಸನ ಮಗನು ಅಲರ್ಕನು, ಅಲರ್ಕನ ಮಗನು ಸನ್ನತಿರಾಜನು.

೫೧. ವತ್ಸರಾಜನ ಮಗನಾದ ಅಲರ್ಕರಾಜನು, ಬ್ರಾಹ್ಮಣಪ್ರಿಯನೂ ಸತ್ಯವಂತನೂ ಆಗಿದ್ದು ರಾಜರ್ಷಿಯೆನಿಸಿಕೊಂಡಿದ್ದನು. ಈ ಅಲರ್ಕರಾಜನನ್ನು ಕುರಿತು ಹಿಂದಿನ ಋಷಿಗಳು ಹೀಗೆ ಹೇಳಿರುವರು.

೫೨. ಅರವತ್ತುಸಾವಿರದ ಆರುನೂರು (೬೦,೬೦೦) ವರ್ಷಗಳ ವರೆಗೆ ಅಲರ್ಕರಾಜನು ಯುವಕನೂ ಸುಂದರನೂ ಆಗಿದ್ದು ತನ್ನ ಸತ್ಕರ್ಮಗಳಿಂದ ಕುಲವನ್ನುದ್ಧಾರ ಮಾಡಿದನು.

shrinath.udupa@gmail.com

ಲೋಪಾಮುದ್ರಾಪ್ರಸಾದೇನ ಪರಮಾಯುರವಾಪ್ತವಾನ್ ।
ತಸ್ಯಾऽಸೀತ್ಸುಮಹದ್ರಾಜ್ಯಂ ರೂಪಯೌವನಶಾಲಿನಃ ॥ ೫೩ ॥

ಶಾಪಸ್ಯಾಂತೇ ಮಹಾಬಾಹುರ್ಹತ್ವಾ ಕ್ಷೇಮಕರಾಕ್ಷಸಂ ।
ರಮ್ಯಾಂ ನಿವೇಶಯಾಮಾಸ ಪುರೀಂ ವಾರಾಣಸೀಂ ಪುನಃ ॥ ೫೪ ॥

ಸಂನತೇರಪಿ ದಾಯಾದಃ ಸುನೀಥೋ ನಾಮ ಧಾರ್ಮಿಕಃ ।
ಸುನೀಥಸ್ಯ ತು ದಾಯಾದಃ ಕ್ಷೇಮೋ ನಾಮ ಮಹಾಯಶಾಃ ॥ ೫೫ ॥

ಕ್ಷೇಮಸ್ಯ ಕೇತುಮಾನ್ ಪುತ್ರಃ ಸುಕೇತುಸ್ತಸ್ಯ ಚಾऽತ್ಮಜಃ ।
ಸುಕೇತೋಸ್ತನಯಶ್ಚಾಪಿ ಧರ್ಮಕೇತುರಿತಿ ಸ್ಮೃತಃ ॥ ೫೬ ॥

ಧರ್ಮಕೇತೋಸ್ತು ದಾಯಾದಃ ಸತ್ಯಕೇತುರ್ಮಹಾರಥಃ ।
ಸತ್ಯಕೇತುಸುತಶ್ಚಾಪಿ ವಿಭುರ್ನಾಮ ಪ್ರಜೇಶ್ವರಃ ॥ ೫೭ ॥

---

೫೩. ಆ ಅಲರ್ಕನು ಪತಿವ್ರತೆಯಾದ ಲೋಪಾಮುದ್ರಾದೇವಿಯ ಅನುಗ್ರಹದಿಂದ ದೀರ್ಘಾಯುಸ್ಸನ್ನು ಪಡೆದನು. ಯುವಕನೂ ಸುಂದರನೂ ಆದನು. ಅವನ ರಾಜ್ಯವು ಬಹು ವಿಸ್ತಾರವಾಗಿತ್ತು.

೫೪. ನಿಕುಂಭಮುನಿಯ ಶಾಪವು ವಾರಾಣಸಿಗೆ ಕಳೆಯಲು ಈ ಅಲರ್ಕನು ಕ್ಷೇಮಕರಾಕ್ಷಸನನ್ನು ಕೊಂದು ವಾರಾಣಸಿಯನ್ನು ಪುನಃ ಸುಂದರವಾದ ನಗರಿಯನ್ನಾಗಿ ಮಾಡಿದನು.

೫೫. ಸನ್ನತಿಯ ಮಗನು ಧಾರ್ಮಿಕನಾದ ಸುನೀಥರಾಜನು. ಸುನೀಥನ ಮಗನು ಕೀರ್ತಿಶಾಲಿಯಾದ ಕ್ಷೇಮರಾಜನು.

೫೬. ಕ್ಷೇಮರಾಜನ ಮಗನು ಕೇತುಮಂತನು. ಕೇತುಮಂತನ ಪುತ್ರನು ಸುಕೇತುವು. ಸುಕೇತುರಾಜನ ಮಗನು ಧರ್ಮಕೇತುವು.

೫೭. ಧರ್ಮಕೇತುವಿನ ಮಗನು ಮಹಾರಥನಾದ ಸತ್ಯಕೇತುವು. ಸತ್ಯಕೇತುವಿನ ಮಗನು ವಿಭುರಾಜನು.

shrinath.udupa@gmail.com

ಆನರ್ತಸ್ತು ವಿಭೋಃ ಪುತ್ರಃ ಸುಕುಮಾರಶ್ಚ ತತ್ಸುತಃ ।
ಸುಕುಮಾರಸ್ಯ ಪುತ್ರಸ್ತು ಧೃಷ್ಟಕೇತುಃ ಸುಧಾರ್ಮಿಕಃ ॥ ೫೮ ॥

ಧೃಷ್ಟಕೇತೋಸ್ತು ದಾಯಾದೋ ವೇಣುಹೋತ್ರಃ ಪ್ರಜೇಶ್ವರಃ ।
ವೇಣುಹೋತ್ರಸುತಶ್ಚಾಪಿ ಭಾರ್ಗೋ ನಾಮ ಪ್ರಜೇಶ್ವರಃ ॥ ೫೯ ॥

ವತ್ಸಸ್ಯ ವತ್ಸಭೂಮಿಸ್ತು ಭಾರ್ಗಭೂಮಿಸ್ತು ಭಾರ್ಗಜಃ ।
ಏತೇ ತ್ವಂಗಿರಸಃ ಪುತ್ರಾ ಜಾತಾ ವಂಶೇಽಥ ಭಾರ್ಗವ ॥ ೬೦ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಸ್ತ್ರಯಃ ಪುತ್ರಾಃ ಸಹಸ್ರಶಃ ।
ಇತ್ಯೇತೇ ಕಾಶ್ಯಪಾಃ ಪ್ರೋಕ್ತಾ ನಹುಷಸ್ಯ ನಿಬೋಧತ ॥ ೬೧ ॥

ಇತಿ ಶ್ರೀಮಹಾಪುರಾಣೇ ಬ್ರಾಹ್ಮೇ ಸೋಮವಂಶೇ ವೃದ್ಧಕ್ಷತ್ರ-
ಪ್ರಸೂತಿನಿರೂಪಣಂ ನಾಮೈಕಾದಶೋಽಧ್ಯಾಯಃ

೫೮. ವಿಭುರಾಜನ ಮಗನು ಆನರ್ತನು. ಆನರ್ತನ ಮಗನು ಸುಕುಮಾರನು. ಸುಕುಮಾರನ ಮಗನು ಧಾರ್ಮಿಕನಾದ ಧೃಷ್ಟಕೇತುವು.

೫೯. ಧೃಷ್ಟಕೇತುವಿನ ಮಗನು ವೇಣುಹೋತ್ರನೆಂಬ ರಾಜನು. ವೇಣುಹೋತ್ರನ ಮಗನು ಭಾರ್ಗಮಹಾರಾಜನು.

೬೦. ಪ್ರತರ್ದನನ ಮಗನಾದ ವತ್ಸನಿಗೆ ವತ್ಸಭೂಮಿಯೆಂಬ ಮತ್ತೊಬ್ಬ ಪುತ್ರನಿದ್ದನು. ವೇಣುಹೋತ್ರನ ಮಗನಾದ ಭಾರ್ಗನ ಪುತ್ರನು ಭಾರ್ಗಭೂಮಿಯೆಂಬುವನು. ಇವರೆಲ್ಲರೂ ಪುರೂರವನ ವಂಶದವರು. ಈ ವಂಶದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ಜಾತಿಯ ಪ್ರಜೆಗಳೂ ಸಹಸ್ರಾರುಮಂದಿ ಜನಿಸಿದರು.

೬೧. ಹೀಗೆ ಕಾಶ್ಯಪವಂಶವನ್ನು ವರ್ಣಿಸಿರುವೆನು. ಮುಂದೆ ನಹುಷನ ವಂಶವನ್ನು ಹೇಳುವೆನು ಶ್ರದ್ಧೆಯಿಂದ ಕೇಳುವರಾಗಿರಿ.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಕ್ಷತ್ರಪ್ರಸೂತಿನಿರೂಪಣವೆಂಬ
ಹನ್ನೊಂದನೆಯ ಅಧ್ಯಾಯವು ಮುಗಿದುದು.

shrinath.udupa@gmail.com

॥ ಶ್ರೀಃ ॥

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ದ್ವಾದಶೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ಉತ್ಪನ್ನಾಃ ಪಿತೃಕನ್ಯಾಯಾಂ ವಿರಜಾಯಾಂ ಮಹೌಜಸಃ ।
ನಹುಷಸ್ಯ ತು ದಾಯಾದಾಃ ಷಡಿಂದ್ರೋಪಮತೇಜಸಃ ॥ ೧ ॥

ಯತಿರ್ಯಯಾತಿಃ ಸಂಯಾತಿರಾಯಾತಿಃ ಪಾರ್ಶ್ವಕೋಽಭವತ್ ।
ಯತಿರ್ಜ್ಯೇಷ್ಠಸ್ತು ತೇಷಾಂ ವೈ ಯಯಾತಿಸ್ತು ತತಃ ಪರಂ ॥ ೨ ॥

ಹನ್ನೆರಡನೆಯ ಅಧ್ಯಾಯವು

೧. ಲೋಮಹರ್ಷನು ಹೇಳಿದನು.—ಎಲೈ ಋಷಿಗಳೇ ನಹುಷಚಕ್ರವರ್ತಿಗೆ ಪಿತೃದೇವತೆಗಳ ಮಗಳಾದ ವಿರಜಾದೇವಿಯಲ್ಲಿ ಆರುಮಂದಿ ಇಂದ್ರನಂತೆ ತೇಜಸ್ವಿಗಳಾದ ಮಕ್ಕಳು ಜನಿಸಿದರು.

೨. ಯತಿ, ಯಯಾತಿ, ಸಂಯಾತಿ, ಆಯಾತಿ, ಪಾರ್ಶ್ವಕ ಈ ಐದು ಜನಗಳು ನಹುಷನ ಮಕ್ಕಳಲ್ಲಿ ಪ್ರಸಿದ್ಧರಾದವರು. ಯತಿಯು ಹಿರಿಯವನು, ಯಯಾತಿಯು ಎರಡನೆಯವನು.

shrinath.udupa@gmail.com

ಕಕುತ್ಸ್ಥಕನ್ಯಾಂ ಗಾಂ ನಾಮ ಲೇಭೇ ಪರಮಧಾರ್ಮಿಕಃ ।
ಯತಿಸ್ತು ಮೋಕ್ಷಮಾಸ್ಥಾಯ ಬ್ರಹ್ಮಭೂತೋಽಭವನ್ಮುನಿಃ ॥ ೩ ॥

ತೇಷಾಂ ಯಯಾತಿಃ ಪಂಚಾನಾಂ ವಿಜಿತ್ಯ ವಸುಧಾಮಿಮಾಂ ।
ದೇವಯಾನೀಮುಶನಸಃ ಸುತಾಂ ಭಾರ್ಯಾಮವಾಪ ಸಃ ॥ ೪ ॥

ಶರ್ಮಿಷ್ಠಾಮಾಸುರೀಂ ಚೈವ ತನಯಾಂ ವೃಷಪರ್ವಣಃ ।
ಯದುಂ ಚ ತುರ್ವಸುಂ ಚೈವ ದೇವಯಾನೀ ವ್ಯಜಾಯತ ॥ ೫ ॥

ದ್ರುಹ್ಯಂ ಚಾನುಂ ಚ ಪುರುಂ ಶರ್ಮಿಷ್ಠಾ ವಾರ್ಷಪರ್ವಣೀ ।
ತಸ್ಮೈ ಶಕ್ರೋ ದದೌ ಪ್ರೀತೋ ರಥಂ ಪರಮಭಾಸ್ವರಂ ॥ ೬ ॥

ಅಂಗದಂ ಕಾಂಚನಂ ದಿವ್ಯಂ ದಿವ್ಯೈಃ ಪರಮವಾಜಿಭಿಃ ।
ಯುಕ್ತಂ ಮನೋಜವೈಃ ಶುಭ್ರೈರ್ಯೇನ ಕಾರ್ಯಂ ಸಮುದ್ವಹನ್ ॥ ೭ ॥

೩. ಮಹಾ ಧಾರ್ಮಿಕನಾದ ಯತಿಯು ಕಕುತ್ಸ್ಥರಾಜನ ಮಗಳಾದ ಗೋದೇವಿಯನ್ನು ಮದುವೆಯಾಗಿದ್ದನು. ಕೊನೆಯಲ್ಲಿ ಆ ಯತಿಯು ವೈರಾಗ್ಯ ಹೊಂದಿ ಮುನಿಯಂತೆ ಬ್ರಹ್ಮಚಿಂತನೆಯನ್ನು ಮಾಡುತ್ತಾ ಮುಕ್ತಿಯನ್ನು ಪಡೆದು ಪರವಸ್ತುವಿನಲ್ಲಿ ಐಕ್ಯನಾದನು (ಸೇರಿಹೋದನು).

೪. ಮಿಕ್ಕ ಐದುಮಂದಿ ನಹುಷಪುತ್ರರಲ್ಲಿ ಯಯಾತಿಯು ತನ್ನ ಪರಾಕ್ರಮದಿಂದ ಜಗತ್ತೆಲ್ಲವನ್ನೂ ಜಯಿಸಿ ಚಕ್ರವರ್ತಿಯಾದನು. ಅವನು ಶುಕ್ರಾಚಾರ್ಯನ ಮಗಳಾದ ದೇವಯಾನಿಯನ್ನೂ, ರಾಕ್ಷಸರಾಜನಾದ ವೃಷಪರ್ವನ ಮಗಳಾದ ಶರ್ಮಿಷ್ಠಾದೇವಿಯನ್ನೂ ಮದುವೆಯಾದನು.

೫. ಈ ಇಬ್ಬರು ಹೆಂಡರಲ್ಲಿ ದೇವಯಾನಿಯು ಯದು ತುರ್ವಸುಗಳೆಂಬ ಮಕ್ಕಳೀರ್ವರನ್ನು ಹಡೆದಳು. ವೃಷಪರ್ವನ ಮಗಳಾದ ಶರ್ಮಿಷ್ಠೆಯು ದ್ರುಹ್ಯ, ಅನು, ಪೂರು ಈ ಮೂರುಮಂದಿ ಮಕ್ಕಳನ್ನು ಹಡೆದಳು.

೬-೭. ಆ ಯಯಾತಿಗೆ, ಇಂದ್ರನು ಪ್ರೀತಿಯಿಂದ ತುಂಬಾ ಪ್ರಭೆಯುಳ್ಳ ಮಹಾರಥವೊಂದನ್ನು ವೇಗವಾಗಿ ಹೋಗುವ ಬಿಳಿಯ ಜಾತಿಕುದುರೆಗಳೊಡನೆ ಕೊಟ್ಟನು ಮತ್ತು ಸುವರ್ಣದ ಭುಜಕೀರ್ತಿ (ತೋಳುಬಳೆ) ಯನ್ನೂ ಕೊಟ್ಟನು.

shrinath.udupa@gmail.com

ಸ ತೇನ ರಥಮುಖ್ಯೇನ ಷಡ್ರಾತ್ರೇಣಾಜಯನ್ಮಹೀಂ ।
ಯಯಾತಿರ್ಯುಧಿ ದುರ್ಧರ್ಷಸ್ತಥಾ ದೇವಾನ್ಸದಾನವಾನ್ ॥ ೮ ॥

ಸ ರಥಃ ಕೌರವಾಣಾಂ ತು ಸರ್ವೇಷಾಮಭವತ್ತದಾ ।
ಸಂವರ್ತವಸುನಾಮ್ನಸ್ತು ಕೌರವಾಜ್ಜನಮೇಜಯಾತ್ ॥ ೯ ॥

ಕುರೋಃ ಪುತ್ರಸ್ಯ ರಾಜೇಂದ್ರ ರಾಜ್ಞಃ ಪಾರೀಕ್ಷಿತಸ್ಯ ಹ ।
ಜಗಾಮ ಸ ರಥೋ ನಾಶಂ ಶಾಪಾದ್ಗರ್ಗಸ್ಯ ಧೀಮತಃ ॥ ೧೦ ॥

ಗರ್ಗಸ್ಯ ಹಿ ಸುತಂ ಬಾಲಂ ಸ ರಾಜಾ ಜನಮೇಜಯಃ ।
ಕಾಲೇನ ಹಿಂಸಯಾಮಾಸ ಬ್ರಹ್ಮಹತ್ಯಾಮವಾಪ ಸಃ ॥ ೧೧ ॥

ಸ ಲೋಹಗಂಧೀ ರಾಜರ್ಷಿಃ ಪರಿಧಾವನ್ನಿತಸ್ತತಃ ।
ಪೌರಜಾನಪದೈಸ್ತ್ಯಕ್ತೋ ನ ಲೇಭೇ ಶರ್ಮ ಕರ್ಹಿಚಿತ್ ॥ ೧೨ ॥

---

೮. ಯಯಾತಿಯು ಆ ಮಹಾರಥದಿಂದ ಆರುದಿನಗಳಲ್ಲೇ ಭೂಮಿಯೆಲ್ಲವನ್ನೂ ಜಯಿಸಿದನು ಮತ್ತು ದೇವತೆಗಳನ್ನೂ ರಾಕ್ಷಸರನ್ನೂ ಜಯಿಸಿದನು.

೯–೧೦. ಆ ರಥವು ಕುರುವಂಶದ ರಾಜರಿಗೆಲ್ಲರಿಗೂ ಇದ್ದಿತು. ಕೊನೆಯಲ್ಲಿ ಪರೀಕ್ಷಿತಚಕ್ರವರ್ತಿಯ ಮಗನಾದ ಸಂವರ್ತವಸುವೆಂದು ಹೆಸರುಳ್ಳ ಜನಮೇಜಯ ರಾಜನ ಕಾಲದಲ್ಲಿ ತಪಸ್ವಿಯಾದ ಗರ್ಗಮುನಿಯ ಶಾಪದಿಂದ ಆ ರಥವು ಕೌರವರ ಕೈಯಿಂದ ತಪ್ಪಿ ಬೇರೆಯವರ ಕೈಗೆ ಸೇರಿತು.

೧೧. ಗರ್ಗಮುನಿಯ ಪುತ್ರನಾದ ಬಾಲಕನನ್ನು ಆ ಜನಮೇಜಯರಾಜನು ಕಾಲವಶದಿಂದ ಕೊಂದನು. ಆದರಿಂದ ಆರಾಜನಿಗೆ ಬ್ರಹ್ಮಹತ್ಯೆಯು ಬಂದಿತು.

೧೨. ಬ್ರಹ್ಮಹತ್ಯೆಯನ್ನು ಮಾಡಿದ ಆ ರಾಜನನ್ನು ಪ್ರಜೆಗಳೆಲ್ಲರೂ ಬಿಟ್ಟುಬಿಟ್ಟರು. ಆ ರಾಜನು ಬಹ್ಮಹತ್ಯೆಯಿಂದ ಪೀಡಿಸಲ್ಪಟ್ಟವನಾಗಿ ಊರೂರುಗಳನ್ನೂ ಕಾಡುಮೇಡುಗಳನ್ನೂ ಅಲೆದನು. ಅವನಿಗೆ ಎಲ್ಲಿಯೂ ಶಾಂತಿ ಸಿಗಲಿಲ್ಲ.

shrinath.udupa@gmail.com

ತತಃ ಸ ದುಃಖಸಂತಪ್ತೋ ನಾಲಭತ್ಸಂವಿದಂ ಕ್ವಚಿತ್ ।
ವಿಪ್ರೇಂದ್ರಂ ಶೌನಕಂ ರಾಜಾ ಶರಣಂ ಪ್ರತ್ಯಪದ್ಯತ ॥ ೧೩ ॥

ಯಾಜಯಾಮಾಸ ಚ ಜ್ಞಾನೀ ಶೌನಕೋ ಜನಮೇಜಯಂ ।
ಅಶ್ವಮೇಧೇನ ರಾಜಾನಂ ಪಾವನಾರ್ಥಂ ದ್ವಿಜೋತ್ತಮಾಃ ॥ ೧೪ ॥

ಸ ಲೋಹಗಂಧೋ ವ್ಯನಶತ್ತಸ್ಯಾವಭೃಥಮೇತ್ಯ ಹ ।
ಸ ಚ ದಿವ್ಯರಥೋ ರಾಜ್ಞೋ ವಶಶ್ಚೇದಿಪತೇಸ್ತದಾ ॥ ೧೫ ॥

ದತ್ತಃ ಶಕ್ರೇಣ ತುಷ್ಟೇನ ಲೇಭೇ ತಸ್ಮಾದ್‌ಬೃಹದ್ರಥಃ ।
ಬೃಹದ್ರಥಾತ್ಕ್ರಮೇಣೈವ ಗತೋ ಬಾರ್ಹದ್ರಥಂ ನೃಪಂ ॥ ೧೬ ॥

ತತೋ ಹತ್ವಾ ಜರಾಸಂಧಂ ಭೀಮಸ್ತಂ ರಥಮುತ್ತಮಂ ।
ಪ್ರದದೌ ವಾಸುದೇವಾಯ ಪ್ರೀತ್ಯಾ ಕೌರವನಂದನಃ ॥ ೧೭ ॥

---

೧೩. ಹೀಗೆ ಎಲ್ಲಿಯೂ ಶಾಂತಿಯು ಸಿಕ್ಕದೆ ಬಳಲಿ ಬೆಂಡಾಗಿ ಆ ಜನಮೇಜಯನು ಕೊನೆಯಲ್ಲಿ ಶೌನಕಮುನೀಂದ್ರನನ್ನು ಶರಣುಹೊಂದಿದನು.

೧೪. ಜ್ಞಾನಿಯಾದ ಶೌನಕಮುನಿಯು ಆ ರಾಜನಿಗೆ ಬ್ರಹ್ಮಹತ್ಯೆಯಿಂದ ಬಿಡುಗಡೆಯಾಗಲೋಸುಗ ಅಶ್ವಮೇಧಯಾಗವನ್ನು ಮಾಡಿಸಿದನು.

೧೫. ಯಜ್ಞವನ್ನು ಮುಗಿಸಿ ಅವಭೃಥಸ್ನಾನವನ್ನು ಮಾಡಿದೊಡನೆಯೇ ಅದರ ಜೊತೆಯಲ್ಲಿಯೆ ಆ ಲೋಹಗಂಧ (ಬ್ರಹ್ಮಹತ್ಯೆಯ ಗುರುತು ಲೋಹದ ವಾಸನೆ ಅಥವಾ ತೊನ್ನು (ಕುಷ್ಠರೋಗ) ವು ನಾಶವಾಯಿತು. (ಇಲ್ಲಿನ ಪರೀಕ್ಷಿತ ಜನಮೇಜಯರು ಕೌರವಪಾಂಡುವರಿಗಿಂತಲೂ ಹಿಂದಿನವರು ಎಂದು ತಿಳಿಯಬೇಕು).

೧೬. ಅಷ್ಟರಲ್ಲಿ ಆ ದಿವ್ಯರಥವನ್ನು ಇಂದ್ರನು ಚೇದಿರಾಜನಿಗೆ ಕೊಟ್ಟಿದ್ದನು. ಆ ರಥವನ್ನು ಹೊಂದಿದ ಕಾರಣ ರಾಜನಿಗೆ ಬೃಹದ್ರಥ ಎಂಬ ಹೆಸರು ಬಂದಿತು. ಬೃಹದ್ರಥನ ನಂತರ ಅವನ ಮಗನಾದ ಜರಾಸಂಧನಿಗೆ ಆ ರಥವು ಲಭಿಸಿತು.

೧೭. ಆಮೇಲೆ ಭೀಮಸೇನನು ಜರಾಸಂಧನನ್ನುಕೊಂದು ಆ ದಿವ್ಯರಥವನ್ನು ಶ್ರೀಕೃಷ್ಣನಿಗೆ ಅರ್ಪಿಸಿದನು.

shrinath.udupa@gmail.com

ಸಪ್ತದ್ವೀಪಾಂ ಯಯಾತಿಸ್ತು ಜಿತ್ವಾ ಪೃಥ್ವೀಂ ಸಸಾಗರಾಂ ।
ವಿಭಜ್ಯ ಪಂಚಧಾ ರಾಜ್ಯಂ ಪುತ್ರಾಣಾಂ ನಾಹುಷಸ್ತದಾ । ॥ ೧೮ ॥

ಯಯಾತಿರ್ದಿಶಿ ಪೂರ್ವಸ್ಯಾಂ ಯದುಂ ಜ್ಯೇಷ್ಠಂ ನ್ಯಯೋಜಯತ್ ।
ಮಧ್ಯೇ ಪುರುಂ ಚ ರಾಜಾನಮಭ್ಯಷಿಂಚತ್ಸ ನಾಹುಷಃ ॥ ೧೯ ॥

ದಿಶಿ ದಕ್ಷಿಣಪೂರ್ವಸ್ಯಾಂ ತುರ್ವಸುಂ ಮತಿಮಾನ್ನೃಪಃ ।
ತೈರಿಯಂ ಪೃಥಿವೀ ಸರ್ವಾ ಸಪ್ತದ್ವೀಪಾ ಸಪತ್ತನಾ ॥ ೨೦ ॥

ಯಥಾಪ್ರದೇಶಮದ್ಯಾಪಿ ಧರ್ಮೇಣ ಪ್ರತಿಪಾಲ್ಯತೇ ।
ಪ್ರಜಾಸ್ತೇಷಾಂ ಪುರಸ್ತಾತ್ತು ವಕ್ಷ್ಯಾಮಿ ಮುನಿಸತ್ತಮಾಃ ॥ ೨೧ ॥

ಧನುರ್ನ್ಯಸ್ಯ ಪೃಷತ್ಕಾಂಶ್ಚ ಪಂಚಭಿಃ ಪುರುಷರ್ಷಭೈಃ ।
ಜರಾವಾನಭವದ್ರಾಜಾ ಭಾರಮಾವೇಶ್ಯ ಬಂಧುಷು ॥ ೨೨ ॥

ನಿಕ್ಷಿಪ್ತಶಸ್ತ್ರಃ ಪೃಥಿವೀಂ ಚಚಾರ ಪೃಥಿವೀಪತಿಃ ।
ಪ್ರೀತಿಮಾನಭವದ್ರಾಜಾ ಯಯಾತಿರಪರಾಜಿತಃ ॥ ೨೩ ॥

---

೧೮. ಏಳುದ್ವೀಪಗಳನ್ನೂ ನಾಲ್ಕು ಸಮುದ್ರಗಳನ್ನೂ ಒಳಗೊಂಡ ಭೂಮಿಯನ್ನು ಜಯಿಸಿ ಆ ಯಯಾತಿಯು ರಾಜ್ಯವನ್ನು ಐದುಭಾಗವಾಗಿ ಮಾಡಿ ತನ್ನ ಐದುಮಕ್ಕಳಲ್ಲಿ ಒಂದೊಂದು ಭಾಗದಲ್ಲಿ ಒಬ್ಬೊಬ್ಬರನ್ನು ರಾಜರನ್ನಾಗಿ ಮಾಡಿದನು.

೧೯. ಪೂರ್ವದಿಕ್ಕಿನಲ್ಲಿ ಹಿರಿಯವನಾದ ಯದುಕುಮಾರನನ್ನೂ, ಮಧ್ಯದಲ್ಲಿ ಪೂರುವನ್ನೂ ರಾಜನನ್ನಾಗಿ ಮಾಡಿದನು.

೨೦-೨೧. ತುರ್ವಸುವನ್ನು ಆಗ್ನೇಯದಿಕ್ಕಿನಲ್ಲಿ ರಾಜನನ್ನಾಗಿ ನಿಯಮಿಸಿದನು ಮಿಕ್ಕಮಕ್ಕಳನ್ನು ಮಿಕ್ಕ ದಿಕ್ಕುಗಳಲ್ಲಿ ನಿಯಮಿಸಿದನು. ಆ ಯಯಾತಿಯ ಮಕ್ಕಳ ವಂಶದವರು ಈಗಲೂ ಆಯಾಯ ದಿಕ್ಕು ಗಳಲ್ಲಿ ರಾಜ್ಯವನ್ನು ಧರ್ಮದಿಂದ ಆಳುತ್ತಲಿರುವರು. ಆ ಯಯಾತಿಯ ಪುತ್ರರ ಸಂತತಿಯನ್ನು ಮುಂದೆ ಹೇಳುತ್ತೇನೆ.

೨೨-೨೩. ಮುಂದೆ ಯಯಾತಿಯು ಮುದುಕನಾಗಲು ರಾಜ್ಯಭಾರವನ್ನು ತನ್ನೈದು ಮಕ್ಕಳ ವಶಕ್ಕೆ ಬಿಟ್ಟು ತಾನು ಧನುರ್ಬಾಣಗಳನ್ನು ಕೆಳಗಿರಿಸಿ ಕಾಮಸುಖವನ್ನನುಭವಿಸುವ ಇಚ್ಛೆಯುಳ್ಳವನಾಗಿ ಭೂಮಿಯನ್ನು ಸಂಚರಿಸಿದನು.

shrinath.udupa@gmail.com

ಏವಂ ವಿಭಜ್ಯ ಪೃಥಿವೀಂ ಯಯಾತಿರ್ಯದುಮಬ್ರವೀತ್ ।
ಜರಾಂ ಮೇ ಪ್ರತಿಗೃಹ್ಣೀಷ್ವ ಪುತ್ರ ಕೃತ್ಯಾಂತರೇಣ ವೈ ॥ ೨೪ ॥

ತರುಣಸ್ತ್ವದ್ರೂಪೇಣ ಚರೇಯಂ ಪೃಥಿವೀಮಿಮಾಂ ।
ಜರಾಂ ತ್ವಯಿ ಸಮಾಧಾಯ ತಂ ಯದುಃ ಪ್ರತ್ಯುವಾಚ ಹ ॥ ೨೫ ॥

॥ ಯದುರುವಾಚ ॥

ಅನಿರ್ದಿಷ್ಟಾ ಮಯಾ ಭಿಕ್ಷಾ ಬ್ರಾಹ್ಮಣಸ್ಯ ಪ್ರತಿಶ್ರುತಾ ।
ಅನಪಾಕೃತ್ಯ ತಾಂ ರಾಜನ್ನ ಗ್ರಹೀಷ್ಯಾಮಿ ತೇ ಜರಾಂ ॥ ೨೬ ॥

ಜರಾಯಾಂ ಬಹವೋ ದೋಷಾಃ ಪಾನಭೋಜನಕಾರಿತಾಃ ।
ತಸ್ಮಾಜ್ಜರಾಂ ನ ತೇ ರಾಜನ್ಗ್ರಹೀತುಮಹಮುತ್ಸಹೇ ॥ ೨೭ ॥

ಸಂತಿ ತೇ ಬಹವಃ ಪುತ್ರಾ ಮತ್ತಃ ಪ್ರಿಯತರಾ ನೃಪ ।
ಪ್ರತಿಗ್ರಹೀತುಂ ಧರ್ಮಜ್ಞ ಪುತ್ರಮನ್ಯಂ ವೃಣೀಷ್ವ ವೈ ॥ ೨೮ ॥

೨೪-೨೫. ಹೀಗೆ ರಾಜ್ಯವನ್ನು ಮಕ್ಕಳಿಗೆ ಪಾಲುಮಾಡಿಕೊಟ್ಟಮೇಲೆ ಯಯಾತಿಯು ಯದುವನ್ನು ಕುರಿತು—ಎಲೈ ಕುಮಾರ ನೀನು ನನ್ನ ರಾಜ್ಯವನ್ನು ತೆಗೆದುಕೊಂಡಿರುವಂತೆ ಈ ನನ್ನ ಜರೆ [ಮುಪ್ಪು] ಯನ್ನೂ ತೆಗೆದುಕೋ. ನಿನ್ನ ತಾರುಣ್ಯವನ್ನು ನನಗೆ ಕೊಡು, ನಾನು ತರುಣನಾಗಿ ರಾಜ್ಯವನ್ನಾಳುವೆನು ಎಂದು ಹೇಳಿದನು. ಆಗ ಯದುವು

೨೬. ಓ ರಾಜನೇ ನಾನು ಭಿಕ್ಷೆಯನ್ನು ಬೇಡಲುಬಂದ ಬ್ರಾಹ್ಮಣನೊಬ್ಬನಿಗೆ ನೀನು ಕೇಳಿದ್ದನ್ನು ಕೊಡುವೆನೆಂದು ಪ್ರತಿಜ್ಞೆಯನ್ನು ಮಾಡಿರುವೆನು. ಈಗ ನಿನಗೆ ತಾರುಣ್ಯವನ್ನು ದಾನಮಾಡಿ ವೃದ್ಧಾಪ್ಯವನ್ನು ತೆಗೆದುಕೊಂಡು ಆ ನನ್ನ ಪ್ರತಿಜ್ಞೆಯನ್ನು ಮುರಿಯಲಾರೆನು.

೨೭. ಓ ರಾಜನೇ ಮುಪ್ಪಿನಲ್ಲಿ ಬಹಳ ದೋಷಗಳಿರುವುವು. ಪಾನ, ಊಟ ಮುಂತಾದುವುಗಳನ್ನು ಸರಿಯಾಗಿ ಮಾಡಲಾಗುವುದಿಲ್ಲ. ಆದುದರಿಂದ ನಿನ್ನ ಜರೆಯನ್ನು ನಾನು ತೆಗೆದುಕೊಳ್ಳಲಾರೆನು.

೨೮. ನನಗಿಂತಲೂ ಪ್ರಿಯರಾದ ಮಕ್ಕಳು ನಿನಗೆ ಬಹುಮಂದಿ ಇರುವರು. ಅವರನ್ನು ಕೇಳು, ಅವರಲ್ಲಿ ಯಾರಾದರೂ ನಿನ್ನ ಮುಪ್ಪನ್ನು ತೆಗೆದುಕೊಳ್ಳಬಹುದು ಎಂದನು.

shrinath.udupa@gmail.com

ಸ ಏವಮುಕ್ತೋ ಯದುನಾ ರಾಜಾ ಕೋಪಸಮನ್ವಿತಃ ।
ಉವಾಚ ವದತಾಂ ಶ್ರೇಷ್ಠೋ ಯಯಾತಿರ್ಗರ್ಹಯನ್ಸುತಂ ॥ ೨೯ ॥

॥ ಯಯಾತಿರುವಾಚ ॥

ಕ ಆಶ್ರಮಸ್ತವಾನ್ಯೋಽಸ್ತಿ ಕೋ ವಾ ಧರ್ಮೋ ವಿಧೀಯತೇ ।
ಮಾಮನಾದೃತ್ಯ ದುರ್ಬುದ್ಧೇ ಯದಹಂ ತವ ದೇಶಿಕಃ ॥ ೩೦ ॥

ಏವಮುಕ್ತ್ವಾ ಯದುಂ ವಿಪ್ರಾಃ ಶಶಾಪೈನಂ ಸ ಮನ್ಯುಮಾನ್ ।
ಅರಾಜ್ಯಾ ತೇ ಪ್ರಜಾ ಮೂಢ ಭವಿತ್ರೀತಿ ನ ಸಂಶಯಃ ॥ ೩೧ ॥

ದ್ರುಹ್ಯಂ ಚ ತುರ್ವಸುಂ ಚೈವಾಪ್ಯನುಂ ಚ ದ್ವಿಜಸತ್ತಮಾಃ ।
ಏವಮೇವಾಬ್ರವೀದ್ರಾಜಾ ಪ್ರತ್ಯಾಖ್ಯಾತಶ್ಚ ತೈರಪಿ ॥ ೩೨ ॥

ಶಶಾಪ ತಾನತಿಕ್ರುದ್ಧೋ ಯಯಾತಿರಪರಾಜಿತಃ ।
ಯಥಾವತ್ಕಥಿತಂ ಸರ್ವಂ ಮಯಾಽಸ್ಯ ದ್ವಿಜಸತ್ತಮಾಃ ॥ ೩೩ ॥

---

೨೯. ಹೀಗೆ ಯದುವು ಹೇಳಲು, ಯಯಾತಿಯು ಕೋಪಗೊಂಡವನಾಗಿ ಅವನನ್ನು ನಿಂದಿಸುತ್ತಾ

೩೦. ಎಲೈ ದುಷ್ಟ, ನಾನು ನಿನಗೆ ಪೂಜ್ಯನಲ್ಲವೇ ? ಇಂತಹ ನನ್ನನ್ನು ತಿರಸ್ಕರಿಸುವ ನಿನಗೆ ಯಾವ ಆಶ್ರಮವು ಇರುವುದು ? ನಿನಗೆಂತಹ ಧರ್ಮವು ? ನಿನ್ನಂತಹವನಿಗೆ ಪ್ರತಿಷ್ಠೆಯೆಲ್ಲಿಯದು ?

೩೧. ಹೀಗೆ ಹೇಳಿ ಯಯಾತಿಯು—ಎಲೈ ಮೂಢ ನಿನ್ನ ಮಕ್ಕಳಿಗೆ ರಾಜ್ಯವು ಲಭಿಸದೆ ಹೋಗಲಿ ಎಂದು ಶಪಿಸಿದನು.

೩೨. ಆಮೇಲೆ ದ್ರುಹ್ಯ, ತುರ್ವಸು, ಅನು ಈ ಮೂರುಮಂದಿ ತನ್ನ ಮಕ್ಕಳನ್ನೂ ಹಿಂದಿನಂತೆ ತನ್ನ ಜರೆಯನ್ನು ತೆಗೆದುಕೊಂಡು ನಿಮ್ಮ ತಾರುಣ್ಯವನ್ನು ನನಗೆ ಕೊಡಿ ಎಂದು ಯಯಾತಿಯು ಕೇಳಿದನು. ಅವರೂ ಯದುವಿನಂತೆ ತಿರಸ್ಕರಿಸಿದರು.

೩೩. ಆ ದ್ರುಹ್ಯು ಮೊದಲಾದವರನ್ನೂ ನಿಮ್ಮ ಮಕ್ಕಳಿಗೆ ರಾಜ್ಯವು ಲಭಿಲದೇ ಹೋಗಲಿ ಎಂದು ಶಪಿಸಿದನು. ಎಲೈ ಬ್ರಾಹ್ಮಣೋತ್ತಮರೇ ಯಯಾತಿಯ ಈ ವೃತ್ತಾಂತವನ್ನು ನಡೆದಂತೆಯೇ ಹೇಳುತ್ತಿರುವೆನು, ಇದರಲ್ಲಿ ಸ್ವಲ್ಪವೂ ಅತ್ಯುಕ್ತಿ ಇರುವುದಿಲ್ಲ.

shrinath.udupa@gmail.com

ಏವಂ ಶಪ್ತ್ವಾ ಸುತಾನ್ಸರ್ವಾಂಶ್ಚತುರಃ ಪುರುಪೂರ್ವಜಾನ್ ।
ತದೇವ ವಚನಂ ರಾಜಾ ಪುರುಮಪ್ಯಾಹ ಭೋ ದ್ವಿಜಾಃ ॥ ೩೪ ॥

ತರುಣಸ್ತವ ರೂಪೇಣ ಚರೇಯಂ ಪೃಥಿವೀಮಿಮಾಂ ।
ಜರಾಂ ತ್ವಯಿ ಸಮಾಧಾಯ ತ್ವಂ ಪುರೋ ಯದಿ ಮನ್ಯಸೇ ॥ ೩೫ ॥

ಸ ಜರಾಂ ಪ್ರತಿಜಗ್ರಾಹ ಪಿತುಃ ಪುರುಃ ಪ್ರತಾಪವಾನ್ ।
ಯಯಾತಿರಪಿ ರೂಪೇಣ ಪುರೋಃ ಪರ್ಯಚರನ್ಮಹೀಂ ॥ ೩೬ ॥

ಸ ಮಾರ್ಗಮಾಣಃ ಕಾಮಾನಾಮಂತಂ ನೃಪತಿಸತ್ತಮಃ ।
ವಿಶ್ವಾಚ್ಯಾ ಸಹಿತೋ ರೇಮೇ ವನೇ ಚೈತ್ರರಥೇ ಪ್ರಭುಃ ॥ ೩೭ ॥

ಯದಾ ನ ತೃಪ್ತಃ ಕಾಮೇಷು ಭೋಗೇಷು ಚ ನರಾಧಿಪಃ ।
ತದಾ ಪುರೋಃ ಸಕಾಶಾದ್ವೈ ಸ್ವಾಂ ಜರಾಂ ಪ್ರತ್ಯಪದ್ಯತ ॥ ೩೮ ॥

---

೩೪. ಹೀಗೆ ಯದುಮೊದಲಾದವರನ್ನು ಶಪಿಸಿ ಯಯಾತಿಯು ಆಮೇಲೆ ಪೂರುಕುಮಾರನನ್ನು ಕುರಿತು ಕೇಳಿದನು.

೩೫. ಎಲೈ ಪೂರುಕುಮಾರ ನೀನು ಒಪ್ಪುವಿಯಾದರೆ ನಿನ್ನ ತಾರುಣ್ಯವನ್ನು ತೆಗೆದುಕೊಂಡು ನನ್ನ ವೃದ್ಧಾಪ್ಯವನ್ನು ನಿನಗೆ ಕೊಟ್ಟು ನಾನು ರಾಜ್ಯವಾಳುವೆನು.

೩೬. ಆ ಪೂರುವು ಯಯಾತಿಯ ವೃದ್ಧಾಪ್ಯವನ್ನು ತೆಗೆದುಕೊಂಡನು. ಯಯಾತಿಯು ಪೂರುವಿನ ತಾರುಣ್ಯವನ್ನು ತೆಗೆದುಕೊಂಡು ಭೂಮಿಯನ್ನು ಆಳಿದನು.

೩೭. ಆ ಯಯಾತಿಯು ಇಂದ್ರಸುಖವನ್ನು ಸಂಪೂರ್ಣವಾಗಿ ಅನುಭವಿಸಬೇಕೆಂದು ಬಗೆದು ವಿಶ್ವಾಚಿ ಎಂಬ ಅಪ್ಸರೆಯೊಡನೆ ಚೈತ್ರರಥವನದಲ್ಲಿ ಬಹುಕಾಲ ವಿಹರಿಸಿದನು.

೩೮. ಅವನು ಎಷ್ಟು ವರ್ಷಗಳು ಭೋಗವನ್ನನುಭವಿಸಿದರೂ ಆಸೆಯು ಕಮ್ಮಿಯಾಗಲಿಲ್ಲ. ತೃಪ್ತಿಯು ಬರಲಿಲ್ಲ. ಆಗ ಅವನು ಬೇಸರಗೊಂಡು ತನ್ನ ಜರೆಯನ್ನು ಪೂರುವಿನಿಂದ ತೆಗೆದುಕೊಂಡನು.

shrinath.udupa@gmail.com

ಯತ್ರ ಗಾಥಾ ಮುನಿಶ್ರೇಷ್ಠಾ ಗೀತಾಃ ಕಿಲ ಯಯಾತಿನಾ ।
ಯಾಭಿಃ ಪ್ರತ್ಯಾಹರೇತ್ಕಾಮಾನ್ಸರ್ವಶೋಽಂಗಾನಿ ಕೂರ್ಮವತ್ ॥ ೩೯ ॥

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥ ೪೦ ॥

ಯತ್ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯಃ ।
ನಾಲಮೇಕಸ್ಯ ತತ್ಸರ್ವಮಿತಿ ಕೃತ್ವಾ ನ ಮುಹ್ಯತಿ ॥ ೪೧ ॥

ಯದಾ ಭಾವಂ ನ ಕುರುತೇ ಸರ್ವಭೂತೇಷು ಪಾಪಕಂ ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಂಪದ್ಯತೇ ತದಾ ॥ ೪೨ ॥

---

೩೯. ಸಾವಿರಾರು ವರ್ಷಗಳವರೆಗೆ ವಿಷಯಸುಖವನ್ನನುಭವಿಸಿದ ಆ ಯಯಾತಿಯು ಹೀಗೆ ಹೇಳಿರುವನು. ಯಾವ ಮಾತುಗಳನ್ನು ಕೇಳಿದ ಮಾತ್ರದಿಂದ ಆಪತ್ತು ಬಂದಾಗ ಆಮೆಯು ತನ್ನ ಅಂಗಗಳನ್ನು ಒಳಗೆ ತೆಗೆದುಕೊಳ್ಳುವಂತೆ ಮನುಷ್ಯನು ಇಂದ್ರಿಯಗಳನ್ನು ವಿಷಯಸುಖಗಳೆಡೆಗೆ ಬಿಡದೆ ಒಳಗೆ [ಆತ್ಮವಸುವಿನೆಡೆಗೆ] ಎಳೆದು ಕೊಳ್ಳುವನೋ.

೪೦. ಸುಖವಸ್ತುಗಳನ್ನನುಭವಿಸುವುದರಿಂದ ಭೋಗಪಡುವ ಆಶೆಯು ಕಮ್ಮಿಯಾಗುವುದಿಲ್ಲ. ತುಪ್ಪವನ್ನು ಹಾಕಿದರೆ ಬೆಂಕಿಯು ಮತ್ತಷ್ಟು ಹೆಚ್ಚಾಗಿ ಉರಿಯುವಂತೆ ಸುಖಾನುಭವದಿಂದ ಈ ಲೋಕದ ಸುಖಾನುಭವದಲ್ಲಿನ ಆಸೆಯು ಮತ್ತಷ್ಟು ಹೆಚ್ಚಾಗುವುದು.

೪೧. ಭೂಮಿಯಲ್ಲಿರುವ ದವಸಧಾನ್ಯಗಳು, ಸುವರ್ಣ, ಪಶುಗಳು ಸ್ತ್ರೀಯರು ಇದೆಲ್ಲವೂ ಒಬ್ಬನ ಆಸೆಯನ್ನೂ ಸಹ ತೀರಿಸಲು ಸಾಲದು, ಹೀಗೆಂದು ತಿಳಿದುಕೊಂಡವನು ಲೋಕದ ಸುಖಗಳಿಗೆ ಬೆರಗಾಗಲಾರನು.

೪೨. ಯಾವುದೊಂದು ಪ್ರಾಣಿಯಲ್ಲಿಯೂ ಸಹ ಶರೀರ, ಮನಸ್ಸು, ವಾಕ್ಕು, ಈ ಮೂರು ಕಾರಣಗಳಿಂದಲೂ ಪಾಪವನ್ನಾಚರಿಸಲಾರದವನು ಜಾಗ್ರತೆಯಾಗಿ ಮುಕ್ತಿಯನ್ನು ಹೊಂದುವನು, ಅಂದರೆ ಬ್ರಹ್ಮಸ್ವರೂಪನಾಗುವನು.

shrinath.udupa@gmail.com

ಯದಾ ತೇಭ್ಯೋ ನ ಬಿಭೇತಿ ಯದಾ ಚಾಸ್ಮಾನ್ನ ಬಿಭ್ಯತಿ ।
ಯದಾ ನೇಚ್ಛತಿ ನ ದ್ವೇಷ್ಟಿ ಬ್ರಹ್ಮ ಸಂಪದ್ಯತೇ ತದಾ ॥ ೪೩ ॥

ಯಾ ದುಸ್ತ್ಯಜಾ ದುರ್ಮತಿಭಿರ್ಯಾ ನ ಜೀರ್ಯತಿ ಜೀರ್ಯತಃ ।
ಯೋಽಸೌ ಪ್ರಾಣಾಂತಿಕೋ ರೋಗಸ್ತಾಂ ತೃಷ್ಣಾಂ ತ್ಯಜತಃ ಸುಖಂ ॥೪೪॥

ಜೀರ್ಯಂತಿ ಜೀರ್ಯತಃ ಕೇಶಾ ದಂತಾ ಜೀರ್ಯಂತಿ ಜೀರ್ಯತಃ ।
ಧನಾಶಾ ಜೀವಿತಾಶಾ ಚ ಜೀರ್ಯತೋಽಪಿ ನ ಜೀರ್ಯತಿ । ॥ ೪೫ ॥

೪೩. ಯಾವ ಪ್ರಾಣಿಗೂ ಮನುಷ್ಯನು ಹೆದರಬಾರದು. ಮನುಷ್ಯನಿಂದ ಯಾವಪ್ರಾಣಿಗೂ ಹಿಂಸೆಯಾಗಬಾರದು. ಯಾವ ವಸ್ತುವಿನಲ್ಲಿಯೂ ಇಚ್ಛೆ ದ್ವೇಷ ಗಳು ಇರಬಾರದು. ಹೀಗಿದ್ದವನು ಮುಕ್ತಿಯನ್ನು ಹೊಂದಿ ಬ್ರಹ್ಮಾನಂದವನ್ನನು ಭವಿಸುವನು. ಸಾಮಾನ್ಯವಾಗಿ ಹಾಗೆ ಇರುವುದಿಲ್ಲ. ಮನುಷ್ಯನು ತನಗೆ ಬೇಕಾದ ವಸ್ತುವಿನಲ್ಲಿ ಇಚ್ಛೆ ಮತ್ತು ಪ್ರೀತಿಯುಳ್ಳವನಾಗಿರುವನು. ಬೇಡದ ವಸ್ತುವಿನಲ್ಲಿ ಕೋಪ ಮತ್ತು ದ್ವೇಷವುಳ್ಳವನಾಗಿರುವನು. ಹೀಗಿರಬಾರದೆಂದೂ ತನ್ನಂತೆಯೇ ಬೇರೆಯವರಿಗೂ -ಸುಖದುಃಖಗಳು ಸಮಾನವಾಗಿರುವು ದೆಂದೂ ತಿಳಿದವನಿಗೆ ಲೊಕದಿಂದಲೂ ಭಯವಿಲ್ಲವು. ಲೋಕಕ್ಕೂ ಕೂಡ ಇವನಿಂದ ತೊಂದರೆಯಾಗಲೀ ಭಯವಾಗಲಿ ಇಲ್ಲವೆಂದು ತತ್ವಾರ್ಥ.

೪೪. ತೃಷ್ಣೆ [ಆಸೆ] ಯನ್ನು ಮೂಢರು ಬಿಡಲಾರರು. ಶರೀರವೆಲ್ಲವೂ ಜೀರ್ಣವಾದರೂ ಆಸೆಯು ಮಾತ್ರ ಜೀರ್ಣವಾಗದೇ ಹಾಗೇ ಇರುವುದು. ಅದು ಸಾಯುವವರೆಗೂ ಇರುವ ಮಹಾರೋಗವು. ಇಂತಹ ತೃಷ್ಣೆಯನ್ನು ಬಿಟ್ಟವನೇ ಸುಖಿಯಾಗುವನು, ದುರ್ಮತಿಯು ಇದನ್ನು ಬಿಡದೆ ದುಃಖಪಡುತ್ತಿರುವನು.

೪೫. ಮುದುಕನಾದಮೇಲೆ ಅವನ ತಲೆಕೂದಲುಗಳು ಉದುರುವುವು, ಹಲ್ಲುಗಳು ಬೀಳುವುವು. ಆದರೆ ಧನಾಶೆ, ಜೀವಿತಾಶೆ [ಬದುಕಬೇಕೆಂಬ ಆಸೆ] ಇವೆ ರಡೂ ಸಾಯುವವರೆಗೂ ಹೋಗುವುದಿಲ್ಲ.

shrinath.udupa@gmail.com

ಯಚ್ಚ ಕಾಮಸುಖಂ ಲೋಕೇ ಯಚ್ಚ ದಿವ್ಯಂ ಮಹತ್ಸುಖಂ ।
ತೃಷ್ಣಾಕ್ಷಯಸುಖಸ್ಯೈತೇ ನಾರ್ಹಂತಿ ಷೋಡಶೀಂ ಕಲಾಂ ॥ ೪೬ ॥

ಏವಮುಕ್ತ್ವಾ ಸ ರಾಜರ್ಷಿಃ ಸದಾರಃ ಪ್ರಾವಿಶದ್ವನಂ ।
ಕಾಲೇನ ಮಹತಾ ಚಾಯಂ ಚಚಾರ ವಿಪುಲಂ ತಪಃ ॥ ೪೭ ॥

ಭೃಗುತುಂಗೇ ಗತಿಂ ಪ್ರಾಪ ತಪಸೋಽಂತೇ ಮಹಾಯಶಾಃ ।
ಅನಶ್ನನ್ ದೇಹಮುತ್ಸೃಜ್ಯ ಸದಾರಃ ಸ್ವರ್ಗಮಾಪ್ತವಾನ್ ॥ ೪೮ ॥

ತಸ್ಯ ವಂಶೇ ಮುನಿಶ್ರೇಷ್ಠಾಃ ಪಂಚ ರಾಜರ್ಷಿಸತ್ತಮಾಃ ।
ಯೈರ್ವ್ಯಾಪ್ತಾ ಪೃಥಿವೀ ಸರ್ವಾ ಸೂರ್ಯಸ್ಯೇವ ಗಭಸ್ತಿಭಿಃ ॥ ೪೯ ॥

ಯದೋಸ್ತು ವಂಶಂ ವಕ್ಷ್ಯಾಮಿ ಶೃಣುಧ್ವಂ ರಾಜಸತ್ಕೃತಂ ।
ಯತ್ರ ನಾರಾಯಣೋ ಜಜ್ಞೇ ಹರಿರ್ವೃಷ್ಣಿಕುಲೋದ್ವಹಃ ॥ ೫೦ ॥

---

೪೬. ಲೋಕದಲ್ಲಿರುವ ವಿಷಯಸುಖ ಮತ್ತು ಸ್ವರ್ಗಲೋಕದ ಮಹಾಸುಖ ಇವೆಲ್ಲ ಸೇರಿದರೂ ಸಹ ಆಸೆಯನ್ನು ಬಿಡುವುದರಿಂದುಂಟಾಗುವ ಸುಖ [ಆತ್ಮಸುಖ]ದ ಹದಿನಾರನೆಯ ಒಂದಂಶವನ್ನೂ ಸರಿದೂಗಲಾರವು.

೪೭. ಹೀಗೆ ಹೇಳಿ ಆ ರಾಜರ್ಷಿಯಾದ ಯಯಾತಿಯು ವಾನಪ್ರಸ್ಥಾಶ್ರಮವನ್ನು ವಹಿಸಿ ಹೆಂಡತಿಯೊಡನೆ ಅರಣ್ಯಕ್ಕೆ ತೆರಳಿದನು. ಅಲ್ಲಿ ಬಹುಕಾಲದವರೆಗೆ ಘೋರತಪಸ್ಸನ್ನಾಚರಿಸಿದನು.

೪೮. ತಪಸ್ಸು ಮುಗಿಸಿ ಕೊನೆಯಲ್ಲಿ ನಿರಶನವ್ರತವನ್ನು ಮಾಡಿ ಭೃಗುತುಂಗವೆಂಬ ಕ್ಷೇತ್ರದಲ್ಲಿ ದೇಹವನ್ನು ಬಿಟ್ಟು ಪತ್ನಿಯೊಡನೆ ಸ್ವರ್ಗವನ್ನು ಸೇರಿದನು.

೪೯. ಯಯಾತಿಯ ಪುತ್ರರಾದ ಐದುಮಂದಿ ರಾಜರ್ಷಿಗಳು ಸೂರ್ಯನ ಕಿರಣಗಳಂತೆ ಭೂಮಿಯೆಲ್ಲವನ್ನೂ ವ್ಯಾಪಿಸಿ ಆಳತೊಡಗಿದರು.

೫೦. ಇನ್ನು ಆ ಐದುಮಂದಿ ಯಯಾತಿಪುತ್ರರಲ್ಲಿ ರಾಜಪೂಜಿತನಾದ ಯದುಮಹಾರಾಜನ ವಂಶವನ್ನು ವರ್ಣಿಸುವೆನು. ಅವನ ವಂಶದಲ್ಲಿ ಭಗವಾನ್ ನಾರಾಯಣನು ಶ್ರೀ ಕೃಷ್ಣರೂಪದಿಂದ ಭೂಭಾರವನ್ನಿಳಿಸುವುದಕ್ಕಾಗಿ ಅವತರಿಸಿದನು. ಪೂಜ್ಯವಾದ ಯದುವಂಶವನ್ನು ವರ್ಣಿಸುವೆನು ಕೇಳಿರಿ.

shrinath.udupa@gmail.com

ಸುಖೀ ಪ್ರಜಾವಾನಾಯುಷ್ಮಾನ್ ಕೀರ್ತಿಮಾಂಶ್ಚ ಭವೇನ್ನರಃ ।
ಯಯಾತಿ ಚರಿತಂ ನಿತ್ಯಮಿದಂ ಶೃಣ್ವನ್ ದ್ವಿಜೋತ್ತಮಾಃ ॥ ೫೧ ॥

ಇತಿ ಶ್ರೀ ಮಹಾಪುರಾಣೇ ಆದಿಬ್ರಾಹ್ಮೇ ಸೋಮವಂಶೇ ಯಯಾತಿ ಚರಿತನಿರೂಪಣಂ ನಾಮ ದ್ವಾದಶೋಽಧ್ಯಾಯಃ

---

೫೧. ಯಯಾತಿಮಹಾರಾಜನ ಈ ಚರಿತವನ್ನು ನಿತ್ಯವೂ ಕೇಳುವವನು ಸುಖಿಯೂ ಸತ್ಪುತ್ರರುಳ್ಳವನೂ ಆಯುಷ್ಮವಂತನೂ ಕೀರ್ತಿಶಾಲಿಯೂ ಆಗುವನು.

ಇಲ್ಲಿಗೆ ಶ್ರೀ ಬ್ರಹ್ಮಮಹಾಪುರಾಣದಲ್ಲಿ ಸೋಮವಂಶದ ಯಯಾತಿಚರಿತನಿರೂಪಣವೆಂಬ ಹನ್ನೆರಡನೆಯ ಅಧ್ಯಾಯವು ಮುಗಿದುದು.

shrinath.udupa@gmail.com

॥ ಶ್ರೀಃ ॥

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಯೋದಶೋಽಧ್ಯಾಯಃ

॥ ಬ್ರಾಹ್ಮಣಾ ಊಚುಃ ॥

ಪುರೋರ್ವಂಶಂ ವಯಂ ಸೂತ ಶ್ರೋತುಮಿಚ್ಛಾಮ ತತ್ತ್ವತಃ ।
ದ್ರುಹ್ಯಸ್ಯಾನೋರ್ಯದೋಶ್ಚೈವ ತುರ್ವಸೋಶ್ಚ ಪೃಥಕ್ಪೃಥಕ್ ॥ ೧ ॥

॥ ಲೋಮಹರ್ಷಣ ಉವಾಚ ॥

ಶೃಣುಧ್ವಂ ಮುನಿಶಾರ್ದೂಲಾಃ ಪುರೋರ್ವಂಶಂ ಮಹಾತ್ಮನಃ ।
ವಿಸ್ತರೇಣಾನುಪೂರ್ವ್ಯಾ ಚ ಪ್ರಥಮಂ ವದತೋ ಮಮ ॥ ೨ ॥

ಹದಿಮೂರನೆಯ ಅಧ್ಯಾಯವು

೧. ಬ್ರಾಹ್ಮಣರು ಹೇಳಿದರು.—ಓ ಸೂತಮುನಿ ನಾವು ಪೂರು, ದ್ರುಹ್ಯು, ಅನು, ಯದು, ತುರ್ವಸು ಇವರ ವಂಶವನ್ನೂ ಕೇಳಬೇಕೆಂದಿರುವೆವು ಹೇಳುವವನಾಗು ?

೨. ಸೂತಮುನಿಯು ಹೇಳಿದನು.—ಎಲೈ ಮುನಿಶ್ರೇಷ್ಠರೇ ಮಹಾತ್ಮನಾದ ಪೂರುರಾಜನ ವಂಶವನ್ನು ಕ್ರಮವಾಗಿಯೂ ವಿಸ್ತಾರವಾಗಿಯೂ ಹೇಳುವೆನು ಕೇಳಿರಿ.

shrinath.udupa@gmail.com

ಪುರೋಃ ಪುತ್ರಃ ಸುವೀರೋಽಭೂನ್ಮನಸ್ಯುಸ್ತಸ್ಯ ಚಾಽತ್ಮನಃ ।
ರಾಜಾ ಚಾಭಯದೋ ನಾಮ ಮನಸ್ಯೋರಭವತ್ಸುತಃ ॥ ೩ ॥

ತಥೈವಾಭಯದಸ್ಯಾಽಸೀತ್ಸುಧನ್ವಾ ನಾಮ ಪಾರ್ಥಿವಃ ।
ಸುಧನ್ವನಃ ಸುಬಾಹುಶ್ಚ ರೌದ್ರಾಶ್ವಸ್ತಸ್ಯ ಚಾಽತ್ಮಜಃ ॥ ೪ ॥

ರೌದ್ರಾಶ್ವಸ್ಯ ದಶಾರ್ಣೇಯುಃ ಕೃಕಣೇಯುಸ್ತಥೈವ ಚ ।
ಕಕ್ಷೇಯುಸ್ಥಂಡಿಲೇಯುಶ್ಚ ಸನ್ನತೇಯುಸ್ತಥೈವ ಚ ॥ ೫ ॥

ಋಜೇಯುಶ್ಚ ಜಲೇಯುಶ್ಚ ಸ್ಥಲೇಯುಶ್ಚ ಮಹಾಬಲಃ ।
ಧನೇಯುಶ್ಚ ವನೇಯುಶ್ಚ ಪುತ್ರಕಾಶ್ಚ ದಶಸ್ತ್ರಿಯಃ ॥ ೬ ॥

ಭದ್ರಾ ಶೂದ್ರಾ ಚ ಮುದ್ರಾ ಚ ಶಲನಾ ಮಲದಾ ತಥಾ ।
ಖಲದಾ ಚ ತತೋ ವಿಪ್ರಾ ನಲದಾ ಸುರಸಾಽಪಿ ಚ ॥ ೭ ॥

ತಥಾ ಗೋಚಪಲಾ ಚ ಸ್ತ್ರೀರತ್ನಕೂಟಾ ಚ ತಾ ದಶ ।
ಋಷಿರ್ಜಾತೋಽತ್ರಿವಂಶೇ ಚ ತಾಸಾಂ ಭರ್ತಾ ಪ್ರಭಾಕರಃ ॥ ೮ ॥

---

೩. ಪೂರುವಿನ ಮಗನು ಸುವೀರನೆಂಬುವನು, ಸುವೀರನ ಮಗನು ಮನಸ್ಯುವು. ಮನಸ್ಯುವಿನ ಮಗನು ಅಭಯದನೆಂಬ ರಾಜನು.

೪. ಅಭಯದನ ಮಗನು ಸುಧನ್ವನೆಂಬ ರಾಜನು. ಸುಧನ್ವನ ಮಗನು ಸುಬಾಹು. ರೌದ್ರಾಶ್ವನೆಂಬುವವನು ಸುಬಾಹುವಿನ ಮಗನು.

೫-೬. ರೌದ್ರಾಶ್ವನಿಗೆ ದಶಾರ್ಣೇಯು, ಕೃಕಣೇಯು, ಕಕ್ಷೇಯು, ಸ್ಥಂಡಿಲೇಯು, ಸನ್ನತೇಯು, ಜಲೇಯು, ಸ್ಥಲೇಯು, ಧನೇಯು, ವನೇಯುಗಳೆಂಬ ಹತ್ತುಮಂದಿ ಗಂಡುಮಕ್ಕಳು.

೭. ಭದ್ರಾ, ಶೂದ್ರಾ, ಮುದ್ರಾ, ಶಲದಾ, ಮಲದಾ, ಬಲದಾ, ನಲದಾ, ಸುರಸಾ, ಗೋಚಪಲಾ, ಸ್ತ್ರೀರತ್ನಕೂಟಾ ಎಂಬ ಹತ್ತು ಮಂದಿ ರೌದ್ರಾಶ್ವನ ಹೆಣ್ಣು ಮಕ್ಕಳು.

೮. ಅತ್ರಿಮುನಿಯ ವಂಶದಲ್ಲಿ ಜನಿಸಿದ ಪ್ರಭಾಕರನೆಂಬ ಋಷಿಯು ರೌದ್ರಾಶ್ವನ ಹಿರಿಯಮಗಳಾದ ಭದ್ರಾದೇವಿಯನ್ನು ಮದುವೆಯಾದನು-

shrinath.udupa@gmail.com

ಭದ್ರಾಯಾಂ ಜನಯಾಮಾಸ ಸುತಂ ಸೋಮಂ ಯಶಸ್ವಿನಂ ।
ಸ್ವರ್ಭಾನುನಾ ಹತೇ ಸೂರ್ಯೇ ಪತಮಾನೇ ದಿವೋ ಮಹೀಂ ॥ ೯ ॥

ತಮೋಽಭಿಭೂತೇ ಲೋಕೇ ಚ ಪ್ರಭಾ ಯೇನ ಪ್ರವರ್ತಿತಾ ।
ಸ್ವಸ್ತಿ ತೇಽಸ್ತ್ವಿತಿ ಚೋಕ್ತ್ವಾ ವೈ ಪತಮಾನೋ ದಿವಾಕರಃ ॥ ೧೦ ॥

ವಚನಾತ್ತಸ್ಯ ವಿಪ್ರರ್ಷೇರ್ನ ಪಪಾತ ದಿವೋ ಮಹೀಂ ।
ಅತ್ರಿಶ್ರೇಷ್ಠಾನಿ ಗೋತ್ರಾಣಿ ಯಶ್ಚಕಾರ ಮಹಾತಪಾಃ ॥ ೧೧ ॥

ಯಜ್ಞೇಷ್ವತ್ರೇರ್ಬಲಂ ಚೈವ ದೇವೈರ್ಯಸ್ಯ ಪ್ರತಿಷ್ಠಿತಂ ।
ಸ ತಾಸು ಜನಯಾಮಾಸ ಪುತ್ರಿಕಾಸ್ವಾತ್ಮಕಾಮಜಾನ್ ॥ ೧೨ ॥

ದಶ ಪುತ್ರಾನ್ಮಹಾಸತ್ವಾಂಸ್ತಪಸ್ಯುಗ್ರೇ ರತಾಂಸ್ತಥಾ ।
ತೇ ತು ಗೋತ್ರಕರಾ ವಿಪ್ರಾ ಋಷಯೋ ವೇದಪಾರಗಾಃ ॥ ೧೩ ॥

---

೯. ಆವಳಲ್ಲಿ ಯಶಸ್ವಿಯಾದ ಸೋಮನೆಂಬ ಕುಮಾರನನ್ನು ಪಡೆದನು. ಒಮ್ಮೆ ರಾಹುವಿನಿಂದ ಸೂರ್ಯನು ಹತನಾಗಿ ಗಗನದಿಂದ ಭೂಮಿಗೆ ಬೀಳ ತೊಡಗಿದನು.

೧೦-೧೧. ಲೋಕದಲ್ಲಿ ಕತ್ತಲೆಯು ಆವರಿಸಿತು. ಆಗ ಈ ಪ್ರಭಾಕರ ಋಷಿಯು ತಪೋಮಹಿಮೆಯಿಂದ ಜಗತ್ತಿನ ಕ್ಷೇಮಕ್ಕಾಗಿ ತನ್ನ ಪ್ರಕಾಶವನ್ನು ಜಗತ್ತಿನಲ್ಲಿ ಹರಡಿ ಲೋಕವನ್ನು ಕಾಪಾಡಿದನು. ರಾಹುವಿನ ಹೊಡೆತದಿಂದ ಭೂಮಿಗೆ ಬೀಳುತ್ತಿರುವ ಸೂರ್ಯನನ್ನು ನೋಡಿ ಈ ಪ್ರಭಾಕರಋಷಿಯು ನಿನಗೆ ಮಂಗಳವು ಆಗಲಿ ಎಂದು ಹೇಳಿದನು. ಈ ಋಷಿಯ ಮಾತಿನ ಮಹಿಮೆಯಿಂದ ಸೂರ್ಯನು ಭೂಮಿಗೆ ಬೀಳಲಿಲ್ಲವು. ಈಪ್ರಭಾಕರ ಋಷಿಯುತನ್ನ ಅತ್ರಿಗೋತ್ರವನ್ನು ಶ್ರೇಷ್ಠಗೋತ್ರವನ್ನಾಗಿ ಮಾಡಿದನು.

೧೨. ಯಜ್ಞಗಳಲ್ಲಿ ಅತ್ರಿಮುನಿಗಿದ್ದ ಪೂಜ್ಯತೆಯನ್ನು ಈ ಪ್ರಭಾಕರ ಮುನಿಗೂದೇವತೆಗಳು ಲಭಿಸುವಂತೆ ಮಾಡಿದರು. ಆ ಪ್ರಭಾಕರ ಮುನಿಯು ತನ್ನ ಹತ್ತುಮಂದಿ ಹೆಂಡರಲ್ಲಿ ಹತ್ತುಜನ ಮಹಾನುಭಾವರೂ ಮಹಾತಪಸ್ವಿಗಳೂ ಆದ ಮಕ್ಕಳನ್ನು ಪಡೆದನು.

೧೩. ಆ ಹತ್ತು ಜನ ಪ್ರಭಾಕರಪುತ್ರರೂ ಸಹ ವೇದವನ್ನು ಸಂಪೂರ್ಣವಾಗಿ ಆಧ್ಯಯನಮಾಡಿದ್ದರು. ಸ್ವಸ್ತ್ಯಾತ್ರೇಯರು ಎಂದು ಇವರಿಗೆ ವೇದದಲ್ಲಿ ಪ್ರಸಿದ್ಧಿ

shrinath.udupa@gmail.com

ಸ್ವಸ್ತ್ಯಾತ್ರೇಯಾ ಇತಿ ಖ್ಯಾತಾಃ ಕಿಂ ಚ ತ್ರಿಧನವರ್ಜಿತಾಃ ।
ಕಕ್ಷೇಯೋಸ್ತನಯಾಸ್ತ್ವಾಸಂಸ್ತ್ರಯ ಏವ ಮಹಾರಥಾಃ ॥ ೧೪ ॥

ಸ ಭಾನರಶ್ಚಾಕ್ಷುಷಶ್ಚ ಪರಮನ್ಯುಸ್ತಥೈವ ಚ ।
ಸಭಾನರಸ್ಯ ಪುತ್ರಸ್ತು ವಿದ್ವಾಂಕಾಲಾನಲೋ ನೃಪಃ ॥ ೧೫ ॥

ಕಾಲಾನಲಸ್ಯ ಧರ್ಮಜ್ಞಃ ಸೃಂಜಯೋ ನಾಮ ವೈ ಸುತಃ ।
ಸೃಂಜಯಸ್ಯಾಭವತ್ಪುತ್ರೋ ವೀರೋ ರಾಜಾ ಪುರಂಜಯಃ ॥ ೧೬ ॥

ಜನಮೇಜಯೋ ಮುನಿಶ್ರೇಷ್ಠಾಃ ಪುರಂಜಯಸುತೋಽಭವತ್ ।
ಜನಮೇಜಯಸ್ಯ ರಾಜರ್ಷೇರ್ಮಹಾಶಾಲೋಽಭವತ್ಸುತಃ ॥ ೧೭ ॥

ದೇವೇಷು ಸ ಪರಿಜ್ಞಾತಃ ಪ್ರತಿಷ್ಠಿತಯಶಾ ಭುವಿ ।
ಮಹಾಮನಾ ನಾಮ ಸುತೋ ಮಹಾಶಾಲಸ್ಯ ವಿಶ್ರುತಃ ॥ ೧೮ ॥

ಇದೆ. ಕೆಳಗೆ ಬೀಳುತ್ತಿರುವ ಸೂರ್ಯನನ್ನು ಅತ್ರಿವಂಶದವನಾದ ಪ್ರಭಾಕರನು ಸ್ವಸ್ತಿಯೆಂದು ಹೇಳಿ ನಿಲ್ಲಿಸುದುದರಿಂದ ಅವನ ಸ್ವಸ್ತ್ಯತ್ರಿಯಾದನು. ಅವನ ಮಕ್ಕಳು ಸ್ವಸ್ತ್ಯಾತ್ರೇಯರುಯೆಂದು ಪ್ರಸಿದ್ಧರಾದರು. ಈ ಸ್ವಸ್ತ್ಯಾತ್ರೇಯರು ದರಿದ್ರರಾಗಿದ್ದರು.

೧೪. ಕಕ್ಷೇಯುರಾಜನಿಗೆ ಸಭಾನರ, ಚಾಕ್ಷುಷ, ಪರಮನ್ಯುಗಳೆಂಬ ಮೂರು ಮಂದಿ ವೀರರಾದ ಮಕ್ಕಳಿದ್ದರು.

೧೫-೧೬. ವಿದ್ವಾಂಸನಾದ ಕಾಲಾನಲರಾಜನು ಸಭಾನರನ ಮಗನು. ಕಾಲಾನಲನ ಮಗನು ಧರ್ಮಜ್ಞನಾದ ಸೃಂಜಯನೆಂಬುವನು. ಪುರಂಜಯನೆಂಬ ವೀರರಾಜನು ಸೃಂಜಯನ ಮಗನು.

೧೭. ಪುರಂಜಯನ ಮಗನು ಜನಮೇಜಯರಾಜನು, ರಾಜರ್ಷಿಯಾದ ಜನಮೇಜಯನ ಮಗನು ಮಹಾಶಾಲನೆಂಬುವನು, ಅವನ ಯಶಸ್ಸು ದೇವಲೋಕದ ವರೆಗೂ ಹರಡಿತ್ತು.

೧೮. ಮಹಾಮನಾ ಎಂಬುವನು ಮಹಾಶಾಲನ ಮಗನು, ಇವನು ಮಹಾತ್ಮನಾಗಿದ್ದು ದೇವತೆಗಳಿಂದಲೂ ಗೌರವಹೊಂದುತ್ತಿದ್ದನು.

shrinath.udupa@gmail.com

ಜಜ್ಞೇ ವೀರಃ ಸುರಗಣೈಃ ಪೂಜಿತಃ ಸುಮಹಾಮನಾಃ ।
ಮಹಾಮನಾಸ್ತು ಪುತ್ರೌ ದ್ವಾ ಜನಯಾಮಾಸ ಭೋ ದ್ವಿಜಾಃ ॥ ೧೯ ॥

ಉಶೀನರಂ ಚ ಧರ್ಮಜ್ಞಂ ತಿತಿಕ್ಷುಂ ಚ ಮಹಾಬಲಂ ।
ಉಶೀನರಸ್ಯ ಪತ್ನ್ಯಸ್ತು ಪಂಚ ರಾಜರ್ಷಿವಂಶಜಾಃ ॥ ೨೦ ॥

ನೃಗಾ ಕೃಮಿರ್ನವಾ ದರ್ವಾ ಪಂಚಮೀ ಚ ದೃಶದ್ವತೀ ।
ಉಶೀನರಸ್ಯ ಪುತ್ರಾಸ್ತು ಪಂಚ ತಾಸು ಕುಲೋದ್ವಹಾಃ ॥ ೨೧ ॥

ತಪಸಾ ಚೈವ ಮಹತಾ ಜಾತಾ ವೃದ್ಧಸ್ಯ ಚಾಽಽತ್ಮಜಾಃ ।
ನೃಗಾಯಾಸ್ತು ನೃಗಃ ಪುತ್ರಃ ಕೃಮ್ಯಾಂ ಕೃಮಿರಜಾಯತ ॥ ೨೨ ॥

ನವಾಯಾಸ್ತು ನವಃ ಪುತ್ರೋ ದರ್ವಾಯಾಃ ಸುವ್ರತೋಽಭವತ್ ।
ದೃಷದ್ವತ್ಯಾಸ್ತು ಸಂಜಜ್ಞೇ ಶಿಬಿರೌಶೀನರೋ ನೃಪಃ ॥ ೨೩ ॥

---

೧೯. ಮಹಾಮನಸನು ಉಶೀನರ ತಿತಿಕ್ಷುಗಳೆಂಬ ಮಕ್ಕಳೀರ್ವರನ್ನು ಹಡೆದನು. ಅವರಲ್ಲಿ ಉಶೀನರನು ಧರ್ಮಜ್ಞನಾಗಿದ್ದನು, ತಿತಿಕ್ಷುವು ಮಹಾಬಲಿಷ್ಠನಾಗಿದ್ದನು.

೨೦. ಉಶೀನರನು ನೃಗಾದೇವಿ, ಕೃಮಿದೇವಿ, ನವಾದೇವಿ ದರ್ವಾದೇವಿ, ದೃಷದ್ವತೀ ದೇವಿಯೆಂಬ ಐದುಮಂದಿ ರಾಜಪುತ್ರಿಯರನ್ನು ಮದುವೆಯಾಗಿದ್ದನು.

೨೧. ಉಶೀರನಿಗೆ ಐದುಮಂದಿ ಹೆಂಡಿರಲ್ಲಿ ಐದುಮಂದಿ ಕುಲಕ್ಕೆ ಒಳ್ಳೆಯ ಹೆಸರನ್ನು ತರುವಂತಹ ಮಕ್ಕಳು ಜನಿಸಿದರು. ಇವರನ್ನು ಉಶೀನರನು ಬಹಳಕಾಲ ಮಕ್ಕಳಾಗದಿರಲು ವೃದ್ಧಾಪ್ಯದಲ್ಲಿ ತಪಸ್ಸುಮಾಡಿ ದೇವತೆಗಳ ಅನುಗ್ರಹದಿಂದ ಪಡೆದನು

೨೨-೨೩. ಉಶೀನರನಿಗೆ ನೃಗಾದೇವಿಯಲ್ಲಿ ನೃಗನೆಂಬ ಮಗನು ಹುಟ್ಟಿದನು. ಕೃಮಿದೇವಿಯಲ್ಲಿ ಕೃಮಿರಾಜನು ಹುಟ್ಟಿದನು. ನವಾದೇವಿಯಲ್ಲಿ ನವಕುಮಾರನೂ, ದರ್ವಾದೇವಿಯಲ್ಲಿ ಸುವ್ರತನೂ ಜನಿಸಿದರು. ದೃಷದ್ವತಿಯಲ್ಲಿ ಶಿಬಿಚಕ್ರವರ್ತಿಯು ಜನಿಸಿದನು.

shrinath.udupa@gmail.com

ಶಿಬೇಸ್ತು ಶಿಬಯೋ ವಿಪ್ರಾ ಯೌಧೇಯಾಸ್ತು ನೃಗಸ್ಯ ಹ ।
ನವಸ್ಯ ನವರಾಷ್ಟ್ರಂ ತು ಕೃಮೇಸ್ತು ಕೃಮಿಲಾ ಪುರೀ ॥ ೨೪ ॥

ಸುವ್ರತಸ್ಯ ತಥಾಽಂಬಷ್ಠಾಃ ಶಿಬಿಪುತ್ರಾನ್ನಿಬೋಧತ ।
ಶಿಬೇಸ್ತು ಶಿಬಯಃ ಪುತ್ರಾಶ್ಚತ್ವಾರೋ ಲೋಕವಿಶ್ರುತಾಃ ॥ ೨೫ ॥

ವೃಷದರ್ಭಃ ಸುವೀರಶ್ಚ ಕೇಕಯೋ ಮದ್ರಕಸ್ತಥಾ ।
ತೇಷಾಂ ಜನಪದಾಃ ಸ್ಫೀತಾ ಕೇಕಯಾ ಮದ್ರಕಾಸ್ತಥಾ ॥ ೨೬ ॥

ವೃಷದರ್ಭಾಃ ಸುವೀರಾಶ್ಚ ತಿತಿಕ್ಷೋಸ್ತು ಪ್ರಜಾಸ್ತ್ವಿಮಾಃ ।
ತಿತಿಕ್ಷುರಭವದ್ರಾಜಾ ಪೂರ್ವಸ್ಯಾಂ ದಿಶಿ ಭೋ ದ್ವಿಜಾಃ ॥ ೨೭ ॥

ಉಷದ್ರಥೋ ಮಹಾವೀರ್ಯಃ ಫೇನಸ್ತಸ್ಯ ಸುತೋಽಭವತ್ ।
ಫೇನಸ್ಯ ಸುತಪಾ ಜಜ್ಞೇ ತತಃ ಸುತಪಸೋ ಬಲೀ ॥ ೨೮ ॥

---

೨೪. ಶಿಬಿಯ ಮಕ್ಕಳಿಗೆ ಶಿಬಿಯರೆಂದು ಹೆಸರು. ನೃಗನ ಮಕ್ಕಳಿಗೆ ಯೌಧೇಯರೆಂದು ಹೆಸರು. ನವರಾಜನು ನವರಾಷ್ಟ್ರವೆಂಬಲ್ಲಿ ಆಳುತ್ತಿದ್ದನು. ಕೃಮಿರಾಜನು ಕೃಮಿಲಾಪುರಿಯಲ್ಲಿ ಆಳುತ್ತಿದ್ದನು. ಸುವ್ರತನ ಮಕ್ಕಳಿಗೆ ಅಂಬಷ್ಠರೆಂದು ಹೆಸರು. ಎಲೈ ಮುನಿಗಳೇ ಶಿಬಿಪುತ್ರರರನ್ನು ಹೇಳುವೆನು ಕೇಳಿರಿ.

೨೫. ವೃಷದರ್ಭ, ಸುವೀರ, ಕೇಕಯ, ಮದ್ರಕ ಇವರು ನಾಲ್ವರು ಶಿಬಿರಾಜನ ಶಿಬಿಯರೆಂದು ಪ್ರಸಿದ್ಧರಾದ ಮಕ್ಕಳು.

೨೬. ಆ ಶಿಬಿಪುತ್ರರು ಕೇಕಯ, ಮದ್ರಕ, ವೃಷದರ್ಭ, ಸುವೀರಗಳೆಂಬ ನಾಲ್ಕು ದೇಶಗಳನ್ನು ಆಳುತ್ತಿದ್ದರು. ಅವರ ಹೆಸರನ್ನನುಸರಿಸಿ ಅವರಾಳುತ್ತಿದ್ದ ದೇಶಗಳಿಗೂ ಆ ಹೆಸರುಗಳೇ ಬಂದುವು. ಇನ್ನು ತಿತಿಕ್ಷುವಿನ ವಂಶದವರನ್ನು ಹೇಳುವೆನು.

೨೭. ತಿತಿಕ್ಷುವು ಪೂರ್ವದಿಕ್ಕಿನಲ್ಲಿ ರಾಜ್ಯವಾಳುತ್ತಿದ್ದನು. ಅವನಿಗೆ ವೀರರಾದ ಉಷದ್ರಥ, ಫೇನರೆಂಬೀರ್ವರು ಮಕ್ಕಳು.

೨೮. ಫೇನರಾಜನ ಮಗನು ಸುತಪಸನು. ಸುತಪಸನ ಮಗನು ಬಲಿರಾಜನು. ಅಸುರೇಂದ್ರನಾದ ಬಲಿಚಕ್ರವರ್ತಿಯು ಮನುಷ್ಯರೂಪದಿಂದ ಸುತಪಸನ ಮಗನಾಗಿ ಹುಟ್ಟಿದನು. ಆ ಬಲಿರಾಜನು ಸುವರ್ಣದ ಬತ್ತಳಿಕೆಯುಳ್ಳವನಾಗಿದ್ದನು.

shrinath.udupa@gmail.com

ಜಾತೋ ಮಾನುಷಯೋನೌ ತು ಸ ರಾಜಾ ಕಾಂಚನೇಷುಧಿಃ ।
ಮಹಾಯೋಗೀ ಸ ತು ಬಲಿರ್ಬಭೂವ ನೃಪತಿಃ ಪುರಾ ॥ ೨೯ ॥

ಪುತ್ರಾನುತ್ಪಾದಯಾಮಾಸ ಪಂಚ ವಂಶಕರಾನ್ಭುವಿ ।
ಅಂಗಃ ಪ್ರಥಮತೋ ಜಜ್ಞೇ ವಂಗಃ ಸುಹ್ಮಸ್ತಥೈವ ಚ ॥ ೩೦ ॥

ಪುಂಡ್ರಃ ಕಲಿಂಗಶ್ಚ ತಥಾ ಬಾಲೇಯಂ ಕ್ಷತ್ರಮುಚ್ಯತೇ ।
ಬಾಲೇಯಾ ಬ್ರಾಹ್ಮಣಾಶ್ಚೈವ ತಸ್ಯ ವಂಶಕರಾ ಭುವಿ ॥ ೩೧ ॥

ಬಲೇಶ್ಚ ಬ್ರಹ್ಮಣಾ ದತ್ತೋ ವರಃ ಪ್ರೀತೇನ ಭೋ ದ್ವಿಜಾಃ ।
ಮಹಾಯೋಗಿತ್ವಮಾಯುಶ್ಚ ಕಲ್ಪಸ್ಯ ಪರಿಮಾಣತಃ ॥ ೩೨ ॥

ಬಲೇ ಚಾಪ್ರತಿಮತ್ವಂ ವೈ ಧರ್ಮತತ್ತ್ವಾರ್ಥದರ್ಶನಂ ।
ಸಂಗ್ರಾಮೇ ಚಾಪ್ಯಜೇಯತ್ವಂ ಧರ್ಮೇ ಚೈವ ಪ್ರಧಾನತಾಂ ॥ ೩೩ ॥

---

೨೯. ಆ ಬಲಿರಾಜನು ಮಹಾಯೋಗಿಯಾಗಿದ್ದನು. ಅವನು ಐದುಮಂದಿ ಮಕ್ಕಳನ್ನು ಪಡೆದನು. ಆ ಬಲಿಪುತ್ರರು ಮುಂದೆ ತಮ್ಮ ವಂಶವನ್ನು ಬೆಳೆಸಿದರು.

೩೦. ಅಂಗರಾಜ, ವಂಗರಾಜ, ಸುಹ್ಮ, ಪುಂಡ್ರ, ಕಲಿಂಗ ಈ ಐದುಮಂದಿ ಬಲಿರಾಜನಿಂದ ಜನಿಸಿದ ಕ್ಷತ್ರಿಯರು.

೩೧. ಬಲಿರಾಜನ ಈ ವಂಶದಲ್ಲಿ ಅನೇಕ ಬ್ರಾಹ್ಮಣರೂ ಜನಿಸಿದರು.

೩೨-೩೪. ಬ್ರಹ್ಮದೇವನು ಬಲಿರಾಜನಿಗೆ ಪ್ರೀತಿಯಿಂದ ನೀನು ಒಂದು ಬ್ರಹ್ಮ. ಕಲ್ಪದವರಿಗೆ ಪರಮ ಯೋಗಿಯಾಗಿ ಜೀವಿಸು. ಲೋಕದಲ್ಲಿ ಎಲ್ಲಾ ವಿಧದಲ್ಲಿಯೂ ನಿನಗೆ ಸರಿಹೋಲುವವರು ಇರಲಾರರು. ಧರ್ಮತತ್ವವನ್ನು ಅರಿತು ಧರ್ಮಿಷ್ಠರಲ್ಲಿ ಮುಖಂಡನಾಗಿಯೂ, ಯುದ್ಧದಲ್ಲಿ ಅಜೇಯನಾಗುವಿ. ಮತ್ತು ಈ ಮನುಷ್ಯ ಶರೀರದಿಂದಲೇ ಮೂರು ಲೋಕದಲ್ಲೂ ಸಂಚರಿಸುತ್ತಾ ಲೋಕೋತ್ತರವಾದ ಸಂತಾನವನ್ನು ಪಡೆದು, ಬ್ರಹ್ಮ, ಕ್ಷತ್ರ, ವೈಶ್ಯ, ಶೂದ್ರ ಎಂಬ ನಾಲ್ಕುವರ್ಣವನ್ನೂ ಲೋಕದಲ್ಲಿ

shrinath.udupa@gmail.com

ತ್ರೈಲೋಕ್ಯದರ್ಶನಂ ಚಾಪಿ ಪ್ರಾಧಾನ್ಯಂ ಪ್ರಸವೇ ತಥಾ ।
ಚತುರೋ ನಿಯತಾನ್ವರ್ಣಾಂಸ್ತ್ವಂ ಚ ಸ್ಥಾಪಯಿತೇತಿ ಚ ॥ ೩೪ ॥

ಇತ್ಯುಕ್ತೋ ವಿಭುನಾ ರಾಜಾ ಬಲಿಃ ಶಾಂತಿಂ ಪರಾಂ ಯಯೌ ।
ಕಾಲೇನ ಮಹತಾ ವಿಪ್ರಾಃ ಸ್ವಂ ಚ ಸ್ಥಾನಮುಪಾಗಮತ್ ॥ ೩೫ ॥

ತೇಷಾಂ ಜನಪದಾಃ ಪಂಚ ಅಂಗಾ ವಂಗಾಃ ಸಸುಹ್ಮಕಾಃ ।
ಕಲಿಂಗಾಃ ಪುಂಡ್ರಕಾಶ್ಚೈವ ಪ್ರಜಾಸ್ತ್ವಂಗಸ್ಯ ಸಾಂಪ್ರತಂ ॥ ೩೬ ॥

ಅಂಗಪುತ್ರೋ ಮಹಾನಾಸೀದ್ರಾಜೇಂದ್ರೋ ದಧಿವಾಹನಃ ।
ದಧಿವಾಹನಪುತ್ರಸ್ತು ರಾಜಾ ದಿವಿರಥೋಽಭವತ್ ॥ ೩೭ ॥

ಪುತ್ರೋ ದಿವಿರಥಸ್ಯಾಽಽಸೀಚ್ಛಕ್ರತುಲ್ಯಪರಾಕ್ರಮಃ ।
ವಿದ್ವಾನ್ಧರ್ಮರಥೋ ನಾಮ ತಸ್ಯ ಚಿತ್ರಗಥಃ ಸುತಃ ॥ ೩೮ ॥

ಸರಿಯಾದ ರೀತಿಯಿಂದ ಸ್ಥಾಪಿಸಿ ಕೀರ್ತಿವಂತನಾಗಿ ಬಾಳು, ಎಂದು ಉತ್ತಮವಾದ ವರಗಳನ್ನು ಕರುಣಿಸಿದನು.

೩೫. ಹೀಗೆ ಬ್ರಹ್ಮನಿಂದ ವರವನ್ನು ಪಡೆದು ಬಲಿರಾಜನು ಶಾಂತಿಯಿಂದ ರಾಜ್ಯವಾಳಿದನು. ಬಹುಕಾಲದವರೆಗೆ ಧರ್ಮದಿಂದ ರಾಜ್ಯವಾಳುತ್ತಾ ಕೊನೆಗೆ ತನ್ನ ಹಿಂದಿನ ಬಲಿಚಕ್ರವರ್ತಿಯ ಸ್ಥಾನಕ್ಕೆ ತೆರಳಿದನು (ದಿವಂಗತನಾದನು).

೩೬. ಬಲಿಮಹಾರಾಜನ ಐದುಮಂದಿ ಮಕ್ಕಳು. ಅಂಗದೇಶ, ವಂಗದೇಶ, ಸುಹ್ಮಕದೇಶ, ಕಲಿಂಗದೇಶ, ಪುಂಡ್ರದೇಶ ಈ ಐದುದೇಶಗಳನ್ನು ಬೇರೆಬೇರೆಯಾಗಿ ಆಳುತ್ತಿದ್ದರು. ಈ ಅಂಗರಾಜನ ಸಂತತಿಯನ್ನು ಹೇಳುವೆನು.

೩೭. ದಧಿವಾಹನನೆಂಬ ಚಕ್ರವರ್ತಿಯು ಅಂಗರಾಜನ ಮಗನು. ದಿವಿರಥ ನೆಂಬ ರಾಜನು ದಧಿವಾಹನನ ಮಗನು.

೩೮. ದಿವಿರಥನಿಗೆ ಧರ್ಮರಥನೆಂಬ ಪುತ್ರನಿದ್ದನು. ಅವನು ಇಂದ್ರನಂತೆ ಪರಾಕ್ರಮಿಯೂ ವಿದ್ವಾಂಸನೂ ಆಗಿದ್ದನು. ಆ ಧರ್ಮರಥನ ಮಗನು ಚಿತ್ರರಥ ರಾಜನು.

shrinath.udupa@gmail.com

ತೇನ ಧರ್ಮರಥೇನಾಥ ತದಾ ಕಾಲಂಜರೇ ಗಿರೌ ।
ಯಜತಾ ಸಹ ಶಕ್ರೇಣ ಸೋಮಃ ಪೀತೋ ಮಹಾತ್ಮನಾ ॥ ೩೯ ॥

ಅಥ ಚಿತ್ರರಥಸ್ಯಾಪಿ ಪುತ್ರೋ ದಶರಥೋಽಭವತ್ ।
ಲೋಮಪಾದ ಇತಿ ಖ್ಯಾತೋ ಯಸ್ಯ ಶಾಂತಾ ಸುತಾಽಭವತ್ ॥ ೪೦ ॥

ತಸ್ಯ ದಾಶರಥಿರ್ವೀರಶ್ಚತುರಂಗೋ ಮಹಾಯಶಾಃ ।
ಋಷ್ಯಶೃಂಗಪ್ರಸಾದೇನ ಜಜ್ಞೇ ವಂಶವಿವರ್ಧನಃ ॥ ೪೧ ॥

ಚತುರಂಗಸ್ಯ ಪುತ್ರಸ್ತು ಪೃಥುಲಾಕ್ಷ ಇತಿ ಸ್ಮೃತಃ ।
ಪೃಥುಲಾಕ್ಷಸುತೋ ರಾಜಾ ಚಂಪೋ ನಾಮ ಮಹಾಯಶಾಃ ॥ ೪೨ ॥

ಚಂಪಸ್ಯ ತು ಪುರೀ ಚಂಪಾ ಯಾ ಮಾಲಿನ್ಯಭವತ್ಪುರಾ ।
ಪೂರ್ಣಭದ್ರಪ್ರಸಾದೇನ ಹರ್ಯಂಗೋಽಸ್ಯ ಸುತೋಽಭವತ್ ॥ ೪೩ ॥

---

೩೯. ಮಹಾತ್ಮನಾದ ಈ ಧರ್ಮರಥನು ಕಾಲಂಜರಪರ್ವತದಲ್ಲಿ ಯಾಗಮಾಡಿ ದೇವೇಂದ್ರನೊಡನೆ ಸೋಮಪಾನಮಾಡಿದನು.

೪೦. ಚಿತ್ರರಥನ ಮಗನು ದಶರಥನು. ಅವನಿಗೆ ಲೋಮಪಾದ (ಕಾಲಿನಲ್ಲಿ ಕೂದಲುಳ್ಳವನು) ನೆಂದು ಮತ್ತೊಂದು ಹೆಸರಿದ್ದಿತು. ಋಷ್ಯಶೃಂಗನ ಹೆಂಡತಿಯಾದ ಶಾಂತಾದೇವಿಯು ಈ ಲೋಮಪಾದನ ಮಗಳು.

೪೧. ಆ ಲೋಮಪಾದನಿಗೆ ಚತುರಂಗನೆಂಬ ಕುಮಾರನು, ಋಷ್ಯಶೃಂಗ ಮುನಿಯ ಅನುಗ್ರಹದಿಂದ ಜನಿಸಿದನು. ಅವನಿಂದ ಲೋಮಪಾದನ ಸಂತತಿಯು ಬೆಳೆಯಿತು.

೪೨. ಚತುರಂಗನ ಮಗನು ಪೃಥುಲಾಕ್ಷನು. ಪೃಥುಲಾಕ್ಷನ ಮಗನು ಚಂಪರಾಜನು.

೪೩. ಚಂಪರಾಜನು ಚಂಪಾಪುರಿಯಲ್ಲಾಳುತ್ತಿದ್ದನು. ಆ ನಗರಿಗೆ ಮೊದಲು ಮಾಲಿನೀಯೆಂಬ ಹೆಸರಿದ್ದಿತು. ಈ ಚಂಪರಾಜನು ಪೂರ್ಣಭದ್ರಮುನಿ (ಈಶ್ವರಗಣ) ಯ ಅನುಗ್ರಹದಿಂದ ಹರ್ಯಂಗನೆಂಬ ಮಗನನ್ನು ಪಡೆದನು.

shrinath.udupa@gmail.com

ತತೋ ವೈಭಾಂಡಕಿಸ್ತಸ್ಯ ವಾರಣಂ ಶಕ್ರವಾರಣಂ ।
ಅವತಾರಯಾಮಾಸ ಮಹೀಂ ಮಂತ್ರೈರ್ವಾಹನಮುತ್ತಮಂ ॥ ೪೪ ॥

ಹರ್ಯಂಗಸ್ಯ ಸುತಸ್ತತ್ರ ರಾಜಾ ಭದ್ರರಥಃ ಸ್ಮೃತಃ ।
ಪುತ್ರೋ ಭದ್ರರಥಸ್ಯಾಽಽಸೀದ್ಬೃಹತ್ಕರ್ಮಾ ಪ್ರಜೇಶ್ವರಃ ॥ ೪೫ ॥

ಬೃಹದ್ದರ್ಭಃ ಸುತಸ್ತಸ್ಯ ಯಸ್ಮಾಜ್ಜಜ್ಞೇ ಬೃಹನ್ಮನಾಃ ।
ಬೃಹನ್ಮನಾಸ್ತು ರಾಜೇಂದ್ರೋ ಜನಯಾಮಾಸ ವೈ ಸುತಂ ॥ ೪೬ ॥

ನಾಮ್ನಾ ಜಯದ್ರಥಂ ನಾಮ ಯಸ್ಮಾದ್ದೃಢರಥೋ ನೃಪಃ ।
ಆಸೀದ್ದೃಢರಥಸ್ಯಾಪಿ ವಿಶ್ವಜಿಜ್ಜನಮೇಜಯಃ ॥ ೪೭ ॥

ದಾಯಾದಸ್ತಸ್ಯ ವೈಕರ್ಣೋ ವಿಕರ್ಣಸ್ತಸ್ಯ ಚಾಽಽತ್ಮಜಃ ।
ತಸ್ಯ ಪುತ್ರಶತಂ ತ್ವಾಸೀದಂಗಾನಾಂ ಕುಲವರ್ಧನಂ ॥ ೪೮ ॥

---

೪೪. ವಿಭಾಂಡಕಮುನಿಯ ಮಗನಾದ ಋಷ್ಯಶೃಂಗನು ತನ್ನ ಮಂತ್ರಬಲದಿಂದ ಇಂದ್ರನ ವಾಹನವಾದ ಐರಾವತವನ್ನು ಭೂಮಿಗಿಳಿಸಿ ಈ ಹರ್ಯಂಗರಾಜನಿಗೆ ವಾಹನವನ್ನಾಗಿ ಮಾಡಿದನು.

೪೫. ಭದ್ರರಥನೆಂಬ ರಾಜನು ಹರ್ಯಂಗನ ಮಗನು. ಆ ಭದ್ರರಥನಿಗೆ ಬೃಹತ್ಕರ್ಮನೆಂಬ ಮಗನಿದ್ದನು.

೪೬–೪೭. ಬೃಹತ್ಕರ್ಮನ ಮಗನು ಬೃಹದ್ದರ್ಭನು. ಅವನ ಮಗನು ಬೃಹನ್ಮನನು. ಅವನ ಮಗನು ಜಯದ್ರಥನೆಂಬುವನು. ಆ ಜಯದ್ರಥನಿಂದ ದೃಢರಥರಾಜನು ಜನಿಸಿದನು. ದೃಢರಥರಾಜನ ಮಗನು ಜಗತ್ತನ್ನು ಜಯಿಸಿದ ಜನಮೇಜಯರಾಜನು.

೪೮. ಜನಮೇಜಯರಾಜನ ಮಗನು ಕರ್ಣರಾಜನು. ಅವನ ಮಗನು ವಿಕರ್ಣನು. ಆ ವಿಕರ್ಣನಿಗೆ ನೂರುಜನ ಮಕ್ಕಳಿದ್ದರು. ಅವರಿಂದ ಅಂಗವಂಶವು ಇನ್ನೂ ಬೆಳೆಯಿತು.

shrinath.udupa@gmail.com

ಏತೇಽಂಗವಂಶಜಾಃ ಸರ್ವೇ ರಾಜಾನಃ ಕೀರ್ತಿತಾ ಮಯಾ ।
ಸತ್ಯವ್ರತಾ ಮಹಾತ್ಮಾನಃ ಪ್ರಜಾವಂತೋ ಮಹಾರಥಾಃ ॥ ೪೯ ॥

ಋಚೇಯೋಸ್ತು ಮುನಿಶ್ರೇಷ್ಠಾ ರೌದ್ರಾಶ್ವತನಯಸ್ಯ ವೈ ।
ಶೃಣುಧ್ವಂ ಸಂಪ್ರವಕ್ಷ್ಯಾಮಿ ವಂಶಂ ರಾಜ್ಞಸ್ತು ಭೋ ದ್ವಿಜಾಃ ॥ ೫೦ ॥

ಋಚೇಯೋಸ್ತನಯೋ ರಾಜಾ ಮತಿನಾರೋ ಮಹೀಪತಿಃ ।
ಮತಿನಾರಸುತಾಸ್ತ್ವಾಸಂಸ್ತ್ರಯಃ ಪರಮಧಾರ್ಮಿಕಾಃ ॥ ೫೧ ॥

ವಸುರೋಧಃ ಪ್ರತಿರಥಃ ಸುಬಾಹುಶ್ಚೈವ ಧಾರ್ಮಿಕಃ ।
ಸರ್ವೇ ವೇದವಿದಶ್ಚೈವ ಬ್ರಹ್ಮಣ್ಯಾಃ ಸತ್ಯವಾದಿನಃ ॥ ೫೨ ॥

ಇಲಾ ನಾಮ ತು ಯಸ್ಯಾಽಽಸೀತ್ಕನ್ಯಾ ವೈ ಮುನಿಸತ್ತಮಾಃ ।
ಬ್ರಹ್ಮವಾದಿನ್ಯಪಿಸ್ತ್ರೀ ಸಾ ತಂಸುಸ್ತಾಮಭ್ಯಗಚ್ಛತ ॥ ೫೩ ॥

---

೪೯. ಹೀಗೆ ಅಂಗರಾಜನ ವಂಶದ ಪ್ರಧಾನರಾದ ರಾಜರನ್ನು ಹೇಳಿರುವೆನು. ಇವರೆಲ್ಲರೂ ಸತ್ಯವಂತರು, ಮಹಾತ್ಮರು, ಮಹಾವೀರರು, ಸತ್ಪುತ್ರರನ್ನೇ ಇವರು ಪಡೆಯುತ್ತಿದ್ದರು.

೫೦. ಎಲೈ ಬ್ರಾಹ್ಮಣರೇ ಇನ್ನು ರೌದ್ರಾಶ್ವನ ಮಗನಾದ ಋಚೇಯು ರಾಜನ ವಂಶವನ್ನು ಹೇಳುವೆನು.

೫೧–೫೨. ಋಚೇಯುವಿನ ಮಗನು ಮತಿನಾರನೆಂಬ ರಾಜನು. ಮತಿನಾರನಿಗೆ ವಸುರೋಧ, ಪ್ರತಿರಥ, ಸುಬಾಹುಗಳೆಂಬ ಮೂರುಮಂದಿ ಮಕ್ಕಳಿದ್ದರು. ಅವರೆಲ್ಲರೂ ವೇದವಿತ್ತುಗಳೂ ಬ್ರಾಹ್ಮಣಪ್ರಿಯರೂ ಸತ್ಯವಾದಿಗಳೂ ಧಾರ್ಮಿಕರೂ ಆಗಿದ್ದರು.

೫೩. ಮತಿನಾರನಿಗೆ ಇಲಾದೇವಿಯೆಂಬ ಮಗಳಿದ್ದಳು. ಅವಳು ಆತ್ಮತತ್ವವನ್ನು ಬಲ್ಲವಳಾಗಿದ್ದಳು. ಅವಳನ್ನು ತಂಸುವೆಂಬ ರಾಜನು ಮದುವೆಯಾದನು.

shrinath.udupa@gmail.com

ತಂಸೋಃ ಸುತೋಽಥ ರಾಜರ್ಷಿರ್ಧರ್ಮನೇತ್ರಃ ಪ್ರತಾಪವಾನ್ ।
ಬ್ರಹ್ಮವಾದೀ ಪರಾಕ್ರಾಂತಸ್ತಸ್ಯ ಭಾರ್ಯೋಪದಾನವೀ ॥ ೫೪ ॥

ಉಪದಾನವೀ ತತಃ ಪುತ್ರಾಂಶ್ಚತುರೋಽಜನಯಚ್ಛುಭಾನ್ ।
ದುಷ್ಯಂತಮಥ ಸುಷ್ಮಂತಂ ಪ್ರವೀರಮನಘಂ ತಥಾ ॥ ೫೫ ॥

ದುಷ್ಯಂತಸ್ಯ ತು ದಾಯಾದೋ ಭರತೋ ನಾಮ ವೀರ್ಯವಾನ್ ।
ಸ ಸರ್ವದಮನೋ ನಾಮ ನಾಗಾಯುತಬಲೋ ಮಹಾನ್ ॥ ೫೬ ॥

ಚಕ್ರವರ್ತಿ ಸುತೋ ಜಜ್ಞೇ ದುಷ್ಯಂತಸ್ಯ ಮಹಾತ್ಮನಃ ।
ಶಕುಂತಲಾಯಾಂ ಭರತೋ ಯಸ್ಯ ನಾಮ್ನಾ ತು ಭಾರತಾಃ ॥ ೫೭ ॥

ಭರತಸ್ಯ ವಿನಷ್ಟೇಷು ತನಯೇಷು ಮಹೀಪತೇಃ ।
ಮಾತೃಣಾಂ ತು ಪ್ರಕೋಪೇಣ ಮಯಾ ತತ್ಕಥಿತಂ ಪುರಾ ॥ ೫೮ ॥

೫೪. ತಂಸುರಾಜನ ಮಗನು ಧರ್ಮನೇತ್ರರಾಜನು. ಅವನು ರಾಜರ್ಷಿಯೂ ಬ್ರಹ್ಮವಾದಿಯೂ ಪರಾಕ್ರಮಿಯೂ ಆಗಿದ್ದನು. ಅವನ ಹೆಂಡತಿ ಉಪದಾನವೀದೇವಿಯು.

೫೫. ಆ ಉಪದಾನವೀದೇವಿಯು ದುಷ್ಯಂತ, ಸುಷ್ಮಂತ, ಪ್ರವೀರ, ಅನಘರೆಂಬ ನಾಲ್ಕುಮಂದಿ ಮಕ್ಕಳನ್ನು ಹಡೆದಳು.

೫೬. ದುಷ್ಯಂತನಿಗೆ ಭರತನೆಂಬುವವನು ಮಗನು. ಅವನು ಹತ್ತುಸಾವಿರ ಆನೆಗಳ ಬಲವುಳ್ಳವನಾಗಿದ್ದು ದುಷ್ಟಶಿಕ್ಷಣ ಶಿಷ್ಟಪರಿಪಾಲನೆಯಿಂದ ಸರ್ವದಮನನೆಂಬಹೆಸರುಗೊಂಡನು.

೫೭. ಮಹಾತ್ಮನಾದ ದುಷ್ಯಂತನಿಗೆ ಶಕುಂತಲೆಯಲ್ಲಿ ಈ ಭರತನು ಜನಿಸಿದನು. ಇವನು ಇಡೀ ಭರತಖಂಡಕ್ಕೆ ಚಕ್ರವರ್ತಿಯಾಗಿದ್ದನು. ಇವನ ಹೆಸರಿನಿಂದಲೇ ಹಿಂದೂದೇಶಕ್ಕೆ ಭಾರತವೆಂದೂ ಹಿಂದೂ ಜನರಿಗೆ ಭಾರತರು ಎಂದೂ ಹೆಸರು ಬಂದಿತು.

೫೮. ಭರತನ ಮಕ್ಕಳೆಲ್ಲರೂ ಮಾತೃಶಾಪದಿಂದ ನಾಶವಾದರು. ಈ ವಿಷಯವನ್ನು ನಾನು ಹಿಂದೆಯೇ ನಿಮಗೆ ಹೇಳಿರುವೆನು.

shrinath.udupa@gmail.com

ಬೃಹಸ್ಪತೇರಂಗಿರಸಃ ಪುತ್ರೋ ವಿಪ್ರೋ ಮಹಾಮುನಿಃ ।
ಅಯಾಜಯದ್ಭರದ್ವಾಜೋ ಮಹದ್ಭಿಃ ಕ್ರತುಭಿರ್ವಿಭುಃ ॥ ೨೯ ॥

ಪೂರ್ವಂ ತು ವಿತಥೇ ತಸ್ಯ ಕೃತೇ ವೈ ಪುತ್ರಜನ್ಮನಿ ।
ತತೋಽಥ ವಿತಥೋ ನಾಮ ಭರದ್ವಾಜಾತ್ಸುತೋಽಭವತ್ ॥ ೩೦ ॥

ತತೋಽಥ ವಿತಥೇ ಜಾತೇ ಭರತಸ್ತು ದಿವಂ ಯಯೌ ।
ವಿತಥಂ ಚಾಭಿಷಿಚ್ಯಾಥ ಭರದ್ವಾಜೋ ವನಂ ಯಯೌ ॥ ೩೧ ॥

ಸ ಚಾಪಿ ವಿತಥಃ ಪುತ್ರಾಂಜನಯಾಮಾಸ ಪಂಚ ವೈ ।
ಸುಹೋತ್ರಂ ಚ ಸುಹೋತಾರಂ ಗಯಂ ಗರ್ಗಂ ತಥೈವ ಚ ॥ ೩೨ ॥

ಕಪಿಲಂ ಚ ಮಹಾತ್ಮಾನಂ ಸುಹೋತ್ರಸ್ಯ ಸುತದ್ವಯಂ ।
ಕಾಶಿಕಂ ಚ ಮಹಾಸತ್ಯಂ ತಥಾ ಗೃತ್ಸಮತಿಂ ನೃಪಂ ॥ ೩೩ ॥

---

೨೯. ಅಂಗಿರಸ (ಬೃಹಸ್ಪತಿ) ಮುನಿಯ ಮಗನಾದ ಭರದ್ವಾಜಮಹಾಮುನಿಯು ಭರತಚಕ್ರವರ್ತಿಗೆ ಪುನಃ ಮಕ್ಕಳಾಗುವಂತೆ ಮಹಾಯಾಗಗಳನ್ನು ಮಾಡಿಸಿದನು.

೩೦. ಆಗ ಭರದ್ವಾಜನ ಅನುಗ್ರಹದಿಂದ ಭರತನಿಗೆ ಓರ್ವ ಪುತ್ರನು ಜನಿಸಿದನು. ಭರತನ ಹಿಂದಿನ ಮಕ್ಕಳೆಲ್ಲರೂ ವಿತಥ (ನಷ್ಟ) ರಾಗಿ ಆಮೇಲೆ ಭರದ್ವಾಜನ ಅನುಗ್ರಹದಿಂದ ಜನಿಸಿದವನಾದ ಕಾರಣ ವಿತಥನೆಂದು ಆ ಕುಮಾರನಿಗೆ ಹೆಸರಿಟ್ಟರು.

೩೧. ವಿತಥನು ಜನಿಸಿದ ಕೆಲವು ಕಾಲದಮೇಲೆ ಭರತಚಕ್ರವರ್ತಿಯು ದಿವಂಗತನಾದನು. ಭರದ್ವಾಜಮುನಿಯು ವಿತಥನನ್ನು ರಾಜ್ಯದಲ್ಲಭಿಷೇಕಮಾಡಿ ತಪೋವನಕ್ಕೆ ತೆರಳಿದನು.

೩೨-೩೩. ವಿತಥರಾಜನು ಸುಹೋತ್ರ, ಸುಹೋತಾರ, ಗಯ, ಗರ್ಗ, ಕಪಿಲರೆಂಬ ಐದು ಮಕ್ಕಳನ್ನು ಪಡೆದನು. ಸುಹೋತ್ರನಿಗೆ ಸತ್ಯವಂತನಾದ ಕಾಶಿಕ, ಗೃತ್ಸಮತಿಗಳೆಂಬೀರ್ವರು ಮಕ್ಕಳು.

shrinath.udupa@gmail.com

ತಥಾ ಗೃತ್ಸಮತೇಃ ಪುತ್ರಾ ಬ್ರಾಹ್ಮಣಾಃ ಕ್ಷತ್ರಿಯಾ ವಿಶಃ ।
ಕಾಶಿಕಸ್ಯ ತು ಕಾಶೇಯಃ ಪುತ್ರೋ ದೀರ್ಘತಪಾಸ್ತಥಾ ॥ ೬೪ ॥

ಬಭೂವ ದೀರ್ಘತಪಸೋ ವಿದ್ವಾನ್ಧನ್ವಂತರಿಃ ಸುತಃ ।
ಧನ್ವಂತರೇಸ್ತು ತನಯಃ ಕೇತುಮಾನಿತಿ ವಿಶ್ರುತಃ ॥ ೬೫ ॥

ತಥಾ ಕೇತುಮತಃ ಪುತ್ರೋ ವಿದ್ವಾನ್ಭೀಮರಥಃ ಸ್ಮೃತಃ ।
ಪುತ್ರೋ ಭೀಮರಥಸ್ಯಾಪಿ ವಾರಾಣಸ್ಯಾಧಿಪೋಽಭವತ್ ॥ ೬೬ ॥

ದಿವೋದಾಸ ಇತಿ ಖ್ಯಾತಃ ಸರ್ವಕ್ಷತ್ರಪ್ರಣಾಶನಃ ।
ದಿವೋದಾಸಸ್ಯ ಪುತ್ರಸ್ತು ವೀರೋ ರಾಜಾ ಪ್ರತರ್ದನಃ ॥ ೬೭ ॥

ಪ್ರತರ್ದನಸ್ಯ ಪುತ್ರೌ ದ್ವೌ ವತ್ಸೋ ಭಾರ್ಗವ ಏವ ಚ ।
ಅಲರ್ಕೋ ರಾಜಪುತ್ರಸ್ತು ರಾಜಾ ಸನ್ಮತಿಮಾನ್ಭುವಿ ॥ ೬೮ ॥

ಹೈಹಯಸ್ಯ ತು ದಾಯಾದ್ಯಂ ಹೃತವಾನ್ವೈ ಮಹೀಪತಿಃ ।
ಆಜಹ್ರೇ ಪಿತೃದಾಯಾದ್ಯಂ ದಿವೋದಾಸಹೃತಂ ಬಲಾತ್ ॥ ೬೯ ॥

---

೬೪. ಗೃತ್ಸಮತಿಯ ಮಕ್ಕಳು ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಎಂಬೀ ಮೂರು ಜಾತಿಯಲ್ಲೂ ಇರುವರು. ಕಾಶಿಕನ ಮಗನು ದೀರ್ಘತಪಸನು.

೬೫. ದೀರ್ಘತಪಸನ ಮಗನು ವೈದ್ಯಶ್ರೇಷ್ಠನಾದ ಧನ್ವಂತರಿಯು, ಧನ್ವಂತರಿಯ ಮಗನು ಕೇತುಮಂತನೆಂಬುವನು.

೬೬-೬೭. ಕೇತುಮಂತನ ಮಗನು ಜ್ಞಾನಿಯಾದ ಭೀಮರಥನು. ಭೀಮರಥನ ಮಗನು ಕಾಶೀರಾಜನಾದ ದಿವೋದಾಸನು. ವೀರನಾದ ಅವನು ಕ್ಷತ್ರಿಯರೆಲ್ಲರನ್ನೂ ಜಯಿಸಿದ್ದನು. ದಿವೋದಾಸನ ಮಗನು ಬುದ್ಧಿಶಾಲಿಯಾದ ಪ್ರತರ್ದನ ರಾಜನು.

೬೮. ಪ್ರತರ್ದನನಿಗೆ ವತ್ಸ, ಭಾರ್ಗವರೆಂಬೀರ್ವರು ಮಕ್ಕಳು. ವತ್ಸರಾಜನ ಮಗನು ಬುದ್ಧಿಶಾಲಿಯಾದ ಅಲರ್ಕರಾಜನು.

೬೯-೭೦. ಕಾಶಿಯ ರಾಜ್ಯವನ್ನು ಜಯಿಸುವಾಗ ದಿವೋದಾಸನು ಅಲ್ಲಿ ಹಿಂದಿನ ರಾಜನಾದ ಭದ್ರಶ್ರೇಣ್ಯನ ಮಗನಾದ ದುರ್ದಮನನ್ನು ಬಾಲಕನೆಂದು

shrinath.udupa@gmail.com

ಭದ್ರಶ್ರೇಣ್ಯಸ್ಯ ಪುತ್ರೇಣ ದುರ್ದಮೇನ ಮಹಾತ್ಮನಾ ।
ದಿವೋದಾಸೇನ ಬಾಲೇತಿ ಘೃಣಯಾಽಸೌ ವಿಸರ್ಜಿತಃ ॥ ೭೦ ॥

ಅಷ್ಟಾರಥೋ ನಾಮ ನೃಪಃ ಸುತೋ ಭೀಮರಥಸ್ಯ ವೈ ।
ತೇನ ಪುತ್ರೇಣ ಬಾಲಸ್ಯ ಪ್ರಹೃತಂ ತಸ್ಯ ಭೋ ದ್ವಿಜಾಃ ॥ ೭೧ ॥

ವೈರಸ್ಯಾಂತಂ ಮುನಿಶ್ರೇಷ್ಠಾಃ ಕ್ಷತ್ರಿಯೇಣ ವಿಧಿತ್ಸತಾ ।
ಅಲರ್ಕಃ ಕಾಶಿರಾಜಸ್ತು ಬ್ರಹ್ಮಣ್ಯಃ ಸತ್ಯಸಂಗರಃ ॥ ೭೨ ॥

ಷಷ್ಟಿಂ ವರ್ಷಸಹಸ್ರಾಣಿ ಷಷ್ಟಿಂ ವರ್ಷಶತಾನಿ ಚ ।
ಯುವಾ ರೂಪೇಣ ಸಂಪನ್ನ ಆಸೀತ್ಕಾಶಿಕುಲೋದ್ವಹಃ ॥ ೭೩ ॥

ಲೋಪಾಮುದ್ರಾಪ್ರಸಾದೇನ ಪರಮಾಯುರವಾಪ ಸಃ ।
ವಯಸೋಽಂತೇ ಮುನಿಶ್ರೇಷ್ಠಾ ಹತ್ವಾ ಕ್ಷೇಮಕರಾಕ್ಷಸಂ ॥ ೭೪ ॥

ಕೊಲ್ಲದೆ ಕರುಣೆಯಿಂದ ಬಿಟ್ಟುಬಿಟ್ಟಿದ್ದನು. ಆ ದುರ್ದಮನು ಬೆಳೆದು ದಿವೋದಾಸ ನಪಹರಿಸಿದ ಕಾಶಿರಾಜ್ಯವನ್ನೂ ಹೈಹಯನ ರಾಜ್ಯವನ್ನೂ ತನ್ನ ಪರಾಕ್ರಮದಿಂದ ಆಕ್ರಮಿಸಿದನು.

೭೧. ಭೀಮರಥನ ಮತ್ತೊಬ್ಬ ಮಗನಾದ ಅಷ್ಟಾರಥನೆಂಬ ರಾಜನು ದುರ್ದ ಮನು ಅಪಹರಿಸಿದ ಕಾಶಿರಾಜ್ಯವನ್ನು ಪುನಃ ವಶಪಡಿಸಿಕೊಂಡು ದುರ್ದಮನ ಮೇಲಿನ ವೈರವನ್ನು ತೀರಿಸಿಕೊಂಡನು.

೭೨-೭೩. ಕಾಶಿರಾಜನಾದ ಅಲರ್ಕನು ಬ್ರಾಹ್ಮಣಪ್ರಿಯನೂ, ಸತ್ಯಪ್ರತಿಜ್ಞನೂ ಆಗಿದ್ದನು. ಅವನು ಅರವತ್ತು ಸಾವಿರದ ಆರುನೂರು (೬೦,೬೦೦) ವರ್ಷ ಗಳವರೆಗೆ ಯುವಕನೂ, ಸುಂದರನೂ ಆಗಿದ್ದು ಕಾಶಿಯನ್ನಾಳುತ್ತಿದ್ದನು. ಅವ ನಿಂದ ಕಾಶಿರಾಜವಂಶವು ವೃದ್ಧಿಹೊಂದಿತು. ಇವನು ಯಾವಾಗಲೂ ಯೌವನ ವಯಸ್ಸಿನಿಂದ ಕೂಡಿದ ಸುಂದರವಾದ ಶರೀರದಿಂದಿದ್ದನು.

೭೪. ಪತಿವ್ರತೆಯಾದ ಲೋಪಾಮುದ್ರೆಯ ಅನುಗ್ರಹದಿಂದ ಆ ಅಲರ್ಕ ರಾಜನು ದೀರ್ಘಾಯುಸ್ಸನ್ನು ಪಡೆದು ವಾರಾಣಸಿ (ಕಾಶಿ) ಗೆ ಬಂದಿದ್ದ ಶಾಪವು ಕಳೆಯಲು ಅಲ್ಲಿ ನೆಲಸಿದ್ದ ಕ್ಷೇಮಕನೆಂಬ ರಾಕ್ಷಸನನ್ನು ಕೊಂದು ಪುನಃ ವಾರಾಣಸಿ ಯನ್ನು ಸುಂದರವಾದ ನಗರಿಯನ್ನಾಗಿ ಮಾಡಿ ಅಲ್ಲಿ ರಾಜ್ಯವಾಳತೊಡಗಿದನು.

shrinath.udupa@gmail.com

ರಮ್ಯಾಂ ನಿವೇಶಯಾಮಾಸ ಪುರೀಂ ವಾರಾಣಸೀಂ ನೃಪಃ ।
ಅಲರ್ಕಸ್ಯ ತು ದಾಯಾದಃ ಕ್ಷೇಮಕೋ ನಾಮ ಪಾರ್ಥಿವಃ ॥ ೭೫ ॥

ಕ್ಷೇಮಕಸ್ಯ ತು ಪುತ್ರೋ ವೈ ವರ್ಷಕೇತುಸ್ತತೋಽಭವತ್ ।
ವರ್ಷಕೇತೋಶ್ಚ ದಾಯಾದೋ ವಿಭುರ್ನಾಮ ಪ್ರಜೇಶ್ವರಃ ॥ ೭೬ ॥

ಆನರ್ತಸ್ತು ವಿಭೋಃ ಪುತ್ರಃ ಸುಕುಮಾರಸ್ತತೋಽಭವತ್ ।
ಸುಕುಮಾರಸ್ಯ ಪುತ್ರಸ್ತು ಸತ್ಯಕೇತುರ್ಮಹಾರಥಃ ॥ ೭೭ ॥

ಸುತೋಽಭವನ್ಮಹಾತೇಜಾ ರಾಜಾ ಪರಮಧಾರ್ಮಿಕಃ ।
ವತ್ಸಸ್ಯ ವತ್ಸಭೂಮಿಸ್ತು ಭರ್ಗಭೂಮಿಸ್ತು ಭಾರ್ಗವಾತ್ ॥ ೭೮ ॥

ಏತೇ ತ್ವಂಗಿರಸಃ ಪುತ್ರಾ ಜಾತಾ ವಂಶೇಽಥ ಭಾರ್ಗವೇ ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚ ಮುನಿಸತ್ತಮಾಃ ॥ ೭೯ ॥

೭೫-೭೬. ಆ ಅಲರ್ಕರಾಜನ ಮಗನು ಕ್ಷೇಮಕರಾಜನು, ಕ್ಷೇಮಕನ ಮಗನು ವರ್ಷಕೇತುವು. ವರ್ಷಕೇತುವಿನ ಮಗನು ವಿಭುರಾಜನು.

೭೭-೭೮. ವಿಭುರಾಜನ ಮಗನು ಅನರ್ತರಾಜನು. ಅವನ ಮಗನು ಸುಕುಮಾರರಾಜನು. ಆವನ ಮಗನು ಸತ್ಯಕೇತುವು. ಈ ಸತ್ಯಕೇತುವು ಮಹಾರಥನೂ ತೇಜಸ್ವಿಯೂ, ಧಾರ್ಮಿಕನೂ ಆಗಿದ್ದನು. ಪ್ರತರ್ದನನ ಮಗನಾದ ವತ್ಸರಾಜನಿಗೆ ವತ್ಸಭೂಮಿಯೆಂಬ ಮತ್ತೊಬ್ಬ ಮಗನಿದ್ದನು. ಭಾರ್ಗವನಿಗೆ ಭರ್ಗಭೂಮಿಯೆಂಬುವನು ಮಗನು.

೭೯. ಮೇಲೆ ಹೇಳಿದವರೆಲ್ಲರೂ ಭಾರ್ಗವವಂಶದಲ್ಲಿ ಹುಟ್ಟಿದವರು. ಅಂಗಿರಸ್ಸಿನ ಸಂತತಿಯುವರು. ಈ ವಂಶದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ಜಾತಿಯ ಪ್ರಜೆಗಳೂ ಜನಿಸಿರುವರು. ಎಲೈ ಮುನಿಗಳೇ ಈಗ ಅಜಮೀಢನ ವಂಶವನ್ನು ಹೇಳುವೆನು ಕೇಳುವವರಾಗಿರಿ.

shrinath.udupa@gmail.com

ಅಜಮೀಢೋಽಪರೋ ವಂಶಃ ಶ್ರೂಯತಾಂ ದ್ವಿಜಸತ್ತಮಾಃ ।
ಸುಹೋತ್ರಸ್ಯ ಬೃಹತ್ಪುತ್ರೋ ಬೃಹತಸ್ತನಯಾಸ್ತ್ರಯಃ ॥ ೮೦ ॥

ಅಜಮೀಢೋ ದ್ವಿಮೀಢಶ್ಚ ಪುರುಮೀಢಶ್ಚ ವೀರ್ಯವಾನ್ ।
ಅಜಮೀಢಸ್ಯ ಪತ್ನ್ಯಸ್ತು ತಿಸ್ರೋ ವೈ ಯಶಸಾನ್ವಿತಾಃ ॥ ೮೧ ॥

ನೀಲ ಚ ಕೇಶಿನೀ ಚೈವ ಧೂಮಿನೀ ಚ ವರಾಂಗನಾಃ ।
ಅಜಮೀಢಸ್ಯ ಕೇಶಿನ್ಯಾಂ ಜಜ್ಞೇ ಜಹ್ನುಃ ಪ್ರತಾಪವಾನ್ ॥ ೮೨ ॥

ಆಜಹ್ರೇ ಯೋ ಮಹಾಸತ್ರಂ ಸರ್ವಮೇಧಮುಖಂ ವಿಭುಂ ।
ಪತಿಲೋಭೇನ ಯಂ ಗಂಗಾ ವಿನೀತೇವ ಸಸಾರ ಹ ॥ ೮೩ ॥

ನೇಚ್ಛತಃ ಪ್ಲಾವಯಾಮಾಸ ತಸ್ಯ ಗಂಗಾ ಚ ತತ್ಸದಃ ।
ತತ್ತಯಾ ಪ್ಲಾವಿತಂ ದೃಷ್ಟ್ವಾ ಯಜ್ಞವಾಟಂ ಸಮಂತತಃ ॥ ೮೪ ॥

---

೮೦. ವಿತಥನ ಮಗನಾದ ಸುಹೋತ್ರನಿಗೆ ಬೃಹತ್‌ಯೆಂಬ ಮತ್ತೊಬ್ಬ ಮಗನಿದ್ದನು. ಆ ಬೃಹತ್‌ರಾಜನಿಗೆ ಅಜಮೀಢ, ದ್ವಿಮೀಢ, ಪುರುಮೀಢರೆಂಬ ಮೂವರು ಮಕ್ಕಳು.

೮೧. ಅವರಲ್ಲಿ ಅಜಮೀಢನಿಗೆ ನೀಲೀದೇವಿ, ಕೇಶಿನೀದೇವಿ, ಧೂಮಿನೀ ದೇವಿಯೆಂಬ ಸುಂದರಿಯರಾದ ಮೂರುಮಂದಿ ಹೆಂಡಿರು ಇದ್ದರು.

೮೨. ಕೇಶಿನೀದೇವಿಯಲ್ಲಿ ಅಜಮೀಢನಿಗೆ ಜಹ್ನುವೆಂಬ ಮಹಾಮಹಿಮನಾದ ಮಗನು ಹುಟ್ಟಿದನು. ಈ ಜಹ್ನುವು ವಿಶ್ವಜಿತ್‌ಯೆಂಬ ಮಹಾಯಾಗವನ್ನು ಮಾಡಿದನು.

೮೩. ಗಂಗಾನದಿಯು ಈ ಜಹ್ನುವನ್ನು ಮದವೆಯಾಗಬೇಕೆಂದು ವಿನೀತಳಾಗಿ ಅವನ ಬಳಿಗೆ ಹೋದಳು. ಆದರೆ ಜಹ್ನುವು ಒಪ್ಪದಿರಲು ಅವನ ಯಜ್ಞಶಾಲೆಯನ್ನು ತನ್ನ ಪ್ರವಾಹದಿಂದ ಮುಳುಗಿಸಿಬಿಟ್ಟಳು.

೮೪. ಯಜ್ಞಶಾಲೆಯು ಗಂಗಾಪ್ರವಾಹದಿಂದ ಹಾಳಾದುದನ್ನು ನೋಡಿ ಕೋಪಗೊಂಡು ಜಹ್ನುವು ಗಂಗಾನದಿಯನ್ನು

shrinath.udupa@gmail.com

ಜಹ್ನುರಸ್ಯಬ್ರವೀದ್ಗಂಗಾಂ ಕ್ರುದ್ಧೋ ವಿಪ್ರಾಸ್ತದಾ ನೃಪಃ ।
ಏಷ ತೇ ತ್ರಿಷು ಲೋಕೇಷು ಸಂಕ್ಷಿಪ್ಯಾಽಪಃ ಪಿಬಾಮ್ಯಹಂ ॥ ೮೫ ॥

ಅಸ್ಯ ಗಂಗೇಽವಲೇಪಸ್ಯ ಸದ್ಯಃ ಫಲಮವಾಪ್ನುಹಿ ।
ತತಃ ಪೀತಾಂ ಮಹಾತ್ಮಾನೋ ದೃಷ್ಟ್ವಾ ಗಂಗಾಂ ಮಹರ್ಷಯಃ ।
ಉಪನಿನ್ಯುರ್ಮಹಾಭಾಗಾ ದುಹಿತೃತ್ವೇನ ಜಾಹ್ನವೀಂ ॥ ೮೬ ॥

ಯುವನಾಶ್ವಸ್ಯ ಪುತ್ರೀಂ ತು ಕಾವೇರೀಂ ಜಹ್ನುರಾವಹತ್ ।
ಗಂಗಾಶಾಪೇನ ದೇಹಾರ್ಧಂ ಯಸ್ಯಾಃ ಪಶ್ಚಾನ್ನದೀಕೃತಂ ॥ ೮೭ ॥

ಜಹ್ನೋಸ್ತು ದಯಿತಃ ಪುತ್ರೋ ಅಜಕೋ ನಾಮ ವೀರ್ಯವಾನ್ ।
ಅಜಕಸ್ಯ ತು ದಾಯಾದೋ ಬಲಾಕಾಶ್ವೋ ಮಹೀಪತಿಃ ॥ ೮೮ ॥

ಬಭೂವ ಮೃಗಯಾಶೀಲಃ ಕುಶಿಕಸ್ತಸ್ಯ ಚಾಽಽತ್ಮಜಃ ।
ಪಹ್ಲವೈಃ ಸಹ ಸಂವೃದ್ಧೋ ರಾಜಾ ವನಚರೈಃ ಸಹ ॥ ೮೯ ॥

---

೮೫. ಎಲೌ ದುಷ್ಟಳಾದ ಗಂಗೆಯೇ, ನಿನ್ನ ಪ್ರವಾಹದ ನೀರೆಲ್ಲವನ್ನೂ ಕುಡಿಯುವೆನು. ನಿನ್ನ ಈ ಗರ್ವಕ್ಕೆ ತಕ್ಕ ಫಲವನ್ನನುಭವಿಸು ಎಂದು ಗಂಗಾನದಿಯ ನೀರನ್ನೆಲ್ಲವನ್ನೂ ಆ ಜಹ್ನುವು ಕುಡಿದನು.

೮೬. ಹೀಗೆ ಗಂಗಾನದಿಯೆಲ್ಲವನ್ನೂ ಜಹ್ನುವು ಕುಡಿದುದನ್ನು ನೋಡಿ ಮಹಾತ್ಮರಾದ ಮಹರ್ಷಿಗಳು ಆ ನದಿಗೆ ಜಹ್ನುವಿನ ಮಗಳೆಂದು ಹೆಸರಿಟ್ಟು ಅವನಿಂದ ಬಿಡಿಸಿ ಮುಂದಕ್ಕೆ ಹರಿಸಿಯಿಸಿದರು. ಆಗಿನಿಂದ ಗಂಗೆಗೆ ಜಾಹ್ನವಿಯೆಂದು ಹೆಸರಾಯಿತು.

೮೭. ಆ ಜಹ್ನುವು ಯವನಾಶ್ವನ ಮಗಳಾದ ಕಾವೇರಿದೇವಿಯನ್ನು ಮದುವೆಯಾದನು. ಮುಂದೆ ಗಂಗೆಯ ಶಾಪದಿಂದ ಆ ಕಾವೇರಿಯ ಶರೀರದ ಅರ್ಧಭಾಗವು ನದಿಯಾಯಿತು.

೮೮. ಅಜಕನೆಂಬ ವೀರರಾಜನು ಜಹ್ನುವಿನ ಪ್ರಿಯಪುತ್ರನು. ಅಜಕನ ಮಗನು ಬಲಾಕಾಶ್ವನೆಂಬ ರಾಜನು.

೮೯. ಬಲಾಕಾಶ್ವನು ಹೆಚ್ಚಾಗಿ ಬೇಟೆಯಾಡುತ್ತಿದ್ದನು. ಕುಶಿಕನು ಅವನ ಮಗನು. ಆ ಕುಶಿಕನು ಕಾಡಿನಲ್ಲಿ ಬೇಡ (ಗೋವಳ) ರೊಂದಿಗೆ ಬೆಳೆದನು.

shrinath.udupa@gmail.com

ಕುಶಿಕಸ್ತು ತಪಸ್ತೇಪೇ ಪುತ್ರಮಿಂದ್ರಸಮಂ ವಿಭುಂ ।
ಲಭೇಯಮಿತಿ ತಂ ಶಕ್ರಸ್ತ್ರಾಸಾದಭ್ಯೇತ್ಯ ಜಜ್ಞಿವಾನ್ ॥ ೯೦ ॥

ಸ ಗಾಧಿರಭವದ್ರಾಜಾ ಮಘವಾ ಕೌಶಿಕಃ ಸ್ವಯಂ ।
ವಿಶ್ವಾಮಿತ್ರಸ್ತು ಗಾಧೇಯೋ ವಿಶ್ವಾಮಿತ್ರಾತ್ತಥಾಽಷ್ಟಕಃ ॥ ೯೧ ॥

ಅಷ್ಟಕಸ್ಯ ಸುತೋ ಲೌಹಿಃ ಪ್ರೋಕ್ತೋ ಜನ್ಹುಗಣೋ ಮಯಾ ।
ಅಜಮೀಢೋಽಪರೋ ವಂಶಃ ಶ್ರೂಯತಾಂ ಮುನಿಸತ್ತಮಾಃ ॥ ೯೨ ॥

ಅಜಮೀಢಾತ್ತು ನೀಲ್ಯಾಂ ವೈ ಸುಶಾಂತಿರುದಪದ್ಯತ ।
ಪುರುಜಾತಿಃ ಸುಶಾಂತೇಶ್ಚ ಬಾಹ್ಯಾಶ್ವಃ ಪುರುಜಾತಿತಃ ॥ ೯೩ ॥

ಬಾಹ್ಯಾಶ್ವತನಯಾಃ ಪಂಚ ಸ್ಥಿತಾ ಜನಪದಾವೃತಾಃ ।
ಮುದ್ಗಲಃ ಸೃಂಜಯಶ್ಚೈವ ರಾಜಾ ಬೃಹದಿಷುಸ್ತಥಾ ॥ ೯೪ ॥

---

೯೦. ಆ ಕುಶಿಕನು ಇಂದ್ರನಿಗೆ ಸಾಟಿಯಾದಂತಹ ಮಗನನ್ನು ಪಡೆಯ ಬೇಕೆಂದು ತಪಸ್ಸುಮಾಡಿದನು. ಎಲ್ಲಿ ಬೇರೊಬ್ಬ ಇಂದ್ರನು ಹುಟ್ಟುವನೋ ಎಂದು ಹೆದರಿ ಇಂದ್ರನು ತಾನೇ ಆ ಕುಶಿಕನ ಮಗನಾಗಿ ಜನಿಸಿದನು.

೯೧. ಆ ಇಂದ್ರನು ಕುಶಿಕನ ಮಗನಾದ ಗಾಧಿರಾಜನಾಗಿ ಜನಿಸಿದನು. ವಿಶ್ವಾಮಿತ್ರನು ಗಾಧಿರಾಜನ ಮಗನು. ವಿಶ್ವಾಮಿತ್ರನಿಂದ ಅಷ್ಟಕನೆಂಬುವನು ಜನಿಸಿದನು. ವಿಶ್ವಾಮಿತ್ರನಿಗೆ ಎಂಟು ಮಕ್ಕಳು ಜನಿಸಿದರೆಂದು ಹಿಂದೆ ಹೇಳಿರುವೆನಷ್ಟೆ.

೯೨. ಅಷ್ಟಕನ ಮಗನು ಲೌಹಿಯು. ಎಲೈ ಮುನಿಗಳೇ ಹೀಗೆ ಜಹ್ನುವಿನ ವಂಶವನ್ನು ಹೇಳಿರುವೆನು. ಮುಂದೆ ಅಜಮೀಢನ ಮತ್ತೊಂದು ವಂಶವನ್ನು ಹೇಳುವೆನು.

೯೩. ಅಜಮೀಢನಿಂದ ನೀಲೀದೇವಿಯಲ್ಲಿ ಸುಶಾಂತಿಯೆಂಬ ಕುಮಾರನುದಯಿಸಿದನು. ಪುರುಜಾತಿಯೆಂಬುವನು ಸುಶಾಂತಿಯ ಮಗನು, ಬಾಹ್ಯಾಶ್ವನೆಂಬುವನು ಪುರುಜಾತಿರಾಜನ ಮಗನು.

೯೪-೯೫. ಆ ಬಾಹ್ಯಾಶ್ವನಿಗೆ ಮುದ್ಗಲ, ಸೃಂಜಯ, ಬೃಹದಿಷು, ಯವೀನರ, ಕೃಮಿಲಾಶ್ವರೆಂಬ ಐದುಮಂದಿ ವೀರರಾದ ಮಕ್ಕಳಿದ್ದರು. ಇವರು ದೇವತೆ

shrinath.udupa@gmail.com

ಯವೀನರಶ್ಚ ವಿಕ್ರಾಂತಃ ಕೃಮಿಲಾಶ್ವಶ್ಚ ಪಂಚಮಃ ।
ಪಂಚೈತೇ ರಕ್ಷಣಾಯಾಲಂ ದೇಶಾನಾಮಿತಿ ವಿಶ್ರುತಾಃ ॥ ೯೫ ॥

ಪಂಚಾನಾಂ ತೇ ತು ಪಂಚಾಲಾಃ ಸ್ಫೀತಾ ಜನಪದಾವೃತಾಃ ।
ಅಲಂ ಸಂರಕ್ಷಣೇ ತೇಷಾಂ ಪಂಚಾಲಾ ಇತಿ ವಿಶ್ರುತಾಃ ॥ ೯೬ ॥

ಮುದ್ಗಲಸ್ಯ ತು ದಾಯಾದೋ ಮೌದ್ಗಲ್ಯಃ ಸುಮಹಾಯಶಾಃ ।
ಇಂದ್ರಸೇನಾ ಯತೋ ಗರ್ಭಂ ವಧ್ರ್ಯ್ಯಂ ಚ ಪ್ರತ್ಯಪದ್ಯತ ॥ ೯೭ ॥

ಆಸೀತ್ಪಂಚಜನಃ ಪುತ್ರಃ ಸೃಂಜಯಸ್ಯ ಮಹಾತ್ಮನಃ ।
ಸುತಃ ಪಂಚಜನಸ್ಯಾಪಿ ಸೋಮದತ್ತೋ ಮಹೀಪತಿಃ ॥ ೯೮ ॥

ಸೋಮದತ್ತಸ್ಯ ದಾಯಾದಃ ಸಹದೇವೋ ಮಹಾಯಶಾಃ ।
ಸಹದೇವಸುತಶ್ಚಾಪಿ ಸೋಮಕೋ ನಾಮ ವಿಶ್ರುತಃ ॥ ೯೯ ॥

ಗಳನ್ನೂ ರಕ್ಷಿಸಲು ಶಕ್ತರಾಗಿದ್ದರು. ಆದ ಕಾರಣ ಇವರಿಗೆ ಪಂಚಾಲರೆಂದು ಹೆಸರಾಯಿತು. ಪಂಚ–ಈ ಐದು ಜನರೇ, ಅಲಂ–ದೇವತೆಗಳನ್ನೂ ರಕ್ಷಿಸಲು ಸಾಕಾದವರು ಎಂದರ್ಥವು.

೯೬. ಆ ಪಂಚಾಲರಾಳತಕ್ಕ ದೇಶಕ್ಕೂ ಪಂಚಾಲವೆಂದು ಹೆಸರು. ಆ ದೇಶವು ತುಂಬಾ ಧನಧಾನ್ಯಸಮೃದ್ಧಿಯುಳ್ಳದ್ದು. ಇಂತಹ ದೇಶವು ಧೀರರಾದ ಆ ಐದುಮಂದಿ ರಾಜರನ್ನೂ ರಕ್ಷಿಸಲು ಸಮರ್ಥವಾದುದರಿಂದ ಅದಕ್ಕೂ ಪಂಚಾಲ (ಪಂಚ—ವೀರರಾದ ಮುದ್ಗಲ ಮುಂತಾದ ಐದುಮಂದಿ ರಾಜರನ್ನೂ ಸಲುಹಲು ಅಲಂ—ಸಮರ್ಥವಾದುದು) ವೆಂದು ಹೆಸರಾಯಿತು.

೯೭. ಮುದ್ಗಲನ ಮಗನು ಮೌದ್ಗಲ್ಯನು. ಈ ಮೌದ್ಗಲ್ಯನಿಂದ ಇಂದ್ರಸೇನಾದೇವಿಯು ಗರ್ಭವನ್ನು ಧರಿಸಿದಳು. ಆದರಾಗರ್ಭವು ಬೆಳೆಯದೇ ವಿಫಲವಾಯಿತು.

೯೮. ಮಹಾತ್ಮನಾದ ಸೃಂಜಯನೆಂಬ ಪಂಚಾಲರಾಜನಿಗೆ ಪಂಚಜನನೆಂಬ ಕುಮಾರನನುದಯಿಸಿದನು. ಪಂಚನನ ಮಗನು ಸೋಮದತ್ತನೆಂಬ ರಾಜನು.

೯೯. ಸೋಮದತ್ತನ ಮಗನು ಸಹದೇವರಾಜನು. ಸಹದೇವನ ಮಗನು ಸೋಮಕನು.

shrinath.udupa@gmail.com

ಅಜಮೀಢಸುತೋ ಜಾತಃ ಕ್ಷೀಣೇ ವಂಶೇ ತು ಸೋಮಕಃ ।
ಸೋಮಕಸ್ಯ ಸುತೋ ಜಂತುರ್ಯಸ್ಯ ಪುತ್ರಶತಂ ಬಭೌ ॥ ೧೦೦ ॥

ತೇಷಾಂ ಯವೀಯಾನ್ ಪೃಷತೋ ದ್ರುಪದಸ್ಯ ಪಿತಾ ಪ್ರಭುಃ ।
ಅಜಮೀಢಾಃ ಸ್ಮೃತಾಶ್ಚೈತೇ ಮಹಾತ್ಮಾನಸ್ತು ಸೋಮಕಾಃ ॥ ೧೦೧ ॥

ಮಹಿಷೀ ತ್ವಜಮೀಢಸ್ಯ ಧೂಮಿನೀ ಪುತ್ರಗೃದ್ಧಿನೀ ।
ಪತಿವ್ರತಾ ಮಹಾಭಾಗಾ ಕುಲಜಾ ಮುನಿಸತ್ತಮಾಃ ॥ ೧೦೨ ॥

ಸಾ ಚ ಪುತ್ರಾರ್ಥಿನೀ ದೇವೀ ವ್ರತಚರ್ಯಾಸಮನ್ವಿತಾ ।
ತತೋ ವರ್ಷಾಯುತಂ ತಪ್ತ್ವಾ ತಪಃ ಪರಮದುಶ್ಚರಂ ॥ ೧೦೩ ॥

ಹುತ್ವಾಗ್ನಿಂ ವಿಧಿವತ್ಸಾ ತು ಪವಿತ್ರಾ ಮಿತಭೋಜನಾ ।
ಅಗ್ನಿಹೋತ್ರಕುಶೇಷ್ವೇವ ಸುಷ್ವಾಪ ಮುನಿಸತ್ತಮಾಃ ॥ ೧೦೪ ॥

---

೧೦೦. ಜನಿಸಿದ ಮಕ್ಕಳೆಲ್ಲರೂ ಮೃತರಾಗಿ ವಂಶವು ನಷ್ಟವಾದ್ದರಿಂದ ಅಜಮೀಢನು ಈ ಸೋಮಕನನ್ನೇ ತನ್ನ ಮಗನನ್ನಾಗಿ ಮಾಡಿಕೊಂಡನು. ಈ ಸೋಮಕನಿಂದ ಜಂತುವೆಂಬುವನು ಜನಿಸಿದನು. ಆ ಜಂತುವಿಗೆ ನೂರುಮಂದಿ ಮಕ್ಕಳಿದ್ದರು.

೧೦೧. ಜಂತುರಾಜನ ನೂರುಮಂದಿ ಮಕ್ಕಳಲ್ಲಿ ಕೊನೆಯವನು ಪೃಷತ ರಾಜನು. ಇವನಿಂದ ದ್ರುಪದರಾಜನು ಜನಿಸಿದನು. ಸೋಮಕನಿಂದ ಮುಂದಿನ ಈ ಪ್ರಜೆಗಳು ಅಜಮೀಢನ ವಂಶದವರೇ ಆದರು.

೧೦೨. ಅಜಮೀಢನ ಮೂರನೇ ಹೆಂಡತಿಯಾದ ಧೂಮಿನೀದೇವಿಯು ಪತಿವ್ರತೆಯೂ, ಪುಣ್ಯವತಿಯೂ ಸತ್ಕುಲದಲ್ಲಿ ಜನಿಸಿದವಳೂ ಆಗಿದ್ದಳು.

೧೦೩-೧೦೪. ಆ ಧೂಮಿನಿಯು ಬಹುಕಾಲ ಮಕ್ಕಳಾಗದಿರಲು ಮಕ್ಕಳನ್ನು ಪಡೆಯುವುದಕ್ಕಾಗಿ ನಿತ್ಯವೂ ವಿಧಿವತ್ತಾಗಿ ಅಗ್ನಿಯಲ್ಲಿ ಹೋಮಮಾಡುತ್ತಾ ಮಿತವಾಗಿ ಆಹಾರವನ್ನು ಸೇವಿಸುತ್ತಿದ್ದಳು. ಅಗ್ನಿಹೋತ್ರದ ಉಪಯೋಗದಿಂದ ಪರಿಶುದ್ಧವಾದ ದರ್ಭೆಗಳನ್ನೇ ಹಾಸಿ ಮಲಗುತ್ತಿದ್ದಳು. ಹೀಗೆ ವ್ರತವನ್ನು ಮಾಡುತ್ತಾ ಆ ಧೂಮಿನಿಯು ಹತ್ತುಸಾವಿರವರ್ಷಗಳ ವರೆಗೆ ಘೋರವಾದ ತಪಸ್ಸನ್ನಾಚರಿಸಿದಳು.

shrinath.udupa@gmail.com

ಧೂಮಿನ್ಯಾ ಸ ತಯಾ ದೇವ್ಯಾ ತ್ವಜಮೀಢಃ ಸಮೀಯಿವಾನ್ ।
ಋಕ್ಷಂ ಸಂಜನಯಾಮಾಸ ಧೂಮ್ರವರ್ಣಂ ಸುದರ್ಶನಂ ॥ ೧೦೫ ॥

ಋಕ್ಷಾತ್ಸಂವರಣೋ ಜಜ್ಞೇ ಕುರುಃ ಸಂವರಣಾತ್ತಥಾ ।
ಯಃ ಪ್ರಯಾಗಾದತಿಕ್ರಮ್ಯ ಕುರುಕ್ಷೇತ್ರಂ ಚಕಾರ ಹ ॥ ೧೦೬ ॥

ಪುಣ್ಯಂ ಚ ರಮಣೀಯಂ ಚ ಪುಣ್ಯಕೃದ್ಭಿರ್ನಿಷೇವಿತಂ ।
ತಸ್ಯಾನ್ವವಾಯಃ ಸುಮಹಾನ್ಯಸ್ಯ ನಾಮ್ನಾಽಥ ಕೌರವಾಃ ॥ ೧೦೭ ॥

ಕುರೋಶ್ಚ ಪುತ್ರಾಶ್ಚತ್ವಾರಃ ಸುಧನ್ವಾ ಸುಧನುಸ್ತಥಾ ।
ಪರೀಕ್ಷಿಚ್ಚ ಮಹಾಬಾಹುಃ ಪ್ರವರಶ್ಚಾರಿಮೇಜಯಃ ॥ ೧೦೮ ॥

ಪರೀಕ್ಷಿತಸ್ತು ದಾಯಾದೋ ಧಾರ್ಮಿಕೋ ಜನಮೇಜಯಃ ।
ಶ್ರುತಸೇನೋಽಗ್ರಸೇನಶ್ಚ ಭೀಮಸೇನಶ್ಚ ನಾಮತಃ ॥ ೧೦೯ ॥

---

೧೦೫. ಆಗ ಧೂಮಿನಿಯಲ್ಲಿ ಅಜಮೀಢನಿಂದ ಋಕ್ಷನೆಂಬ ಕುಮಾರನುದಯಿಸಿದನು. ಅವನು ಮಾಸಲು ಬಿಳಿಯ ವರ್ಣವುಳ್ಳವನಾಗಿ ಸುಂದರನಾಗಿದ್ದನು.

೧೦೬. ಋಕ್ಷನಿಂದ ಸಂವರಣನೆಂಬುವವನು ಜನಿಸಿದನು. ಸಂವರಣನಿಂದ ಕುರುರಾಜನು ಹುಟ್ಟಿದನು. ಈ ಕುರುರಾಜನು ಕುರುಕ್ಷೇತ್ರವನ್ನು ನಿರ್ಮಿಸಿ ಅಲ್ಲಿ ರಾಜ್ಯವಾಳಿದನು. ಆ ಕುರುಕ್ಷೇತ್ರವು ಪವಿತ್ರವೂ ಮನೋಹರವೂ ಆಗಿರುವುದು. ಪುಣ್ಯವಂತರಾದ ಅನೇಕ ಮಹರ್ಷಿಗಳು ಆ ಕ್ಷೇತ್ರವನ್ನು ಸೇವಿಸುತ್ತಾ ಅಲ್ಲಿ ವಾಸ ಮಾಡುತ್ತಿರುವರು.

೧೦೭. ಆ ಕುರುವಿನ ವಂಶವು ವಿಸ್ತಾರವಾಗಿರುವುದು. ಆ ವಂಶದವರಿಗೆಲ್ಲರಿಗೂ ಕೌರವರೆಂದು ಹೆಸರು.

೧೦೮. ಸುಧನು, ವೀರನಾದ ಪರೀಕ್ಷಿತ್, ಸುಧನ್ವಾ, ಅರಿಮೇಜಯರೆಂಬ ನಾಲ್ವರು ಕುರುವಿನ ಮಕ್ಕಳು. ಪರೀಕ್ಷಿತನು ವೀರನೂ ಹಿರಿಯವನೂ ಆಗಿದ್ದನು.

೧೦೯. ಪರೀಕ್ಷಿತನಿಗೆ ಧಾರ್ಮಿಕನಾದ ಜನಮೇಜಯ, ಶ್ರುತಸೇನ, ಉಗ್ರಸೇನ, ಭೀಮಸೇನರೆಂಬ ನಾಲ್ವರು ಮಕ್ಕಳು. ಪರೀಕ್ಷಿತನ ಈ ಮಕ್ಕಳೆಲ್ಲರೂ ಮಹಾಮಹಿಮರು, ಬಲಿಷ್ಠರು, ಪರಾಕ್ರಮಿಗಳು.

shrinath.udupa@gmail.com

ಏತೇ ಸರ್ವೇ ಮಹಾಭಾಗಾ ವಿಕ್ರಾಂತಾ ಬಲಶಾಲಿನಃ ।
ಜನಮೇಜಯಸ್ಯ ಪುತ್ರಸ್ತು ಸುರಥೋ ಮತಿಮಾಂಸ್ತಥಾ ॥ ೧೧೦ ॥

ಸುರಥಸ್ಯ ತು ವಿಕ್ರಾಂತಃ ಪುತ್ರೋ ಜಜ್ಞೇ ವಿದೂರಥಃ ।
ವಿದೂರಥಸ್ಯ ದಾಯಾದೋ ಋಕ್ಷ ಏವ ಮಹಾರಥಃ ॥ ೧೧೧ ॥

ದ್ವಿತೀಯಸ್ತು ಭರದ್ವಾಜಾನ್ನಾಮ್ನಾ ತೇನೈವ ವಿಶ್ರುತಃ ।
ದ್ವಾವೃಕ್ಷೌ ಸೋಮವಂಶೇಽಸ್ಮಿನ್ ದ್ವಾವೇವ ಚ ಪರೀಕ್ಷಿತೌ ॥ ೧೧೨ ॥

ಭೀಮಸೇನಾಸ್ತ್ರಯೋ ವಿಪ್ರಾ ದ್ವೌ ಚಾಪಿ ಜನಮೇಜಯೌ ।
ಋಕ್ಷಸ್ಯ ತು ದ್ವಿತೀಯಸ್ಯ ಭೀಮಸೇನೋಽಭವತ್ಸುತಃ ॥ ೧೧೩ ॥

ಪ್ರತೀಪೋ ಭೀಮಸೇನಾತ್ತು ಪ್ರತೀಪಸ್ಯ ತು ಶಂತನುಃ ।
ದೇವಾಪಿರ್ಬಾಹ್ಲಿಕಶ್ಚೈವ ತ್ರಯ ಏವ ಮಹಾರಥಾಃ ॥ ೧೧೪ ॥

೧೧೦–೧೧೧. ಜನಮೇಜಯನ ಮಗನು ಬುದ್ಧಿಶಾಲಿಯಾದ ಸುರಥರಾಜನು ಸುರಥನ ಮಗನು ವೀರನಾದ ವಿಧೂರಥರಾಜನು, ವಿದೂರಥನ ಮಗನು ಋಕ್ಷನೆಂಬ ಮಹಾವೀರನು.

ವಿದೂರಥನಿಗೆ ಮತ್ತೊಬ್ಬ ಮಗನು ಭರದ್ವಾಜನ ಅನುಗ್ರಹದಿಂದ ಜನಿಸಿದನು ಆಕಾರಣ ಆ ಕುಮಾರನಿಗೆ ಭಾರದ್ವಾಜನೆಂದೇ ಹೆಸರಾಯಿತು.

೧೧೨. ಎಲೈ ಮುನಿಗಳೇ, ಚಂದ್ರವಂಶದಲ್ಲಿ ಋಕ್ಷರೆಂಬ ಹೆಸರಿನ ರಾಜರು ಇಬ್ಬರಿರುವರು. ಪರೀಕ್ಷಿತರು ಇಬ್ಬರಿರುವರು, ಭೀಮಸೇನರು ಮೂವರಿರುವರು. ಜನಮೇಜಯರೂ ಸಹ ಇಬ್ಬರು ಇರುವರು.

೧೧೩–೧೧೪. ಎರಡನೆಯ (ಇಮ್ಮಡಿ) ಋಕ್ಷರಾಜನ ಮಗನು ಭೀಮಸೇನನೆಂಬುವನು. ಭೀಮಸೇನನಿಂದ ಪ್ರತೀಪನೆಂಬುವನು ಹುಟ್ಟಿದನು. ಪ್ರತೀಪನಿಗೆ ಶಂತನು, ದೇವಾಪಿ, ಬಾಹ್ಲಿಕರೆಂಬ ಮೂವರು ಮಕ್ಕಳು. ಈ ಮೂವರೂ ಮಹಾರಥರಾಗಿದ್ದರು.

shrinath.udupa@gmail.com

ಶಂತನೋಽಸ್ತ್ವಭವದ್ಭೀಷ್ಮಸ್ತಸ್ಮಿನ್ ವಂಶೇ ದ್ವಿಜೋತ್ತಮಾಃ ।
ಬಾಹ್ಲಿಕಸ್ಯ ತು ರಾಜರ್ಷೇರ್ವಂಶಂ ಶೃಣುತ ಭೋ ದ್ವಿಜಾಃ ॥ ೧೧೫ ॥

ಬಾಹ್ಲಿಕಸ್ಯ ಸುತಶ್ಚೈವ ಸೋಮದತ್ತೋ ಮಹಾಯಶಾಃ ।
ಜಜ್ಞಿರೇ ಸೋಮದತ್ತಾತ್ತು ಭೂರಿರ್ಭೂರಿಶ್ರವಾಃ ಶಲಃ ॥ ೧೧೬ ॥

ಉಪಾಧ್ಯಾಯಸ್ತು ದೇವಾನಾಂ ದೇವಾಪಿರಭವನ್ಮುನಿಃ ।
ಚ್ಯವನಪುತ್ರಃ ಕೃತಕ ಇಷ್ಟ ಆಸೀನ್ಮಹಾತ್ಮನಃ ॥ ೧೧೭ ॥

ಶಂತನುಸ್ತ್ವಭವದ್ರಾಜಾ ಕೌರವಾಣಾಂ ಧುರಂಧರಃ ।
ಶಾಂತನೋಃ ಸಂಪ್ರವಕ್ಷ್ಯಾಮಿ ವಂಶಂ ತ್ರೈಲೋಕ್ಯವಿಶ್ರುತಂ ॥ ೧೧೮ ॥

ಗಾಂಗಂ ದೇವವ್ರತಂ ನಾಮ ಪುತ್ರಂ ಸೋಽಜನಯತ್ಪ್ರಭುಃ ।
ಸ ತು ಭೀಷ್ಮ ಇತಿ ಖ್ಯಾತಃ ಪಾಂಡವಾನಾಂ ಪಿತಾಮಹಃ ॥ ೧೧೯ ॥

---

೧೧೫. ಈ ಶಂತನುವಿನ ಮಗನೇ ದೇವವ್ರತನಾದ ಭೀಷ್ಮನು, ಎಲೈ ಮುನಿ ಶ್ರೇಷ್ಠರೇ ಈಗ ಬಾಹ್ಲಿಕನ ವಂಶವನ್ನು ಹೇಳುವೆನು ಕೇಳಿರಿ.

೧೧೬. ಬಾಹ್ಲಿಕನ ಮಗನು ಸೋಮದತ್ತನು. ಅವನು ತುಂಬಾ ಕೀರ್ತಿ ಶಾಲಿಯಾಗಿದ್ದನು. ಆ ಸೋಮದತ್ತನಿಂದ ಭೂರಿ, ಭೂರಿಶ್ರವ, ಶಲರೆಂಬ ಮಕ್ಕಳು ಜನಿಸಿದರು.

೧೧೭. ದೇವಾಪಿಯು ಮುನಿಯಾಗಿದ್ದು ದೇವತೆಗಳಿಗೆ ಉಪಾಧ್ಯಾಯನಾಗಿದ್ದನು. ಚ್ಯವನಮಹರ್ಷಿಯ ಮಗನಾದ ಕೃತಕಮುನಿಯು ಈ ದೇವಾಪಿಗೆ ಪ್ರಿಯ ಬಂಧುವಾಗಿದ್ದನು.

೧೧೮. ಶಂತನುರಾಜನು ಕೌರವವಂಶದ ರಾಜರಲ್ಲಿ ಗಣ್ಯನಾಗಿದ್ದನು. ಅವನ ವಂಶವು ಮೂರು ಲೋಕಗಳಲ್ಲೂ ಪ್ರಸಿದ್ಧವಾಗಿರುವುದು. ಈಗ ಆ ಶಂತನು ವಂಶವನ್ನು ಹೇಳುವೆನು.

೧೧೯. ಆ ಶಂತನುಚಕ್ರವರ್ತಿಯು ಗಂಗಾದೇವಿಯಲ್ಲಿ ದೇವವ್ರತನೆಂಬ ಮಗನನ್ನು ಪಡೆದನು. ಆ ದೇವವ್ರತನೇ ಪಾಂಡವರ ಅಜ್ಜನಾದ ಪ್ರಸಿದ್ಧ ಭೀಷ್ಮನು.

shrinath.udupa@gmail.com

ಕಾಲೀ ವಿಚಿತ್ರವೀರ್ಯಂ ತು ಜನಯಾಮಾಸ ಭೋ ದ್ವಿಜಾಃ ।
ಶಾಂತನೋರ್ದಯಿತಂ ಪುತ್ರಂ ಧರ್ಮಾತ್ಮಾನಮಕಲ್ಮಷಂ ॥ ೧೨೦ ॥

ಕೃಷ್ಣದ್ವೈಪಾಯನಾಚ್ಚೈವ ಕ್ಷೇತ್ರೇ ವೈಚಿತ್ರವೀರ್ಯಕೇ ।
ಧೃತರಾಷ್ಟ್ರಂ ಚ ಪಾಂಡುಂ ಚ ವಿದುರಂ ಚಾಪ್ಯಜೀಜನತ್ ॥ ೧೨೧ ॥

ಧೃತರಾಷ್ಟ್ರಸ್ತು ಗಾಂಧಾರ್ಯಾಂ ಪುತ್ರಾನುತ್ಪಾದಯಚ್ಛತಂ ।
ತೇಷಾಂ ದುರ್ಯೋಧನಃ ಶ್ರೇಷ್ಠಃ ಸರ್ವೇಷಾಮಪಿ ಸ ಪ್ರಭುಃ ॥ ೧೨೨ ॥

ಪಾಂಡೋರ್ಧನಂಜಯಃ ಪುತ್ರಃ ಸೌಭದ್ರಸ್ತಸ್ಯ ಚಾಽಽತ್ಮಜಃ ।
ಅಭಿಮನ್ಯೋಃ ಪರೀಕ್ಷಿತ್ತು ಪಿತಾ ಪಾರೀಕ್ಷಿತಸ್ಯ ಹ ॥ ೧೨೩ ॥

ಪಾರೀಕ್ಷಿತಸ್ಯ ಕಾಶ್ಯಾಯಾಂ ದ್ವೌ ಪುತ್ರೌ ಸಂಬಭೂವತುಃ ।
ಚಂದ್ರಾಪೀಡಸ್ತು ನೃಪತಿಃ ಸೂರ್ಯಾಪೀಡಶ್ಚ ಮೋಕ್ಷವಿತ್ ॥ ೧೨೪ ॥

---

೧೨೦. ಶಂತನುವಿನ ಕಾಲೀ ಅಥವಾ ಯೋಜನಗಂಧಿಯೆಂಬ ಎರಡನೆ ಹೆಂಡತಿಯು ವಿಚಿತ್ರವೀರ್ಯನೆಂಬುವವನನ್ನು ಹಡೆದಳು. ಆ ಕುಮಾರನು ಶಂತನುವಿಗೆ ತುಂಬಾ ಪ್ರಿಯನೂ ಧರ್ಮಾತ್ಮನೂ ತುಂಬಾ ಪವಿತ್ರನೂ ಆಗಿದ್ದನು.

೧೨೧. ವಿಚಿತ್ರವೀರ್ಯನು ಮಕ್ಕಳಿಲ್ಲದೇ ಅಲ್ಪಾಯುಸ್ಸಿನಲ್ಲಿಯೇ ಮೃತನಾಗಲು ಆ ವಿಚಿತ್ರವೀರ್ಯನ ಹೆಂಡತಿಯಲ್ಲಿ ವ್ಯಾಸಮಹಾಮುನಿಯು ಧೃತರಾಷ್ಟ್ರ, ಪಾಂಡು, ವಿದುರರೆಂಬ ಮೂರುಮಕ್ಕಳನ್ನು ಉತ್ಪಾದನಮಾಡಿದನು.

೧೨೨. ಧೃತರಾಷ್ಟ್ರನು ಗಾಂಧಾರಿದೇವಿಯಲ್ಲಿ ನೂರು ಮಕ್ಕಳನ್ನು ಪಡೆದನು. ಅವರಲ್ಲಿ ದುರ್ಯೋಧನನು ಹಿರಿಯವನು. ಅವನೇ ರಾಜನಾಗಿ ರಾಜ್ಯವಾಳುತ್ತಿದ್ದನು.

೧೨೩. ಪಾಂಡುರಾಜನಿಂದ ಧನಂಜಯ ಅಥವಾ ಅರ್ಜುನನು ಜನಿಸಿದನು. ಅಭಿಮನ್ಯುವು ಸುಭದ್ರೆಯಲ್ಲಿ ಅರ್ಜುನನಿಂದ ಜನಿಸಿದನು. ಅಭಿಮನ್ಯುವಿನ ಮಗನು ಪರೀಕ್ಷಿತನು. ಪರೀಕ್ಷಿತರಾಜನ ಮಗನು ಜನಮೇಜಯನು.

೧೨೪. ಪರೀಕ್ಷಿತನಿಂದ ಜನಮೇಜಯನಿಗೆ ಚಂದ್ರಾಪೀಡ, ಸೂರ್ಯಾಪೀಡರೆಂಬೀರ್ವರು ಮಕ್ಕಳು. ಅವರಲ್ಲಿ ಚಂದ್ರಾಪೀಡನು ರಾಜನಾಗಿದ್ದನು. ಸೂರ್ಯಾಪೀಡನು ಮುಕ್ತಿಮಾರ್ಗವನ್ನನುಸರಿಸಿದನು.

shrinath.udupa@gmail.com

ಚಂದ್ರಾಪೀಡಸ್ಯ ಪುತ್ರಾಣಾಂ ಶತಮುತ್ತಮಧನ್ವಿನಾಂ ।
ಜಾನಮೇಜಯಮಿತ್ಯೇವಂ ಕ್ಷಾತ್ರಂ ಭುವಿ ಪರಿಶ್ರುತಂ ॥ ೧೨೫ ॥

ತೇಷಾಂ ಜ್ಯೇಷ್ಠಸ್ತು ತತ್ರಾಽಽಸೀತ್ಪುರೇ ವಾರಾಣಸಾಹ್ವಯೇ ।
ಸತ್ಯಕರ್ಣೋ ಮಹಾಬಾಹುರ್ಯಜ್ವಾ ವಿಪುಲದಕ್ಷಿಣಃ ॥ ೧೨೬ ॥

ಸತ್ಯಕರ್ಣಸ್ಯ ದಾಯಾದಃ ಶ್ವೇತಕರ್ಣಃ ಪ್ರತಾಪವಾನ್ ।
ಅಪುತ್ರಃ ಸ ತು ಧರ್ಮಾತ್ಮಾ ಪ್ರವಿವೇಶ ತಪೋವನಂ ॥ ೧೨೭ ॥

ತಸ್ಮಾದ್ವನಗತಾ ಗರ್ಭಂ ಯಾದವೀ ಪ್ರತ್ಯಪದ್ಯತ ।
ಸುಚಾರೋರ್ದುಹಿತಾ ಸುಭ್ರೂರ್ಮಾಲಿನೀ ಗ್ರಾಹಮಾಲಿನೀ ॥ ೧೨೮ ॥

ಸಂಭೂತೇ ಸ ಚ ಗರ್ಭೇ ಚ ಶ್ವೇತಕರ್ಣಃ ಪ್ರಜೇಶ್ವರಃ ।
ಅನ್ವಗಚ್ಛತ್ತತಂ ಪೂರ್ವಂ ಮಹಾಪ್ರಸ್ಥಾನಮಚ್ಯುತಂ । ॥ ೧೨೯ ॥

೧೨೫. ಚಂದ್ರಾಪೀಡನಿಗೆ ನೂರುಮಂದಿ ಮಕ್ಕಳು. ಅವರು ಜನಮೇಜಯರೆಂದು ಭೂಮಿಯಲ್ಲಿ ಪ್ರಸಿದ್ಧರಾದರು.

೧೨೬. ಆ ನೂರುಮಂದಿ ಜನಮೇಜಯರಲ್ಲಿ ಹಿರಿಯವನಾದ ಸತ್ಯಕರ್ಣನು ವೀರನೂ, ಯಾಗಕರ್ತನೂ ಉದಾರನೂ ಆಗಿದ್ದು ವಾರಾಣಸ [ವಾರಣಾವತ ಅಥವಾ ಕಾಶಿ] ಎಂಬ ನಗರದಲ್ಲಿ ರಾಜ್ಯವಾಳುತ್ತಿದ್ದನು.

೧೨೭. ಸತ್ಯಕರ್ಣನ ಮಗನು ಪ್ರತಾಪಿಯಾದ ಶ್ವೇತಕರ್ಣನು. ಧರ್ಮಾತ್ಮನಾದ ಅವನು ಬಹುಕಾಲದವರೆಗೆ ಮಕ್ಕಳಾಗದಿರಲು ಮಕ್ಕಳನ್ನು ಪಡೆಯುವುದಕ್ಕಾಗಿ ತಪಸ್ಸುಮಾಡಲು ವನಕ್ಕೆ ಪತ್ನಿಯೊಡನೆ ತೆರಳಿದನು.

೧೨೮. ಸತ್ಯಕರ್ಣನೊಡನೆ ತೆರಳಿದ ಅವನ ಪತ್ನಿಯಾದ ಮಾಲಿನೀ ದೇವಿಯು ಯದುವಂಶದ ಸುಚಾರುರಾಜನ ಮಗಳು. ಗ್ರಾಹಮಾಲಿನಿಯೆಂದೂ ಅವಳಿಗೆ ಹೆಸರಿದ್ದಿತು. ಆ ಮಾಲಿನಿಯು ವನದಲ್ಲಿ ಸತ್ಯಕರ್ಣನಿಂದ ಗರ್ಭವನ್ನು ಧರಿಸಿದಳು.

೧೨೯. ಆ ಮಾಲಿನಿಯು ಗರ್ಭವತಿಯಾಗಲು ಶ್ವೇತಕರ್ಣರಾಜನು ಅವಳೊಡನೆ ತನ್ನ ರಾಜಧಾನಿಗೆ ಅಥವಾ ಹಿಂದೆ ತಾನು ನಿರ್ಮಿಸಿದ ಅಚ್ಯುತವೆಂಬ ಕ್ಷೇತ್ರಕ್ಕೆ ಪ್ರಯಾಣವನ್ನು ಬೆಳೆಸಿದನು.

shrinath.udupa@gmail.com

ಸಾ ತು ದೃಷ್ಟ್ವಾ ಪ್ರಿಯಂ ತಂ ಚ ಮಾಲಿನೀ ಪೃಷ್ಠತೋಽನ್ವಗಾತ್ ।
ಸುಚಾರೋರ್ದುಹಿತಾ ಸಾಧ್ವೀ ವನೇ ರಾಜೀವಲೋಚನಾ ॥ ೧೩೦ ॥

ಪಥಿ ಸಾ ಸುಷುವೇ ಬಾಲಾ ಸುಕುಮಾರಂ ಕುಮಾರಕಂ ।
ತಮುಪಾಸ್ಯಾಥ ತತ್ರೈವ ರಾಜಾನಂ ಸಾಽನ್ವಗಚ್ಛತ ॥ ೧೩೧ ॥

ಪತಿವ್ರತಾ ಮಹಾಭಾಗಾ ದ್ರೌಪದೀವ ಪುರಾ ಸತೀ ।
ಕುಮಾರಃ ಸುಕುಮಾರೋಽಸೌ ಗಿರಿಪೃಷ್ಠೇ ರುರೋದ ಹ ॥ ೧೩೨ ॥

ದಯಾರ್ಥಂ ತಸ್ಯ ಮೇಘಾಸ್ತು ಪ್ರಾದುರಾಸನ್ಮಹಾತ್ಮನಃ ।
ಶ್ರವಿಷ್ಠಾಯಾಸ್ತು ಪುತ್ರೌ ದ್ವೌ ಪೈಪ್ಪಲಾದಿಶ್ಚ ಕೌಶಿಕಃ ॥ ೧೩೩ ॥

ದೃಷ್ಟ್ವಾ ಕೃಪಾನ್ವಿತೌ ಗೃಹ್ಯ ತೌ ಪ್ರಾಕ್ಷಾಲಯತಾಂ ಜಲೇ ।
ನಿಘೃಷ್ಟೌ ತಸ್ಯ ಪಾರ್ಶ್ವೌ ತು ಶಿಲಾಯಾಂ ರುಧಿರಪ್ಲುತೌ ॥ ೧೩೪ ॥

---

೧೩೦. ಪತಿವ್ರತೆಯೂ ಸುಂದರಿಯೂ ಆದ ಆ ಮಾಲಿನೀದೇವಿಯೂ ಸಹ ತನ್ನ ಪ್ರಿಯಪತಿಯನ್ನನುಸರಿಸಿ ಅವನೊಡನೆ ಹೊರಟಳು.

೧೩೧. ತುಂಬಾ ಗರ್ಭಿಣಿಯಾದ ಮಾಲಿನಿದೇವಿಯು ದಾರಿಯಲ್ಲಿಯೇ ಸುಕುಮಾರನಾದ ಶಿಶುವೊಂದನ್ನು ಹಡೆದಳು. ಆ ಶಿಶುವನ್ನು ದಾರಿಯಲ್ಲೇ ಬಿಟ್ಟು, ಪತಿವ್ರತೆಯಾದ ಆ ಮಾಲಿನಿಯು ದ್ರೌಪದೀದೇವಿಯಂತೆ ಕಾಡಿನಲ್ಲಿ ಹೋಗುತ್ತಿರುವ ಪತಿಯನ್ನನುಸರಿಸಿ ಹೊರಟುಹೋದಳು.

೧೩೨. ಮಾಲಿನಿಯು ತ್ಯಜಿಸಿದ ಆ ಬಾಲಕನು ಪರ್ವತದ ತಪ್ಪಲಲ್ಲಿ ದೊಡ್ಡ ಸ್ವರತೆಗೆದು ಅಳತೊಡಗಿದನು. ಆಗ ದಯೆಯಿಂದ ಮೇಘಗಳು ಗಗನವನ್ನು ವ್ಯಾಪಿಸಿ ಆ ಶಿಶುವಿಗೆ ಸೂರ್ಯತಾಪಬೀಳದಂತೆ ಮಾಡಿದವು.

೧೩೩. ಶ್ರವಿಷ್ಠಾದೇವಿಯ ಮಕ್ಕಳಾದ ಪೈಪ್ಪಲಾದಿ, ಕೌಶಿಕರೆಂಬೀರ್ವರು ಮುನಿಕುಮಾರರು, ಈ ಶಿಶುವನ್ನು ನೋಡಿ ಕರುಣೆಯಿಂದ ಎತ್ತಿಕೊಂಡು ನೀರಿನಲ್ಲಿ ಅದರ ಶರೀರವನ್ನು ಚನ್ನಾಗಿ ತೊಳೆದರು.

೧೩೪–೧೩೫. ಕಲ್ಲಿನಮೇಲೆ ಮಲಗಿಸಿದ್ದುದರಿಂದ ಆ ಶಿಶುವಿನ ಶರೀರದ ಎರಡು ಪಕ್ಕೆಗಳೂ ಕಲ್ಲಿನಲ್ಲಿ ಹೊರಳುವಾಗ ತಿಕ್ಕಲ್ಪಟ್ಟಿದ್ದು ರಕ್ತವು ಹೊಮ್ಮಿ ಹೆಪ್ಪುಗಟ್ಟಿ

shrinath.udupa@gmail.com

ಅಜಶ್ಯಾಮಃ ಸ ಪಾರ್ಶ್ವಾಭ್ಯಾಂ ಘೃಷ್ಟಾಭ್ಯಾಂ ಸುಸಮಾಹಿತಃ ।
ಅಜಶ್ಯಾಮೌ ತು ತತ್ಪಾರ್ಶ್ವೌ ದೇವೇನ ಸಂಬಭೂವತುಃ ॥ ೧೩೫ ॥

ಅಥಾಜಪಾರ್ಶ್ವ ಇತಿ ವೈ ಚಕ್ರಾತೇ ನಾಮ ತಸ್ಯ ತೌ ।
ಸ ತು ರೇಮಕಶಾಲಾಯಾಂ ದ್ವಿಜಾಭ್ಯಾಮಭಿವರ್ಧಿತಃ ॥ ೧೩೬ ॥

ರೇಮಕಸ್ಯ ತು ಭಾರ್ಯಾ ತಮುದ್ವಹತ್ಪುತ್ರಕಾರಣಾತ್ ।
ರೇಮತ್ಯಾಃ ಸ ತು ಪುತ್ರೋಽಭೂದ್ಬ್ರಾಹ್ಮಣೌ ಸಚಿವೌ ತು ತೌ ॥ ೧೩೭ ॥

ತೇಷಾಂ ಪುತ್ರಾಶ್ಚ ಪೌತ್ರಾಶ್ಚ ಯುಗಪತ್ತುಲ್ಯಜೀವಿನಃ ।
ಸ ಏಷ ಪೌರವೋ ವಂಶಃ ಪಾಂಡವಾನಾಂ ಮಹಾತ್ಮನಾಂ ॥ ೧೩೮ ॥

ಶ್ಲೋಕೋಽಪಿ ಚಾತ್ರ ಗೀತೋಽಯಂ ನಾಹುಷೇಣ ಯಯಾತಿನಾ ।
ಜರಾಸಂಕ್ರಮಣೇ ಪೂರ್ವಂ ತದಾ ಪ್ರೀತೇನ ಧೀಮತಾ ॥ ೧೩೯ ॥

ಕರಿಯ ಬಣ್ಣಗಳನ್ನು ಹೊಂದಿದ್ದವು. ಅಂತಹ ಶಿಶುವು ಎರಡು ಪಕ್ಕೆಗಳಲ್ಲಿ ಕರಿಯ ಬಣ್ಣವುಳ್ಳ ಆಡಿನಂತೆ ತೋರುತ್ತಿದ್ದಿತು.

೧೩೬. ಈ ಕಾರಣದಿಂದ ಆ ಕುಮಾರನಿಗೆ ಅಜಪಾರ್ಶ್ವ [ಆಡಿನಂತೆ ಕಪ್ಪಾದ ಪಕ್ಕೆಗಳುಳ್ಳವನು] ನೆಂದು ಹೆಸರಿಟ್ಟರು. ಮುಂದೆ ಆ ಬಾಲಕನು ರೇಮಕಮುನಿಯ ಆಶ್ರಮದಲ್ಲಿ ಪೈಪ್ಪಲಾದಿ, ಕೌಶಿಕ, ಇವರೀರ್ವರ ಪೋಷಣೆಯಲ್ಲಿದ್ದನು.

೧೩೭. ರೇಮಕಮುನಿಯ ಹೆಂಡತಿಯಾದ ರೇಮತೀದೇವಿಯು ಆ ಕುಮಾರನನ್ನು ತನ್ನ ಮಗನನ್ನಾಗಿ ಸ್ವೀಕರಿಸಿ ಕಾಪಾಡತೊಡಗಿದಳು. ಅವಳಿಗೆ ಆ ಬ್ರಾಹ್ಮಣರೀರ್ವರು ಮಗುವನ್ನು ಸಾಕುವುದಕ್ಕೆ ಸಹಾಯಕರಾದರು.

೧೩೮. ಆ ಮುನಿಗಳ ಮಕ್ಕಳು ಮತ್ತು ಈ ಮಾಲಿನೀಕುಮಾರ ಇವರೆಲ್ಲರೂ ಆಶ್ರಮದಲ್ಲಿ ಒಟ್ಟಿಗೇ ಆಟಪಾಟಗಳಾಡುತ್ತಾ ಬೆಳೆದರು. ಈ ಪೌರವ [ಪೂರು ರಾಜನ] ವಂಶವೇ ಮಹಾತ್ಮರಾದ ಪಾಂಡವರ ವಂಶವು.

೧೩೯. ಈ ಪೌರವವಂಶದ ವಿಷಯದಲ್ಲಿ ಹಿಂದೆ ತನ್ನ ಜರೆಯನ್ನು ತೆಗೆದುಕೊಂಡು ಯೌವನವನ್ನು ಕೊಟ್ಟ ಪೂರುರಾಜನಿಗೆ ಸಂತುಷ್ಟನಾದ ಯಯಾತಿಯು ಹೀಗೆ ವರವನ್ನು ಕೊಟ್ಟನು.

shrinath.udupa@gmail.com

ಅಚಂದ್ರಾರ್ಕಗ್ರಹಾ ಭೂಮಿರ್ಭವೇದಿಯಮಸಂಶಯಂ ।
ಅಪೌರವಾ ಮಹೀ ನೈವ ಭವಿಷ್ಯತಿ ಕದಾಚನ ॥ ೧೪೦ ॥

ಏಷ ವಃ ಪೌರವೋ ವಂಶೋ ವಿಖ್ಯಾತಃ ಕಥಿತೋ ಮಯಾ ।
ತುರ್ವಸೋಸ್ತು ಪ್ರವಕ್ಷ್ಯಾಮಿ ದ್ರುಹ್ಯೋಶ್ಚಾನೋರ್ಯದೋಸ್ತಥಾ ॥

ತುರ್ವಸೋಸ್ತು ಸುತೋಽವಹ್ನಿರ್ಗೋಭಾನುಸ್ತಸ್ಯ ಚಾಽಽತ್ಮಜಃ ।
ಗೋಭಾನೋಸ್ತು ಸುತೋ ರಾಜಾ ಐಶಾನುರಪರಾಜಿತಃ ॥ ೧೪೨ ॥

ಕರಂಧಮಸ್ತು ಐಶಾನೋರ್ಮರುತಸ್ತಸ್ಯ ಚಾಽಽತ್ಮಜಃ ।
ಅನ್ಯಸ್ತ್ವಾವಿಕ್ಷಿತೋ ರಾಜಾ ಮರುತ್ತಃ ಕಥಿತೋ ಮಯಾ ॥ ೧೪೩ ॥

ಅನಪತ್ಯೋಽಭವದ್ರಾಜಾ ಯಜ್ವಾ ವಿಪುಲದಕ್ಷಿಣಃ ।
ದುಹಿತಾ ಸಂಯತಾ ನಾಮ ತಸ್ಯಾಽಽಸೀತ್ಪೃಥಿವೀಪತೇಃ ॥ ೧೪೪ ॥

---

೧೪೦. ಈ ಭೂಮಿಯಲ್ಲಿ ಒಂದುವೇಳೆ ಚಂದ್ರಸೂರ್ಯಗ್ರಹಗಳುದಯಿಸದೇ ಇರಬಹುದು. ಆದರೆ ಪೌರವವಂಶದವರು ಎಂದಿಗೂ ಈ ಭೂಮಿಯಲ್ಲಿ ಇಲ್ಲದಿರುವುದಿಲ್ಲ.

೧೪೧. ಎಲೈ ಮುನಿಗಳೇ—ಹೀಗೆ ನಿಮಗೆ ಪೂರುವಿನ ವಂಶವನ್ನು ವಿಸ್ತರಿಸಿರುವೆನು. ಮುಂದೆ ತುರ್ವಸು, ದುಹ್ಯ, ಅನು, ಯದು ಇವರುಗಳ ವಂಶವನ್ನು ಹೇಳುವೆನು, ಕೇಳಿರಿ.

೧೪೨-೧೪೩. ತುರ್ವಸುವಿನ ಮಗನು ವಹ್ನಿರಾಜನು. ವಹ್ನಿಯ ಮಗನು ಗೋಭಾನುರಾಜನು. ಗೋಭಾನುವಿನ ಮಗನು ಐಶಾನುವು. ಐಶಾನುವಿನ ಮಗನು ಕರಂಧಮನು. ಕರಂಧಮನ ಮಗನು ಮರುತ್ತರಾಜನು. ಎಲೈ ಮುನಿಗಳೇ, ನಿಮಗೆ ಹಿಂದೊಬ್ಬ ಮರುತ್ತರಾಜನನ್ನು ಹೇಳಿರುವೆನು. ಅವನು ಅವೀಕ್ಷಿತರಾಜನ ಮಗನು. ಆ ಮರುತ್ತನು ಬೇರೆ, ಈ ಮರುತ್ತನು ಬೇರೆ.

೧೪೪. ಈ ಮರುತ್ತರಾಜನು ಕರ್ಮಿಷ್ಠನಾಗಿದ್ದು ಯಾಗಮಾಡಿ ತುಂಬಾ ದಕ್ಷಿಣೆ ಕೊಡುತ್ತಲಿದ್ದನು. ಇವನಿಗೆ ಗಂಡುಮಕ್ಕಳಿರಲಿಲ್ಲ. ಸಂಯತಾ ಎಂಬ ಮಗಳಿದ್ದಳು.

shrinath.udupa@gmail.com

ದಕ್ಷಿಣಾರ್ಥಂ ತು ಸಾ ದತ್ತಾ ಸಂವರ್ತಾಯ ಮಹಾತ್ಮನೇ ।
ದುಷ್ಯಂತಂ ಪೌರವಂ ಚಾಪಿ ಲೇಭೇ ಪುತ್ರಮಕಲ್ಮಷಂ ॥ ೧೪೫ ॥

ಏವಂ ಯಯಾತಿಶಾಪೇನ ಜರಾಸಂಕ್ರಮಣೇ ತದಾ ।
ಪೌರವಂ ತುರ್ವಸೋರ್ವಂಶಂ ಪ್ರವಿವೇಶ ದ್ವಿಜೋತ್ತಮಾಃ ॥ ೧೪೬ ॥

ದುಷ್ಯಂತಸ್ಯ ತು ದಾಯಾದಃ ಕರೂರೋಮಃ ಪ್ರಜೇಶ್ವರಃ ।
ಕರೂರೋಮಾದಥಾಹ್ರೀದಶ್ಚತ್ವಾರಸ್ತಸ್ಯ ಚಾऽऽತ್ಮಜಾಃ ॥ ೧೪೭ ॥

ಪಾಂಡ್ಯಶ್ಚ ಕೇರಲಶ್ಚೈವ ಕಾಲಶ್ಚೋಲಶ್ಚ ಪಾರ್ಥಿವಃ ।
ದ್ರುಹ್ಯೋಶ್ಚ ತನಯೋ ರಾಜನ್ ಬಭ್ರುಸೇತುಶ್ಚ ಪಾರ್ಥಿವಃ ॥ ೧೪೮ ॥

ಅಂಗಾರಸೇತುಸ್ತತ್ಪುತ್ರೋ ಮರುತಾಂ ಪತಿರುಚ್ಯತೇ ।
ಯೌವನಾಶ್ವೇನ ಸಮರೇ ಕೃಚ್ಛ್ರೇಣ ನಿಹತೋ ಬಲೀ ॥ ೧೪೯ ॥

---

೧೪೫. ದೊಡ್ಡ ಯಾಗವನ್ನು ಮಾಡಿ ಈ ಮರುತ್ತನು ಮಗಳಾದ ಸಂಯುತಾದೇವಿಯನ್ನು ಮಹಾತ್ಮನಾದ ಸಂವರ್ತಮಹಾಮುನಿಗೆ ದಕ್ಷಿಣೆಯಾಗಿ ಕೊಟ್ಟನು. ಮರುತ್ತನು ಪೂರುವಂಶದವನಾದ ದುಷ್ಯಂತರಾಜನನ್ನೇ ಮಗನನ್ನಾಗಿ ಮಾಡಿಕೊಂಡನು.

೧೪೬. ಎಲೈ ಮುನಿಗಳೇ ಜರೆಯನ್ನು ತೆಗೆದುಕೊಳ್ಳದುದರಿಂದ ತುರ್ವಸುವಿಗೆ ಬಂದ ಯಯಾತಿಶಾಪದಿಂದ ತುರ್ವಸುವಂಶವು ಮರುತ್ತರಾಜನ ಕಾಲದಲ್ಲಿ ಪೂರುವಿನ ವಂಶದಲ್ಲಿಯೇ ಸೇರಿ ಮುಂದೆ ಹೇಳಹೆಸರಿಲ್ಲದಾಯಿತು.

೧೪೭. ದುಷ್ಯಂತನ ಮಗನು ಕರೂರೋಮರಾಜನು. ಕರೂರೋಮನ ಮಗನು ಅಹ್ರೀದರಾಜನು. ಆ ಅಹ್ರೀದನಿಗೆ ಪಾಂಡ್ಯ, ಕೇರಲ, ಕಾಲ, ಚೋಲರೆಂಬ ನಾಲ್ವರು ಮಕ್ಕಳು.

೧೪೮. ದ್ರುಹ್ಯುವಿನ ಮಗನು ಬಭ್ರುಸೇತುರಾಜನು. ಬಭ್ರುಸೇತುವಿನ ಮಗನು ಅಂಗಾರಸೇತುರಾಜನು. ಈ ಅಂಗಾರಸೇತುವಿಗೆ ಮರುತ್ಪತಿಯೆಂದೂ ಹೆಸರಿದ್ದಿತು.

೧೪೯. ಆ ಅಂಗಾರಸೇತುವಿಗೆ ಯೌವನಾಶ್ವನೆಂಬ ರಾಜನೊಡನೆ ಹತ್ತು ತಿಂಗಳವರೆಗೆ ಘೋರಯುದ್ಧವಾಯಿತು. ಆ ಯುದ್ಧದಲ್ಲಿ ಅಂಗಾರಸೇತುವು ತನ್ನ ಪರಿವಾರದೊಡನೆ ಮೃತನಾದನು.

shrinath.udupa@gmail.com

ಯುದ್ಧಂ ಸುಮಹದಪ್ಯಾಸೀನ್ಮಾಸಾನ್ಪರಿಚರದ್ದಶ ।
ಅಂಗಾರಸೇತೋರ್ದಾಯಾದೋ ಗಾಂಧಾರೋ ನಾಮ ಪಾರ್ಥಿವಃ ॥೧೫೦॥

ಖ್ಯಾಯತೇ ಯಸ್ಯ ನಾಮ್ನಾ ವೈ ಗಾಂಧಾರವಿಷಯೋ ಮಹಾನ್ ।
ಗಾಂಧಾರಧೇಶಜಾಶ್ಚೈವ ತುರಗಾ ವಾಜಿನಾಂ ವರಾಃ ॥ ೧೫೧ ॥

ಆನೋಸ್ತು ಪುತ್ರೋ ಧರ್ಮೋಽಭೂದ್ದ್ಯೂತಸ್ತಸ್ಯಾಽಽತ್ಮಜೋಽಭವತ್ ।
ದ್ಯೂತಾದ್ವನದುಹೋ ಜಜ್ಞೇ ಪ್ರಚೇತಾಸ್ತಸ್ಯ ಜಾಽಽತ್ಮಜಃ ॥ ೧೫೨ ॥

ಪ್ರಚೇತಸಃ ಸುಚೇತಾಸ್ತು ಕೀರ್ತಿತಾಸ್ತ್ವನವೋ ಮಯಾ ।
ಬಭೂವುಸ್ತು ಯದೋಃ ಪುತ್ರಾಃ ಪಂಚ ದೇವಸುತೋಪಮಾಃ ॥ ೧೫೩ ॥

ಸಹಸ್ರಾದಃ ಪಯೋದಶ್ಚ ಕ್ರೋಷ್ಟಾ ನೀಲೋಽಞ್ಜಿಕಸ್ತಥಾ ।
ಸಹಸ್ರಾದಸ್ಯ ದಾಯಾದಾಸ್ತ್ರಯಃ ಪರಮಧಾರ್ಮಿಕಾಃ ॥ ೧೫೪ ॥

೧೫೦-೧೫೧. ಆ ಅಂಗಾರಸೇತುವಿನ ಮಗನು ಗಾಂಧಾರರಾಜನು. ಅವನ ಹೆಸರಿನಿಂದ ಅವನಾಳುತ್ತಿದ್ದ ದೇಶಕ್ಕೂ ಗಾಂಧಾರವೆಂದು ಹೆಸರಾಯಿತು. ಗಾಂಧಾರ ದೇಶದ ಕುದುರೆಗಳು ಉತ್ತಮಜಾತಿಯವು ಎಂದು ಪ್ರಸಿದ್ಧವು.

೧೫೨-೫೬. ಅನುವಿನ ಮಗನು ಧರ್ಮನೆಂಬುವನು. ಧರ್ಮನ ಮಗನು ದ್ಯೂತರಾಜನು. ದ್ಯೂತನಮಗನಾಗಿ ವನದುಹರಾಜನು ಜನಿಸಿದನು. ವನದುಹನ ಮಗನು ಪ್ರಚೇತಸನು. ಪ್ರಚೇತಸನಮಗನು ಸುಚೇತಸನು. ಇಲ್ಲಿಗೆ ಅನುವಂಶವು ಮುಗಿಯಿತು. ಯದುವಿಗೆ ಸಹಸ್ರಾದ, ಪಯೋದ, ಕ್ರೋಷ್ಟಾ, ನೀಲ, ಅಂಜಿಕರೆಂಬ ಐದುಮಂದಿ ದೇವಕುಮಾರರಿಗೆ ಸಮಾನರಾದ ಮಕ್ಕಳಿದ್ದರು. ಅವರಲ್ಲಿ ಸಹಸ್ರಾದನಿಗೆ ಹೈಹಯ, ಹಯ, ವೇಣುಹಯರೆಂಬ ನಾಲ್ಕುಮಂದಿ ಧಾರ್ಮಿಕರಾದ ಮಕ್ಕಳಿದ್ದರು. ಹೈಹಯನ ಮಗನು ಧರ್ಮನೇತ್ರನು. ಧರ್ಮನೇತ್ರನ ಮಗನು

shrinath.udupa@gmail.com

ಹೈಹಯಶ್ಚ ಹಯಶ್ಚೈವ ರಾಜಾ ವೇಣುಹಯಸ್ತಥಾ ।
ಹೈಹಯಸ್ಯಾಭವತ್ಪುತ್ರೋ ಧರ್ಮನೇತ್ರ ಇತಿ ಶ್ರುತಃ ॥ ೧೫೫ ॥

ಧರ್ಮನೇತ್ರಸ್ಯ ಕಾರ್ತಸ್ತು ಸಾಹಂಜಸ್ತಸ್ಯ ಚಾಽಽತ್ಮಜಃ
ಸಾಹಂಜನೀ ನಾಮ ಪುರೀ ತೇನ ರಾಜ್ಞಾ ನಿವೇಶಿತಾ ॥ ೧೫೬ ॥

ಆಸೀನ್ಮಹಿಷ್ಮತಃ ಪುತ್ರೋ ಭದ್ರಶ್ರೇಣ್ಯಃ ಪ್ರತಾಪವಾನ್ ।
ಭದ್ರಶ್ರೇಣ್ಯಸ್ಯ ದಾಯಾದೋ ದುರ್ದನೋ ನಾಮ ವಿಶ್ರುತಃ ॥ ೧೫೭ ॥

ದುರ್ದಮಸ್ಯ ಸುತೋ ಧೀಮಾನ್ ಕನಕೋ ನಾಮ ನಾಮತಃ ।
ಕನಕಸ್ಯ ತು ದಾಯಾದಾಶ್ಚತ್ವಾರೋ ಲೋಕವಿಶ್ರುತಾಃ ॥ ೧೫೮ ॥

ಕೃತವೀರ್ಯಃ ಕೃತೌಜಾಶ್ಚ ಕೃತಧನ್ವಾ ತಥೈವ ಚ ।
ಕೃತಾಗ್ನಿಸ್ತು ಚತುರ್ಥೋಽಭೂತ್ಕೃತವೀರ್ಯಾದಥಾರ್ಜುನಃ ॥ ೧೫೯ ॥

ಯೋಽಸೌ ಬಾಹುಸಹಸ್ರೇಣ ಸಪ್ತದ್ವೀಪೇಶ್ವರೋಽಭವತ್ ।
ಜಿಗಾಯ ಪೃಥಿವೀಮೇಕೋ ರಥೇನಾಽಽದಿತ್ಯವರ್ಚಸಾ ॥ ೧೬೦ ॥

ಕಾರ್ತರಾಜನು. ಕಾರ್ತರಾಜನ ಮಗನು ಸಾಹಂಜನೆಂಬುವವನು. ಈ ಸಾಹಂಜ ರಾಜನು ಸಾಹಂಜಿನೀ ಎಂಬ ನಗರಿಯನ್ನು ನಿರ್ಮಿಸಿ ಅಲ್ಲಿ ರಾಜ್ಯವಾಳುತ್ತಿದ್ದನು.

೧೫೭-೧೫೯. ಮಹಿಷ್ಮತ [ಸಾಹಂಜ] ರಾಜನಿಗೆ ಭದ್ರಶ್ರೇಣ್ಯನೆಂಬ ಪ್ರತಾಪಿಯಾದ ಮಗನಿದ್ದನು. ಭದ್ರಶ್ರೇಣ್ಯನ ಮಗನು ದುರ್ದಮನೆಂಬ ಮಹಾವೀರನು. ದುರ್ದಮನ ಮಗನು ಕನಕರಾಜನು. ಈ ಕನಕನಿಗೆ ಕೃತವೀರ್ಯ, ಕೃತೌಜಾ, ಕೃತಧನ್ವಾ, ಕೃತಾಗ್ನಿಗಳೆಂಬ ನಾಲ್ವರು ಮಕ್ಕಳು. ಅವರಲ್ಲಿ ಕೃತವೀರ್ಯನ ಮಗನು ಕಾರ್ತವೀರ್ಯಾರ್ಜುನನು.

೧೬೦. ಈ ಕಾರ್ತವೀರ್ಯಾರ್ಜುನನು ಸಾವಿರ ತೋಳುಗಳುಳ್ಳವನಾಗಿದ್ದು ಸೂರ್ಯನಂತೆ ತೇಜಸ್ವಿಯಾದ ರಥದಿಂದ ಸಂಚರಿಸಿ ಭೂಮಿಯೆಲ್ಲವನ್ನೂ ಓರ್ವನೇ ಜಯಿಸಿ ಏಳುದ್ವೀಪಗಳಿಗೂ ಒಡೆಯನಾಗಿ ಚಕ್ರವರ್ತಿಯೆನಿಸಿಕೊಂಡಿದ್ದನು.

shrinath.udupa@gmail.com

ಸ ಹಿ ವರ್ಷಾಯುತಂ ತಪ್ತ್ವಾ ತಪಃ ಪರಮದುಶ್ಚರಂ ।
ದತ್ತಮಾರಾಧಯಾಮಾಸ ಕಾರ್ತವೀರ್ಯೋಽತ್ರಿಸಂಭವಂ ॥ ೧೬೧ ॥

ತಸ್ಮೈ ದತ್ತೋ ವರಾನ್ಪ್ರಾದಾಚ್ಚತುರೋ ಭೂರಿತೇಜಸಃ ।
ಪೂರ್ವಂ ಬಾಹುಸಹಸ್ರಂ ತು ಪ್ರಾರ್ಥಿತಂ ಸುಮಹದ್ವರಂ ॥ ೧೬೨ ॥

ಅಧರ್ಮೇಽಧೀಯಮಾನಸ್ಯ ಸದ್ಭಿಸ್ತತ್ರ ನಿವಾರಣಂ ।
ಉಗ್ರೇಣ ಪೃಥಿವೀಂ ಜಿತ್ವಾ ಧರ್ಮೇಣೈವಾನುರಂಜನಂ ॥ ೧೬೩ ॥

ಸಂಗ್ರಾಮಾನ್ ಸುಬಹೂನ್ ಜಿತ್ವಾ ಹತ್ವಾ ಚಾರೀನ್ ಸಹಸ್ರಶಃ ।
ಸಂಗ್ರಾಮೇ ವರ್ತಮಾನಸ್ಯ ವಧಂ ಚಾಭ್ಯಧಿಕಾದ್ರಣೇ ॥ ೧೬೪ ॥

ತಸ್ಯ ಬಾಹುಸಹಸ್ರಂ ತು ಯುಧ್ಯತಃ ಕಿಲ ಭೋ ದ್ವಿಜಾಃ ।
ಯೋಗಾದ್ಯೋಗೀಶ್ವರಸ್ಯೇವ ಪ್ರಾದುರ್ಭವತಿ ಮಾಯಯಾ ॥ ೧೬೫ ॥

---

೧೬೧. ಈ ಕಾರ್ತವೀರ್ಯನು ಹತ್ತುಸಾವಿರ ವರ್ಷಗಳವರೆಗೆ ಘೋರ ತಪಸ್ಸನ್ನಾಚರಿಸಿ ಅತ್ರಿಮುನಿಯ ಮಗನಾದ ದತ್ತಾತ್ರೇಯನನ್ನು ಆರಾಧಿಸಿದನು.

೧೬೨-೧೬೪. ಅವನ ತಪಸ್ಸಿಗೆ ಮೆಚ್ಚಿ ದತ್ತಾತ್ರೇಯನು ಆ ಕಾರ್ತವೀರ್ಯನಿಗೆ ನಾಲ್ಕು ಮಹಾ ವರಗಳನ್ನು ಅನುಗ್ರಹಿಸಿದನು. ಇದರಲ್ಲಿ ಮೊದಲನೆಯ ವರವು, ಬೇಕಾದಾಗ ಸಾವಿರ ತೋಳುಗಳುಂಟಾಗುವುದು. ಅರ್ಜುನನು ಅಧರ್ಮಮಾರ್ಗದಲ್ಲಿ ನಡೆಯುವಂತಹ ಪ್ರಸಂಗಬಂದರೆ ಸಜ್ಜನರದನ್ನು ತಡೆಯುವುದು ಎರಡನೆಯದು. ಮಹಾಪರಾಕ್ರಮದಿಂದ ಭೂಮಿಯೆಲ್ಲವನ್ನೂ ಜಯಿಸಿ ಧರ್ಮದಿಂದ ರಾಜ್ಯವನ್ನಾಳುವುದು ಮೂರನೇ ವರ. ಯುದ್ಧದಲ್ಲಿ ಸಾವಿರಾರು ವೀರಶತ್ರುಗಳನ್ನು ಕೊಂದು ಕೊನೆಯಲ್ಲಿ ಮಹಾಪುರುಷನಿಂದ ಯುದ್ಧದಲ್ಲಿಯೇ ವೀರಮರಣವಾಗುವುದು ನಾಲ್ಕನೆಯ ವರವು.

೧೬೫. ಆ ಕಾರ್ತವೀರ್ಯನು ಯುದ್ಧಮಾಡುವಾಗ, ಯೋಗೀಶ್ವರನಂತೆ ಅವನಿಗೆ ಯೋಗಮಾಯೆಯಿಂದ ಸಾವಿರ ಬಾಹುಗಳು ಪುನಃ ಪುನಃ ಹುಟ್ಟುತ್ತಿದ್ದವು.

shrinath.udupa@gmail.com

ತೇನೇಯಂ ಪೃಥಿವೀ ಸರ್ವಾ ಸಪ್ತದ್ವೀಪಾ ಸಪತ್ತನಾ ।
ಸಸಮುದ್ರಾ ಸನಗರಾ ಉಗ್ರೇಣ ವಿಧಿನಾ ಜಿತಾ ॥ ೧೬೬ ॥

ತೇನ ಸಪ್ತಸು ದ್ವೀಪೇಷು ಸಪ್ತ ಯಜ್ಞಶತಾನಿ ವೈ ।
ಪ್ರಾಪ್ತಾನಿ ವಿಧಿನಾ ರಾಜ್ಞಾ ಶ್ರೂಯಂತೇ ಮುನಿಸತ್ತಮಾಃ ॥ ೧೬೭ ॥

ಸರ್ವೇ ಯಜ್ಞಾ ಮುನಿಶ್ರೇಷ್ಠಾಃ ಸಹಸ್ರಶತದಕ್ಷಿಣಾಃ ।
ಸರ್ವೇ ಕಾಂಚನಯೂಪಾಶ್ಚ ಸರ್ವೇ ಕಾಂಚನವೇದಯಃ ॥ ೧೬೮ ॥

ಸರ್ವೇ ದೇವೈರ್ಮುನಿಶ್ರೇಷ್ಠಾ ವಿಮಾನಸ್ಥೈರಲಂಕೃತೈಃ ।
ಗಂಧರ್ವೈರಪ್ಸರೋಭಿಶ್ಚ ನಿತ್ಯಮೇವೋಪಶೋಭಿತಾಃ ॥ ೧೬೯ ॥

ಯಸ್ಯ ಯಜ್ಞೇ ಜಗೌ ಗಾಥಾಂ ಗಂಧರ್ವೋ ನಾರದಸ್ತಥಾ ।
ವರೀದಾಸಾತ್ಮಜೋ ವಿದ್ವಾನ್ಮಹಿಮ್ನಾ ತಸ್ಯ ವಿಸ್ಮಿತಃ ॥ ೧೭೦ ॥

---

೧೬೬. ಆ ಕಾರ್ತವೀರ್ಯನು ಏಳು ದ್ವೀಪಗಳು, ಮಹಾನಗರಗಳು, ಸಮುದ್ರಗಳು ಇವುಗಳನ್ನೊಳಗೊಂಡ ಈ ಭೂಮಿಯೆಲ್ಲವನ್ನೂ ಘೋರಪರಾಕ್ರಮದಿಂದ ಜಯಿಸಿದನು.

೧೬೭. ಆ ಚಕ್ರವರ್ತಿಯು ಏಳು ದ್ವೀಪಗಳಲ್ಲಿಯೂ ಏಳುನೂರು ಯಜ್ಞಗಳನ್ನು ವಿಧಿವತ್ತಾಗಿ ಮಾಡಿದನೆಂದು ಕೇಳಿರುವೆವು.

೧೬೮. ಆ ಯಜ್ಞಗಳೆಲ್ಲವೂ ಕೋಟಿಕೋಟಿ ದಕ್ಷಿಣೆಯುಳ್ಳವೂ, ಚಿನ್ನದ ಯೂಪಸ್ತಂಭಗಳುಳ್ಳವೂ, ಚಿನ್ನದ ವೇದಿಕೆಗಳುಳ್ಳವೂ ಆಗಿದ್ದವು.

೧೬೯. ಆ ಮಹಾಯಜ್ಞಗಳನ್ನು ನೋಡಲು ದೇವತೆಗಳು, ಗಂಧರ್ವರು, ಅಪ್ಸರೆಯರು ಇವರೆಲ್ಲರೂ ಅಲಂಕರಿಸಿಕೊಂಡು ವಿಮಾನಗಳಲ್ಲಿ ಬಂದು ಗಗನದಲ್ಲಿ ನೆರೆದಿದ್ದರು.

೧೭೦. ಆ ಯಜ್ಞಗಳ ವಿಜೃಂಭಣೆಯನ್ನು ನೋಡಿ ಆಶ್ಚರ್ಯಗೊಂಡು ವರೀದಾಸನ ಮಗನೂ ವಿದ್ವಾಂಸನೂ ಆದ ನಾರದನೆಂಬ ಗಂಧರ್ವನು ಹೀಗೆ ಗಾನ ಮಾಡಿರುವನು.

shrinath.udupa@gmail.com

॥ ನಾರದ ಉವಾಚ ॥

ನ ನೂನಂ ಕಾರ್ತವೀರ್ಯಸ್ಯ ಗತಿಂ ಯಾಸ್ಯಂತಿ ಪಾರ್ಥಿವಾಃ ।
ಯಜ್ಞೈರ್ದಾನೈಸ್ತಪೋಭಿಶ್ಚ ವಿಕ್ರಮೇಣ ಶ್ರುತೇನ ಚ ॥ ೧೭೧ ॥

ಸ ಹಿ ಸಪ್ತಸು ದ್ವೀಪೇಷು ಚರ್ಮೀ ಖಡ್ಗೀ ಶರಾಸನೀ ।
ರಥೀ ದ್ವೀಪಾನನುಚರನ್ ಯೋಗೀ ಸಂದೃಶ್ಯತೇ ನೃಭಿಃ ॥ ೧೭೨ ॥

ಅನಷ್ಟದ್ರವ್ಯತಾ ಚೈವ ನ ಶೋಕೋ ನ ಚ ವಿಭ್ರಮಃ ।
ಪ್ರಭಾವೇಣ ಮಹಾರಾಜ್ಞಃ ಪ್ರಜಾ ಧರ್ಮೇಣ ರಕ್ಷತಃ ॥ ೧೭೩ ॥

ಸ ಸರ್ವರತ್ನಭಾಕ್ಸಮ್ರಾಟ್ ಚಕ್ರವರ್ತೀ ಬಭೂವ ಹ ।
ಸ ಏವ ಪಶುಪಾಲೋಽಭೂತ್ಕ್ಷೇತ್ರಪಾಲಃ ಸ ಏವ ಚ ॥ ೧೭೪ ॥

---

೧೭೧. ನಾರದನು ಹೇಳಿದನು.—ಯಜ್ಞ, ದಾನ, ತಪಸ್ಸು, ಪರಾಕ್ರಮ, ವಿದ್ವತ್ತು ಇವುಗಳಿಂದ ಈ ಕಾರ್ತವೀರ್ಯಾರ್ಜುನನ ಮಾರ್ಗವನ್ನು ಯಾರೂ ಅನುಸರಿಸಲಾರರು. ಯಾವ ರಾಜರೂ ಇವನ ಸರಿಸಾಟಿಯಾಗಲಾರರು.

೧೭೨. ಏಳು ದ್ವೀಪಗಳಲ್ಲೂ ಸಹ ಗುರಾಣಿ, ಕತ್ತಿ, ಧನಸ್ಸು ಇವುಗಳನ್ನು ಹಿಡಿದು ರಥದಿಂದ ದಿನವೂ ಸಂಚರಿಸುವ ಈ ರಾಜನನ್ನು ಜನರು ನಿತ್ಯವೂ ನೋಡುವರು.

೧೭೩. ಪ್ರಜೆಗಳನ್ನು ಧರ್ಮದಿಂದ ರಕ್ಷಿಸುವ ಈ ಮಹಾರಾಜನ ರಾಜ್ಯದಲ್ಲಿ ಯಾರೂ ಧನವನ್ನು ಕಳೆದುಕೊಳ್ಳುವುದಿಲ್ಲ. ಯಾವನೂ ದುಃಖಿಯಾಗಿಲ್ಲ. ಯಾವನೂ ಸಹ ದುರ್ವ್ಯಸನಿಯೂ ಭ್ರಾಂತನೂ ಆಗಿಲ್ಲ.

೧೭೪. ಆ ಕಾರ್ತವೀರ್ಯಾರ್ಜುನನು ರತ್ನಗಳಿಗೆಲ್ಲಕ್ಕೂ ಒಡೆಯನಾಗಿದ್ದು ಚಕ್ರವರ್ತಿಯಾಗಿರುವನು. ಯೋಗಮಾಯೆಯಿಂದ ಇವನೇ ಪಶುಗಳನ್ನೂ ಗದ್ದೆ ಹೊಲಗಳನ್ನೂ ರಕ್ಷಿಸುವನು. ಈ ಅರ್ಜುನನೇ ಯೋಗಮಾಯೆಯಿಂದ ಮೇಘವನ್ನು ಪ್ರೇರಿಸಿ ಮಳೆಸುರಿಸುವನು.

shrinath.udupa@gmail.com

ಸ ಏವ ವೃಷ್ಟ್ಯಾ ಪರ್ಜನ್ಯೋ ಯೋಗಿತ್ವಾದರ್ಜುನೋಽಭವತ್ ।
ಸ ವೈ ಬಾಹುಸಹಸ್ರೇಣ ಜ್ಯಾಘಾತಕಠಿನತ್ವಚಾ ॥ ೧೭೫ ॥

ಭಾತಿ ರಶ್ಮಿಸಹಸ್ರೇಣ ಶರದೀವ ಚ ಭಾಸ್ಕರಃ ।
ಸ ಹಿ ನಾಗಾನ್ಮನುಷ್ಯೇಷು ಮಾಹಿಷ್ಮತ್ಯಾಂ ಮಹಾದ್ಯುತಿಃ ॥ ೧೭೬ ॥

ಕರ್ಕೋಟಕಸುತಾನ್ ಜಿತ್ವಾ ಪುರ್ಯಾಂ ತಸ್ಯಾಂ ನ್ಯವೇಶಯತ್ ।
ಸ ವೈ ವೇಗಂ ಸಮುದ್ರಸ್ಯ ಪ್ರಾವೃಟ್ಕಾಲೇಽಮ್ಬುಜೇಕ್ಷಣಃ ॥ ೧೭೭ ॥

ಕ್ರೀಡನ್ನಿವ ಭುಜೋದ್ಭಿನ್ನಂ ಪ್ರತಿಸ್ರೋತಶ್ಚಕಾರ ಹ ।
ಲುಂಠಿತಾ ಕ್ರೀಡತಾ ತೇನ ನದೀ ತದ್ಗ್ರಾಮಮಾಲಿನೀ ॥ ೧೭೮ ॥

ಚಲದೂರ್ಮಿಸಹಸ್ರೇಣ ಶಂಕಿತಾಽಭ್ಯೇತಿ ನರ್ಮದಾ ।
ತಸ್ಯ ಬಾಹುಸಹಸ್ರೇಣ ಕ್ಷಿಪ್ಯಮಾಣೇ ಮಹೋದಧೌ ॥ ೧೭೯ ॥

---

೧೭೫. ಶತ್ರುಗಳ ಪ್ರಹಾರದಿಂದ ಜಡ್ಡು ಕಟ್ಟಿದ ತನ್ನ ಸಾವಿರ ತೋಳುಗಳಿಂದ ಆ ಕಾರ್ತವೀರ್ಯನು ಸಾವಿರ ಕಿರಣಗಳಿಂದ ಕೂಡಿದ ಶರತ್ಕಾಲದ ಸೂರ್ಯನಂತೆ ಬೆಳಗುವನು.

೧೭೬. ಪರಾಕ್ರಮಿಯಾದ ಆ ಅರ್ಜುನನು ಕರ್ಕೋಟಕನ ಮಕ್ಕಳಾದ ನಾಗಕುಮಾರರನ್ನು ಜಯಿಸಿ ತನ್ನ ರಾಜಧಾನಿಯಾದ ಮಾಹಿಷ್ಮತೀ ನಗರಿಯಲ್ಲಿ ಮನುಷ್ಯರೂಪದಿಂದಿರುವಂತೆ ಮಾಡಿದನು.

೧೭೭. ಅವನು ಮಳೆಗಾಲದಲ್ಲಿ ತುಂಬಿದ ಸಾಗರವನ್ನು ತನ್ನ ಸಾವಿರಬಾಹುಗಳಿಂದ ಕಲಕಿ ಅದರ ಪ್ರವಾಹವನ್ನು ಆಟವಾಡುವಂತೆ ಹಿಂದೆ ತಿರುಗಿಸುತ್ತಿದ್ದನು.

೧೭೮. ಮತ್ತೊಂದು ಸಾರಿ ಆ ಕಾರ್ತವೀರ್ಯನು ತನ್ನ ನಗರದ ಬಳಿಯಲ್ಲಿ ಹರಿಯುವ ನರ್ಮದಾನದಿಯನ್ನು ನೀರಿನಾಟಕ್ಕಾಗಿ ಅಡ್ಡಗಟ್ಟಿ ವಿಹರಿಸಿದನು. ಆ ಮೊದಲುಗೊಂಡು ನರ್ಮದೆಯು ಅವನ ರಾಜಧಾನಿಯ ಸಮೀಪದಲ್ಲಿಯೇ ಹರಿಯುತ್ತಲಿರುವುದು.

೧೭೯. ಆ ವೀರನು ತನ್ನ ಸಾವಿರ ಬಾಹುಗಳಿಂದ ಸಾಗರವನ್ನು ಕಲಕುತ್ತಿರಲು ಪಾತಾಳದಲ್ಲಿರುವ ಅಸುರರು ಭಯದಿಂದ ಮೂಢರಾಗಿ ಅಡಗಿಕೊಳ್ಳುವರು.

shrinath.udupa@gmail.com

ಭಯಾನ್ನಿಲೀನಾ ನಿಶ್ಚೇಷ್ಟಾಃ ಪಾತಾಲಸ್ಥಾ ಮಹೋಸುರಾಃ ।
ಚೂರ್ಣೀಕೃತಮಹಾವೀಚಿಂ ಚಲನ್ಮೀನಮಹಾತಿಮಿಂ ॥ ೧೮೦ ॥

ಮಾರುತಾವಿದ್ಧಫೇನೌಘಮಾವರ್ತಕ್ಷೋಭಸಂಕುಲಂ ।
ಪ್ರಾವರ್ತಯತ್ತದಾ ರಾಜಾ ಸಹಸ್ರೇಣ ಚ ಬಾಹುನಾ ॥ ೧೮೧ ॥

ದೇವಾಸುರಸಮಾಕ್ಷಿಪ್ತಃ ಕ್ಷೀರೋದಮಿವ ಮಂದರಃ ।
ಮಂದರಕ್ಷೋಭಚಕಿತಾ ಅಮೃತೋತ್ಪಾದಶಂಕಿತಾಃ ॥ ೧೮೨ ॥

ಸಹಸೋತ್ಪತಿತಾ ಭೀತಾ ಭೀಮಂ ದೃಷ್ಟ್ವಾ ನೃಪೋತ್ತಮಂ ।
ನತಾ ನಿಶ್ಚಲಮೂರ್ಧಾನೋ ಬಭೂವುಸ್ತೇ ಮಹೋರಗಾಃ ॥ ೧೮೩ ॥

ಸಾಯಾಹ್ನೇ ಕದಲೀಖಂಡಾಃ ಕಂಪಿತಾ ಇವ ವಾಯುನಾ ।
ಸ ವೈ ಬಧ್ವಾ ಧನುಜ್ಯಾ೯ಭಿರುತ್ಸಿಕ್ತಂ ಪಂಚಭಿಃ ಶರೈಃ ॥ ೧೮೪ ॥

೧೮೦–೧೮೧. ದೇವತೆಗಳು ಮತ್ತು ಅಸುರರು ಇವರಿಂದ ಕಡೆಯಲ್ಪಟ್ಟ ಮಂದರವು ಕ್ಷೀರಸಾಗರವನ್ನು ಕಲಕುವಂತೆ ಆ ಅರ್ಜುನನು ಸಾವಿರಬಾಹುಗಳಿಂದ ಸಮುದ್ರವನ್ನು ಕಲಕುವನು. ಆಗ ದೊಡ್ಡ ಅಲೆಗಳೆದ್ದು ಅಲ್ಲೋಲಕಲ್ಲೋಲವಾಗುತ್ತಲಿದ್ದುವು ತಿಮಿಂಗಿಲ ಮೊದಲಾದ ಜಲಚರಪ್ರಾಣಿಗಳು ಭಯದಿಂದ ಓಡುತ್ತಿದ್ದುವು. ಅವನು ಕಲುಕುವುದರಿಂದ ಬಿರುಗಾಳಿಯೆದ್ದು ದೊಡ್ಡದೊಡ್ಡ ಸುಳಿಗಳೂ ನೊರೆಗಳೂ ಉಂಟಾಗಿ ಸಾಗರವು ಅಲ್ಲೋಲಕಲ್ಲೋಲವಾಗುವುದು.

೧೮೨–೧೮೩. ಆಗ ದೊಡ್ಡದೊಡ್ಡ ಸರ್ಪಗಳು, ಸಾಗರವು ಅಲ್ಲೋಲಕಲ್ಲೋಲವಾದುದನ್ನು ನೋಡಿ ಸಮುದ್ರಮಥನವಾಗುವುದು, ಅಮೃತವು ಹುಟ್ಟುವುದು, ಎಂದು ಮೇಲಕ್ಕೆ ಬಂದುವು. ಅಲ್ಲಿ ಭಯಂಕರನಾದ ಕಾರ್ತವೀರ್ಯನು ನಿಂತಿದ್ದನು, ಅವನನ್ನು ನೋಡಿ ಹೆದರಿ ಆ ಸರ್ಪಗಳು ಸಾಯಂಕಾಲ ಗಾಳಿಯಿಂದ ಹೊಡೆಯಲ್ಪಟ್ಟ ಬಾಳೆಮರಗಳಂತೆ ತರತರನೆ ನಡುಗುತ್ತಾ ನಿಂತುಬಿಟ್ಟವು.

೧೮೪–೧೮೫. ಆ ಕಾರ್ತವೀರ್ಯನು ಒಂದುಸಾರಿ ತನ್ನ ಮಹಾಧನುಸ್ಸನ್ನೇರಿಸಿ ಐದು ಮಹಾಸ್ತ್ರಗಳನ್ನು ಪ್ರಯೋಗಿಸಿ ಲಂಕಾಧಿಪತಿಯಾದ ರಾವಣನನ್ನು ಸೈನ್ಯ

shrinath.udupa@gmail.com

ಲಂಕೇಶಂ ಮೋಹಯಿತ್ವಾ ತು ಸಬಲಂ ರಾವಣಂ ಬಲಾತ್ ।
ನಿರ್ಜಿತ್ಯ ವಶಮಾನೀಯ ಮಾಹಿಷ್ಮತ್ಯಾಂ ಬಬಂಧ ತಂ ॥ ೧೮೫ ॥

ಶ್ರುತ್ವಾ ತು ಬದ್ಧಂ ಪೌಲಸ್ತ್ಯಂ ರಾವಣಂ ತ್ವರ್ಜುನೇನ ಚ ।
ತತೋ ಗತ್ವಾ ಪುಲಸ್ತ್ಯಸ್ತಮರ್ಜುನಂ ದದೃಶೇ ಸ್ವಯಂ ॥ ೧೮೬ ॥

ಮುಮೋಚ ರಕ್ಷಃ ಪೌಲಸ್ತ್ಯಂ ಪುಲಸ್ತ್ಯೇನಾಭಿಯಾಚಿತಃ ।
ಯಸ್ಯ ಬಾಹುಸಹಸ್ರಸ್ಯ ಬಭೂವ ಜ್ಯಾತಲಸ್ವನಃ ॥ ೧೮೭ ॥

ಯುಗಾಂತೇ ತೋಯದಸ್ಯೇವ ಸ್ಫುಟತೋ ಹ್ಯಶನೇರಿವ ।
ಅಹೋ ಬತ ವೃಥೇ ವೀರ್ಯಂ ಭಾರ್ಗವಸ್ಯ ಯದಚ್ಛಿನತ್ ॥ ೧೮೮ ॥

ರಾಜ್ಞೋ ಬಾಹುಸಹಸ್ರಸ್ಯ ಹೈಮಂ ತಾಲವನಂ ಯಥಾ ।
ತೃಷಿತೇನ ಕದಾಚಿತ್ಸ ಭಿಕ್ಷಿತಶ್ಚಿತ್ರಭಾನುನಾ ॥ ೧೮೯ ॥

ಜೊಡನೆ ಮೂರ್ಛೆಗೊಳಿಸಿ ಅವನನ್ನು ಸೆರೆಹಿಡಿದು ಮಾಹಿಷ್ಮತೀ ನಗರಿಯಲ್ಲಿ ಬಂಧನದಲ್ಲಿರಿಸಿದನು.

೧೮೬. ಹೀಗೆ ರಾವಣನು ಅರ್ಜುನನಿಗೆ ಸೆರೆಸಿಕ್ಕಿರುವುದನ್ನು ಕೇಳಿ ಅವನ ಅಜ್ಜನಾದ ಪುಲಸ್ತ್ಯಬ್ರಹ್ಮನು ತಾನೇ ಕಾರ್ತವೀರ್ಯನ ಬಳಿಗೆ ಬಂದು ರಾವಣನನ್ನು ಬಿಡುವಂತೆ ಪ್ರಾರ್ಥಿಸಿದನು. ಪುಲಸ್ತ್ಯನ ಪ್ರಾರ್ಥನೆಯನ್ನಂಗೀಕರಿಸಿ ಅರ್ಜುನನು ರಾವಣನನ್ನು ಸೆರೆಯಿಂದ ಬಿಡಿಸಿದನು.

೧೮೭. ಆ ಕಾರ್ತವೀರ್ಯನು ತನ್ನ ಸಾವಿರ ಬಾಹುಗಳಿಂದ ಧನುಷ್ಟಂಕಾರ ಮಾಡುವಾಗ ಅದರ ಧ್ವನಿಯು ಪ್ರಳಯಕಾಲದ ಮೇಘಗಳಿಂದ ಹೊರಟ ಸಿಡಲಿನ ಗರ್ಜನೆಯಂತೆ ಕೇಳುತ್ತಿದ್ದಿತು.

೧೮೮. ಇಂತಹ ವೀರನ ಚಿನ್ನದ ತಾಳೇಮರಗಳಂತಿದ್ದ ಸಾವಿರ ಬಾಹುಗಳನ್ನೂ ಪರಶುರಾಮನು ಕತ್ತರಿಸಿದನು. ಈ ಭಾರ್ಗವರಾಮನ ವೀರ್ಯವು ಆಶ್ಚರ್ಯಕರವಾದುದೇ ಸರಿ.

೧೮೯. ಒಂದುಸಾರಿ ಬಹಳ ಬಾಯಾರಿದ ಅಗ್ನಿಯು ಈ ಕಾರ್ತವೀರ್ಯನನ್ನು ಬಾಯಾರಿಕೆಯನ್ನು ಹೋಗಲಾಡಿಸುವಂತೆ ಕೇಳಿಕೊಂಡನು. ಆಗ ಈ ಭೂಪತಿಯು ಇಡೀ ಭೂಮಿಯನ್ನೇ ಅವನ ತೃಷೆಯ ಶಾಂತಿಗೆ ಅರ್ಪಿಸಿದನು.

shrinath.udupa@gmail.com

ಸ ಭಿಕ್ಷಾಮದದಾದ್ವೀರಃ ಸಪ್ತದ್ವೀಪಾನ್ವಿಭಾವಸೋಃ ।
ಪುರಾಣಿ ಗ್ರಾಮಘೋಷಾಂಶ್ಚ ವಿಷಯಾಂಶ್ಚೈವ ಸರ್ವಶಃ ॥ ೧೯೦ ॥

ಜಜ್ವಾಲ ತಸ್ಯ ಸರ್ವಾಣಿ ಚಿತ್ರಭಾನುರ್ದಿದೃಕ್ಷಯಾ ।
ಸ ತಸ್ಯ ಪುರುಷೇಂದ್ರಸ್ಯ ಪ್ರಭಾವೇಣ ಮಹಾತ್ಮನಃ ॥ ೧೯೧ ॥

ದದಾಹ ಕಾರ್ತವೀರ್ಯಸ್ಯ ಶೈಲಾಂಶ್ಚೈವ ವನಾನಿ ಚ ।
ಸ ಶೂನ್ಯಮಾಶ್ರಮಂ ರಮ್ಯಂ ವರುಣಸ್ಯಾತ್ಮಜಸ್ಯ ವೈ ॥ ೧೯೨ ॥

ದದಾಹ ಬಲವದ್ಭೀತಶ್ಚಿತ್ರಭಾನುಃ ಸ ಹೈಹಯಃ ।
ಯಂ ಲೇಭೇ ವರುಣಃ ಪುತ್ರಂ ಪುರಾ ಭಾಸ್ವಂತಮುತ್ತಮಂ ॥ ೧೯೩ ॥

ವಸಿಷ್ಠಂ ನಾಮ ಸ ಮುನಿಃ ಖ್ಯಾತ ಆಪವ ಇತ್ಯುತ ।
ಯತ್ರಾಪವಸ್ತು ತಂ ಕ್ರೋಧಾಚ್ಛಪ್ತವಾನರ್ಜುನಂ ವಿಭುಃ ॥ ೧೯೪ ॥

---

೧೯೦. ಆಗ ಅಗ್ನಿಯು ಸಂತೋಷಗೊಂಡು ಪಟ್ಟಣಗಳು, ಗ್ರಾಮಗಳು, ಹಳ್ಳಿಗಳು, ದೇಶಗಳು ಎಲ್ಲವನ್ನೂ ತನ್ನ ಹಸಿವು ಇಂಗುವುದಕ್ಕಾಗಿ ಭಸ್ಮ ಮಾಡಿದನು.

೧೯೧. ಮಹಾತ್ಮನೂ ಪುರುಷಸಿಂಹನೂ ಆದ ಕಾರ್ತವಿರ್ಯನ ಪ್ರಭಾವದಿಂದ ಆ ಅಗ್ನಿಯು ದೊಡ್ಡದೊಡ್ಡ ಬೆಟ್ಟಗಳನ್ನೂ ವನಗಳನ್ನೂ ಸುಟ್ಟುಹಾಕಿದನು.

೧೯೨. ವರುಣನ ಮಗನಾದ ವಸಿಷ್ಠಮುನಿಯು ರಮ್ಯವಾದ ತಪೋವನವನ್ನೂ ಆ ಅಗ್ನಿಯು ಕಾರ್ತವೀರ್ಯನ ಸಹಾಯದ ದೆಸೆಯಿಂದ ಸಂಪೂರ್ಣವಾಗಿ ಭಸ್ಮ ಮಾಡಿದನು.

೧೯೩. ತೇಜಸ್ವಿಯೂ ತಪಸ್ವಿಯೂ ಆದ ವಸಿಷ್ಠಮುನಿಯನ್ನು ಹಿಂದೆ ವರುಣನು ತಪಸ್ಸುಮಾಡಿ ಮಗನನ್ನಾಗಿ ಪಡೆದಿದ್ದನು. ಆ ಮುನಿಗೆ ಆಪವ ಎಂದೂ ಹೆಸರಿದ್ದಿತು.

೧೯೪-೧೯೫. ತನ್ನ ಆಶ್ರಮವು ಕಾರ್ತವೀರ್ಯನ ದೆಸೆಯಿಂದ ಭಸ್ಮವಾದುದನ್ನು ನೋಡಿ ಆ ವಸಿಷ್ಠಮುನಿ ಕ್ರೋಧಗೊಂಡು ಹೀಗೆ ಶಾಪಕೊಟ್ಟನು.—ಎಲೈ ದುಷ್ಟನಾದ ಅರ್ಜುನನೇ, ನನ್ನ ಈ ತಪೋವನವನ್ನು ನೀನು ನಿನ್ನ ದರ್ಪದಿಂದ ಸುಡಿಸಿರುವೆ.

shrinath.udupa@gmail.com

ಯಸ್ಮಾನ್ನ ವರ್ಜಿತಮಿದಂ ವನಂ ತೇ ಮಮ ಹೈಹಯ ।
ತಸ್ಮಾತ್ತೇ ದುಷ್ಕರಂ ಕರ್ಮ ಕೃತಮನ್ಯೋ ಹನಿಷ್ಯತಿ ॥ ೧೯೫ ॥

ರಾಮೋ ನಾಮ ಮಹಾಬಾಹುರ್ಜಾಮದಗ್ನ್ಯಃ ಪ್ರತಾಪವಾನ್ ।
ಛಿತ್ವಾ ಬಾಹುಸಹಸ್ರಂ ತೇ ಪ್ರಮಥ್ಯ ತರಸಾ ಬಲೀ ॥ ೧೯೬ ॥

ತಪಸ್ವೀ ಬ್ರಾಹ್ಮಣಸ್ತ್ವಾಂ ತು ಹನಿಷ್ಯತಿ ಸ ಭಾರ್ಗವಃ ।
ಅನಷ್ಟದ್ರವ್ಯತಾ ಯಸ್ಯ ಬಭೂವಾಮಿತ್ರಕರ್ಷಿಣಃ ॥ ೧೯೭ ॥

ಪ್ರತಾಪೇನ ನರೇಂದ್ರಸ್ಯ ಪ್ರಜಾ ಧರ್ಮೇಣ ರಕ್ಷಿತಃ ।
ಪ್ರಾಪ್ತಸ್ತತೋಽಸ್ಯ ಮೃತ್ಯುರ್ವೈ ತಸ್ಯ ಶಾಪಾನ್ಮಹಾಮುನೇಃ ॥ ೧೯೮ ॥

ವರಸ್ತಥೈವ ಭೋ ವಿಪ್ರಾಃ ಸ್ವಯಮೇವ ವೃತಃ ಪುರಾ ।
ತಸ್ಯ ಪುತ್ರಶತಂ ತ್ವಾಸೀತ್ಪಂಚ ಶೇಷಾ ಮಹಾತ್ಮನಃ ॥ ೧೯೯ ॥

ಇದನ್ನು ಮಾಡಬಾರದಾಗಿತ್ತು. ಈ ನಿನ್ನ ಕರ್ಮಕ್ಕೆ ತಕ್ಕಂತೆ ನಿನಗೆ ಸದ್ಯದಲ್ಲೇ ಮರಣವುಂಟಾಗುವುದು.

೧೯೬. ಜಮದಗ್ನಿಯ ಮಗನೂ ತಪಸ್ವಿಯೂ ಬ್ರಾಹ್ಮಣನೂ ಆದ ಭೃಗುವಂಶದ ಪರಶುರಾಮನು ನಿನ್ನನ್ನು ಪರಾಕ್ರಮದಿಂದ ಜಯಿಸಿ ಸಾವಿರಬಾಹುಗಳನ್ನೂ ಒಂದೊಂದಾಗಿ ಕತ್ತರಿಸಿ ಕ್ರೂರವಾಗಿ ನಿನ್ನನ್ನು ವಧಿಸುವನು.

೧೯೭–೧೯೮. ಪ್ರಜೆಗಳನ್ನು ಧರ್ಮದಿಂದ ರಕ್ಷಿಸುವಂತಹ ಯಾವ ರಾಜೇಂದ್ರನ ರಾಜ್ಯದಲ್ಲಿ ಒಂದು ಕಳುವೂ ಇಲ್ಲದೇ ಪ್ರಜೆಗಳು ಕ್ಷೇಮವಾಗಿದ್ದರೋ ಅಂತಹ ಪರಾಕ್ರಮಿಯಾದ ಕಾರ್ತವೀರ್ಯನಿಗೆ ವಸಿಷ್ಠಮಹಾಮುನಿಯ ಶಾಪದಿಂದ ಹೀಗೆ ಮೃತ್ಯುವು ಬಂದೊದಗಿತು.

೧೯೯. ಆ ಅರ್ಜುನನಿಗೆ ನೂರು ಮಂದಿ ಮಕ್ಕಳಿದ್ದರು. ಭಾರ್ಗವರಾಮನಿಂದ ಸಂಹರಿಸಲ್ಪಟ್ಟು ಉಳಿದವರೇ ಈ ಐದುಮಂದಿಗಳು. ಆ ಐವರೂ ವೀರರೂ, ಬಲಿಷ್ಠರೂ, ಅಸ್ತ್ರಪಂಡಿತರೂ, ಧರ್ಮಾತ್ಮರೂ, ಕೀರ್ತಿವಂತರೂ ಆಗಿದ್ದರು.

shrinath.udupa@gmail.com

ಕೃತಾಸ್ತ್ರಾ ಬಲಿನಃ ಶೂರಾ ಧರ್ಮಾತ್ಮಾನೋ ಯಶಸ್ವಿನಃ ।
ಶೂರಸೇನಶ್ಚ ಶೂರಶ್ಚ ವೃಷಣೋ ಮಧುಪಧ್ವಜಃ ॥ ೨೦೦ ॥

ಜಯಧ್ವಜಶ್ಚ ನಾಮ್ನಾಽಸೀದಾವಂತ್ಯೋ ನೃಪತಿರ್ಮಹಾನ್ ।
ಕಾರ್ತವೀರ್ಯಸ್ಯ ತನಯಾ ವೀರ್ಯವಂತೋ ಮಹಾಬಲಾಃ ॥ ೨೦೧ ॥

ಜಯಧ್ವಜಸ್ಯ ಪುತ್ರಸ್ತು ತಾಲಜಂಘೋ ಮಹಾಬಲಃ ।
ತಸ್ಯ ಪುತ್ರಶತಂ ಖ್ಯಾತಾಸ್ತಾಲಜಂಘಾ ಇತಿ ಸ್ಮೃತಾಃ ॥ ೨೦೨ ॥

ತೇಷಾಂ ಕುಲೇ ಮುನಿಶ್ರೇಷ್ಠಾ ಹೈಹಯಾನಾಂ ಮಹಾತ್ಮನಾಂ ।
ವೀತಿಹೋತ್ರಾಃ ಸುಜಾತಾಶ್ಚ ಭೋಜಾಶ್ಚಾವಂತಯಃ ಸ್ಮೃತಾಃ ॥ ೨೦೩ ॥

ತೌಂಡಿಕೇರಾಶ್ಚ ವಿಖ್ಯಾತಾಸ್ತಾಲಜಂಘಾಸ್ತಥೈವ ಚ ।
ಭರತಾಶ್ಚ ಸುಜಾತಾಶ್ಚ ಬಹುತ್ವಾನ್ನಾನುಕೀರ್ತಿತಾಃ ॥ ೨೦೪ ॥

ವೃಷಪ್ರಭೃತಯೋ ವಿಪ್ರಾ ಯಾದವಾಃ ಪುಣ್ಯಕರ್ಮಿಣಃ ।
ವೃಷೋ ವಂಶಧರಸ್ತತ್ರ ತಸ್ಯ ಪುತ್ರೋಽಭವನ್ಮಧುಃ ॥ ೨೦೫ ॥

೨೦೦–೨೦೧. ಶೂರಸೇನ, ಶೂರ, ವೃಷಣ, ಮಧುಪಧ್ವಜ ಜಯಧ್ವಜ ಈ ಐದುಮಂದಿಯೇ ಉಳಿದ ಕಾರ್ತವೀರ್ಯಪುತ್ರರು. ಜಯಧ್ವಜನು ಅವಂತೀದೇಶದಲ್ಲಿ ಮಹಾರಾಜನಾಗಿದ್ದನು. ಕಾರ್ತವೀರ್ಯನ ಈ ಮಕ್ಕಳೆಲ್ಲರೂ ವೀರರೂ ಬಲಿಷ್ಠರೂ ಆಗಿದ್ದರು.

೨೦೨. ಜಯಧ್ವಜನ ಮಗನು ತಾಲಜಂಘನು. ತಾಲಜಂಘನಿಗೆ ನೂರು ಮಂದಿ ಮಕ್ಕಳು. ಇವರಿಗೂ ತಾಲಜಂಘರೆಂದೇ ಹೆಸರು.

೨೦೩–೨೦೪. ಮಹಾತ್ಮರಾದ ಹೈಹಯರ ಕುಲದಲ್ಲಿ ವೀತಿಹೋತ್ರರು, ಸುಜಾತರು, ಭೋಜರು, ಅವಂತಿರಾಜರು, ತೌಂಡಿಕೇಯರು, ತಾಲಜಂಘರು, ಭರತರು, ಸುಜಾತರು ಮೊದಲಾದ ಕ್ಷತ್ರಿಯರು ಇರುವರು. ಅವರೆಲ್ಲರ ಸಂತತಿಯು ತುಂಬಾ ವಿಸ್ತಾರವಾದುದರಿಂದ ಹೇಳಲು ಸಾಧ್ಯವಿಲ್ಲ.

೨೦೫. ವೃಷರಾಜ ಮೊದಲಾದವರು ಯಾದವರು. ಇವರು ಪುಣ್ಯವಂತರು ಇವರಿಗೆ ವೃಷನು ಆದಿಪುರುಷನು. ಅವನ ಮಗನು ಮಧುರಾಜನು.

shrinath.udupa@gmail.com

ಮಧೋಃ ಪುತ್ರಶತಂ ತ್ವಾಸೀದ್ವೃಷಣಸ್ತಸ್ಯ ವಂಶಕೃತ್ ।
ವೃಷಣಾದ್ವೃಷ್ಣಯಃ ಸರ್ವೇ ಮಧೋಸ್ತು ಮಾಧವಾಃ ಸ್ಮೃತಾಃ ॥ ೨೦೬ ॥

ಯಾದವಾ ಯದುನಾಮ್ನಾ ತೇ ನಿರುಚ್ಯಂತೇ ಚ ಹೈಹಯಾಃ ।
ನ ತಸ್ಯ ವಿತ್ತನಾಶಃ ಸ್ಯಾನ್ನಷ್ಟಂ ಪ್ರತಿ ಲಭೇಚ್ಚ ಸಃ ॥ ೨೦೭ ॥

ಕಾರ್ತವೀರ್ಯಸ್ಯ ಯೋ ಜನ್ಮ ಕಥಯೇದಿಹ ನಿತ್ಯಶಃ ।
ಏತೇ ಯಯಾತಿಪುತ್ರಾಣಾಂ ಪಂಚ ವಂಶಾ ದ್ವಿಜೋತ್ತಮಾಃ ॥ ೨೦೮ ॥

ಕೀರ್ತಿತಾ ಲೋಕವೀರಾಣಾಂ ಯೇ ಲೋಕಾನ್ ಧಾರಯಂತಿ ವೈ ।
ಭೂತಾನೀವ ಮುನಿಶ್ರೇಷ್ಠಾಃ ಪಂಚ ಸ್ಥಾವರಜಂಗಮಾನ್ ॥ ೨೦೯ ॥

ಶ್ರುತ್ವಾ ಪಂಚ ವಿಸರ್ಗಾಂಸ್ತು ರಾಜಾ ಧರ್ಮಾರ್ಥಕೋವಿದಃ ।
ವಶೀ ಭವತಿ ಪಂಚಾನಾಮಾತ್ಮಜಾನಾಂ ತಥೇಶ್ವರಃ ॥ ೨೧೦ ॥

---

೨೦೬. ಮಧುವಿಗೆ ನೂರುಮಂದಿ ಮಕ್ಕಳು. ಅವರಲ್ಲಿ ವೃಷಣನೆಂಬುವವನು ಸಂತತಿಯನ್ನು ವೃದ್ಧಿಮಾಡಿದನು. ಮಧುವಿನ ಮಕ್ಕಳೆಲ್ಲರೂ ಮಾಧವರು. ವೃಷಣನ ಸಂತತಿಯವರೆಲ್ಲರೂ ವೃಷ್ಣಿಗಳು (ಯಾದವರು).

೨೦೭. ಈ ಹೈಹಯರೇ ಯದುವಿನ ವಂಶದವರಾದುದರಿಂದ ಯಾದವರೆಂದು ಕರೆಯಲ್ಪಡುವರು. ಎಲೈ ಮುನಿಗಳೇ, ಕಾರ್ತವೀರ್ಯನ ಈ ಜನ್ಮಚರಿತ್ರೆಯನ್ನು ಯಾವನು ನಿತ್ಯವೂ ಕೇಳುವನೋ ಅವನಿಗೆ ಧನವು ನಾಶವಾಗುವುದಿಲ್ಲ. ಕಳೆದಿದ್ದ ವಸ್ತುವು ತಿರುಗಿ ಲಭಿಸುವುದು. ಆದುದರಿಂದ ನಿತ್ಯವೂ ಇದನ್ನು ಕೇಳಬೇಕು.

೨೦೮–೨೦೯. ಎಲೈ ಬ್ರಾಹ್ಮಣೋತ್ತಮರೇ, ಹೀಗೆ ಯಯಾತಿರಾಜನ ವೀರರಾದ ಐದುಮಕ್ಕಳ ವಂಶಗಳನ್ನೂ ಹೇಳಿರುವೆನು. ಇವರ ವಂಶದವರು ಭೂಮಿ, ನೀರು, ಅಗ್ನಿ, ವಾಯು, ಆಕಾಶಗಳೆಂಬ ಪಂಚಭೂತಗಳಂತೆ ಇಂದಿಗೂ ಜಗತ್ತೆಲ್ಲವನ್ನೂ ಆಳುತ್ತಿರುವರು.

೨೧೦. ಯಯಾತಿರಾಜನ ಐದುಮಂದಿ ಮಕ್ಕಳ ಐದುವಂಶಗಳ ಚರಿತ್ರೆಯನ್ನು ರಾಜನಾದವನು ಕೇಳಿದರೆ ಅವನು ಧರ್ಮಾತ್ಮನೂ, ಜಿತೇಂದ್ರಿಯನೂ ಆಗುವನು. ಮತ್ತು ಐದು ಮಂದಿ ಸತ್ಪುತ್ರರನ್ನು ಪಡೆಯುವನು.

shrinath.udupa@gmail.com

ಲಭೇತ್ವಂಚ ವರಾಂಶ್ಚೈವ ದುರ್ಲಭಾನಿಹ ಲೌಕಿಕಾನ್ ।
ಆಯುಃ ಕೀರ್ತಿಂ ತಥಾ ಪುತ್ರಾನೈಶ್ವರ್ಯಂ ಭೂತಿಮೇವ ಚ ॥ ೨೧೧ ॥

ಧಾರಣಾಚ್ಛ್ರವಣಾಚ್ಚೈವ ಪಂಚವರ್ಗಸ್ಯ ಭೋ ದ್ವಿಜಾಃ ।
ಕ್ರೋಷ್ಟೋರ್ವಂಶಂ ಮುನಿಶ್ರೇಷ್ಠಾಃ ಶೃಣುಧ್ವಂ ಗದತೋ ಮಮ ॥೨೧೨॥

ಯದೋರ್ವಂಶಧರಸ್ಯಾಥ ಯಜ್ವಿನಃ ಪುಣ್ಯಕರ್ಮಿಣಃ ।
ಕ್ರೋಷ್ಟೋರ್ವಂಶಂ ಹಿ ಶ್ರುತ್ವೈವ ಸರ್ವಪಾಪೈಃ ಪ್ರಮುಚ್ಯತೇ ।
ಯಸ್ಯಾನ್ವವಾಯಜೋ ವಿಷ್ಣುರ್ಹರಿರ್ವೃಷ್ಣಿಕುಲೋದ್ವಹಃ ॥ ೨೧೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಯಯಾತಿವಂಶಾನು-
ಕೀರ್ತನಂ ನಾಮ ತ್ರಯೋದಶೋಽಧ್ಯಾಯಃ

---

೨೧೧. ಈ ಐದುವಂಶ ಚರಿತ್ರೆಯನ್ನು ಕೇಳಿದರೆ ಈ ಲೋಕದಲ್ಲಿ ದುರ್ಲಭವಾದ ಐದು ಮನೋರಥಗಳು ಸಿದ್ಧಿಸುವುವು. ಈ ಚರಿತವನ್ನು ಕೇಳುವುದರಿಂದ ಮತ್ತು ಹೇಳುವದರಿಂದ ಆಯುಸ್ಸು, ಕೀರ್ತಿ, ಪುತ್ರರು, ಐಶ್ವರ್ಯ, ಧನ ಈ ಐದು ಇಷ್ಟಾರ್ಥಗಳೂ ನೆರವೇರುವುವು.

೨೧೨. ಎಲೈ ಮುನಿಗಳೇ ! ಮುಂದೆ ಯದುವಂಶವನ್ನು ಬೆಳೆಯಿಸಿದವನೂ ಪುಣ್ಯವಂತನೂ ಮಹಾಮಹಾಯಾಗಗಳನ್ನು ಮಾಡಿದವನೂ ಆದ ಕ್ರೋಷ್ಟುರಾಜನ ವಂಶವನ್ನು ಹೇಳುವೆನು ಕೇಳಿರಿ.

೨೧೩. ಈ ಕ್ರೋಷ್ಟುವಿನ ವಂಶದಲ್ಲಿ ಮಹಾವಿಷ್ಣುವು ಅವತರಿಸಿದನು. ಇಂತಹ ವಂಶವನ್ನು ಕೇಳುವದರಿಂದ ಸಕಲಪಾಪಗಳೂ ನಾಶವಾಗುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಯಯಾತಿವಂಶಾನುಕೀರ್ತನವೆಂಬ
ಹದಿಮೂರನೆಯ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಚತುರ್ದಶೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ಗಾಂಧಾರೀ ಚೈವ ಮಾದ್ರೀ ಚ ಕ್ರೋಷ್ಟೋರ್ಭಾರ್ಯೇ ಬಭೂವತುಃ ।
ಗಾಂಧಾರೀ ಜನಯಾಮಾಸ ಅನಮಿತ್ರಂ ಮಹಾಬಲಂ ॥ ೧ ॥

ಮಾದ್ರೀ ಯುಧಾಜಿತಂ ಪುತ್ರಂ ತತೋಽನ್ಯಂ ದೇವಮೀಢುಷಂ ।
ತೇಷಾಂ ವಂಶಸ್ತ್ರಿಧಾ ಭೂತೋ ವೃಷ್ಣೀನಾಂ ಕುಲವರ್ಧನಃ ॥ ೨ ॥

ಹದಿನಾಲ್ಕನೆಯ ಅಧ್ಯಾಯವು

೧. ಸೂತಮುನಿಯು ಹೇಳಿದನು.—ಗಾಂಧಾರೀ, ಮಾದ್ರೀ ಎಂಬೀರ್ವರು ಕ್ರೋಷ್ಟುರಾಜನ ಮಡದಿಯರು. ಗಾಂಧಾರಿಯು ಅನಪುತ್ರನೆಂಬ ವೀರನನ್ನು ಹಡೆದಳು. ಮಾದ್ರಿದೇವಿಯು ಯುಧಾಜಿತ, ದೇವಮೀಢರೆಂಬೀರ್ವರು ಮಕ್ಕಳನ್ನು ಹಡೆದಳು.

೨. ಈ ಅನಮಿತ್ರ, ಯುಧಾಜಿತ, ದೇವಮೀಢರ ಮೂರುವಂಶಗಳು ಮುಂದೆ ವೃದ್ಧಿಹೊಂದಿದುವು.

shrinath.udupa@gmail.com

ಮಾದ್ರ್ಯಾಃ ಪುತ್ರೌ ತು ಜಜ್ಞಾತೇ ಶ್ರುತೌ ವೃಷ್ಣ್ಯಂಧಕಾವುಭೌ ।
ಜಜ್ಞಾತೇ ತನಯೌ ವೃಷ್ಣೇಃ ಶ್ವಫಲ್ಕಶ್ಚಿತ್ರಕಸ್ತಥಾ ॥ ೩ ॥

ಶ್ವಫಲ್ಕಸ್ತು ಮುನಿಶ್ರೇಷ್ಠಾ ಧರ್ಮಾತ್ಮಾ ಯತ್ರ ವರ್ತತೇ ।
ನಾಸ್ತಿ ವ್ಯಾಧಿಭಯಂ ತತ್ರ ನಾವರ್ಷಸ್ತಪಮೇವ ಚ ॥ ೪ ॥

ಕದಾಚಿತ್ಕಾಶಿರಾಜಸ್ಯ ವಿಷಯೇ ಮುನಿಸತ್ತಮಾಃ ।
ತ್ರೀಣಿ ವರ್ಷಾಣಿ ಪೂರ್ಣಾನಿ ನಾವರ್ಷತ್ಪಾಕಶಾಸನಃ ॥ ೫ ॥

ಸ ತತ್ರ ಚಾನಯಾಮಾಸ ಶ್ವಫಲ್ಕಂ ಪರಮಾರ್ಚಿತಂ ।
ಶ್ವಫಲ್ಕಪರಿವರ್ತೇನ ವವರ್ಷ ಹರಿವಾಹನಃ ॥ ೬ ॥

ಶ್ವಫಲ್ಕಃ ಕಾಶಿರಾಜಸ್ಯ ಸುತಾಂ ಭಾರ್ಯಾಮವಿಂದತ ।
ಗಾಂದಿನೀಂ ನಾಮ ಗಾಂ ಸಾ ಚ ದದೌ ವಿಪ್ರಾಯ ನಿತ್ಯಶಃ ॥ ೭ ॥

---

೩. ಮಾದ್ರಿಯ ಮಕ್ಕಳಾದ ಯುಧಾಜಿತ್ ದೇವಮೀಢರಿಬ್ಬರೂ ವೃಷ್ಣಿ, ಅಂಧಕರೆಂಬೀರ್ವರು ಮಕ್ಕಳನ್ನು ಪಡೆದರು. ಅವರಲ್ಲಿ ವೃಷ್ಣಿಯು ಶ್ವಫಲ್ಕ, ಚಿತ್ರ ರೆಂಬ ಮಕ್ಕಳಿಬ್ಬರನ್ನು ಪಡೆದನು.

೪. ಧರ್ಮಾತ್ಮನಾದ ಶ್ವಫಲ್ಕನಿದ್ದ ದೇಶದಲ್ಲಿ ರೋಗಭಯವಿರುವುದಿಲ್ಲ. ಬರಗಾಲಬರುವುದಿಲ್ಲ. ಬಿಸಿಲಿನ ತಾಪವು ಹೆಚ್ಚಾಗುವುದಿಲ್ಲ.

೫. ಒಮ್ಮೆ ಕಾಶಿರಾಜನ ದೇಶದಲ್ಲಿ ಮೂರು ವರ್ಷಗಳ ವರೆಗೆ ಮಳೆಯೇ ಆಗಲಿಲ್ಲ.

೬. ಆಗ ಕಾಶಿರಾಜನು ಈ ಶ್ವಫಲ್ಕನನ್ನು ತನ್ನದೇಶಕ್ಕೆ ಕರೆಸಿ ಪೂಜಿಸಿದನು. ಆಗ ಆ ದೇಶದಲ್ಲಿ ಚನ್ನಾಗಿ ಮಳೆಯಾಯಿತು.

೭. ಕಾಶಿರಾಜನು ಪ್ರೀತನಾಗಿ ತನ್ನ ಮಗಳಾದ ಗಾಂದಿನೀದೇವಿಯನ್ನು ಶ್ವಫಲ್ಕನಿಗೆ ಮದುವೆಮಾಡಿಕೊಟ್ಟನು. ಆ ದೇವಿಯು ನಿತ್ಯವೂ ಬ್ರಾಹ್ಮಣರಿಗೆ ಗೋದಾನವನ್ನು ಮಾಡುತ್ತಿದ್ದುದರಿಂದ ಅವಳಿಗೆ ಗಾಂದಿನೀ (ಹಸುಗಳನ್ನು ನಿತ್ಯವೂ ದಾನಮಾಡುವವಳು) ಎಂದು ಹೆಸರು ಬಳಕೆಯಾಯಿತು.

shrinath.udupa@gmail.com

ದಾತಾ ಯಜ್ವಾ ಚ ವೀರಶ್ಚ ಶ್ರುತವಾನತಿಥಿಪ್ರಿಯಃ ।
ಅಕ್ರೂರಃ ಸುಷುವೇ ತಸ್ಮಾಚ್ಛ್ವಫಲ್ಕಾದ್ಭೂರಿದಕ್ಷಿಣಃ ॥ ೮ ॥

ಉಪಮದ್ಗುಸ್ತಥಾ ಮದ್ಗುರ್ಮೇದುರಶ್ಚಾರಿಮೇಜಯಃ ।
ಅವಿಕ್ಷಿತಸ್ತಥಾಽಕ್ಷೇಪಃ ಶತ್ರುಘ್ನಶ್ಚಾರಿಮರ್ದನಃ ॥ ೯ ॥

ಧರ್ಮಧೃಗ್ಯತಿಧರ್ಮಾ ಚ ಧರ್ಮೋಕ್ಷ್ಮಾಽಂಧಕರುಸ್ತಥಾ ।
ಆವಾಹಪ್ರತಿವಾಹೌ ಚ ಸುಂದರೀ ಚ ವರಾಂಗನಾ ॥ ೧೦ ॥

ಅಕ್ರೂರೇಣೋಗ್ರಸೇನಾಯಾಂ ಸುಗಾತ್ರ್ಯಾಂ ದ್ವಿಜಸತ್ತಮಾಃ ।
ಪ್ರಸೇನಶ್ಚೋಪದೇವಶ್ಚ ಜಜ್ಞಾತೇ ದೇವವರ್ಚಸೌ ॥ ೧೧ ॥

ಚಿತ್ರಕಸ್ಯಾಭವನ್ ಪುತ್ರಾಃ ಪೃಥುರ್ವಿಪೃಥುರೇವ ಚ ।
ಅಶ್ವಗ್ರೀವೋಽಶ್ವಬಾಹುಶ್ಚ ಸ್ವಪಾರ್ಶ್ವಕಗವೇಷಣೌ ॥ ೧೨ ॥

ಅರಿಷ್ಟನೇಮಿರಶ್ವಶ್ಚ ಸುಧರ್ಮಾ ಧರ್ಮಭೃತ್ತಥಾ ।
ಸುಬಾಹುರ್ಬಹುಬಾಹುಶ್ಚ ಶ್ರವಿಷ್ಠಾಶ್ರವಣೇ ಸ್ತ್ರಿಯೌ ॥ ೧೩ ॥

೮. ಆ ಶ್ವಫಲ್ಕನಿಂದ ಅಕ್ರೂರನು ಜನಿಸಿದನು. ಅವನಾದರೋ ಉದಾರನಾಗಿದ್ದನು. ಮಹಾಮಹಾ ಯಾಗಗಳನ್ನು ಮಾಡಿದನು. ವೀರನು, ವಿದ್ವಾಂಸನು. ಅತಿಥಿಸತ್ಕಾರಮಾಡುತ್ತಿದ್ದನು. ತುಂಬ ದಕ್ಷಿಣೆಗಳನ್ನು ಕೊಡುತ್ತಿದ್ದನು.

೯–೧೦. ಅಕ್ರೂರನಿಂದ ಸುಂದರಿಯಾದ ಉಗ್ರಸೇನಾದೇವಿಯಲ್ಲಿ ಉಪಮದ್ಗು, ಮದ್ಗು, ಮೇದುರ, ಅರಿಮೇಜಯ, ಅವೀಕ್ಷಿತ, ಆಕ್ಷೇಪ, ಶತ್ರುಘ್ನ, ಧರ್ಮಧೃಕ್, ಯತಿಧರ್ಮಾ, ಧರ್ಮೋಕ್ಷ್ಮಾ, ಅಂಧಕರು, ಆವಾಹ, ಪ್ರತಿವಾಹರೆಂಬ ಹದಿಮೂರುಮಂದಿ ಗಂಡುಮಕ್ಕಳು ಜನಿಸಿದರು. ಸುಂದರೀದೇವಿಯೆಂಬ ಸುಂದರಿಯಾದ ಕನ್ಯೆಯು ಜನಿಸಿದಳು.

೧೧–೧೩. ಪ್ರಸೇನ, ಉಪದೇವರೆಂಬ, ದೇವತೆಗಳಂತೆ ತೇಜಸ್ವಿಗಳಾದ ಮಕ್ಕಳೀರ್ವರನ್ನು ಚಿತ್ರಕನು ಪಡೆದನು. ಮತ್ತೂ ಪೃಥು, ವಿಪೃಥು, ಅಶ್ವಗ್ರೀವ, ಅಶ್ವಬಾಹು, ಸುಪಾರ್ಶ್ವಕ, ಗವೇಷಣ, ಅರಿಷ್ಟನೇಮಿ, ಅಶ್ವ, ಧರ್ಮಾತ್ಮನಾದ ಸುಧರ್ಮ, ಅನೇಕ ಬಾಹುಗಳುಳ್ಳ ಸುಬಾಹುಗಳೆಂಬ ಹತ್ತುಜನ ಗಂಡುಮಕ್ಕಳನ್ನೂ ಶ್ರವಿಷ್ಠಾ, ಶ್ರವಣಾದೇವಿಯರೆಂಬೀರ್ವರು ಹೆಣ್ಣುಮಕ್ಕಳನ್ನೂ ಆ ಚಿತ್ರಕನು ಪಡೆದನು.

shrinath.udupa@gmail.com

ಅಸಿಕ್ನ್ಯಾಂ ಜನಯಾಮಾಸ ಶೂರಂ ವೈ ದೇವಮೀಢುಷಂ ।
ಮಹಿಷ್ಯಾಂ ಜಜ್ಞಿರೇ ಶೂರಾ ಭೋಜ್ಯಾಯಾಂ ಪುರುಷಾ ದಶ ॥ ೧೪ ॥

ವಸುದೇವೋ ಮಹಾಬಾಹುಃ ಪೂರ್ವಮಾನಕದುಂದುಭಿಃ ।
ಜಜ್ಞೇ ಯಸ್ಯ ಪ್ರಸೂತಸ್ಯ ದುಂದುಭ್ಯಃ ಪ್ರಾಣದನ್ದಿವಿ ॥ ೧೫ ॥

ಆನಕಾನಾಂ ಚ ಸಂಹ್ರಾದಃ ಸುಮಹಾನಭವದ್ದಿವಿ ।
ಪಪಾತ ಪುಷ್ಪವರ್ಷಶ್ಚ ಶೂರಸ್ಯ ಜನನೇ ಮಹಾನ್ ॥ ೧೬ ॥

ಮನುಷ್ಯಲೋಕೇ ಕೃತ್ಸ್ನೇಽಪಿ ರೂಪೇ ನಾಸ್ತಿ ಸಮೋ ಭುವಿ ।
ಯಸ್ಯಾಸೀತ್ಪುರುಷಾಗ್ರ್ಯಸ್ಯ ಕಾಂತಿಶ್ಚಂದ್ರಮಸೋ ಯಥಾ ॥ ೧೭ ॥

ದೇವಭಾಗಸ್ತತೋ ಜಜ್ಞೇ ತಥಾ ದೇವಶ್ರವಾಃ ಪುನಃ ।
ಅನಾಧೃಷ್ಟಿಃ ಕನವಕೋ ವತ್ಸವಾನಥ ಗೃಂಜಮಃ ॥ ೧೮ ॥

---

೧೪. ಅಲ್ಲದೇ ಆ ಚಿತ್ರಕನು ಅಸಿಕ್ನೀಯೆಂಬ ತನ್ನ ಹೆಂಡತಿಯಲ್ಲಿ ಶೂರನಾದ ದೇವಮೀಢನೆಂಬುವವನನ್ನು ಪಡೆದು ಭೋಜ್ಯಾದೇವಿಯಲ್ಲಿ ಶೂರರಾದ ಹತ್ತುಮಂದಿ ಗಂಡುಮಕ್ಕಳನ್ನೂ ಪಡೆದನು.

೧೫–೧೬. ಆ ಹತ್ತುಮಂದಿ ಮಕ್ಕಳಲ್ಲಿ ವಸುದೇವನು ಹಿರಿಯವನು. ಅವನಿಗೆ ಆನಕದುಂದುಭಿಯೆಂದೂ ಹೆಸರುಂಟು. ಅವನು ಹುಟ್ಟಿದೊಡನೆಯೇ ಗಗನದಲ್ಲಿ ದೇದುಂದುಭಿಯು ಮೊಳಗಿತು. ಆನಕ (ಕಹಳೆ) ಗಳ ಧ್ವನಿಯೂ ಕೇಳಿಸಿತು. ಆದುದರಿಂದ ಆ ವಸುದೇವನಿಗೆ ಆನಕದುಂದುಭಿಯೆಂದು ಹೆಸರಾಯಿತು. ಈ ಮಹಾತ್ಮನು ಹುಟ್ಟಿದೊಡನೆ ಗಗನದಿಂದ ಹೂಮಳೆಯು ಸುರಿಯಿತು.

೧೭. ಆಗ ಪ್ರಪಂಚದಲ್ಲಿ ಆ ವಸುದೇವನಂತಹ ಸುಂದರರು ಇರಲಿಲ್ಲವು. ಆ ಪುರುಷಸಿಂಹನ ಕಾಂತಿಯು ಚಂದ್ರನಂತೆ ಮನೋಹರವಾಗಿತ್ತು.

೧೮. ಆ ವಸುದೇವನಿಂದ ದೇವಭಾಗ, ದೇವಶ್ರವ, ಅನಾಧೃಷ್ಟಿ, ಕನವಕ, ವತ್ಸವಾರ್, ಗೃಂಜಮ, ಶ್ಯಾಮಃ, ಶಮೀಕ, ಗಂಡೂಷರೆಂಬ ಗಂಡುಮಕ್ಕಳು ಜನಿಸಿದರು.

shrinath.udupa@gmail.com

ಶ್ಯಾಮಃ ಶಮೀಕೋ ಗಂಡೂಷಃ ಪಂಚ ಚಾಸ್ಯ ವರಾಂಗನಾಃ ।
ಪೃಥುಕೀರ್ತಿಃ ಪೃಥಾ ಚೈವ ಶ್ರುತದೇವಾ ಶ್ರುತಶ್ರವಾ ॥ ೧೯ ॥

ರಾಜಾಧಿದೇವೀ ಚ ತಥಾ ಪಂಚೈತಾ ವೀರಮಾತರಃ ।
ಶ್ರುತಶ್ರವಾಯಾಂ ಚೈದ್ಯಸ್ತು ಶಿಶುಪಾಲೋಽಭವನ್ನೃಪಃ ॥ ೨೦ ॥

ಹಿರಣ್ಯಕಶಿಪುರ್ಯೋಽಸೌ ದೈತ್ಯರಾಜೋಽಭವತ್ಪುರಾ ।
ಪೃಥುಕೀರ್ತ್ಯಾಂ ತು ಸಂಜಜ್ಞೇ ತನಯೋ ವೃದ್ಧಶರ್ಮಣಃ ॥ ೨೧ ॥

ಕರೂಷಾಧಿಪತಿರ್ವೀರೋ ದಂತವಕ್ರೋ ಮಹಾಬಲಃ ।
ಪೃಥಾಂ ದುಹಿತರಂ ಚಕ್ರೇ ಕುಂತಿಸ್ತಾಂ ಪಾಂಡುರಾವಹತ್ ॥ ೨೨ ॥

ಯಸ್ಯಾಂ ಸ ಧರ್ಮವಿದ್ರಾಜಾ ಧರ್ಮೋ ಜಜ್ಞೇ ಯುಧಿಷ್ಠಿರಃ ।
ಭೀಮಸೇನಸ್ತಥಾ ವಾತಾದಿಂದ್ರಾಚ್ಚೈವ ಧನಂಜಯಃ ॥ ೨೩ ॥

---

೧೯. ಪೃಥುಕೀರ್ತಿ, ಪೃಥಾ, ಶ್ರುತದೇವಾದೇವಿ, ಶ್ರುತಶ್ರವಾದೇವಿ, ರಾಜಾಧಿದೇವೀಯರೆಂಬ ಐದು ಕನ್ಯೆಯರೂ ವಸುದೇವನಿಗೆ ಜನಿಸಿದರು. ಇವರೆಲ್ಲರೂ ಮುಂದೆ ವೀರರಾದ ಮಕ್ಕಳನ್ನು ಹಡೆದಕಾರಣ ವೀರಮಾತೆಯರೆನಿಸಿಕೊಂಡರು.

೨೦. ಪೃಥುಕೀರ್ತಿದೇವಿಯಲ್ಲಿ ವೃದ್ಧಶರ್ಮನೆಂಬುವವನಿಂದ ದಂತವಕ್ರನು ಜನಿಸಿದನು. ಅವನು ಬಲಿಷ್ಠನೂ ವೀರನೂ ಆಗಿದ್ದು ಕರೂಷದೇಶವನ್ನಾಳುತ್ತಿದ್ದನು.

೨೧. ಶ್ರುತಶ್ರವಾದೇವಿಯಲ್ಲಿ ಚೇದಿದೇಶದ ರಾಜನಾದ ಶಿಶುಪಾಲನು ಜನಿಸಿದನು. ಇವನು ಹಿಂದಿನ ಜನ್ಮದಲ್ಲಿ ದೈತ್ಯರಾಜನಾದ ಹಿರಣ್ಯಕಶಿಪುವಾಗಿದ್ದನು.

೨೨. ಪೃಥಾದೇವಿಗೆ ಕುಂತೀದೇವಿಯೆಂದು ಮತ್ತೊಂದು ಹೆಸರಿದ್ದಿತು. ಈ ಕುಂತಿಯನ್ನು ಪಾಂಡುರಾಜನು ಮದುವೆಯಾದನು.

೨೩. ಆ ಕುಂತೀದೇವಿಯಲ್ಲಿ ಯಮಧರ್ಮನಿಂದ ಧರ್ಮತತ್ವವನ್ನು ಬಲ್ಲವನೂ ಧರ್ಮರಾಜನೂ ಆದ ಯುಧಿಷ್ಠಿರನು ಜನಿಸಿದನು. ಮತ್ತು ಅವಳಲ್ಲಿಯೇ ವಾಯುದೇವನಿಂದ ಭೀಮಸೇನನೂ ದೇವೇಂದ್ರನಿಂದ ಧನಂಜಯ (ಅರ್ಜುನ) ನೂ ಜನಿಸಿದರು.

shrinath.udupa@gmail.com

ಲೋಕೇ ಪ್ರತಿರಥೋ ವೀರಃ ಶಕ್ರತುಲ್ಯಪರಾಕ್ರಮಃ ।
ಅನಮಿತ್ರಾಚ್ಛಿನಿರ್ಜಜ್ಞೇ ಕನಿಷ್ಠಾದ್ವೃಷ್ಣಿನಂದನಾತ್ ॥ ೨೪ ॥

ಶೈನೇಯಃ ಸತ್ಯಕಸ್ತಸ್ಮಾದ್ಯುಯುಧಾನಶ್ಚ ಸಾತ್ಯಕಿಃ ।
ಉದ್ಧವೋ ದೇವಭಾಗಸ್ಯ ಮಹಾಭಾಗಃ ಸುತೋಽಭವತ್ ॥ ೨೫ ॥

ಪಂಡಿತಾನಾಂ ಪರಂ ಪ್ರಾಹುರ್ದೇವಶ್ರವಸಮುತ್ತಮಂ ।
ಅಶ್ಮಕ್ಯಂ ಪ್ರಾಸ್ತವಾನ್ ಪುತ್ರಮನಾಧೃಷ್ಟಿರ್ಯಶಸ್ವಿನಂ ॥ ೨೬ ॥

ನಿವೃತ್ತಶತ್ರುಂ ಶತ್ರುಘ್ನಂ ಶ್ರುತದೇವಾ ತ್ವಜಾಯತ ।
ಶ್ರುತದೇವಾತ್ಮಜಾಸ್ತೇ ತು ನೈಷಾದಿರ್ಯಃ ಪರಿಶ್ರುತಃ ॥ ೨೭ ॥

ಏಕಲವ್ಯೋ ಮುನಿಶ್ರೇಷ್ಠಾ ನಿಷಾದೈಃ ಪರಿವರ್ಧಿತಃ ।
ವತ್ಸವತೇ ತ್ವಪುತ್ರಾಯ ವಸುದೇವಃ ಪ್ರತಾಪವಾನ್ ।
ಅದ್ಭಿರ್ದದೌ ಸುತಂ ವೀರಂ ಶೌರಿಃ ಕೌಶಿಕಮೌರಸಂ ॥ ೨೮ ॥

---

೨೪. ಆಗ ಇಂದ್ರನಂತೆ ಪರಾಕ್ರಮಿಯಾದ ಈ ಧನಂಜಯನಿಗೆ ಸರಿಸಾಟಿಯಾದ ಎದುರಾಳಿಯು ಮತ್ತೊಬ್ಬನಿರಲಿಲ್ಲ. ವೃಷ್ಣಿಯ ಕಿರಿಮಗನಾದ ಅನಮಿತ್ರನಿಂದ ಶಿನಿಯೆಂಬುವವನು ಜನಿಸಿದನು. ಈ ಶನಿಯಿಂದ ಸಾತ್ಯಕ ಜನಿಸಿದನು. ಸತ್ಯಕನಿಂದ ಯುಯುಧಾನ ಮತ್ತು ಸಾತ್ಯಕಿಗಳೆಂಬಿಬ್ಬರು ಮಕ್ಕಳು ಜನಿಸಿದರು.

೨೫–೨೬. ಮಹಾಜ್ಞಾನಿಯಾದ ಉದ್ಧವನು ದೇವಭಾಗನ ಮಗನು. ದೇವಶ್ರವಸನು ಮಹಾ ಪಂಡಿತನಾಗಿದ್ದನು. ಅನಾಧೃಷ್ಟಿಯೆಂಬುವವನು ಅಶ್ಮಕ್ಯನೆಂಬ ಮಗನನ್ನು ಪಡೆದನು.

೨೭. ಶ್ರುತಾದೇವಿಯು ಶತ್ರುಂಜಯನಾದ ಶತ್ರುಘ್ನನನ್ನೂ (ಏಕಲವ್ಯ)ನೆಂದು ಹೆಸರುಳ್ಳ ನೈಷಾದಿಯನ್ನೂ ಹಡೆದಳು. ಏಕಲವ್ಯನನ್ನು ಕಾರಣಾಂತರದಿಂದ ಬೇಡರು ಪೋಷಿಸುತ್ತಿದ್ದರು.

೨೮. ಮಕ್ಕಳಿಲ್ಲದಂತಹ ವತ್ಸವತನಿಗೆ ಪ್ರತಾಪಿಯಾದ ವಸುದೇವನು ತನ್ನ ಮಗನಾದ ಕೌಶಿಕನನ್ನು ಜಲಪೂರ್ವಕವಾಗಿ ದಾನಮಾಡಿದನು.

shrinath.udupa@gmail.com

ಗಂಡೂಷಾಯ ಹ್ಯಪುತ್ರಾಯ ವಿಷ್ವಕ್ಸೇನೋ ದದೌ ಸುತಾನ್ ।
ಚಾರುದೇಷ್ಣಂ ಸುದೇಷ್ಣಂ ಚ ಪಂಚಾಲಂ ಕೃತಲಕ್ಷಣಂ ॥ ೨೯ ॥

ಅಸಂಗ್ರಾಮೇಣ ಯೋ ವೀರೋ ನ್ಯವರ್ತತ ಕದಾಚನ ।
ರೌಕ್ಮಿಣೇಯೋ ಮಹಾಬಾಹುಃ ಕನೀಯಾನ್ದ್ವಿಜಸತ್ತಮಾಃ ॥ ೩೦ ॥

ವಾಯಸಾನಾಂ ಸಹಸ್ರಾಣಿ ಯಂ ಯಾಂತಂ ಪೃಷ್ಠತೋಽನ್ವಯುಃ ।
ಚಾರೂನದ್ಯೋಪಭೋಕ್ಷ್ಯಾಮಶ್ಚಾರುದೇಷ್ಣಹತಾನಿತಿ ॥ ೩೧ ॥

ತಂತ್ರಿಜಸ್ತಂತ್ರಿಪಾಲಶ್ಚ ಸುತೌ ಕನವಕಸ್ಯ ತೌ ।
ವೀರುಶ್ಚಾಶ್ವಹನುಶ್ಚೈವ ವೀರೌ ತಾವಥ ಗೃಂಜಿಮೌ ॥ ೩೨ ॥

ಶ್ಯಾಮಪುತ್ರಃ ಶಮೀಕಸ್ತು ಶಮೀಕೋ ರಾಜ್ಯಮಾವಹತ್ ।
ಜುಗುಪ್ಸಮಾನೋ ಭೋಜತ್ವಾದ್ರಾಜಸೂಯಮವಾಪ ಸಃ ॥ ೩೩ ॥

೨೯. ಮಕ್ಕಳನ್ನು ಪಡೆಯದಿರುವ ಗಂಡೂಷನೆಂಬುವನಿಗೆ ಶ್ರೀಕೃಷ್ಣನು ರುಕ್ಮಿಣಿಯಲ್ಲಿ ಹುಟ್ಟಿದ ಚಾರುದೇಷ್ಣ, ಸುದೇಷ್ಣ, ಪಂಚಾಲ, ಕೃತಲಕ್ಷಣರೆಂಬ ಮಕ್ಕಳನ್ನು ಕೊಟ್ಟನು.

೩೦. ಎಲೈ ಮುನಿಶ್ರೇಷ್ಠರೆ, ಚಾರುದೇಷ್ಣನು ರುಕ್ಮಿಣಿಯ ಕಿರಿಯಮಗನು. ವೀರನಾದ ಅವನು ಯುದ್ಧದಲ್ಲಿ ಎಂದೂ ಜಯಿಸದೇ ಹಿಂತಿರುಗುತ್ತಿರಲಿಲ್ಲ.

೩೧. ಅವನು ಯುದ್ಧಕ್ಕೆ ಹೋಗುವಾಗ ಸಾವಿರಾರು ಕಾಗೆಗಳು, ಚಾರುದೇಷ್ಣನು ಯುದ್ಧದಲ್ಲಿ ಕೊಂದವರ ರುಚಿರುಚಿಯಾದ ಮಾಂಸವನ್ನು ತಿನ್ನೋಣವೆಂದು ಅವನ ಹಿಂದುಗಡೆಯಲ್ಲಿಯೇ ಹಾರಿಹೋಗುತ್ತಲಿದ್ದವು.

೩೨. ತಂತ್ರಿಜ, ತಂತ್ರಿಪಾಲರೆಂಬ ವೀರರಿಬ್ಬರು ಕನವಕನ ಮಕ್ಕಳು. ವೀರು, ಅಶ್ವಹನುಗಳೆಂಬಿಬ್ಬರು ವೀರರು. ಗೃಂಜಮನ ಮಕ್ಕಳು.

೩೩. ಶ್ಯಾಮನೆಂಬುವನ ಮಗನು ಶಮೀಕನು. ಅವನು ರಾಜ್ಯವಾಳುತ್ತಿದ್ದು ಆ ರಾಜ್ಯವಾಳುವುದರಿಂದುಂಟಾಗಬಹುದಾದ ಪಾಪದಿಂದ ಬೇಸತ್ತು ರಾಜಸೂಯಯಾಗವನ್ನು ಮಾಡಿದನು.

shrinath.udupa@gmail.com

ಅಜಾತಶತ್ರುಃ ಶತ್ರೂಣಾಂ ಜಜ್ಞೇ ತಸ್ಯ ವಿನಾಶನಃ ।
ವಸುದೇವಸುತಾನ್ವೀರಾನ್ ಕೀರ್ತಯಿಷ್ಯಾಮ್ಯತಃ ಪರಂ ॥ ೩೪ ॥

ವೃಷ್ಣೇಸ್ತ್ರಿವಿಧಮೇವಂ ತು ಬಹುಶಾಖಂ ಮಹೌಜಸಂ ।
ಧಾರಯನ್ವಿಪುಲಂ ವಂಶಂ ನಾನಾರ್ಥೈರಿಹ ಯುಜ್ಯತೇ ॥ ೩೫ ॥

ಯಾಃ ಪತ್ನ್ಯೋ ವಸುದೇವಸ್ಯ ಚತುರ್ದಶ ವರಾಂಗನಾಃ ।
ಪೌರವೀ ರೋಹಿಣೀ ನಾಮ ಮದಿರಾದಿತಥಾಽಪರಾ ॥ ೩೬ ॥

ವೈಶಾಖೀ ಚ ತಥಾ ಭದ್ರಾ ಸುನಾಮ್ನೀ ಚೈವ ಪಂಚಮೀ ।
ಸಹದೇವಾ ಶಾಂತಿದೇವಾ ಶ್ರೀದೇವೀ ದೇವರಕ್ಷಿತಾ ॥ ೩೭ ॥

ವೃಕದೇವ್ಯುಪದೇವೀ ಚ ದೇವಕೀ ಚೈವ ಸಪ್ತಮೀ ।
ಸುತನುರ್ವಡವಾ ಚೈವ ದ್ವೇ ಏತೇ ಪರಿಚಾರಿಕೇ ॥ ೩೮ ॥

---

೩೪. ಆ ಶಮೀಕನಿಗೆ ಅಜಾತಶತ್ರುವೆಂಬ ಪುತ್ರನು ಜನಿಸಿ ತಂದೆಯ ಶತ್ರುಗಳೆಲ್ಲರನ್ನೂ ನಾಶಮಾಡಿದನು. ಎಲೈ ಮುನಿಗಳೇ, ಮುಂದೆ ವಸುದೇವನ ಕೆಲವರು ವೀರರಾದ ಮಕ್ಕಳನ್ನು ಹೇಳುವೆನು.

೩೫. ಹಿಂದೆ ಹೇಳಿದಂತೆ ವೃಷ್ಣಿವಂಶವು ಅವನಿಂದ ಮೂರು ಶಾಖೆಗಳಿಂದ ಹೊರಟು ಕೊನೆಗೆ ಅನೇಕ ಶಾಖೆಗಳಾಯಿತು. ಇಂತಹ ವೃಷ್ಣಿವಂಶ ಚರಿತೆಯನ್ನು ಕೇಳಿದರೆ ಸಕಲ ಇಷ್ಟಾರ್ಥಗಳೂ ಸಿದ್ಧಿಸುವುವು.

೩೬-೩೮. ವಸುದೇವನಿಗೆ ಹದಿನಾಲ್ಕುಮಂದಿ ಸುಂದರಿಯರಾದ ಹೆಂಡಿರಿದ್ದರು. ಪುರು ವಂಶದ ರೋಹಿಣಿ, ಮದಿರಾದೇವಿ, ವೈಶಾಖೀ, ಭದ್ರಾದೇವಿ, ಸುನಾಮ್ನಾದೇವಿ, ಸಹದೇವಾದೇವಿ, ಶಾಂತಿದೇವಾದೇವಿ, ಶ್ರೀದೇವಿ, ದೇವರಕ್ಷಿತಾದೇವಿ, ವೃಕದೇವಿ, ಉಪದೇವಿ, ದೇವಕೀ ಇವರು ಹನ್ನೆರಡುಮಂದಿ ಮುಖ್ಯರಾಣಿಯರು, ಸುತನುದೇವಿ, ವಡವಾದೇವಿ ಇವರೀರ್ವರು ಪರಿಚಾರಿಕೆಯರು.

shrinath.udupa@gmail.com

ಪೌರವೀ ರೋಹಿಣೀ ನಾಮ ಬಾಹ್ಲಿಕಸ್ಯಾತ್ಮಜಾಽಭವತ್ ।
ಜ್ಯೇಷ್ಠಾ ಪತ್ನೀ ಮುನಿಶ್ರೇಷ್ಠಾ ದಯಿತಾಽನಕದುಂದುಭೇಃ ॥ ೩೯ ॥

ಲೇಭೇ ಜ್ಯೇಷ್ಠಂ ಸುತಂ ರಾಮಂ ಶರಣ್ಯಂ ಶಠಮೇವ ಚ ।
ದುರ್ದಮಂ ದಮನಂ ಶುಭ್ರಂ ಪಿಂಡಾರಕಮುಶೀನರಂ ॥ ೪೦ ॥

ಚಿತ್ರಾ ನಾಮ ಕುಮಾರೀ ಚ ರೋಹಿಣೀತನಯಾ ನವ ।
ಚಿತ್ರಾ ಸುಭದ್ರೇತಿ ಪುನರ್ವಿಖ್ಯಾತಾ ಮುನಿಸತ್ತಮಾಃ ॥ ೪೧ ॥

ವಸುದೇವಾಚ್ಚ ದೇವಕ್ಯಾಂ ಜಜ್ಞೇ ಶೌರಿರ್ಮಹಾಯಶಾಃ ।
ರಾಮಾಚ್ಚ ನಿಶಠೋ ಜಜ್ಞೇ ರೇವತ್ಯಾಂ ದಯಿತಃ ಸುತಃ ॥ ೪೨ ॥

ಸುಭದ್ರಾಯಾಂ ರಥೀ ಪಾರ್ಥಾದಭಿಮನ್ಯುರಜಾಯತ ।
ಅಕ್ರೂರಾತ್ಕಾಶಿಕನ್ಯಾಯಾಂ ಸತ್ಯಕೇತುರಜಾಯತ ॥ ೪೩ ॥

---

೩೯. ಪುರುವಂಶದ ರೋಹಿಣೀದೇವಿಯೆಂಬ ಬಾಹ್ಲಿಕರಾಜನ ಮಗಳು, ವಸುದೇವನಿಗೆ ತುಂಬಾ ಪ್ರಿಯಳಾದ ಹಿರಿಯರಾಣಿಯಾಗಿದ್ದಳು.

೪೦. ವಸುದೇವನು ಬಲರಾಮ, ಶರಣ್ಯ, ಶಠ, ದುರ್ದಮ, ದಮನ ಶುಭ್ರ ಪಿಂಡಾರಕ, ಉಶೀನರರೆಂಬ ಎಂಟುಜನ ಗಂಡುಮಕ್ಕಳನ್ನು ರೋಹಿಣೀದೇವಿಯಲ್ಲಿ ಪಡೆದನು.

೪೧. ಮತ್ತು ಚಿತ್ರಾದೇವಿಯೆಂಬ ಮಗಳೂ ರೋಹಿಣಿಯಲ್ಲಿ ಜನಿಸಿದಳು. ಈ ಚಿತ್ರಾದೇವಿಯೇ ಸುಭದ್ರಾದೇವಿಯು. ಹೀಗೆ ಒಂಭತ್ತುಜನರೂ ರೋಹಿಣಿಯ ಮಕ್ಕಳು.

೪೨. ವಸುದೇವನಿಂದ ದೇವಕೀದೇವಿಯಲ್ಲಿ ಶ್ರೀಕೃಷ್ಣನು ಜನಿಸಿದನು. ಬಲರಾಮನಿಂದ ರೇವತೀದೇವಿಯಲ್ಲಿ ನಿಶಠನೆಂಬ ಕುಮಾರನು ಜನಿಸಿದನು.

೪೩. ಸುಭದ್ರಾದೇವಿಯಲ್ಲಿ ಅರ್ಜುನನಿಂದ ವೀರನಾದ ಅಭಿಮನ್ಯುವು ಜನಿಸಿದನು. ಅಕ್ರೂರನಿಂದ ಕಾಶಿರಾಜಪುತ್ರಿಯಲ್ಲಿ ಸತ್ಯಕೇತುವು ಜನಿಸಿದನು.

shrinath.udupa@gmail.com

ವಸುದೇವಸ್ಯ ಭಾರ್ಯಾಸು ಮಹಾಭಾಗಾಸು ಸಪ್ತಸು ।
ಯೇ ಪುತ್ರಾ ಜಜ್ಞಿರೇ ಶೂರಾಃ ಸಮಸ್ತಾಂಸ್ತಾನ್ನಿಬೋಧತ ॥ ೪೪ ॥

ಭೋಜಶ್ಚ ವಿಜಯಶ್ಚೈವ ಶಾಂತಿದೇವಾಸುತಾವುಭೌ ।
ವೃಕದೇವಃ ಸುನಾಮಾಯಾಂ ಗದಶ್ಚಾಸ್ತಾಂ ಸುತಾವುಭೌ ॥ ೪೫ ॥

ಅಗಾವಹಂ ಮಹಾತ್ಮಾನಂ ವೃಕದೇವೀ ವ್ಯಜಾಯತ ।
ಕನ್ಯಾ ತ್ರಿಗರ್ತರಾಜಸ್ಯ ಭಾರ್ಯಾ ವೈ ಶಿಶಿರಾಯಣೇಃ ॥ ೪೬ ॥

ಜಿಜ್ಞಾಸಾಂ ಪೌರುಷೇ ಚಕ್ರೇ ನ ಚಸ್ಕಂದೇ ಚ ಪೌರುಷಂ ।
ಕೃಷ್ಣಾಯಸಸಮಪ್ರಖ್ಯೋ ವರ್ಷೇ ದ್ವಾದಶಮೇ ತಥಾ ॥ ೪೭ ॥

ಮಿಥ್ಯಾಭಿಶಸ್ತೋ ಗಾರ್ಗ್ಯಸ್ತು ಮನ್ಯುನಾತಿಸಮೀರಿತಃ ।
ಘೋಷಕನ್ಯಾಮುಪಾದಾಯ ಮೈಥುನಾಯೋಪಚಕ್ರಮೇ ॥ ೪೮ ॥

---

೪೪. ವಸುದೇವನಿಂದ ಮಿಕ್ಕ ಏಳುಜನ ರಾಣಿಯರಲ್ಲಿ ಜನಿಸಿದ ಮಕ್ಕಳನ್ನು ಹೇಳುವೆನು, ಸಾವಧಾನದಿಂದ ಕೇಳಿರಿ.

೪೫. ಭೋಜ ವಿಜಯರೆಂಬೀರ್ವರು ಶಾಂತಿದೇವಿಯ ಮಕ್ಕಳು. ಸುನಾಮಾದೇವಿಯಲ್ಲಿ ವೃಕದೇವ ಗದರೆಂಬೀರ್ವರು ಮಕ್ಕಳು ಜನಿಸಿದರು.

೪೬. ಮಹಾತ್ಮನಾದ ಅಗಾವಹನು ವೃಕದೇವಿಯಲ್ಲಿ ಜನಿಸಿದನು. ಈ ವೃಕದೇವಿಯ ತ್ರಿಗರ್ತರಾಜನ ಮಗಳು. ಶಿಶಿರಾಯಣನ ಹೆಂಡತಿಯು.

೪೭-೪೮. ಗಾರ್ಗ್ಯನೆಂಬ ಮುನಿಯು ಹನ್ನೆರಡುವರ್ಷಗಳ ವರೆಗೆ ಬ್ರಹ್ಮಚರ್ಯವ್ರತವನ್ನು ಪಾಲಿಸಿದನು. ಹನ್ನೆರಡು ವರ್ಷಗಳ ಮೇಲೆ ಆ ಮುನಿಯು ಮೈಥುನಕ್ಕಾಗಿ ಪ್ರಯತ್ನಿಸಿದನು. ಸರಿಯಾದ ಪತ್ನಿಯು ಲಭಿಸದೆ ಕೋಪಗೊಂಡು ಆ ಮುನಿಯು ಗೋಪಸುಂದರಿಯೋರ್ವಳನ್ನು ಪಡೆದು ಮೈಥುನ [ಸಂಭೋಗ] ವನ್ನಾಚರಿಸಿದನು.

shrinath.udupa@gmail.com

ಗೋಪಾಲೀ ಚಾಪ್ಸರಾಸ್ತಸ್ಯ ಗೋಪಸ್ತ್ರೀವೇಷಧಾರಿಣೀ ।
ಧಾರಯಾಮಾಸ ಗಾರ್ಗ್ಯಸ್ಯ ಗರ್ಭಂ ದುರ್ಧರಮುಚ್ಯುತಂ ॥ ೪೯ ॥

ಮಾನುಷ್ಯಾಂ ಗರ್ಗಭಾರ್ಯಾಯಾಂ ನಿಯೋಗಾಚ್ಛೂಲಪಾಣಿನಃ ।
ಸ ಕಾಲಯವನೋ ನಾಮ ಜಜ್ಞೇ ರಾಜಾ ಮಹಾಬಲಃ ॥ ೫೦ ॥

ವೃತ್ತಪೂರ್ವಾರ್ಧಕಾಯಸ್ತು ಸಿಂಹಸಂಹನನೋ ಯುವಾ ।
ಅಪುತ್ರಸ್ಯ ಸ ರಾಜ್ಞಸ್ತು ವವೃಧೇಽಂತಃ ಪುರೇ ಶಿಶುಃ ॥ ೫೧ ॥

ಯವನಸ್ಯ ಮುನಿಶ್ರೇಷ್ಠಾಃ ಸ ಕಾಲಯವನೋಽಭವತ್ ।
ಆಯುಧ್ಯಮಾನೋ ನೃಪತಿಃ ಪರ್ಯಪೃಚ್ಛದ್ದ್ವಿಜೋತ್ತಮಂ ॥ ೫೨ ॥

ವೃಷ್ಣ್ಯಂಧಕಕುಲಂ ತಸ್ಯ ನಾರದೋಽಕಥಯದ್ವಿಭುಃ ।
ಅಕ್ಷೌಹಿಣ್ಯಾ ತು ಸೈನ್ಯಸ್ಯ ಮಥುರಾಮಭ್ಯಯಾತ್ತದಾ ॥ ೫೩ ॥

---

೪೯. ಆ ಗೋಪಸುಂದರಿಯು ಮೊದಲು ಅಪ್ಸರೆಯಾಗಿದ್ದು ಗೋಪಸ್ತ್ರೀ ರೂಪವನ್ನು ಧರಿಸಿ ಮನುಷ್ಯರೂಪದಿಂದ ಅವತರಿಸಿದ್ದಳು. ಅವಳು ಗಾರ್ಗ ಮುನಿಯಿಂದ ತೇಜಸ್ವಿಯಾದ ಗರ್ಭವನ್ನು ಧರಿಸಿದಳು.

೫೦. ಶಂಕರನ ಅಪ್ಪಣೆಯಂತೆ ಗರ್ಗಪತ್ನಿಯಾದ ಗೋಪಸುಂದರಿಯಲ್ಲಿ ಕಾಲಯವನ ಕುಮಾರನುದಯಿಸಿದನು. ಅವನು ಮಹಾಬಲಶಾಲಿಯಾದ ರಾಜನಾಗಿದ್ದನು.

೫೧. ಆ ಶಿಶುವಿನ ಶರೀರದ ಪೂರ್ವಾರ್ಧವು ದುಂಡಗೆ ಪುಷ್ಟವಾಗಿತ್ತು. ಸಿಂಹದಂತೆ ನಡುವು ಚಿಕ್ಕದಾಗಿದ್ದು ಸುಂದರವಾಗಿತ್ತು. ಇಂತಹ ಈ ಶಿಶುವು ಮಕ್ಕಳಿಲ್ಲದ ಯವನರಾಜನ ಅಂತಃಪುರದಲ್ಲಿ ಬೆಳೆಯಿತು. ಯವನರಾಜನ ಮನೆಯಲ್ಲಿ ಬೆಳೆದುದರಿಂದ ಅವನಿಗೆ ಕಾಲಯವನನೆಂಬ ಹೆಸರಾಯಿತು.

೫೨. ಯುದ್ಧವಿಲ್ಲದೇ ಬೇಸತ್ತು ವೀರನಾದಾ ಕಾಲಯವನನು ನಾರದನನ್ನು ಯುದ್ಧಮಾಡಲು ನನಗೆ ಸಾಟಿಯಾದ ವೀರರು ಎಲ್ಲಿರುವರು ? ಎಂದು ಕೇಳಿದನು ನಾರದನು ಮಥುರೆಯಲ್ಲಿದ್ದ ಯಾದವಕುಲವನ್ನು ತೋರಿಸಿದನು.

೫೩. ಆಗ ಕಾಲಯವನನು ತನ್ನ ಅಕ್ಷೋಹಿಣೀಸೈನ್ಯದೊಡನೇ ಮಥುರೆಯನ್ನು ಮುತ್ತಿ ಯಾದವರಿಗೆ ದೂತರನ್ನು ಕಳುಹಿಸಿದನು.

shrinath.udupa@gmail.com

ದೂತಂ ಸಂಪ್ರೇಷಯಾಮಾಸ ವೃಷ್ಣ್ಯಂಧಕನಿವೇಶನಂ ।
ತತೋ ವೃಷ್ಣ್ಯಂಧಕಾಃ ಕೃಷ್ಣಂ ಪುರಸ್ಕೃತ್ಯ ಮಹಾಮತಿಂ ॥ ೫೪ ॥

ಸಮೇತಾ ಮಂತ್ರಯಾಮಾಸುರ್ಯವನಸ್ಯ ಭಯಾತ್ತದಾ ।
ಕೃತ್ವಾ ವಿನಿಶ್ಚಯಂ ಸರ್ವೇ ಪಲಾಯನಮರೋಚಯನ್ ॥ ೫೫ ॥

ವಿಹಾಯ ಮಥುರಾಂ ರಮ್ಯಾಂ ಮಾನಯಂತಃ ಪಿನಾಕಿನಂ ।
ಕುಶಸ್ಥಲೀಂ ದ್ವಾರವತೀಂ ನಿವೇಶಯಿತುಮೀಪ್ಸವಃ ॥ ೫೬ ॥

ಇತಿ ಕೃಷ್ಣಸ್ಯ ಜನ್ಮೇದಂ ಯಃ ಶುಚಿರ್ನಿಯತೇಂದ್ರಿಯಃ ।
ಪರ್ವಸು ಶ್ರಾವಯೇದ್ವಿದ್ವಾನನೃಣಃ ಸ ಸುಖೀ ಭವೇತ್ ॥ ೫೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಕೃಷ್ಣಜನ್ಮಾನುಕೀರ್ತನಂ
ನಾಮ ಚತುರ್ದಶೋಽಧ್ಯಾಯಃ

---

೫೪. ಆಗ ಯಾದವರೆಲ್ಲರೂ ಯವನನ ಭಯವು ಬಂದುದನ್ನು ನೋಡಿ ರಾಜತಂತ್ರವನ್ನು ಬಲ್ಲ ಬುದ್ಧಿಶಾಲಿಯಾದ ಕೃಷ್ಣನೊಡನೆ ಸೇರಿ ಮಂತ್ರಾಲೋಚನೆಯನ್ನು ಮಾಡಿದರು.

೫೫-೫೬. ಹೀಗೆ ಎಲ್ಲರೂ ಆಲೋಚನೆಮಾಡಿ ಶಂಕರನ ಅನುಗ್ರಹದಿಂದ ಕಾಲಯವನನು ಜನಿಸಿ ಅಜೇಯತ್ವವನ್ನು ಶಂಕರನು ಯವನನಿಗೆ ಅನುಗ್ರಹಿಸಿರುವುದರಿಂದ ಶಂಕರನ ಆ ವರವನ್ನು ಮನ್ನಿಸಿ, ಅವನಿಗೆ ಗೌರವವನ್ನು ಕೊಡಬೇಕಾದುದರಿಂದ ಮಥುರೆಯಿಂದ ಪಲಾಯನವನ್ನು ಮಾಡಬೇಕೆಂದು ನಿಶ್ಚಯಿಸಿದರು. ಅದರಂತೆ ಯಾದವರೆಲ್ಲರೂ ಮಥುರೆಯನ್ನು ಬಿಟ್ಟು ಅನೇಕದ್ವಾರಗಳುಳ್ಳ ಕುಶಸ್ಥಲೀ ಎಂಬ ದ್ವಾರವತಿಗೆ ಬಂದು ಆ ನಗರಿಯನ್ನು ಸುಂದರನಗರಿಯನ್ನಾಗಿ ನಿರ್ಮಿಸಿ ಅಲ್ಲಿ ವಾಸಿಸತೊಡಗಿದರು.

೫೭. ಎಲೈ ಮುನಿಗಳೇ, ಇಂತಹ ಕೃಷ್ಣನ ವಂಶಚರಿತೆಯನ್ನು ಶುಚಿಯಾಗಿಯೂ, ಜಿತೇಂದ್ರಿಯನಾಗಿಯೂ ಯಾವನು ಕೇಳುವನೋ ಅವನು ಅನೃಣಿಯೂ ಸುಖಿಯೂ ಆಗುವನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಕೃಷ್ಣಜನ್ಮಕಥನವೆಂಬ
ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚದಶೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ಕ್ರೋಷ್ಟೋರಥಾಭವತ್ಪುತ್ರೋ ವೃಜಿನೀವಾನ್ಮಹಾಯಶಾಃ ।
ವಾರ್ಜಿನೀವತಮಿಚ್ಛಂತಿ ಸ್ವಾಹಿಂ ಸ್ವಾಹಾಕೃತಾಂ ವರಂ ॥ ೧ ॥

ಸ್ವಾಹಿಪುತ್ರೋಽಭವದ್ರಾಜಾ ಉಷದ್ಗುರ್ವದತಾಂ ವರಃ ।
ಮಹಾಕ್ರತುಭಿರೀಜೇ ಯೋ ವಿವಿಧೈರ್ಭೂರಿದಕ್ಷಿಣೈಃ ॥ ೨ ॥

ತತಃ ಪ್ರಸೂತಿಮಿಚ್ಛನ್ ವೈ ಉಷದ್ಗುಃ ಸೋಽಗ್ರ್ಯಮಾತ್ಮಜಂ ।
ಜಜ್ಞೇ ಚಿತ್ರರಥಸ್ತಸ್ಯ ಪುತ್ರಃ ಕರ್ಮಭಿರನ್ವಿತಃ ॥ ೩ ॥

ಹದಿನೈದನೆಯ ಅಧ್ಯಾಯವು

೧. ಸೂತಮುನಿಯು ಹೇಳಿದನು.—ಎಲೈ ಋಷಿಶ್ರೇಷ್ಠರೆ, ಕ್ರೋಷ್ಟು ರಾಜನಿಗೆ ವೃಜಿನೀವಾನ್ ಎಂಬ ಮತ್ತೊಬ್ಬ ಮಗನಿದ್ದನು. ಅವನ ಮಗನು ಸ್ವಾಹಿಯು. ಆ ಸ್ವಾಹಿಯು ಯಜ್ಞಗಳನ್ನು ವಿಧಿವತ್ತಾಗಿ ಮಾಡಿದನು.

೨. ಸ್ವಾಹಿಯ ಮಗನು ಉಷದ್ಗುರಾಜನು. ಈ ಉಷದ್ಗುವು ವಿದ್ವಾಂಸನಾಗಿದ್ದು ತುಂಬ ದಕ್ಷಿಣೆಗಳನ್ನು ಕೊಟ್ಟು ಮಹಾ ಯಾಗಗಳನ್ನು ಮಾಡಿದನು.

೩. ಆಮೇಲೆ ಆ ಉಷದ್ಗುವು ಸಂತತಿಯನ್ನು ಬೆಳೆಸುವ ಉದ್ದೇಶದಿಂದ ಚಿತ್ರರಥನೆಂಬ ಕರ್ಮಿಷ್ಠನೂ ವೀರನೂ ಆದ ಮಗನನ್ನು ಪಡೆದನು.

shrinath.udupa@gmail.com

ಆಸೀಚ್ಚೈತ್ರರಥಿರ್ವೀರೋ ಯಜ್ವಾ ವಿಪುಲದಕ್ಷಿಣಃ ।
ಶಶಬಿಂದುಃ ಪರಂ ವೃತ್ತಂ ರಾಜರ್ಷೀಣಾಮನುಷ್ಠಿತಃ ॥ ೪ ॥

ಪೃಥುಶ್ರವಾಃ ಪ್ರಥುಯಶಾ ರಾಜಾಽಽಸೀಚ್ಛಾಶಬಿಂದವಃ ।
ಶಂಸಂತಿ ಚ ಪುರಾಣಜ್ಞಾಃ ಪಾರ್ಥಶ್ರವಸಮಂತರಂ ॥ ೫ ॥

ಅಂತರಸ್ಯ ಸುಯಜ್ಞಸ್ತು ಸುಯಜ್ಞಾತನಯೋಽಭವತ್ ।
ಉಷತೋ ಯಜ್ಞಮಖಿಲಂ ಸ್ವಧರ್ಮೇ ಚ ಕೃತಾದರಃ ॥ ೬ ॥

ಶಿನೇಯುರಭವತ್ಪುತ್ರ ಉಷತಃ ಶತ್ರುತಾಪನಃ ।
ಮರುತಸ್ತಸ್ಯ ತನಯೋ ರಾಜರ್ಷಿರಭವನ್ನೃಪಃ ॥ ೭ ॥

ಮರುತೋಽಲಭತ ಜ್ಯೇಷ್ಠಂ ಸುತಂ ಕಂಬಲಬರ್ಹಿಷಂ ।
ಚಚಾರ ವಿಪುಲಂ ಧರ್ಮಮಮರ್ಷಾತ್ಪ್ರತ್ಯಭಾಗಪಿ ॥ ೮ ॥

---

೪. ಆ ಚಿತ್ರರಥನಿಂದ ಶಶಬಿಂದುವೆಂಬ ಮಗನು ಹುಟ್ಟಿದನು. ಈ ಶಶಬಿಂದುವು ವೀರನೂ ಕರ್ಮಠನೂ ಉದಾರನೂ ಆಗಿದ್ದು ರಾಜರ್ಷಿಯಾಗಿದ್ದನು.

೫. ಪೃಥುಶ್ರವ, ಪೃಥುಯಶರೆಂಬೀರ್ವರು ಶಶಬಿಂದುವಿನ ಮಕ್ಕಳು. ಅಂತರನೆಂಬುವನು ಪೃಥುಶ್ರವನ ಮಗನು.

೬. ಅಂತರನ ಮಗನು ಸುಯಜ್ಞನು. ಸುಯಜ್ಞನ ಮಗನು ಉಷತನು. ಈ ಉಷತನು ತುಂಬಾ ಯಾಗಗಳನ್ನು ಮಾಡುತ್ತಿದ್ದು ರಾಜಧರ್ಮದಲ್ಲಿ ಶ್ರದ್ಧೆಯಿಂದಿದ್ದನು.

೭. ಉಷತನ ಮಗನು ಮಹಾವೀರನಾದ ಶಿನೇಯುರಾಜನು. ಮರುತನು ಶಿನೇಯುವಿನ ಮಗನು. ಈ ಮರುತನು ರಾಜರ್ಷಿಯಾಗಿದ್ದನು.

೮. ಮರುತನು ಕಂಬಲಬರ್ಹಿಷನೆಂಬ ಮಗನನ್ನು ಪಡೆದನು. ಈ ಕಂಬಲಬರ್ಹಿಷನು ಸ್ವಲ್ಪ ಮುಂಗೋಪಿಯಾಗಿದ್ದರೂ ತುಂಬಾ ಧರ್ಮನಿಷ್ಠನಾಗಿದ್ದನು.

shrinath.udupa@gmail.com

ಸ ಸತ್ಪ್ರಸೂತಿಮಿಚ್ಛನ್ ವೈ ಸುತಂ ಕಂಬಲಬರ್ಹಿಷಃ ।
ಬಭೂವ ರುಕ್ಮಕವಚಃ ಶತಪ್ರಸವತಃ ಸುತಃ ॥ ೯ ॥

ನಿಹತ್ಯ ರುಕ್ಮಕವಚಃ ಶತಂ ಕವಚಿನಾಂ ರಣೇ ।
ಧನ್ವಿನಾಂ ನಿಶಿತೈರ್ಬಾಣೈರವಾಪ ಶ್ರಿಯಮುತ್ತಮಾಂ ॥ ೧೦ ॥

ಜಜ್ಞೇ ಚ ರುಕ್ಮಕವಚಾತ್ಪರಜಿತ್ಪರವೀರಹಾ ।
ಜಜ್ಞಿರೇ ಪಂಚ ಪುತ್ರಾಸ್ತು ಮಹಾವೀರ್ಯಾಃ ಪರಾಜಿತಾಃ ॥ ೧೧ ॥

ರುಕ್ಮೇಷುಃ ಪೃಥುರುಕ್ಮಶ್ಚ ಜ್ಯಾಮಘಃ ಪಾಲಿತೋ ಹರಿಃ ।
ಪಾಲಿತಂ ಚ ಹರಿಂ ಚೈವ ವಿದೇಹೇಭ್ಯಃ ಪಿತಾ ದದೌ ॥ ೧೨ ॥

ರುಕ್ಮೇಷುರಭವದ್ರಾಜಾ ಪೃಥುರುಕ್ಮಸ್ಯ ಸಂಶ್ರಯಾತ್ ।
ತಾಭ್ಯಾಂ ಪ್ರವ್ರಾಜಿತೋ ರಾಜಾ ಜ್ಯಾಮಘೋऽವಸದಾಶ್ರಮೇ ॥ ೧೩ ॥

---

೯. ಕಂಬಲಬರ್ಹಿಷನೆಂಬುವನು ಶತಪ್ರಸವತಾದೇವಿಯಲ್ಲಿ ರುಕ್ಮಕವಚನೆಂಬ ವೀರನಾದ ಮಗನನ್ನು ಪಡೆದನು.

೧೦. ಆ ರುಕ್ಮಕವಚನು ಕಠಿಣಕವಚವನ್ನು ಧರಿಸಿದವರೂ ಉತ್ತಮಬಿಲ್ಲುಗಾರರೂ ಆದ ನೂರಾರು ಶತ್ರುಗಳನ್ನು ಹರಿತ ಬಾಣಗಳಿಂದ ಸಂಹರಿಸಿ ಜಯಲಕ್ಷ್ಮಿಯನ್ನೂ ಧನಲಕ್ಷ್ಮಿಯನ್ನೂ ಸಂಪಾದಿಸಿದನು.

೧೧. ಆ ರುಕ್ಮಕವಚನಿಂದ ಮಹಾವೀರನಾದ ಪರಜಿತನೆಂಬುವವನು ಜನಿಸಿದನು. ಆ ಪರಜಿತನಿಂದ ಮಹಾವೀರರಾದ ಐದು ಮಂದಿ ಪುತ್ರರು ಜನಿಸಿದರು.

೧೨. ರುಕ್ಮೇಷು, ಪೃಥುರುಕ್ಮ, ಜ್ಯಾಮಘ, ಪಾಲಿತ, ಹರಿ ಈ ಐದುಜನಗಳೇ ಪರಾಜಿತನ ಮಕ್ಕಳು. ಪಾಲಿತನನ್ನು ಹರಿಯನ್ನೂ ಪರಾಜಿತನು ವಿದೇಹರಾಜನಿಗೆ ದತ್ತಾಗಿ ಕೊಟ್ಟನು.

೧೩. ಪೃಥುರುಕ್ಮನ ಸಹಾಯದಿಂದ ರುಕ್ಮೇಷುವು ರಾಜ್ಯವಾಳತೊಡಗಿದನು. ಇವರೀರ್ವರೂ ತಮ್ಮ ತಂದೆಯಾದ ಜ್ಯಾಮಘನನ್ನೋಡಿಸಲು ಅವನು ತಪೋವನಕ್ಕೆ ತೆರಳಿ ಅಲ್ಲಿ ವಾಸಮಾಡತೊಡಗಿದನು.

shrinath.udupa@gmail.com

ಪ್ರಶಾಂತಶ್ಚ ತದಾ ರಾಜಾ ಬ್ರಾಹ್ಮಣೈಶ್ಚಾವಬೋಧಿತಃ ।
ಜಗಾಮ ಧನುರಾದಾಯ ದೇಶಮನ್ಯಂ ಧ್ವಜೀ ರಥೀ ॥ ೧೪ ॥

ನರ್ಮದಾಕೂಲಮೇಕಾಕೀಮೇಕಲಾಂ ಮೃತ್ತಿಕಾವತೀಂ ।
ಋಕ್ಷವಂತಂ ಗಿರಿಂ ಜಿತ್ವಾ ಶುಕ್ತಿಮತ್ಯಾಮುವಾಸ ಸಃ ॥ ೧೫ ॥

ಜ್ಯಾಮಘಸ್ಯಾಭವದ್ಭಾರ್ಯಾ ಶೈಬ್ಯಾ ಬಲವತೀ ಸತೀ ।
ಅಪುತ್ರೋಽಪಿ ಸ ರಾಜಾ ವೈ ನಾನ್ಯಾಂ ಭಾರ್ಯಾಮವಿಂದತ ॥ ೧೬ ॥

ತಸ್ಯಾಽಽಸೀದ್ವಿಜಯೋ ಯುದ್ಧೇ ತತ್ರ ಕನ್ಯಾಮವಾಪ ಸಃ ।
ಭಾರ್ಯಾಮುವಾಚ ಸಂತ್ರಸ್ತಃ ಸ್ನುಷೇತಿ ಸ ಜನೇಶ್ವರಃ ॥ ೧೭ ॥

ಏತಚ್ಛ್ರುತ್ವಾಽಬ್ರವೀದ್ದೇವೀ ಕಸ್ಯ ದೇವ ಸ್ನುಷೇತಿ ವೈ ।
ಅಬ್ರವೀತ್ತದುಪಶ್ರುತ್ಯ ಜ್ಯಾಮಘೋ ರಾಜಸತ್ತಮಃ ॥ ೧೮ ॥

---

೧೪. ಪ್ರಶಾಂತನಾದ ಆ ಜ್ಯಾಮಘನನ್ನು ಆಶ್ರಮದ ಮುನಿಗಳು ಪ್ರೇರಿಸಲು ಅವನು ಧನಸ್ಸನ್ನು ಧರಿಸಿ ರಥಧ್ವಜಗಳೊಡನೆ ಬೇರೆ ದೇಶಕ್ಕೆ ತೆರಳಿದನು.

೧೫. ಆ ಜ್ಯಾಮಘರಾಜನು ನರ್ಮದಾನದಿಯ ದಡದಲ್ಲಿರುವ ಮೇಕಲಾ ಮತ್ತು ಮೃತ್ತಿಕಾವತೀನಗರಗಳನ್ನೂ, ಋಕ್ಷವಾನ್ ಎಂಬ ಗಿರಿಯನ್ನೂ ಜಯಿಸಿ ಶುಕ್ತಿ ಮತೀಯೆಂಬ ನಗರಿಯಲ್ಲಿ ರಾಜ್ಯವಾಳತೊಡಗಿದನು.

೧೬. ಆ ಜ್ಯಾಮಘನಿಗೆ ಶೈಬ್ಯೆಯೆಂಬ ಪತಿವ್ರತೆಯಾದ ಹೆಂಡತಿಯಿದ್ದಳು. ಅವಳಲ್ಲಿ ಮಕ್ಕಳಾಗದಿದ್ದರೂ ಆ ರಾಜನು ಅವಳ ಮೇಲಿನ ಪ್ರೀತಿಯಿಂದ ಬೇರೆ ಮದುವೆಯನ್ನು ಮಾಡಿಕೊಳ್ಳಲಿಲ್ಲ.

೧೭. ಒಂದು ಸಾರಿ ಯುದ್ಧವೊಂದರಲ್ಲಿ ಶತ್ರುಗಳನ್ನೆಲ್ಲಾ ಸದೆಬಡಿಯಲು ಆ ರಾಜನಿಗೆ ಅನಾಥಳಾದ ಕನ್ಯೆಯೋರ್ವಳು ಸಿಕ್ಕಿದಳು. ಆ ಕನ್ಯೆಯನ್ನು ಹೆಂಡತಿಗೊಪ್ಪಿಸಿ ಇವಳು ಸೊಸೆಯೆಂದು ಹೇಳಿದನು.

೧೮. ರಾಣಿಯು ಆ ಮಾತನ್ನು ಕೇಳಿ ಓ ದೇವ? ತಮಗೆ, ಇವಳ ಪತಿಯಾಗಬಲ್ಲ ಮಗನೇ ಇಲ್ಲದಿರುವಲ್ಲಿ ಇವಳು ನಮಗೆಲ್ಲಿಯ ಸೊಸೆಯು? ಎಂದು ಹೇಳಿದಳು. ಅದನ್ನು ಕೇಳಿ ಜ್ಯಾಮಘನು,

shrinath.udupa@gmail.com

॥ ರಾಜೋವಾಚ ॥

ಯಸ್ತೇ ಜನಿಷ್ಯತೇ ಪುತ್ರಸ್ತಸ್ಯ ಭಾರ್ಯೋಪಪಾದಿತಾ ॥ ೧೯ ॥

॥ ಲೋಮಹರ್ಷಣ ಉವಾಚ ॥

ಉಗ್ರೇಣ ತಪಸಾ ತಸ್ಯಾಃ ಕನ್ಯಾಯಾಃ ಸಾ ವ್ಯಜಾಯತ ।
ಪುತ್ರಂ ವಿದರ್ಭಂ ಸುಭಗಾ ಶೈಬ್ಯಾ ಪರಿಣತಾ ಸತೀ ॥ ೨೦ ॥

ರಾಜಪುತ್ರ್ಯಾಂ ತು ವಿದ್ವಾಂಸೌ ಸ್ನುಷಾಯಾಂ ಕ್ರಥಕೈಶಿಕೌ ।
ಪಶ್ಚಾದ್ವಿದರ್ಭೋಽಜನಯಚ್ಛೂರೌ ರಣವಿಶಾರದೌ ॥ ೨೧ ॥

ಭೀಮೋ ವಿದರ್ಭಸ್ಯ ಸುತಃ ಕುಂತಿಸ್ತಸ್ಯಾಽಽತ್ಮಜೋಽಭವತ್ ।
ಕುಂತೇರ್ಧೃಷ್ಟಃ ಸುತೋ ಜಜ್ಞೇ ರಣಧೃಷ್ಟಃ ಪ್ರತಾಪವಾನ್ ॥ ೨೨ ॥

ಧೃಷ್ಟಸ್ಯ ಜಜ್ಞಿರೇ ಶೂರಾಸ್ತ್ರಯಃ ಪರಮಧಾರ್ಮಿಕಾಃ ।
ಆವಂತಶ್ಚ ದಶಾರ್ಹಶ್ಚ ಬಲೀ ವಿಷಹರಶ್ಚ ಸಃ ॥ ೨೩ ॥

---

೧೯. ಎಲೌ ದೇವಿ, ನಿನಗೆ ಮುಂದೆ ಜನಿಸುವಪುತ್ರನಿಗೆ ಈ ಕನ್ಯೆಯು ಪತ್ನಿಯಾಗುವಳು. ಆಗ ನಿನಗೆ ಇವಳು ಸೊಸೆಯೇ ಆಗುವಳಷ್ಟೆ? ಎಂದು ಹೇಳಿದನು

೨೦. ಸೂತಮುನಿಯು ಹೇಳಿದನು.—ಎಲೈ ಮುನಿಗಳೇ, ಮುಂದೆ ಆ ಕನ್ಯೆಯ ಉಗ್ರತಪಸ್ಸಿನಿಂದ ಶೈಬ್ಯೆಯು ಗರ್ಭವತಿಯಾಗಿ ಕನ್ಯೆಗನುರೂಪನಾದ ಕುಮಾರನನ್ನು ಹಡೆದಳು.

೨೧. ಆಮೇಲೆ ಆ ವಿದರ್ಭನು ಆ ಕನ್ಯೆಯಲ್ಲಿ ರಣಸಿಂಹರೂ, ವಿದ್ವಾಂಸರೂ ಆದ ಕ್ರಥ, ಕೈಶಿಕರೆಂಬ ಮಕ್ಕಳೀರ್ವರನ್ನು ಪಡೆದನು.

೨೨. ಭೀಮನೆಂಬವನೂ ವಿದರ್ಭನ ಮಗನು. ಭೀಮನ ಮಗನು ಕುಂತಿರಾಜನು. ಕುಂತಿರಾಜನಿಂದ ರಣಶೂರನಾದ ಧೃಷ್ಟನೆಂಬ ರಾಜನು ಜನಿಸಿದನು.

೨೩. ಧೃಷ್ಟರಾಜನಿಂದ ಧಾರ್ಮಿಕರೂ ಶೂರರೂ ಆದ ಆವಂತ, ದಶಾರ್ಹ, ಬಲೀಯೆಂಬ ಮೂವರು ಮಕ್ಕಳು ಜನಿಸಿದರು. ಬಲಿಯು ವಿಷಚಿಕಿತ್ಸೆಯನ್ನು ಮಾಡಿ ವಿಷಬಾಧೆಯನ್ನು ಹೋಗಲಾಡಿಸುತ್ತಿದ್ದನು.

shrinath.udupa@gmail.com

ದಶಾರ್ಹಸ್ಯ ಸುತೋ ವ್ಯೋಮಾ ವ್ಯೋಮ್ನೋ ಜೀಮೂತ ಉಚ್ಯತೇ ।
ಜೀಮೂತಪುತ್ರೋ ವಿಕೃತಿಸ್ತಸ್ಯ ಭೀಮರಥಃ ಸ್ಮೃತಃ ॥ ೨೪ ॥

ಅಥ ಭೀಮರಥಸ್ಯಾಽಸೀತ್ಪುತ್ರೋ ನವರಥಸ್ತಥಾ ।
ತಸ್ಯ ಚಾಸೀದ್ದಶರಥಃ ಶಕುನಿಸ್ತಸ್ಯ ಚಾತ್ಮಜಃ ॥ ೨೫ ॥

ತಸ್ಮಾತ್ಕರಂಭಃ ಕಾರಂಭಿರ್ದೇವರಾತೋಽಭವನ್ನೃಪಃ ।
ದೇವಕ್ಷತ್ರೋಽಭವತ್ತಸ್ಯ ವೃದ್ಧಕ್ಷತ್ರೋ ಮಹಾಯಶಾಃ ॥ ೨೬ ॥

ದೇವಗರ್ಭಸಮೋ ಜಜ್ಞೇ ದೇವಕ್ಷತ್ರಸ್ಯ ನಂದನಃ ।
ಮಧೂನಾಂ ವಂಶಕೃದ್ರಾಜಾ ಮಧುರ್ಮಧುರವಾಗಪಿ ॥ ೨೭ ॥

ಮಧೋರ್ಜಜ್ಞೇಽಥ ವೈದರ್ಭ್ಯಾಂ ಪುರುದ್ವಾನ್ ಪುರುಷೋತ್ತಮಃ ।
ಐಕ್ಷ್ವಾಕೀ ಚಾಭವದ್ಭಾರ್ಯಾ ಮಧೋಸ್ತಸ್ಯಾಂ ವ್ಯಜಾಯತ ॥ ೨೮ ॥

೨೪–೨೬. ದಶಾರ್ಹನ ಮಗನು ವ್ಯೋಮರಾಜನು. ವ್ಯೋಮನ ಮಗನು ಜೀಮೂತನು. ಜೀಮೂತನ ಮಗನು ವಿಕೃತಿ. ವಿಕೃತಿಯ ಮಗನು ಭೀಮರಥ ಭೀಮರಥನ ಮಗನು ನವರಥ. ನವರಥನ ಮಗನು ದಶರಥ. ದಶರಥನ ಮಗನು ಶಕುನಿ. ಶಕುನಿಯ ಮಗನು ಕರಂಭ. ಕರಂಭನ ಮಗನು ದೇವರಾತ. ದೇವರಾತನ ಮಗನು ದೇವಕ್ಷತ್ರ. ದೇವಕ್ಷತ್ರನ ಮಗನು ಯಶಸ್ವಿಯಾದ ವೃದಕ್ಷತ್ರನು.

೨೭. ದೇವಕ್ಷತ್ರನ ಮಗನಾದ ಕ್ಷತ್ರವೃದ್ಧನು ದೇವಕುಮಾರರಂತಿದ್ದನು. ಇವನಿಂದ ಮಧುವಂಶದ ಮೂಲಪುರುಷನಾದ ಮಧುವು ಜನಿಸಿದನು. ಈ ಮಧುವು ಮಧುರವಾಗಿ ಮಾತನಾಡುತ್ತಿದ್ದನು.

೨೮. ಮಧುವಿನಿಂದ ವೈದರ್ಭೀದೇಶದಲ್ಲಿ ಪುರುಷಶ್ರೇಷ್ಠನಾದ ಪುರುದ್ವಾನ್ ಎಂಬುವನು ಜನಿಸಿದನು. ಇಕ್ಷ್ವಾಕುವಂಶದ ರಾಜಪುತ್ರಿಯಲ್ಲಿ ಮಧುವಿಗೆ ಗುಣಶಾಲಿಯೂ, ಕೀರ್ತಿವಂತನೂ, ಬಲಿಷ್ಠನೂ ಆದ ಸತ್ತ್ವಾನ್ ಯೆಂಬ ಕುಮಾರನು ಜನಿಸಿದನು.

shrinath.udupa@gmail.com

ಸತ್ತ್ವಾತ್ ಸರ್ವಗುಣೋಪೇತಃ ಸಾತ್ವತಾ ಕೀರ್ತಿವರ್ಧನಃ ।
ಇಮಾಂ ವಿಸೃಷ್ಟಿಂ ವಿಜ್ಞಾಯ ಜ್ಯಾಮಘಸ್ಯ ಮಹಾತ್ಮನಃ ।
ಯುಜ್ಯತೇ ಪರಮಪ್ರೀತ್ಯಾ ಪ್ರಜಾವಾಂಶ್ಚ ಭವೇತ್ಸದಾ ॥ ೨೯ ॥

॥ ಲೋಮಹರ್ಷಣ ಉವಾಚ ॥

ಸತ್ತ್ವತಃ ಸತ್ತ್ವಸಂಪನ್ನಾ್ ಕೌಶಲ್ಯಾ ಸುಷುವೇ ಸುತಾನ್ ।
ಭಾಗಿನಂ ಭಜಮಾನಂ ಚ ದಿವ್ಯಂ ದೇವಾವೃಧಂ ನೃಪಂ ॥ ೩೦ ॥

ಅಂಧಕಂ ಚ ಮಹಾಬಾಹುಂ ವೃಷ್ಣಿಂ ಚ ಯದುನಂದನಂ ।
ತೇಷಾಂ ವಿಸರ್ಗಾಶ್ಚತ್ವಾರೋ ವಿಸ್ತರೇಣೇಹ ಕೀರ್ತಿತಾಃ ॥ ೩೧ ॥

ಭಜಮಾನಸ್ಯ ಸೃಂಜಯ್ಯೌ ಬಾಹ್ಯಕಾಽಥೋಪಬಾಹ್ಯಕಾ ।
ಆಸ್ತಾಂ ಭಾರ್ಯೇ ತಯೋಸ್ತಸ್ಮಾಜ್ಜಜ್ಞಿರೇ ಬಹವಃ ಸುತಾಃ ॥ ೩೨ ॥

ಕ್ರಿಮಿಶ್ಚ ಕ್ರಮಣಶ್ಚೈವ ಧೃಷ್ಟಃ ಶೂರಃ ಪುರಂಜಯಃ ।
ಏತೇ ಬಾಹ್ಯಕಸೃಂಜಯ್ಯಾಂ ಭಜಮಾನಾದ್ವಿಜಜ್ಞಿರೇ ॥ ೩೩ ॥

---

೨೯. ಮಹಾತ್ಮನಾದ ಜ್ಯಾಮಘನ ಈ ವಂಶವನ್ನು ಕೇಳಿದವನು ಸದಾ ಸಂತೋಷಿಯೂ ಸತ್ಪುತ್ರವುಳ್ಳವನೂ ಆಗುವನು.

೩೦–೩೧. ಸೂತಮುನಿಯು ಹೇಳಿದನು.—ಸತ್ವನೆಂಬುವನಿಂದ ಕೋಸಲ ರಾಜಕುವರಿಯಲ್ಲಿ ಕೀರ್ತಿಶಾಲಿಗಳಾದ ಭಾಗಿ, ಭಜಮಾನ, ದಿವ್ಯ, ದೇವವೃಧ ಅಂಧಕ, ವೃಷ್ಣಿ ಎಂಬ ಮಕ್ಕಳು ಜನಿಸಿದರು. ಇವರಿಂದ ಮುಖ್ಯವಾದ ನಾಲ್ಕು ವಂಶ ಗಳುಂಟಾದುವು. ಅವುಗಳನ್ನು ವಿಸ್ತಾರವಾಗಿ ಹೇಳಿರುವೆನು.

೩೨. ಭಜಮಾನರಾಜನಿಗೆ ಸೃಂಜಯನ ಮಕ್ಕಳಾದ ಬಾಹ್ಯಕಾದೇವಿ, ಉಪ ಬಾಹ್ಯಕಾದೇವಿಯರೀರ್ವರು ಹೆಂಡಿರು. ಇವರೀರ್ವರಿಂದ ಅನೇಕ ಮಕ್ಕಳು ಜನಿಸಿದರು.

೩೩. ಕ್ರಿಮಿ, ಕ್ರಮಣ, ಧೃಷ್ಟ, ಶೂರ, ಪುರಂಜಯರೆಂಬ ಕುಮಾರರು ಬಾಹ್ಯಕಾದೇವಿಯಲ್ಲಿ ಭಜಮಾನನಿಂದ ಜನಿಸಿದರು.

shrinath.udupa@gmail.com

ಆಯುತಾಜಿತ್ಸಹಸ್ರಾಜಿಚ್ಛತಾಜಿತ್ತ್ವಥ ದಾಸಕಃ ।
ಉಪಬಾಹ್ಯಕಸ್ಸೃಂಜಯ್ಯಾಂ ಭಜಮಾನಾದ್ವಿಜಜ್ಞಿರೇ ॥ ೩೪ ॥

ಯಜ್ವಾ ದೇವಾನ್ವೃಧೋ ರಾಜಾ ಚಚಾರ ವಿಪುಲಂ ತಪಃ ।
ಪುತ್ರಃ ಸರ್ವಗುಣೋಪೇತೋ ಮಮ ಸ್ಯಾದಿತಿ ನಿಶ್ಚಿತಃ ॥ ೩೫ ॥

ಸಂಯುಜ್ಯಮಾನಸ್ತಪಸಾ ಪರ್ಣಾಶಾಯಾ ಜಲಂ ಸ್ಪೃಶನ್ ।
ಸದೋಪಸ್ಪೃಶತಸ್ತಸ್ಯ ಚಕಾರ ಪ್ರಿಯಮಾಪಗಾ ॥ ೩೬ ॥

ಚಿಂತಯಾಽಭಿಪರೀತಾ ಸಾ ನ ಜಗಾಮೈವ ನಿಶ್ಚಯಂ ।
ಕಲ್ಯಾಣತ್ವಾನ್ನರಪತೇಸ್ತಸ್ಯ ಸಾ ನಿಮ್ನಗೋತ್ತಮಾ ॥ ೩೭ ॥

ನಾಧ್ಯಗಚ್ಛತ್ತು ತಾಂ ನಾರೀಂ ಯಸ್ಯಾಮೇವಂವಿಧಃ ಸುತಃ ।
ಭವೇತ್ತಸ್ಮಾತ್ಸ್ವಯಂ ಗತ್ವಾ ಭವಾಮ್ಯಸ್ಯ ಸಹಾನುಗಾ ॥ ೩೮ ॥

---

೩೪. ಅಯುತಾಜಿತ್, ಸಹಸ್ರಾಜಿತ್, ಶತಾಜಿತ್ ದಾಸಕರೆಂಬ ಕುಮಾರರು ಉಪಬಾಹ್ಯಕಾದೇವಿಯಲ್ಲಿ ಭಜಮಾನನಿಂದ ಜನಿಸಿದರು.

೩೫. ದೇವವೃಧನೆಂಬ ರಾಜನು ತನಗೆ ಸರ್ವಗುಣಸಂಪನ್ನನಾದ ಮಗನು ಜನಿಸಬೇಕೆಂಬ ಬಯಕೆಯಿಂದ ಮಹಾತಪಸ್ಸನ್ನಾಚರಿಸಿದನು.

೩೬. ಆ ರಾಜನು ಪರ್ಣಾಶಾನದಿಯಲ್ಲಿ ಸ್ನಾನಪಾನಾದಿಗಳನ್ನು ಮಾಡುತ್ತಾ ನಿಷ್ಠೆಯಿಂದ ತಪಸ್ಸನ್ನು ಮಾಡುತ್ತಿದ್ದನು. ಆ ನದಿಯೂ ಸಹ ರಾಜನ ತಪಸ್ಸಿಗೆ ಅನುಕೂಲವಾಗಿ ವರ್ತಿಸುತ್ತಿದ್ದಿತು.

೩೭-೩೮. ಆ ಉತ್ತಮನದಿಯು ರಾಜನ ವಿಷಯದಲ್ಲಿ ಒಳ್ಳೆಯದಾಗುವ ಉಪಾಯವನ್ನು ಚಿಂತಿಸುತ್ತಾ ಯಾವ ಬಗೆಯೂ ಹರಿಯದೇ ಕೊನೆಗೆ ಈ ರಾಜನು ಬಯಸುವಂತಹ ಕುಮಾರನನ್ನು ಹಡೆಯಬಹುದಾದಂತಹ ಸ್ತ್ರೀರತ್ನವು ಇಲ್ಲೆಲ್ಲಿಯೂ ಇಲ್ಲ. ಆದ ಕಾರಣ ನಾನೇ ಈ ರಾಜನ ಸಹಚಾರಿಣಿಯಾದ ಹೆಂಡತಿಯಾಗಿ ಪುತ್ರನನ್ನು ಹಡೆಯುವೆನು ಎಂದು ನಿಶ್ಚಯವನ್ನು ಮಾಡಿ,

shrinath.udupa@gmail.com

ಅಥ ಭೂತ್ವಾ ಕುಮಾರೀ ಸಾ ಬಿಭ್ರತೀ ಪರಮಂ ವಪುಃ ।
ವರಯಾಮಾಸ ನೃಪತಿಂ ತಾಮಿಯೇಷ ಚ ಸ ಪ್ರಭುಃ ॥ ೩೯ ॥

ತಸ್ಯಾಮಾಧತ್ತ ಗರ್ಭಂ ಸ ತೇಜಸ್ವಿನಮುದಾರಧೀಃ ।
ಅಥ ಸಾ ದಶಮೇ ಮಾಸಿ ಸುಷುವೇ ಸರಿತಾಂ ವರಾ ॥ ೪೦ ॥

ಪುತ್ರಂ ಸರ್ವಗುಣೋಪೇತಂ ಬಭ್ರುಂ ದೇವಾವೃಧಂ ದ್ವಿಜಾಃ ।
ಅತ್ರ ವಂಶೇ ಪುರಾಣಜ್ಞಾ ಗಾಯಂತೀತಿ ಪರಿಶ್ರುತಂ ॥ ೪೧ ॥

ಗುಣಾನ್ ದೇವಾವೃಧಸ್ಯಾಪಿ ಕೀರ್ತಯಂತೋ ಮಹಾತ್ಮನಃ ।
ಯಥೈವಾಗ್ರೇ ತಥಾ ದೂರಾತ್ಪಶ್ಯಾಮಸ್ತಾವದಂತಿಕಾತ್ ॥ ೪೨ ॥

ಬಭ್ರುಃ ಶ್ರೇಷ್ಠೋ ಮನುಷ್ಯಾಣಾಂ ದೇವೈರ್ದೇವಾವೃಧಃ ಸಮಃ ।
ಷಷ್ಟಿಶ್ಚ ಷಟ್ಚ ಪುರುಷಾಃ ಸಹಸ್ರಾಣಿ ಚ ಸಪ್ತ ಚ ॥ ೪೩ ॥

---

೩೯. ಸುಂದರವಾದ ರೂಪವುಳ್ಳ ಕುಮಾರಿಯು ರೂಪವನ್ನು ಧರಿಸಿ ಆ ರಾಜನನ್ನು ಪತಿಯಾಗಿ ವರಿಸಿದಳು. ಅವನೂ ಸಹ ಅವಳನ್ನು ಪತ್ನಿಯನ್ನಾಗಿ ಸ್ವೀಕರಿಸಿದನು.

೪೦. ಉದಾರನಾದ ದೇವವೃಧನು ಆ ಕುಮಾರಿಯಲ್ಲಿ ಗರ್ಭೋತ್ಪತ್ತಿಯನ್ನು ಮಾಡಿದನು. ಹತ್ತನೆಯ ತಿಂಗಳಲ್ಲಿ ಆ ಸುಂದರಿಯು ತೇಜಸ್ವಿಯೂ ಗುಣಶಾಲಿಯೂ ಆದಂತಹ ಬಭ್ರುವೆಂಬ ಮಗನನ್ನು ಹಡೆದಳು.

೪೧. ಹಿಂದಿನ ಇತಿಹಾಸವನ್ನು ಬಲ್ಲ ಋಷಿಗಳು ಈ ದೇವವೃಧರಾಜನ ವಂಶದ ವಿಷಯದಲ್ಲಿ ಆ ಮಹಾತ್ಮನ ಗುಣಗಳನ್ನು ಹೊಗಳುತ್ತಾ ಹೀಗೆ ಹೇಳಿರುವರು.

೪೨. ದೇವವೃಧನ ಮಗನಾದ ಈ ಬಭ್ರುವು ದೇವತೆಗಳಿಗೆ ಸರಿಸಾಟಿಯಾಗಿರುವನು. ಇವನ ಕೀರ್ತಿಯು ಹತ್ತಿರದಲ್ಲಿ ಹರಡಿರುವಂತೆ ದೂರದೂರದಲ್ಲಿಯೂ ಹರಡಿರುವುದು. ಇವನ ಸದ್ಗುಣಗಳು ಜಗತ್ತಿನಲ್ಲೆಲ್ಲಾ ತುಂಬಿರುವುವು.

೪೩. ಏಳುಸಾವಿರದ ಅರವತ್ತಾರು ಪುರುಷರು ಈ ಬಭ್ರುವಿನ ಸತ್ಕರ್ಮ ಮಹಿಮೆಯಿಂದ ಪುಣ್ಯಲೋಕವನ್ನು ಪಡೆದಿರುವರು.

shrinath.udupa@gmail.com

ಏತೇಽಮೃತತ್ವಂ ಪ್ರಾಪ್ತಾ ವೈ ಬಭ್ರೋರ್ದೇವಾವೃಧಾದಪಿ ।
ಯಜ್ವಾ ದಾನಪತಿರ್ಧೀಮಾನ್ ಬ್ರಹ್ಮಣ್ಯಃ ಸುದೃಢಾಯುಧಃ ॥ ೪೪ ॥

ತಸ್ಯಾನ್ವವಾಯಃ ಸುಮಹಾನ್ ಭೋಜಾ ಯೇ ಸಾರ್ತಿಕಾವತಾಃ ।
ಅಂಧಕಾತ್ಕಾಶ್ಯದುಹಿತಾ ಚತುರೋಽಲಭತಾತ್ಮಜಾನ್ ॥ ೪೫ ॥

ಕುಕುರಂ ಭಜಮಾನಂ ಚ ಸಸಕಂ ಬಲಬರ್ಹಿಷಂ ।
ಕುಕುರಸ್ಯ ಸುತೋ ವೃಷ್ಟಿರ್ವೃಷ್ಟೇಸ್ತು ತನಯಸ್ತಥಾ ॥ ೪೬ ॥

ಕಪೋತರೋಮಾ ತಸ್ಯಾಥ ತಿಲಿರಿಸ್ತನಯೋಽಭವತ್ ।
ಜಜ್ಞೇ ಪುನರ್ವಸುಸ್ತಸ್ಮಾದಭಿಜಿಚ್ಚ ಪುನರ್ವಸೋಃ ॥ ೪೭ ॥

ತಥಾ ವೈ ಪುತ್ರಮಿಥುನಂ ಬಭೂವಾಭಿಜಿತಃ ಕಿಲ ।
ಆಹುಕಃ ಶ್ರಾಹುಕಶ್ಚೈವ ಖ್ಯಾತೌ ಖ್ಯಾತಿಮತಾಂ ವರೌ ॥ ೪೮ ॥

---

೪೪. ಈ ಬಭ್ರುರಾಜನು ವಿಧಿವತ್ತಾಗಿ ಯಾಗಗಳನ್ನು ಮಾಡಿದನು. ಉದಾರನು, ಬುದ್ಧಿವಂತನು, ಬ್ರಾಹ್ಮಣಪ್ರಿಯನು, ಮಹಾವೀರನು.

೪೫. ಆ ಬಭ್ರುವಿನ ವಂಶವು ದೊಡ್ಡದಾಗಿರುವುದು. ಭೋಜರು ಸಾರ್ತಿಕಾವತರು ಮುಂತಾದ ಕ್ಷತ್ರಿಯರು, ಇವನ ವಂಶದಲ್ಲಿ ಜನಿಸಿರುವರು. ಅಂಧಕನಿಂದ ಕಾಶೀರಾಜನ ಕುವರಿಯಲ್ಲಿ ಕುಕುರ ಭಜಮಾನ ಸಸಕ ಬಲಬರ್ಹಿಷರೆಂಬ ನಾಲ್ಕುಮಂದಿ ಮಕ್ಕಳು ಜನಿಸಿದರು.

೪೬-೪೭. ಕುಕುರನ ಮಗನು ವೃಷ್ಟಿಯು. ವೃಷ್ಟಿಯ ಮಗನು ಕಪೋತರೋಮನು. ಅವನ ಮಗನು ತಿಲಿರಿಯು. ತಿಲಿರಿಯ ಮಗನು ಪುನರ್ವಸುವು. ಪುನರ್ವಸುವಿನ ಮಗನು ಅಭಿಜಿತ್.

೪೮. ಆ ಅಭಿಜಿತನಿಗೆ ಆಹುಕ ಶ್ರಾಹುಕರೆಂದು ಪ್ರಸಿದ್ಧರಾದ ಮಕ್ಕಳು ಜನಿಸಿದರು. ಆಹುಕನ ವಿಷಯದಲ್ಲಿ ಪುರಾಣವಿರುವುದು. ಹೀಗೆ ಗಾಥೆಯನ್ನು ಹೇಳಿರುವರು.

shrinath.udupa@gmail.com

ಇಮಾಂ ಚೋದಾಹರಂತ್ಯತ್ರ ಗಾಥಾಂ ಪ್ರತಿ ತಮಾಹುಕಂ ।
ಶ್ವೇತೇನ ಪರಿವಾರೇಣ ಕಿಶೋರಪ್ರತಿಮೋ ಮಹಾನ್ ॥ ೪೯ ॥

ಅಶೀತಿವರ್ಮಣಾ ಯುಕ್ತ ಆಹುಕಃ ಪ್ರಥಮಂ ವ್ರಜೇತ್ ।
ನಾಪುತ್ರವಾನ್ನಾಶತದೋ ನಾಸಹಸ್ರಶತಾಯುಷಃ ॥ ೫೦ ॥

ನಾಶುದ್ಧಕರ್ಮಾ ನಾಯಜ್ವಾ ಯೋ ಭೋಜಮಭಿತೋ ವ್ರಜೇತ್ ।
ಪೂರ್ವಸ್ಯಾಂ ದಿಶಿ ನಾಗಾನಾಂ ಭೋಜಸ್ಯ ಪ್ರಯಯುಃ ಕಿಲ ॥ ೫೧ ॥

ಸೋಮಾತ್ಸಂಗಾನುಕರ್ಷಾಣಾಂ ಧ್ವಜಿನಾಂ ಸವರೂಥಿನಾಂ ।
ರಥಾನಾಂ ಮೇಘಘೋಷಾಣಾಂ ಸಹಸ್ರಾಣಿ ದಶೈವ ತು ॥ ೫೨ ॥

ರೌಪ್ಯಕಾಂಚನಕಕ್ಷಾಣಾಂ ಸಹಸ್ರಾಣ್ಯೇಕವಿಂಶತಿಃ ।
ತಾವತ್ಯೇವ ಸಹಸ್ರಾಣಿ ಉತ್ತರಸ್ಯಾಂ ತಥಾ ದಿಶಿ ॥ ೫೩ ॥

---

೪೯. ದೇವಕುಮಾರನಂತಿದ್ದ ಆಹುಕನು ಶ್ವೇತಪರಿವಾರದಿಂದೊಡಗೂಡಿ ಎಂಭತ್ತು ಕವಚಗಳೊಡನೆ ಯುದ್ಧಕ್ಕೆ ತೆರಳುವನು.

೫೦. ಆ ಆಹುಕನ ರಾಜ್ಯದಲ್ಲಿ ಓರ್ವನೂ ಮಕ್ಕಳಿಲ್ಲದವನಿರಲಿಲ್ಲ. ಜಿಪುಣನಾಗಿರಲಿಲ್ಲ. ಸಾವಿರವರ್ಷಗಳಿಗೆ ಕಮ್ಮಿಯಾದ ಆಯುಸ್ಸುಳ್ಳವನಾಗಿರಲಿಲ್ಲ. ಪಾಪಕರ್ಮವನ್ನು ಮಾಡುತ್ತಿರಲಿಲ್ಲ. ಪ್ರಜೆಗಳೆಲ್ಲರೂ ಕರ್ಮಠರಾಗಿದ್ದರು ದೈವಭಕ್ತರಾಗಿದ್ದರು.

೫೧. ಆ ಆಹುಕನೊಡನೆ ಚಂದ್ರನಂತೆ ಶುಭ್ರವರ್ಣವುಳ್ಳವುಗಳೂ, ಬಲಶಾಲಿಗಳೂ, ಆದ ಸಾವಿರಾರು ಆನೆಗಳೂ ಪೂರ್ವದಿಕ್ಕಿಗೆ ಯುದ್ಧಕ್ಕಾಗಿ ತೆರಳುತ್ತಿದ್ದವು.

೫೨-೫೩. ಆ ಆಹುಕನ ಇಪ್ಪತ್ತೊಂದು ಸಾವಿರ ಮಹಾರಥಗಳು ಆ ಆನೆಗಳ ಜೊತೆಗೆ ಪೂರ್ವದಿಕ್ಕಿಗೆ ತೆರಳುತ್ತಿದ್ದುವು. ಆ ರಥಗಳ ಧ್ವಜಗಳು ಚಂದ್ರಮಂಡಲವನ್ನು ಮುಟ್ಟುವಷ್ಟು ಎತ್ತರವಾಗಿರುತ್ತಿದ್ದುವು. ರಥಧ್ವನಿಯು ಮೇಘಧ್ವನಿಯಂತೆ ಗಂಭೀರವಾಗಿದ್ದಿತು. ರಥಗಳ ಚೌಕಟ್ಟುಗಳು ಬೆಳ್ಳಿ ಮತ್ತು ಚಿನ್ನಗಳಿಂದಲೇ ನಿರ್ಮಿತವಾದುವುಗಳು. ಇಂತಹ ಮತ್ತೊಂದು ಇಪ್ಪತೊಂದುಸಾವಿರ ರಥಗಳು ಉತ್ತರದಿಕ್ಕಿಗೆ ತೆರಳುವುವು.

shrinath.udupa@gmail.com

ಆಭೂಮಿಪಾಲಾ ಭೋಜಾಸ್ತು ಸಂತಿ ಜ್ಯಾಕಿಂಕಿಣೀಕಿನಃ ।
ಆಹುಃ ಕಿಂ ಚಾಪ್ಯವಂತಿಭ್ಯಃ ಸ್ವಸಾರಂ ದದುರಂಧಕಾಃ ॥ ೩೪ ॥

ಆಹುಕಸ್ಯ ತು ಕಾಶ್ಯಾಯಾಂ ದ್ವೌ ಪುತ್ರೌ ಸಂಬಭೂವತುಃ ।
ದೇವಕಶ್ಚೋಗ್ರಸೇನಶ್ಚ ದೇವಗರ್ಭಸಮಾವುಭೌ ॥ ೩೫ ॥

ದೇವಕಸ್ಯಾಭವನ್ಪುತ್ರಾಶ್ಚತ್ವಾರಸ್ತ್ರಿದಶೋಪಮಾಃ ।
ದೇವವಾನುಪದೇವಶ್ಚ ಸಂದೇವೋ ದೇವರಕ್ಷಿತಃ ॥ ೩೬ ॥

ಕುಮಾರ್ಯಃ ಸಪ್ತ ಚಾಸ್ಯಾಥ ವಸುದೇವಾಯ ತಾ ದದೌ ।
ದೇವಕೀ ಶಾಂತಿದೇವಾ ಚ ಸುದೇವಾ ದೇವರಕ್ಷಿತಾ ॥ ೩೭ ॥

ವೃಕದೇವ್ಯುಪದೇವೀ ಚ ಸುನಾಮ್ನೀ ಚೈವ ಸಪ್ತಮೀ ।
ನವೋಗ್ರಸೇನಸ್ಯ ಸುತಾಸ್ತೇಷಾಂ ಕಂಸಸ್ತು ಪೂರ್ವಜಃ ॥ ೩೮ ॥

ನ್ಯಗ್ರೋಧಶ್ಚ ಸುನಾಮಾ ಚ ತಥಾ ಕಂಕಃ ಸುಭೂಷಣಃ ।
ರಾಷ್ಟ್ರಪಾಲೋಽಥ ಸುತನುರನಾವೃಷ್ಟಿಸ್ತು ಪುಷ್ಟಿಮಾನ್ ॥ ೩೯ ॥

---

೩೪. ಈ ಭೋಜವಂಶದವರು ಭೂಮಿಯಲ್ಲಿ ರಾಜಸಂತತಿ ಇರುವವರೆಗೂ ಇರುವರು. ಇವರು ಮಹಾಶೂರರು. ಆಹುಕನ ಮಗಳನ್ನು ಅಂಧಕನ ಮಕ್ಕಳು ಅವಂತಿದೇಶದ ರಾಜಕುಮಾರನಿಗೆ ಮದುವೆಮಾಡಿಕೊಟ್ಟರು.

೩೫. ಆಹುಕನಿಗೆ ಕಾಶಿರಾಜಕುವರಿಯಲ್ಲಿ ದೇವಕ, ಉಗ್ರಸೇನರೆಂಬಿಬ್ಬರು ಮಕ್ಕಳು ಜನಿಸಿದರು. ಅವರು ದೇವಕುಮಾರರಂತಿದ್ದರು.

೩೬. ದೇವಕನಿಗೆ ದೇವತೆಗಳಂತೆ ತೇಜಸ್ವಿಗಳಾದ ದೇವಾನ್, ಉಪದೇವ, ಸಂದೇವ, ದೇವರಕ್ಷಿತರೆಂಬ ನಾಲ್ಕುಮಂದಿ ಮಕ್ಕಳು ಜನಿಸಿದರು.

೩೭. ದೇವಕನಿಗೆ ದೇವಕೀ, ಶಾಂತಿದೇವಿ, ಸುದೇವಿ, ದೇವರಕ್ಷಿತಾ, ವೃಕದೇವೀ, ಉಪದೇವೀ, ಸುನಾಮ್ನಾ ಎಂಬ ಏಳುಜನ ಕುಮಾರಿಯರು. ಇವರನ್ನು ವಸುದೇವನಿಗೆ ಮದುವೆಮಾಡಿ ಕೊಟ್ಟನು.

೩೮-೩೯. ಉಗ್ರಸೇನನಿಗೆ ಕಂಸ, ನ್ಯಗ್ರೋಧ, ಸುನಾಮಾ, ಕಂಕ, ಸುಭೂಷಣ, ರಾಷ್ಟ್ರಪಾಲ, ಸುತನು, ಅನಾವೃಷ್ಟಿ, ಪುಷ್ಟಿಮಂತರೆಂಬ ಒಂಭತ್ತುಮಂದಿ ಮಕ್ಕಳು. ಇವರಲ್ಲಿ ಕಂಸನು ಹಿರಿಯವನು.

shrinath.udupa@gmail.com

ತೇಷಾಂ ಸ್ವಸಾರಃ ಪಂಚಾಸನ್ ಕಂಸಾ ಕಂಸವತೀ ತಥಾ ।
ಸುತನೂ ರಾಷ್ಟ್ರಪಾಲೀ ಚ ಕಂಕಾ ಚೈವ ವರಾಂಗನಾ ॥ ೬೦ ॥

ಉಗ್ರಸೇನಃ ಸಹಾಪತ್ಯೋ ವ್ಯಾಖ್ಯಾತಃ ಕುಕುರೋದ್ಭವಃ ।
ಕುಕುರಾಣಾಮಿಮಂ ವಂಶಂ ಧಾರಯನ್ನಮಿತೌಜಸಾಂ ॥ ೬೧ ॥

ಆತ್ಮನೋ ವಿಪುಲಂ ವಂಶಂ ಪ್ರಜಾವಾನಾಪ್ನುಯಾನ್ನರಃ ॥ ೬೨ ॥

ಇತಿ ಶ್ರೀ ಮಹಾಪುರಾಣೇ ಆದಿಬ್ರಾಹ್ಮೇ ವೃಷ್ಣಿವಂಶನಿರೂಪಣಂ
ನಾಮ ಪಂಚದಶೋಽಧ್ಯಾಯಃ

೬೦. ಆ ಒಂಭತ್ತು ಮಂದಿಗಳಲ್ಲಿ ಕಂಸನಿಗೆ ಕಂಸಾ, ಕಂಸವತೀಯೆಂಬೀರ್ವರು ಕನ್ಯೆಯರು. ಸುತನುವಿನ ಮಗಳು ಸುತನೂದೇವಿ. ರಾಷ್ಟ್ರಪಾಲನಿಗೆ ರಾಷ್ಟ್ರ ಪಾಲಿಯು ಮಗಳು. ಕಂಕನಿಗೆ ಕಂಕಾದೇವಿಯು ಮಗಳು.

೬೧-೬೨. ಎಲೈ ಮುನಿಗಳೇ, ಹೀಗೆ ಉಗ್ರಸೇನನನ್ನೂ ಅವನ ಮಕ್ಕಳನ್ನೂ ಹೇಳಿರುವೆನು. ಪರಾಕ್ರಮಿಗಳಾದ ಕುಕುರವಂಶದವರ ಈ ಚರಿತ್ರೆಯನ್ನು ಕೇಳಿದವನ ವಂಶವು ವೃದ್ಧಿಯಾಗುವುದು. ಸುಪುತ್ರರು ಜನಿಸುವರು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ವೃಷ್ಣಿವಂಶನಿರೂಪಣವೆಂಬ
ಹದಿನೈದನೆಯ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಷೋಡಶೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ಭಜಮಾನಸ್ಯ ಪುತ್ರೋಽಥ ರಥಮುಖ್ಯೋ ವಿದೂರಥಃ ।
ರಾಜಾಧಿದೇವಃ ಶೂರಸ್ತು ವಿದೂರಥಸುತೋಽಭವತ್ ॥ ೧ ॥

ರಾಜಾಧಿದೇವಸ್ಯ ಸುತಾ ಜಜ್ಞಿರೇ ವೀರ್ಯವತ್ತರಾಃ ।
ದತ್ತಾತಿದತ್ತೌ ಬಲಿನೌ ಶೋಣಾಶ್ವಃ ಶ್ವೇತವಾಹನಃ ॥ ೨ ॥

ಶಮೀ ಚ ದಂಡಶರ್ಮಾ ಚ ದಂತಶತ್ರುಶ್ಚ ಶತ್ರುಜಿತ್ ।
ಶ್ರವಣಾ ಚ ಶ್ರವಿಷ್ಠಾ ಚ ಸ್ವಸಾರೌ ಸಂಬಭೂವತುಃ ॥ ೩ ॥

ಶಮಿಪುತ್ರಃ ಪ್ರತಿಕ್ಷತ್ರಃ ಪ್ರತಿಕ್ಷತ್ರಸ್ಯ ಚಾತ್ಮಜಃ ।
ಸ್ವಯಂಭೋಜಃ ಸ್ವಯಂಭೋಜಾದ್ಭದಿಕಃ ಸಂಬಭೂವ ಹ ॥ ೪ ॥

ಹದಿನಾರನೆಯ ಅಧ್ಯಾಯವು

೧–೩. ಸೂತಮುನಿಯು ಹೇಳಿದನು.—ಎಲೈ ಮುನಿಗಳೇ, ಭಜಮಾನನ ಮಗನು. ಮಹಾರಥನು ಶೂರನಾದ ರಾಜಾಧಿದೇವನು ವಿದೂರಥನ ಮಗನು. ದತ್ತ, ಅತಿದತ್ತ, ಶೋಣಾಶ್ವ, ಶ್ವೇತವಾಹನ, ಶಮೀ, ದಂಡಶರ್ಮಾ, ದಂತಶತ್ರು, ಶತ್ರುಜಿತ್, ಶ್ರವಣಾದೇವಿ, ಶ್ರವಿಷ್ಠಾದೇವಿ ಇವರು ರಾಜಾಧಿದೇವನ ಮಕ್ಕಳು.

೪. ಶಮಿಯ ಮಗನು ಪ್ರತಿಕ್ಷತ್ರನು. ಪ್ರತಿಕ್ಷತ್ರನ ಮಗನು ಸ್ವಯಂಭೋಜನು. ಸ್ವಯಂಭೋಜನ ಮಗನು ಭದಿಕಕುಮಾರನು.

shrinath.udupa@gmail.com

ತಸ್ಯ ಪುತ್ರಾ ಬಭೂವುರ್ಹಿ ಸರ್ವೇ ಭೀಮಪರಾಕ್ರಮಾಃ ।
ಕೃತವರ್ಮಾಽಗ್ರಜಸ್ತೇಷಾಂ ಶತಧನ್ವಾ ತು ಮಧ್ಯಮಃ ॥ ೫ ॥

ದೇವಾಂತಶ್ಚ ನರಾಂತಶ್ಚ ಭಿಷಗ್ವೈತರಣಶ್ಚ ಯಃ ।
ಸುದಾಂತಶ್ಚಾತಿದಾಂತಶ್ಚ ನಿಕಾಶ್ಯಃ ಕಾಮದಂಭಕಃ ॥ ೬ ॥

ದೇವಾಂತಸ್ಯಾಭವತ್ಪುತ್ರೋ ವಿದ್ವಾನ್ ಕಂಬಲಬರ್ಹಿಷಃ ।
ಅಸಮೌಜಾಃ ಸುತಸ್ತಸ್ಯ ನಾಸಮೌಜಾಶ್ಚ ತಾವುಭೌ ॥ ೭ ॥

ಅಜಾತಪುತ್ರಾಯ ಸುತಾನ್ ಪ್ರದದಾವಸಮೌಜಸೇ ।
ಸುದಂಷ್ಟ್ರಶ್ಚ ಸುಚಾರುಶ್ಚ ಕೃಷ್ಣ ಇತ್ಯಂಧಕಾಃ ಸ್ಮೃತಾಃ ॥ ೮ ॥

ಗಾಂಧಾರೀ ಚೈವ ಮಾದ್ರೀ ಚ ಕ್ರೋಷ್ಟುಭಾರ್ಯೇ ಬಭೂವತುಃ ।
ಗಾಂಧಾರೀ ಜನಯಾಮಾಸ ಅನಮಿತ್ರಂ ಮಹಾಬಲಂ ॥ ೯ ॥

ಮಾದ್ರೀ ಯುಧಾಜಿತಂ ಪುತ್ರಂ ತತೋ ವೈ ದೇವಮೀಢುಷಂ ।
ಅನಮಿತ್ರಮಮಿತ್ರಾಣಾಂ ಜೇತಾರಮಪರಾಜಿತಂ ॥ ೧೦ ॥

೫-೬. ಭದಿಕನಿಗೆ ಕೃತವರ್ಮಾ, ಶತಧನ್ವಾ, ದೇವಾಂತ, ನರಾಂತ, ಭಿಷಗ್ವೈತರಣ, ಸುದಾಂತ, ಅತಿದಾಂತ, ನಿಕಾಶ್ಯ, ಕಾಮದಂಭಕರೆಂಬ ಮಕ್ಕಳು ಜನಿಸಿದರು. ಇವರೆಲ್ಲರೂ ಮಹಾ ಪರಾಕ್ರಮಿಗಳು. ಇವರಲ್ಲಿ ಕೃತವರ್ಮನು ಹಿರಿಯವನು. ಶತಧನ್ವನು ನಡುವಿನವನು.

೭. ದೇವಾಂತನ ಮಗನು ವಿದ್ವಾಂಸನಾದ ಕಂಬಲಬರ್ಹಿಷನು. ಅಸಮೌಜ, ನಾಸಮೌಜರೆಂಬೀರ್ವರು ಕಂಬಲಬರ್ಹಿಷನ ಮಕ್ಕಳು.

೮. ಅಸಮೌಜನೆಂಬುವವನಿಗೆ ಮಕ್ಕಳಿರಲಿಲ್ಲವು. ಸಂದಷ್ಟ್ರ, ಸುಚಾರು ಇವರು ಆ ಅಸಮೌಜನಿಗೆ ತಮ್ಮ ಮಕ್ಕಳನ್ನು ದತ್ತುಕೊಟ್ಟರು. ಇವರೆಲ್ಲರೂ ಅಂಧಕವಂಶದವರು.

೯-೧೦. ಕ್ರೋಷ್ಟುವಿಗೆ ಗಾಂಧಾರೀ, ಮಾದ್ರೀ ಎಂಬಿರ್ವರು ಪತ್ನಿಯರು. ಗಾಂಧಾರಿಯು ಅನಮಿತ್ರನೆಂಬ ಶೂರನನ್ನು ಹಡೆದಳು. ಈ ಅನಮಿತ್ರನು ಮಹಾ ಪರಾಕ್ರಮಿಯಾಗಿದ್ದು ಶತ್ರುಗಳೆಲ್ಲರನ್ನೂ ಸದೆಬಡಿದಿದ್ದನು. ಮಾದ್ರೀದೇವಿಯು ಯುಧಾಜಿತ ದೇವಮೀಢುಷರೆಂಬೀರ್ವರು ಮಕ್ಕಳನ್ನು ಹಡೆದಳು.

shrinath.udupa@gmail.com

ಅನಮಿತ್ರಸುತೋ ನಿಘ್ನೋ ನಿಘ್ನತೋ ದ್ವೌ ಬಭೂವತುಃ ।
ಪ್ರಸೇನಶ್ಚಾಥ ಸತ್ರಾಜಿಚ್ಛತ್ರುಸೇನಾಜಿತಾವುಭೌ ॥ ೧೧ ॥

ಪ್ರಸೇನೋ ದ್ವಾರವತ್ಯಾಂ ತು ನಿವಸನ್ಯೋ ಮಹಾಮಣಿಂ ।
ದಿವ್ಯಂ ಸ್ಯಮಂತಕಂ ನಾಮ ಸ ಸೂರ್ಯಾದುಪಲಬ್ಧವಾನ್ ॥ ೧೨ ॥

ತಸ್ಯ ಸತ್ರಾಜಿತಃ ಸೂರ್ಯಃ ಸಖಾ ಪ್ರಾಣಸಮೋಽಭವತ್ ।
ಸ ಕದಾಚಿನ್ನಿಶಾಪಾಯೇ ರಥೇನ ರಥಿನಾಂ ವರಃ ॥ ೧೩ ॥

ತೋಯಕೂಲಮಪಃಸ್ಪ್ರಷ್ಟುಮುಪಸ್ಥಾತುಂ ಯಯೌ ರವಿಂ ।
ತಸ್ಯೋಪತಿಷ್ಠತಃ ಸೂರ್ಯಂ ವಿವಸ್ವಾನಗ್ರತಃ ಸ್ಥಿತಃ ॥ ೧೪ ॥

ವಿಸ್ಪಷ್ಟಮೂರ್ತಿರ್ಭಗವಾಂಸ್ತೇಜೋಮಂಡಲವಾನ್ವಿಭುಃ ।
ಅಥ ರಾಜಾ ವಿವಸ್ವಂತಮುವಾಚ ಸ್ಥಿತಮಗ್ರತಃ ॥ ೧೫ ॥

---

೧೧. ಅನಮಿತ್ರನ ಮಗನು ನಿಘ್ನನು. ನಿಘ್ನನಿಗೆ ಸತ್ರಾಜಿತ್ ಪ್ರಸೇನರೆಂಬೀರ್ವರು ಮಕ್ಕಳು. ಅವರೀರ್ವರೂ ಪರಾಕ್ರಮಿಗಳಾಗಿದ್ದು ಶತ್ರುಭಯಂಕರರಾಗಿದ್ದರು.

೧೨. ಪ್ರಸೇನ ಸತ್ರಾಜಿತರೀರ್ವರೂ ದ್ವಾರವತಿಯಲ್ಲಿಯೇ ವಾಸಮಾಡುತ್ತಿದ್ದರು. ಸತ್ರಾಜಿತನಿಗೆ ಸೂರ್ಯನು ಪ್ರಾಣಸ್ನೇಹಿತನಾಗಿದ್ದು ಅವನಿಗೆ ಸ್ಯಮಂತಕವೆಂಬ ಮಹಾಮಣಿಯೊಂದನ್ನು ಪ್ರೀತಿಯಿಂದ ಕೊಟ್ಟನು.

೧೩. ಆ ಸತ್ರಾಜಿತನೊಂದುದಿನ ಪ್ರಾತಃಕಾಲದಲ್ಲಿ ಸೂರ್ಯನಿಗೆ ಅರ್ಘ್ಯವನ್ನು ಕೊಡುವುದಕ್ಕೂ ಉಪಸ್ಥಾನ [ಸಂಧ್ಯಾವಂದನಸ್ತೋತ್ರ] ಮಾಡುವುದಕ್ಕೂ ನದೀತೀರಕ್ಕೆ ತೆರಳಿದನು.

೧೪. ಅವನು ಉಪಸ್ಥಾನಮಾಡುತ್ತಿರಲು ಭಗವಾನ್ ಸೂರ್ಯನು ಆ ಸತ್ರಾಜಿತನೆದುರಿಗೆ ತೇಜೋಮಯವಾದ ಮಂಡಲದೊಡನೆ ಪ್ರತ್ಯಕ್ಷನಾದನು. ಆಗ ಸತ್ರಾಜಿತನು ಸೂರ್ಯನನ್ನು ನೋಡಿ

೧೫–೧೬. ಓ ತೇಜಸ್ವಿಗಳಿಗೊಡೆಯನಾದ ಸೂರ್ಯನೇ, ನಿನ್ನನ್ನು ಗಗನದಲ್ಲಿ ತೇಜೋಮಂಡಲರೂಪದಲ್ಲಿ ನೋಡುವಂತೆ ಯಾವಾಗಲೂ ಎದುರಿನಲ್ಲಿಯೇ ಆರೀತಿ

shrinath.udupa@gmail.com

ಯಥೈವ ವ್ಯೋಮ್ನಿ ಪಶ್ಯಾಮಿ ಸದಾ ತ್ವಾಂ ಜ್ಯೋತಿಷಾಂ ಪತೇ ।
ತೇಜೋಮಂಡಲಿನಂ ದೇವಂ ತಥೈವ ಪುರತಃ ಸ್ಥಿತಂ ॥ ೧೬ ॥

ಕೋ ವಿಶೇಷೋಽಸ್ತಿ ಮೇ ತ್ವತ್ತಃ ಸಖ್ಯೇನೋಪಗತಸ್ಯ ವೈ ।
ಏತಚ್ಛ್ರುತ್ವಾ ತು ಭಗವಾನ್ ಮಣಿರತ್ನಂ ಸ್ಯಮಂತಕಂ ॥ ೧೭ ॥

ಸ್ವಕಂಠಾದವಮುಚ್ಯಾಥ ಏಕಾಂತೇ ನ್ಯಸ್ತವಾನ್ ವಿಭುಃ ।
ತತೋ ವಿಗ್ರಹವಂತಂ ತಂ ದದರ್ಶ ನೃಪತಿಸ್ತದಾ ॥ ೧೮ ॥

ಪ್ರೀತಿಮಾನಥ ತಂ ದೃಷ್ಟ್ವಾ ಮುಹೂರ್ತಂ ಕೃತವಾನ್ ಕಥಾಂ ।
ತಮಭಿಪ್ರಸ್ಥಿತಂ ಭೂಯೋ ವಿವಸ್ವಂತಂ ಸ ಸತ್ರಜಿತ್ ॥ ೧೯ ॥

ಲೋಕಾನ್ ಭಾಸಯಸೇ ಸರ್ವಾನ್ಯೇನ ತ್ವಂ ಸತತಂ ಪ್ರಭೋ ।
ತದೇತನ್ಮಣಿರತ್ನಂ ಮೇ ಭಗವನ್ ದಾತುಮರ್ಹಸಿ ॥ ೨೦ ॥

ತತಃ ಸ್ಯಮಂತಕಮಣಿಂ ದತ್ತವಾನ್ ಭಾಸ್ಕರಸ್ತದಾ ।
ಸ ತಮಾಬಧ್ಯ ನಗರೀಂ ಪ್ರವಿವೇಶ ಮಹೀಪತಿಃ ॥ ೨೧ ॥

ನೀನು ನನಗೆ ಕಾಣಿಸುತ್ತಲಿರಬೇಕು. ನೀನು ನನ್ನ ಮೇಲಿಟ್ಟಿರುವ ಸ್ನೇಹಕ್ಕೆ ಫಲವಾಗಿ ಈರೀತಿ ಅನುಗ್ರಹಿಸಬೇಕು ಎನ್ನಲು,

೧೭. ಈ ಮಾತನ್ನು ಕೇಳಿ ಭಗವಾನ್ ಸೂರ್ಯನು ಮಣಿಶ್ರೇಷ್ಠವಾದ ಸ್ಯಮಂತಕಮಣಿಯನ್ನು ತನ್ನ ಕತ್ತಿನಿಂದ ತೆಗೆದು ಒಂದುಕಡೆಯಲ್ಲಿರಿಸಿದನು.

೧೮. ಆಗ ವಿಗ್ರಹ [ಶರೀರ] ವುಳ್ಳವಾಗಿ ಸೂರ್ಯನು ಸ್ಪಷ್ಟವಾಗಿ ಕಾಣಿಸಿದನು. ಸ್ವಲ್ಪ ಹೊತ್ತು ಸತ್ರಾಜಿತನು ಆ ಸೂರ್ಯನೊಂದಿಗೆ ಪ್ರೀತಿಯೊಡನೆ ಮಾತನಾಡಿದನು.

೧೯–೨೦. ತನ್ನ ಸ್ಥಾನಕ್ಕೆ ತೆರಳಲು ಸಿದ್ಧನಾದ ಸೂರ್ಯನನ್ನು ಕುರಿತು—ಓ ಭಗವನ್ ಯಾವ ಮಣಿರತ್ನದಿಂದ ನೀನು ಜಗತ್ತನ್ನು ಪ್ರಕಾಶಿಸುವೆಯೋ ಆ ಸ್ಯಮಂತಕ ಮಣಿಯನ್ನು ನನಗೆ ಕೊಟ್ಟು ಅನುಗ್ರಹಿಸು ಎಂದನು.

೨೧. ಅದನ್ನು ಕೇಳಿ ಭಾಸ್ಕರನು ಸ್ಯಮಂತಕಮಣಿಯನ್ನು ಸತ್ರಾಜಿತನಿಗೆ ಕೊಟ್ಟನು. ಸತ್ರಾಜಿತನು ಆ ಮಣಿಯನ್ನು ಕತ್ತಿಗೆ ಕಟ್ಟಿಕೊಂಡು ತನ್ನ ನಗರವನ್ನು ಪ್ರವೇಶಮಾಡಿದನು.

shrinath.udupa@gmail.com

ತಂ ಜನಾಃ ಪರ್ಯಧಾವಂತ ಸೂರ್ಯೋಽಯಂ ಗಚ್ಛತೀತಿ ಹ ।
ಸ್ವಾಂ ಪುರೀಂ ಸ ವಿಸಿಷ್ಮಾಯ ರಾಜಾ ತ್ವಂತಃಪುರಂ ತಥಾ ॥ ೨೨ ॥

ತಂ ಪ್ರಸೇನಜಿತಂ ದಿವ್ಯಂ ಮಣಿರತ್ನಂ ಸ್ಯಮಂತಕಂ ।
ದದೌ ಭ್ರಾತ್ರೇ ನರಪತಿಃ ಪ್ರೇಮ್ಣಾ ಸತ್ರಾಜಿದುತ್ತಮಂ ॥ ೨೩ ॥

ಸ ಮಣಿಃ ಸ್ಯಂದತೇ ರುಕ್ಮಂ ವೃಷ್ಣ್ಯಂಧಕನಿವೇಶನೇ ।
ಕಾಲವರ್ಷೀ ಚ ಪರ್ಜನ್ಯೋ ನ ಚ ವ್ಯಾಧಿಭಯಂ ಹ್ಯಭೂತ್ ॥ ೨೪ ॥

ಲಿಪ್ಸಾಂ ಚಕ್ರೇ ಪ್ರಸೇನಸ್ಯ ಮಣಿರತ್ನೇ ಸ್ಯಮಂತಕೇ ।
ಗೋವಿಂದೋ ನ ಚ ತಂ ಲೇಭೇ ಶಕ್ತೋಽಪಿ ನ ಜಹಾರ ಸಃ ॥ ೨೫ ॥

ಕದಾಚಿನ್ಮೃಗಯಾಂ ಯಾತಃ ಪ್ರಸೇನಸ್ತೇನ ಭೂಷಿತಃ ।
ಸ್ಯಮಂತಕಕೃತೇ ಸಿಂಹಾದ್ವಧಂ ಪ್ರಾಪ ವನೇಚರಾತ್ ॥ ೨೬ ॥

---

೨೨. ಮಣಿಪ್ರಭೆಯಿಂದ ಬೆಳಗುತ್ತಿದ್ದ ಅವನನ್ನು ನೋಡಿ ಸೂರ್ಯನೇ ಬಂದನೆಂದು ತಿಳಿದು ನಗರಜನರು ಅವನನ್ನು ಆಶ್ಚರ್ಯದಿಂದ ಹಿಂಬಾಲಿಸಿದರು. ಹೀಗೆ ನಗರದ ಜನಗಳನ್ನು ಆಶ್ಚರ್ಯಗೊಳಿಸುತ್ತಾ ಆ ಸತ್ರಾಜಿತನು ತನ್ನ ಅರಮನೆಯ ಒಳಗೆ ಪ್ರವೇಶಮಾಡಿದನು.

೨೩. ಆ ದಿವ್ಯವಾದ ಸ್ಯಮಂತಕಮಣಿಯನ್ನು ಪ್ರೀತಿಯಿಂದ ತನ್ನ ಸಹೋದರನಾದ ಪ್ರಸೇನನಿಗೆ ಸತ್ರಾಜಿತನು ಕೊಟ್ಟನು.

೨೪. ಆ ಸ್ಯಮಂತಕಮಣಿಯು ನಿತ್ಯವೂ ಸುವರ್ಣವನ್ನು ಸುರಿಸುವುದು. ಅದರ ಮಹಿಮೆಯಿಂದ ದ್ವಾರವತಿಯಲ್ಲಿ ಮಳೆಯು ಕಾಲಕ್ಕೆ ಸರಿಯಾಗಿ ಸುರಿಯುತ್ತಲಿತ್ತು. ಜನಗಳು ರೋಗಭಯವಿಲ್ಲದೆ ಸುಖವಾಗಿದ್ದರು.

೨೫. ಶ್ರೀ ಕೃಷ್ಣನು ಆ ದಿವ್ಯ ಸ್ಯಮಂತಕಮಣಿಯನ್ನು ಅಪೇಕ್ಷಿಸಿದನು. ಆದರೆ ಪ್ರಸೇನನು ಅವನಿಗೆ ಕೊಡಲಿಲ್ಲ. ಸಮರ್ಥನಾದರೂ ಧರ್ಮಬುದ್ಧಿಯಿಂದ ಹರಿಯು ಆ ಮಣಿಯನ್ನಪಹರಿಸಲಿಲ್ಲ.

೨೬. ಒಂದುದಿನ ಪ್ರಸೇನನು ಆ ಸ್ಯಮಂತಕಮಣಿಯನ್ನು ಧರಿಸಿ ಬೇಟೆಗೆ ಹೊರಟನು. ಕಾಡಿನಲ್ಲಿ ಸಿಂಹವೊಂದು ಆ ಪ್ರಸೇನನನ್ನು ಕೊಂದು ಸ್ಯಮಂತಕಮಣಿಯನ್ನೆತ್ತಿಕೊಂಡು ಹೊರಟುಹೋಯಿತು.

shrinath.udupa@gmail.com

ಅಥ ಸಿಂಹಂ ಪ್ರಧಾವಂತಮೃಕ್ಷರಾಜೋ ಮಹಾಬಲಃ ।
ನಿಹತ್ಯ ಮಣಿರತ್ನಂ ತದಾದಾಯ ಪ್ರಾವಿಶದ್ಗುಹಾಂ ॥ ೨೭ ॥

ತತೋ ವೃಷ್ಣ್ಯಂಧಕಾಃ ಕೃಷ್ಣಂ ಪ್ರಸೇನವಧಕಾರಣಾತ್ ।
ಪ್ರಾರ್ಥನಾಂ ತಾಂ ಮಣೇರ್ಬುದ್ಧ್ವಾ ಸರ್ವ ಏವ ಶಶಂಕಿರೇ ॥ ೨೮ ॥

ಸ ಶಂಕ್ಯಮಾನೋ ಧರ್ಮಾತ್ಮಾ ಅಕಾರೀ ತಸ್ಯ ಕರ್ಮಣಃ ।
ಆಹರಿಷ್ಯೇ ಮಣಿಮಿತಿ ಪ್ರತಿಜ್ಞಾಯ ವನಂ ಯಯೌ ॥ ೨೯ ॥

ಯತ್ರ ಪ್ರಸೇನೋ ಮೃಗಯಾಂ ವ್ಯಚರತ್ತತ್ರ ಚಾಪ್ಯಥ ।
ಪ್ರಸೇನಸ್ಯ ಪದಂ ಗೃಹ್ಯ ಪುರುಷೈರಾಪ್ತಕಾರಿಭಿಃ ॥ ೩೦ ॥

ಋಕ್ಷವಂತಂ ಗಿರಿವರಂ ವಿಂಧ್ಯಂ ಚ ಗಿರಿಮುತ್ತಮಂ ।
ಅನ್ವೇಷಯನ್ ಪರಿಶ್ರಾಂತಃ ಸ ದದರ್ಶ ಮಹಾಮನಾಃ ॥ ೩೧ ॥

---

೨೭. ಮಣಿಯನ್ನೆತ್ತಿಕೊಂಡು ಸಿಂಹವು ಓಡುತ್ತಿರಲು ಋಕ್ಷ [ಕರಡಿ]ರಾಜನಾದ ಮಹಾಬಲಿಷ್ಠನಾದ ಜಾಂಬವಂತನು ಆ ಸಿಂಹವನ್ನು ಕೊಂದು ಸ್ಯಮಂತಕಮಣಿಯನ್ನು ತೆಗೆದುಕೊಂಡು ತನ್ನ ಗುಹೆಗೆ ಹೊರಟುಹೋದನು.

೨೮. ಆಗ ಯಾದವರೆಲ್ಲರೂ ಹಿಂದೆ ಶ್ರೀಕೃಷ್ಣನು ಸ್ಯಮಂತಕಮಣಿಯನ್ನಪೇಕ್ಷಿಸಿದುದರಿಂದ ಅವನೇ ಪ್ರಸೇನನನ್ನು ಕೊಂದು ಮಣಿಯನ್ನಪಹರಿಸಿರುವನೆಂದು ಅನುಮಾನಪಟ್ಟರು.

೨೯. ತಪ್ಪನ್ನು [ಪ್ರಸೇನವಧೆ, ಮಣಿಹರಣಗಳನ್ನು] ಮಾಡದೇ ಅಪವಾದಕ್ಕೊಳಗಾದುದರಿಂದ ಧರ್ಮಾತ್ಮನಾದ ಶ್ರೀಕೃಷ್ಣನು ಮಣಿಯನ್ನು ತಂದುಕೊಡುವೆನೆಂದು ಹೇಳಿ ಕಾಡಿಗೆ ತೆರಳಿದನು.

೩೦. ಪ್ರಸೇನನು ಬೇಟೆಗೆಲ್ಲಿಗೆ ಹೋಗಿದ್ದನೋ ಅಲ್ಲೆಲ್ಲಾ ಅವನ ಹೆಜ್ಜೆಯ ಗುರುತನ್ನು ನೋಡುತ್ತಾ ಆಪ್ತಪುರುಷರೊಡನೆ ಹುಡುಕುತ್ತಾ ಹೊರಟನು.

೩೧. ಆ ಶ್ರೀಕೃಷ್ಣನು ಋಕ್ಷವಂತಪರ್ವತ ವಿಂಧ್ಯಪರ್ವತಗಳನ್ನೆಲ್ಲಾ ಸುತ್ತಿ ಹುಡುಕಿತುಂಬಾ ಆಯಾಸಪಟ್ಟನು. ಆದರೂ ಸ್ಯಮಂತಕಮಣಿಯ ಸುಳಿವು ಸಿಗಲಿಲ್ಲ.

shrinath.udupa@gmail.com

ಸಾಶ್ವಂ ಹತಂ ಪ್ರಸೇನಂ ತು ನಾವಿಂದತ ಚ ತನ್ಮಣಿಂ ।
ಅಥ ಸಿಂಹಃ ಪ್ರಸೇನಸ್ಯ ಶರೀರಸ್ಯಾವಿದೂರತಃ ॥ ೩೨ ॥

ಋಕ್ಷೇಣ ನಿಹತೋ ದೃಷ್ಟಃ ಪದೈರ್ಋಕ್ಷಸ್ತು ಸೂಚಿತಃ ।
ಪದೈಸ್ತೈರನ್ವಿಯಾಯಾಥ ಗುಹಾಮೃಕ್ಷಸ್ಯ ಮಾಧವಃ ॥ ೩೩ ॥

ಸ ಹಿ ಋಕ್ಷಬಿಲೇ ವಾಣೀಂ ಶುಶ್ರಾವ ಪ್ರಮದೇರಿತಾಂ ।
ಧಾತ್ರ್ಯಾ ಕುಮಾರಮಾದಾಯ ಸುತಂ ಜಾಂಬವತೋ ದ್ವಿಜಾಃ ॥ ೩೪ ॥

ಕ್ರೀಡಯಂತ್ಯಾ ಚ ಮಣಿನಾ ಮಾ ರೋದೀರಿತ್ಯಥೇರಿತಾಂ ॥ ೩೫ ॥

॥ ಧಾತ್ರ್ಯುವಾಚ ॥

ಸಿಂಹಃ ಪ್ರಸೇನಮವಧೀತ್ಸಿಂಹೋ ಜಾಂಬವತಾ ಹತಃ ।
ಸುಕುಮಾರಕ ಮಾ ರೋದೀಸ್ತವ ಹ್ಯೇಷ ಸ್ಯಮಂತಕಃ ॥ ೩೬ ॥

---

೩೨. ಆಗ ಸಲ್ಪದೂರದಲ್ಲಿ ಪ್ರಸೇನನು ಕುದುರೆಯೊಡನೆ ಮೃತನಾಗಿ ಬಿದ್ದಿರುವುದನ್ನು ನೋಡಿದನು. ಆದರೆ ಅಲ್ಲಿ ಮಣಿಯಿರಲಿಲ್ಲ. ಪ್ರಸೇನನ ಶರೀರದ ಸ್ವಲ್ಪದೂರದಲ್ಲಿ ಕರಡಿಯಿಂದ ಕೊಲ್ಲಲ್ಪಟ್ಟ ಸಿಂಹವು ಬಿದ್ದಿದ್ದಿತು. ಹೆಜ್ಜೆಯಗುರುತುಗಳಿಂದ ಸಿಂಹವನ್ನು ಕೊಂದುದು ಕರಡಿಯೇ ಎಂದು ನಿಶ್ಚಯಿಸಿದನು.

೩೩. ಆ ಕರಡಿಹೆಜ್ಜೆಗುರುತುಗಳಿಂದ ಜಾಂಬುವಂತನ ಗುಹೆಯಬಳಿಗೆ ಮಾಧವನು ತೆರಳಿದನು. ಅಲ್ಲಿ ಹೆಂಗಸಿನ ಮಧುರವಾದ ವಾಣಿಯು ಕೇಳಿಸಿತು.

೩೪–೩೫. ಆ ಬಿಲದಲ್ಲಿ ದಾದಿಯೋರ್ವಳು ಜಾಂಬುವಂತನ ಮಗನನ್ನು ಕರೆದುಕೊಂಡು ಆ ಸ್ಯಮಂತಕಮಣಿಯನ್ನು ತೋರಿಸಿ ಆಟವಾಡಿಸುತ್ತಾ ಅಪ್ಪಾ ಮಗು ಅಳಬೇಡ ಎಂದು ಹೇಳುತ್ತಿದ್ದಳು.

೩೬. ಸಿಂಹವು ಪ್ರಸೇನನನ್ನು ಕೊಂದು ಈ ಮಣಿಯನ್ನಪಹರಿಸಿತು. ಜಾಂಬವಂತನು ಆ ಸಿಂಹವನ್ನು ಕೊಂದು ಈ ಮಣಿಯನ್ನುತಂದನು. ಎಲೈ ಮುದ್ದುಮಗುವೇ, ಈಗ ಈ ಮಣಿಯು ನಿನ್ನದೇ ಆಗಿರುವುದು. ಅಳಬೇಡಪ್ಪಾ ಎನ್ನುತ್ತಿದ್ದಳು.

shrinath.udupa@gmail.com

ವ್ಯಕ್ತಿತಸ್ತಸ್ಯ ಶಬ್ದಸ್ಯ ತೂರ್ಣಮೇವ ಬಿಲಂ ಯಯೌ ।
ಪ್ರವಿಶ್ಯ ತತ್ರ ಭಗವಾಂಸ್ತದೃಕ್ಷಬಿಲಮಂಜಸಾ ॥ ೩೭ ॥

ಸ್ಥಾಪಯಿತ್ವಾ ಬಿಲದ್ವಾರೇ ಯದೂಲ್ಲಾಂಗಲಿನಾ ಸಹ ।
ಶಾರ್ಙ್ಗಧನ್ವಾ ಬಿಲಸ್ಥಂ ತು ಜಾಂಬವಂತಂ ದದರ್ಶ ಸಃ ॥ ೩೮ ॥

ಯುಯುಧೇ ವಾಸುದೇವಸ್ತು ಬಿಲೇ ಜಾಂಬವತಾ ಸಹ ।
ಬಾಹುಭ್ಯಾಮೇವ ಗೋವಿಂದೋ ದಿವಸಾನೇಕವಿಂಶತಿಂ ॥ ೩೯ ॥

ಪ್ರವಿಷ್ಟೇಽಥ ಬಿಲೇ ಕೃಷ್ಣೇ ಬಲದೇವಪುರಸ್ಸರಾಃ ।
ಪುರೀಂ ದ್ವಾರವತೀಮೇತ್ಯ ಹತಂ ಕೃಷ್ಣಂ ನ್ಯವೇದಯನ್ ॥ ೪೦ ॥

ವಾಸುದೇವೋಽಪಿ ನಿರ್ಜಿತ್ಯ ಜಾಂಬವಂತಂ ಮಹಾಬಲಂ ।
ಲೇಭೇ ಜಾಂಬವತೀಂ ಕನ್ಯಾಮೃಕ್ಷರಾಜಸ್ಯ ಸಂಮತಾಂ ॥ ೪೧ ॥

ಮಣಿಂ ಸ್ಯಮಂತಕಂ ಚೈವ ಜಗ್ರಾಹಾತ್ಮವಿಶುದ್ಧಯೇ ।
ಅನುನೀಯರ್ಕ್ಷರಾಜಂ ತು ನಿರ್ಯಯೌ ಚ ತತೋ ಬಿಲಾತ್ ॥ ೪೨ ॥

೩೭-೩೮. ಆ ಮಧುರಧ್ವನಿಯನ್ನು ಕೇಳಿದೊಡನೆಯೇ ಶ್ರೀಹರಿಯು ಬಿಲ ದ್ವಾರದಲ್ಲಿ ಬಲರಾಮ ಮೊದಲಾದವರನ್ನು ನಿಲ್ಲಿಸಿ ತಾನು ಗುಹೆಯೊಳಗೆ ಪ್ರವೇಶಿಸಿದನು. ಆ ಗುಹೆಯಲ್ಲಿ ಜಾಂಬುವಂತನನ್ನು ನೋಡಿದನು.

೩೯. ಅಲ್ಲಿ ಶ್ರೀಕೃಷ್ಣನು ಜಾಂಬುವಂತನೊಡನೆ ಬಾಹುಗಳಿಂದಲೇ ಇಪ್ಪತ್ತೊಂದುದಿನಗಳವರೆಗೆ ಯುದ್ಧಮಾಡಿದನು.

೪೦. ಶ್ರೀಕೃಷ್ಣನು ಗುಹೆಯನ್ನು ಪ್ರವೇಶಿಸಿದಮೇಲೆ ಕೆಲವು ದಿನಗಳ ವರೆಗೆ ನೋಡಿ ತಿರುಗಿ ಬರದಿರಲು ಬಲರಾಮಮೊದಲಾದವರು ದ್ವಾರಕೆಗೆ ಹೋಗಿ ಶ್ರೀ ಕೃಷ್ಣನು ಮಡಿದನೆಂದು ಹೇಳಿದರು.

೪೧. ಇತ್ತಲಾಗಿ ಶ್ರೀಕೃಷ್ಣನು ಮಹಾಬಲಿಷ್ಠನಾದ ಜಾಂಬುವಂತನನ್ನು ಜಯಿಸಿ ಅವನ ಪ್ರೀತಿಯ ಮಗಳಾದ ಜಾಂಬುವತಿಯನ್ನು ಮದುವೆಯಾದನು.

೪೨. ತನ್ನ ಅಪವಾದವು ಹೋಗುವದಕ್ಕಾಗಿ ಜಾಂಬುವಂತನಿಂದ ಸ್ಯಮಂತಕ ಮಣಿಯನ್ನೂ ತೆಗೆದುಕೊಂಡನು. ಆಮೇಲೆ ಅವನನುಮತಿಯನ್ನು ಪಡೆದು ಬಿಲದಿಂದ ಹೊರಟು

shrinath.udupa@gmail.com

ಉಪಾಯಾದ್ದ್ವಾರಕಾಂ ಕೃಷ್ಣಃ ಸ ವಿನೀತೈಃ ಪುರಃಸರೈಃ ।
ಏವಂ ಸ ಮಣಿಮಾಹೃತ್ಯ ವಿಶೋಧ್ಯಾತ್ಮಾನಮಚ್ಯುತಃ ॥ ೪೩ ॥

ದದೌ ಸತ್ರಾಜಿತೇ ತಂ ವೈ ಸರ್ವಸಾತ್ತ್ವತಸಂಸದಿ ।
ಏವಂ ಮಿಥ್ಯಾಭಿಶಸ್ತೇನ ಕೃಷ್ಣೇನಾಮಿತ್ರಘಾತಿನಾ ॥ ೪೪ ॥

ಆತ್ಮಾ ವಿಶೋಧಿತಃ ಪಾಪಾದ್ವಿನಿರ್ಜಿತ್ಯ ಸ್ಯಮಂತಕಂ ।
ಸತ್ರಾಜಿತೋ ದಶ ತ್ವಾಸನ್ ಭಾರ್ಯಾಸ್ತಾಸಾಂ ಶತಂ ಸುತಾಃ ॥ ೪೫ ॥

ಖ್ಯಾತಿಮಂತಸ್ತ್ರಯಸ್ತೇಷಾಂ ಭಗಂಕಾರಸ್ತು ಪೂರ್ವಜಃ ।
ವೀರೋ ವಾತಪತಿಶ್ಚೈವ ವಸುಮೇಧಸ್ತಥೈವ ಚ ॥ ೪೬ ॥

ಕುಮಾರ್ಯಶ್ಚಾಪಿ ತಿಸ್ರೋ ವೈ ದಿಕ್ಷು ಖ್ಯಾತಾ ದ್ವಿಜೋತ್ತಮಾಃ ।
ಸತ್ಯಭಾಮೋತ್ತಮಾ ತಾಸಾಂ ವ್ರತಿನೀ ಚ ದೃಢವ್ರತಾ ॥ ೪೭ ॥

---

೪೩. ಬಳಿಕ ಶ್ರೀಕೃಷ್ಣನು ದ್ವಾರಕೆಗೆ ಬಂದನು. ಅಲ್ಲಿ ಪ್ರಮುಖ ಯಾದವರ ಸಮ್ಮುಖದಲ್ಲಿ ಸ್ಯಮಂತಕಮಣಿಯನ್ನು ಕೊಟ್ಟು ತನ್ನ ಅಪವಾದವನ್ನು ಹೋಗಲಾಡಿಕೊಂಡನು.

೪೪. ಎಲೈ ಮುನಿಗಳೇ, ಹೀಗೆಸುಳ್ಳು ಅಪವಾದಕ್ಕೊಳಗಾಗದ ಶ್ರೀ ಕೃಷ್ಣನು ಸ್ಯಮಂತಕಮಣಿಯನ್ನು ಪರಾಕ್ರಮದಿಂದ ಸಾಧಿಸಿ ತಂದು ತನ್ನ ಅಪವಾದವನ್ನು ಹೋಗಲಾಡಿಸಿಕೊಂಡನು.

೪೫-೪೬. ಸತ್ರಾಜಿತನಿಗೆ ಹತ್ತುಮಂದಿ ಹೆಂಡಿರಿದ್ದರು. ಅವರಲ್ಲಿ ನೂರು ಮಂದಿ ಮಕ್ಕಳು ಜನಿಸಿದರು. ಅವರಲ್ಲಿ ಭಗಂಕಾರ, ವಾತಪತಿ, ವಸುಮೇಧ ಇವರು ಮುಖ್ಯರಾಗಿದ್ದು ಮಹಾವೀರರಾಗಿದ್ದರು. ಇವರಲ್ಲಿ ಭಗಂಕಾರನು ಹಿರಿಯವನು.

೪೭. ಸತ್ರಾಜಿತನಿಗೆ ಸತ್ಯಭಾಮಾ, ವ್ರತಿನೀ, ಪ್ರಸ್ವಾಪಿನೀ ಎಂಬ ಮೂವರು ಸುಂದರಿಯರಾದ ಕನ್ಯೆಯರಿದ್ದರು. ಇವರಲ್ಲಿ ಸತ್ಯಭಾಮೆಯು ಮುಖ್ಯಳು. ಇವಳನ್ನು ಶ್ರೀಕೃಷ್ಣನಿಗೆ ಮದುವೆಮಾಡಿಕೊಟ್ಟನು.

shrinath.udupa@gmail.com

ತಥಾ ಪ್ರಸ್ವಾಪಿನೀ ಚೈವ ಭಾರ್ಯಾಂ ಕೃಷ್ಣಾಯ ತಾಂ ದದೌ ।
ಸಭಾಕ್ಷೋ ಭಂಗಕಾರಿಸ್ತು ನಾವೇಯಶ್ಚ ನರೋತ್ತಮೌ ॥ ೪೮ ॥

ಜಜ್ಞಾತೇ ಗುಣಸಂಪನ್ನೌ ವಿಶ್ರುತೌ ರೂಪಸಂಪದಾ ।
ಮಾದ್ರ್ಯಾಃ ಪುತ್ರೋಽಥ ಜಜ್ಞೇಽಥ ವೃಷ್ಣಿಪುತ್ರೋ ಯುಧಾಜಿತಃ ॥ ೪೯ ॥

ಜಜ್ಞಾತೇ ತನಯೌ ವೃಷ್ಣೇಃ ಶ್ವಫಲ್ಕಶ್ಚಿತ್ರಕಸ್ತಥಾ ।
ಶ್ವಫಲ್ಕಃ ಕಾಶಿರಾಜಸ್ಯ ಸುತಾಂ ಭಾರ್ಯಾಮವಿಂದತ ॥ ೫೦ ॥

ಗಾಂದಿನೀಂ ನಾಮ ತಸ್ಯಾಶ್ಚ ಗಾಃ ಸದಾ ಪ್ರದದೌ ಪಿತಾ ।
ತಸ್ಯಾಂ ಜಜ್ಞೇ ಮಹಾಬಾಹುಃ ಶ್ರುತವಾನತಿಥಿಪ್ರಿಯಃ ॥ ೫೧ ॥

ಅಕ್ರೂರೋಽಥ ಮಹಾಭಾಗೋ ಜಜ್ಞೇ ವಿಪುಲದಕ್ಷಿಣಃ ।
ಉಪಮದ್ಗುಸ್ತಥಾ ಮದ್ಗುರ್ಮೇದರಶ್ಚಾರಿಮರ್ದನಃ ॥ ೫೨ ॥

---

೪೮. ಭಗಂಕಾರಿಗೆ ಸಭಾಕ್ಷ, ನಾವೇಯರೆಂಬೀರ್ವರು ಸುಗುಣಿಗಳಾದ ಮಕ್ಕಳಿದ್ದರು. ಇವರೀರ್ವರೂ ತುಂಬಾ ಸುಂದರರೆಂದು ಪ್ರಸಿದ್ಧರಾಗಿದ್ದರು.

೪೯. ಮಾದ್ರೀದೇವಿಯಲ್ಲಿ ಯುಧಾಜಿತನಿಂದ ಶ್ವಫಲ್ಕ, ಚಿತ್ರಕರೆಂಬೀರ್ವರು ಮಕ್ಕಳು ಜನಿಸಿದರು.

೫೦. ಶ್ವಫಲ್ಕನು ಕಾಶಿರಾಜನ ಮಗಳಾದ ಗಾಂದಿನೀದೇವಿಯನ್ನು ಮದುವೆ ಯಾದನು. ಅವಳ ತಂದೆಯು ಅವಳಿಗೆ ಬೇಕಾದಷ್ಟು ಹಸುಗಳನ್ನು ಕೊಡು ತ್ತಿದ್ದನು. ಆದರಿಂದ ಅವಳು ಗಾಂದಿನೀ ಎನಿಸಿಕೊಂಡಳು.

೫೧. ಆ ಗಾಂದಿನೀದೇವಿಯಲ್ಲಿ ಬಲಿಷ್ಠನೂ, ವಿದ್ವಾಂಸನೂ, ಭಾಗ್ಯ ಶಾಲಿಯೂ, ಉದಾರನೂ, ಆದರದಿಂದ ಅಥಿತಿಸತ್ಕಾರವನ್ನು ಮಾಡುವವನೂ ಆದ ಅಕ್ರೂರನು ಜನಿಸಿದನು.

೫೨-೫೪. ಉಪಮದ್ಗು, ಮದ್ಗು, ಮೇದುರ, ಅರಿಮರ್ದನ, ಅರಿಕ್ಷೇಪ, ಉಪೇಕ್ಷ, ಅರಿಮೇಜಯ, ಧರ್ಮಭೃತ್, ಧರ್ಮ, ಗೃಧ್ರ, ಭೋಜ, ಅಂಧಕ,

shrinath.udupa@gmail.com

ಆರಿಕ್ಷೇಪಸ್ತಥೋಪೇಕ್ಷಃ ಶತ್ರುಹಾ ಚಾರಿಮೇಜಯಃ ।
ಧರ್ಮಭೃಚ್ಚಾಪಿ ಧರ್ಮಾ ಚ ಗೃಧ್ರಭೋಜಾಂಧಕಸ್ತಥಾ ॥ ೫೩ ॥

ಆವಾಹಪ್ರತಿವಾಹೌ ಚ ಸುಂದರೀ ಚ ವರಾಂಗನಾ ।
ವಿಶ್ರುತಾಶ್ವಸ್ಯ ಮಹಿಷೀ ಕನ್ಯಾ ಚಾಸ್ಯ ವಸುಂಧರಾ ॥ ೫೪ ॥

ರೂಪಯೌವನಸಂಪನ್ನಾ ಸರ್ವಸತ್ತ್ವಮನೋಹರಾ ।
ಅಕ್ರೂರೇಣೋಗ್ರಸೇನಾಯಾಂ ಸುತೌ ವೈ ಕುಲನಂದನೌ ॥ ೫೫ ॥

ವಸುದೇವಶ್ಚೋಪದೇವಶ್ಚ ಜಜ್ಞಾತೇ ದೇವವರ್ಚಸೌ ।
ಚಿತ್ರಕಸ್ಯಾಭವನ್ ಪುತ್ರಾಃ ಪೃಥುರ್ವಿಪೃಥುರೇವ ಚ ॥ ೫೬ ॥

ಅಶ್ವಗ್ರೀವೋಽಶ್ವಬಾಹುಶ್ಚ ಸುಪಾರ್ಶ್ವಕಗವೇಷಣೌ ।
ಅರಿಷ್ಟನೇಮಿಶ್ಚ ಸುತಾ ಧರ್ಮೋ ಧರ್ಮಭೃದೇವ ಚ ॥ ೫೭ ॥

ಆವಾಹ, ಪ್ರತಿವಾಹ, ಸುಂದರೀದೇವಿ ಈ ಮಕ್ಕಳು ಶ್ವಫಲ್ಕನಿಂದ ಜನಿಸಿದರು. ಈ ಸುಂದರೀದೇವಿಯನ್ನು ವಿಶ್ರುತಾಶ್ವನೆಂಬುವನು ಮದುವೆಯಾದನು. ಅವಳಲ್ಲಿ ವಸುಂಧರೆಯೆಂಬ ಕನ್ಯೆಯು ಜನಿಸಿದಳು. ಆ ವಸುಂಧರೆಯು ತುಂಬಾ ಸುಂದರಿಯಾಗಿದ್ದು ಮನೋಹರಳಾಗಿದ್ದಳು.

೫೫. ಅಕ್ರೂರನಿಂದ ಉಗ್ರಸೇನಾದೇವಿಯಲ್ಲಿ ದೇವತೆಗಳಂತೆ ತೇಜಸ್ವಿಗಳಾದ ವಸುದೇವ, ಉಪದೇವರೆಂಬೀರ್ವರು ಮಕ್ಕಳು ಜನಿಸಿದರು.

೫೬-೫೭. ಚಿತ್ರಕನಿಗೆ ಪೃಥು, ವಿಪೃಥು, ಅಶ್ವಗ್ರೀವ, ಅಶ್ವಬಾಹು, ಸುಪಾರ್ಶ್ವಕ, ಗವೇಷಣ, ಅರಿಷ್ಟನೇಮಿ, ಧರ್ಮ, ಧರ್ಮಭೃತ್, ಸುಬಾಹು, ಬಹುಬಾಹು, ಶ್ರವಿಷ್ಠಾದೇವಿ, ಶ್ರವಣಾದೇವಿಯರೆಂಬ ಮಕ್ಕಳು ಜನಿಸಿದರು.

shrinath.udupa@gmail.com

ಸುಬಾಹುರ್ಬಹುಬಾಹುಶ್ಚ ಶ್ರವಿಷ್ಠಾ ಶ್ರವಣೇ ಸ್ತ್ರಿಯೌ ।
ಇಮಾಂ ಮಿಥ್ಯಾಭಿಶಸ್ತಿಂ ಯಃ ಕೃಷ್ಣಸ್ಯ ಸಮುದಾಹೃತಾಂ ॥ ೫೮ ॥

ವೇದ ಮಿಥ್ಯಾಭಿಶಾಪಸ್ತಂ ನ ಸ್ಪೃಶಂತಿ ಕದಾಚನ ॥ ೫೯ ॥

ಇತಿ ಮಹಾಪುರಾಣೇ ಆದಿಬ್ರಾಹ್ಮೇ ಸ್ಯಮಂತಕಪ್ರತ್ಯಾನಯನ-ನಿರೂಪಣಂ ನಾಮ ಷೋಡಶೋಽಧ್ಯಾಯಃ

೫೮-೫೯. ಎಲೈ ಮುನಿಗಳೇ, ಕೃಷ್ಣನಿಗೆ ಒದಗಿದ ಈ ಸುಳ್ಳು ಅಪವಾದದ ಸಂಬಂಧವಾದ ಸ್ಯಮಂತಕೋಪಾಖ್ಯಾನದ ಕಥೆಯನ್ನು ಯಾರು ಕೇಳುವರೋ ಅವರಿಗೆ ಯಾವಾಗಲೂ ಸುಳ್ಳು ಅಪವಾದವು ಬರಲಾರದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಸ್ಯಮಂತಕೋಪಾಖ್ಯಾನವರ್ಣನವೆಂಬ
ಹದಿನಾರನೆಯ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತದಶೋಽಧ್ಯಾಯ

॥ ಲೋಮಹರ್ಷಣ ಉವಾಚ ॥

ಯತ್ತು ಸತ್ರಾಜಿತೇ ಕೃಷ್ಣೋ ಮಣಿರತ್ನಂ ಸ್ಯಮಂತಕಂ ।
ದದಾವಹಾರಯದ್ಬಭ್ರುರ್ಭೋಜೇನ ಶತಧನ್ವನಾ ॥ ೧ ॥

ಸದಾ ಹಿ ಪ್ರಾರ್ಥಯಾಮಾಸ ಸತ್ಯಭಾಮಾಮನಿಂದಿತಾಂ ।
ಅಕ್ರೂರೋಽಂತರಮನ್ವಿಷ್ಯನ್ಮಣಿಂ ಚೈವ ಸ್ಯಮಂತಕಂ ॥ ೨ ॥

ಹದಿನೇಳನೆಯ ಅಧ್ಯಾಯವು

೧. ಲೋಮಹರ್ಷಣಮುನಿಯು ಹೇಳಿದನು.—ಎಲೈ ಮುನಿಗಳೇ, ಹಿಂದೆ ಕೃಷ್ಣನು ಜಾಂಬವಂತನನ್ನು ಜಯಿಸಿ ಸ್ಯಮಂತಕಮಣಿಯನ್ನು ಸತ್ರಾಜಿತನಿಗೆ ಕೊಟ್ಟನಷ್ಟೆ? ಮುಂದೆ ಆ ಮಣಿಯನ್ನು ಅಕ್ರೂರನು ಭೋಜವಂಶದವನಾದ ಶತಧನ್ವನ ಸಹಾಯದಿಂದ ತಾನ್ನು ಅಪಹರಿಸಿದನು.

೨. ಆ ಅಕ್ರೂರನು ಸಮಯಸಿಕ್ಕಿದಾಗಲೆಲ್ಲಾ ಸತ್ಯಭಾಮೆಯನ್ನು ಪ್ರೀತಿಯಿಂದ ಮಾತನಾಡಿಸುತ್ತಾ ತನಗೆ ಸ್ಯಮಂತಕಮಣಿಯನ್ನು ಕೊಡಿಸಬೇಕೆಂದು ಕೇಳುತ್ತಿದ್ದನು.

shrinath.udupa@gmail.com

ಸತ್ರಾಜಿತಂ ತತೋ ಹತ್ವಾ ಶತಧನ್ವಾ ಮಹಾಬಲಃ ।
ರಾತ್ರೌ ತಂ ಮಣಿಮಾದಾಯ ತತೋಽಕ್ರೂರಾಯ ದತ್ತವಾನ್ ॥ ೩ ॥

ಅಕ್ರೂರಸ್ತು ತದಾ ವಿಪ್ರಾ ರತ್ನಮಾದಾಯ ಚೋತ್ತಮಂ ।
ಸಮಯಂ ಕಾರಯಾಂಚಕ್ರೇ ನಾವೇದ್ಯೋಽಹಂ ತ್ವಯೇತ್ಯುತ ॥ ೪ ॥

ವಯಮಭ್ಯುತ್ಪತಿಷ್ಯಾಮಃ ಕೃಷ್ಣೇನ ತ್ವಾಂ ಪ್ರಧರ್ಷಿತಂ ।
ಮಮಾದ್ಯ ದ್ವಾರಕಾ ಸರ್ವಾ ವಶೇ ತಿಷ್ಠತ್ಯಸಂಶಯಂ ॥ ೫ ॥

ಹತೇ ಪಿತರಿ ದುಃಖಾರ್ತಾ ಸತ್ಯಭಾಮಾ ಮನಸ್ವಿನೀ ।
ಪ್ರಯಯೌ ರಥಮಾರುಹ್ಯ ನಗರಂ ವಾರಣಾವತಂ ॥ ೬ ॥

ಸತ್ಯಭಾಮಾ ತು ತದ್ವೃತ್ತಂ ಭೋಜಸ್ಯ ಶತಧನ್ವನಃ ।
ಭರ್ತುರ್ನಿವೇದ್ಯ ದುಃಖಾರ್ತಾ ಪಾರ್ಶ್ವಸ್ಥಾಽಶ್ರೂಣ್ಯವರ್ತಯತ್ ॥ ೭ ॥

---

೩. ಮಹಾಬಲಿಷ್ಠನಾದ ಶತಧ್ವನನು—ಸತ್ರಾಜಿತನನ್ನು ರಾತ್ರಿಯಲ್ಲಿ ಮಲಗಿದಾಗ ಕೊಂದು ಸ್ಯಮಂತಕಮಣಿಯನ್ನಪಹರಿಸಿ ಅಕ್ರೂರನಿಗೆ ಕೊಟ್ಟನು.

೪. ಅಕ್ರೂರನು ಆ ಮಣಿಯನ್ನು ತೆಗೆದುಕೊಂಡು ಶತಧನ್ವನಿಗೆ—ಮಣಿಯು ನನ್ನಲ್ಲಿದೆಯೆಂದು ಯಾರಿಗೂ ಹೇಳಬೇಡ ಎಂದು ಕಟ್ಟುಮಾಡಿದನು.

೫. ಕೃಷ್ಣನು ನಿನ್ನನ್ನು ಕೊಲ್ಲಲು ಬಂದರೆ ನಾವು ನೋಡಿಕೊಳ್ಳುವೆವು. ಈಗ ಈ ದ್ವಾರಕಾನಗರಿಯೆಲ್ಲವೂ ನನ್ನಧೀನದಲ್ಲಿರುವುದು ಎಂದನು.

೬. ತಂದೆಯು ಮರಣಹೊಂದಲು ಸತ್ಯಭಾಮೆಯು ದುಃಖಿತಳಾಗಿ ರಥವನ್ನೇರಿ ಕೃಷ್ಣನಿರುವ ವಾರಣಾವತನಗರಕ್ಕೆ ಹೋಗಿ ಅಲ್ಲಿ ಶ್ರೀಕೃಷ್ಣನನ್ನು ಕಂಡು ಶತಧನ್ವನು ಸತ್ರಾಜಿತನನ್ನು ಕೊಂದ ಸಮಾಚಾರವನ್ನು ಹೇಳಿ ದುಃಖದಿಂದ ಕಣ್ಣೀರಿಟ್ಟಳು.

೭-೯. ವಾರಣಾವತದಲ್ಲಿ ಆಗ ಪಾಂಡವರು ಅರಗಿನ ಮನೆಯಲ್ಲಿ ಬೆಂಕಿಗೆ ಸಿಕ್ಕಿ ಸತ್ತುಹೋದರು ಎಂದು ವಾರ್ತೆಯು ಹರಡಿತ್ತು. ಶ್ರೀಕೃಷ್ಣನು ಮೃತರಾದ

shrinath.udupa@gmail.com

ಪಾಂಡವಾನಾಂ ಚ ದಗ್ಧಾನಾಂ ಹರಿಃ ಕೃತ್ವೋದಕಕ್ರಿಯಾಂ ।
ಕುಲ್ಯಾರ್ಥೇ ಚಾಪಿ ಪಾಂಡೂನಾಂ ನ್ಯಯೋಜಯತ ಸಾತ್ಯಕಿಂ ॥ ೮ ॥

ತತಸ್ತ್ವರಿತಮಾಗಮ್ಯ ದ್ವಾರಕಾಂ ಮಧುಸೂದನಃ ।
ಪೂರ್ವಜಂ ಹಲಿನಂ ಶ್ರೀಮಾನಿದಂ ವಚನಮಬ್ರವೀತ್ ॥ ೯ ॥

॥ ಶ್ರೀಕೃಷ್ಣ ಉವಾಚ ॥

ಹತಃ ಪ್ರಸೇನಃ ಸಿಂಹೇನ ಸತ್ರಾಜಿಚ್ಛತಧನ್ವನಾ ।
ಸ್ಯಮಂತಕಸ್ತು ಮದ್ಗಾಮೀ ತಸ್ಯ ಪ್ರಭುರಹಂ ವಿಭೋ ॥ ೧೦ ॥

ತದಾರೋಹ ರಥಂ ಶೀಘ್ರಂ ಭೋಜಂ ಹತ್ವಾ ಮಹಾರಥಂ ।
ಸ್ಯಮಂತಕೋ ಮಹಾಬಾಹೋ ಅಸ್ಮಾಕಂ ಸ ಭವಿಷ್ಯತಿ । ೧೧ ॥

॥ ಲೋಮಹರ್ಷಣ ಉವಾಚ ॥

ತತಃ ಪ್ರವವೃತೇ ಯುದ್ಧಂ ತುಮುಲಂ ಭೋಜಕೃಷ್ಣಯೋಃ ।
ಶತಧನ್ವಾ ತತೋಽಕ್ರೂರಂ ಸರ್ವತೋದಿಶಮೈಕ್ಷತ ॥ ೧೨ ॥

ಪಾಂಡವರಿಗೆ ತರ್ಪಣವನ್ನು ಕೊಟ್ಟು ಅವರ ಕುಲದ ರಕ್ಷಣೆಗಾಗಿ ಸಾತ್ಯಕಿಯನ್ನು ನಿಯಮಿಸಿ ಕೂಡಲೇ ರಥವೇರಿ ತ್ವರೆಯಿಂದ ದ್ವಾರಕೆಗೆ ಬಂದು ತನ್ನಣ್ಣನಾದ ಬಲರಾಮನನ್ನು ಕುರಿತು

೧೦. ಎಲೈ ಅಣ್ಣನೇ, ಪ್ರಸೇನನನ್ನು ಸಿಂಹವು ಕೊಂದಿತು. ಸತ್ರಾಜಿತನನ್ನು ಶತಧನ್ವನು ಸಂಹರಿಸಿದನು. ಈಗ ಸ್ಯಮಂತಕಮಣಿಯು ಸತ್ರಾಜಿತನ ಅಳಿಯನಾದ ನನಗೆ ಬರಬೇಕು. ಈಗ ನಾನೇ ನ್ಯಾಯವಾಗಿ ಆ ಮಣಿಗೆ ಹಕ್ಕುದಾರನು.

೧೧. ಆದುದರಿಂದ ಓ ವೀರನೆ, ರಥವನ್ನು ಜಾಗ್ರತೆಯಾಗೇರು. ನಾವಿಬ್ಬರೂ ಹೊರಟು ಆ ಶತಧನ್ವನನ್ನು ಕೊಂದು ಮಣಿಯನ್ನು ನಮ್ಮ ವಶಕ್ಕೆ ತೆಗದುಕೊಳ್ಳೋಣ ಎಂದನು.

೧೨. ಸೂತಮುನಿಯು ಹೇಳಿದನು.—ಬಳಿಕ ಶತಧನ್ವನಿಗೂ ಕೃಷ್ಣನಿಗೂ ಘೋರವಾದ ಯುದ್ಧವು ಪ್ರಾರಂಭವಾಯಿತು. ಆಗ ಶತಧನ್ವನು ತನಗೆ ಸಹಾಯ ಮಾಡುವೆನೆಂದು ಹೇಳಿದ್ದ ಅಕ್ರೂರನು ತನ್ನ ಸಹಾಯಕ್ಕೆ ಬರಲಿಲ್ಲವಲ್ಲಾ ಎಂದು ದಿಕ್ಕುದಿಕ್ಕುಗಳನ್ನು ನೋಡುತ್ತಿದ್ದನು.

shrinath.udupa@gmail.com

ಸಂರಬ್ಧೌ ತಾವುಭೌ ತತ್ರ ದೃಷ್ಟ್ವಾ ಭೋಜಜನಾರ್ದನೌ ।
ಶಕ್ತೋಽಪಿ ಶಾಪಾದ್ಧಾರ್ದಿಕ್ಯಮಕ್ರೂರೋ ನಾನ್ವಪದ್ಯತ ॥ ೧೩ ॥

ಅಪಯಾನೇ ತತೋ ಬುದ್ಧಿಂ ಭೋಜಶ್ಚಕ್ರೇ ಭಯಾರ್ದಿತಃ ।
ಯೋಜನಾನಾಂ ಶತಂ ಸಾಗ್ರಂ ಹೃದಯಾ ಪ್ರತ್ಯಪದ್ಯತ ॥ ೧೪ ॥

ವಿಖ್ಯಾತಾ ಹೃದಯಾ ನಾಮ ಶತಯೋಜನಗಾಮಿನೀ ।
ಭೋಜಸ್ಯ ವಡವಾ ವಿಪ್ರಾ ಯಯಾ ಕೃಷ್ಣಮಯೋಧಯತ್ ॥ ೧೫ ॥

ಕ್ಷೀಣಾಂ ಜವೇನ ಹೃದಯಾಮಧ್ವನಃ ಶತಯೋಜನೇ ।
ದೃಷ್ಟ್ವಾ ರಥಸ್ಯ ಸ್ವಾಂ ವೃದ್ಧಿಂ ಶತಧನ್ವಾನಮರ್ದಯತ್ ॥ ೧೬ ॥

ತತಸ್ತಸ್ಯಾ ಹತಾಯಾಸ್ತು ಶ್ರಮಾತ್ಖೇದಾಚ್ಚ ಭೋ ದ್ವಿಜಾಃ ।
ಖಮುತ್ಪೇತುರಥ ಪ್ರಾಣಾಃ ಕೃಷ್ಣೋ ರಾಮಮಥಾಬ್ರವೀತ್ ॥ ೧೭ ॥

---

೧೩. ಕೃಷ್ಣಶತಧನ್ವರೀರ್ವರೂ ಯುದ್ಧಾಸಕ್ತರಾಗಿರುವುದನ್ನು ನೋಡಿ ಅಕ್ರೂರನು ಕೃಷ್ಣನೊಡನೆ ಯುದ್ಧಮಾಡಲು ಶಕ್ತನಾಗಿದ್ದರೂ ಶಾಪದಿಂದ ಹೆದರಿ ಯುದ್ಧಕ್ಕೆ ಹೋಗಲಿಲ್ಲ.

೧೪. ಬಳಿಕ ಶತಧನ್ವನು ಭಯದಿಂದ ಓಡಿಹೋಗಲು ನಿಶ್ಚಯಮಾಡಿದನು. ಅವನ ಹೃದಯ ಎಂಬ (ಹೆಣ್ಣು) ಕುದುರೆಯು ನೂರುಯೋಜನಗಳ ವರೆಗೆ ಶತಧನ್ವನನ್ನು ಕರೆದುಕೊಂಡು ಹೋಯಿತು.

೧೫. ಹೃದಯಾ ಎಂಬುದು ಶತಧನ್ವನ ಪ್ರಸಿದ್ಧವಾದ ಕುದುರೆಯು. ಅದು ಒಂದುಸಾರಿಗೆ ನೂರುಯೋಜನ ದೂರ ಹೋಗುವುದು. ಆ ಕುದುರೆಯಮೇಲೆ ಕುಳಿತು ಶತಧನ್ವನು ಕೃಷ್ಣನೊಡನೆ ಯುದ್ಧಮಾಡುತ್ತಿದ್ದನು.

೧೬. ನೂರುಯೋಜನವು ಕಳೆಯಲು ಶತಧನ್ವನ ಕುದುರೆಯಾದ ಹೃದಯೆಯ ವೇಗವು ಕಮ್ಮಿಯಾಯಿತು. ಕೃಷ್ಣನ ರಥವೇಗವು ಜಾಸ್ತಿಯಾಗುತ್ತಲೇ ಇದ್ದಿತು. ಆಗ ಶ್ರೀಕೃಷ್ಣನು ಶತಧನ್ವನನ್ನು ಅವನ ಕುದುರೆಯೊಡನೆ ತೆರುಬಿದನು.

೧೭–೧೮. ಆಗ ಆ ಕುದುರೆಯು ವ್ಯಥೆಯಿಂದಲೂ ಆಯಾಸದಿಂದಲೂ ಪ್ರಾಣವನ್ನು ಬಿಟ್ಟಿತು. ಆಗ ಕೃಷ್ಣನು ಬಲಭದ್ರನನ್ನು ಕುರಿತು ಓ ಅಗ್ರಜ, ಶತ

shrinath.udupa@gmail.com

॥ ಶ್ರೀಕೃಷ್ಣ ಉವಾಚ ॥

ತಿಷ್ಠೇಹ ತ್ವಂ ಮಹಾಬಾಹೋ ದೃಷ್ಟದೋಷಾ ಹಯಾ ಮಯಾ ।
ಪದ್ಭ್ಯಾಂ ಗತ್ವಾ ಹರಿಷ್ಯಾಮಿ ಮಣಿರತ್ನಂ ಸ್ಯಮಂತಕಂ ॥ ೧೮ ॥

ಪದ್ಭ್ಯಾಮೇವ ತತೋ ಗತ್ವಾ ಶತಧನ್ವಾನಮಚ್ಯುತಃ ।
ಮಿಥಿಲಾಮಭಿತೋ ವಿಪ್ರಾ ಜಘಾನ ಪರಮಾಸ್ತ್ರವಿತ್ ॥ ೧೯ ॥

ಸ್ಯಮಂತಕಂ ಚ ನಾಪಶ್ಯದ್ಧತ್ವಾ ಭೋಜಂ ಮಹಾಬಲಂ ।
ನಿವೃತ್ತಂ ಚಾಬ್ರವೀತ್ಕೃಷ್ಣಂ ಮಣಿಂ ದೇಹೀತಿ ಲಾಂಗಲೀ ॥ ೨೦ ॥

ನಾಸ್ತೀತಿ ಕೃಷ್ಣಶ್ಚೋವಾಚ ತತೋ ರಾಮೋ ರುಷಾऽನ್ವಿತಃ ।
ಧಿಕ್ಶಬ್ದಪೂರ್ವಮಸಕೃತ್ಪ್ರತ್ಯುವಾಚ ಜನಾರ್ದನಂ ॥ ೨೧ ॥

॥ ಬಲರಾಮ ಉವಾಚ ॥

ಭ್ರಾತೃತ್ವಾನ್ಮರ್ಷಯಾಮ್ಯೇಷ ಸ್ವಸ್ತಿ ತೇऽಸ್ತು ವ್ರಜಾಮ್ಯಹಂ ।
ಕೃತ್ಯಂ ನ ಮೇ ದ್ವಾರಕಯಾ ನ ತ್ವಯಾ ನ ಚ ವೃಷ್ಣಿಭಿಃ ॥ ೨೨ ॥

ಧನ್ವನ ಕುದುರೆಯು ಸತ್ತುಹೋಯಿತು. ಈಗ ನಾನು ನಡೆದುಕೊಂಡೇ ಹೋಗಿ ಶತಧನ್ವನಿಂದ ಸ್ಯಮಂತಕಮಣಿಯನ್ನು ಕಿತ್ತುಕೊಂಡು ಬರುವೆನು. ನೀನಿಲ್ಲಿಯೇ ಇರು ಎಂದು ಹೇಳಿ

೧೯. ಕಾಲನಡಿಗೆಯಲ್ಲಿಯೇ ಹೋಗಿ ಶತಧನ್ವನನ್ನು ಮಿಥಿಲಾನಗರಿಯ ಸಮೀಪದಲ್ಲಿ ಮಹಾಸ್ತ್ರವನ್ನು ಪ್ರಯೋಗಿಸಿ ಸಂಹರಿಸಿದನು.

೨೦. ಆದರೆ ಆ ಶತಧನ್ವನಲ್ಲಿ ಸ್ಯಮಂತಕಮಣಿಯಿಲಿಲ್ಲ. ಹರಿಯು ನಿರಾಶೆಯಿಂದ ಹಿಂತಿರುಗಿದನು. ಅವನನ್ನು ನೋಡಿ ಬಲರಾಮನು ಎಲ್ಲಿ ಆ ಮಣಿಯನ್ನು ಕೊಡು ಎಂದು ಕೇಳಿದನು.

೨೧-೨೨. ಹರಿಯು ಮಣಿಯು ಸಿಗಲಿಲ್ಲವೆಂದು ಹೇಳಿದನು. ಆಗ ಬಲಭದ್ರನು ಕೋಪಗೊಂಡು ಛೀ, ನೀನೆಂತಹ ದ್ರೋಹಿಯೆಂದು ನಿಂದಿಸುತ್ತಾ ಎಲೈ ಕೃಷ್ಣ, ನೀನು ನನ್ನ ತಮ್ಮನಾದುದರಿಂದ ಮನ್ನಿಸಿರುವೆನು. ನಿನಗೆ ಮಂಗಳವಾಗಲಿ, ನನಗೆ ದ್ವಾರಕೆಯಿಂದಲೂ, ನಿನ್ನಿಂದಲೂ, ಯಾದವರಿಂದಲೂ ಆಗಬೇಕಾದುದೇನೂ ಇಲ್ಲ. ಇನ್ನು ನಾನು ಹೊರಡುವೆನು ಎಂದು ಹೇಳಿ,

shrinath.udupa@gmail.com

ಪ್ರವಿವೇಶ ತತೋ ರಾಮೋ ಮಿಥಿಲಾಮರಿಮರ್ದನಃ ।
ಸರ್ವಕಾಮೈ್ಯರುಪಹೃತ್ಯೈರ್ಮಿಥಿಲೇನಾಭಿಪೂಜಿತಃ ॥ ೨೩ ॥

ಏತಸ್ಮಿನ್ನೇವ ಕಾಲೇ ತು ಬಭ್ರುರ್ಮತಿಮತಾಂ ವರಃ ।
ನಾನಾರೂಪಾನ್ಕ್ರತೂನ್ಸರ್ವಾನಾಜಹಾರ ನಿರರ್ಗಲಾನ್ ॥ ೨೪ ॥

ದೀಕ್ಷಾಮಯಂ ಸ ಕವಚಂ ರಕ್ಷಾರ್ಥಂ ಪ್ರವಿವೇಶ ಹ ।
ಸ್ಯಮಂತಕಕೃತೇ ಪ್ರಾಜ್ಞೋ ಗಾಂದೀಪುತ್ರೋ ಮಹಾಯಶಾಃ ॥ ೨೫ ॥

ಅಥ ರತ್ನಾನಿ ಚಾನ್ಯಾನಿ ಧನಾನಿ ವಿವಿಧಾನಿ ಚ ।
ಷಷ್ಟಿಂ ವರ್ಷಾಣಿ ಧರ್ಮಾತ್ಮಾ ಯಜ್ಞೇಷ್ವೇವ ನ್ಯಯೋಜಯತ್ ॥ ೨೬ ॥

ಅಕ್ರೂರಯಜ್ಞಾ ಇತಿ ತೇ ಖ್ಯಾತಾಸ್ತಸ್ಯ ಮಹಾತ್ಮನಃ ।
ಬಹ್ವನ್ನದಕ್ಷಿಣಾಃ ಸರ್ವೇ ಸರ್ವಕಾಮಪ್ರದಾಯಿನಃ ॥ ೨೭ ॥

---

೨೩. ಬಲಭದ್ರನು ಮಿಥಲಾನಗರಿಗೆ ತೆರಳಿದನು. ಮಿಥಲಾನಗರಿಯ ರಾಜನು ಆ ಬಲಭದ್ರನನ್ನು ಸರ್ವೋಪಚಾರಗಳಿಂದ ಸತ್ಕರಿಸಿದನು.

೨೪. ಇದೇಸಮಯದಲ್ಲಿ ಬುದ್ಧಿವಂತನಾದ ಅಕ್ರೂರನು ಸ್ಯಮಂತಕ ಮಣಿಯ ಮಹಿಮೆಯಿಂದ ನಾನಾವಿಧವಾದ ಅನೇಕಯಾಗಗಳನ್ನು ವಿಜೃಂಭಣೆ ಯಿಂದ ಮಾಡಿದನು.

೨೫. ಬುದ್ಧಿಶಾಲಿಯಾದ ಆ ಅಕ್ರೂರನು ಸ್ಯಮಂತಕಮಣಿಯನ್ನು ರಕ್ಷಿಸಲು ಯಜ್ಞದೀಕ್ಷೆಯರೂಪವಾದ ಕವಚವನ್ನು ತೊಟ್ಟನು (ಅಂದರೆ ಯಜ್ಞದೀಕ್ಷೆಯಲ್ಲಿದ್ದ ತನ್ನನ್ನು ಕೃಷ್ಣನು ಕೊಲ್ಲುವುದಿಲ್ಲವೆಂದು ಅಭಿಪ್ರಾಯ).

೨೬. ಅರವತ್ತುವರ್ಷಗಳ ವರೆಗೆ ಧರ್ಮಾತ್ಮನಾದ ಅಕ್ರೂರನು ಯಜ್ಞಗಳನ್ನು ಮಾಡುತ್ತಾ ತನ್ನಲ್ಲಿದ್ದ ಮಿಕ್ಕ ರತ್ನಗಳನ್ನೂ, ಧನಗಳನ್ನೂ ಆ ಯಜ್ಞಗಳಿಗೆ ವಿನಿಯೋಗಿಸಿದನು.

೨೭. ಆ ಮಹಾತ್ಮನು ಮಾಡಿದ ಯಜ್ಞಗಳು ಅಕ್ರೂರಯಜ್ಞಗಳೆಂದು ಈಗಲೂ ಪ್ರಸಿದ್ಧವಾಗಿರುವುವು. ಪ್ರತಿಯೊಂದು ಯಜ್ಞಗಳಲ್ಲೂ ಮಹತ್ತಾದ ಅನ್ನದಾನಗಳು ತುಂಬತುಂಬ ದಕ್ಷಿಣೆಗಳು. ಆಯಜ್ಞಗಳೆಲ್ಲವೂ ಸಕಲೇಷ್ಟಗಳನ್ನೂ ಉಂಟುಮಾಡುವಂತಹವು.

shrinath.udupa@gmail.com

ಅಥ ದುರ್ಯೋಧನೋ ರಾಜಾ ಗತ್ವಾ ಸ ಮಿಥಿಲಾಂ ಪ್ರಭುಃ ।
ಗದಾಶಿಕ್ಷಾಂ ತತೋ ದಿವ್ಯಾಂ ಬಲದೇವಾದವಾಪ್ತವಾನ್ ॥ ೨೮ ॥

ಸಂಪ್ರಸಾದ್ಯ ತತೋ ರಾಮೋ ವೃಷ್ಣ್ಯಂಧಕಮಹಾರಥೈಃ ।
ಆನೀತೋ ದ್ವಾರಕಾಮೇವ ಕೃಷ್ಣೇನ ಚ ಮಹಾತ್ಮನಾ ॥ ೨೯ ॥

ಅಕ್ರೂರಶ್ಚಾಂಧಕೈಃ ಸಾರ್ಧಮಾಯಾತಃ ಪುರುಷರ್ಷಭಃ ।
ಹತ್ವಾ ಸತ್ರಾಜಿತಂ ಸುಪ್ತಂ ಸಹಬಂಧುಂ ಮಹಾಬಲಃ ॥ ೩೦ ॥

ಜ್ಞಾತಿಭೇದಭಯಾತ್ಕೃಷ್ಣಸ್ತಮುಪೇಕ್ಷಿತವಾಂಸ್ತದಾ ।
ಅಪಯಾತೇ ತದಾಽಕ್ರೂರೇ ನಾವರ್ಷತ್ಪಾಕಶಾಸನಃ ॥ ೩೧ ॥

ಅನಾವೃಷ್ಟ್ಯಾ ತದಾ ರಾಷ್ಟ್ರಮಭವದ್ಬಹುಧಾ ಕೃಶಂ ।
ತತಃ ಪ್ರಸಾದಯಾಮಾಸುರಕ್ರೂರಂ ಕುಕುರಾಂಧಕಾಃ ॥ ೩೨ ॥

---

೨೮. ಆಮೇಲೆ ದುರ್ಯೋಧನರಾಜನು ಮಿಥಿಲಾನಗರಕ್ಕೆ ತೆರಳಿ ಅಲ್ಲಿದ್ದ ಬಲರಾಮನಿಂದ ಗದಾಯುದ್ಧವನ್ನು ಅಭ್ಯಾಸಮಾಡಿದನು.

೨೯. ಬಳಿಕ ಶ್ರೀಕೃಷ್ಣನೂ ಮಿಕ್ಕ ಯಾದವರೂ ಸೇರಿ ಬಲರಾಮನನ್ನು ಸಮಾಧಾನಗೊಳಿಸಿ ದ್ವಾರಕಾನಗರಿಗೆ ಕರೆದುಕೊಂಡು ಬಂದರು.

೩೦. ಕೆಲವು ದಿನಗಳಮೇಲೆ ಮಲಗಿರುವ ಸತ್ರಾಜಿತನನ್ನು ಮೋಸದಿಂದ ಕೊಲ್ಲಿಸಿದ ಅಕ್ರೂರನೂ ಸಹ ಅಂಧಕನೊಡನೆ ದ್ವಾರಕಿಗೆ ಬಂದನು.

೩೧. ಜ್ಞಾತಿಗಳಿಗೆ ತನ್ನಲ್ಲಿ ಭೇದಭಾವವುಂಟಾಗುವುದೆಂದು ಶ್ರೀಕೃಷ್ಣನು ನಗರಿಗೆ ಬಂದ ಅಕ್ರೂರನಿಗೇನೂ ಪ್ರತೀಕಾರವನ್ನು ಮಾಡದೇ ಸುಮ್ಮನಾದನು.

೩೨. ಅಕ್ರೂರನು ಸ್ಯಮಂತಕಮಣಿಯನ್ನು ತೆಗೆದುಕೊಂಡು ಊರುಬಿಟ್ಟು ಹೊರಟುಹೋಗಿದ್ದಾಗ ದ್ವಾರಕೆಯಲ್ಲಿ ಮಳೆಯೇ ಆಗಲಿಲ್ಲ.

shrinath.udupa@gmail.com

ಪುನರ್ದ್ವಾರವತೀಂ ಪ್ರಾಪ್ತೇ ತಸ್ಮಿನ್ ದಾನಪತೌ ತತಃ ।
ಪ್ರವವರ್ಷ ಸಹಸ್ರಾಕ್ಷಃ ಕಕ್ಷೇ ಜಲನಿಧೇಸ್ತದಾ ॥ ೩೩ ॥

ಕನ್ಯಾಂ ಚ ವಾಸುದೇವಾಯ ಸ್ವಸಾರಂ ಶೀಲಸಂಮತಾಂ ।
ಅಕ್ರೂರಃ ಪ್ರದದೌ ಧೀಮಾನ್ ಪ್ರೀತ್ಯರ್ಥಂ ಮುನಿಸತ್ತಮಾಃ ॥ ೩೪ ॥

ಅಥ ವಿಜ್ಞಾಯ ಯೋಗೇನ ಕೃಷ್ಣೋ ಬಭ್ರುಗತಂ ಮಣಿಂ ।
ಸಭಾಮಧ್ಯಗತಃ ಪ್ರಾಹ ತಮಕ್ರೂರಂ ಜನಾರ್ದನಃ ॥ ೩೫ ॥

॥ ಶ್ರೀಕೃಷ್ಣ ಉವಾಚ ॥

ಯತ್ತದ್ರತ್ನಂ ಮಣಿವರಂ ತವ ಹಸ್ತಗತಂ ವಿಭೋ ।
ತತ್ಪ್ರಯಚ್ಛ ಚ ಮಾನಾರ್ಹ ಮಯಿ ಮಾಽನಾರ್ಯಕಂ ಕೃಥಾಃ ॥ ೩೬ ॥

ಷಷ್ಟಿವರ್ಷಗತೇ ಕಾಲೇ ಯೋ ರೋಷೋಽಭೂನ್ಮಮಾನಘ ।
ಸ ಸಂರೂಢೋಽಸಕೃತ್ಪ್ರಾಪ್ತಸ್ತತಃ ಕಾಲಾತ್ಯಯೋ ಮಹಾನ್ ॥ ೩೭ ॥

೩೩-೩೪. ಮಳೆಯಿಲ್ಲದೇ ದ್ವಾರಕೆಯ ಪ್ರದೇಶವೆಲ್ಲವೂ ಕಂಗೆಟ್ಟುಹೋಗಿತ್ತು. ಆಗ ಕುಕುರರು, ಅಂಧಕರು, ವೃಷ್ಣಿಗಳು ಮೊದಲಾದ ಯಾದವರೆಲ್ಲರೂ ಅಕ್ರೂರನನ್ನು ಸಮಾಧಾನಗೊಳಿಸಿ ಊರಿಗೆ ಕರೆದುಕೊಂಡು ಬಂದರು. ದಾನಶೂರನಾದ ಆ ಅಕ್ರೂರನು ದ್ವಾರಕೆಗೆ ಬರಲು ಸಮುದ್ರಮಧ್ಯದ್ವೀಪವಾದ ಆ ನಗರಿಯಲ್ಲಿ ಚನ್ನಾಗಿ ಮಳೆಯಾಯಿತು. ಜನಗಳು ಸಂತಸಗೊಂಡರು. ಬುದ್ಧಿವಂತನಾದ ಅಕ್ರೂರನು ಸುಶೀಲೆಯೆಂಬ ತನ್ನ ಮಗಳನ್ನು ಶ್ರೀಕೃಷ್ಣನನ್ನು ಸಂತೋಷಗೊಳಿಸಲು ಅವನಿಗೆ ಮದುವೆಮಾಡಿ ಕೊಟ್ಟನು.

೩೫. ಆಮೇಲೆ ಶ್ರೀಕೃಷ್ಣನು ಯೋಗದೃಷ್ಟಿಯಿಂದ ಸ್ಯಮಂತಕಮಣಿಯು ಅಕ್ರೂರನಲ್ಲಿರುವುದೆಂದು ತಿಳಿದು ಸಭೆಯ ಮಧ್ಯದಲ್ಲಿ ಅಕ್ರೂರನನ್ನು ಕುರಿತು,

೩೬. ಎಲೈ ಅಕ್ರೂರ, ಆ ಮಣಿಶ್ರೇಷ್ಠವಾದ ಸ್ಯಮಂತಕವು ನಿನ್ನಲ್ಲಿರುವುದು. ನ್ಯಾಯಶಾಲಿಯಾದ ನೀನು ಆ ಮಣಿಯನ್ನು ನನಗೆ ಕೊಡು. ನನ್ನಲ್ಲಿ ಅನ್ಯಾಯವನ್ನಾಚರಿಸಬೇಡ.

೩೭. ಇಲ್ಲದಿದ್ದರೆ ಅರವತ್ತು ವರ್ಷಗಳ ಕೆಳಗೆ ನನಗೆ ಯಾವ ರೋಷವು ಇದ್ದಿತೋ ಆ ರೋಷವು ಈಗ ನೀನು ಸ್ಯಮಂತಕಮಣಿಯನ್ನಪಹರಿಸಿದವನೆಂದು ತಿಳಿದು ಒಟ್ಟಿಗೇ ನಿನ್ನಲ್ಲಿ ಆವಿರ್ಭವಿಸುತ್ತಲಿರುವುದು ಎಂದನು.

shrinath.udupa@gmail.com

ಸ ತತಃ ಕೃಷ್ಣವಚನಾತ್ಸರ್ವಸಾತ್ವತಸಂಸದಿ ।
ಪ್ರದದೌ ತಂ ಮಣಿಂ ಬಭ್ರುರಕ್ಲೇಶೇನ ಮಹಾಮತಿಃ ॥ ೩೮ ॥

ತತಸ್ತಮಾರ್ಜವಾತ್ಪ್ರಾಪ್ತಂ ಬಭ್ರೋರ್ಹಸ್ತಾದರಿಂದಮಃ ।
ದದೌ ಹೃಷ್ಟಮನಾಃ ಕೃಷ್ಣಸ್ತಂ ಮಣಿಂ ಬಭ್ರವೇ ಪುನಃ ॥ ೩೯ ॥

ಸ ಕೃಷ್ಣಹಸ್ತಾತ್ಸಂಪ್ರಾಪ್ತಂ ಮಣಿರತ್ನಂ ಸ್ಯಮಂತಕಂ ।
ಆಬಧ್ಯ ಗಾಂದಿನೀಪುತ್ರೋ ವಿರರಾಜಾಂಶುಮಾನಿವ ॥ ೪೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸೋಮವಂಶಕಥನಂ
ನಾಮ ಸಪ್ತದಶೋಽಧ್ಯಾಯಃ

---

೩೮. ಈ ರೀತಿಯಾದ ಕೃಷ್ಣನ ಮಾತನ್ನು ಕೇಳಿ ಮಹಾಬುದ್ಧಿಶಾಲಿಯಾದ ಅಕ್ರೂರನು ಯಾದವ ಸಭೆಯೆದುರಿನಲ್ಲಿ ನಿರ್ಮಲಮನಸ್ಸಿನಿಂದ ಆ ಸ್ಯಮಂತಕಮಣಿಯನ್ನು ಶ್ರೀ ಕೃಷ್ಣನಿಗೆ ಒಪ್ಪಿಸಿದನು.

೩೯. ಹೀಗೆ ಸಮಾಧಾನದಿಂದಲೇ ಸ್ಯಮಂತಕಮಣಿಯನ್ನು ಅಕ್ರೂರನು ತನಗೆ ಕೊಟ್ಟುದರಿಂದ ಸಂತುಷ್ಟನಾಗಿ ಶ್ರೀಹರಿಯು ಆ ಮಣಿಯನ್ನು ತಿರುಗಿ ಅಕ್ರೂರನಿಗೇ ಕೊಟ್ಟನು.

೪೦. ಬಳಿಕ ಗಾಂದಿನೀದೇವಿಯ ಮಗನಾದ ಅಕ್ರೂರನು ಶ್ರೀಕೃಷ್ಣನಿಂದ ತಿರುಗಿ ಕೊಡಲ್ಪಟ್ಟ ಸ್ಯಮಂತಕಮಣಿಯನ್ನು ತನ್ನ ಕತ್ತಿನಲ್ಲಿ ಧರಿಸಿದನು. ಅದರಿಂದ ಅಕ್ರೂರನು ಸೂರ್ಯನಂತೆ ತೇಜಸ್ವಿಯಾಗಿ ಬೆಳಗಿದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಸೋಮವಂಶಕಥನವೆಂಬ
ಹದಿನೇಳನೆಯ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಅಷ್ಟಾದಶೋಽಧ್ಯಾಯಃ

॥ ಮುನಯಃ ಊಚುಃ ॥

ಅಹೋ ಸುಮಹದಾಖ್ಯಾನಂ ಭವತಾ ಪರಿಕೀರ್ತಿತಂ ।
ಭಾರತಾನಾಂ ಚ ಸರ್ವೇಷಾಂ ಪಾರ್ಥಿವಾನಾಂ ತಥೈವ ಚ ॥ ೧ ॥

ದೇವಾನಾಂ ದಾನವಾನಾಂ ಚ ಗಂಧರ್ವೋರಗರಕ್ಷಸಾಂ ।
ದೈತ್ಯಾನಾಮಥ ಸಿದ್ಧಾನಾಂ ಗುಹ್ಯಕಾನಾಂ ತಥೈವ ಚ ॥ ೨ ॥

ಅತ್ಯದ್ಭುತಾನಿ ಕರ್ಮಾಣಿ ವಿಕ್ರಮಾ ಧರ್ಮನಿಶ್ಚಯಾಃ ।
ವಿವಿಧಾಶ್ಚ ಕಥಾ ದಿವ್ಯಾ ಜನ್ಮ ಚಾಗ್ರ್ಯಮನುತ್ತಮಂ ॥ ೩ ॥

ಹದಿನೆಂಟನೆಯ ಅಧ್ಯಾಯವು

೧. ಮುನಿಗಳು ಕೇಳುವರು— ಓ ಸೂತಮುನಿ, ಮಹತ್ತಾದ ಇತಿಹಾಸವನ್ನು ನಮಗೆ ಹೇಳಿರುವೆ, ಭರತಖಂಡದ ರಾಜರೆಲ್ಲರ ವಂಶಗಳನ್ನೂ ವರ್ಣಿಸಿರುವೆ. ಇದೆಲ್ಲವೂ ತುಂಬಾ ಆಶ್ಚರ್ಯಕರವಾಗಿರುವುದು.

೨–೪. ದೇವತೆಗಳು, ದಾನವರು, ಗಂಧರ್ವರು, ಸರ್ಪಗಳು, ರಾಕ್ಷಸರು, ದೈತ್ಯರು, ಸಿದ್ಧರು, ಯಕ್ಷರು, ಪ್ರಜಾಪತಿಗಳು, ಅಪ್ಸರೆಯರು, ಇವರೆಲ್ಲರ ಜನ್ಮ ಚರಿತೆ, ಆಶ್ಚರ್ಯಕರವಾದ ಕಾರ್ಯಗಳು, ಅವಕ್ಕೆ ಸಂಬಂಧಪಟ್ಟ ಉಪಕಥೆಗಳು,

shrinath.udupa@gmail.com

ಸೃಷ್ಟಿಃ ಪ್ರಜಾಪತೇಃ ಸಮ್ಯಕ್ತ್ವಯಾ ಪ್ರೋಕ್ತಾ ಮಹಾಮತೇ ।
ಪ್ರಜಾಪತೀನಾಂ ಸರ್ವೇಷಾಂ ಗುಹ್ಯಕಾಪ್ಸರಸಾಂ ತಥಾ ॥ ೪ ॥

ಸ್ಥಾವರಂ ಜಂಗಮಂ ಸರ್ವಮುತ್ಪನ್ನಂ ವಿವಿಧಂ ಜಗತ್ ।
ತ್ವಯಾ ಪ್ರೋಕ್ತಂ ಮಹಾಭಾಗ ಶ್ರುತಂ ಚೈತನ್ಮನೋಹರಂ ॥ ೫ ॥

ಕಥಿತಂ ಪುಣ್ಯಫಲದಂ ಪುರಾಣಂ ಶ್ಲಕ್ಷ್ಣಯಾ ಗಿರಾ ।
ಮನಃಕರ್ಣಸುಖಂ ಸಮ್ಯಕ್ಪ್ರೀಣಾತ್ಯಮೃತಸಂಮಿತಂ ॥ ೬ ॥

ಇದಾನೀಂ ಶ್ರೋತುಮಿಚ್ಛಾಮಃ ಸಕಲಂ ಮಂಡಲಂ ಭುವಃ ।
ವಕ್ತುಮರ್ಹಸಿ ಸರ್ವಜ್ಞ ಪರಂ ಕೌತೂಹಲಂ ಹಿ ನಃ ॥ ೭ ॥

ಯಾವಂತಃ ಸಾಗರಾ ದ್ವೀಪಾಸ್ತಥಾ ವರ್ಷಾಣಿ ಪರ್ವತಾಃ ।
ವನಾನಿ ಸರಿತಃ ಪುಣ್ಯದೇವಾದೀನಾಂ ಮಹಾಮತೇ ॥ ೮ ॥

ವೀರರ ಪರಾಕ್ರಮ, ಧರ್ಮತತ್ತ್ವಗಳು ಇವೆಲ್ಲವನ್ನೂ ಚನ್ನಾಗಿ ನಮಗೆ ವರ್ಣಿಸಿ ಹೇಳಿರುವೆ. ಚತುರ್ಮುಖನ ಸೃಷ್ಟಿಕ್ರಮವನ್ನೂ ವಿವರಿಸಿರುವೆ.

೫. ಸ್ಥಿರ ಎಂದರೆ ಚಲಿಸದೇ ಇರುವ ಬೆಟ್ಟ ಮೊದಲಾದುವುಗಳು, ಚರ ಎಂದರೆ ಚಲಿಸುವ ಪ್ರಾಣಿಗಳು, ಇವುಗಳಿಂದ ಕೂಡಿದ ಈ ಜಗತ್ತು ಹೇಗೆ ಜನಿಸಿ ವಿಧವಿಧವಾಯಿತೆಂಬುದನ್ನೂ ವಿವರಿಸಿರುವೆ. ಇದೆಲ್ಲವೂ ಕೇಳುವುದಕ್ಕೆ ಬಹು ಮನೋಹರವಾಗಿದೆ.

೬. ಪುಣ್ಯವನ್ನುಂಟುಮಾಡುವಂತಹ ಪುರಾಣವನ್ನು ಸ್ಪಷ್ಟವಾದ ಮಾತಿನಿಂದ ಹೇಳಿರುವೆ. ಅದನ್ನು ಕೇಳಿ ಮನಸ್ಸು ಕಿವಿಗಳೆರಡೂ ತೃಪ್ತವಾಗಿರುವುವು. ಅಮೃತವನ್ನು ಕುಡಿದಂತೆ ತುಂಬಾ ಆನಂದವಾಗಿರುವುದು.

೭. ಈಗ ನಾವು ಈ ಭೂಮಂಡಲದ ವಿಷಯವೆಲ್ಲವನ್ನೂ ಕೇಳಲು ಕುತೂಹಲಿಗಳಾಗಿರುವೆವು. ಸರ್ವಜ್ಞನಾದ ನೀನು ಅದೆಲ್ಲವನ್ನೂ ನಮಗೆ ಹೇಳಬೇಕು.

೮. ಭೂಮಿಯಲ್ಲಿ ಸಮುದ್ರಗಳೆಷ್ಟಿರುವುವು ? ದೇಶಗಳೆಷ್ಟು ? ದ್ವೀಪಗಳೆಷ್ಟು ? ಪರ್ವತಗಳೆಷ್ಟು ? ಮಹಾರಣ್ಯಗಳು, ಪುಣ್ಯನದಿಗಳು, ಪುಣ್ಯಕ್ಷೇತ್ರಗಳು ಇವುಗಳ ವಿಷಯವೆಲ್ಲವನ್ನೂ ನಾವು ಕೇಳಲಿಚ್ಛಿಸುವೆವು. ದಯವಿಟ್ಟು ಹೇಳು.

shrinath.udupa@gmail.com

ಯತ್ಪ್ರಮಾಣಮಿದಂ ಸರ್ವಂ ಯದಾಧಾರಂ ಯದಾತ್ಮಕಂ ।
ಸಂಸ್ಥಾನಮಸ್ಯ ಜಗತೋ ಯಥಾವದ್ವಕ್ತುಮರ್ಹಸಿ ॥ ೯ ॥

॥ ಲೋಮಹರ್ಷಣ ಉವಾಚ ॥

ಮುನಯಃ ಶ್ರೂಯತಾಮೇತತ್ಸಂಕ್ಷೇಪಾದ್ವದತೋ ಮಮ ।
ನಾಸ್ಯ ವರ್ಷಶತೇನಾಪಿ ವಕ್ತುಂ ಶಕ್ಯೋಽತಿವಿಸ್ತರಃ ॥ ೧೦ ॥

ಜಂಬೂಪ್ಲಕ್ಷಾಹ್ವಯೌ ದ್ವೀಪೌ ಶಾಲ್ಮಲಶ್ಚಾಪರೋ ದ್ವಿಜಾಃ ।
ಕುಶಃ ಕ್ರೌಂಚಸ್ತಥಾ ಶಾಕಃ ಪುಷ್ಕರಶ್ಚೈವ ಸಪ್ತಮಃ ॥ ೧೧ ॥

ಏತೇ ದ್ವೀಪಾಃ ಸಮುದ್ರೈಸ್ತು ಸಪ್ತ ಸಪ್ತಭಿರಾವೃತಾಃ ।
ಲವಣೇಕ್ಷುಸುರಾಸರ್ಪಿರ್ದಧಿದುಗ್ಧಜಲೈಃ ಸಮಂ ॥ ೧೨ ॥

ಜಂಬೂದ್ವೀಪಃ ಸಮಸ್ತಾನಾಮೇತೇಷಾಂ ಮಧ್ಯಸಂಸ್ಥಿತಃ ।
ತಸ್ಯಾಪಿ ಮಧ್ಯೇ ವಿಪ್ರೇಂದ್ರಾ ಮೇರುಃ ಕನಕಪರ್ವತಃ ॥ ೧೩ ॥

---

೯. ಈ ಜಗತ್ತು ಎಷ್ಟು ವಿಸ್ತಾರವಾಗಿರುವುದು? ಇದಕ್ಕೆ ಆಧಾರವಾವುದು? ಯಾವ ರೂಪವಾಗಿರುವುದು? ಈ ಜಗತ್ತಿನ ಸ್ಥಿತಿಯೆಂತಹುದು? ಇದೆಲ್ಲವನ್ನೂ ಕ್ರಮವಾಗಿ ನಮಗೆ ವಿವರಿಸಿ ಹೇಳು ಎಂದರು.

೧೦. ಸೂತಮುನಿಯು ಇಂತೆಂದನು.—ಎಲೈ ಮುನಿಗಳೇ, ಕೇಳಿ. ಭೂಮಂಡಲವನ್ನು ಸಂಕ್ಷೇಪವಾಗಿ ವರ್ಣಿಸುವೆನು. ವಿಸ್ತಾರವಾಗಿ ಹೇಳಲು ನೂರು ವರ್ಷಗಳಾದರೂ ಸಾಲದು.

೧೧. ಈ ಭೂಮಂಡಲದಲ್ಲಿ ಜಂಬೂ, ಪ್ಲಕ್ಷ, ಶಾಲ್ಮ, ಕುಶ, ಕ್ರೌಂಚ, ಶಾಕ, ಪುಷ್ಕರಗಳೆಂಬ ಏಳು ಮಹಾದ್ವೀಪಗಳಿರುವುವು.

೧೨. ಈ ಏಳು ದ್ವೀಪಗಳೂ ಸಹ ಲವಣ [ಉಪ್ಪು) ಸಮುದ್ರ, ಇಕ್ಷು [ಕಬ್ಬಿನ ಹಾಲು] ಸಮುದ್ರ, ಸುರಾ [ಸಾರಾಯಿ] ಸಮುದ್ರ, ಸರ್ಪಿ (ತುಪ್ಪ) ಸಮುದ್ರ ದಧಿ [ಮೊಸರು] ಸಮುದ್ರ, ದುಗ್ಧ [ಹಾಲು] ಜಲ [ಸೀನೀರು] ಸಮುದ್ರಗಳೆಂಬ ಏಳು ಸಮುದ್ರಗಳಿಂದ ಸುತ್ತುವರೆಯಲ್ಪಟ್ಟಿವೆ.

೧೩. ಈ ದ್ವೀಪಗಳೆಲ್ಲದರ ಮಧ್ಯದಲ್ಲಿ ಜಂಬೂದ್ವೀಪವಿರುವುದು. ಆ ಜಂಬೂದ್ವೀಪದ ಮಧ್ಯದಲ್ಲಿ ಸುವರ್ಣಮಯವಾದ ಮೇರುಪರ್ವತವಿರುವುದು.

shrinath.udupa@gmail.com

ಚತುರಶೀತಿಸಾಹಸ್ರೈರ್ಯೋಜನೈಸ್ತಸ್ಯ ಚೋಚ್ಛ್ರಯಃ ।
ಪ್ರವಿಷ್ಟಃ ಷೋಡಶಾಧಸ್ತಾದ್ದ್ವಾತ್ರಿಂಶನ್ಮೂರ್ಧ್ನಿ ವಿಸ್ತೃತಃ ॥ ೧೪ ॥

ಮೂಲೇ ಷೋಡಶಸಾಹಸ್ರೈರ್ವಿಸ್ತಾರಸ್ತಸ್ಯ ಸರ್ವತಃ ।
ಭೂಪದ್ಮಸ್ಯಾಸ್ಯ ಶೈಲೋಽಸೌ ಕರ್ಣಿಕಾಕಾರಸಂಸ್ಥಿತಃ ॥ ೧೫ ॥

ಹಿಮವಾನ್ ಹೇಮಕೂಟಶ್ಚ ನಿಷಧಸ್ತಸ್ಯ ದಕ್ಷಿಣೇ ।
ನೀಲಃ ಶ್ವೇತಶ್ಚ ಶೃಂಗೀ ಚ ಉತ್ತರೇ ವರ್ಷಪರ್ವತಾಃ ॥ ೧೬ ॥

ಲಕ್ಷಪ್ರಮಾಣೌ ದ್ವೌ ಮಧ್ಯೇ ದಶಹೀನಾಸ್ತಥಾಽಪರೇ ।
ಸಹಸ್ರದ್ವಿತಯೋಚ್ಛ್ರಾಯಾಸ್ತಾವದ್ವಿಸ್ತಾರಿಣಶ್ಚ ತೇ ॥ ೧೭ ॥

ಭಾರತಂ ಪ್ರಥಮಂ ವರ್ಷಂ ತತಃ ಕಿಂಪುರುಷಂ ಸ್ಮೃತಂ ।
ಹರಿವರ್ಷಂ ತಥೈವಾನ್ಯನ್ಮೇರೋರ್ದಕ್ಷಿಣತೋ ದ್ವಿಜಾಃ ॥ ೧೮ ॥

---

೧೪. ಈ ಪರ್ವತವು ಎಂಭತ್ತುನಾಲ್ಕು ಸಾವಿರ [೮೪,೦೦೦] ಯೋಜನ ಎತ್ತರವಾಗಿರುವುದು. ಕೆಳಭಾಗದಲ್ಲಿ ಹದಿನಾರುಸಾವಿರ ಯೋಜನದ ವರೆಗೆ ಭೂಮಿಯ ಒಳಭಾಗವನ್ನು ಪ್ರವೇಶಿಸಿರುವುದು. ಮೇಲ್ಭಾಗದಲ್ಲಿ ಮೂವತ್ತೆರಡು ಸಾವಿರಯೋಜನ ಅಗಲವಾಗಿರುವುದು.

೧೫. ಈ ಗಿರಿಯ ಸುತ್ತಲೂ ಇರುವ ಪ್ರಸ್ಥಭೂಮಿಯು ಹದಿನಾರುಸಾವಿರ ಯೋಜನ ವಿಸ್ತಾರವಾಗಿರುವುದು. ಈ ಮೇರುವು ಭೂಮಂಡಲವೆಂಬ ಕಮಲಕ್ಕೆ ಕರ್ಣಿಕೆಯಂತೆ ಶೋಭಿಸುತ್ತಿರುವುದು.

೧೬. ಹಿಮಾಲಯ, ಹೇಮಕೂಟಗಿರಿ, ನಿಷಧಗಿರಿ ಈ ಬೆಟ್ಟಗಳು ಮೇರು ಪರ್ವತಕ್ಕೆ ದಕ್ಷಿಣದಲ್ಲಿರುವುವು. ನೀಲಗಿರಿ, ಶ್ವೇತಾದ್ರಿ, ಶೃಂಗಿಗಿರಿ, ಈ ಬೆಟ್ಟಗಳು ಉತ್ತರದಿಕ್ಕಿನಲ್ಲಿರುವುವು.

೧೭. ಮೇಲೆ ಹೇಳಿದ ಗಿರಿಗಳಲ್ಲಿ ಎರಡು ಬೆಟ್ಟಗಳು ಲಕ್ಷಯೋಜನ ವಿಸ್ತಾರವಾಗಿರುವುವು. ಮಿಕ್ಕವು ಹತ್ತುಲಕ್ಷಯೋಜನಕ್ಕೆ ಕಮ್ಮಿಯಿಲ್ಲದ ವಿಸ್ತಾರವುಳ್ಳವು. ಅವುಗಳೆಲ್ಲವೂ ಎರಡುಸಾವಿರಯೋಜನ ಅಗಲವಾಗಿಯೂ ಎರಡುಸಾವಿರಯೋಜನ ಎತ್ತರವಾಗಿಯೂ ಇರುವವು.

೧೮. ಇನ್ನು ವರ್ಷಗಳು ಅಥವಾ ಭೂಭಾಗಗಳನ್ನು ಹೇಳುವೆನು.—ಭಾರತ ವರ್ಷವು ಮೊದಲನೆಯದು. ಆಮೇಲೆ • ಕಿಂಪುರುಷವರ್ಷ. ಆಮೇಲೆ ಹರಿವರ್ಷ. ಈ ವರ್ಷಗಳೆಲ್ಲವೂ ಮೇರುವಿಗೆ ದಕ್ಷಿಣಭಾಗದಲ್ಲಿರುವವು.

shrinath.udupa@gmail.com

ರಮ್ಯಕಂ ಚೋತ್ತರಂ ವರ್ಷಂ ತಸ್ಯೈವ ತು ಹಿರಣ್ಮಯಂ ।
ಉತ್ತರಾಃ ಕುರವಶ್ಚೈವ ಯಥಾ ವೈ ಭಾರತಂ ತಥಾ ॥ ೧೯ ॥

ನವಸಾಹಸ್ರಮೇಕೈಕಮೇತೇಷಾಂ ದ್ವಿಜಸತ್ತಮಾಃ ।
ಇಲಾವೃತಂ ಚ ತನ್ಮಧ್ಯೇ ಸೌವರ್ಣೋ ಮೇರುರುಚ್ಛ್ರಿತಃ ॥ ೨೦ ॥

ಮೇರೋಶ್ಚತುರ್ದಿಶಂ ತತ್ರ ನವಸಾಹಸ್ರವಿಸ್ತೃತಂ ।
ಇಲಾವೃತಂ ಮಹಾಭಾಗಾಶ್ಚತ್ವಾರಶ್ಚಾತ್ರ ಪರ್ವತಾಃ ॥ ೨೧ ॥

ವಿಷ್ಕಂಭಾ ವಿತತಾ ಮೇರೋರ್ಯೋಜನಾಯುತವಿಸ್ತೃತಾಃ ।
ಪೂರ್ವೇಣ ಮಂದರೋ ನಾಮ ದಕ್ಷಿಣೇ ಗಂಧಮಾದನಃ ॥ ೨೨ ॥

ವಿಪುಲಃ ಪಶ್ಚಿಮೇ ಪಾರ್ಶ್ವೇ ಸುಪಾರ್ಶ್ವಶ್ಚೋತ್ತರೇ ಸ್ಥಿತಃ ।
ಕದಂಬಸ್ತೇಷು ಜಂಬೂಶ್ಚ ಪಿಪ್ಪಲೋ ವಟ ಏವ ಚ ॥ ೨೩ ॥

---

೧೯. ಸುವರ್ಣಮಯವೂ, ಸಂಪತ್ಸಮೃದ್ಧವೂ ಆದ ರಮ್ಯಕವರ್ಷವು ಮೇರುವಿಗೆ ಉತ್ತರದಲ್ಲಿರುವದು. ಉತ್ತರ ಕುರುದೇಶಗಳು ಉತ್ತರದಲ್ಲಿರುವವು. ಈ ಕುರುದೇಶಗಳು ಭಾರತದಂತೆ ಸಂಪತ್ಸಮೃದ್ಧಗಳಾಗಿದ್ದು ವಿಸ್ತಾರವಾಗಿರುವವು.

೨೦ ಈ ಪ್ರತಿಯೊಂದು ವರ್ಷವೂ ಒಂಭತ್ತುಸಾವಿರಯೋಜನ ವಿಸ್ತಾರವಾಗಿರುವದು. ಇಲಾವೃತವೆಂಬ ವರ್ಷವೂ ಅಷ್ಟೇ ವಿಸ್ತಾರವಾಗಿರುವದು. ಇದರ ಮಧ್ಯದಲ್ಲಿಯೇ ಸುಮೇರುಗಿರಿಯು ಇರುವದು.

೨೧. ಈ ಇಲಾವೃತವು ಮೇರುಗಿರಿಯ ನಾಲ್ಕು ದಿಕ್ಕುಗಳಲ್ಲಿಯೂ ಒಂಭತ್ತು ಸಾವಿರ ಯೋಜನಗಳು ವಿಸ್ತಾರವಾಗಿರುವದು. ಈ ಇಳಾವೃತದಲ್ಲಿ ನಾಲ್ಕು ಮಹಾ ಗಿರಿಗಳಿರುವವು. ಈ ಗಿರಿಗಳೆಲ್ಲವೂ ಭೂಮಂಡಲದ ಬಾಗಿಲ ಅಗಣಿಗಳಂತಿರುವವು. ಹತ್ತು ಸಾವಿರಯೋಜನ ವಿಸ್ತಾರವಾಗಿ ಇರುವವು.

೨೨. ಮೇರುವಿಗೆ ಪೂರ್ವದಲ್ಲಿ ಮಂದರಗಿರಿಯಿರುವದು, ದಕ್ಷಿಣದಲ್ಲಿ ಗಂಧಮಾದನಗಿರಿಯಿರುವದು. ಪಶ್ಚಿಮದಲ್ಲಿ ವಿಪುಲಗಿರಿಯಿರುವದು. ಉತ್ತರದಲ್ಲಿ ಸುಪಾರ್ಶ್ವವೆಂಬ ಪರ್ವತವಿರುವದು.

೨೩. ಆ ಗಿರಿಗಳಲ್ಲಿ ಕದಂಬ [ತಾಳೆ] ಜಂಬೂ [ನೇರಳೆ] ಪಿಪ್ಪಲ [ಅಶ್ವತ್ಥ] ವಟ [ಆಲ] ಮುಂತಾದ ವೃಕ್ಷಗಳು ಹೇರಳವಾಗಿರುವವು. ಈ ಮರಗಳು ಸಾವಿರದ

shrinath.udupa@gmail.com

ಏಕಾದಶಶತಾಯಾಮಾಃ ಪಾದಪಾ ಗಿರಿಕೇತವಃ ।
ಜಂಬೂದ್ವೀಪಸ್ಯ ಸಾ ಜಂಬೂರ್ನಾಮಹೇತುರ್ದ್ವಿಜೋತ್ತಮಾ ॥ ೨೪ ॥

ಮಹಾಗಜಪ್ರಮಾಣಾನಿ ಜಂಬ್ವಾಸ್ತಸ್ಯಾಃ ಫಲಾನಿ ವೈ ।
ಪತಂತಿ ಭೂಭೃತಃ ಪೃಷ್ಠೇ ಶೀರ್ಯಮಾಣಾನಿ ಸರ್ವತಃ ॥ ೨೫ ॥

ರಸೇನ ತೇಷಾಂ ವಿಖ್ಯಾತಾ ತತ್ರ ಜಂಬೂನದೀತಿ ವೈ ।
ಸರಿತ್ಪ್ರವರ್ತತೇ ಸಾ ಚ ಪೀಯತೇ ತನ್ನಿವಾಸಿಭಿಃ ॥ ೨೬ ॥

ನ ಖೇದೋ ನ ಚ ದೌರ್ಗಂಧ್ಯಂ ನ ಜರಾ ನೇಂದ್ರಿಯಕ್ಷಯಃ ।
ತತ್ಪಾನಸ್ವಸ್ಥಮನಸಾಂ ಜನಾನಾಂ ತತ್ರ ಜಾಯತೇ ॥ ೨೭ ॥

ತೀರಮೃತ್ತದ್ರಸಂ ಪ್ರಾಪ್ಯ ಸುಖವಾಯುವಿಶೋಷಿತಾ ।
ಜಂಬೂನದಾಖ್ಯಂ ಭವತಿ ಸುವರ್ಣಂ ಸಿದ್ಧಭೂಷಣಂ ॥ ೨೮ ॥

ನೂರು ಯೋಜನ ವಿಸ್ತಾರವಾಗಿರುವವು. ಈ ತರುಗಳು ಆಯಾಯ ಗಿರಿಗಳಲ್ಲಿ ಹೇರಳವಾಗಿದ್ದು ಅವುಗಳಿಗೆ ಧ್ವಜಗಳಂತೆ ಶೋಭಿಸುತ್ತಿರುವವು.

೨೪. ಜಂಬೂದ್ವೀಪದಲ್ಲಿ ಜಂಬೂ [ನೇರಿಳೆ] ಮರಗಳು ಹೇರಳವಾಗಿರುವದರಿಂದ ಆ ದ್ವೀಪಕ್ಕೆ ಜಂಬೂದ್ವೀಪವೆಂದು ಹೆಸರಾಯಿತು. ಈ ನೇರಳೆ ಮರಗಳು ಹಣ್ಣುಗಳು ಆನೆಯಷ್ಟು ದೊಡ್ಡದೊಡ್ಡದಾಗಿರುವವು.

೨೫-೨೬. ನೇರಳೆಹಣ್ಣುಗಳು ಕಳಿತು ಮರಗಳಿಂದ ಬೆಟ್ಟಗಳ ತಪ್ಪಲುಗಳ ಮೇಲೆ ಸದಾ ಬೀಳುತ್ತಲಿರುವವು. ಈ ಜಂಬೂಫಲಗಳ ರಸದಿಂದ ಜಂಬೂನದಿಯೆಂಬುದೊಂದು ಹೊರಟಿರುವದು. ಜಂಬೂದ್ವೀಪವಾಸಿಗಳು ಆ ನದಿಯ ಮಧುರವಾದ ನೀರನ್ನು ಕುಡಿಯುವರು.

೨೭. ಆ ನೀರಿನಲ್ಲಿ ದುರ್ವಾಸನೆ ಇರುವದಿಲ್ಲ. ಆ ಜಂಬೂನದಿಯ ನೀರನ್ನು ಕುಡಿದರೆ ಮನಸ್ಸು ಶಾಂತವಾಗುವದು. ದುಃಖವುಂಟಾಗುವದಿಲ್ಲ ಮುಪ್ಪು, ಮತ್ತು ಇಂದ್ರಿಯಶೈಥಿಲ್ಯಗಳು ಉಂಟಾಗುವದಿಲ್ಲ.

೨೮. ಆ ನದಿಯ ದಡದಲ್ಲಿನ ಭೂಮಿಯ ಮಣ್ಣು ನೇರಿಳೇಹಣ್ಣಿನ ರಸವನ್ನು ಕುಡಿದು, ಸುಖವಾದ ಗಾಳಿಯಿಂದ ಶೋಧಿಸಲ್ಪಟ್ಟುದಾಗಿ ಜಾಂಬೂನದವೆಂಬ ಚಿನ್ನವಾಗುವದು. ಈ ಚಿನ್ನವನ್ನು ಸಿದ್ಧರು ಅಲಂಕಾರಾರ್ಥವಾಗಿ ಹೆಚ್ಚಾಗಿ ಉಪಯೋಗಿಸುವರು.

shrinath.udupa@gmail.com

ಭದ್ರಾಶ್ವಂ ಪೂರ್ವತೋ ಮೇರೋಃ ಕೇತುಮಾಲಂ ಚ ಪಶ್ಚಿಮೇ ।
ವರ್ಷೇ ದ್ವೇ ತು ಮುನಿಶ್ರೇಷ್ಠಾಸ್ತಯೋರ್ಮಧ್ಯೇ ತ್ವಿಲಾವೃತಂ ॥ ೨೯ ॥

ವನಂ ಚೈತ್ರರಥಂ ಪೂರ್ವೇ ದಕ್ಷಿಣೇ ಗಂಧಮಾದನಂ ।
ವೈಭ್ರಾಜಂ ಪಶ್ಚಿಮೇ ತದ್ವದುತ್ತರೇ ನಂದನಂ ಸ್ಮೃತಂ ॥ ೩೦ ॥

ಅರುಣೋದಂ ಮಹಾಭದ್ರಮಸಿತೋದಂ ಸಮಾನಸಂ ।
ಸರಾಂಸ್ಯೇತಾನಿ ಚತ್ವಾರಿ ದೇವಭೋಗ್ಯಾನಿ ಸರ್ವದಾ ॥ ೩೧ ॥

ಶಾಂತವಾಂಶ್ಚಕ್ರಕುಂಜಶ್ಚ ಕುರರೀ ಮಾಲ್ಯವಾಂಸ್ತಥಾ ।
ವೈಕಂಕಪ್ರಮುಖಾ ಮೇರೋಃ ಪೂರ್ವತಃ ಕೇಸರಾಚಲಾಃ ॥ ೩೨ ॥

ತ್ರಿಕೂಟಃ ಶಿಶಿರಶ್ಚೈವ ಪತಂಗೋ ರುಚಕಸ್ತಥಾ ।
ನಿಷಧಾದಯೋ ದಕ್ಷಿಣತಸ್ತಸ್ಯ ಕೇಸರಪರ್ವತಾಃ ॥ ೩೩ ॥

೨೯. ಎಲೈ ಮುನಿಗಳೇ, ಮೇರುವಿಗೆ ಪೂರ್ವದಲ್ಲಿ ಭದ್ರಾಶ್ವವೆಂಬ ವರ್ಷವಿರುವುದು. ಪಶ್ಚಿಮದಲ್ಲಿ ಕೇತುಮಾಲವೆಂಬ ವರ್ಷವಿರುವದು. ಈ ವರ್ಷಗಳೆರಡರ ಮಧ್ಯದಲ್ಲಿ ಇಲಾವೃತವರ್ಷವು ಇರುವದು.

೩೦. ಮೇರುವಿಗೆ ಪೂರ್ವದಲ್ಲಿ ಚೈತ್ರರಥವೆಂಬ ವನವಿರುವದು. ದಕ್ಷಿಣದಲ್ಲಿ ಗಂಧಮಾದನವೆಂಬ ವನವು ಇರುವದು. ಪಶ್ಚಿಮದಲ್ಲಿ ವೈಭ್ರಾಜವನವು ಇರುವದು. ಉತ್ತರದಲ್ಲಿ ನಂದನವನವು ಇರುವದು.

೩೧. ಅರುಣೋದ, ಮಹಾಭದ್ರ, ಅಸಿತೋದ, ಮಾನಸಗಳೆಂಬ ನಾಲ್ಕು ಸರೋವರಗಳು ಪ್ರಸಿದ್ಧವಾದುವುಗಳು. ಇವುಗಳನ್ನು ದೇವತೆಗಳು ಉಪಯೋಗಿಸುವರು.

೩೨. ಶಾಂತವಾನ್, ಚಕ್ರಕುಂಜ, ಕುರರೀಗಿರಿ, ಮಾಲ್ಯವಾನ್, ವೈಕಂಕ ಮೊದಲಾದ ಗಿರಿಗಳು ಮೇರುವಿಗೆ ಪೂರ್ವದಲ್ಲಿರುವವು. ಅವುಗಳಿಗೆ ಕೇಸರಾಚಲಗಳೆಂದು ಹೆಸರು.

೩೩. ಮೇರುವಿಗೆ ದಕ್ಷಿಣದಲ್ಲಿರುವ ತ್ರಿಕೂಟಾಚಲ, ಶಿಶಿರಗಿರಿ, ಪತಂಗಪರ್ವತ, ರುಚಕಗಿರಿ, ನಿಷಧಗಿರಿ, ಇವುಗಳಿಗೂ ಕೇಸರಪರ್ವತಗಳೆಂದು ಹೆಸರು. ಇವುಗಳಲ್ಲಿ ಕೇಸರೀಮೃಗಗಳು ಹೇರಳವಾಗಿರುವವು.

shrinath.udupa@gmail.com

ಶಿಖಿವಾಸಃ ಸವೈಡೂರ್ಯಃ ಕಪಿಲೋ ಗಂಧಮಾದನಃ ।
ಜಾನುಧಿಪ್ರಮುಖಾಸ್ತದ್ವತ್ಪಶ್ಚಿಮೇ ಕೇಸರಾಚಲಾಃ ॥ ೩೪ ॥

ಮೇರೋರನಂತರಾಸ್ತೇ ಚ ಜಠರಾದಿಷ್ವವಸ್ಥಿತಾಃ ।
ಶಂಖಕೂಟೋಽಥ ಋಷಭೋ ಹಂಸೋ ನಾಗಸ್ತಥಾಽಪರಾಃ ॥ ೩೫ ॥

ಕಾಲಂಜರಾದ್ಯಾಶ್ಚ ತಥಾ ಉತ್ತರೇ ಕೇಸರಾಚಲಾಃ ।
ಚತುರ್ದಶ ಸಹಸ್ರಾಣಿ ಯೋಜನಾನಾಂ ಮಹಾಪುರೀ ॥ ೩೬ ॥

ಮೇರೋರುಪರಿ ವಿಪ್ರೇಂದ್ರಾ ಬ್ರಹ್ಮಣಃ ಕಥಿತಾ ದಿವಿ ।
ತಸ್ಯಾಂ ಸಮಂತತಶ್ಚಾಷ್ಟೌ ದಿಶಾಸು ವಿದಿಶಾಸು ಚ ॥ ೩೭ ॥

ಇಂದ್ರಾದಿಲೋಕಪಾಲಾನಾಂ ಪ್ರಖ್ಯಾತಾಃ ಪ್ರವರಾಃ ಪುರಃ ।
ವಿಷ್ಣುಪಾದವಿನಿಷ್ಕ್ರಾಂತಾ ಪ್ಲಾವಯಂತೀಂದುಮಂಡಲಂ ॥ ೩೮ ॥

---

೩೪. ಶಿಖಿವಾಸಗಿರಿ, ವೈಡೂರ್ಯಪರ್ವತ, ಕಪಿಲಗಿರಿ, ಗಂಧಮಾದನಾಚಲ, ಜಾನುಧಿಪರ್ವತ ಮೊದಲಾದುವುಗಳು ಮೇರುವಿಗೆ ಪಶ್ಚಿಮದಲ್ಲಿದ್ದು ಕೇಸರಾಚಲಗಳೆಂದುಹೆಸರಾಗಿರುವವು. (ಅಥವಾ ಮೇಲೆ ಹೇಳಿದ ಶಾಂತವರ್ಣ ಮೊದಲಾಗಿ ಜಾನುಧಿವರೆಗಿನ ಪರ್ವತಗಳು ಮೇರುಪರ್ವತಕ್ಕೆ ಸಮೀಪದಲ್ಲಿದ್ದು ಭೂಮಂಡಲವೆಂಬ ಕಮಲಕ್ಕೆ ಕರ್ಣಿಯಂತಿರುವ ಮೇರುಪರ್ವತದ ಕೇಸರೆಗಳಿಂತಿರುವವು ಎಂದು ಅಭಿಪ್ರಾಯವು). ಮೇಲೆಹೇಳಿದ ಈ ಪರ್ವತಗಳೆಲ್ಲವೂ ಕೆಲವು ಮೇರುವಿಗೆ ಸಮೀಪದಲ್ಲಿದ್ದು ಕೆಲವು ಮೇರುವಿನ ಮಧ್ಯಭಾಗದಲ್ಲಿಯೇ ಇರುವವು.

೩೫. ಶಂಖಕೂಟಗಿರಿ, ಋಷಭಗಿರಿ, ಹಂಸಪರ್ವತ, ನಾಗಪರ್ವತ, ಕಾಲಂಜರಗಿರಿ ಮುಂತಾದ ಗಿರಿಗಳು ಮೇರುವಿಗೆ ಉತ್ತರದಲ್ಲಿದ್ದು ಮೇರುವೆಂಬ ಕರ್ಣಿಕೆಗೆ ಕೇಸರಗಳಂತಿರುವವು.

೩೬. ಆ ಮೇರುವಿನ ಮೇಲ್ಭಾಗದಲ್ಲಿ ಬ್ರಹ್ಮನ ಮಹಾರಾಜಧಾನಿಯು ಇರುವುದು. ಅದು ಹದಿನಾಲ್ಕುಸಾವಿರ ಯೋಜನಗಳಷ್ಟು ವಿಸ್ತಾರವಾಗಿರುವುದು

೩೭. ಆ ರಾಜಧಾನಿಯ ಸುತ್ತಲೂ ಎಂಟುದಿಕ್ಕುಗಳಲ್ಲಿ ಕ್ರಮವಾಗಿ ದೇವೇಂದ್ರಮೊದಲಾದ ಅಷ್ಟದಿಕ್ಪಾಲಕರ ಪ್ರಸಿದ್ಧ ನಗರಗಳು ಇರುವವು.

೩೮. ಹರಿಯ ಪಾದದಿಂದ ಹೊರಟ ಗಂಗಾನದಿಯು ಚಂದ್ರಮಂಡಲಕೆ ಬಂದು ಅಲ್ಲಿಂದ ಬ್ರಹ್ಮನ ರಾಜಧಾನಿಯಾದ ಸತ್ಯಲೋಕದಲ್ಲಿ ಬಂದು ಬೀಳುವದು.

shrinath.udupa@gmail.com

ಸಮಂತಾದ್ಬ್ರಹ್ಮಣಃ ಪುರ್ಯಾಂ ಗಂಗಾ ಪತತಿ ವೈ ದಿವಿ ।
ಸಾ ತತ್ರ ಪತಿತಾ ದಿಕ್ಷು ಚತುರ್ಧಾ ಪ್ರತ್ಯಪದ್ಯತ ॥ ೩೯ ॥

ಸೀತಾ ಚಾಲಕನಂದಾ ಚ ಚಕ್ಷುರ್ಭದ್ರಾ ಚ ವೈ ಕ್ರಮಾತ್ ।
ಪೂರ್ವೇಣ ಸೀತಾ ಶೈಲಾಚ್ಚ ಶೈಲಂ ಯಾಂತ್ಯಂತರಿಕ್ಷಗಾ ॥ ೪೦ ॥

ತತಶ್ಚ ಪೂರ್ವವರ್ಷೇಣ ಭದ್ರಾಶ್ವೇನೈತಿ ಸಾರ್ಣವಂ ।
ತಥೈವಾಲಕನಂದಾ ಚ ದಕ್ಷಿಣೇನೈತ್ಯ ಭಾರತಂ ॥ ೪೧ ॥

ಪ್ರಯಾತಿ ಸಾಗರಂ ಭೂತ್ವಾ ಸಪ್ತಭೇದಾ ದ್ವಿಜೋತ್ತಮಾಃ ।
ಚಕ್ಷುಶ್ಚ ಪಶ್ಚಿಮಗಿರೀನತೀತ್ಯ ಸಕಲಾಂಸ್ತತಃ ॥ ೪೨ ॥

ಪಶ್ಚಿಮಂ ಕೇತುಮಾಲಾಖ್ಯಂ ವರ್ಷಮನ್ವೇತಿ ಸಾರ್ಣವಂ ।
ಭದ್ರಾ ತಥೋತ್ತರಗಿರೀನುತ್ತರಾಂಶ್ಚ ತಥಾ ಕುರೂನ್ ॥ ೪೩ ॥

---

೩೯. ಬ್ರಹ್ಮಲೋಕದಲ್ಲಿ ಬಿದ್ದ ಆ ಗಂಗೆಯು ನಾಲ್ಕು ಭಾಗಗಳಾಗಿ ಹರಿಯುವದು. ಸೀತಾ, ಅಲಕನಂದಾ, ಚಕ್ಷುಃ, ಭದ್ರಾ ಎಂದು ಆ ನಾಲ್ಕು ಭಾಗಗಳ ಹೆಸರು.

೪೦. ಸೀತಾನದಿಯು ಪೂರ್ವದಿಕ್ಕಿನಲ್ಲಿ ಹೊರಟು ಅಂತರಿಕ್ಷಮಾರ್ಗವಾಗಿ ಹರಿದು, ಬೆಟ್ಟಗಳಿಂದ ಬೆಟ್ಟಗಳಿಗೆ ಹೋಗುತ್ತಾ ಕೊನೆಗೆ ಪೂರ್ವದೇಶದ ಭದ್ರಾಶ್ವ ದೇಶದಲ್ಲಿ ಹರಿಯುತ್ತಾ ಸಮುದ್ರವನ್ನು ಸೇರುವದು.

೪೧. ಅಲಕನಂದಾ (ಗಂಗಾ) ನದಿಯು ದಕ್ಷಿಣದಿಕ್ಕಿನಿಂದ ಹೊರಟು ಭಾರತದೇಶಕ್ಕೆ ಬಂದು ಅಲ್ಲಿ ಏಳು ಭಾಗಗಳಾಗಿ ಹರಿದು ಕೊನೆಯಲ್ಲಿ ಸಮುದ್ರವನ್ನು ಸೇರುವದು.

೪೨. ಚಕ್ಷುರ್ನದಿಯೂ ಸಹ ಪಶ್ಚಿಮದಿಕ್ಕಿನಿಂದ ಹೊರಟು ಬೆಟ್ಟಗಳಿಂದ ಬೆಟ್ಟಗಳನ್ನೂ ದಾಟಿ ಕೇತುಮಾಲವೆಂಬ ಪಶ್ಚಿಮದೇಶದಲ್ಲಿ ಹರಿದು ಪಶ್ಚಿಮಸಮುದ್ರವನ್ನು ಸೇರುವದು.

೪೩. ಭದ್ರಾನದಿಯು ಉತ್ತರದಿಕ್ಕಿನಿಂದ ಹೊರಟು ಉತ್ತರದಿಕ್ಕಿನ ಪರ್ವತಗಳಿಂದ ಕೆಳಗಿಳಿದು ಉತ್ತರಕುರುದೇಶದಲ್ಲಿ ಹರಿದು ಕೊನೆಯಲ್ಲಿ ಉತ್ತರಸಾಗರವನ್ನು ಸೇರುವದು.

shrinath.udupa@gmail.com

ಅತೀತ್ಯೋತ್ತರಮಂಭೋಧಿಂ ಸಮುಭ್ಯೇತಿ ದ್ವಿಜೋತ್ತಮಾಃ ।
ಆನೀಲನಿಷಧಾಯಾಮೌ ಮಾಲ್ಯವದ್ಗಂಧಮಾದನೌ ॥ ೪೪ ॥

ತಯೋರ್ಮಧ್ಯಗತೋ ಮೇರುಃ ಕರ್ಣಿಕಾಕಾರಸಂಸ್ಥಿತಃ ।
ಭಾರತಾಃ ಕೇತುಮಾಲಾಶ್ಚ ಭದ್ರಾಶ್ವಾಃ ಕುರವಸ್ತಥಾ ॥ ೪೫ ॥

ಪತ್ರಾಣಿ ಲೋಕಶೈಲಸ್ಯ ಮರ್ಯಾದಾಶೈಲಬಾಹ್ಯತಃ ।
ಜಠರೋ ದೇವಕೂಟಶ್ಚ ಮರ್ಯಾದಾಪರ್ವತಾಪ್ರಭೌ ॥ ೪೬ ॥

ತೌ ದಕ್ಷಿಣೋತ್ತರಾಯಾಮಾವಾನೀಲನಿಷಧಾಯತೌ ।
ಗಂಧಮಾದನಕೈಲಾಸೌ ಪೂರ್ವಪಶ್ಚಾತ್ತು ತಾಪ್ರಭೌ ॥ ೪೭ ॥

ಅಶೀತಿಯೋಜನಾಯಾಮಾವರ್ಣವಾಂತರ್ವ್ಯವಸ್ಥಿತೌ ।
ನಿಷಧಃ ಪಾರಿಯಾತ್ರಶ್ಚ ಮರ್ಯಾದಾಪರ್ವತಾವುಭೌ ॥ ೪೮ ॥

---

೪೪. ನೀಲಗಿರಿ ಮತ್ತು ನಿಷಧಗಿರಿ ಇವುಗಳವರೆಗೆ ವ್ಯಾಪಿಸಿದ್ದು ಮಾಲ್ಯವಾನ್, ಗಂಧಮಾದನಗಳೆಂಬ ಪರ್ವತಗಳೆರಡು ಮೇರುವಿನ ಪಕ್ಕದಲ್ಲಿರುವವು. ಆ ಗಿರಿಗಳ ಮಧ್ಯದಲ್ಲಿ ಮೇರುವು ಭೂಮಂಡಲವೆಂಬ ಕಮಲದ ಕರ್ಣಿಕೆಯಂತಿರುವದು.

೪೫. ಭಾರತದೇಶ, ಕೇತುಮಾಲದೇಶ, ಭದ್ರಾಶ್ವದೇಶ, ಉತ್ತರಕುರುದೇಶ, ಇವುಗಳು ಮರ್ಯಾದಾಗಿರಿಯ ಭೂಮಂಡಲಗಳನ್ನು ಗಡಿಯಂತೆ ಪ್ರತ್ಯೇಕಿಸುವ ಬೆಟ್ಟದ ಹೊರವಲಯದಲ್ಲಿದ್ದು ಭೂಮಂಡಲವೆಂಬ ಕಮಲದ ಎಲೆಗಳಂತೆ ಇರುವವು.

೪೬. ಜಠರಗಿರಿ, ದೇವಕೂಟಗಿರಿ ಇವುಗಳು ಒಂದು ಕಡೆಯ ಮೇರೆಯಾಗಿರುವ ಗಿರಿಗಳು. ಇವು ದಕ್ಷಿಣ ಮತ್ತು ಉತ್ತರ ದಿಕ್ಕುಗಳನ್ನು ವ್ಯಾಪಿಸಿ ನೀಲಗಿರಿ, ನಿಷಧಗಿರಿಗಳ ವರೆಗೆ ಹರಡಿರುವವು.

೪೭. ಗಂಧಮಾದನಗಿರಿ ಮತ್ತು ಕೈಲಾಸಗಿರಿಗಳು ಕ್ರಮವಾಗಿ ಪೂರ್ವ ಮತ್ತು ಪಶ್ಚಿಮದಿಕ್ಕುಗಳಲ್ಲಿರುವವು. ಇವು ಎಂಭತ್ತುಯೋಜನ ವಿಸ್ತಾರವಾಗಿದ್ದು ಸಾಗರದ ಒಳಭಾಗವನ್ನು ವ್ಯಾಪಿಸಿರುವವು.

೪೮. ನಿಷಧಗಿರಿ ಮತ್ತು ಪಾರಿಯಾತ್ರಗಿರಿಗಳು ಭೂಮಿಗೆ ಮೇರೆಯಾಗಿರುವ ಪರ್ವತಗಳು. ಇವೂ ದಕ್ಷಿಣ ಮತ್ತು ಪೂರ್ವದಿಕ್ಕುಗಳನ್ನು ವ್ಯಾಪಿಸಿ ನೀಲಗಿರಿ, ನಿಷಧ ಗಿರಿಗಳವರೆಗೆ ಹರಡಿರುವವು.

shrinath.udupa@gmail.com

ತೌ ದಕ್ಷಿಣೋತ್ತರಾಯಾಮಾವಾನೀಲನಿಷಧಾಯತೌ ।
ಮೇರೋಃ ಪಶ್ಚಿಮದಿಗ್ಭಾಗೇ ಯಥಾ ಪೂರ್ವೌ ತಥಾ ಸ್ಥಿತೌ ॥ ೪೯ ॥

ತ್ರಿಶೃಂಗೋ ಜಾರುಧಿಶ್ಚೈವ ಉತ್ತರೌ ವರ್ಷಪರ್ವತೌ ।
ಪೂರ್ವಪಶ್ಚಾಯತಾವೇತಾವರ್ಣವಾಂತರ್ವ್ಯವಸ್ಥಿತೌ ॥ ೫೦ ॥

ಇತ್ಯೇತೇ ಹಿ ಮಯಾ ಪ್ರೋಕ್ತಾ ಮರ್ಯಾದಾಪರ್ವತಾ ದ್ವಿಜಾಃ ।
ಜಠರಾವಸ್ಥಿತಾ ಮೇರೋರ್ಯೇಷಾಂ ದ್ವೌ ದ್ವೌ ಚತುರ್ದಿಶಂ ॥ ೫೧ ॥

ಮೇರೋಶ್ಚತುರ್ದಿಶಂ ಯೇ ತು ಪ್ರೋಕ್ತಾಃ ಕೇಸರಪರ್ವತಾಃ ।
ಶೀತಾಂತಾದ್ಯಾ ದ್ವಿಜಾಸ್ತೇಷಾಮತೀವ ಹಿ ಮನೋಹರಾಃ ॥ ೫೨ ॥

ಶೈಲಾನಾಮಂತರದ್ರೋಣ್ಯಃ ಸಿದ್ಧಚಾರಣಸೇವಿತಾಃ ।
ಸುರಮ್ಯಾಣಿ ಕಥಾ ತಾಸು ಕಾನನಾನಿ ಪುರಾಣಿ ಚ ॥ ೫೩ ॥

೪೯–೫೦. ಮೇರುವಿಗೆ ಪೂರ್ವದಲ್ಲಿರುವ ತ್ರಿಶೃಂಗ, ಜಾರುಧಿಗಳೆಂಬ ಪರ್ವತಗಳು ನೀಲಗಿರಿ, ನಿಷಧಗಿರಿಗಳ ವರೆಗೆ ವ್ಯಾಪಿಸಿದ್ದು ಉತ್ತರದಿಕ್ಕಿನಲ್ಲಿ ಹರಡಿರುವವು. ಈ ತ್ರಿಶೃಂಗ, ಜಾರುಧಿಗಿರಿಗಳು ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಹರಡಿದ್ದು ಸಮುದ್ರದ ಒಳಭಾಗವನ್ನೂ ವ್ಯಾಪಿಸಿರುವವು.

೫೧. ಎಲೈ ಮುನಿಗಳೇ, ಹೀಗೆ ನಿಮಗೆ ಭೂಮಿಯ ಸುತ್ತಲೂ ಮೇರೆಯಂತಿದ್ದು ಭೂಮಿಯನ್ನು ಸ್ಥಿರವಾಗಿ ನಿಲ್ಲಿಸುವಂತಹ ಮರ್ಯಾದಾಪರ್ವತಗಳನ್ನು ಹೇಳಿರುವೆನು. ಮತ್ತು ಮೇರುಗಿರಿಯ ಮಧ್ಯಭಾಗದಲ್ಲಿ ನಾಲ್ಕು ದಿಕ್ಕುಗಳಲ್ಲಿರುವ ಎರಡೆರಡು ಗಿರಿಗಳನ್ನೂ ಹೇಳಿರುವೆನು.

೫೨. ಮೇರುಪರ್ವತದ ನಾಲ್ಕು ದಿಕ್ಕುಗಳಲ್ಲಿ ಯಾವ ಕೇಸರಪರ್ವತಗಳಿರುವವೋ ಅವುಗಳಲ್ಲಿ ಶೀತಾಂತ ಮೊದಲಾದ ಪರ್ವತಗಳು ತುಂಬಾ ಮನೋಹರವಾಗಿರುವವು.

೫೩. ಈ ಬೆಟ್ಟಗಳ ತಪ್ಪಲುಗಳಲ್ಲಿ ಸಿದ್ಧರು ಮತ್ತು ಚಾರಣರು ವಿಹರಿಸುವರು. ಮತ್ತು ಅವುಗಳಲ್ಲಿ ಮನೋಹರವಾದ ವನಗಳೂ, ನಗರಗಳೂ ಅನೇಕವಾಗಿ ಇರುವವು.

shrinath.udupa@gmail.com

ಲಕ್ಷ್ಮ್ಯಾವಿಷ್ಣ್ವಗ್ನಿ ಸೂರ್ಯೇಂದ್ರದೇವಾನಾಂ ಮುನಿಸತ್ತಮಾಃ ।
ತಾಸ್ವಾಯತನವರ್ಯಾಣಿ ಜುಷ್ಟಾನಿ ನರಕಿಂನರೈಃ ॥ ೫೪ ॥

ಗಂಧರ್ವಯಕ್ಷರಕ್ಷಾಂಸಿ ತಥಾ ದೈತೇಯದಾನವಾಃ ।
ಕ್ರೀಡಂತಿ ತಾಸು ರಮ್ಯಾಸು ಶೈಲದ್ರೋಣೀಷ್ವಹರ್ನಿಶಂ ॥ ೫೫ ॥

ಭೌಮಾ ಹ್ಯೇತೇ ಸ್ಮೃತಾಃ ಸ್ವರ್ಗಾ ಧರ್ಮಿಣಾಮಾಲಯಾ ದ್ವಿಜಾಃ ।
ನೈತೇಷು ಪಾಪಕರ್ತಾರೋ ಯಾಂತಿ ಜನ್ಮಶತೈರಪಿ ॥ ೫೬ ॥

ಭದ್ರಾಶ್ವೇ ಭಗವಾನ್ ವಿಷ್ಣುರಾಸ್ತೇ ಹಯಶಿರಾ ದ್ವಿಜಾಃ ।
ವಾರಾಹಃ ಕೇತುಮಾಲೇ ತು ಭಾರತೇ ಕೂರ್ಮರೂಪಧೃಕ್ ॥ ೫೭ ॥

ಮತ್ಸ್ಯರೂಪಶ್ಚ ಗೋವಿಂದಃ ಕುರುಷ್ವಾಸ್ತೇ ಸನಾತನಃ ।
ವಿಶ್ವರೂಪೇಣ ಸರ್ವತ್ರ ಸರ್ವಃ ಸರ್ವೇಶ್ವರೋ ಹರಿಃ ॥ ೫೮ ॥

---

೫೪. ಲಕ್ಷ್ಮೀ, ವಿಷ್ಣು, ಸೂರ್ಯ, ಅಗ್ನಿ, ಇಂದ್ರ, ಶಿವ ಮೊದಲಾದ ದೇವತೆಗಳ ದೇವಾಲಯಗಳು ಅಲ್ಲಿ ಬಹಳವಾಗಿರುವವು. ಮನುಷ್ಯರು ಮತ್ತು ಕಿನ್ನರರು ಆ ದೇವಾಲಯಗಳಲ್ಲಿ ದೇವತಾಸೇವೆಯನ್ನು ಮಾಡುವರು.

೫೫. ಆ ಬೆಟ್ಟಗಳ ಮನೋಹರವಾದ ತಪ್ಪಲುಗಳಲ್ಲಿ ಗಂಧರ್ವರು, ಯಕ್ಷರು, ರಾಕ್ಷಸರು, ದೈತ್ಯರು, ದಾನವರು ಮೊದಲಾದವರು ರಾತ್ರಿಹಗಲು ವಿಹರಿಸುವರು.

೫೬. ಈ ಮೇಲೆ ಹೇಳಿದ ಪ್ರದೇಶಗಳೆಲ್ಲವೂ ಭೂಮಿಯಲ್ಲಿನ ಸ್ವರ್ಗಗಳು. ಅಲ್ಲಿ ಧರ್ಮಿಷ್ಠರೇ ವಾಸಿಸುವುದು. ಪಾಪಿಗಳು ಅಲ್ಲಿಗೆ ನೂರುಜನ್ಮಗಳಾದರೂ ಹೋಗಲಾರರು.

೫೭. ಭದ್ರಾಶ್ವದೇಶದಲ್ಲಿ ಭಗವಾನ್ ವಿಷ್ಣುವು ಹಯಗ್ರೀವರೂಪದಿಂದ ಇರುವನು. ಕೇತುಮಾಲವರ್ಷದಲ್ಲಿ ವರಾಹರೂಪದಿಂದಿರುವನು. ಭಾರತದಲ್ಲಿ ವೈದಿಕ ಕರ್ಮರೂಪದಿಂದಿರುವನು. ಉತ್ತರಕುರುದೇಶಗಳಲ್ಲಿ ಮತ್ಸ್ಯರೂಪದಿಂದ ಇರುವನು.

೫೮. ಪರಮೇಶ್ವರನಾದ ಆ ಹರಿಯು ನಾನಾರೂಪಗಳಿಂದ ಎಲ್ಲೆಡೆಗಳಲ್ಲಿಯೂ ನೆಲಸಿರುವನು. ಆ ಪರಮಾತ್ಮನು ಜಗತ್ತಿಗೆ ಆಧಾರವಾಗಿರುವನು ಮತ್ತು ಜಗನ್ಮಯನಾಗಿರುವನು.

shrinath.udupa@gmail.com

ಸರ್ವಸ್ಯಾಧಾರಭೂತೋಽಸೌ ದ್ವಿಜಾ ಆಸ್ತೇಽಖಿಲಾತ್ಮಕಃ ।
ಯಾನಿ ಕಿಂಪುರುಷಾದ್ಯಾನಿ ವರ್ಷಾಣ್ಯಷ್ಟೌ ದ್ವಿಜೋತ್ತಮಾಃ ॥ ೫೯ ॥

ನ ತೇಷು ಶೋಕೋ ನಾಽಽಯಾಸೋ ನೋದ್ವೇಗಃ ಕ್ಷುದ್ಭಯಾದಿಕಂ ।
ಸುಸ್ಥಾಃ ಪ್ರಜಾ ನಿರಾತಂಕಾಃ ಸರ್ವದುಃಖವಿವರ್ಜಿತಾಃ ॥ ೬೦ ॥

ದಶದ್ವಾದಶವರ್ಷಾಣಾಂ ಸಹಸ್ರಾಣಿ ಸ್ಥಿರಾಯುಷಃ ।
ನೈತೇಷು ಭೌಮಾನ್ಯನ್ಯಾನಿ ಕ್ಷುತ್ಪಿಪಾಸಾದಿ ನೋ ದ್ವಿಜಾಃ ॥ ೬೧ ॥

ಕೃತತ್ರೇತಾದಿಕಾ ನೈವ ತೇಷು ಸ್ಥಾನೇಷು ಕಲ್ಪನಾ ।
ಸರ್ವೇಷ್ವೇತೇಷು ವರ್ಷೇಷು ಸಪ್ತ ಸಪ್ತ ಕುಲಾಚಲಾಃ ।
ನದ್ಯಶ್ಚ ಶತಶಸ್ತೇಭ್ಯ ಪ್ರಸೂತಾ ಯಾ ದ್ವಿಜೋತ್ತಮಾಃ ॥ ೬೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಭುವನಕೋಶದ್ವೀಪ-
ವರ್ಣನಂ ನಾಮಾಷ್ಟದಶೋಽಧ್ಯಾಯಃ

೫೯–೬೦. ಕಿಂಪುರುಷ ಮೊದಲಾದ ಎಂಟುವರ್ಷಗಳಲ್ಲಿ ದುಃಖವೆಂಬುದಿಲ್ಲ. ಆಯಾಸಸವಿಲ್ಲ, ಉದ್ವೇಗವಿಲ್ಲ, ಹಸಿವು, ನೀರಡಿಕೆ, ಭಯ ಮೊದಲಾದುವುಗಳೂ ಇಲ್ಲ. ಅಲ್ಲಿನ ಪ್ರಜೆಗಳೆಲ್ಲರೂ ಯಾವ ಭಯವೂ ದುಃಖವೂ ಇಲ್ಲದೆ ಸುಖವಾಗಿರುವರು.

೬೧. ಅಲ್ಲಿನ ಜನಗಳು ಪ್ರತಿಯೊಬ್ಬರೂ ಇಪ್ಪತ್ತೆರಡುಸಾವಿರವರ್ಷಗಳವರೆಗೆ ಚಿರಂಜೀವಿಗಳಾಗಿ ಬದುಕಿರುವರು, ಈ ದೇಶಗಳಲ್ಲಿ ಭೂಮಿಯಲ್ಲಿರುವಂತೆ ಹಸಿವು ನೀರಡಿಕೆ ಮುಂತಾದುವುಗಳು ಇಲ್ಲವೇ ಇಲ್ಲ.

೬೨. ಆ ಕಿಂಪುರುಷ ಮೊದಲಾದ ಸ್ಥಾನಗಳಲ್ಲಿ ಕೃತಯುಗ, ತ್ರೇತಾಯುಗ, ಮೊದಲಾದ ಯುಗಕಲ್ಪನೆ ಮುಂತಾದ ಕಲ್ಪನೆಗಳೇ ಇಲ್ಲ. ಆ ಪ್ರತಿಯೊಂದು ವರ್ಷದಲ್ಲಿಯೂ ಏಳುಏಳು ಕುಲಪರ್ವತಗಳಿರುವವು. ಆ ಪರ್ವತಗಳಿಂದ ನೂರಾರು ಪುಣ್ಯನದಿಗಳು ಹೊರಟಿರುವವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಭುವನಕೋಶದ್ವೀಪವರ್ಣನವೆಂಬ
ಹದಿನೆಂಟನೆಯ ಅಧ್ಯಾಯವು ಮುಗಿದುದು

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕೋನವಿಂಶೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ಉತ್ತರೇಣ ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣೇ ।
ವರ್ಷಂ ತದ್ಭಾರತಂ ನಾಮ ಭಾರತೀ ಯತ್ರ ಸಂತತಿಃ ॥ ೧ ॥

ನವಯೋಜನಸಾಹಸ್ರೋ ವಿಸ್ತಾರಶ್ಚ ದ್ವಿಜೋತ್ತಮಾಃ ।
ಕರ್ಮಭೂಮಿರಿಯಂ ಸ್ವರ್ಗಮಪವರ್ಗಂ ಚ ಪೃಚ್ಛತಾಂ ॥ ೨ ॥

ಹತ್ತೊಂಭತ್ತನೆಯ ಅಧ್ಯಾಯ

೧. ಸೂತಮುನಿಯು ಹೇಳಿದನು.—ಎಲೈ ಮುನಿಗಳೇ, ಸಾಗರಕ್ಕೆ ಉತ್ತರದಲ್ಲಿಯೂ ಹಿಮಾಲಯಕ್ಕೆ ದಕ್ಷಿಣದಲ್ಲಿಯೂ ಇರುವ ಮಧ್ಯಪ್ರದೇಶಕ್ಕೆ ಭಾರತವರ್ಷವೆಂದು ಹೆಸರು. ಇಲ್ಲಿ ಭರತಚಕ್ರವರ್ತಿಯ ಸಂತತಿಯವರು ಆಳುತ್ತಿರುವರು.

೨. ಈ ಭಾರತವು ಒಂಭತ್ತುಸಾವಿರ ಯೋಜನ ವಿಸ್ತಾರವಾಗಿರುವದು. ಸ್ವರ್ಗವನ್ನೋ ಇಲ್ಲವೇ ಮುಕ್ತಿಯನ್ನೋ ಅಪೇಕ್ಷಿಸುವವರಿಗೆ ಈ ಭಾರತವು ಕರ್ಮಭೂಮಿಯು. ಇಲ್ಲಿ ಕರ್ಮಾನುಷ್ಠಾನಮಾಡಿ ಸ್ವರ್ಗಮೋಕ್ಷಗಳನ್ನು ಪಡೆಯಬಹುದು.

shrinath.udupa@gmail.com

ಮಹೇಂದ್ರೋ ಮಲಯಃ ಸಹ್ಯಃ ಶುಕ್ತಿಮಾನೃಕ್ಷಪರ್ವತಃ ।
ವಿಂಧ್ಯಶ್ಚ ಪಾರಿಯಾತ್ರಶ್ಚ ಸಪ್ತಾತ್ರ ಕುಲಪರ್ವತಾಃ ॥ ೩ ॥

ಅತಃ ಸಂಪ್ರಾಪ್ಯತೇ ಸ್ವರ್ಗೋ ಮುಕ್ತಿಮಸ್ಮಾತ್ಪ್ರಯಾತಿ ವೈ ।
ತಿರ್ಯಕ್ತ್ವಂ ನರಕಂ ಚಾಪಿ ಯಾಂತ್ಯತಃ ಪುರುಷಾ ದ್ವಿಜಾಃ ॥ ೪ ॥

ಇತಃ ಸ್ವರ್ಗಶ್ಚ ಮೋಕ್ಷಶ್ಚ ಮಧ್ಯಂ ಚಾಂತೇ ಚ ಗಚ್ಛತಿ ।
ನ ಖಲ್ವನ್ಯತ್ರ ಮರ್ತ್ಯಾನಾಂ ಕರ್ಮಭೂಮೌ ವಿಧೀಯತೇ ॥ ೫ ॥

ಭಾರತಸ್ಯಾಸ್ಯ ವರ್ಷಸ್ಯ ನವ ಭೇದಾನ್ನಿಶಾಮಯ ।
ಇಂದ್ರದ್ವೀಪಃ ಕೇತುಮಾಂಶ್ಚ ತಾಮ್ರಪರ್ಣೋ ಗಭಸ್ತಿಮಾನ್ ॥ ೬ ॥

ನಾಗದ್ವೀಪಸ್ತಥಾ ಸೌಮ್ಯೋ ಗಂಧರ್ವಸ್ತ್ವಥ ವಾರುಣಃ ।
ಅಯಂ ತು ನವಮಸ್ತೇಷಾಂ ದ್ವೀಪಃ ಸಾಗರಸಂವೃತಃ ॥ ೭ ॥

---

೩. ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಾನ್, ಋಕ್ಷಗಿರಿ, ವಿಂಧ್ಯ, ಪಾರಿಯಾತ್ರಗಳೆಂಬ ಏಳು ಕುಲಪರ್ವತಗಳು ಈ ಭಾರತದಲ್ಲಿ ಇರುವವು.

೪. ಈ ಭಾರತದಲ್ಲಿಯೇ ಕರ್ಮವನ್ನಾಚರಿಸಿ ಸ್ವರ್ಗವನ್ನು ಪಡೆಯಬಹುದು. ಇಲ್ಲಿಯೇ ಆತ್ಮಚಿಂತನಮಾಡಿ ಮುಕ್ತಿಯನ್ನು ಪಡೆಯಬಹುದು. ಇಲ್ಲಿ ಪಾಪವನ್ನು ಮಾಡಿದ ನರನು ನರಕವನ್ನೂ, ಪಶು ಮುಂತಾದ ಕೀಳು ಜನ್ಮವನ್ನೂ ಪಡೆಯುವನು.

೫. ಈ ಭಾರತದಲ್ಲಿಯೇ ನರನು ಕರ್ಮಾನುಷ್ಠಾನಮಾಡಿ ಆಗಾಗ ಸ್ವರ್ಗವನ್ನು ಪಡೆಯುವನು. ಕೊನೆಯಲ್ಲಿ ಸುಖದುಃಖಮಯವಾದ ಸಂಸಾರದಲ್ಲಿ ಬೇಸರಗೊಂಡು ವಿರಕ್ತನಾಗಿ ಜ್ಞಾನಮಾರ್ಗವನ್ನವಲಂಬಿಸಿ ಇಲ್ಲಿಯೇ ಮುಕ್ತಿಯನ್ನೈದುವನು. ಭಾರತವನ್ನು ಬಿಟ್ಟು ಇನ್ನೆಲ್ಲಿಯೂ ಮುಕ್ತಿಗೆ ಅಥವಾ ಸ್ವರ್ಗಕ್ಕಾಗಿ ಕರ್ಮವು ವಿಹಿತವಾಗಿಲ್ಲ.

೬-೭. ಭಾರತದ ಒಂಭತ್ತು ದ್ವೀಪಗಳನ್ನು ಹೇಳುವೆನು.—ಇಂದ್ರದ್ವೀಪ, ಕೇತುಮಾನ್ದ್ವೀಪ, ತಾಮ್ರಪರ್ಣದ್ವೀಪ, ಗಭಸ್ತಿಮಾನ್ದ್ವೀಪ, ನಾಗದ್ವೀಪ, ಸೌಮ್ಯದ್ವೀಪ, ಗಂಧರ್ವದ್ವೀಪ, ವಾರುಣದ್ವೀಪ, ಭಾರತದ್ವೀಪ ಹೀಗೆ ಒಂಭತ್ತು ದ್ವೀಪಗಳಿರುವವು. ಒಂಭತ್ತನೆಯದಾದ ಈ ದ್ವೀಪದ ಸುತ್ತಲೂ ಸಾಗರವಿರುವುದು.

shrinath.udupa@gmail.com

ಯೋಜನಾನಾಂ ಸಹಸ್ರಂ ಚ ದ್ವೀಪೋಽಯಂ ದಕ್ಷಿಣೋತ್ತರಾತ್ ।
ಪೂರ್ವೇ ಕಿರಾತಾಸ್ತಿಷ್ಠಂತಿ ಪಶ್ಚಿಮೇ ಯವನಾಃ ಸ್ಥಿತಾಃ ॥ ೮ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಮಧ್ಯೇ ಶೂದ್ರಾಶ್ಚ ಭಾಗಶಃ ।
ಇಜ್ಯಾಯುದ್ಧವಣಿಜ್ಯಾದ್ಯೈವೃತ್ತಿಮಂತೋ ವ್ಯವಸ್ಥಿತಾಃ ॥ ೯ ॥

ಶತದ್ರುಚಂದ್ರಭಾಗಾದ್ಯಾ ಹಿಮವತ್ಪಾದನಿಃಸೃತಾಃ ।
ವೇದಸ್ಮೃತಿಮುಖಾಶ್ಚಾನ್ಯಾಃ ಪಾರಿಯಾತ್ರೋದ್ಭವಾ ಮುನೇ ॥ ೧೦ ॥

ನರ್ಮದಾಸುರಮಾದ್ಯಾಶ್ಚ ನದ್ಯೋ ವಿಂಧ್ಯವಿನಿಸ್ಸೃತಾಃ ।
ತಾಪೀಪಯೋಷ್ಣೀನಿರ್ವಿಂಧ್ಯಾಕಾವೇರೀಪ್ರಮುಖಾಶ್ಚ ತಾಃ ॥ ೧೧ ॥

ಋಕ್ಷಪಾದೋದ್ಭವಾ ಹ್ಯೇತಾಃ ಶ್ರುತಾಃ ಪಾಪಂ ಹರಂತಿ ಯಾಃ ।
ಗೋದಾವರೀಭೀಮರಥೀಕೃಷ್ಣವೇಣ್ಯಾದಿಕಾಸ್ತಥಾ ॥ ೧೨ ॥

---

೮. ಈ ಒಂಭತ್ತನೆಯ ದ್ವೀಪವು ದಕ್ಷಿಣದಿಂದ ಉತ್ತರದಿಕ್ಕಿನವರೆಗೆ ಹರಡಿದ್ದು ಸಾವಿರ ಯೋಜನ ವಿಸ್ತಾರವಾಗಿರುವದು. ಇದಕ್ಕೆ ಪೂರ್ವಪ್ರದೇಶದಲ್ಲಿ ಕಿರಾತರು ಇರುವರು. ಪಶ್ಚಿಮದಲ್ಲಿ ಯವನರು ಇರುವರು.

೯. ಈ ಭಾರತದಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರೆಂಬ ನಾಲ್ಕುವರ್ಣದವರು ಮುಖ್ಯವಾಗಿದ್ದು ತಮತಮಗುಚಿತವಾದ ಕರ್ಮಗಳನ್ನು ಮಾಡಿಕೊಂಡಿರುವರು.

೧೦. ಶತದ್ರುನದಿ, ಚಂದ್ರಭಾಗಾನದಿ ಮುಂತಾದುವುಗಳು ಹಿಮಾಲಯದಿಂದ ಹೊರಟಿರುವವು. ವೇದಸ್ಮೃತಿ ಮೊದಲಾದ ಕೆಲವು ನದಿಗಳು ಪಾರಿಯಾತ್ರಗಿರಿಯಿಂದ ಹೊರಟಿರುವವು.

೧೧. ನರ್ಮದಾ, ಸುರಮಾ ಮೊದಲಾದ ನದಿಗಳು ವಿಂಧ್ಯಗಿರಿಯಿಂದ ಹೊರಟಿರುವವು. ತಾಪಿ, ಪಯೋಷ್ಣೀ, ನಿರ್ವಿಂಧ್ಯಾ, ಕಾವೇರೀ ಮೊದಲಾದ ನದಿಗಳು ಋಕ್ಷಪರ್ವತದಿಂದ ಹೊರಟಿರುವವು. ಈ ನದಿಗಳ ಹೆಸರುಗಳನ್ನು ಕೇಳುವದರಿಂದಲೇ ಪಾಪನಾಶವಾಗುವದು.

೧೨. ಗೋದಾವರೀ, ಭೀಮರಥೀ, ಕೃಷ್ಣವೇಣೀ ಮೊದಲಾದ ನದಿಗಳು ಸಹ್ಯಪರ್ವತದಿಂದ ಹೊರಟಿರುವವು. ಈ ನದಿಗಳು ಪಾಪ ಮತ್ತು ಭಯಗಳೆರಡನ್ನೂ ಹೋಗಲಾಡಿಸುವವು.

shrinath.udupa@gmail.com

ಸಹ್ಯಪಾದೋದ್ಭವಾ ನದ್ಯಃ ಸ್ಮೃತಾಃ ಪಾಪಭಯಾಪಹಾಃ ।
ಕೃತಮಾಲಾತಾಮ್ರಪರ್ಣೀಪ್ರಮುಖಾ ಮಲಯೋದ್ಭವಾಃ ॥ ೧೩ ॥

ತ್ರಿಸಾಂಧ್ಯಋಷಿಕುಲ್ಯಾದ್ಯಾ ಮಹೇಂದ್ರಪ್ರಭವಾಃ ಸ್ಮೃತಾಃ ।
ಋಷಿಕುಲ್ಯಾಕುಮಾರಾದ್ಯಾಃ ಶುಕ್ತಿಮತ್ಪಾದಸಂಭವಾಃ ॥ ೧೪ ॥

ಆಸಾಂ ನದ್ಯುಪನದ್ಯಶ್ಚ ಸಂತ್ಯನ್ಯಾಸ್ತು ಸಹಸ್ರಶಃ ।
ತಾಸ್ವಿಮೇ ಕುರುಪಂಚಾಲಮಧ್ಯದೇಶಾದಯೋ ಜನಾಃ ॥ ೧೫ ॥

ಪೂರ್ವದೇಶಾದಿಕಾಶ್ಚೈವ ಕಾಮರೂಪನಿವಾಸಿನಃ ।
ಪೌಂಡ್ರಾಃ ಕಲಿಂಗಾ ಮಗಧಾ ದಾಕ್ಷಿಣಾತ್ಯಾಶ್ಚ ಸರ್ವಶಃ ॥ ೧೬ ॥

ತಥಾಪರಾಂತ್ಯಾಃ ಸೌರಾಷ್ಟ್ರಾಃ ಶೂದ್ರಾಭೀರಾಸ್ತಥಾರ್ಬುದಾಃ ।
ಮಾರುಕಾ ಮಾಲವಾಶ್ಚೈವ ಪಾರಿಯಾತ್ರನಿವಾಸಿನಃ ॥ ೧೭ ॥

ಸೌವೀರಾಃ ಸೈಂಧವಾಹೂಣಾಃ ಶಾಲ್ವಾಃ ಶಾಕಲವಾಸಿನಃ ।
ಮದ್ರಾರಾಮಾಸ್ತಥಾಂಬಷ್ಠಾಃ ಪಾರಸೀಕಾದಯಸ್ತಥಾ ॥ ೧೮ ॥

೧೩–೧೪. ಕೃತಮಾಲಾ, ತಾಮ್ರಪರ್ಣೀ ಮೊದಲಾದ ನದಿಗಳು ಮಲಯ ಗಿರಿಯಲ್ಲಿ ಹುಟ್ಟುವವು. ತ್ರಿಸಾಂಧ್ಯನದಿ ಋಷಿಕಲ್ಯಾನದಿ ಮುಂತಾದುವುಗಳು ಮಹೇಂದ್ರಗಿರಿಯಲ್ಲಿ ಹುಟ್ಟುವವು. ಋಷಿಕಲ್ಯಾನದಿ ಕುಮಾರನದಿ ಮುಂತಾದುವುಗಳು ಶುಕ್ತಿಮತ್ಪರ್ವತದಲ್ಲಿ ಜನಿಸುವವು. ಈ ನದಿಗಳ ಉಪನದಿಗಳೂ ಮತ್ತು ಮಹಾನದಿಗಳೂ ಇನ್ನೂ ಸಾವಿರಾರು ಇರುವವು.

೧೫-೧೯. ಈ ನದಿಗಳ ತೀರದಲ್ಲಿ ವಾಸವಾಗಿದ್ದ ಕುರುದೇಶದ ಜನಗಳು, ಪಂಚಾಲದೇಶದವರು, ಮಧ್ಯದೇಶದವರು, ಪೂರ್ವದೇಶದವರು, ಕಾಮರೂಪದೇಶದವರು, ಪುಂಡ್ರದೇಶದವರು, ಕಲಿಂಗದೇಶದವರು, ಮಗಧದೇಶದವರು, ದಕ್ಷಿಣದೇಶದವರು, ಪಾರಾಂತ್ಯದೇಶದವರು, ಸೌರಾಷ್ಟ್ರದೇಶದವರು, ಶೂದ್ರರು, ಗೊಲ್ಲರು, ಅರ್ಬುದರು, ಮಾರಕದೇಶದವರು, ಮಾಲವದೇಶದವರು, ಪಾರಿಯಾತ್ರಗಿರಿಯಲ್ಲಿ ವಾಸವಾಗಿರುವವರು, ಸೌವೀರದೇಶದವರು, ಸಿಂಧುದೇಶದವರು, ಪಹ್ಲವದೇಶದವರು,

shrinath.udupa@gmail.com

ಆಸಾಂ ಪಿಬಂತಿ ಸಲಿಲಂ ವಸಂತಿ ಸರಿತಾಂ ಸದಾ ।
ಸಮೋಪೇತಾ ಮಹಾಭಾಗಾ ಹೃಷ್ಟಪುಷ್ಟಜನಾಕುಲಾಃ ॥ ೧೯ ॥

ವಸಂತಿ ಭಾರತೇ ವರ್ಷೇ ಯುಗಾನ್ಯತ್ರ ಮಹಾಮುನೇ ।
ಕೃತಂ ತ್ರೇತಾ ದ್ವಾಪರಂ ಚ ಕಲಿಶ್ಚಾನ್ಯತ್ರ ನ ಕ್ವಚಿತ್ ॥ ೨೦ ॥

ತಪಸ್ತಪ್ಯಂತಿ ಯತಯೋ ಜುಹ್ವತೇ ಚಾತ್ರ ಯಜ್ವಿನಃ ।
ದಾನಾನಿ ಚಾತ್ರ ದೀಯಂತೇ ಪರಲೋಕಾರ್ಥಮಾದರಾತ್ ॥ ೨೧ ॥

ಪುರುಷೈರ್ಯಜ್ಞಪುರುಷೋ ಜಂಬೂದ್ವೀಪೇ ಸದೇಜ್ಯತೇ ।
ಯಜ್ಞೈರ್ಯಜ್ಞಮಯೋ ವಿಷ್ಣುರನ್ಯದ್ವೀಪೇಷು ಚಾನ್ಯಥಾ ॥ ೨೨ ॥

ಅತ್ರಾಪಿ ಭಾರತಂ ಶ್ರೇಷ್ಠಂ ಜಂಬೂದ್ವೀಪೇ ಮಹಾಮುನೇ ।
ಯತೋ ಹಿ ಕರ್ಮಭೂರೇಷಾ ಯತೋಽನ್ಯಾ ಭೋಗಭೂಮಯಃ ॥ ೨೩ ॥

ಶಾಲ್ವರು, ಶಾಕಲದ್ವೀಪವಾಸಿಗಳು, ಮದ್ರದೇಶದವರು, ಅಂಬಷ್ಠರು, ಪಾರಸೀಕದೇಶದವರು, ಇವರೆಲ್ಲರೂ ಈ ನದಿಗಳ ಪವಿತ್ರಜಲವನ್ನು ಸೇವಿಸಿ ಆರೋಗ್ಯವಂತರೂ ದೃಢಕಾಯರೂ ಸುಖಿಗಳೂ ಆಗಿರುವರು.

೨೦. ಈ ಭಾರತದೇಶದಲ್ಲಿ ಕೃತ, ತ್ರೇತಾ, ದ್ವಾಪರ, ಕಲಿಗಳೆಂಬ ನಾಲ್ಕು ಯುಗಗಳಿರುವವು. ಈ ಯುಗಗಣನೆಯು ಇನ್ನೆಲ್ಲಿಯೂ ಇರುವುದಿಲ್ಲ.

೨೧. ಈ ಭರತಖಂಡದಲ್ಲಿ ಯತಿಗಳು ತಪಸ್ಸನ್ನು ಮಾಡುವರು. ಪರಲೋಕವನ್ನು ಸಾಧಿಸುವುದಕ್ಕೋಸ್ಕರ ಇಲ್ಲಿ ದೀಕ್ಷಿತರು ಯಜ್ಞಹೋಮಾದಿಗಳನ್ನು ಮಾಡುವರು. ದಾನವನ್ನೂ ಮಾಡುವರು.

೨೨. ಈ ಜಂಬೂದ್ವೀಪದಲ್ಲಿ ಪುರುಷರು ಯಾಗ ಮತ್ತು ಹೋಮಗಳಿಂದ ಯಜ್ಞಪುರುಷನನ್ನೂ ಮತ್ತು ಯಜ್ಞರೂಪಿಯಾದ ನಾರಾಯಣನನ್ನೂ ಆರಾಧಿಸುವರು.

೨೩. ಎಲೈ ಮುನಿಶ್ರೇಷ್ಠರೇ, ಈ ಜಂಬೂದ್ವೀಪದಲ್ಲಿಯೂ ಭಾರತವು ಶ್ರೇಷ್ಠವಾದುದು. ಇದು ಕರ್ಮಭೂಮಿಯು. ಮಿಕ್ಕಪ್ರದೇಶಗಳು ಕರ್ಮಫಲವನ್ನನುಭವಿಸಬಹುದಾದ ಭೋಗಭೂಮಿಗಳು. ಅಲ್ಲಿ ಕರ್ಮವೇ ಇಲ್ಲ.

shrinath.udupa@gmail.com

ಅತ್ರ ಜನ್ಮಸಹಸ್ರಾಣಾಂ ಸಹಸ್ರೈರಪಿ ಸತ್ತಮ ।
ಕದಾಚಿಲ್ಲಭತೇ ಜಂತುರ್ಮಾನುಷ್ಯಂ ಪುಣ್ಯಸಂಚಯಾತ್ ॥ ೨೪ ॥

ಗಾಯಂತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತು ಯೇ ಭಾರತಭೂಮಿಭಾಗೇ ।
ಸ್ವರ್ಗಾಪವರ್ಗಾಸ್ಪದಹೇತುಭೂತೇ
ಭವಂತಿ ಭೂಯಃ ಪುರುಷಾ ಮನುಷ್ಯಾಃ ॥ ೨೫ ॥

ಕರ್ಮಾಣ್ಯಸಂಕಲ್ಪಿತತತ್ಫಲಾನಿ
ಸಂನ್ಯಸ್ಯ ವಿಷ್ಣೌ ಪರಮಾತ್ಮರೂಪೇ ।
ಅವಾಪ್ಯ ತಾಂ ಕರ್ಮಮಹೀಮನಂತೇ
ತಸ್ಮಿಲ್ಲಯಂ ಯೇ ತ್ವಮಲಾಃ ಪ್ರಯಾಂತಿ ॥ ೨೬ ॥

ಜಾನೀಮ ನೋ ತತ್ಕ್ವವಯಂ ವಿಲೀನೇ
ಸ್ವರ್ಗಪ್ರದೇ ಕರ್ಮಣಿ ದೇಹಬಂಧಂ ।
ಪ್ರಾಪ್ಸ್ಯಂತಿ ಧನ್ಯಾಃ ಖಲು ತೇ ಮನುಷ್ಯಾ
ಯೇ ಭಾರತೇನೇಂದ್ರಿಯ ವಿಪ್ರಹೀನಾಃ ॥ ೨೭ ॥

---

೨೪. ಈ ಭಾರತದಲ್ಲಿ ಪ್ರಾಣಿಯು ಕೋಟಿಕೋಟಿ ಜನ್ಮಗಳಿಗೊಂದುಸಾರಿ ತನ್ನ ಪುಣ್ಯಪರಿಪಾಕದಿಂದ ಮನುಷ್ಯಜನ್ಮವನ್ನು ಪಡೆಯುವದು.

೨೫. ಈ ಭಾರತದ ವಿಷಯದಲ್ಲಿ ದೇವತೆಗಳು ಹೀಗೆ ಹೊಗಳುವರು.—ಸ್ವರ್ಗವನ್ನೂ ಮೋಕ್ಷವನ್ನೂ ಸಾಧಿಸಿಕೊಡುವ ಕರ್ಮಭೂಮಿಯಾದ ಈ ಭಾರತದಲ್ಲಿ ಯಾವ ಮನುಷ್ಯರು ಜನ್ಮವೆತ್ತುವರೋ ಅವರೇ ಧನ್ಯರು.

೨೬. ಕರ್ಮಭೂಮಿಯಾದೀ ಭಾರತದಲ್ಲಿ ಜನ್ಮವೆತ್ತಿ ಮಹಾಮುನಿಗಳು, ಪರಮೇಶ್ವರಾರ್ಪಣಬುದ್ಧಿಯಿಂದ ನಿಷ್ಕಾಮಕರ್ಮವನ್ನಾಚರಿಸಿ ಕೊನೆಯಲ್ಲಿ ನಾಶವಿಲ್ಲದವನೂ ಪರಮಾತ್ಮನೂ ಆದ ವಿಷ್ಣುವಿನಲ್ಲಿ ಐಕ್ಯವನ್ನು ಹೊಂದುವರು.

೨೭. ಸ್ವರ್ಗಮೋಕ್ಷಗಳನ್ನುಂಟುಮಾಡುವ ಈ ಭಾರತವರ್ಷದಲ್ಲಿ ನಮಗೆ ಜನ್ಮವೆತ್ತುವದಕ್ಕೇ ಅವಕಾಶವಿಲ್ಲವು. ಪುಣ್ಯಾತ್ಮರಾದ ಮಾನವರು ಇಂತಹ ಪುಣ್ಯ

shrinath.udupa@gmail.com

ನವವರ್ಷಂ ಚ ಭೋ ವಿಪ್ರಾ ಜಂಬೂದ್ವೀಪಮಿದಂ ಮಯಾ ।
ಲಕ್ಷಯೋಜನವಿಸ್ತಾರಂ ಸಂಕ್ಷೇಪಾತ್ಕಥಿತಂ ದ್ವಿಜಾಃ ॥ ೨೮ ॥

ಜಂಬೂದ್ವೀಪಂ ಸಮಾವೃತ್ಯ ಲಕ್ಷಯೋಜನವಿಸ್ತರಃ ।
ಭೋ ದ್ವಿಜಾ ವಲಯಾಕಾರಃ ಸ್ಥಿತಃ ಕ್ಷಾರೋದಧಿರ್ಬಹಿಃ ॥ ೨೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಭುವನಕೋಶಜಂಬೂ-
ದ್ವೀಪನಿರೂಪಣಂ ನಾಮೈಕೋನವಿಂಶೋಽಧ್ಯಾಯಃ

ಭೂಮಿಯಲ್ಲಿ ಜನ್ಮವೆತ್ತುವರು. ಅವರೇ ಧನ್ಯರು. ಅವರಲ್ಲಿಯೂ ಕರ್ಮಕ್ಕೆ ಅನುಕೂಲವಾದ ಅಂಗಸೌಕರ್ಯವುಳ್ಳ ಮಾನವರು ಮತ್ತೂ ಧನ್ಯರು.

೨೮. ಎಲೈ ಮುನಿಗಳೇ, ಒಂಭತ್ತುವರ್ಷ [ದೇಶ] ಗಳನ್ನೊಳಗೊಂಡ ಜಂಬೂದ್ವೀಪವನ್ನು ಸಂಕ್ಷೇಪವಾಗಿ ಹೇಳಿರುವೆನು. ಇದು ಲಕ್ಷಯೋಜನ ವಿಸ್ತಾರವಾಗಿ ಇರುವದು.

೨೯. ಈ ಜಂಬೂದ್ವೀಪದ ಸುತ್ತಲೂ ಹೊರಗಡೆ ಲಕ್ಷಯೋಜನವಿಸ್ತಾರವಾದ ಕ್ಷಾರಸಮುದ್ರವು ಚಕ್ರದ ಆಕಾರವಾಗಿ ವ್ಯಾಪಿಸಿರುವದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಭುವನಕೋಶವರ್ಣನೆಯಲ್ಲಿ ಜಂಬೂದ್ವೀಪ
ನಿರೂಪಣವೆಂಬ ಹತ್ತೊಂಭತ್ತನೆಯ ಅಧ್ಯಾಯವು
ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ವಿಂಶೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ಕ್ಷಾರೋದೇನ ಯಥಾ ದ್ವೀಪೋ ಜಂಬೂಸಂಜ್ಞೋಽಭಿವೇಷ್ಟಿತಃ ।
ಸಂವೇಷ್ಟ್ಯ ಕ್ಷಾರಮುದಧಿಂ ಪ್ಲಕ್ಷದ್ವೀಪಸ್ತಥಾ ಸ್ಥಿತಃ ॥ ೧ ॥

ಜಂಬೂದ್ವೀಪಸ್ಯ ವಿಸ್ತಾರಃ ಶತಸಾಹಸ್ರಸಂಮಿತಃ ।
ಸ ಏವ ದ್ವಿಗುಣೋ ವಿಪ್ರಾಃ ಪ್ಲಕ್ಷದ್ವೀಪೇಽಪ್ಯುದಾಹೃತಃ ॥ ೨ ॥

ಸಪ್ತ ಮೇಧಾತಿಥೇಃ ಪುತ್ರಾಃ ಪ್ಲಕ್ಷದ್ವೀಪೇಶ್ವರಸ್ಯ ವೈ ।
ಶ್ರೇಷ್ಠಃ ಶಾಂತಭಯೋ ನಾಮ ಶಿಶಿರಸ್ತದನಂತರಂ ॥ ೩ ॥

ಇಪ್ಪತ್ತನೆಯ ಅಧ್ಯಾಯವು

೧. ಸೂತಮುನಿಯು ಹೇಳಿದನು.—ಎಲೈ ಮುನಿಗಳೇ, ಜಂಬೂದ್ವೀಪವನ್ನು ಕ್ಷೀರಸಾಗರವು ಸುತ್ತಿರುವಂತೆ ಪ್ಲಕ್ಷದ್ವೀಪವು ಲವಣ [ಉಪ್ಪು] ಸಮುದ್ರವನ್ನು ಸುತ್ತುವರೆದಿರುವದು.

೨. ಜಂಬೂದ್ವೀಪವು ಲಕ್ಷಯೋಜನವಿಸ್ತಾರವಾಗಿರುವದು. ಆದರೆ ಪ್ಲಕ್ಷ ದ್ವೀಪವು ಆದರೆಡರಷ್ಟು ಅಂದರೆ ಎರಡುಲಕ್ಷ ಯೋಜನ ವಿಸ್ತಾರವಾಗಿರುವದು.

೩-೪. ಪ್ಲಕ್ಷದ್ವೀಪದ ಅಧಿಪತಿಯು ಮೇಧಾತಿಥಿಯು. ಅವನಿಗೆ ಶಾಂತಭಯ, ಸಿಶಿರ, ಸುಖೋದಯ, ಆನಂದ, ಶಿವ, ಕ್ಷೇಮಕ, ಧ್ರುವರೆಂಬೇಳು ಜನರು ಮಕ್ಕಳು.

shrinath.udupa@gmail.com

ಸುಖೋದಯಸ್ತಥಾऽನಂದಃ ಶಿವಃ ಕ್ಷೇಮಕ ಏವ ಚ ।
ಧ್ರುವಶ್ಚ ಸಪ್ತಮಸ್ತೇಷಾಂ ಪ್ಲಕ್ಷದ್ವೀಪೇಶ್ವರಾ ಹಿ ತೇ ॥ ೪ ॥

ಪೂರ್ವಂ ಶಾಂತಭಯಂ ವರ್ಷಂ ಶಿಶಿರಂ ಸುಖದಂ ತಥಾ ।
ಆನಂದಂ ಚ ಶಿವಂ ಚೈವ ಕ್ಷೇಮಕಂ ಧ್ರುವಮೇವ ಚ ॥ ೫ ॥

ಮರ್ಯಾದಾಕಾರಕಾಸ್ತೇಷಾಂ ತಥಾऽನ್ಯೇ ವರ್ಷಪರ್ವತಾಃ ।
ಸಪ್ತೈವ ತೇಷಾಂ ನಾಮಾನಿ ಶೃಣುಧ್ವಂ ಮುನಿಸತ್ತಮಾಃ ॥ ೬ ॥

ಗೋಮೇದಶ್ಚೈವ ಚಂದ್ರಶ್ಚ ನಾರದೋ ದುಂದುಭಿಸ್ತಥಾ ।
ಸೋಮಕಃ ಸುಮನಾಃ ಶೈಲೋ ವೈಭ್ರಾಜಶ್ಚೈವ ಸಪ್ತಮಃ ॥ ೭ ॥

ವರ್ಷಾಚಲೇಷು ರಮ್ಯೇಷು ವರ್ಷೇಷ್ವೇತೇಷು ಚಾನಘಾಃ ।
ವಸಂತಿ ದೇವಗಂಧರ್ವಸಹಿತಾಃ ಸಹಿತಂ ಪ್ರಜಾಃ ॥ ೮ ॥

ಇವರಲ್ಲಿ ಶಾಂತಭಯನು ಹಿರಿಯವನು. ಧ್ರುವನು ಕಿರಿಯವನು. ಇವರೆಲ್ಲರೂ ಪ್ಲಕ್ಷದ್ವೀಪವನ್ನಾಳುತ್ತಲಿರುವರು.

೫. ಆ ದ್ವೀಪದಲ್ಲಿ ಶಾಂತಭಯ, ಶಿಶಿರ, ಸುಖದ, ಆನಂದ, ಶಿವ, ಕ್ಷೇಮಕ, ಧ್ರುವಗಳೆಂಬ ಏಳು ವರ್ಷಗಳು (ದೇಶಗಳು) ಇರುವವು.

೬. ಆ ಏಳು ದೇಶಗಳ ಅಂಚಿನಲ್ಲಿ ಅವನ್ನು ವಿಭಾಗಿಸುವ ಏಳು ವರ್ಷಪರ್ವತಗಳಿರುವವು. ಅವುಗಳ ಹೆಸರನ್ನು ಹೇಳುವೆನು ಕೇಳಿರಿ.

೭. ಗೋಮೇಧಗಿರಿ, ಚಂದ್ರಗಿರಿ, ನಾರದಪರ್ವತ, ದುಂದುಭಿಗಿರಿ, ಸೋಮಕಾಚಲ, ಸುಮನಗಿರಿ, ವೈಭ್ರಾಜಾಚಲ ಇವುಗಳೇ ಪ್ಲಕ್ಷದ್ವೀಪದಲ್ಲಿರುವ ಏಳು ಪರ್ವತಗಳು.

೮. ಈ ಪರ್ವತಗಳಲ್ಲಿ ಮತ್ತು ಮಿಕ್ಕ ಪ್ರದೇಶಗಳಲ್ಲಿ ಪುಣ್ಯಶಾಲಿಗಳಾದ ದೇವತೆಗಳು, ಗಂಧರ್ವರು ಮೊದಲಾದವರು ಸುಖವಾಗಿ ವಾಸವಾಗಿರುವರು.

shrinath.udupa@gmail.com

ತೇಷು ಪುಣ್ಯಾ ಜನಪದಾ ವೀರಾ ನ ಮ್ರಿಯತೇ ಜನಃ ।
ನಾಽಧಯೋ ವ್ಯಾಧಯೋ ವಾಽಪಿ ಸರ್ವಕಾಲಸುಖಂ ಹಿ ತತ್ ॥ ೯ ॥

ತೇಷಾಂ ನದ್ಯಶ್ಚ ಸಪ್ತೈವ ವರ್ಷಾಣಾಂ ತು ಸಮುದ್ರಗಾಃ ।
ನಾಮತಸ್ತಾಃ ಪ್ರವಕ್ಷ್ಯಾಮಿ ಶ್ರುತಾಃ ಪಾಪಂ ಹರಂತಿ ಯಾಃ ॥ ೧೦ ॥

ಅನುತಪ್ತಾ ಶಿಖಾ ಚೈವ ವಿಪ್ರಾಶಾ ತ್ರಿದಿವಾ ಕ್ರಮುಃ ।
ಅಮೃತಾ ಸುಕೃತಾ ಚೈವ ಸಪ್ತೈತಾಸ್ತತ್ರ ನಿಮ್ನಗಾಃ ॥ ೧೧ ॥

ಏತೇ ಶೈಲಾಸ್ತಥಾ ನದ್ಯಃ ಪ್ರಧಾನಾಃ ಕಥಿತಾ ದ್ವಿಜಾಃ ।
ಕ್ಷುದ್ರನದ್ಯಸ್ತಥಾ ಶೈಲಾಸ್ತತ್ರ ಸಂತಿ ಸಹಸ್ರಶಃ ॥ ೧೨ ॥

ತಾಃ ಪಿಬಂತಿ ಸದಾ ಹೃಷ್ಟಾ ನದೀರ್ಜನಪದಾಸ್ತು ತೇ ।
ಅವಸರ್ಪಿಣೀ ನದೀ ತೇಷಾಂ ನ ಚೈವೋತ್ಸರ್ಪಿಣೀ ದ್ವಿಜಾಃ ॥ ೧೩ ॥

---

೯. ಆ ಪ್ಲಕ್ಷದ್ವೀಪದಲ್ಲಿ ಜನಗಳೆಲ್ಲರೂ ಪುಣ್ಯವಂತರು, ವೀರರು. ಅವರಿಗೆ ಮರಣವಿಲ್ಲ. ವ್ಯಥೆಯಾಗಲೀ ರೋಗವಾಗಲೀ ಇಲ್ಲ. ಅಲ್ಲಿ ಯಾವಾಗಲೂ ಸುಖವೇ ವಿನಾ ದುಃಖವು ಸ್ವಲ್ಪವೂ ಇಲ್ಲ.

೧೦. ಪ್ಲಕ್ಷದ್ವೀಪದ ಆ ಏಳು ವರ್ಷಗಳಲ್ಲಿ ಏಳು ಮಹಾನದಿಗಳಿರುವವು. ಅವುಗಳ ಹೆಸರನ್ನು ಕೇಳಿದ ಮಾತ್ರದಿಂದಲೇ ಪಾಪವು ನಾಶವಾಗುವದು. ಅವುಗಳ ಹೆಸರನ್ನು ಹೇಳುವೆನು.

೧೧. ಅನುತಪ್ತಾ, ಶಿಖಾ, ವಿಪ್ರಾನದಿ, ತ್ರಿದಿವಾ, ಕ್ರಮುನದಿ, ಅಮೃತಾ, ಸುಕೃತಾನದಿ ಈ ಏಳು ನದಿಗಳು ಪ್ಲಕ್ಷದ್ವೀಪದ ಮಹಾನದಿಗಳು.

೧೨. ಹೀಗೆ ನಿಮಗೆ ಪ್ಲಕ್ಷದ್ವೀಪದ ಏಳು ಕುಲಪರ್ವತಗಳನ್ನೂ ಏಳು ಮಹಾನದಿಗಳನ್ನೂ ಹೇಳಿರುವೆನು. ಅಲ್ಲಿ ಇನ್ನೂ ಉಪನದಿಗಳೂ, ಸಾಮಾನ್ಯವಾದ ಪರ್ವತಗಳೂ ಸಹ ಸಾವಿರಾರು ಇರುವವು.

೧೩. ಆ ನದಿಗಳ ಪವಿತ್ರವೂ ನಿರ್ಮಲವೂ ಆದ ನೀರನ್ನು ಅಲ್ಲಿಯ ಜನಗಳು ಕುಡಿದು ತೃಪ್ತಿಹೊಂದುವರು. ಆ ನದಿಗಳೆಲ್ಲವೂ ಕೆಳಮುಖವಾಗಿಯೇ ಹರಿಯುವವು. ಮೇಲುಮುಖವಾಗಿ ಹರಿಯುವದಿಲ್ಲ.

shrinath.udupa@gmail.com

ನ ತೇಷ್ವಸ್ತಿ ಯುಗಾವಸ್ಥಾ ತೇಷು ಸ್ಥಾನೇಷು ಸಪ್ತಸು ।
ತ್ರೇತಾಯುಗಸಮಃ ಕಾಲಃ ಸರ್ವದೈವ ದ್ವಿಜೋತ್ತಮಾಃ ॥ ೧೪ ॥

ಪ್ಲಕ್ಷದ್ವೀಪಾದಿಕೇ ವಿಪ್ರಾಃ ಶಾಕದ್ವೀಪಾಂತಿಕೇಷು ವೈ ।
ಪಂಚವರ್ಷಸಹಸ್ರಾಣಿ ಜನಾ ಜೀವಂತ್ಯನಾಮಯಾಃ ॥ ೧೫ ॥

ಧರ್ಮಶ್ಚತುರ್ವಿಧಸ್ತೇಷು ವರ್ಣಾಶ್ರಮವಿಭಾಗಜಃ ।
ವರ್ಣಾಶ್ಚ ತತ್ರ ಚತ್ವಾರಸ್ತಾನ್ ಬುಧಾಃ ಪ್ರವದಾಮಿ ವಃ ॥ ೧೬ ॥

ಆರ್ಯಕಾಃ ಕುರವಶ್ಚೈವ ವಿವಿಶ್ವಾ ಭಾವಿನಶ್ಚ ಯೇ ।
ವಿಪ್ರಕ್ಷತ್ರಿಯವೈಶ್ಯಾಸ್ತೇ ಶೂದ್ರಾಶ್ಚ ಮುನಿಸತ್ತಮಾಃ ॥ ೧೭ ॥

ಜಂಬೂವೃಕ್ಷಪ್ರಮಾಣಸ್ತು ತನ್ಮಧ್ಯೇ ಸುಮಹಾತರುಃ ।
ಪ್ಲಕ್ಷಸ್ತಂನಾಮಸಂಜ್ಞೋಽಯಂ ಪ್ಲಕ್ಷದ್ವೀಪೋ ದ್ವಿಜೋತ್ತಮಾಃ ॥ ೧೮ ॥

---

೧೪. ಆ ಪ್ಲಕ್ಷದ್ವೀಪದ ದೇಶಗಳಲ್ಲಿ ಯುಗವ್ಯವಸ್ಥೆಯು ಇಲ್ಲ. ಭಾರತದಲ್ಲಿನ ತ್ರೇತಾಯುಗದ ಕಾಲದಂತೆ ಅಲ್ಲಿ ಯಾವಾಗಲೂ ಇರುವದು.

೧೫. ಪ್ಲಕ್ಷದ್ವೀಪವೊದಲುಗೊಂಡು ಶಾಕದ್ವೀಪದವರೆಗಿನ ದೇಶಗಳಲ್ಲಿರುವ ಜನಗಳೆಲ್ಲರೂ ಐದುಸಾವಿರವರ್ಷಗಳ ವರೆಗೆ ಆರೋಗ್ಯವಾಗಿ ಬದುಕಿರುವರು.

೧೬. ಆ ದೇಶಗಳಲ್ಲಿ ವರ್ಣಾಶ್ರಮಗಳ ವಿಭಾಗಕ್ಕನುಸಾರವಾಗಿ ನಾಲ್ಕು ಧರ್ಮಗಳಿರುವವು. ನಾಲ್ಕು ವರ್ಣಗಳೂ ಅಲ್ಲಿರುವವು. ಎಲೈ ಮುನಿಗಳೇ, ಅವನ್ನು ನಿಮಗೆ ಹೇಳುವೆನು.

೧೭. ಆರ್ಯಕರು, ಕುರುಗಳು, ವಿವಿಶ್ವರು, ಭಾವಿಗಳು ಎಂದು ನಾಲ್ಕು ವರ್ಣಗಳು ಇರುವವು. ಈ ವರ್ಣಗಳೇ ಮುಂದೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರಾಗುವರು.

೧೮. ಆ ದ್ವೀಪದ ಮಧ್ಯದಲ್ಲಿ ಜಂಬೂವೃಕ್ಷದಷ್ಟು ಎತ್ತರವಾದ ಒಂದು ದೊಡ್ಡ ಪ್ಲಕ್ಷ [ಅಶ್ವತ್ಥ] ತರುವಿರುವದು. ಆ ಪ್ಲಕ್ಷವೃಕ್ಷದ ಹೆಸರಿನಿಂದಲೇ ಆ ದ್ವೀಪಕ್ಕೆ ಪ್ಲಕ್ಷದ್ವೀಪವೆಂದು ಹೆಸರು ಬಂದಿತು.

shrinath.udupa@gmail.com

ಇಜ್ಯತೇ ತತ್ರ ಭಗವಾಂಸ್ತೈರ್ವರ್ಣೈರಾರ್ಯಕಾದಿಭಿಃ ।
ಸೋಮರೂಪೀ ಜಗತ್ಸ್ರಷ್ಟಾ ಸರ್ವಃ ಸರ್ವೇಶ್ವರೋ ಹರಿಃ ॥ ೧೯ ॥

ಪ್ಲಕ್ಷದ್ವೀಪಪ್ರಮಾಣೇನ ಪ್ಲಕ್ಷದ್ವೀಪಃ ಸಮಾವೃತಃ ।
ತಥೈವೇಕ್ಷುರಸೋದೇನ ಪರಿವೇಷಾನುಕಾರಿಣಾ ॥ ೨೦ ॥

ಇತ್ಯೇತದ್ವೋ ಮುನಿಶ್ರೇಷ್ಠಾಃ ಪ್ಲಕ್ಷದ್ವೀಪ ಉದಾಹೃತಃ ।
ಸಂಕ್ಷೇಪೇಣ ಮಯಾ ಭೂಯಃ ಶಾಲ್ಮಲಂ ತಂ ನಿಬೋಧತ ॥ ೨೧ ॥

ಶಾಲ್ಮಲಸ್ಯೇಶ್ವರೋ ವೀರೋ ವಪುಷ್ಮಾಂಸ್ತತ್ಸುತಾ ದ್ವಿಜಾಃ ।
ತೇಷಾಂ ತು ನಾಮ ಸಂಜ್ಞಾನಿ ಸಪ್ತವರ್ಷಾಣಿ ತಾನಿ ವೈ ॥ ೨೨ ॥

ಶ್ವೇತೋಽಥ ಹರಿತಶ್ಚೈವ ಜೀಮೂತೋ ರೋಹಿತಸ್ತಥಾ ।
ವೈದ್ಯುತೋ ಮಾನಸಶ್ಚೈವ ಸುಪ್ರಭಶ್ಚ ದ್ವಿಜೋತ್ತಮಾಃ ॥ ೨೩ ॥

---

೧೯. ಆ ದ್ವೀಪದಲ್ಲಿ ಆರ್ಯರು ಮೊದಲಾದ ನಾಲ್ಕುವರ್ಣದವರೂ ಜಗತ್ಕರ್ತನೂ ಪರಮೇಶ್ವರನೂ, ಜಗನ್ಮಯನೂ ಆದ ಹರಿಯನ್ನು ಚಂದ್ರರೂಪದಿಂದ ಆರಾಧಿಸುವರು.

೨೦. ಆ ಪ್ಲಕ್ಷದ್ವೀಪವನ್ನು ಅದರಷ್ಟೇ ಎರಡುಲಕ್ಷಯೋಜನ ವಿಸ್ತಾರವಾದ ಇಕ್ಷುಸಮುದ್ರವು ಚಂದ್ರಸೂರ್ಯಮಂಡಲಗಳ ಮೇಲ್ಭಾಗಗಳಲ್ಲಿ ಕಟ್ಟುವ ಪರಿವೇಷ ಮಂಡಲಾಕಾರದಂತೆ ಸುತ್ತುವರಿದಿರುವದು.

೨೧. ಎಲೈ ಮುನಿಗಳೇ, ಹೀಗೆ ನಿಮಗೆ ಪ್ಲಕ್ಷದ್ವೀಪವನ್ನು ಸಂಕ್ಷೇಪವಾಗಿ ವರ್ಣಿಸಿರುವೆನು. ಮುಂದೆ ಶಾಲ್ಮಲದ್ವೀಪವನ್ನು ಹೇಳುವೆನು, ಕೇಳಿರಿ.

೨೨. ಶಾಲ್ಮಲದ್ವೀಪಕ್ಕೆ ವಪುಷ್ಮಾನ್ ಎಂಬುವವನು ರಾಜನು. ಅವನಿಗೆ ಏಳುಜನ ಮಕ್ಕಳು. ಆ ಕುಮಾರರ ಹೆಸರಿನಿಂದಲೇ ಏಳು ವರ್ಷಗಳಾಗಿರುವವು.

೨೩. ಶ್ವೇತ, ಹರಿತ, ಜೀಮೂತ, ರೋಹಿತ, ವೈದ್ಯುತ, ಮಾನಸ, ಸುಪ್ರಭರೆಂಬುವವರೇ ಆ ಏಳುಜನ ಕುಮಾರರು. ಇವರೆಲ್ಲರೂ ಶಾಲ್ಮಲದ್ವೀಪದ ಒಂದೊಂದು ವರ್ಷವನ್ನು ಆಳುವರು.

shrinath.udupa@gmail.com

ಶಾಲ್ಮಲಶ್ಚ ಸಮುದ್ರೋಽಸೌ ದ್ವೀಪೇನೇಕ್ಷುರಸೋದಕಃ ।
ವಿಸ್ತಾರಾದ್ದ್ವಿಗುಣೇನಾಥ ಸರ್ವತಃ ಸಂವೃತಃ ಸ್ಥಿತಃ ॥ ೨೪ ॥

ತತ್ರಾಪಿ ಪರ್ವತಾಃ ಸಪ್ತ ವಿಜ್ಞೇಯಾ ರತ್ನಯೋನಯಃ ।
ವರ್ಷಾಭಿವ್ಯಂಜಕಾಸ್ತೇ ತು ತಥಾ ಸಪ್ತೈವ ನಿಮ್ನಗಾಃ ॥ ೨೫ ॥

ಕುಮುದಶ್ಚೋನ್ನತಶ್ಚೈವ ತೃತೀಯಸ್ತು ಬಲಾಹಕಃ ।
ದ್ರೋಣೋ ಯತ್ರ ಮಹೌಷಧ್ಯಃ ಸ ಚತುರ್ಥೋ ಮಹೀಧರಃ ॥ ೨೬ ॥

ಕಂಕಸ್ತು ಪಂಚಮಃ ಷಷ್ಠೋ ಮಹಿಷಃ ಸಪ್ತಮಸ್ತಥಾ ।
ಕಕುದ್ಮಾನ್ಪರ್ವತವರಃ ಸರಿನ್ನಾಮಾನ್ಯತೋ ದ್ವಿಜಾಃ ॥ ೨೭ ॥

ಶ್ರೋಣೀ ತೋಯಾ ವಿತೃಷ್ಣಾ ಚ ಚಂದ್ರಾ ಶುಕ್ರಾ ವಿಮೋಚನೀ ।
ನಿವೃತ್ತಿಃ ಸಪ್ತಮೀ ತಾಸಾಂ ಸ್ಮೃತಾಸ್ತಾಃ ಪಾಪಶಾಂತಿದಾಃ ॥ ೨೮ ॥

---

೨೪. ಈ ಶಾಲ್ಮಲದ್ವೀಪವು ಇಕ್ಷುಸಮುದ್ರದ ಎರಡರಷ್ಟು ಅಂದರೆ ನಾಲ್ಕು ಲಕ್ಷ ಯೋಜನ ವಿಸ್ತಾರವಾಗಿದ್ದು ಆ ಸಮುದ್ರವನ್ನು ಸುತ್ತುವರಿದಿರುವದು.

೨೫. ಆ ದ್ವೀಪದಲ್ಲೂ ಏಳು ಮಹಾಗಿರಿಗಳು. ಆಯಾಯ ವರ್ಷಗಳ ಅಂಚಿನಲ್ಲಿದ್ದು ಆ ದೇಶಗಳನ್ನು ಪ್ರತ್ಯೇಕಿಸಿ ತೋರಿಸುವವು. ಹಾಗೇ ಅಲ್ಲಿ ಏಳು ಮಹಾನದಿಗಳೂ ಇರುವವು. ಇಲ್ಲಿನ ಗಿರಿಗಳಲ್ಲಿ ರತ್ನಗಳು ಹೇರಳವಾಗಿ ಸಿಕ್ಕುವವು.

೨೬. ಕುಮುದ, ಉನ್ನತ ಇವುಗಳು ಒಂದನೆಯ ಮತ್ತು ಎರಡನೆಯ ಪರ್ವತಗಳು. ಬಲಾಹಕವು ಮೂರನೆಯದು. ದ್ರೋಣಗಿರಿಯು ನಾಲ್ಕನೆಯದು. ಇದರಲ್ಲಿ ಸಂಜೀವಿನಿ ಮುಂತಾದ ಓಷಧಿಲತೆಗಳಿರುವವು.

೨೭. ಕಂಕಗಿರಿಯು ಐದನೆಯದು. ಆರನೆಯದು ಮಹಿಷಗಿರಿಯು. ಕುಕುದ್ಮಾನ್ ಎಂಬ ಗಿರಿಯು ಏಳನೆಯದು. ಮುನಿಗಳೇ, ಮುಂದೆ ನದಿಗಳ ಹೆಸರನ್ನು ಹೇಳುವೆನು.

೨೮. ಶ್ರೋಣೀ, ತೋಯಾ, ವಿತೃಷ್ಣಾ, ಚಂದ್ರಾ, ಶುಕ್ರಾ, ವಿಮೋಚನೀ, ನಿವೃತ್ತಿ ಈ ಏಳು ನದಿಗಳು ಶಾಲ್ಮಲದ್ವೀಪದಲ್ಲಿರುವವು. ಇವೆಲ್ಲವೂ ಪಾಪನಾಶನವನ್ನು ಮಾಡುವವು.

shrinath.udupa@gmail.com

ಶ್ವೇತಂ ಚ ಲೋಹಿತಂ ಚೈವ ಜೀಮೂತಂ ಹರಿತಂ ತಥಾ ।
ವೈದ್ಯುತಂ ಮಾನಸಂ ಚೈವ ಸುಪ್ರಭಂ ನಾಮ ಸಪ್ತಮಂ ॥ ೨೯ ॥

ಸಪ್ತೈತಾನಿ ತು ವರ್ಷಾಣಿ ಚಾತುರ್ವರ್ಣ್ಯಯುತಾನಿ ಚ ।
ವರ್ಣಾಶ್ಚ ಶಾಲ್ಮಲೇಯೇ ಚ ವಸಂತ್ಯೇಷು ದ್ವಿಜೋತ್ತಮಾಃ ॥ ೩೦ ॥

ಕಪಿಲಾಶ್ಚಾರುಣಾಃ ಪೀತಾಃ ಕೃಷ್ಣಾಶ್ಚೈವ ಪೃಥಕ್ಪೃಥಕ್ ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚೈವ ಯಜಂತಿ ತಂ ॥ ೩೧ ॥

ಭಗವಂತಂ ಸಮಸ್ತಸ್ಯ ವಿಷ್ಣುಮಾತ್ಮಾನಮವ್ಯಯಂ ।
ವಾಯುಭೂತಂ ಮಖಶ್ರೇಷ್ಠೈರ್ಯಜ್ವಾನೋ ಯಜ್ಞಸಂಸ್ಥಿತಂ ॥ ೩೨ ॥

ದೇವಾನಾಮತ್ರ ಸಾಂನಿಧ್ಯಮತೀವ ಸುಮನೋಹರೇ ।
ಶಾಲ್ಮಲಿಶ್ಚ ಮಹಾವೃಕ್ಷೋ ನಾಮನಿರ್ವೃತ್ತಿಕಾರಕಃ ॥ ೩೩ ॥

೨೯–೩೦. ಶ್ವೇತ, ಲೋಹಿತ, ಜೀಮೂತ, ಹರಿತ, ವೈದ್ಯುತ, ಮಾನಸ, ಸುಪ್ರಭಗಳೆಂಬ ಏಳು ವರ್ಷಗಳು ಶಾಲ್ಮಲದ್ವೀಪದಲ್ಲಿರುವವು. ಈ ದೇಶಗಳಲ್ಲಿ ನಾಲ್ಕು ವರ್ಣಗಳೂ ಇರುವವು.

೩೧. ಕಪಿಲ, ಅರುಣ, ಪೀತ, ಕೃಷ್ಣರೆಂಬ ನಾಲ್ಕು ಜಾತಿಯ ಜನಗಳಿರುವರು. ಇವರಲ್ಲಿಯೇ ಬೇರೆಬೇರೆಯಾಗಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರೂ ಇರುವರು.

೩೨–೩೩. ಈ ನಾಲ್ಕು ವರ್ಣದವರೂ ಜಗದೊಡೆಯನೂ ಪರಮಾತ್ಮನೂ ಅನಂತನೂ ಆದ ಹರಿಯನ್ನು ಇಲ್ಲಿ ವಾಯುವಿನ ರೂಪದಿಂದ ಅರ್ಚಿಸುವರು. ಶ್ರೋತ್ರಿಯರು ಮಹಾಯಾಗಗಳಿಂದ ಯಜ್ಞಪುರುಷನನ್ನಾರಾಧಿಸುವರು. ಈ ಮನೋಹರವಾದ ದ್ವೀಪದಲ್ಲಿ ದೇವತೆಗಳ ಸಾನ್ನಿಧ್ಯವು ತುಂಬಾ ಇರುವುದು. ಶಾಲ್ಮಲಿ [ಬೂರುಗದಮರ] ಎಂಬ ಮಹಾತರುವೊಂದು ಈ ದ್ವೀಪದಲ್ಲಿರುವುದು, ಆದಕಾರಣ ದ್ವೀಪಕ್ಕೆ ಶಾಲ್ಮಲದ್ವೀಪವೆಂದು ಹೆಸರಾಯಿತು.

shrinath.udupa@gmail.com

ಏಷ ದ್ವೀಪಃ ಸಮುದ್ರೇಣ ಸುರೋದೇನ ಸಮಾವೃತಃ ।
ನಿಸ್ತಾರಾಚ್ಛಾಲ್ಮಲೇಶ್ಚೈವ ಸಮೇನ ತು ಸಮಂತತಃ ॥ ೩೪ ॥

ಸುರೋದಕಃ ಪರಿವೃತಃ ಕುಶದ್ವೀಪೇನ ಸರ್ವತಃ ।
ಶಾಲ್ಮಲಸ್ಯ ತು ವಿಸ್ತಾರಾದ್ದ್ವಿಗುಣೇನ ಸಮಂತತಃ ॥ ೩೫ ॥

ಜ್ಯೋತಿಷ್ಮತಃ ಕುಶದ್ವೀಪೇ ಶೃಣುಧ್ವಂ ತಸ್ಯ ಪುತ್ರಕಾನ್ ।
ಉದ್ಭಿದೋ ವೇಣುಮಾಂಶ್ಚೈವ ಸ್ವೈರಥೋ ರಂಧನೋ ಧೃತಿಃ ॥ ೩೬ ॥

ಪ್ರಭಾಕರೋಽಥ ಕಪಿಲಸ್ತನ್ನಾಮ್ನಾ ವರ್ಷಪದ್ಧತಿಃ ।
ತಸ್ಯಾಂ ವಸಂತಿ ಮನುಜೈಃ ಸಹ ದೈತೇಯದಾನವಾಃ ॥ ೩೭ ॥

ತಥೈವ ದೇವಗಂಧರ್ವಾ ಯಕ್ಷಕಿಂಪುರುಷಾದಯಃ ।
ವರ್ಣಾಸ್ತತ್ರಾಪಿ ಚತ್ವಾರೋ ನಿಜಾನುಷ್ಠಾನತತ್ಪರಾಃ ॥ ೩೮ ॥

ದಮಿನಃ ಶುಷ್ಮಿಣಃ ಸ್ನೇಹಾ ಮಾಂದಹಾಶ್ಚ ದ್ವಿಜೋತ್ತಮಾಃ ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚಾನುಕ್ರಮೋದಿತಾಃ ॥ ೩೯ ॥

---

೩೪. ಶಾಲ್ಮಲದ್ವೀಪದಷ್ಟೇ ನಾಲ್ಕು ಲಕ್ಷಯೋಜನ ವಿಸ್ತಾರವಾಗಿರುವ ಸುರಾಸಾಗರವು ಆ ದ್ವೀಪವನ್ನು ಸುತ್ತುವರಿದಿರುವದು.

೩೫. ಈ ಸುರಾಸಾಗರವನ್ನು ಶಾಲ್ಮಲದ್ವೀಪದ ಎರಡರಷ್ಟು ಎಂದರೆ ಎಂಟು ಲಕ್ಷಯೋಜನ ವಿಸ್ತಾರವಾದ ಕುಶದ್ವೀಪವು ಸುತ್ತಲೂ ಆವರಿಸಿರುವದು.

೩೬–೩೭. ಕುಶದ್ವೀಪದಲ್ಲಿ ಜ್ಯೋತಿಷ್ಮತನೆಂಬುವವನು ರಾಜನು. ಅವನಿಗೆ ಉದ್ಭಿದ, ವೇಣುಮಾನ್, ಸ್ವೈರಥ, ರಂಧನ, ಧೃತಿ, ಪ್ರಭಾಕರ, ಕಪಿಲರೆಂಬ ಏಳು ಮಂದಿ ಮಕ್ಕಳು. ಅವರ ಹೆಸರಿನಿಂದ ಏಳು ವರ್ಷಗಳಾಗಿರುವವು.

೩೮. ಆ ದ್ವೀಪದಲ್ಲಿ ಮನುಷ್ಯರು, ದೈತ್ಯರು, ದಾನವರು, ದೇವತೆಗಳು, ಗಂಧರ್ವರು, ಯಕ್ಷರು, ಕಿನ್ನರರು ಇವರೆಲ್ಲರೂ ವಾಸವಾಗಿರುವರು.

೩೯. ಅಲ್ಲಿ ಬ್ರಾಹ್ಮಣರು ಇಂದ್ರಿಯದಮನವುಳ್ಳವರಾಗಿರುವರು. ಕ್ಷತ್ರಿಯರು ಕೆಚ್ಚಿನಿಂದ ಕೂಡಿರುವರು. ವೈಶ್ಯರು ಸ್ನೇಹಪರರಾಗಿರುವರು. ಶೂದ್ರರು ಮಾಂದಹ(?)ರಾಗಿರುವರು. ಇವರೆಲ್ಲರೂ ತಮ್ಮ ತಮ್ಮ ಧರ್ಮಗಳಲ್ಲಿ ಆಸಕ್ತರಾಗಿರುವರು.

shrinath.udupa@gmail.com

ಯಥೋಕ್ತಕರ್ಮಕರ್ತೃತ್ವಾತ್ಸ್ವಾಧಿಕಾರಕ್ಷಯಾಯ ತೇ ।
ತತ್ರ ತೇ ತು ಕುಶದ್ವೀಪೇ ಬ್ರಹ್ಮರೂಪಂ ಜನಾರ್ದನಂ ॥ ೪೦ ॥

ಯಜಂತಃ ಕ್ಷಪಯಂತ್ಯುಗ್ರಮಧಿಕಾರಫಲಪ್ರದಂ ।
ವಿದ್ರುಮೋ ಹೇಮಶೈಲಶ್ಚ ದ್ಯುತಿಮಾನ್ ಪುಷ್ಟಿಮಾಂಸ್ತಥಾ ॥ ೪೧ ॥

ಕುಶೇಶಯೋ ಹರಿಶ್ಚೈವ ಸಪ್ತಮೋ ಮಂದರಾಚಲಃ ।
ವರ್ಷಾಚಲಾಸ್ತು ಸಪ್ತೈತೇ ದ್ವೀಪೇ ತತ್ರ ದ್ವಿಜೋತ್ತಮಾಃ ॥ ೪೨ ॥

ನದ್ಯಶ್ಚ ಸಪ್ತ ತಾಸಾಂ ತು ವಕ್ಷ್ಯೇ ನಾಮಾನ್ಯನುಕ್ರಮಾತ್ ।
ಧೂತಪಾಪಾ ಶಿವಾ ಚೈವ ಪವಿತ್ರಾ ಸಂಮತಿಸ್ತಥಾ ॥ ೪೩ ॥

ವಿದ್ಯುದಂಭೋ ಮಹೀ ಚಾನ್ಯಾ ಸರ್ವಪಾಪಹರಾಸ್ತ್ವಿಮಾಃ ।
ಅನ್ಯಾಃ ಸಹಸ್ರಶಸ್ತತ್ರ ಕ್ಷುದ್ರನದ್ಯಸ್ತಥಾಚಲಾಃ ॥ ೪೪ ॥

---

೪೦. ಆ ದ್ವೀಪದಲ್ಲಿನ ಅಧಿಕಾರಿಗಳು ತಮ್ಮ ಕಾರ್ಯಗಳನ್ನು ಮಾಡುತ್ತಾ ತಮ್ಮ ಕಷ್ಟದಾಯಕವಾದ ಅಧಿಕಾರವನ್ನು ಕಳೆದುಕೊಂಡು ಮುಕ್ತಿಪಡೆಯುವದಕ್ಕಾಗಿ ಬ್ರಹ್ಮರೂಪನೂ ಭಕ್ತಪ್ರಿಯನೂ ಆದ ನಾರಾಯಣನನ್ನು ಉಗ್ರ [ದೇವ] ರೂಪದಿಂದ ಆರಾಧಿಸುವರು.

೪೧–೪೨. ವಿದ್ರುಮ, ಹೇಮಶೈಲ, ದ್ಯುತಿಮಾನ್, ಪುಷ್ಟಿಮಾನ್ ಕುಶೇಶಯ ಹರಿ, ಮಂದರಗಳೆಂಬೀ ಏಳು ಪರ್ವತಗಳು, ಈ ದ್ವೀಪದಲ್ಲಿ ಆಯಾಯ ದೇಶಗಳ ಅಂಚಿನಲ್ಲಿರುವವು.

೪೩–೪೪. ಧೂತಪಾಪಾ, ಶಿವಾ, ಪವಿತ್ರಾ, ಸಮ್ಮತಿ, ವಿದ್ಯುದಂಭನದ, ಮಹೀನದಿಗಳೆಂಬ ಏಳು ನದಿಗಳು ಕುಶದ್ವೀಪದಲ್ಲಿರುವವು. ಇವೆಲ್ಲವೂ ಪಾಪವನ್ನು ನಾಶಮಾಡುವವು. ಇವಲ್ಲದೆ ಇನ್ನೂ ಕೆಲವು ಉಪನದಿಗಳೂ ಬೆಟ್ಟಗಳೂ ಅಲ್ಲಿ ಸಾವಿರಾರು ಇರುವವು. ಆ ದ್ವೀಪದಲ್ಲಿ ದೊಡ್ಡದೊಂದು ಕುಶಸ್ತಂಬ [ದರ್ಭೆಗಳವನ] ವು ಇರುವದು. ಅದರಿಂದಲೇ ಆ ದ್ವೀಪಕ್ಕೆ ಕುಶದ್ವೀಪವೆಂದು ಹೆಸರಾಯಿತು.

shrinath.udupa@gmail.com

ಕುಶದ್ವೀಪೇ ಕುಶಸ್ತಂಬಃ ಸಂಜ್ಞಯಾ ತಸ್ಯ ತತ್ಸ್ಮೃತಂ ।
ತತ್ಪ್ರಮಾಣೇನ ಸ ದ್ವೀಪೋ ಘೃತೋದೇನ ಸಮಾವೃತಃ ॥ ೪೫ ॥

ಘೃತೋದಶ್ಚ ಸಮುದ್ರೋ ವೈ ಕ್ರೌಂಚದ್ವೀಪೇನ ಸಂವೃತಃ ।
ಕ್ರೌಂಚದ್ವೀಪೋ ಮುನಿಶ್ರೇಷ್ಠಾಃ ಶ್ರೂಯತಾಂ ಚಾಪರೋ ಮಹಾನ್ ॥ ೪೬ ॥

ಕುಶದ್ವೀಪಸ್ಯ ವಿಸ್ತಾರಾದ್ದ್ವಿಗುಣೋ ಯಸ್ಯ ವಿಸ್ತರಃ ।
ಕ್ರೌಂಚದ್ವೀಪೇ ದ್ಯುತಿಮತಃ ಪುತ್ರಾಃ ಸಪ್ತ ಮಹಾತ್ಮನಃ ॥ ೪೭ ॥

ತನ್ನಾಮಾನಿ ಚ ವರ್ಷಾಣಿ ತೇಷಾಂ ಚಕ್ರೇ ಮಹಾಮನಾಃ ।
ಕುಶಗೋ ಮಂದಗಶ್ಚೋಷ್ಣಃ ಪೀವರೋಽಥಾಂಧಕಾರಕಃ ॥ ೪೮ ॥

ಮುನಿಶ್ಚ ದುಂದುಭಿಶ್ಚೈವ ಸಪ್ತೈತೇ ತತ್ಸುತಾ ದ್ವಿಜಾಃ ।
ತತ್ರಾಪಿ ದೇವಗಂಧರ್ವಸೇವಿತಾಃ ಸುಮನೋರಮಾಃ ॥ ೪೯ ॥

೪೫-೪೬. ಕುಶದ್ವೀಪದಷ್ಟೆ (ಎಂಟುಲಕ್ಷಯೋಜನ) ವಿಸ್ತಾರವಾದ ಘೃತ ಸಮುದ್ರವು ಆ ದ್ವೀಪವನ್ನು ಸುತ್ತುವರಿದಿರುವದು. ಆ ಘೃತೋದವನ್ನು (ಘೃತ ಸಮುದ್ರವನ್ನು) ಅದಕ್ಕಿಂತಲೂ ವಿಸ್ತಾರವಾದ ಕ್ರೌಂಚದ್ವೀಪವು ಸುತ್ತುವರಿದಿರುವದು. ಎಲೈ ಮುನಿಗಳೇ, ಆ ಕ್ರೌಂಚದ್ವೀಪವನ್ನು ಈಗ ವರ್ಣಿಸುವೆನು, ಕೇಳಿರಿ.

೪೭. ಈ ಕ್ರೌಂಚದ್ವೀಪವು ಕುಶದ್ವೀಪದ ಎರಡರಷ್ಟು (ಹದಿನಾರುಲಕ್ಷ ಯೋಜನ) ವಿಸ್ತಾರವಾಗಿರುವದು. ಆ ದ್ವೀಪದಲ್ಲಿ ದ್ಯುತಿಮಂತನೆಂಬುವನು ರಾಜನು. ಅವನಿಗೆ ಏಳುಮಂದಿ ಮಕ್ಕಳು. ಆ ಮಕ್ಕಳ ಹೆಸರಿನಿಂದಲೇ ಏಳುವರ್ಷಗಳಾಗಿ ಆ ದ್ವೀಪವನ್ನು ಆ ಮಹಾತ್ಮನು ವಿಭಾಗಿಸಿರುವನು.

೪೮. ಕುಶಗ, ಮಂದಗ, ಉಷ್ಣ, ಪೀವರ, ಅಂಧಕಾರ, ದುಂದುಭಿ, ಮುನಿ ಗಳೆಂಬುವವರೇ ಏಳುಮಂದಿ ದ್ಯುತಿಮಂತನ ಮಕ್ಕಳು.

೪೯. ಆ ದ್ವೀಪದಲ್ಲೂ ದೇವತೆಗಳಿಂದಲೂ ಗಂಧರ್ವರಿಂದಲೂ ಸೇವಿಸಲ್ಪಡುವ ಏಳು ಮನೋಹರವಾದ ಪರ್ವತಗಳಿರುವವು. ಅವುಗಳ ಹೆಸರನ್ನು ಹೇಳುವೆನು.

shrinath.udupa@gmail.com

ವರ್ಷಾಚಲಾ ಮುನಿಶ್ರೇಷ್ಠಾಸ್ತೇಷಾಂ ನಾಮಾನಿ ಭೋ ದ್ವಿಜಾಃ ।
ಕ್ರೌಂಚಶ್ಚ ವಾಮನಶ್ಚೈವ ತೃತೀಯಶ್ಚಾಂಧಕಾರಕಃ ॥ ೫೦ ॥

ದೇವವ್ರತೋ ಧಮುಶ್ಚೈವ ತಥಾಽನ್ಯಃ ಪುಂಡರೀಕವಾನ್ ।
ದುಂದುಭಿಶ್ಚ ಮಹಾಶೈಲೋ ದ್ವಿಗುಣಾಸ್ತೇ ಪರಸ್ಪರಂ ॥ ೫೧ ॥

ದ್ವೀಪಾದ್ದ್ವೀಪೇಷು ಯೇ ಶೈಲಾಸ್ತಥಾ ದ್ವೀಪಾನಿ ತೇ ತಥಾ ।
ವರ್ಷೇಷ್ವೇತೇಷು ರಮ್ಯೇಷು ವರ್ಷಶೈಲವರೇಷು ಚ ॥ ೫೨ ॥

ನಿವಸಂತಿ ನಿರಾತಂಕಾಃ ಸಹ ದೇವಗಣೈಃ ಪ್ರಜಾಃ ।
ಪುಷ್ಕಲಾ ಪುಷ್ಕರಾ ಧನ್ಯಾಸ್ತೇ ಖ್ಯಾತಾಶ್ಚ ದ್ವಿಜೋತ್ತಮಾಃ ॥ ೫೩ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚಾನುಕ್ರಮೋದಿತಾಃ ।
ತತ್ರ ನದ್ಯೋ ಮುನಿಶ್ರೇಷ್ಠಾ ಯಾಃ ಪಿಬಂತಿ ತು ತೇ ಸದಾ ॥ ೫೪ ॥

೫೦–೫೧. ಕ್ರೌಂಚಗಿರಿ, ವಾಮನಾಚಲ, ಅಂಧಕಾರಗಿರಿ, ದೇವವ್ರತಪರ್ವತ ಧಮುಗಿರಿ, ಪುಂಡರೀಕವತ್ಪರ್ವತ, ದುಂದುಭಿಗಿರಿ ಈ ಏಳು ಕೌಂಚದ್ವೀಪದ ಮಹಾ ಪರ್ವತಗಳು. ಇವುಗಳು ಒಂದಕ್ಕಿಂತೊಂದು ಎತ್ತರವಾಗಿರುವವು. ಒಂದು ದ್ವೀಪ ಮತ್ತೊಂದು ಬೆಟ್ಟ, ಮುಂದೆ ಮತ್ತೊಂದು ದ್ವೀಪ ಹೀಗೆ ದ್ವೀಪಗಳೂ ಶೈಲಗಳೂ ಬೇರೆಬೇರೆಯಾಗಿರುವವು.

೫೨. ಈ ದ್ವೀಪದ ಮನೋಹರವಾದ ವರ್ಷ [ದೇಶ] ಗಳಲ್ಲಿ ಮತ್ತು ಮಹಾ ಗಿರಿಗಳಲ್ಲಿ ಪ್ರಜೆಗಳೂ ದೇವತೆಗಳೂ ಯಾವ ಭಯವೂ ಇಲ್ಲದೇ ಸುಖವಾಗಿರುವರು.

೫೩. ಈ ದೇಶಗಳಲ್ಲಿ ಪುಷ್ಕಲರು, ಪುಷ್ಕರರು, ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಎಂಬ ವರ್ಣಗಳ ಪ್ರಜೆಗಳು ಸುಖವಾಗಿ ಧನ್ಯರಾಗಿರುವರು.

೫೪. ಆ ದ್ವೀಪದಲ್ಲಿ ಏಳು ಮಹಾನದಿಗಳಿರುವವು. ನೂರಾರು ಉಪನದಿಗಳಿರುವವು. ಜನಗಳು ಆ ನದಿಗಳ ಪವಿತ್ರವೂ ಮಧುರವೂ ಆದ ನೀರನ್ನು ಕುಡಿಯುವರು.

shrinath.udupa@gmail.com

ಸಪ್ತ ಪ್ರಧಾನಾಃ ಶತಶಸ್ತಥಾನ್ಯಾಃ ಕ್ಷುದ್ರನಿಮ್ನಗಾಃ ।
ಗೌರೀ ಕುಮುದ್ವತೀ ಚೈವ ಸಂಧ್ಯಾ ರಾತ್ರಿರ್ಮನೋಜವಾ ॥ ೫೫ ॥

ಖ್ಯಾತಿಶ್ಚ ಪುಂಡರೀಕಾ ಚ ಸಪ್ತೈತಾ ವರ್ಷನಿಮ್ನಗಾಃ ।
ತತ್ರಾಪಿ ವರ್ಣೈರ್ಭಗವಾನ್ ಪುಷ್ಕರಾದ್ಯೈರ್ಜನಾರ್ದನಃ ॥ ೫೬ ॥

ಧ್ಯಾನಯೋಗೈ ರುದ್ರರೂಪ ಇಜ್ಯತೇ ಯಜ್ಞಸಂನಿಧೌ ।
ಕ್ರೌಂಚದ್ವೀಪಃ ಸಮುದ್ರೇಣ ದಧಿಮಂಡೋದಕೇನ ತು ॥ ೫೭ ॥

ಆವೃತಃ ಸರ್ವತಃ ಕ್ರೌಂಚದ್ವೀಪತುಲ್ಯೇನ ಮಾನತಃ ।
ದಧಿಮಂಡೋದಕಶ್ಚಾಪಿ ಶಾಕದ್ವೀಪೇನ ಸಂವೃತಃ ॥ ೫೮ ॥

ಕ್ರೌಂಚದ್ವೀಪಸ್ಯ ವಿಸ್ತಾರದ್ವಿಗುಣೇನ ದ್ವಿಜೋತ್ತಮಾಃ ।
ಶಾಕದ್ವೀಪೇಶ್ವರಸ್ಯಾಪಿ ಭವ್ಯಸ್ಯ ಸುಮಹಾತ್ಮನಃ ॥ ೫೯ ॥

---

೫೫. ಗೌರೀನದಿ, ಕುಮುದ್ವತೀನದಿ, ಸಂಧ್ಯಾನದಿ, ರಾತ್ರಿನದಿ, ಮನೋಜವಾನದಿ, ಖ್ಯಾತಿನದಿ, ಪುಂಡರೀಕಾನದಿ ಈ ಏಳು ಆ ಕ್ರೌಂಚದ್ವೀಪದಲ್ಲಿನ ಏಳು ದೇಶಗಳಲ್ಲಿರುವ ಮಹಾನದಿಗಳು.

೫೬. ಆ ದ್ವೀಪದಲ್ಲಿ ಪುಷ್ಕರ ಮೊದಲಾದ ವರ್ಣದ ಜನಗಳು ರುದ್ರರೂಪನಾದ ಪರಮಾತ್ಮನನ್ನು ಧ್ಯಾನಯೋಗಗಳಿಂದಲೂ ಯಜ್ಞಗಳಿಂದಲೂ ಆರಾಧಿಸುವರು.

೫೭. ಕ್ರೌಂಚದ್ವೀಪವನ್ನು ಆ ದ್ವೀಪದಷ್ಟೇ [ಹದಿನಾರು ಲಕ್ಷ ಯೋಜನ] ವಿಸ್ತಾರವಾದ ದಧಿ (ಮೊಸರಿನ) ಸಮುದ್ರವು ಎಲ್ಲೆಡೆಯಲ್ಲಿಯೂ ವ್ಯಾಪಿಸಿ ಸುತ್ತುವರಿದಿರುವುದು.

೫೮. ಆ ದಧಿಸಮುದ್ರವು ಕ್ರೌಂಚದ್ವೀಪದ ಎರಡರಷ್ಟು [ಮೂವತ್ತೆರಡು ಲಕ್ಷಯೋಜನ] ವಿಸ್ತಾರವಾದ ಶಾಕದ್ವೀಪದಿಂದ ಸುತ್ತುವರಿಯಲ್ಪಟ್ಟಿರುವದು.

೫೯. ಶಾಕದ್ವೀಪದೊಡೆಯನು ಮಹಾತ್ಮನಾದ ಭವ್ಯಚಕ್ರವರ್ತಿಯು. ಅವನಿಗೆ ಏಳುಮಂದಿ ಮಕ್ಕಳು. ಅವರಿಗೆ ಆ ದ್ವೀಪವನ್ನು ಏಳುದೇಶಗಳಾಗಿ ಮಾಡಿ ಹಂಚಿಕೊಟ್ಟನು.

shrinath.udupa@gmail.com

ಸಪ್ತೈವ ತನಯಾಸ್ತೇಷಾಂ ದದೌ ವರ್ಷಾಣಿ ಸಪ್ತ ಸಃ ।
ಜಲದಶ್ಚ ಕುಮಾರಶ್ಚ ಸುಕುಮಾರೋ ಮನೀರಕಃ ॥ ೬೦ ॥

ಕುಸುಮೋದಶ್ಚ ಮೋದಾಕಿಃ ಸಪ್ತಮಶ್ಚ ಮಹಾದ್ರುಮಃ ।
ತತ್ಸಂಜ್ಞಾನ್ಯೇವ ತತ್ರಾಪಿ ಸಪ್ತವರ್ಷಾಣ್ಯನುಕ್ರಮಾತ್ ॥ ೬೧ ॥

ತತ್ರಾಪಿ ಪರ್ವತಾಃ ಸಪ್ತ ವರ್ಷವಿಚ್ಛೇದಕಾರಕಾಃ ।
ಪೂರ್ವಸ್ತತ್ರೋದಯಗಿರಿರ್ಜಲಧಾರಸ್ತಥಾಽಪರಃ ॥ ೬೨ ॥

ತಥಾ ರೈವತಕಃ ಶ್ಯಾಮಸ್ತಥೈವಾಂಭೋಗಿರಿರ್ದ್ವಿಜಾಃ ।
ಆಸ್ತಿಕೇಯಸ್ತಥಾ ರಮ್ಯಃ ಕೇಸರೀ ಪರ್ವತೋತ್ತಮಃ ॥ ೬೩ ॥

ಶಾಕಶ್ಚಾತ್ರ ಮಹಾವೃಕ್ಷಃ ಸಿದ್ಧಗಂಧರ್ವಸೇವಿತಃ ।
ಯತ್ಪತ್ರವಾತಸಂಸ್ಪರ್ಶಾದಾಹ್ಲಾದೋ ಜಾಯತೇ ಪರಃ ॥ ೬೪ ॥

ತತ್ರ ಪುಣ್ಯಾ ಜನಪದಾಶ್ಚಾತುರ್ವರ್ಣ್ಯಸಮನ್ವಿತಾಃ ।
ನಿವಸಂತಿ ಮಹಾತ್ಮಾನೋ ನಿರಾತಂಕಾ ನಿರಾಮಯಾಃ ॥ ೬೫ ॥

೬೦-೬೧. ಜಲದ, ಕುಮಾರ, ಸುಕುಮಾರ, ಮನೀರಕ, ಕುಸಮೋದ, ಮೋದಾಕಿ, ಮಹಾದ್ರುಮ ಇವರೇ ಭವ್ಯರಾಜನ ಏಳುಮಂದಿ ಮಕ್ಕಳು. ಇವರ ಹೆಸರಿನಿಂದಲೇ ಏಳು ದೇಶಗಳನ್ನು ಆ ರಾಜನು ವಿಂಗಡಿಸಿದನು.

೬೨-೬೩. ಆ ಶಾಕದ್ವೀಪದಲ್ಲೂ ಏಳು ಮಹಾಗಿರಿಗಳು ಏಳುದೇಶಗಳ ಅಂಚಿನಲ್ಲೊಂದೊಂದು ಇದ್ದು ಆ ದೇಶಗಳನ್ನು ಪ್ರತ್ಯೇಕಿಸುವವು. ಅವುಗಳಾವುವೆಂದರೆ ಉದಯಗಿರಿ, ಜಲಧಾರಗಿರಿ, ರೈವತಗಿರಿ, ಶ್ಯಾಮಗಿರಿ, ಅಂಭೋಗಿರಿ, ರಮ್ಯವಾದ ಆಸ್ತಿಕೇಯಪರ್ವತ, ಕೇಸರಗಿರಿ ಈ ಏಳು ಆ ದ್ವೀಪದಲ್ಲಿನ ಕುಲಪರ್ವತಗಳು.

೬೪. ಆ ದ್ವೀಪದಲ್ಲಿ ಶಾಕ ವೆಂಬ ದೊಡ್ಡ ತರುವಿರುವದು. ಅದನ್ನು ಸಿದ್ಧರೂ ಗಂಧರ್ವರೂ ಸೇವಿಸುವರು. ಆ ಮರದ ಎಲೆಗಳ ಗಾಳಿಯು ಬಹು ಹಿತಕರವಾಗಿರುವದು. ಆ ಗಾಳಿಯನ್ನು ಸೇವಿಸಿದರೆ ತುಂಬಾ ಆನಂದವಾಗುವದು.

೬೫. ಆ ದ್ವೀಪದಲ್ಲಿ ನಾಲ್ಕು ವರ್ಣಗಳ ಜನಗಳೂ ಇರುವರು. ಎಲ್ಲರೂ ಪುಣ್ಯವಂತರು. ಮಹಾತ್ಮರು. ಯಾರಿಗೂ ಭಯವೂ ರೋಗವೂ ಇಲ್ಲವು.

shrinath.udupa@gmail.com

ನದ್ಯಶ್ಚಾತ್ರ ಮಹಾಪುಣ್ಯಾಃ ಸರ್ವಪಾಪಭಯಾಪಹಾಃ ।
ಸುಕುಮಾರೀ ಕುಮಾರೀ ಚ ನಲಿನೀ ರೇಣುಕಾ ಚ ಯಾ ॥ ೬೬ ॥

ಇಕ್ಷುಶ್ಚ ಧೇನುಕಾ ಚೈವ ಗಭಸ್ತೀ ಸಪ್ತಮೀ ತಥಾ ।
ಅನ್ಯಾಸ್ತ್ವಯುತಶಸ್ತತ್ರ ಕ್ಷುದ್ರನದ್ಯೋ ದ್ವಿಜೋತ್ತಮಾಃ ॥ ೬೭ ॥

ಮಹೀಧರಾಸ್ತಥಾ ಸಂತಿ ಶತಶೋಽಥ ಸಹಸ್ರಶಃ ।
ತಾಃ ಪಿಬಂತಿ ಮುದಾ ಯುಕ್ತಾ ಜಲದಾದಿಷು ಯೇ ಸ್ಥಿತಾಃ ॥ ೬೮ ॥

ವರ್ಷೇಷು ಯೇ ಜನಪದಾಶ್ಚತುರ್ವರ್ಗಸಮನ್ವಿತಾಃ ।
ನದ್ಯಶ್ಚಾತ್ರ ಮಹಾಪುಣ್ಯಾಃ ಸ್ವರ್ಗಾದಭ್ಯೇತ್ಯ ಮೇದಿನೀಂ ॥ ೬೯ ॥

ಧರ್ಮಹಾನಿರ್ನ ತೇಷ್ವಸ್ತಿ ನ ಸಂಹರ್ಷೋ ನ ಶುಕ್ತಥಾ ।
ಮರ್ಯಾದಾವ್ಯುತ್ಕ್ರಮಶ್ಚಾಪಿ ತೇಷು ದೇಶೇಷು ಸಪ್ತಸು ॥ ೭೦ ॥

೬೬-೬೭. ಆ ದ್ವೀಪದಲ್ಲಿ ಮಹಾಪಾಪವನ್ನು ಹೋಗಲಾಡಿಸುವಂತಹ ಪುಣ್ಯನದಿಗಳಿರುವವು. ಸುಕುಮಾರೀನದಿ, ಕುಮಾರೀನದಿ, ನಲಿನೀನದಿ, ರೇಣುಕಾನದಿ, ಇಕ್ಷುನದಿ, ಧೇನುಕಾನದಿ, ಗಭಸ್ತಿನದಿ ಈ ಏಳು ಅಲ್ಲಿನ ಮಹಾನದಿಗಳು. ಇನ್ನೂ ಹತ್ತಾರುಸಾವಿರ ಉಪನದಿಗಳು ಆ ದ್ವೀಪದಲ್ಲಿರುವವು.

೬೮. ಆ ನದಿಗಳ ಮಧುರವಾದ ನೀರನ್ನು ಅಲ್ಲಿನ ಜಲದ ಮೊದಲಾದ ವರ್ಷಗಳಲ್ಲಿರುವ ಜನಗಳು ಆದರದಿಂದ ಕುಡಿಯುವರು, ಮತ್ತು ಅಲ್ಲಿ ಸಾವಿರಾರು ಉಪಗಿರಿಗಳು ಇರುವವು.

೬೯. ಈ ಶಾಕದ್ವೀಪದ ಜನಗಳು ಧರ್ಮಾರ್ಥಕಾಮಮೋಕ್ಷಗಳನ್ನು ಕ್ರಮವಾಗಿ ಪಡೆಯುವರು. ಇಲ್ಲಿನ ನದಿಗಳೂ ಸಹ ಸ್ವರ್ಗದಿಂದ ಭೂಮಿಗಿಳಿದುಬಂದು ಮಹಾಪುಣ್ಯನದಿಗಳಾಗಿರುವವು.

೭೦. ಆ ದೇಶಗಳಲ್ಲಿನ ಜನರು ಧರ್ಮವನ್ನು ಬಿಟ್ಟುಹೋಗುವುದಿಲ್ಲ. ಅಲ್ಲಿ ವ್ಯಾಜ್ಯಯುದ್ಧಗಳಿಲ್ಲವು. ದುಃಖವೂ ಇಲ್ಲವು. ಜನರು ತಮ್ಮ ತಮ್ಮ ವರ್ಣಗಳ ನೀತಿಗಳನ್ನು ಬಿಟ್ಟು ವರ್ತಿಸುವುದಿಲ್ಲ.

shrinath.udupa@gmail.com

ಮಗಾಶ್ಚ ಮಾಗಧಾಶ್ಚೈವ ಮಾನಸಾ ಮಂದಗಾಸ್ತಥಾ ।
ಮಗಾ ಬ್ರಾಹ್ಮಣಭೂಯಿಷ್ಠಾ ಮಾಗಧಾಃ ಕ್ಷತ್ರಿಯಾಸ್ತು ತೇ ॥ ೭೧ ॥

ವೈಶ್ಯಾಸ್ತು ಮಾನಸಾಸ್ತೇಷಾಂ ಶೂದ್ರಾ ಜ್ಞೇಯಾಸ್ತು ಮಂದಗಾಃ ।
ಶಾಕದ್ವೀಪೇ ಸ್ಥಿತೈರ್ವಿಷ್ಣುಃ ಸೂರ್ಯರೂಪಧರೋ ಹರಿಃ ॥ ೭೨ ॥

ಯಥೋಕ್ತೈರಿಜ್ಯತೇ ಸಮ್ಯಕ್ಕರ್ಮಭಿರ್ನಿಯತಾತ್ಮಭಿಃ ।
ಶಾಕದ್ವೀಪಸ್ತತೋ ವಿಪ್ರಾಃ ಕ್ಷೀರೋದೇನ ಸಮಂತತಃ ॥ ೭೩ ॥

ಶಾಕದ್ವೀಪಪ್ರಮಾಣೇನ ವಲಯೇನೇವ ವೇಷ್ಟಿತಃ ।
ಕ್ಷೀರಾಬ್ಧಿಃ ಸರ್ವತೋ ವಿಪ್ರಾಃ ಪುಷ್ಕರಾಖ್ಯೇನ ವೇಷ್ಟಿತಃ ॥ ೭೪ ॥

ದ್ವೀಪೇನ ಶಾಕದ್ವೀಪಾತ್ತು ದ್ವಿಗುಣೇನ ಸಮಂತತಃ ।
ಪುಷ್ಕರೇ ಸವನಸ್ಯಾಪಿ ಮಹಾವೀತೋಽಭವತ್ಸುತಃ ॥ ೭೫ ॥

ಧಾತಕಿಶ್ಚ ತಯೋಸ್ತದ್ವದ್ದ್ವೇ ವರ್ಷೇ ನಾಮಸಂಜ್ಞಿತೇ ।
ಮಹಾವೀತಂ ತಥೈವಾನ್ಯದ್ಧಾತಕೀಖಂಡಸಂಜ್ಞಿತಂ ॥ ೭೬ ॥

---

೭೧. ಅಲ್ಲಿ ಮಗ, ಮಾಗಧ, ಮಾನಸ, ಮಂದಗರೆಂಬ ನಾಲ್ಕುವರ್ಣದವರಿರುವರು. ಮಗರು ಬ್ರಾಹ್ಮಣರು, ಮಾಗಧರು ಕ್ಷತ್ರಿಯರು, ಮಾನಸರು ವೈಶ್ಯರು, ಮಂದಗರು ಶೂದ್ರರು. ಹೀಗೆ ಅಲ್ಲಿನ ವರ್ಣವ್ಯವಸ್ಥೆಯು.

೭೨. ಆ ನಾಲ್ಕುವರ್ಣದವರೂ ಸಹ ಜಗನ್ಮಯನಾದ ಸೂರ್ಯರೂಪನಾದ ಹರಿಯನ್ನು ಜಿತೇಂದ್ರಿಯರಾಗಿದ್ದು ವ್ರತ ಮುಂತಾದ ಸತ್ಕರ್ಮಗಳಿಂದ ಆರಾಧಿಸುವರು.

೭೩. ಈ ಶಾಕದ್ವೀಪವನ್ನು ಅದರಷ್ಟೇ (ಮೂವತ್ತೆರಡುಲಕ್ಷ ಯೋಜನ) ವಿಸ್ತಾರವಾದ ಕ್ಷೀರಸಾಗರವು ಮಂಡಾಲಾಕಾರವಾಗಿ ದೊಡ್ಡಬಳೆಯಂತೆ ಸುತ್ತುವರಿದಿರುವದು.

೭೪. ಈ ಕ್ಷೀರಸಾಗರವನ್ನು ಸುತ್ತಲೂ ಶಾಕದ್ವೀಪದೆರಡರಷ್ಟು [ಅರವತ್ತುನಾಲ್ಕುಲಕ್ಷಯೋಜನ] ವಿಸ್ತಾರವಾದ ಪುಷ್ಕರದ್ವೀಪವು ಸುತ್ತುವರಿದಿರುವದು.

೭೫–೭೬. ಪುಷ್ಕರದ್ವೀಪದಲ್ಲಿ ಸವನನೆಂಬ ಚಕ್ರವರ್ತಿಯಿದ್ದನು. ಅವನಿಗೆ ಮಹಾವೀತ, ಧಾತಕಿಗಳೆಂಬೀರ್ವರು ಮಕ್ಕಳು. ಅವರ ಹೆಸರಿನಿಂದ ಮಹಾವೀತ, ಧಾತಕಿಗಳೆಂಬ ಎರಡು ವರ್ಷ [ದೇಶ] ಗಳು ಅಲ್ಲಿ ಪ್ರಸಿದ್ಧವಾಗಿರುವವು.

shrinath.udupa@gmail.com

ಏಕಶ್ಚಾತ್ರ ಮಹಾಭಾಗಾಃ ಪ್ರಖ್ಯಾತೋ ವರ್ಷಪರ್ವತಃ ।
ಮಾನಸೋತ್ತರಸಂಜ್ಞೋ ವೈ ಮಧ್ಯತೋ ವಲಯಾಕೃತಿಃ ॥ ೭೭ ॥

ಯೋಜನಾನಾಂ ಸಹಸ್ರಾಣಿ ಊರ್ಧ್ವಂ ಪಂಚಾಶದುಚ್ಛ್ರಿತಃ ।
ತಾವದೇವ ಚ ವಿಸ್ತೀರ್ಣಃ ಸರ್ವತಃಪರಿಮಂಡಲಃ ॥ ೭೮ ॥

ಪುಷ್ಕರದ್ವೀಪವಲಯಂ ಮಧ್ಯೇನ ವಿಭಜನ್ನಿವ ।
ಸ್ಥಿತೋಽಸೌ ತೇನ ವಿಚ್ಛಿನ್ನಂ ಜಾತಂ ವರ್ಷದ್ವಯಂ ಹಿ ತತ್ ॥ ೭೯ ॥

ವಲಯಾಕಾರಮೇಕೈಕಂ ತಯೋರ್ಮಧ್ಯೇ ಮಹಾಗಿರಿಃ ।
ದಶವರ್ಷಸಹಸ್ರಾಣಿ ತತ್ರ ಜೀವಂತಿ ಮಾನವಾಃ ॥ ೮೦ ॥

ನಿರಾಮಯಾ ವಿಶೋಕಾಶ್ಚ ರಾಗದ್ವೇಷವಿವರ್ಜಿತಾಃ ।
ಅಧಮೋತ್ತಮೌ ನ ತೇಷ್ವಾಸ್ತಾಂ ನ ವಧ್ಯವಧಕೌ ದ್ವಿಜಾಃ ॥ ೮೧ ॥

---

೭೭. ಈ ದ್ವೀಪದಲ್ಲಿ ಒಂದೇ ಮಾನಸೋತ್ತರವೆಂಬ ವರ್ಷಪರ್ವತವಿರುವದು. ಅದು ಅಲ್ಲಿನ ಎರಡುದೇಶಗಳ ಮಧ್ಯದಲ್ಲಿದ್ದು ಮಂಡಲಾಕಾರವಾಗಿರುವದು.

೭೮. ಆ ಪರ್ವತವು ಐವತ್ತುಸಾವಿರ ಯೋಜನ ಅಗಲವಾಗಿರುವದು. ಐವತ್ತು ಸಾವಿರಯೋಜನ ಎತ್ತರವಾಗಿ ಮಂಡಲಾಕಾರವಾಗಿರುವದು.

೭೯. ಆ ಪರ್ವತವು ಪುಷ್ಕರದ್ವೀಪವನ್ನು ಎರಡುಭಾಗವಾಗಿ ಮಾಡುವಂತೆ ಅದರ ಮಧ್ಯದಲ್ಲಿರುವದು. ಈ ಕಾರಣದಿಂದಲೇ ಎರಡು ವರ್ಷಗಳು ಅಲ್ಲಿ ಆಗುವವು.

೮೦. ಆ ದೇಶಗಳೆರಡೂ ವಲಯಾಕಾರವಾಗಿರುವವು. ಅವುಗಳ ಮಧ್ಯದಲ್ಲಿ ಆ ಮಾನಸೋತ್ತರಗಿರಿಯು ಇರುವದು. ಆ ದ್ವೀಪದ ಜನರು ಹತ್ತುಸಾವಿರ ವರ್ಷಗಳವರೆಗೆ ಜೀವಿಸಿರುವರು. ರೋಗವಿಲ್ಲದವರೂ, ದುಃಖವಿಲ್ಲದವರೂ, ರಾಗ [ಪ್ರೀತಿ] ದ್ವೇಷಗಳಿಲ್ಲದವರೂ ಆಗಿರುವರು.

೮೧. ಆ ಪುಷ್ಕರದ್ವೀಪದ ಜನಗಳಲ್ಲಿ ಮೇಲು ಕೀಳೆಂಬ ಭೇದವಿಲ್ಲವು. ವಧ್ಯ [ವಧಕ್ಕೆ ಯೋಗ್ಯನು] ವಧಕ [ಕೊಲ್ಲುವವನು] ರೆಂಬುವವರೂ ಇಲ್ಲವು. ಅವರಲ್ಲಿ, ಅಸಹನೆ, ಹೊಟ್ಟೇಕಿಚ್ಚು, ಭಯ, ರೋಷ, ಲೋಭ, ಮೋಹ ಮುಂತಾದವುಗಳಿಲ್ಲವು.

shrinath.udupa@gmail.com

ನೇರ್ಷ್ಯಾಽಸೂಯಾ ಭಯಂ ರೋಷೋ ದೋಷೋ ಲೋಭಾದಿಕಂ ನ ಚ ।
ಮಹಾವೀತಂ ಬಹಿರ್ವರ್ಷಂ ಧಾತಕೀಖಂಡಮಂತತಃ ॥ ೮೨ ॥

ಮಾನಸೋತ್ತರಶೈಲಸ್ಯ ದೇವದೈತ್ಯಾದಿಸೇವಿತಂ ।
ಸತ್ಯಾನೃತೇ ನ ತತ್ರಾಽಸ್ತಾಂ ದ್ವೀಪೇ ಪುಷ್ಕರಸಂಜ್ಞಿತೇ ॥ ೮೩ ॥

ನ ತತ್ರ ನದ್ಯಃ ಶೈಲಾ ವಾ ದ್ವೀಪೇ ವರ್ಷದ್ವಯಾನ್ವಿತೇ ।
ತುಲ್ಯವೇಷಾಸ್ತು ಮನುಜಾ ದೇವೈಸ್ತತ್ರೈಕರೂಪಿಣಃ ॥ ೮೪ ॥

ವರ್ಣಾಶ್ರಮಾಚಾರಹೀನಂ ಧರ್ಮಾಹರಣವರ್ಜಿತಂ ।
ತ್ರಯೀವಾರ್ತಾದಂಡನೀತಿಶುಶ್ರೂಷಾರಹಿತಂ ಚ ತತ್ ॥ ೮೫ ॥

ವರ್ಷದ್ವಯಂ ತತೋ ವಿಪ್ರಾ ಭೌಮಸ್ವರ್ಗೋಽಯಮುತ್ತಮಃ ।
ಸರ್ವಸ್ಯ ಸುಖದಃ ಕಾಲೋ ಜರಾರೋಗವಿವರ್ಜಿತಃ ॥ ೮೬ ॥

---

೮೨. ಮಾನಸೋತ್ತರಪರ್ವತದ ಹೊರಭಾಗದಲ್ಲಿ ಮಹಾವೀತದೇಶವಿರುವದು. ಧಾತಕೀದೇಶವು ಒಳಭಾಗದಲ್ಲಿರುವದು. ಅಲ್ಲಿ ದೇವತೆಗಳು, ದೈತ್ಯರು ಮುಂತಾದವರಿರುವರು.

೮೩-೮೪. ಆ ದ್ವೀಪದಲ್ಲಿ ಸತ್ಯ ಸುಳ್ಳುಗಳಿಲ್ಲ. ಮಾನಸೋತ್ತರವೊಂದು ಹೊರತು ಇನ್ನಾವ ಬೆಟ್ಟಗಳೂ ಅಲ್ಲಿ ಇಲ್ಲ. ನದಿಗಳೂ ಇಲ್ಲ. ಅಲ್ಲಿನ ಮನುಷ್ಯರೂ ದೇವತೆಗಳೂ ಒಂದೇ ವಿಧವಾದ ವೇಷಗಳುಳ್ಳವರಾಗಿರುವರು.

೮೫. ಅಲ್ಲಿ ವರ್ಣಗಳೂ, ಆಶ್ರಮಗಳೂ, ಅವುಗಳ ಆಚಾರಗಳೂ ಇಲ್ಲ. ಧರ್ಮಾಚರಣೆಯೂ ಅಲ್ಲಿಲ್ಲ. ವೇದಗಳು, ಶಾಸ್ತ್ರಗಳು, ವಾರ್ತೆ, ರಾಜನೀತಿ, ಸೇವೆ ಮುಂತಾದುಗಳಾವವೂ ಇಲ್ಲ.

೮೬. ಈ ಪುಷ್ಕರದ್ವೀಪವು ಭೂಮಿಯಲ್ಲಿನ ಸ್ವರ್ಗದಂತಿರುವದು. ಅಲ್ಲಿನ ಎರಡು ವರ್ಷಗಳಲ್ಲಿಯೂ ಜನಗಳು ಮುಪ್ಪು ರೋಗಗಳಿಲ್ಲದೇ ಸದಾ ಸುಖವಾಗಿರುವರು.

shrinath.udupa@gmail.com

ಪುಷ್ಕರೇ ಧಾತಕೀಖಂಡೇ ಮಹಾವೀತೇ ಚ ವೈ ದ್ವಿಜಾಃ ।
ನ್ಯಗ್ರೋಧಃ ಪುಷ್ಕರದ್ವೀಪೇ ಬ್ರಹ್ಮಣಃ ಸ್ಥಾನಮುತ್ತಮಂ ॥ ೮೭ ॥

ತಸ್ಮಿನ್ನಿವಸತಿ ಬ್ರಹ್ಮಾ ಪೂಜ್ಯಮಾನಃ ಸುರಾಸುರೈಃ ।
ಸ್ವಾದೂದಕೇನೋದಧಿನಾ ಪುಷ್ಕರಃ ಪರಿವೇಷ್ಟಿತಃ ॥ ೮೮ ॥

ಸಮೇನ ಪುಷ್ಕರಸ್ಯೈವ ವಿಸ್ತಾರಾನ್ಮಂಡಲಾತ್ತಥಾ ।
ಏವಂ ದ್ವೀಪಾಃ ಸಮುದ್ರೈಸ್ತು ಸಪ್ತ ಸಪ್ತಭಿರಾವೃತಾಃ ॥ ೮೯ ॥

ದ್ವೀಪಶ್ಚೈವ ಸಮುದ್ರಶ್ಚ ಸಮಾನೌ ದ್ವಿಗುಣೌ ಪರೌ ।
ಪಯಾಂಸಿ ಸರ್ವದಾ ಸರ್ವಸಮುದ್ರೇಷು ಸಮಾನಿ ವೈ ॥ ೯೦ ॥

ನ್ಯೂನಾತಿರಿಕ್ತತಾ ತೇಷಾಂ ಕದಾಚಿನ್ನೈವ ಜಾಯತೇ ।
ಸ್ಥಾಲೀಸ್ಥಮಗ್ನಿಸಂಯೋಗಾದುದ್ರೇಕಿ ಸಲಿಲಂ ಯಥಾ ॥ ೯೧ ॥

---

೮೭. ಈ ದ್ವೀಪದಲ್ಲಿ ದೊಡ್ಡದೊಂದು ನ್ಯಗ್ರೋಧವು [ವಟವೃಕ್ಷವು] ಇರುವದು. ಅಲ್ಲಿ ಬ್ರಹ್ಮನು ದೇವತೆಗಳು ಮತ್ತು ಅಸುರರಿಂದ ಸೇವಿಸಲ್ಪಡುತ್ತಾ ನೆಲಸಿರುವನು.

೮೮. ಈ ಪುಷ್ಕರದ್ವೀಪವನ್ನು ಅದರಷ್ಟೇ [ಅರವತ್ತುನಾಲ್ಕುಲಕ್ಷ ಯೋಜನ] ವಿಸ್ತಾರವಾದ ಸಿಹಿನೀರಿನ ಸಮುದ್ರವು ಸುತ್ತಲೂ ಮಂಡಲಾಕಾರವಾಗಿ ಸುತ್ತುವರಿದಿರುವದು.

೮೯. ಹೀಗೆ ಏಳು ದ್ವೀಪಗಳೂ ಸಹ ಏಳು ಸಮುದ್ರಗಳಿಂದ ಆವರಿಸಲ್ಪಟ್ಟಿವೆ. ಹಿಂದಿನ ದ್ವೀಪ ಮತ್ತು ಸಾಗರಗಳೆರಡೂ ಒಂದೇರೀತಿಯಾದ ವಿಸ್ತಾರವುಳ್ಳವು. [ಅವುಗಳ] ಮುಂದಿನ ದ್ವೀಪ, ಸಾಗರಗಳು ಹಿಂದಿನದಕ್ಕಿಂತಲೂ ಎರಡರಷ್ಟು ವಿಸ್ತಾರವುಳ್ಳವು.

೯೦. ಆ ಸಮುದ್ರಗಳೆಲ್ಲವುಗಳಲ್ಲೂ ನೀರು ಒಂದೇ ಪ್ರಮಾಣದಲ್ಲಿರುವವು. ಯಾವಾಗಲೂ ಹೆಚ್ಚಾಗಲೀ ಕಮ್ಮಿಯಾಗಲೀ ಇರುವದಿಲ್ಲ.

೯೧. ಒಂದು ತಾಲಿಯಲ್ಲಿ ನೀರನ್ನಿರಿಸಿ ಒಲೆಯಮೇಲಿಟ್ಟು ಕೆಳಗೆ ಬೆಂಕಿ ಹಾಕಿದರೆ ಆ ನೀರು ಹೇಗೆ ಕಾದು ಮೇಲೆ ಉಕ್ಕಿ ಬರುವದೋ ಅದರಂತೆ ಸಮುದ್ರವೂ ಸಹ ಚಂದ್ರನುದಯಿಸಿದಾಗ ಮೇಲೆ ಉಕ್ಕಿ ಬರುವದು. ಆದರೆ ನೀರಿನ ಪ್ರಮಾಣವು ಹೆಚ್ಚಾಗುವದಿಲ್ಲ.

shrinath.udupa@gmail.com

ತಥೇಂದುವೃದ್ಧೌ ಸಲಿಲಮಂಭೋಧೌ ಮುನಿಸತ್ತಮಾಃ ।
ಅನ್ಯೂನಾನತಿರಿಕ್ತಾಶ್ಚ ವರ್ಧಂತ್ಯಾಪೋ ಹ್ರಸಂತಿ ಚ ॥ ೯೨ ॥

ಉದಯಾಸ್ತಮನೇ ತ್ವಿಂದೋಃ ಪಕ್ಷಯೋಃ ಶುಕ್ಲ ಕೃಷ್ಣಯೋಃ ।
ದಶೋತ್ತರಾಣಿ ಪಂಚೈವ ಅಂಗುಲಾನಾಂ ಶತಾನಿ ಚ ॥ ೯೩ ॥

ಅಪಾಂ ವೃದ್ಧಿಕ್ಷಯೌ ದೃಷ್ಟೌ ಸಾಮುದ್ರೀಣಾಂ ದ್ವಿಜೋತ್ತಮಾಃ ।
ಭೋಜನಂ ಪುಷ್ಕರದ್ವೀಪೇ ತತ್ರ ಸ್ವಯಮುಪಸ್ಥಿತಂ ॥ ೯೪ ॥

ಭುಂಜಂತಿ ಷಡ್ರಸಂ ವಿಪ್ರಾಃ ಪ್ರಜಾಃ ಸರ್ವಾಃ ಸದೈವ ಹಿ ।
ಸ್ವಾದೂದಕಸ್ಯ ಪರಿತೋ ದೃಶ್ಯತೇ ಲೋಕಸಂಸ್ಥಿತಿಃ ॥ ೯೫ ॥

ದ್ವಿಗುಣಾ ಕಾಂಚನೀಭೂಮಿಃ ಸರ್ವಜಂತುವಿವರ್ಜಿತಾ ।
ಲೋಕಾಲೋಕಸ್ತತಃ ಶೈಲೋ ಯೋಜನಾಯುತವಿಸ್ತೃತಃ ॥ ೯೬ ॥

---

೯೨. ಶುಕ್ಲ ಮತ್ತು ಕೃಷ್ಣಪಕ್ಷಗಳಲ್ಲಿ ಚಂದ್ರನುದಯಿಸುವಾಗ ಮತ್ತು ಅಸ್ತಮಿಸುವಾಗ ಕ್ರಮವಾಗಿ ಸಮುದ್ರವು ಮೇಲಕ್ಕೆ ಉಕ್ಕಿಬಂದು ಕೊನೆಗೆ ಕೆಳಗಿಳಿಯುವದು. ಆದರೆ ಅದರ ನೀರು ಪ್ರಮಾಣದಲ್ಲಿ ಹೆಚ್ಚಾಗುವದೂ ಇಲ್ಲ, ಕಮ್ಮಿಯಾಗುವದೂ ಇಲ್ಲ.

೯೩. ಆ ಉಕ್ಕಿಬರುವ ಕಾಲದಲ್ಲಿ ಸಮುದ್ರದ ನೀರು ಐನೂರುಹತ್ತು ಅಂಗುಲಗಳು ಮಾತ್ರ ಮೇಲಕ್ಕೇರಿ ಕೊನೆಗೆ ಕೆಳಗಿಳಿಯುವವು.

೯೪. ಆ ಪುಷ್ಕರದ್ವೀಪದಲ್ಲಿ ಷಡ್ರಸಗಳಿಂದ [ಆರುರಸಗಳಿಂದ] ಕೂಡಿರುವ ರುಚಿಯಾದ ಆಹಾರವು ತಾನಾಗಿಯೇ ಲಭಿಸುವದು. ಇಂತಹ ಅನ್ನವನ್ನು ಅಲ್ಲಿನ ಪ್ರಜೆಗಳು ಸುಖವಾಗಿ ಸೇವಿಸುವರು.

೯೫. ಸಿಹಿನೀರಿನ ಸಾಗರದ ವರೆಗೇ ಲೋಕಗಳಿರುವವು. ಅದರ ಮುಂದೆ ಪುಷ್ಕರದ್ವೀಪದೆರಡರಷ್ಟು [ನೂರಿಪ್ಪತ್ತೆಂಟುಲಕ್ಷ ಯೋಜನ] ವಿಸ್ತಾರವಾದ ಸುವರ್ಣಮಯವಾದ ಭೂಮಿಯು ಇರುವದು. ಅಲ್ಲಿ ಯಾವಲೋಕಗಳೂ ಇಲ್ಲ. ಒಂದು ಪ್ರಾಣಿಯೂ ಇರುವದಿಲ್ಲ.

೯೬. ಅದರ ಮುಂದೆ ಲೋಕಾಲೋಕಪರ್ವತವಿರುವದು. ಅದು ಹತ್ತು ಸಾವಿರ ಯೋಜನ ವಿಸ್ತಾರವಾಗಿರುವದು. ಹತ್ತುಸಾವಿರ ಯೋಜನ ಅಗಲವಾಗಿರುವದು.

shrinath.udupa@gmail.com

ಉಚ್ಛ್ರಯೇಣಾಪಿ ತಾವಂತಿ ಸಹಸ್ರಾಣ್ಯಾವಲೋಹಿ ಸಃ ।
ತತಸ್ತಮಃ ಸಮಾವೃತ್ಯ ತಂ ಶೈಲಂ ಸರ್ವತಃ ಸ್ಥಿತಂ ॥ ೯೭ ॥

ತಮಶ್ಚಾಂಡಕಟಾಹೇನ ಸಮಂತಾತ್ಪರಿವೇಷ್ಟಿತಂ ।
ಪಂಚಾಶತ್ಕೋಟಿವಿಸ್ತಾರಾ ಸೇಯಮುರ್ವೀ ದ್ವಿಜೋತ್ತಮಾಃ ॥ ೯೮ ॥

ಸಹೈವಾಂಡಕಟಾಹೇನ ಸದ್ವೀಪಾ ಸಮಹೀಧರಾ ।
ಸೇಯಂ ಧಾತ್ರೀ ವಿಧಾತ್ರೀ ಚ ಸರ್ವಭೂತಗುಣಾಧಿಕಾ ।
ಆಧಾರಭೂತಾ ಜಗತಾಂ ಸರ್ವೇಷಾಂ ಸಾ ದ್ವಿಜೋತ್ತಮಾಃ ॥ ೯೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸಮುದ್ರದ್ವೀಪಪರಿಮಾಣ
ವರ್ಣನಂ ನಾಮ ವಿಂಶೋಽಧ್ಯಾಯಃ

---

೯೭. ಆಮೇಲೆ ಆ ಲೋಕಾಲೋಕಗಿರಿಯನ್ನು ಅದರ ಅರ್ಧಭಾಗದಿಂದ ಕತ್ತಲೆಯು ವ್ಯಾಪಿಸಿರುವದು. ಆ ತಮಸ್ಸನ್ನು ಬ್ರಹ್ಮಾಂಡಕಟಾಹವು ಆವರಿಸಿರುವದು ಎಂದರೆ ಆ ಪರ್ವತದ ಮುಂದಿನ ಬ್ರಂಹ್ಮಾಂಡವೆಲ್ಲವೂ ತಮೋಮಯವಾಗಿರುವದು.

೯೮. ಏಳು ದ್ವೀಪಗಳು, ಪರ್ವತಗಳು, ಅಂಡಕಟಾಹಗಳು ಇವುಗಳನ್ನೊಳಗೊಂಡ ಈ ಭೂಮಿಯು ಐವತ್ತುಕೋಟಿ ಯೋಜನ ವಿಸ್ತಾರವಾಗಿರುವದು.

೯೯. ಎಲೈ ಮುನಿಗಳೇ, ಈ ಭೂಮಿಯಲ್ಲಿಯೇ ಎಲ್ಲ ಪ್ರಾಣಿಗಳೂ, ವಸ್ತುಗಳೂ, ಜನಿಸುವವು. ಭೂಮಿಯು ಪಂಚಭೂತಗಳಲ್ಲಿ ಮುಖ್ಯವಾದುದು. ಎಲ್ಲ ಭೂತಗಳಿಗಿಂತಲೂ ಈ ಭೂಮಿಯಲ್ಲಿ ಗುಣಗಳು (ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು) ಹೆಚ್ಚಾಗಿರುವವು. ಎಲ್ಲ ಪ್ರಾಣಿಗಳಿಗೂ ವಸ್ತುಗಳಿಗೂ ಈ ಭೂಮಿಯು ಆಧಾರವಾಗಿರುವದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಸಮುದ್ರದ್ವೀಪಪರಿಮಾಣವರ್ಣನವೆಂಬ
ಇಪ್ಪತ್ತನೆಯ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕವಿಂಶೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ವಿಸ್ತಾರ ಏಷ ಕಥಿತಃ ಪೃಥಿವ್ಯಾ ಮುನಿಸತ್ತಮಾಃ ।
ಸಪ್ತತಿಸ್ತು ಸಹಸ್ರಾಣಿ ತದುಚ್ಛ್ರಾಯೋಽಪಿ ಕಥ್ಯತೇ ॥ ೧ ॥

ದಶಸಾಹಸ್ರಮೇಕೈಕಂ ಪಾತಾಲಂ ಮುನಿಸತ್ತಮಾಃ ।
ಅತಲಂ ವಿತಲಂ ಚೈವ ನಿತಲಂ ಸುತಲಂ ತಥಾ ॥ ೨ ॥

ತಲಾತಲಂ ರಸಾತಲಂ ಪಾತಾಲಂ ಚಾಪಿ ಸಪ್ತಮಂ ।
ಕೃಷ್ಣಾ ಶುಕ್ಲಾಽರುಣಾ ಪೀತಾ ಶರ್ಕರಾ ಶೈಲಕಾಂಚನೀ ॥ ೩ ॥

ಇಪ್ಪತ್ತೊಂದನೆಯ ಅಧ್ಯಾಯವು

೧. ಸೂತಮುನಿಯು ಹೇಳಿದನು.—ಎಲೈ ಮುನಿಗಳೇ, ಹಿಂದೆ ಹೇಳಿದುದು ಭೂಮಿಯ ವಿಸ್ತಾರ (ಅಗಲ) ವು. ಎಪ್ಪತ್ತುಸಾವಿರ ಯೋಜನದವರೆಗೆ ಈ ಭೂಮಿಯು ಎತ್ತರವಾಗಿರುವದು.

೨. ಈಗ ಪಾತಾಲವನ್ನು ವರ್ಣಿಸುವೆನು.—ಅತಲ, ವಿತಲ, ನಿತಲ, ಸುತಲ, ತಲಾತಲ, ರಸಾತಲ, ಪಾತಾಳಗಳೆಂಬ ಏಳು ಲೋಕಗಳು ಪಾತಾಳದಲ್ಲಿರುವವು. ಒಂದೊಂದು ಲೋಕಗಳು ಹತ್ತುಸಾವಿರ ಯೋಜನ ವಿಸ್ತಾರವಾಗಿರುವವು.

೩. ಕೃಷ್ಣಾ (ಕಪ್ಪು), ಶುಕ್ಲಾ (ಬಿಳಿಯದು) ಅರುಣಾ (ಕೆಂಪು), ಪೀತಾ (ಹಸುರು), ಶರ್ಕರಾ (ಮರಳು) ಶೈಲಾ (ಬೆಟ್ಟ), ಕಾಂಚನೀ (ಸುವರ್ಣಮಯ) ಎಂದು ಭೂಮಿಗಳಿರುವವು. ಇವುಗಳಲ್ಲಿ ದೊಡ್ಡದೊಡ್ಡ ಪ್ರಾಸಾದಗಳಿರುವವು.

shrinath.udupa@gmail.com

ಭೂಮಯೋ ಯತ್ರ ವಿಪ್ರೇಂದ್ರಾ ವರಪ್ರಾಸಾದಶೋಭಿತಾಃ ।
ತೇಷು ದಾನವದೈತೇಯಜಾತಯಃ ಶತಶಃ ಸ್ಥಿತಾಃ ॥ ೪ ॥

ನಾಗಾನಾಂ ಚ ಮಹಾಂಗಾನಾಂ ಜ್ಞಾತಯಶ್ಚ ದ್ವಿಜೋತ್ತಮಾಃ ।
ಸ್ವರ್ಲೋಕಾದಪಿ ರಮ್ಯಾಣಿ ಪಾತಾಲಾನೀತಿ ನಾರದಃ ॥ ೫ ॥

ಪ್ರಾಹ ಸ್ವರ್ಗಸದೋಮಧ್ಯೇ ಪಾತಾಲೇಭ್ಯೋ ಗತೋ ದಿವಂ ।
ಆಹ್ಲಾದಕಾರಿಣಃ ಶುಭ್ರಾ ಮಣಯೋ ಯತ್ರ ಸುಪ್ರಭಾಃ ॥ ೬ ॥

ನಾಗಾಭರಣಭೂಷಾಶ್ಚ ಪಾತಾಲಂ ಕೇನ ತತ್ಸಮಂ ।
ದೈತ್ಯದಾನವಕನ್ಯಾಭಿರಿತಶ್ಚೇತಶ್ಚ ಶೋಭಿತೇ ॥ ೭ ॥

---

೪. ಈ ಪಾತಾಳದಲ್ಲಿ ದಾನವರು, ದೈತ್ಯರು, ದೊಡ್ಡದೊಡ್ಡ ನಾಗಗಳು, ಅವುಗಳ ಬಂಧುಗಳು ಸಾವಿರಾರು ಜನರು ಇರುವರು.

೫. ಒಂದುಸಾರಿ ನಾರದಮುನಿಯು ಪಾತಾಲವನ್ನೆಲ್ಲಾ ಸಂಚರಿಸಿ ದೇವಲೋಕಕ್ಕೆ ಬಂದು ದೇವಸಭೆಯಲ್ಲಿ ಸ್ವರ್ಗಕ್ಕಿಂತಲೂ ಪಾತಾಲಲೋಕಗಳು ರಮ್ಯವಾಗಿರುವವೆಂದು ಹೇಳಿದನು.

೬. ಪಾತಾಳದಲ್ಲಿ ತುಂಬ ಪ್ರಭೆಗಳುಳ್ಳ ಶುಭ್ರವಾದ ನಾಗರತ್ನಗಳಿರುವವು. ಅವುಗಳನ್ನು ನೋಡಿದಮಾತ್ರದಿಂದ ಆನಂದವಾಗುವದು. ಇಂತಹ ಮಣಿಗಳಿಂದ ಅಲ್ಲಿ ಸರ್ಪಗಳು ಅಲಂಕರಿಸಿಕೊಳ್ಳುವವು. ಇಂತಹ ಪಾತಾಲವನ್ನು ಸರಿಗಟ್ಟುವದು ಇನ್ನಾವುದಿರುವದು.

೭. ದೈತ್ಯರ ಮತ್ತು ದಾನವರ ಸುಂದರಿಯರಾದ ಕನ್ಯೆಯರು ಆ ಪಾತಾಳದಲ್ಲಿ ಬೇಕಾದಷ್ಟುಮಂದಿ ಇರುವರು. ಇಂತಹ ಪಾತಾಲದಲ್ಲಿ ಯಾರಿಗೆತಾನೆ ಪ್ರೀತಿಯಿಲ್ಲ? ವಿರಕ್ತನೂ ಸಹ ಅಪೇಕ್ಷಿಸುವಷ್ಟು ಆ ಪಾತಾಲವು ಮನೋಹರವಾಗಿರುವದು.

shrinath.udupa@gmail.com

ಪಾತಾಲೇ ಕಸ್ಯ ನ ಪ್ರೀತಿರ್ವಿಮುಕ್ತಸ್ಯಾಪಿ ಜಾಯತೇ ।
ದಿವಾऽರ್ಕರಶ್ಮಯೋ ಯತ್ರ ಪ್ರಭಾಸ್ತನ್ವಂತಿ ನಾऽತಪಂ ॥ ೮ ॥

ಶಶಿನಶ್ಚ ನ ಶೀತಾಯ ನಿಶಿ ದ್ಯೋತಾಯ ಕೇವಲಂ ।
ಭಕ್ಷ್ಯಭೋಜ್ಯಮಹಾಪಾನಮುದಮತ್ತೈಶ್ಚ ಭೋಗಿಭಿಃ ॥ ೯ ॥

ಯತ್ರ ನ ಜ್ಞಾಯತೇ ಕಾಲೋ ಗತೋऽಪಿ ದನುಜಾದಿಭಿಃ ।
ವನಾನಿ ನದ್ಯೋ ರಮ್ಯಾಣಿ ಸರಾಂಸಿ ಕಮಲಾಕರಾಃ ॥ ೧೦ ॥

ಪುಂಸ್ಕೋಕಿಲಾದಿಲಾಪಾಶ್ಚ ಮನೋಜ್ಞಾನ್ಯಂಬರಾಣಿ ಚ ।
ಭೂಷಣಾನ್ಯತಿರಮ್ಯಾಣಿ ಗಂಧಾಢ್ಯಂ ಚಾನುಲೇಪನಂ ॥ ೧೧ ॥

ವೀಣಾವೇಣುಮೃದಂಗಾನಾಂ ನಿಃಸ್ವನಾಶ್ಚ ಸದಾ ದ್ವಿಜಾಃ ।
ಏತಾನ್ಯನ್ಯಾನಿ ರಮ್ಯಾಣಿ ಭಾಗ್ಯಭೋಗ್ಯಾನಿ ದಾನವೈಃ ॥ ೧೨ ॥

---

೮. ಹಗಲು ಸೂರ್ಯನ ಕಿರಣಗಳು ಪಾತಾಲದಲ್ಲಿ ಪ್ರಕಾಶವನ್ನು ಬೀರುವವು. ಆದರೆ ಆತಪ [ಉರಿಬಿಸಿಲು] ವನ್ನು ಬೀರುವದಿಲ್ಲ. ರಾತ್ರಿಯಲ್ಲಿ ಚಂದ್ರನು ಆನಂದ ಕರವಾದ ಬೆಳದಿಂಗಳನ್ನು ಬೀರುವನು. ಆದರೆ ಅವುಗಳಿಂದ ಶೀತ [ಛಳಿ] ವಾಗು ವದಿಲ್ಲ.

೯. ರುಚಿರುಚಿಯಾದ ತಿಂಡಿಗಳು, ಭೋಜನಗಳು, ಸುರೆಗಳು ಇವನ್ನು ಸೇವಿಸಿ ಸರ್ಪಗಳು, ದಾನವರು ಮೊದಲಾದವರು ಆನಂದಪರವಶರಾಗಿ ವಿಹರಿಸುತ್ತಾ ಬಹು ಕಾಲ ಕಳೆದುದನ್ನೂ ತಿಳಿಯದವರಾಗುತ್ತಾರೆ.

೧೦-೧೧. ಪಾತಾಳಗಳಲ್ಲಿ ವನಗಳು ರಮ್ಯವಾಗಿರುವವು. ನದಿಗಳು ನಿರ್ಮಲ ವಾಗಿ ಮನೋಹರಗಳಾಗಿರುವವು. ಸರಸ್ಸುಗಳು ಕಮಲಗಳಿಂದ ತುಂಬಿದ್ದು ಸುಂದರ ವಾಗಿರುವವು. ಕೋಗಿಲೆಗಳು ಇಂಪಾಗಿ ಹಾಡುವವು. ಸುಂದರವಾದ ವಸ್ತ್ರಗಳು ಹೇರಳವಾಗಿರುವವು. ಅಲಂಕಾರಗಳಂತೂ ತುಂಬಾ ಮನೋಹರವಾಗಿರುವವು. ಗಂಧ ಮೊದಲಾದ ಸುಗಂಧದ್ರವ್ಯಗಳಿಗೆ ಲೆಕ್ಕವಿಲ್ಲ. ವೀಣೆ, ಕೊಳಲು, ಮದ್ದಳೆ ಇವುಗಳ ಇಂಪಾದ ಧ್ವನಿಗಳು ಸದಾ ಕೇಳುವವು.

೧೨. ಇವೇ ಮೊದಲಾದ ಇನ್ನೂ ಅನೇಕ ಭಾಗ್ಯಗಳನ್ನೂ ಸುಂದರವಸ್ತು ಗಳನ್ನೂ ಅಲ್ಲಿರುವ ದಾನವರು, ದೈತ್ಯರು, ನಾಗಕುಮಾರರು ಮೊದಲಾದವರು ಅನು ಭವಿಸುವರು.

shrinath.udupa@gmail.com

ದೈತ್ಯೋರಗೈಶ್ಚ ಭುಜ್ಯಂತೇ ಪಾತಾಲಾಂತರಗೋಚರೈಃ ।
ಪಾತಾಲಾನಾಮಧಶ್ಚಾಽಸ್ತೇ ವಿಷ್ಣೋರ್ಯಾ ತಾಮಸೀ ತನುಃ ॥ ೧೩ ॥

ಶೇಷಾಖ್ಯಾ ಯದ್ಗುಣಾನ್ವಕ್ತುಂ ನ ಶಕ್ತಾ ದೈತ್ಯದಾನವಾಃ ।
ಯೋಽನಂತಃ ಪಠ್ಯತೇ ಸಿದ್ಧೈರ್ದೇವದೇವರ್ಷಿಪೂಜಿತಃ ॥ ೧೪ ॥

ಸಹಸ್ರಶಿರಸಾ ವ್ಯಕ್ತಃ ಸ್ವಸ್ತಿಕಾಮಲಭೂಷಣಃ ।
ಫಣಾಮಣಿಸಹಸ್ರೇಣ ಯಃ ಸ ವಿದ್ಯೋತಯರ್ನ್ ದಿಶಃ ॥ ೧೫ ॥

ಸರ್ವಾನ್ಕರೋತಿ ನಿರ್ವೀರ್ಯಾನ್ಹಿತಾಯ ಜಗತೋಽಸುರಾನ್ ।
ಮದಾಘೂರ್ಣಿತನೇತ್ರೋಽಸೌ ಯಃ ಸದೈವೈಕಕುಂಡಲಃ ॥ ೧೬ ॥

---

೧೩. ಈ ಏಳು ಪಾತಾಲಲೋಕಗಳ ಕೆಳಭಾಗದಲ್ಲಿ ವಿಷ್ಣುವಿನ ತಮೋಗುಣ ಸ್ವರೂಪನಾದ ಆದಿಶೇಷನು ಇರುವನು. ಅವನ ಗುಣಗಳನ್ನು ಅಲ್ಲಿರುವ ದೈತ್ಯ ದಾನವರು ವರ್ಣಿಸಲಾರರು.

೧೪. ಸಿದ್ಧರು ಅವನನ್ನು ಅನಂತನೆಂದು ಸ್ತುತಿಸುವರು. ದೇವತೆಗಳೂ, ದೇವರ್ಷಿಗಳೂ ಅವನನ್ನು ಸೇವಿಸುವರು. ಸಾವಿರ ಹೆಡೆಗಳು ಅವನಿಗಿರುವವು. ಶಿರಸ್ಸಿನಲ್ಲಿ ಸ್ವಸ್ತಿಕವೆಂಬ ಆಭರಣವನ್ನು ಧರಿಸಿರುವನು.

೧೫. ಅವನ ಸಾವಿರ ಶಿರಸ್ಸುಗಳಲ್ಲೂ ನಾಗರತ್ನಗಳಿರುವವು. ಅವುಗಳ ಪ್ರಭೆಯಿಂದ ಹತ್ತುದಿಕ್ಕುಗಳನ್ನೂ ಬೆಳಗುವನು ಮತ್ತು ಜಗತ್ತಿನ ಕ್ಷೇಮಕ್ಕಾಗಿ ಅಸುರರೆಲ್ಲರನ್ನೂ ತನ್ನ ಪ್ರಭೆಯಿಂದ ನಿರ್ವೀರ್ಯರನ್ನಾಗಿ [ಅಶಕ್ತರನ್ನಾಗಿ] ಮಾಡುವನು.

೧೬. ಅವನ ತೇಜಸ್ವಿಯಾದ ಕಣ್ಣುಗಳು ಯಾವಾಗಲೂ ಭಯಂಕರವಾಗಿ ಚಲಿಸುವವು. ಆ ಶೇಷನು ಪ್ರಕಾಶಮಾನವಾದ ಒಂದು ಕುಂಡಲವನ್ನೂ ಕಿರೀಟವನ್ನೂ ಹಾರವನ್ನೂ ಧರಿಸಿಕೊಂಡಿದ್ದು ,ಅಗ್ನಿಯಿಂದುರಿಯುವ ಬೆಟ್ಟದಂತೆ ತೋರುವನು.

shrinath.udupa@gmail.com

ಕಿರೀಟೀ ಸ್ರಗ್ಧರೋ ಭಾತಿ ಸಾಗ್ನಿಶ್ವೇತ ಇವಾಚಲಃ ।
ನೀಲವಾಸಾ ಮದೋತ್ಸಿಕ್ತಃ ಶ್ವೇತಹಾರೋಪಶೋಭಿತಃ ॥ ೧೭ ॥

ಸಾಭ್ರಗಂಗಾಪ್ರಪಾತೋಽಸೌ ಕೈಲಾಸಾದ್ರಿರಿವೋತ್ತಮಃ ।
ಲಾಂಗಲಾಸಕ್ತಹಸ್ತಾಗ್ರೋ ಬಿಭ್ರನ್ಮುಸಲಮುತ್ತಮಂ ॥ ೧೮ ॥

ಉಪಾಸ್ಯತೇ ಸ್ವಯಂ ಕಾಂತ್ಯಾ ಯೋ ವಾರುಣ್ಯಾ ಚ ಮೂರ್ತಯಾ ।
ಕಲ್ಪಾಂತೇ ಯಸ್ಯ ವಕ್ತ್ರೇಭ್ಯೋ ವಿಷಾನಲಶಿಖೋಜ್ವಲಃ ॥ ೧೯ ॥

ಸಂಕರ್ಷಣಾತ್ಮಕೋ ರುದ್ರೋ ನಿಷ್ಕ್ರಮ್ಯಾತ್ತಿ ಜಗತ್ರಯಂ ।
ಸ ಬಿಭ್ರಚ್ಛಿಖರೀಭೂತಮಶೇಷಂ ಕ್ಷಿತಿಮಂಡಲಂ ॥ ೨೦ ॥

ಆಸ್ತೇ ಪಾತಾಲಮೂಲಸ್ಥಃ ಶೇಷೋಽಶೇಷಸುರಾರ್ಚಿತಃ ।
ತಸ್ಯ ವೀರ್ಯಂ ಪ್ರಭಾವಶ್ಚ ಸ್ವರೂಪಂ ರೂಪಮೇವ ಚ ॥ ೨೧ ॥

---

೧೭. ಆ ಆದಿಶೇಷನು ನೀಲವಾದ ಬಟ್ಟೆಯನ್ನು ಧರಿಸಿ ಬಿಳಿಯಹಾರ ವನ್ನಲಂಕರಿಸಿಕೊಂಡಿದ್ದು ಮದದಿಂದ ವಿಜೃಂಭಿಸುತ್ತಾ ಆಕಾಶದಿಂದ ಬೀಳುವ ದೇವ ಗಂಗೆಯನ್ನುಳ್ಳ ಕೈಲಾಸಗಿರಿಯಂತೆ ತೋರುವನು.

೧೮. ಲಾಂಗಲ [ಹಲ–ನೇಗಿಲು] ವನ್ನೂ ಮುಸಲ [ಆಯುಧ] ವನ್ನೂ ಧರಿಸಿದ್ದು ಮದ್ಯಪಾನದಿಂದ ಕೊಬ್ಬಿದವನಾಗಿ ಆ ಆದಿಶೇಷನು ತನ್ನದೇ ಆದ ಒಂದು ಮಹಾಕಾಂತಿಯಿಂದ ಬೆಳಗುವನು. ಕಾಂತಿದೇವಿಯು ಶರೀರವನ್ನು ಧರಿಸಿ ಅವನನ್ನು ಸೇವಿಸುವಳು.

೧೯. ಪ್ರಳಯಕಾಲದಲ್ಲಿ ಈ ಆದಿಶೇಷನ ಮುಖಗಳಿಂದ ಸಂಕರ್ಷಣರೂಪ ನಾದ ರುದ್ರನು ವಿಷಾಗ್ನಿಜ್ವಾಲೆಯನ್ನು ಹರಡುತ್ತಾ ಹೊರಟು ಕ್ರೋಧದಿಂದ ಮೂರುಲೋಕಗಳನ್ನೂ ಸಂಹರಿಸುವನು.

೨೦. ಇಂತಹ ಮಹಿಮೆಯುಳ್ಳ ಈ ಆದಿಶೇಷನು ಪಾತಾಲದ ತಳ [ಬುಡ] ದಲ್ಲಿದ್ದು ಶಿಖರದಂತಿರುವ ಈ ಭೂಮಂಡಲವೆಲ್ಲವನ್ನೂ ತನ್ನ ಸಾವಿರ ಶಿರಸ್ಸುಗಳಿಂದ ಧರಿಸಿರುವನು.

೨೧. ಇಂತಹ ಮಹಾಶೇಷನ ವೀರ್ಯವನ್ನಾಗಲೀ, ಮಹಿಮೆಯನ್ನಾಗಲೀ ಸ್ವರೂಪವನ್ನಾಗಲೀ, ವರ್ಣವನ್ನಾಗಲೀ, ದೇವತೆಗಳೂ ಸಹ ವರ್ಣಿಸಲಾರರು. ತಿಳಿಯಲೂ ಸಮರ್ಥರಾಗಲಾರರು.

shrinath.udupa@gmail.com

ನ ಹಿ ವರ್ಣಯಿತುಂ ಶಕ್ಯಂ ಜ್ಞಾತುಂ ವಾ ತ್ರಿದಶೈರಪಿ ।
ಯಸ್ಯೈಷಾ ಸಕಲಾ ಪೃಥ್ವೀ ಫಣಾಮಣಿಶಿಖಾರುಣಾ ॥ ೨೨ ॥

ಆಸ್ತೇ ಕುಸುಮಮಾಲೇವ ಕಸ್ತದ್ವೀರ್ಯಂ ವದಿಷ್ಯತಿ ।
ಯದಾ ವಿಜೃಂಭತೇಽನಂತೋ ಮದಾಘೂರ್ಣಿತಲೋಚನಃ ॥ ೨೩ ॥

ತದಾ ಚಲತಿ ಭೂರೇಷಾ ಸಾದ್ರಿತೋಯಾಧಿಕಾನನಾ ।
ಗಂಧರ್ವಾಪ್ಸರಸಃ ಸಿದ್ಧಾಃ ಕಿಂನರೋರಗವಾರಣಾಃ ॥ ೨೪ ॥

ನಾಂತಂ ಗುಣಾನಾಂ ಗಚ್ಛಂತಿ ತತೋಽನಂತೋಽಯಮವ್ಯಯಃ ।
ಯಸ್ಯ ನಾಗವಧೂಹಸ್ತೈರ್ಲಾಪಿತಂ ಹರಿಚಂದನಂ ॥ ೨೫ ॥

---

೨೨. ಈ ಭೂಮಿಯೆಲ್ಲವೂ ಸಹ ಆ ಆದಿಶೇಷನ ಹೆಡೆಯ ನಾಗರತ್ನಪ್ರಭೆಯಿಂದ ಕೆಂಪುವರ್ಣವುಳ್ಳದ್ದಾಗಿ ಅವನ ಶಿರಸ್ಸಿನಮೇಲೆ ಸುಂದರವಾದೊಂದು ಹೂವಿನ ಸರದಂತೆ ತೋರುವದು. ಇಂತಹ ಮಹಾಮಹಿಮನಾದ ಆದಿಶೇಷನ ವೀರ್ಯವನ್ನು ವರ್ಣಿಸುವವರಾರು ?

೨೩. ಆ ಅನಂತ [ಆದಿಶೇಷ] ನು ಒಂದೊಂದು ಸಾರಿ ಮದದಿಂದ ಕೆಂಪೇರಿದ ಕಣ್ಣುಗಳುಳ್ಳವನಾಗಿ ವಿಜೃಂಭಿಸುವನು. ಆಗ ಪರ್ವತ, ಸಮುದ್ರ, ಮಹಾರಣ್ಯ, ನಗರ ಮುಂತಾದುವುಗಳೊಡನೆ ಈ ಭೂಮಿಯೆಲ್ಲವೂ ಚಲಿಸುವದು. [ಭೂಕಂಪವಾಗುವದು.]

೨೪. ಗಂಧರ್ವರು, ಅಪ್ಸರೆಯರು, ಸಿದ್ಧರು, ಕಿನ್ನರರು, ನಾಗಪುರುಷರು ಇವರೆಲ್ಲರೂ ಆ ಆದಿಶೇಷನ ಗುಣಗಳನ್ನು ವರ್ಣಿಸುತ್ತಾ ಅಂತವ [ಕೊನೆಯ] ನ್ನು ಮುಟ್ಟಲಾರರು. ಆ ಕಾರಣ ಅವನಿಗೆ ಅನಂತ [ಗುಣಗಳ ಕೊನೆಯಿಲ್ಲದವನು] ನೆಂದು ಹೆಸರಾಯಿತು. (ಅನಂತಗುಣಗಳುಳ್ಳವನೆಂದು ಅಭಿಪ್ರಾಯವು ಮತ್ತು ಅವನು ನಾಶವಿಲ್ಲದವನಾದುರಿಂದಲೂ ಅನಂತನೆಂದು ಹೆಸರಾಯಿತು.)

೨೫. ಆ ಆದಿಶೇಷನಿಗೆ ಸುಂದರಿಯರಾದ ನಾಗಕನ್ಯೆಯರು ಸುಗಂಧವನ್ನು ಮೃದುವಾಗಿ ಲೇಪಿಸು [ಹಚ್ಚು] ವರು. ಆ ಸುಗಂಧವು ಶೇಷನು ದೊಡ್ಡದಾಗಿ ಉಸಿರು ಬಿಡುವಾಗ ಹೊರಟು ದಿಕ್ಕುದಿಕ್ಕುಗಳಲ್ಲಿ ಸುವಾಸನೆ ಹರಡುವದು.

shrinath.udupa@gmail.com

ಮುಹುಃ ಶ್ವಾಸಾನಿಲಾಯಸ್ತಂ ಯಾತಿ ದಿಕ್ಪಟವಾಸತಾಂ ।
ಯಮಾರಾಧ್ಯ ಪುರಾಣರ್ಷಿರ್ಗರ್ಗೋ ಜ್ಯೋತೀಂಷಿ ತತ್ತ್ವತಃ ॥ ೨೬ ॥

ಜ್ಞಾತವಾನ್ಸಕಲಂ ಚೈವ ನಿಮಿತ್ತಪಠಿತಂ ಫಲಂ ।
ತೇನೇಯಂ ನಾಗವರ್ಯೇಣ ಶಿರಸಾ ವಿಧೃತಾ ಮಹೀ ।
ಬಿಭರ್ತಿ ಸಕಲಾನ್ಲೋಕಾನ್ಸದೇವಾಸುರಮಾನುಷಾನ್ ॥ ೨೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಪಾತಾಲಪ್ರಮಾಣ
ಕೀರ್ತನಂ ನಾಮೈಕವಿಂಶೋಽಧ್ಯಾಯಃ

೨೬. ಈ ಆದಿಶೇಷನನ್ನು ಆರಾಧಿಸಿ ಹಿಂದೆ ಮಹರ್ಷಿಯಾದ ಗರ್ಗ ಮುನಿಯು ಜ್ಯೋತಿಷಶಾಸ್ತ್ರವನ್ನು ಸಂಪೂರ್ಣವಾಗಿ ತಿಳಿದನು ಮತ್ತು ಶಕುನದಿಂದ ಸೂಚಿಸುವ ಫಲವನ್ನು ತಿಳಿಸುವ ಶಕುನಶಾಸ್ತ್ರವನ್ನೂ ರಹಸ್ಯಪೂರ್ವಕವಾಗಿ ತಿಳಿದನು.

೨೭. ಇಂತಹ ಪ್ರಭಾವವುಳ್ಳ ನಾಗರಾಜನಾದ ಈ ಆದಿಶೇಷನು ಈ ಭೂಮಂಡಲವನ್ನೂ ಆ ಮೂಲಕ ಭೂಮಿಯಲ್ಲಿರುವ ಲೋಕಗಳನ್ನೂ ದೇವತೆಗಳು, ಅಸುರರು ಮಾನವರು ಇವರೆಲ್ಲರನ್ನೂ ಧರಿಸಿರುವನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಪಾತಾಲಪ್ರಮಾಣಕೀರ್ತನವರ್ಣನವೆಂಬ
ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ದ್ವಾವಿಂಶೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ತತಶ್ಚಾನಂತರಂ ವಿಪ್ರಾ ನರಕಾ ರೌರವಾದಯಃ ।
ಪಾಪಿನೋ ಯೇಷು ಪಾತ್ಯಂತೇ ತಾಂಶ್ಶೃಣುಧ್ವಂ ದ್ವಿಜೋತ್ತಮಾಃ ॥೧॥

ರೌರವಃ ಶೌಕರೋ ರೋಧಸ್ತಾನೋ ವಿಶಸನಸ್ತಥಾ ।
ಮಹಾಜ್ವಾಲಸ್ತಪ್ತಕುಡ್ಯೋ ಮಹಾಲೋಭೋ ವಿಮೋಹನಃ ॥ ೨ ॥

ರುಧಿರಾಂಧೋ ವಸಾತಪ್ತಃ ಕೃಮಿಶಃ ಕೃಮಿಭೋಜನಃ ।
ಅಸಿಪತ್ರವನಂ ಕೃಷ್ಣೋ ಲಾಲಾಭಕ್ಷಶ್ಚ ದಾರುಣಃ ॥ ೩ ॥

ಇಪ್ಪತ್ತೆರಡನೆಯ ಅಧ್ಯಾಯ

೧. ಸೂತಮುನಿಯು ಹೇಳಿದನು.—ಎಲೈ ಮುನಿಗಳೇ, ಈಗ ಪಾಪಿಗಳನ್ನು ಕಟುವಾಗಿ ಶಿಕ್ಷಿಸುವಂತಹ ಸ್ಥಳವಾದ ರೌರವ ಮುಂತಾದ ನರಕಗಳನ್ನು ವರ್ಣಿಸುವೆನು, ಕೇಳಿರಿ.

೨–೫. ರೌರವ, ಶೌಕರ, ರೋಧಃ, ತಾನ, ವಿಶಸನ, ಮಹಾಜ್ವಾಲ, ತಪ್ತಕುಡ್ಯ, ಮಹಾಲೋಭ, ವಿಮೋಹನ, ರುಧಿರಾಂಧ, ವಸಾತಪ್ತ, ಕೃಮಿಶ, ಕೃಮಿಭೋಜನ, ಅಸಿಪತ್ರವನ, ಕೃಷ್ಣ, ಲಾಲಾಭಕ್ಷ, ಪೂಯವಹ, ಪಾಪ, ವಹ್ನಿಜ್ವಾಲ, ಅಧಶ್ಶಿರ, ಸಂದಂಶ, ಕೃಷ್ಣಸೂತ್ರ, ತಮಸ್ಸು, ಅವೀಚಿ, ಶ್ವಭೋಜನ, ಅಪ್ರ

shrinath.udupa@gmail.com

ತಥಾ ಪೂಯವಹಃ ಪಾಪೋ ವಹ್ನಿಜ್ವಾಲೋ ಹ್ಯಧಃಶಿರಾಃ ।
ಸಂದಂಶಃ ಕೃಷ್ಣಸೂತ್ರಶ್ಚ ತಮಶ್ಚಾವೀಚಿರೇವ ಚ ॥ ೪ ॥

ಶ್ವಭೋಜನೋಽಥಾಪ್ರತಿಷ್ಠೋಽಮಾವೀಚಿಶ್ಚ ತಥಾಽಪರಃ ।
ಇತ್ಯೇವಮಾದಯಶ್ಚಾನ್ಯೇ ನರಕಾ ಭೃಶದಾರುಣಾಃ ॥ ೫ ॥

ಯಮಸ್ಯ ವಿಷಯೇ ಘೋರಾಃ ಶಸ್ತ್ರಾಗ್ನಿವಿಷದರ್ಶಿನಃ ।
ಪತಂತಿ ಯೇಷು ಪುರುಷಾಃ ಪಾಪಕರ್ಮರತಾಶ್ಚ ಯೇ ॥ ೬ ॥

ಕೂಟಸಾಕ್ಷೀ ತಥಾ ಸಮ್ಯಕ್ಪಕ್ಷಪಾತೇನ ಯೋ ವದೇತ್ ।
ಯಶ್ಚಾನ್ಯದನೃತಂ ವಕ್ತಿ ಸ ನರೋ ಯಾತಿ ರೌರವಂ ॥ ೭ ॥

ಭ್ರೂಣಹಾ ಪುರಹಂತಾ ಚ ಗೋಘ್ನಶ್ಚ ಮುನಿಸತ್ತಮಾಃ ।
ಯಾಂತಿ ತೇ ರೌರವಂ ಘೋರಂ ಯಶ್ಚೋಚ್ಛ್ವಾಸನಿರೋಧಕಃ ॥ ೮ ॥

ಸುರಾಪೋ ಬ್ರಹ್ಮಹಾ ಹರ್ತಾ ಸುವರ್ಣಸ್ಯ ಚ ಶೂಕರೇ ।
ಪ್ರಯಾತಿ ನರಕೇ ಯಶ್ಚ ತೈಃ ಸಂಸರ್ಗಮುಪೈತಿ ವೈ ॥ ೯ ॥

ತಿಷ್ಠ, ಮಾವೀಚಿ ಮೊದಲಾದ ಘೋರನರಕಗಳೂ ಶಸ್ತ್ರದರ್ಶಿ, ಅಗ್ನಿದರ್ಶಿ, ವಿಷದರ್ಶಿ ಮೊದಲಾದ ನರಕಗಳೂ ಸಾವಿರಾರು ಯಮನ ರಾಜ್ಯದಲ್ಲಿ ಇರುವವು.

೬–೭. ಈ ನರಕಗಳಲ್ಲಿ ಪಾಪಿಗಳು ಬೀಳುವರು. ಸುಳ್ಳುಸಾಕ್ಷಿಯನ್ನು ಹೇಳಿದವನೂ ಪಕ್ಷಪಾತದಿಂದ ಅನ್ಯಾಯವನ್ನು ಹೇಳುವವರೂ, ಸುಳ್ಳುಹೇಳುವವನೂ ರೌರವನರಕದಲ್ಲಿ ಬೀಳುವರು.

೮. ಗರ್ಭವನ್ನು ನಾಶಮಾಡಿದವನು, ನಗರವನ್ನು ಪಾಳುಕೆಡಹಿದವನು, ಗೋವನ್ನು ಕೊಂದವನು, ಕತ್ತನ್ನದುಮಿ ಉಸಿರನ್ನು ತಡೆದು ಮನುಷ್ಯನನ್ನು ಕೊಂದವನು, ಇವರೆಲ್ಲರೂ ಘೋರವಾದ ರೌರವ ನರಕಕ್ಕೆ ಹೋಗುವರು.

೯. ಮದ್ಯಪಾನಮಾಡುವವನು, ಬ್ರಾಹ್ಮಣನನ್ನು ಕೊಂದವನು, ಚಿನ್ನವನ್ನು ಕದ್ದವನು ಇವರೆಲ್ಲರೂ ಶೂಕರವೆಂಬ ನರಕವನ್ನು ಪಡೆಯುವರು. ಇಂತಹ ಪಾಪಿಗಳ ಸಂಬಂಧವನ್ನು ಬೆಳೆಸಿದವರೂ ಸಹ ಶೂಕರ ನರಕವನ್ನು ಪಡೆಯುವರು.

shrinath.udupa@gmail.com

ರಾಜನ್ಯವೈಶ್ಯಹಾ ಚೈವ ತಥೈವ ಗುರುತಲ್ಪಗಃ ।
ತಪ್ತಕುಂಭೇ ಸ್ವಸೃಗಾಮೀ ಹಂತಿ ರಾಜಭಟಂ ಚ ಯಃ ॥ ೧೦ ॥

ಮಾಧ್ವೀವಿಕ್ರಯಕೃದ್ವಧ್ಯಪಾಲಃ ಕೇಸರವಿಕ್ರಯೀ ।
ತಪ್ತಲೋಹೇ ಪತಂತ್ಯೇತೇ ಯಶ್ಚ ಭಕ್ತಂ ಪರಿತ್ಯಜೇತ್ ॥ ೧೧ ॥

ಸುತಾಂ ಸ್ನುಷಾಂ ಚಾಪಿ ಗತ್ವಾ ಮಹಾಜ್ವಾಲೇ ನಿಪಾತ್ಯತೇ ।
ಅವಮಂತಾ ಗುರೂಣಾಂ ಯೋ ಯಶ್ಚಾಽಽಕ್ರೋಷ್ಟಾ ನರಾಧಮಃ ॥ ೧೨ ॥

ವೇದದೂಷಯಿತಾ ಯಶ್ಚ ವೇದವಿಕ್ರಯಕಶ್ಚ ಯಃ ।
ಅಗಮ್ಯಗಾಮೀ ಯಶ್ಚ ಸ್ಯಾತ್ತೇಯಾಂತಿ ಶಬಲಂ ದ್ವಿಜಾಃ ॥ ೧೩ ॥

೧೦–೧೧. ಕ್ಷತ್ರಿಯರನ್ನೂ ವೈಶ್ಯರನ್ನೂ ಕೊಂದವನು, ಗುರುಪತ್ನಿಯನ್ನು ಭೋಗಿಸಿದವನು, ಸಹೋದರಿಯಲ್ಲಿಯೇ ಸಂಭೋಗಮಾಡಿದವನು, ರಾಜಭಟರನ್ನು ಕೊಂದವನು, ಇವರೆಲ್ಲರೂ ತಪ್ತಕುಂಭ [ಕಾಸಿದ ಕಬ್ಬಿಣದ ಕಟಾಹ] ವೆಂಬ ನರಕವನ್ನು ಹೊಂದುವರು. ಮದ್ಯವನ್ನು ಮಾರುವವನು, ವಧಾರ್ಹನನ್ನು ಸಂರಕ್ಷಿಸುವವನು, ಕೇಸರವನ್ನು ಮಾರುವವನು, ವಿಶ್ವಾಸಿಯನ್ನು ಸಮಯದಲ್ಲಿ ಸಲಹದೆ ಬಿಡುವವನು ಇವರೆಲ್ಲರೂ ತಪ್ತಲೋಹವೆಂಬ ನರಕಶಿಕ್ಷೆಯನ್ನನುಭವಿಸುವರು. ಮಗಳಲ್ಲಿಯೂ ಸೊಸೆಯಲ್ಲಿಯೂ ಸಂಭೋಗವನ್ನು ಮಾಡಿದವನನ್ನು ಮಹಾಜ್ವಾಲ [ಉರಿಯುತ್ತಿರುವ ಬೆಂಕಿಯುಳ್ಳದುದು] ವೆಂಬ ನರಕದಲ್ಲಿ ಕೆಡಹುವರು.

೧೨–೧೩. ಗುರುಗಳನ್ನು ತಿರಸ್ಕರಿಸುವವನು, ಕಾರಣವಿಲ್ಲದೆ ಆಕ್ರೋಶಗೊಳ್ಳುವವನು, ವೇದವನ್ನು ನಿಂದಿಸುವವನು, ವೇದಪಾಠವನ್ನು ಸಂಬಳತೆಗೆದುಕೊಂಡು ಹೇಳುವವನು, ವಿಧವೆಯರು, ಹೊಲತಿಯರು ಮುಂತಾದ ಸ್ತ್ರೀಯರಲ್ಲಿ ಸಂಭೋಗಮಾಡುವವರು ಇವರೆಲ್ಲರೂ ಶಬಲವೆಂಬ ನರಕವನ್ನು ಪಡೆಯುವರು.

shrinath.udupa@gmail.com

ಚೌರೋ ವಿಮೋಹೇ ಪತತಿ ಮರ್ಯಾದಾದೂಷಕಸ್ತಥಾ ।
ದೇವದ್ವಿಜಪಿತೃದ್ವೇಷ್ಟಾ ರತ್ನದೂಷಯಿತಾ ಚ ಯಃ ॥ ೧೪ ॥

ಸ ಯಾತಿ ಕೃಮಿಭಕ್ಷ್ಯೇ ವೈ ಕೃಮೀಶೇ ತು ದುರಿಷ್ಟಿಕೃತ್ ।
ಪಿತೃದೇವಾತಿಥೀನ್ಯಸ್ತು ಪರ್ಯಶ್ನಾತಿ ನರಾಧಮಃ ॥ ೧೫ ॥

ಲಾಲಾಭಕ್ಷ್ಯೇ ಸ ಯಾತ್ಯುಗ್ರೇ ಶರಕರ್ತಾ ಚ ವೇಧಕೇ ।
ಕರೋತಿ ಕರ್ಣಿನೋ ಯಶ್ಚ ಯಶ್ಚ ಖಡ್ಗಾದಿಕೃನ್ನರಃ ॥ ೧೬ ॥

ಪ್ರಯಾಂತ್ಯೇತೇ ವಿಶಸನೇ ನರಕೇ ಭೃಶದಾರುಣೇ ।
ಅಸತ್ಪ್ರತಿಗ್ರಹೀತಾ ಚ ನರಕೇ ಯಾತ್ಯಧೋಮುಖೇ ॥ ೧೭ ॥

---

೧೪. ಕಳ್ಳನೂ, ಮರ್ಯಾದೆ [ಚಾತುರ್ವರ್ಣ್ಯಗಳಿಗೆ ವಿಹಿತವಾದ ವೇದ ಮಾರ್ಗ] ಯನ್ನು ದೂಷಿಸುವವನೂ ವಿಮೋಹವೆಂಬ ನರಕದಲ್ಲಿ ಬೀಳುವರು. ದೇವ ಬ್ರಾಹ್ಮಣರು, ಪಿತೃಗಳು ಇವರನ್ನು ದ್ವೇಷಿಸುವವನೂ, ರತ್ನವನ್ನು ದೂಷಿಸುವವನು (ದುರಾಸೆಯಿಂದ ರತ್ನದ ನಿಜವಾದ ಬೆಲೆಯನ್ನು ಹೇಳದೆ ಕೆಟ್ಟರತ್ನವೆಂದು ದೂಷಿಸುವವನೂ) ಕೃಮಿಭೋಜ್ಯ (ಅಲ್ಲಿ ಕೃಮಿಗಳು ಪಾಪಿಯನ್ನು ಕಿತ್ತುತಿನ್ನುವವು) ವೆಂಬ ನರಕವನ್ನು ಪಡೆಯುವನು. ಶ್ಯೇನಯಾಗ ಮುಂತಾದ ಕೆಟ್ಟಯಾಗಗಳನ್ನು ಮಾಡುವವನು ಕೃಮೀಶವೆಂಬ ನರಕದಲ್ಲಿ ಬೀಳುವನು.

೧೫–೧೬. ಪಿತೃದೇವತೆಗಳಿಗೆ, ಅತಿಥಿಗಳಿಗೆ ನಿವೇದಿಸುವ ಮೊದಲು ಆಹಾರವನ್ನು ಸೇವಿಸುವ ನೀಚಮಾನವನು ಲಾಲಾಭಕ್ಷ್ಯ (ಅಲ್ಲಿ ಜೊಲ್ಲನ್ನು ಮಾತ್ರ ತಿನ್ನಬೇಕು) ವೆಂಬ ಘೋರವಾದ ನರಕವನ್ನು ಪಡೆಯುವನು. ವಧೆಯನ್ನು ಮಾಡುವವನಿಗೆ ಬಾಣ, ಕತ್ತಿ ಮುಂತಾದುವುಗಳನ್ನು ಮಾಡಿಕೊಡುವವನು ಭಯಂಕರವಾದ ವಿಶಸನವೆಂಬ (ಅಲ್ಲಿ ಆಯಾಯಾ ಆಯುಧಗಳಿಂದಲೇ ಪಾಪಿಗಳನ್ನು ಸೀಳುವರು) ನರಕವನ್ನು ಹೊಂದುವನು.

೧೭. ಕೆಟ್ಟದಾನಗಳನ್ನು ತೆಗೆದುಕೊಳ್ಳುವವನೂ, ಯಾಗಾಧಿಕಾರವಿಲ್ಲದವನಿಗೆ ಯಾಗಮಾಡಿಸುವವನೂ, ಸುಳ್ಳುಜ್ಯೋತಿಷ್ಯವನ್ನು ಹೇಳುವವನೂ ಅಧೋಮುಖ (ಅಲ್ಲಿ ಪಾಪಿಯನ್ನು ತಲೆಕೆಳಗಾಗಿ ನೇತುಹಾಕುವರು) ವೆಂಬ ನರಕದಲ್ಲಿ ಬೀಳುವನು.

shrinath.udupa@gmail.com

ಅಯಾಜ್ಯಯಾಜಕಸ್ತತ್ರ ತಥಾ ನಕ್ಷತ್ರಸೂಚಕಃ ।
ಕೃಮಿಪೂಯೇ ನರಶ್ಚೈಕೋ ಯಾತಿ ಮಿಷ್ಟಾನ್ನಭುಕ್ಸದಾ ॥ ೧೮ ॥

ಲಾಕ್ಷಾಮಾಂಸರಸಾನಾಂ ಚ ತಿಲಾನಾಂ ಲವಣಸ್ಯ ಚ ।
ವಿಕ್ರೇತಾ ಬ್ರಾಹ್ಮಣೋ ಯಾತಿ ತಮೇವ ನರಕಂ ದ್ವಿಜಾಃ ॥ ೧೯ ॥

ಮಾರ್ಜಾರಕುಕ್ಕುಟಚ್ಛಾಗಶ್ವವರಾಹವಿಹಂಗಮಾನ್ ।
ಪೋಷಯನ್ನರಕಂ ಯಾತಿ ತಮೇವ ದ್ವಿಜಸತ್ತಮಾಃ ॥ ೨೦ ॥

ರಂಗೋಪಜೀವೀ ಕೈವರ್ತಃ ಕುಂಡಾಶೀ ಗರದಸ್ತಥಾ ।
ಸೂಚೀ ಮಾಹಿಷಿಕಶ್ಚೈವ ಪರ್ವಗಾಮೀ ಚ ಯೋ ದ್ವಿಜಃ ॥ ೨೧ ॥

ಅಗಾರದಾಹೀ ಮಿತ್ರಘ್ನಃ ಶಕುನಿಗ್ರಾಮಯಾಜಕಃ ।
ರುಧಿರಾಂಧೇ ಪತಂತ್ಯೇತೇ ಸೋಮಂ ವಿಕ್ರೀಣತೇ ಚ ಯೇ ॥ ೨೨ ॥

೧೮-೧೯. ಯಾರಿಗೂ ಅನ್ನವನ್ನಿಕ್ಕದೇ ದಿನವೂ ತಾನೋರ್ವನೇ ಮಿಷ್ಟಾನ್ನವನ್ನು ಊಟಮಾಡುವವನು ಕೃಮಿಪೂಯವೆಂಬ (ಕ್ರಿಮಿಗಳಿಂದ ತುಂಬಿದ ಕೀವು) ನರಕವನ್ನು ಪಡೆಯುವನು. ಅರಗು, ಮಾಂಸ, ಪಾದರಸ (ರಸವಸ್ತುಗಳು) ಎಳ್ಳು ಉಪ್ಪು ಇವುಗಳನ್ನು ಮಾರುವ ಬ್ರಾಹ್ಮಣನೂ ಕೃಮಿಪೂಯನರಕವನ್ನು ಹೊಂದುವನು.

೨೦. ಬೆಕ್ಕು, ಕೋಳಿ, ಆಡು, ನಾಯಿ, ಹಂದಿ, ಹಕ್ಕಿ ಇವುಗಳನ್ನು ಸಾಕುವ ಬ್ರಾಹ್ಮಣನೂ ಅದೇ ಕೃಮಿಪೂಯವೆಂಬ ನರಕದಲ್ಲಿ ಶಿಕ್ಷಿಸಲ್ಪಡುವನು.

೨೧-೨೨. ನಾಟ್ಯ, ಅಭಿನಯ ಮುಂತಾದುವುಗಳಿಂದ ಜೀವನಮಾಡುವವನು ಬೆಸ್ತರವನು, ಅನ್ನಮಾಡಿದ ಪಾತ್ರೆಯಲ್ಲಿಯೇ ಊಟಮಾಡುವವನು, ವಿಷವನ್ನುಣಿಸುವವನು, ಚಾಡಿಹೇಳುವವನು, ಎಮ್ಮೆಕೋಣಗಳಿಂದ ಜೀವಿಸುವವನು, ಅಮಾವಾಸ್ಯೆ ಮುಂತಾದ ಪರ್ವಕಾಲದಲ್ಲಿ ಸ್ತ್ರೀಸಂಭೋಗವನ್ನು ಮಾಡುವ ದ್ವಿಜನು, ಮನೆಗೆ ಬೆಂಕಿಯಿಟ್ಟವನು, ಮಿತ್ರದ್ರೋಹವನ್ನು ಮಾಡುವವನು, ಪಕ್ಷಿಗಳನ್ನು ಹೋಮಮಾಡುವವನು, ಸೋಮಲತೆಯನ್ನು ವಿಕ್ರಯಿಸುವವನು ಇವರೆಲ್ಲರೂ ರುಧಿರಾಂಧ (ರಕ್ತಮಯ) ವೆಂಬ ಭಯಂಕರವಾದ ನರಕವನ್ನು ಪಡೆಯುವರು.

shrinath.udupa@gmail.com

ಮಧುಹಾ ಗ್ರಾಮಹಂತಾ ಚ ಯಾತಿ ವೈತರಣೀಂ ನರಃ ।
ರೇತಃಪಾನಾದಿಕರ್ತಾರೋ ಮರ್ಯಾದಾಭೇದಿನಶ್ಚ ಯೇ ॥ ೨೩ ॥

ತೇ ಕೃಚ್ಛ್ರೇ ಯಾಂತ್ಯಶೌಚಾಶ್ಚ ಕುಹಕಾಜೀವಿನಶ್ಚ ಯೇ ।
ಅಸಿಪತ್ರವನಂ ಯಾತಿ ವನಚ್ಛೇದೀ ವೃಥೈವ ಯಃ ॥ ೨೪ ॥

ಔರಭ್ರಿಕಾ ಮೃಗವ್ಯಾಧಾ ವಹ್ನಿಜ್ವಾಲೇ ಪತಂತಿ ವೈ ।
ಯಾಂತಿ ತತ್ರೈವ ತೇ ವಿಪ್ರಾ ಯಶ್ಚಾಪಾಕೇಷು ವಹ್ನಿದಃ ॥ ೨೫ ॥

ವ್ರತೋಪಲೋಪಕೋ ಯಶ್ಚ ಸ್ವಾಶ್ರಮಾದ್ವಿಚ್ಯುತಶ್ಚ ಯಃ ।
ಸಂದಂಶಯಾತನಾಮಧ್ಯೇ ಪತತಸ್ತಾವುಭಾವಪಿ ॥ ೨೬ ॥

ದಿವಾ ಸ್ವಪ್ನೇಷು ಸ್ಕಂದಂತೇ ಯೇ ನರಾ ಬ್ರಹ್ಮಚಾರಿಣಃ ।
ಪುತ್ರೈರಧ್ಯಾಪಿತಾ ಯೇ ತು ತೇ ಪತಂತಿ ಶ್ವಭೋಜನೇ ॥ ೨೭ ॥

೨೩–೨೪. ಜೇನು ಕೀಳುವವನು, ಗ್ರಾಮವನ್ನು ನಾಶಮಾಡುವವನು, ಇವರೀರ್ವರೂ ವೈತರಣೀನದಿಯನ್ನು ಪಡೆಯುವರು. ರಕ್ತ ಮತ್ತು ವೀರ್ಯಗಳನ್ನು ಕುಡಿಯುವವನು, ವೇದಮಾರ್ಗವನ್ನು ಹಾಳುಮಾಡುವವನು, ಆಚಾರವಿಲ್ಲದೆ ಶ್ವಪಚನಾಗಿರುವವನು, ಮೋಸದಿಂದ ಜೀವಿಸುವವನು ಇವರೆಲ್ಲರೂ ಕೃಚ್ಛ್ರವೆಂಬ ನರಕವನ್ನು ಪಡೆಯುವರು. ಪ್ರಯೋಜನವಿಲ್ಲದೆ ವ್ಯರ್ಥವಾಗಿ ವನವನ್ನು ಕಡಿಯುವವನು ಅಸಿಪತ್ರವನವೆಂಬ ನರಕವನ್ನು ಪಡೆಯುವನು.

೨೫. ಕುರಿ ಮೇಕೆಗಳಿಂದ ಜೀವಿಸುವವರು, ಮೃಗಗಳನ್ನು ಬೇಟೆಯಾಡುವವರು, ಜನರು ಮಲಗಿರುವಾಗ ಮನೆಗೆ ಬೆಂಕಿಯಿಡುವವರು ಇವರೆಲ್ಲರೂ ವಹ್ನಿಜ್ವಾಲವೆಂಬ ನರಕದಲ್ಲಿ ಶಿಕ್ಷೆಯನ್ನು ಅನುಭವಿಸುವರು.

೨೬. ವ್ರತವನ್ನು ನಾಶಮಾಡುವವನು, ತನ್ನಾಶ್ರಮವನ್ನು ಬಿಟ್ಟವನು ಇವರೀರ್ವರೂ ಕ್ರೂರಮೃಗಗಳಿಂದ ಕಚ್ಚಿಸಿ ಶಿಕ್ಷಿಸುವ ಸಂದಂಶವೆಂಬ ನರಕದ ಶಿಕ್ಷೆಯನ್ನು ಅನುಭವಿಸುವರು.

೨೭. ಹಗಲು ನಿದ್ರೆಮಾಡಿ ಸ್ವಪ್ನದಲ್ಲಿ ವೀರ್ಯಸ್ಖಲನವನ್ನು ಹೊಂದುವ ಬ್ರಹ್ಮಚಾರಿಗಳೂ, ಮಕ್ಕಳಿಂದ ವೇದವನ್ನು ಅಧ್ಯಯನಮಾಡುವವರೂ, ಶ್ವಭೋಜನವೆಂಬ ನರಕದಲ್ಲಿ (ಅಲ್ಲಿ ಕ್ರೂರವಾದ ನಾಯಿಗಳಿಂದ ಕಚ್ಚಿಸುವರು) ಬೀಳುವರು.

shrinath.udupa@gmail.com

ಏತೇ ಚಾನ್ಯೇ ಚ ನರಕಾಃ ಶತಶೋಽಥ ಸಹಸ್ರಶಃ ।
ಯೇಷು ದುಷ್ಕೃತಕರ್ಮಾಣಃ ಪಚ್ಯಂತೇ ಯಾತನಾಗತಾಃ ॥ ೨೮ ॥

ತಥೈವ ಪಾಪಾನ್ಯೇತಾನಿ ತಥಾಽನ್ಯಾನಿ ಸಹಸ್ರಶಃ ।
ಭುಜ್ಯಂತೇ ಜಾತಿಪುರುಷೈರ್ನರಕಾಂತರಗೋಚರೈಃ ॥ ೨೯ ॥

ವರ್ಣಾಶ್ರಮವಿರುದ್ಧಂ ಚ ಕರ್ಮ ಕುರ್ವಂತಿ ಯೇ ನರಾಃ ।
ಕರ್ಮಣಾ ಮನಸಾ ವಾಚಾ ನಿರಯೇಷು ಪತಂತಿ ತೇ ॥ ೩೦ ॥

ಅಧಶ್ಶಿರೋಭಿರ್ದೃಶ್ಯಂತೇ ನಾರಕೈರ್ದಿವಿ ದೇವತಾಃ ।
ದೇವಾಶ್ಚಾಧೋಮುಖಾನ್ಸರ್ವಾನಧಃ ಪಶ್ಯಂತಿ ನಾರಕಾನ್ ॥ ೩೧ ॥

ಸ್ಥಾವರಾಃ ಕೃಮಯೋಽಬ್ಜಾಶ್ಚ ಪಕ್ಷಿಣಃ ಪಶವೋ ನರಾಃ ।
ಧಾರ್ಮಿಕಾಸ್ತ್ರಿದಶಾಸ್ತದ್ವನ್ಮೋಕ್ಷಿಣಶ್ಚ ಯಥಾಕ್ರಮಂ ॥ ೩೨ ॥

---

೨೮. ಇವುಗಳಲ್ಲದೆ ಇನ್ನೂ ಸಾವಿರಾರು ನರಕಗಳಿರುವವು. ಆ ನರಕಗಳಲ್ಲಿಯೂ ಪಾಪಿಗಳನ್ನು ಕ್ರೂರವಾಗಿ ಶಿಕ್ಷಿಸುವರು.

೨೯. ಹಾಗೆಯೇ ಇನ್ನೂ ಸಾವಿರಾರು ಪಾಪಗಳಿರುವವು. ಅಂತಹ ಪಾಪವನ್ನಾಚರಿಸಿದವರೂ ಆಯಾಯ ನರಕಗಳಲ್ಲಿ ಬಿದ್ದು ಪಾಪಫಲವನ್ನು ಅನುಭವಿಸುವರು.

೩೦. ತಮ್ಮ ವರ್ಣ ಮತ್ತು ಆಶ್ರಮಗಳಿಗೆ ವಿರುದ್ಧವಾದ ಕರ್ಮವನ್ನು ಶರೀರದಿಂದಲಾಗಲೀ ಮನಸ್ಸಿನಿಂದಲಾಗಲೀ ಮಾತಿನಿಂದಲಾಗಲೀ ಆಚರಿಸಿದವರೂ ಸಹ ನರಕವನ್ನನುಭವಿಸುವರು.

೩೧. ನರಕದಲ್ಲಿನ ಪಾಪಿಗಳು ತಲೆಕೆಳಗಾಗಿ ಮಾಡಲ್ಪಟ್ಟಿದ್ದು ಸ್ವರ್ಗದಲ್ಲಿರುವ ದೇವತೆಗಳನ್ನು ನೋಡುವರು. ದೇವತೆಗಳೂ ಸಹ ತಮ್ಮ ಕೆಳಗಡೆ ತಲೆಕೆಳಗಾಗಿ ನೇತಾಡುವ ಈ ಪಾಪಿಗಳನ್ನು ನೋಡುವರು.

೩೨. ಪ್ರಾಣಿಗಳು ಮೊದಲು ಕಲ್ಲು ಮುಂತಾದ ಸ್ಥಾವರ ಜನ್ಮವನ್ನು ಪಡೆಯುವರು. ಆಮೇಲೆ ಕೃಮಿಗಳಾಗುವರು. ಆಮೇಲೆ ಜಲಚರಪ್ರಾಣಿಗಳಾಗುವರು. ಬಳಿಕ ಪಕ್ಷಿಗಳಾಗುವರು. ಆಮೇಲೆ ಪಶುಗಳಾಗುವರು. ಅನಂತರ ಮನುಷ್ಯರಾಗುವರು. ಆಮೇಲೆ ಧಾರ್ಮಿಕಪುರುಷರಾಗುವರು. ಆಮೇಲೆ ದೇವತೆಗಳಾಗುವರು. ಆಮೇಲೆ ಕೊನೆಯಲ್ಲಿ ಮೋಕ್ಷವನ್ನು ಹೊಂದುವರು.

shrinath.udupa@gmail.com

ಸಹಸ್ರಭಾಗಃ ಪ್ರಥಮಾದ್ದ್ವಿತೀಯೋಽನುಕ್ರಮಾತ್ತಥಾ ।
ಸರ್ವೇ ಹ್ಯೇತೇ ಮಹಾಭಾಗಾ ಯಾವನ್ಮುಕ್ತಿಸಮಾಶ್ರಯಾಃ ॥ ೩೩ ॥

ಯಾವಂತೋ ಜಂತವಃ ಸ್ವರ್ಗೇ ತಾವಂತೋ ನರಕೌಕಸಃ ।
ಪಾಪಕೃದ್ಯಾತಿ ನರಕಂ ಪ್ರಾಯಶ್ಚಿತ್ತಪರಾಙ್ಮುಖಃ ॥ ೩೪ ॥

ಪಾಪಾನಾಮನುರೂಪಾಣಿ ಪ್ರಾಯಶ್ಚಿತ್ತಾನಿ ಯದ್ಯಥಾ ।
ತಥಾ ತಥೈವ ಸಂಸ್ಮೃತ್ಯ ಪ್ರೋಕ್ತಾನಿ ಪರಮರ್ಷಿಭಿಃ ॥ ೩೫ ॥

ಪಾಪೇ ಗುರೂಣಿ ಗುರುಣಿ ಸ್ವಲ್ಪಾನ್ಯಲ್ಪೇ ಚ ತದ್ವಿದಃ ।
ಪ್ರಾಯಶ್ಚಿತ್ತಾನಿ ವಿಪ್ರೇಂದ್ರಾ ಜಗುಃ ಸ್ವಾಯಂಭುವಾದಯಃ ॥ ೩೬ ॥

ಪ್ರಾಯಶ್ಚಿತ್ತಾನ್ಯಶೇಷಾಣಿ ತಪಃಕರ್ಮಾತ್ಮಕಾನಿ ವೈ ।
ಯಾನಿ ತೇಷಾಮಶೇಷಾಣಾಂ ಕೃಷ್ಣಾನುಸ್ಮರಣಂ ಪರಂ ॥ ೩೭ ॥

---

೩೩. ಈ ಸ್ಥಾವರಗಳಿಂದ ಹಿಡಿದು ಮುಕ್ತಿಹೊಂದುವವರೆಗಿರುವ ಜನ್ಮಗಳಲ್ಲಿ ಮೊದಲನೆಯದಕ್ಕಿಂತ ಎರಡನೆಯ ಜನ್ಮವು ಸಾವಿರಪಾಲು ಉತ್ತಮವಾದುದು.

೩೪. ಸ್ವರ್ಗದಲ್ಲಿರುವಷ್ಟು ಜನಗಳು ನರಕದಲ್ಲಿಯೂ ಇರುವರು. ಪಾಪವನ್ನು ಮಾಡಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದೇ ಇರುವವನು ನರಕಕ್ಕೆ ಹೋಗುವನು.

೩೫. ಆಯಾಯಾ ಪಾಪಗಳಿಗೆ ತಕ್ಕಂತಹ ಪ್ರಾಯಶ್ಚಿತ್ತಗಳನ್ನು ವೇದಗಳಿಂದ ಸಂಗ್ರಹಿಸಿ ಮಹರ್ಷಿಗಳು ಧರ್ಮಸ್ಮೃತಿಗಳಲ್ಲಿ ಬರೆದಿರುವರು.

೩೬. ಪಾಪವು ಮಹತ್ತಾಗಿದ್ದರೆ ಅದಕ್ಕೆ ಮಹತ್ತರವಾದ ಪ್ರಾಯಶ್ಚಿತ್ತವನ್ನೇ ಹೇಳಿರುವರು. ಸ್ವಲ್ಪವಾಗಿದ್ದರೆ ಅಲ್ಪವಾದ ಪ್ರಾಯಶ್ಚಿತ್ತವನ್ನೇ ಹೇಳಿರುವರು. ಈ ಪ್ರಾಯಶ್ಚಿತ್ತಗಳನ್ನು ಸ್ವಾಯಂಭುವಮನು ಮುಂತಾದವರು ಮನುಸ್ಮೃತಿ ಮೊದಲಾದುವುಗಳಲ್ಲಿ ಹೇಳಿರುವರು.

೩೭. ಪ್ರಾಯಶ್ಚಿತ್ತಗಳೆಲ್ಲವೂ ತಪಸ್ಸು ಮತ್ತು ಕರ್ಮಗಳ ರೂಪವಾಗಿರುವವು. ಅವುಗಳಲ್ಲೆಲ್ಲಾ ಕೃಷ್ಣನನ್ನು ಭಕ್ತಿಯಿಂದ ಸ್ಮರಿಸುವುದೇ ಮುಖ್ಯವು.

shrinath.udupa@gmail.com

ಕೃತೇ ಪಾಪೇಽನುತಾಪೋ ವೈ ಯಸ್ಯ ಪುಂಸಃ ಪ್ರಜಾಯತೇ ।
ಪ್ರಾಯಶ್ಚಿತ್ತಂ ತು ತಸ್ಯೈಕಂ ಹರಿಸಂಸ್ಮರಣಂ ಪರಂ ॥ ೩೮ ॥

ಪ್ರಾತರ್ನಿಶಿ ತಥಾ ಸಂಧ್ಯಾಮಧ್ಯಾಹ್ನಾದಿಷು ಸಂಸ್ಮರನ್ ।
ನಾರಾಯಣಮವಾಪ್ನೋತಿ ಸದ್ಯಃ ಪಾಪಕ್ಷಯಾನ್ನರಃ ॥ ೩೯ ॥

ವಿಷ್ಣುಸಂಸ್ಮರಣಾತ್ಕ್ಷೀಣಸಮಸ್ತಕ್ಲೇಶಸಂಚಯಃ ।
ಮುಕ್ತಿಂ ಪ್ರಯಾತಿ ಭೋ ವಿಪ್ರಾ ವಿಷ್ಣೋಸ್ತಸ್ಯಾನುಕೀರ್ತನಾತ್ ॥ ೪೦ ॥

ವಾಸುದೇವೇ ಮನೋ ಯಸ್ಯ ಜಪಹೋಮಾರ್ಚನಾದಿಷು ।
ತಸ್ಯಾಂತರಾಯೋ ವಿಪ್ರೇಂದ್ರಾ ದೇವೇಂದ್ರತ್ವಾದಿಕಂ ಫಲಂ ॥ ೪೧ ॥

ಕ್ವ ನಾಕಪೃಷ್ಠಗಮನಂ ಪುನರಾವೃತ್ತಿಲಕ್ಷಣಂ ।
ಕ್ವ ಜಪೋ ವಾಸುದೇವೇತಿ ಮುಕ್ತಿಬೀಜಮನುತ್ತಮಂ ॥ ೪೨ ॥

---

೩೮. ಪಾಪವನ್ನು ಮಾಡಿದ ಮೇಲೆ ಯಾವನಿಗೆ ಅನುತಾಪ (ಮಾಡಬಾರದಿತ್ತು ಎಂಬ ಚಿಂತೆ) ವು ಉಂಟಾಗುವದೋ ಅವನು ಭಕ್ತಿಯಿಂದ ಹರಿಸ್ಮರಣವನ್ನು ಮಾಡಿದರೆ ಸಾಕು. ಅದೇ ಅವನಿಗೆ ಶ್ರೇಷ್ಠವಾದ ಪ್ರಾಯಶ್ಚಿತ್ತವು.

೩೯. ಹಗಲು, ರಾತ್ರಿ, ಸಂಧ್ಯಾಕಾಲ, ಮಧ್ಯಾಹ್ನ ಮುಂತಾದ ಕಾಲಗಳಲ್ಲಿ ಭಕ್ತಿಯಿಂದ ನಾರಾಯಣನನ್ನು ಸ್ಮರಿಸಿದರೆ ಜಾಗ್ರತೆಯಾಗಿ ಪಾಪವು ನಾಶವಾಗುವುದು.

೪೦. ಹರಿಯ ಸ್ಮರಣೆಯಿಂದ ಪಾಪವೆಲ್ಲವನ್ನೂ ಕಳೆದುಕೊಂಡ ಮಾನವನು ಮುಂದೆ ಕೆಲವುಕಾಲದಲ್ಲೇ ಮುಕ್ತಿಯನ್ನು ಪಡೆಯುವನು.

೪೧. ಜಪ, ಹೋಮ, ಪೂಜೆಗಳನ್ನು ಫಲಾಪೇಕ್ಷೆಯಿಲ್ಲದೆ ಶ್ರೀಕೃಷ್ಣನನ್ನು ಸ್ಮರಿಸುತ್ತಾ ಮಾಡಬೇಕು. ಆರೀತಿ ಮಾಡಿದರೆ ದೇವೇಂದ್ರಪದವಿ ಮೊದಲಾದುದು ಲಭಿಸುವುದಾದರೂ ಅದನ್ನು ಅಪೇಕ್ಷಿಸಬಾರದು. ಮುಕ್ತಿಗೆ ದೇವೇಂದ್ರಪದವಿಯು ತಡೆಯಾದುದು.

೪೨. ಸ್ವರ್ಗಕ್ಕೆ ಹೋದರೆ, ಪುಣ್ಯವು ಕಳೆದಮೇಲೆ ಭೂಮಿಗೆ ತಿರುಗಿ ಬರಬೇಕು. ವಾಸುದೇವ ಎಂದು ಸ್ಮರಣಮಾಡುವದರಿಂದ ಮುಕ್ತಿಯು ಲಭಿಸುವುದು. ತಿರುಗಿ ಜನ್ಮವಿಲ್ಲವು. ಅಂದಮೇಲೆ ಅಂತಹ ಸ್ವರ್ಗವೆಲ್ಲಿ? ವಾಸುದೇವಸ್ಮರಣೆಯೆಲ್ಲಿ? ಇವೆರಡಕ್ಕೂ ಸಮಾನತೆಯಿಲ್ಲವು. ಈ ಕಾರಣದಿಂದ ವಾಸುದೇವಸ್ಮರಣವನ್ನು ಮಾಡುವವನು ದೇವೇಂದ್ರಪದವಿಯನ್ನೂ ಅಪೇಕ್ಷಿಸಬಾರದು.

shrinath.udupa@gmail.com

ತಸ್ಮಾದಹರ್ನಿಶಂ ವಿಷ್ಣುಂ ಸಂಸ್ಮರನ್ಪುರುಷೋ ದ್ವಿಜಃ ।
ನ ಯಾತಿ ನರಕಂ ಶುದ್ಧಃ ಸಂಕ್ಷೀಣಾಖಿಲಪಾತಕಃ ॥ ೪೩ ॥

ಮನಃಪ್ರೀತಿಕರಃ ಸ್ವರ್ಗೋ ನರಕಸ್ತದ್ವಿಪರ್ಯಯಃ ।
ನರಕಸ್ವರ್ಗಸಂಜ್ಞೇ ವೈ ಪಾಪಪುಣ್ಯೇ ದ್ವಿಜೋತ್ತಮಾಃ ॥ ೪೪ ॥

ವಸ್ತ್ವೇಕಮೇವ ದುಃಖಾಯ ಸುಖಾಯೇರ್ಷ್ಯೋದಯಾಯ ಚ ।
ಕೋಪಾಯ ಚ ಯತಸ್ತಸ್ಮಾದ್ವಸ್ತು ದುಃಖಾತ್ಮಕಂ ಕುತಃ ॥ ೪೫ ॥

ತದೇವ ಪ್ರೀತಯೇ ಭೂತ್ವಾ ಪುನರ್ದುಃಖಾಯ ಜಾಯತೇ ।
ತದೇವ ಕೋಪಾಯ ಯತಃ ಪ್ರಸಾದಾಯ ಚ ಜಾಯತೇ ॥ ೪೬ ॥

ತಸ್ಮಾದ್ದುಃಖಾತ್ಮಕಂ ನಾಸ್ತಿ ನ ಚ ಕಿಂಚಿತ್ಸುಖಾತ್ಮಕಂ ।
ಮನಸಃ ಪರಿಣಾಮೋಽಯಂ ಸುಖದುಃಖಾದಿಲಕ್ಷಣಃ ॥ ೪೭ ॥

---

೪೩. ಆದುದರಿಂದ ಹಗಲು ರಾತ್ರಿ ವಿಷ್ಣುವನ್ನು ಸ್ಮರಿಸುತ್ತಾ ಮಾನವನು ಪಾಪವನ್ನು ಕಳೆದುಕೊಂಡು ಶುದ್ಧನಾದರೆ ನರಕಕ್ಕೆ ಹೋಗಲಾರನು.

೪೪. ಮನಸ್ಸಿಗೆ ಪ್ರೀತಿಯನ್ನುಂಟುಮಾಡುವಂತಹುದು ಸ್ವರ್ಗವು ನರಕವು ಅದಕ್ಕೆ ವಿರುದ್ಧವಾದುದು. ಅಂದರೆ ದುಃಖಕರವಾದುದು. ವಸ್ತುತಃ ಪಾಪಪುಣ್ಯಗಳಿಗೇ ನರಕ ಮತ್ತು ಸ್ವರ್ಗಗಳೆಂದು ಹೆಸರು (ಅಂದರೆ ಪುಣ್ಯವೇ ಪ್ರೀತಿಯನ್ನುಂಟುಮಾಡುವುದರಿಂದ ಸ್ವರ್ಗವು. ಪಾಪವೇ ನರಕವನ್ನುಂಟುಮಾಡುವುದರಿಂದ ನರಕವು.)

೪೫. ಒಂದು ವಸ್ತುವು ಅದೇ ಲಭಿಸದಿದ್ದರೆ ದುಃಖವಾಗುವದು. ಸಿಕ್ಕಿದರೆ ಸುಖವಾಗುವುದು. ಪರನಿಗೆ ಲಭಿಸಿದರೆ ಅಸೂಯೆಯೂ ಕೋಪವೂ ಉಂಟಾಗುವುದು. ಹೀಗಿರಲು ವಸ್ತುವು ದುಃಖಾತ್ಮಕವೆಂದು ಹೇಳುವುದು ಹೇಗೆ?

೪೬. ಒಂದೇ ವಸ್ತುವು ಮೊದಲು ನಮಗೆ ಪ್ರೀತಿಯನ್ನುಂಟುಮಾಡುವುದು. ಆಮೇಲೆ ಲಭಿಸದಿದ್ದರೆ ದುಃಖವೂ ಕೋಪವೂ ಉಂಟಾಗುವುದು. ಲಭಿಸಿದರೆ ಹರ್ಷಹಾಗುವುದು.

೪೭. ಆದುದರಿಂದ ದುಃಖರೂಪವಾದ ವಸ್ತುವೊಂದೂ ಇಲ್ಲ. ಸುಖರೂಪವಾದ ವಸ್ತುವೂ ಇಲ್ಲ. ಸುಖದುಃಖಗಳು ಮನಸ್ಸಿನ ಪರಿಣಾಮಗಳು.

shrinath.udupa@gmail.com

ಜ್ಞಾನಮೇವ ಪರಂ ಬ್ರಹ್ಮಾಜ್ಞಾನಂ ಬಂಧಾಯ ಚೇಷ್ಯತೇ ।
ಜ್ಞಾನಾತ್ಮಕಮಿದಂ ವಿಶ್ವಂ ನ ಜ್ಞಾನಾದ್ವಿದ್ಯತೇ ಪರಂ ॥ ೪೮ ॥

ವಿದ್ಯಾವಿದ್ಯೇ ಹಿ ಭೋ ವಿಪ್ರಾ ಜ್ಞಾನಮೇವಾವಧಾರ್ಯತಾಂ ।
ಏವಮೇತನ್ಮಯಾಖ್ಯಾತಂ ಭವತಾಂ ಮಂಡಲಂ ಭುವಃ ॥ ೪೯ ॥

ಪಾತಾಲಾನಿ ಚ ಸರ್ವಾಣಿ ತಥೈವ ನರಕಾ ದ್ವಿಜಾಃ ।
ಸಮುದ್ರಾಃ ಪರ್ವತಾಶ್ಚೈವ ದ್ವೀಪಾ ವರ್ಷಾಣಿ ನಿಮ್ನಗಾಃ ।
ಸಂಕ್ಷೇಪಾತ್ಸರ್ವಮಾಖ್ಯಾತಂ ಕಿಂ ಭೂಯಃ ಶ್ರೋತುಮಿಚ್ಛಥ ॥ ೫೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಪಾತಾಲನರಕಕೀರ್ತನಂ ನಾಮ ದ್ವಾವಿಂಶೋಽಧ್ಯಾಯಃ

---

೪೮. ಬ್ರಹ್ಮಜ್ಞಾನವೇ ಶ್ರೇಷ್ಠವಾದುದು. ಬ್ರಹ್ಮವಿಷಯಕವಾದ ಅಜ್ಞಾನದಿಂದ ಸುಖದುಃಖರೂಪವಾದ ಬಂಧವು (ಸಂಸಾರವು) ಉಂಟಾಗುವುದು. ಈ ಜಗತ್ತೆಲ್ಲವೂ ಜ್ಞಾನ [ಬ್ರಹ್ಮ] ರೂಪವಾದುದು. ಆದಕಾರಣ ಜ್ಞಾನವನ್ನು ಬಿಟ್ಟು ಬೇರೆ ಯಾವ ವಸ್ತುವೂ ಇಲ್ಲವು. ಎಲೈ ಮುನಿಗಳೇ, ವಿದ್ಯೆ (ಜ್ಞಾನ) ಅವಿದ್ಯೆ (ಅಜ್ಞಾನ) ಇವೆರಡೂ ಜ್ಞಾನರೂಪವಾದುವುಗಳು.

೪೯-೫೦. ಎಲೈ ಮುನಿಗಳೇ, ಹೀಗೆ ನಿಮಗೆ ಭೂಮಂಡಲವೆಲ್ಲವನ್ನೂ ವಿವರಿಸಿರುವೆನು.-ಸಮುದ್ರಗಳು, ದ್ವೀಪಗಳು, ಅವುಗಳಲ್ಲಿನ ದೇಶಗಳು, ಅವುಗಳಲ್ಲಿನ ಪರ್ವತಗಳು, ನದಿಗಳು ಇವೆಲ್ಲವನ್ನೂ ಸಂಕ್ಷೇಪವಾಗಿ ಹೇಳಿರುವೆನು. ಮುಂದೆ ಏನನ್ನು ಕೇಳಬೇಕೆಂದಿರುವಿರಿ? ಹೇಳಿರಿ ಎಂದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಪಾತಾಲನರಕಕೀರ್ತನವರ್ಣನವೆಂಬ ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಯೋವಿಂಶೋಽಧ್ಯಾಯಃ

॥ ಮುನಯ ಊಚುಃ ॥

ಕಥಿತಂ ಭವತಾ ಸರ್ವಮಸ್ಮಾಕಂ ಸಕಲಂ ತಥಾ ।
ಭುವರ್ಲೋಕಾದಿಕಾನ್ ಲೋಕಾನ್ ಶ್ರೋತುಮಿಚ್ಛಾಮಹೇ ವಯಂ ॥ ೧ ॥

ತಥೈವ ಗ್ರಹಸಂಸ್ಥಾನಂ ಪ್ರಮಾಣಾನಿ ಯಥಾ ತಥಾ ।
ಸಮಾಚಕ್ಷ್ವ ಮಹಾಭಾಗ ಯಥಾವಲ್ಲೋಮಹರ್ಷಣ ॥ ೨ ॥

॥ ಲೋಮಹರ್ಷಣ ಉವಾಚ ॥

ರವಿಚಂದ್ರಮಸೋರ್ಯಾವನ್ಮಯೂಖೈರವಭಾಸ್ಯತೇ ।
ಸಸಮುದ್ರಸರಿಚ್ಛೈಲಾ ತಾವತೀ ಪೃಥಿವೀ ಸ್ಮೃತಾ ॥ ೩ ॥

ಇಪ್ಪತ್ತಮೂರನೆಯ ಅಧ್ಯಾಯ.

೧. ಮುನಿಗಳು ಹೇಳಿದರು—ಎಲೈ ಸೂತಮುನಿಯೇ, ನೀನು ನಾವು ಕೇಳಿದುದೆಲ್ಲವನ್ನೂ ಹೇಳಿರುವೆ. ಈಗ ಭುವರ್ಲೋಕ ಮುಂತಾದ ಲೋಕಗಳನ್ನು ಕೇಳಬೇಕೆಂದಿರುವೆವು. ಅದನ್ನು ತಿಳಿಸು.

೨. ಅಲ್ಲದೆ ಗ್ರಹಗಳ ಸ್ಥಿತಿಯನ್ನೂ ಲೋಕಗಳ ಪ್ರಮಾಣಗಳನ್ನೂ ಯಥಾವತ್ತಾಗಿ ಹೇಳುವವನಾಗು.

೩. ಸೂತಮುನಿಯು ಹೇಳಿದನು—ಸೂರ್ಯಚಂದ್ರರ ಕಿರಣಗಳು ಎಲ್ಲಿಯವರೆಗೆ ಹೋಗುವವೋ ಅಲ್ಲಿಯವರೆಗೆ ಈ ಸಮುದ್ರ, ನದಿ, ಬೆಟ್ಟಗಳಿಂದ ಕೂಡಿದ ಭೂಮಿಯು ಇರುವುದು.

shrinath.udupa@gmail.com

ಯಾವತ್ಪ್ರಮಾಣಾ ಪೃಥಿವೀ ವಿಸ್ತಾರಪರಿಮಂಡಲಾ ।
ನಭಸ್ತಾವತ್ಪ್ರಮಾಣಂ ಹಿ ವಿಸ್ತಾರಪರಿಮಂಡಲಂ ॥ ೪ ॥

ಭೂಮೇರ್ಯೋಜನಲಕ್ಷೇ ತು ಸೌರಂ ವಿಪ್ರಾಸ್ತು ಮಂಡಲಂ ।
ಲಕ್ಷೇ ದಿವಾಕರಾಚ್ಚಾಪಿ ಮಂಡಲಂ ಶಶಿನಃ ಸ್ಥಿತಂ ॥ ೫ ॥

ಪೂರ್ಣೇ ಶತಸಹಸ್ರೇ ತು ಯೋಜನಾನಾಂ ನಿಶಾಕರಾತ್ ।
ನಕ್ಷತ್ರಮಂಡಲಂ ಕೃತ್ಸ್ನಮುಪರಿಷ್ಟಾತ್ಪ್ರಕಾಶತೇ ॥ ೬ ॥

ದ್ವಿಲಕ್ಷೇ ಚೋತ್ತರೇ ವಿಪ್ರಾ ಬುಧೋ ನಕ್ಷತ್ರಮಂಡಲಾತ್ ।
ತಾವತ್ಪ್ರಮಾಣಭಾಗೇ ತು ಬುಧಸ್ಯಾಪ್ಯುಶನಾ ಸ್ಥಿತಃ ॥ ೭ ॥

ಅಂಗಾರಕೋऽಪಿ ಶುಕ್ರಸ್ಯ ತತ್ಪ್ರಮಾಣೇ ವ್ಯವಸ್ಥಿತಃ ।
ಲಕ್ಷದ್ವಯೇನ ಭೌಮಸ್ಯ ಸ್ಥಿತೋ ದೇವಪುರೋಹಿತಃ ॥ ೮ ॥

---

೪. ಈ ಭೂಮಿಯು ಎಷ್ಟು ಅಗಲ ಮತ್ತು ಸುತ್ತಳತೆಯುಳ್ಳದಾಗಿರುವುದೋ ಆಕಾಶವೂ ಸಹ ಅಷ್ಟೇ ಅಗಲವೂ ಸುತ್ತಳತೆಯುಳ್ಳದೂ ಆಗಿರುವುದು.

೫. ಭೂಮಿಯಿಂದ ಲಕ್ಷಯೋಜನ ದೂರದಲ್ಲಿ ಸೂರ್ಯಮಂಡಲವಿರುವುದು. ಸೂರ್ಯಮಂಡಲದಿಂದ ಲಕ್ಷಯೋಜನ ದೂರದಲ್ಲಿ ಚಂದ್ರಮಂಡಲವಿರುವುದು.

೬. ಚಂದ್ರಮಂಡಲದಿಂದ ಲಕ್ಷಯೋಜನ ದೂರದಲ್ಲಿ ನಕ್ಷತ್ರಮಂಡಲವು ಪ್ರಕಾಶಿಸುವುದು.

೭. ನಕ್ಷತ್ರಮಂಡಲದಿಂದ ಎರಡುಲಕ್ಷ ಯೋಜನದೂರದಲ್ಲಿ ಬುಧಗ್ರಹ ಮಂಡಲವಿರುವುದು. ಬುಧಮಂಡಲದಿಂದ ಎರಡು ಲಕ್ಷ ಯೋಜನದೂರದಲ್ಲಿ ಶುಕ್ರ ಮಂಡಲವಿರುವುದು.

೮. ಶುಕ್ರನಿಂದ ಎರಡುಲಕ್ಷ ಯೋಜನದೂರದಲ್ಲಿ ಅಂಗಾರಕನ ಮಂಡಲ ವಿರುವುದು. ಅಂಗಾರಕನಿಂದ ಎರಡುಲಕ್ಷ ಯೋಜನದೂರದಲ್ಲಿ ಬೃಹಸ್ಪತಿಯ ಮಂಡಲವಿರುವುದು.

shrinath.udupa@gmail.com

ಸೌರಿರ್ಬೃಹಸ್ಪತೇರೂರ್ಧ್ವಂ ದ್ವಿಲಕ್ಷೇ ಸಮವಸ್ಥಿತಃ ।
ಸಪ್ತರ್ಷಿಮಂಡಲಂ ತಸ್ಮಾಲ್ಲಕ್ಷಮೇಕಂ ದ್ವಿಜೋತ್ತಮಾಃ ॥ ೯ ॥

ಋಷಿಭ್ಯಸ್ತು ಸಹಸ್ರಾಣಾಂ ಶತಾದೂರ್ಧ್ವಂ ವ್ಯವಸ್ಥಿತಃ ।
ಮೇಢೀಭೂತಃ ಸಮಸ್ತಸ್ಯ ಜ್ಯೋತಿಶ್ಚಕ್ರಸ್ಯ ವೈ ಧ್ರುವಃ ॥ ೧೦ ॥

ತ್ರೈಲೋಕ್ಯಮೇತತ್ಕಥಿತಂ ಸಂಕ್ಷೇಪೇಣ ದ್ವಿಜೋತ್ತಮಾಃ ।
ಇಜ್ಯಾಫಲಸ್ಯ ಭೂರೇಷಾ ಇಜ್ಯಾ ಚಾತ್ರ ಪ್ರತಿಷ್ಠಿತಾ ॥ ೧೧ ॥

ಧ್ರುವಾದೂರ್ಧ್ವಂ ಮಹರ್ಲೋಕೋ ಯತ್ರ ತೇ ಕಲ್ಪವಾಸಿನಃ ।
ಏಕಯೋಜನಕೋಟೇ ತು ಮಹರ್ಲೋಕೋ ವಿಧೀಯತೇ ॥ ೧೨ ॥

ದ್ವೇ ಕೋಟ್ಯೌ ತು ಜನೋಲೋಕೋ ಯತ್ರ ತೇ ಬ್ರಹ್ಮಣಃ ಸುತಾಃ ।
ಸನಂದನಾದ್ಯಾಃ ಕಥಿತಾ ವಿಪ್ರಾಶ್ಚಾಮಲಚೇತಸಃ ॥ ೧೩ ॥

---

೯. ಬೃಹಸ್ಪತಿಯಿಂದ ಎರಡುಲಕ್ಷ ಯೋಜನದೂರದಲ್ಲಿ ಶನೈಶ್ಚರನ ಮಂಡಲವಿರುವುದು. ಶನೈಶ್ಚರನಿಂದ ಲಕ್ಷಯೋಜನದೂರದಲ್ಲಿ ಸಪ್ತರ್ಷಿ (ವಸಿಷ್ಠಮೊದಲಾದ ಏಳು ಜನ ಮಹರ್ಷಿಗಳು)ಗಳ ಮಂಡಲವಿರುವುದು.

೧೦. ಋಷಿಮಂಡಲದಿಂದ ಲಕ್ಷಯೋಜನದೂರದಲ್ಲಿ ಧ್ರುವಮಂಡಲವು ಇರುವದು. ಈ ಧ್ರುವಮಂಡಲವೇ ಗ್ರಹಮಂಡಲಗಳಿಗೆ ಕೊನೆಯದು.

೧೧. ಎಲೈ ಮುನಿಗಳೇ, ಹೀಗೆ ಮೂರುಲೋಕಗಳನ್ನು ಹೇಳಿರುವೆನು. ಈ ಲೋಕಗಳಲ್ಲಿ ಯಾಗಫಲವನ್ನನುಭವಿಸುವರು. ಭೂಮಿ ಮೊದಲಾದುವುಗಳಲ್ಲಿ ಯಾಗಗಳನ್ನು ಮಾಡುವರು.

೧೨. ಧ್ರುವಮಂಡಲದ ಮೇಲೆ ಮಹರ್ಲೋಕವಿರುವದು. ಇಲ್ಲಿನ ಜನರು ಒಂದು ಕಲ್ಪದವರೆಗೆ ಬದುಕಿರುವರು. ಮಹರ್ಲೋಕವು ಒಂದು ಕೋಟಿ ಯೋಜನದ ಮೇಲಕ್ಕಿರುವುದು.

೧೩. ಜನಲೋಕವು ಅದಕ್ಕಿಂತ ಎರಡುಕೋಟಿ ಯೋಜನದಮೇಲಿರುವದು. ಅಲ್ಲಿ ಬ್ರಹ್ಮನ ಮಾನಸಪುತ್ರರೂ ಮಹಾತೇಜಸ್ವಿಗಳೂ ಆದ ಸನಂದನಮುನಿ ಮೊದಲಾದವರಿರುವರು.

shrinath.udupa@gmail.com

ಚತುರ್ಗುಣೋತ್ತರಂ ಚೋರ್ಧ್ವಂ ಜನಲೋಕಾತ್ತಪಃ ಸ್ಮೃತಂ ।
ವೈರಾಜಾ ಯತ್ರ ತೇ ದೇವಾಃ ಸ್ಥಿತಾ ದೇಹವಿವರ್ಜಿತಾಃ ॥ ೧೪ ॥

ಷಡ್ಗುಣೇನ ತಪೋಲೋಕಾತ್ಸತ್ಯಲೋಕೋ ವಿರಾಜತೇ ।
ಅಪುನರ್ಮಾರಕಂ ಯತ್ರ ಸಿದ್ಧಾದಿಮುನಿಸೇವಿತಂ ॥ ೧೫ ॥

ಪಾದಗಮ್ಯಂ ತು ಯತ್ಕಿಂಚಿದ್ವಸ್ತ್ವಸ್ತಿ ಪೃಥಿವೀಮಯಂ ।
ಸ ಭೂರ್ಲೋಕಃ ಸಮಾಖ್ಯಾತೋ ವಿಸ್ತಾರೋಽಸ್ಯ ಮಯೋದಿತಃ ॥ ೧೬ ॥

ಭೂಮಿಸೂರ್ಯಾಂತರಂ ಯತ್ತು ಸಿದ್ಧಾದಿಮುನಿಸೇವಿತಂ ।
ಭುವರ್ಲೋಕಸ್ತು ಸೋಽಪ್ಯುಕ್ತೋ ದ್ವಿತೀಯೋ ಮುನಿಸತ್ತಮಾಃ ॥ ೧೭ ॥

ಧ್ರುವಸೂರ್ಯಾಂತರಂ ಯತ್ತು ನಿಯುತಾನಿ ಚತುರ್ದಶ ।
ಸ್ವರ್ಲೋಕಃ ಸೋಽಪಿ ಕಥಿತೋ ಲೋಕಸಂಸ್ಥಾನಚಿಂತಕೈಃ ॥ ೧೮ ॥

---

೧೪. ಜನೋಲೋಕದಿಂದ ಮೇಲ್ಭಾಗದಲ್ಲಿ ಜನೋಲೋಕಕ್ಕಿಂತಲೂ ನಾಲ್ಕರಷ್ಟು ದೂರದಲ್ಲಿ ತಪೋಲೋಕವಿರುವುದು. ಅಲ್ಲಿ ಶರೀರವಿಲ್ಲದಿರುವ ವೈರಾಜರೆಂಬ ದೇವತೆಗಳಿರುವರು.

೧೫. ತಪೋಲೋಕಕ್ಕಿಂತಲೂ ಆರರಷ್ಟು ದೂರದಲ್ಲಿ ಸತ್ಯಲೋಕವು ಇರುವದು. ಅಲ್ಲಿಗೆ ಹೋದವರು ತಿರುಗಿ ಸಂಸಾರಕ್ಕೆ ಬರುವುದಿಲ್ಲ. ಸಿದ್ಧರು ಮೊದಲಾದ ಮುನಿಗಳು ಅಲ್ಲಿರುವರು.

೧೬. ಕಾಲಿನಿಂದ ನಡೆಯುವಂತಹುದೂ ಭೂಮಿಯರೂಪವೂ ಆದ ಲೋಕವನ್ನೂ ಅದರ ವಿಸ್ತಾರವನ್ನೂ ಹಿಂದೆಯೇ ಹೇಳಿರುವೆನು. ಅದೇ ಭೂಲೋಕವು.

೧೭. ಭೂಮಿಗೂ ಸೂರ್ಯನಿಗೂ ಮಧ್ಯದಲ್ಲಿರುವುದು ಎರಡನೆಯದಾದ ಭುವರ್ಲೋಕವು. ಇದರ ವಿಷಯವನ್ನು ಹಿಂದೆ ಹೇಳಿರುವೆನು. ಅಲ್ಲಿ ಸಿದ್ಧರು ಮೊದಲಾದವರಿರುವರು.

೧೮. ಧ್ರುವನಿಗೂ ಸೂರ್ಯನಿಗೂ ಮಧ್ಯದಲ್ಲಿ ಸ್ವರ್ಲೋಕ(ಸ್ವರ್ಗ)ವು ಇರುವುದು. ಅದು ಹದಿನಾಲ್ಕುನಿಯುತ ಯೋಜನವಿಸ್ತಾರವಾಗಿರುವುದೆಂದು ಲೋಕಸ್ಥಿತಿಯನ್ನು ಬಲ್ಲವರು ಹೇಳಿರುವರು.

shrinath.udupa@gmail.com

ತ್ರೈಲೋಕ್ಯಮೇತತ್ಕೃತಕಂ ವಿಪ್ರೈಃ ಪರಿಪಠ್ಯತೇ ।
ಜನಸ್ತಪಸ್ತಥಾ ಸತ್ಯಮಿತಿ ಚಾಕೃತಕಂ ತ್ರಯಂ ॥ ೧೯ ॥

ಕೃತಕಾಕೃತಕೋ ಮಧ್ಯೇ ಮಹರ್ಲೋಕ ಇತಿ ಸ್ಮೃತಃ ।
ಶೂನ್ಯೋ ಭವತಿ ಕಲ್ಪಾಂತೇ ಯೋಽಂತಂ ನ ಚ ವಿನಶ್ಯತಿ ॥ ೨೦ ॥

ಏತೇ ಸಪ್ತ ಮಹಾಲೋಕಾ ಮಯಾ ವಃ ಕಥಿತಾ ದ್ವಿಜಾಃ ।
ಪಾತಾಲಾನಿ ಚ ಸಪ್ತೈವ ಬ್ರಹ್ಮಾಂಡಸ್ಯೈಷ ವಿಸ್ತರಃ ॥ ೨೧ ॥

ಏತದಂಡಕಟಾಹೇನ ತಿರ್ಯಗೂರ್ಧ್ವಮಧಸ್ತಥಾ ।
ಕಪಿತ್ಥಸ್ಯ ಯಥಾ ಬೀಜಂ ಸರ್ವತೋ ವೈ ಸಮಾವೃತಂ ॥ ೨೨ ॥

---

೧೯. ಈ ಭೂಲೋಕ, ಭುವರ್ಲೋಕ, ಸುವರ್ಲೋಕ ಇವು ಮೂರೂ ಕೃತಕ (ಹೆಚ್ಚುದಿನ ಬಾಳಿದಿರುವವು)ಗಳೆಂದು ಪ್ರಾಜ್ಞರು ಹೇಳುವರು. ಜನೋಲೋಕ, ತಪೋಲೋಕ, ಸತ್ಯಲೋಕ ಇವು ಅಕೃತಕ (ಬಹುಕಾಲ ಇರುವುವು)ಗಳೆಂದು ಹೇಳುವರು.

೨೦. ಕೃತಕ ಮತ್ತು ಅಕೃತಕ ಲೋಕಗಳ ಮಧ್ಯದಲ್ಲಿ ಅವೆರಡೂ ಅಲ್ಲದ ಮಹರ್ಲೋಕವಿರುವುದು. ಅದು ಕಲ್ಪದ ಕೊನೆಯಲ್ಲಿ ಶೂನ್ಯವಾಗುವುದು. ಆದರೆ ಸಂಪೂರ್ಣವಾಗಿ ನಾಶವಾಗುವುದಿಲ್ಲ. ಆದುದರಿಂದ ಅದು ಕೃತಕವೂ ಆಗಿದೆ. ಅಕೃತಕವೂ ಆಗಿದೆ.

೨೧. ಎಲೈ ಮುನಿಗಳೇ, ಈ ಏಳು ಮಹಾಲೋಕಗಳನ್ನೂ ಏಳು ಪಾತಾಳ ಲೋಕಗಳನ್ನೂ ನಿಮಗೆ ಹೇಳಿರುವೆನು. ಇದೇ ಬ್ರಹ್ಮಾಂಡದ ವಿಸ್ತಾರವು.

೨೨. ಈ ಬ್ರಹ್ಮಾಂಡವು ಮೇಲೆ, ಕೆಳಗೆ, ಸುತ್ತಲೂ ಬ್ರಹ್ಮಾಂಡಕಟಾಹ (ಗೋಳ) ದಿಂದ ಬೇಲದ ಬೀಜವು ಮೇಲಿನ ಸಿಪ್ಪೆಯಿಂದ ಸುತ್ತುವರಿಯಲ್ಪಟ್ಟಿರುವಂತೆ ಸುತ್ತುವರಿಯಲ್ಪಟ್ಟಿರುವುದು. ಆ ಅಂಡಕಟಾಹವು ಅದಕ್ಕಿಂತಲೂ ಹತ್ತರಷ್ಟು ವಿಸ್ತಾರವಾದ ಜಲರಾಶಿಯಿಂದ ಸುತ್ತುವರಿಯಲ್ಪಟ್ಟಿರುವುದು.

shrinath.udupa@gmail.com

ದಶೋತ್ತರೇಣ ಪಯಸಾ ದ್ವಿಜಾಶ್ಚಾಂಡಂ ಚ ತದ್ವೃತಂ ।
ಸ ಚಾಂಬುಪರಿವಾರೋಽಸೌ ವಹ್ನಿನಾ ವೇಷ್ಟಿತೋ ಬಹಿಃ ॥ ೨೩ ॥

ಬಹಿಸ್ತು ವಾಯುನಾ ವಾಯುರ್ವಿಪ್ರಾಸ್ತು ನಭಸಾಽವೃತಃ ।
ಆಕಾಶೋಽಪಿ ಮುನಿಶ್ರೇಷ್ಠಾ ಮಹತಾ ಪರಿವೇಷ್ಟಿತಃ ॥ ೨೪ ॥

ದಶೋತ್ತರಾಣ್ಯಶೇಷಾಣಿ ವಿಪ್ರಾಶ್ಚೈತಾನಿ ಸಪ್ತ ವೈ ।
ಮಹಾಂತಂ ಚ ಸಮಾವೃತ್ಯ ಪ್ರಧಾನಂ ಸಮವಸ್ಥಿತಂ ॥ ೨೫ ॥

ಅನಂತಸ್ಯ ನ ತಸ್ಯಾಂತಃ ಸಂಖ್ಯಾನಂ ಚಾಪಿ ವಿದ್ಯತೇ ।
ತದನಂತಮಸಂಖ್ಯಾತಂ ಪ್ರಮಾಣೇನಾಪಿ ವೈ ಯತಃ ॥ ೨೬ ॥

ಹೇತುಭೂತಮಶೇಷಸ್ಯ ಪ್ರಕೃತಿಃ ಸಾ ಪರಾ ದ್ವಿಜಾಃ ।
ಅಂಡಾನಾಂ ತು ಸಹಸ್ರಾಣಾಂ ಸಹಸ್ರಾಣ್ಯಯುತಾನಿ ಚ ॥ ೨೭ ॥

೨೩-೨೪. ಆ ಜಲರಾಶಿಯು ಅಗ್ನಿಯಿಂದ ಸುತ್ತುವರಿಯಲ್ಪಟ್ಟಿರುವುದು. ಅಗ್ನಿಯು ವಾಯುವಿನಿಂದ ಸುತ್ತುವರಿಯಲ್ಪಟ್ಟಿರುವುದು. ವಾಯುವು ಆಕಾಶದಿಂದ ಸುತ್ತುವರಿಯಲ್ಪಟ್ಟಿರುವುದು. ಆ ಆಕಾಶವನ್ನು ಹೊರಗೆ ಮಹತ್ತತ್ತ್ವವು ಸುತ್ತಲೂ ಸುತ್ತುವರಿದಿರುವುದು.

೨೫. ಎಲೈ ಬ್ರಾಹ್ಮಣೋತ್ತಮರೇ, ಆ ಮಹತ್ತತ್ತ್ವವನ್ನು ಪ್ರಕೃತಿಯು ಸುತ್ತುವರಿದಿರುವುದು. ಈ "ಅಂಡಕಟಾಹ, ಜಲರಾಶಿ, ಅಗ್ನಿ, ವಾಯು, ಆಕಾಶ, ಮಹತ್ತತ್ತ್ವ, ಪ್ರಕೃತಿ"ಗಳೆಂಬೇಳು ವಸ್ತುಗಳೂ ಒಂದಕ್ಕಿಂತೊಂದು ಹತ್ತರಷ್ಟು ವಿಸ್ತಾರವಾಗಿ ಇರುವುವು,

೨೬. ಆ ಪ್ರಕೃತಿಗೆ ಕೊನೆಯೇ ಇಲ್ಲವು. ಅದನ್ನು ವರ್ಣಿಸಲೂ ಸಾಧ್ಯವಿಲ್ಲವು. ಈ ಕಾರಣ ಆ ಪ್ರಕೃತಿಯು ಅನಂತ (ಕೊನೆಯಿಲ್ಲದುದು)ವೂ ಪ್ರಮಾಣಗಳಿಗೆ ನಿಲುಕದುದೂ ಆಗಿದೆ.

೨೭. ಆ ಪ್ರಕೃತಿಯು ಈ ಜಗತ್ತೆಲ್ಲಕ್ಕೂ ಕಾರಣವು. ಆದರಿಂದಲೇ ಇಂತಹ ಲಕ್ಷಗಟ್ಟಲೆ ಬ್ರಹ್ಮಾಂಡಗಳೂ ಕೋಟಿಕೋಟಿಲೋಕಗಳೂ ಉಂಟಾಗುವುವು.

shrinath.udupa@gmail.com

ಈದೃಶಾನಾಂ ತಥಾ ತತ್ರ ಕೋಟಿಕೋಟಿಶತಾನಿ ಚ ।
ದಾರುಣ್ಯಗ್ನಿರ್ಯಥಾ ತೈಲಂ ತಿಲೇ ತದ್ವತ್ಪುಮಾನಿಹ ॥ ೨೮ ॥

ಪ್ರಧಾನೇಽವಸ್ಥಿತೋ ವ್ಯಾಪೀ ಚೇತನಾತ್ಮನಿವೇದನಃ ।
ಪ್ರಧಾನಂ ಚ ಪುಮಾಂಶ್ಚೈವ ಸರ್ವಭೂತಾನುಭೂತಯಾ ॥ ೨೯ ॥

ವಿಷ್ಣುಶಕ್ತ್ಯಾ ದ್ವಿಜಶ್ರೇಷ್ಠಾ ಧೃತೌ ಸಂಶ್ರಯಧರ್ಮಿಣೌ ।
ತಯೋಃ ಸೈವ ಪೃಥಗ್ಭಾವೇ ಕಾರಣಂ ಸಂಶ್ರಯಸ್ಯ ಚ ॥ ೩೦ ॥

ಕ್ಷೋಭಕಾರಣಭೂತಾ ಚೆ ಸರ್ಗಕಾಲೇ ದ್ವಿಜೋತ್ತಮಾಃ ।
ಯಥಾ ಶೈತ್ಯಂ ಜಲೇ ವಾತೋ ಬಿಭರ್ತಿ ಕಣಿಕಾಗತಂ ॥ ೩೧ ॥

ಜಗಚ್ಛಕ್ತಿಸ್ತಥಾ ವಿಷ್ಣೋಃ ಪ್ರಧಾನಪುರುಷಾತ್ಮಕಂ ।
ಯಥಾ ಚ ಪಾದಪೋ ಮೂಲಸ್ಕಂಧಶಾಖಾದಿಸಂಯುತಃ ॥ ೩೨ ॥

---

೨೮. ಬನ್ನಿಯಮರದ ಸೌದೆಯಲ್ಲಿ ಬೆಂಕಿಯಿರುವಂತೆಯೂ ಎಳ್ಳಿನಲ್ಲಿ ಎಣ್ಣೆಯಿರುವಂತೆಯೂ ಪುರುಷನು ಪ್ರಕೃತಿಯಲ್ಲಿರುವನು. ಅವನು ಎಳ್ಳನ್ನು ಎಣ್ಣೆಯು ವ್ಯಾಪಿಸಿರುವಂತೆ ಪ್ರಕೃತಿಯನ್ನು ವ್ಯಾಪಿಸಿರುವನು ಮತ್ತು ಚೈತನ್ಯರೂಪನಾಗಿರುವನು.

೨೯. ಒಂದನ್ನೊಂದು ಆಶ್ರಯಿಸಿರುವ ಪ್ರಕೃತಿಪುರುಷರು, ಎಲ್ಲಾ ಭೂತೆಗಳಲ್ಲೂ ವ್ಯಾಪಿಸಿರುವ ವಿಷ್ಣುಶಕ್ತಿಯಿಂದ ಧರಿಸಲ್ಪಟ್ಟಿರುವರು.

೩೦. ಆ ಪ್ರಕೃತಿಪುರುಷರು ಬೇರೆಯಾಗುವುದಕ್ಕೂ ಒಟ್ಟುಸೇರುವುದಕ್ಕೂ ವಿಷ್ಣುಶಕ್ತಿಯೇ ಕಾರಣವು. ಸೃಷ್ಟಿಯ ಕಾಲದಲ್ಲಿ ಆ ಶಕ್ತಿಯು ಪ್ರಕೃತಿಪುರುಷರನ್ನು ಕ್ಷೋಭಿಸುವುದು. ಆಗ ಪ್ರಕೃತಿಯು ಪುರುಷನ ಸಹಾಯದಿಂದ ಸೃಷ್ಟಿಸುವುದು.

೩೧. ಗಾಳಿಯು ನೀರಿನ ತುಂತುರುಗಳ ಜೊತೆಗೆ ಶೈತ್ಯವನ್ನು ಧರಿಸುವಂತೆ ವಿಷ್ಣುಶಕ್ತಿಯು ಪ್ರಕೃತಿಪುರುಷರ ರೂಪವಾದ ಜಗತ್ತನ್ನು ಧರಿಸುವುದು.

೩೨-೩೩. ಮೂಲ, ದಿಂಡು ಕೊಂಬೆಗಳಿಂದ ಕೂಡಿದ ಒಂದು ಮರವು ಅದರ ಮೂಲಬೀಜದಿಂದ ಹುಟ್ಟುವುದು. ಮುಂದೆ ಆ ಮರದಿಂದ ಹಣ್ಣು ಹೂವುಗಳಲ್ಲದೇ

shrinath.udupa@gmail.com

ಆದ್ಯಬೀಜಾತ್ಪ್ರಭವತಿ ಬೀಜಾನ್ಯನ್ಯಾನಿ ವೈ ತತಃ ।
ಪ್ರಭವಂತಿ ತತಸ್ತೇಭ್ಯೋ ಭವಂತ್ಯನ್ಯೇ ಪರೇ ದ್ರುಮಾಃ ॥ ೩೩ ॥

ತೇಽಪಿ ತಲ್ಲಕ್ಷಣದ್ರವ್ಯಕಾರಣಾನುಗತಾ ದ್ವಿಜಾಃ ।
ಏವಮವ್ಯಾಕೃತಾತ್ಪೂರ್ವಂ ಜಾಯಂತೇ ಮಹದಾದಯಃ ॥ ೩೪ ॥

ವಿಶೇಷಾಂತಾಸ್ತತಸ್ತೇಭ್ಯಃ ಸಂಭವಂತಿ ಸುರಾದಯಃ ।
ತೇಭ್ಯಶ್ಚ ಪುತ್ರಾಸ್ತೇಷಾಂ ತು ಪುತ್ರಾಣಾಂ ಪರಮೇ ಸುತಾಃ ॥ ೩೫ ॥

ಬೀಜಾದ್ವೃಕ್ಷಪ್ರರೋಹೇಣ ಯಥಾ ನಾಪಚಯಸ್ತರೋಃ ।
ಭೂತಾನಾಂ ಭೂತಸರ್ಗೇಣ ನೈವಾಸ್ತ್ಯಪಚಯಸ್ತಥಾ ॥ ೩೬ ॥

ಸಂನಿಧಾನಾದ್ಯಥಾಽಽಕಾಶಕಾಲಾದ್ಯಾಃ ಕಾರಣಂ ತರೋಃ ।
ತಥೈವಾಪರಿಣಾಮೇನ ವಿಶ್ವಸ್ಯ ಭಗವಾನ್ಹರಿಃ ॥ ೩೭ ॥

ಬೀಜಗಳೂ ಜನಿಸುವುವು. ಆ ಬೀಜಗಳಿಂದ ತಿರುಗಿ ಬೇರೆ ಬೇರೆ ಮರಗಳು ಹುಟ್ಟುವುವು. ಹೀಗೆ ಮರಗಳು ತಮಗೆ ಕಾರಣವಾದ ಬೀಜಗಳಿಂದ ಕೂಡಿಯೇ ಇರುವುವು.

೩೪-೩೫. ಹೀಗೆ ಜಗತ್ತಿಗೆ ಬೀಜದಂತಿರುವ ಪ್ರಕೃತಿಯಿಂದ ಮೊದಲು ಮಹತ್ತತ್ತ್ವ ಮೊದಲುಗೊಂಡು ವಿಶೇಷಗಳ ವರೆಗಿನ ವಸ್ತುಗಳು ಜನಿಸುವುವು. ಆ ವಸ್ತುಗಳಿಂದ ದೇವತೆಗಳು ಮೊದಲಾದವರು ಜನಿಸುವರು. ಅವರಿಂದ ಅವರ ಮಕ್ಕಳು ಜನಿಸುವರು. ಆ ಮಕ್ಕಳಿಗೆ ಮಕ್ಕಳಾಗುವುವು.

೩೬. ಬೀಜಗಳು ಮರಗಳು ಎಷ್ಟು ಜನಿಸಿದರೂ ಅದರಿಂದ ಮೊದಲಿನ ಮರವು ಹೇಗೆ ನಾಶವಾಗುವುದಿಲ್ಲವೋ ಅದರಂತೆ ಎಷ್ಟೊಂದು ಪ್ರಾಣಿಸೃಷ್ಟಿಯಾದರೂ ವಸ್ತುಸೃಷ್ಟಿಯಾದರೂ ಭೂತ (ಭೂ, ಅಗ್ನಿ, ಜಲ, ವಾಯು, ಆಕಾಶ) ಗಳಿಗೆ ನಾಶವಿಲ್ಲವು.

೩೭. ಬೀಜವು ಮರಕ್ಕೆ ಮುಖ್ಯಕಾರಣವಾದರೂ ಆಕಾಶ ಮತ್ತು ಕಾಲಗಳು ಸದಾ ಬಿಡದೆ ಸೇರಿಕೊಂಡು ಇರುವುದರಿಂದ ಕಾರಣಗಳು. ಆಕಾಶ ಕಾಲಗಳನ್ನು ಬಿಟ್ಟು ಯಾವ ಮರವೂ [ವಸ್ತುವೂ] ಜನಿಸಲಾರದು. ಅದರಂತೆ ಹರಿಯು ಜಗತ್ತೆಲ್ಲವನ್ನೂ ವ್ಯಾಪಿಸಿ ಸದಾ ಸಮೀಪದಲ್ಲೇ ಇರುವುದರಿಂದ ಜಗತ್ತಿಗೆ ಅವನೂ ಕಾರಣನು (ನಿಮಿತ್ತ ಕಾರಣನು) ಅವನನ್ನು ಬಿಟ್ಟು ಯಾವ ವಸ್ತುವೂ ಜನಿಸುವುದಿಲ್ಲ. ಆದರೆ ಜಗತ್ತಿಗೆ

shrinath.udupa@gmail.com

ವ್ರೀಹಿಬೀಜೇ ಯಥಾ ಮೂಲಂ ನಾಲಂ ಪತ್ರಾಂಕುರೌ ತಥಾ ।
ಕಾಂಡಕೋಶಾಸ್ತಥಾ ಪುಷ್ಪಂ ಕ್ಷೀರಂ ತದ್ವಚ್ಚ ತಂಡುಲಃ ॥ ೩೮ ॥

ತುಷಾಃ ಕಣಾಶ್ಚ ಸಂತೋ ವೈ ಯಾಂತ್ಯಾವಿರ್ಭಾವಮಾತ್ಮನಃ ।
ಪ್ರರೋಹಹೇತುಸಾಮಗ್ರ್ಯಮಾಸಾದ್ಯ ಮುನಿಸತ್ತಮಾಃ ॥ ೩೯ ॥

ತಥಾ ಕರ್ಮಸ್ವನೇಕೇಷು ದೇವಾದ್ಯಾಸ್ತನವಃ ಸ್ಥಿತಾಃ ।
ವಿಷ್ಣುಶಕ್ತಿಂ ಸಮಾಸಾದ್ಯ ಪ್ರರೋಹಮುಪಯಾಂತಿ ವೈ ॥ ೪೦ ॥

ಕಾರಣನಾದರೂ ಮಡಕೆಗೆ ಕಾರಣವಾದ ಮಣ್ಣು ಮಡಕೆಯು ವಿಕಾರ [ರೂಪ] ವನ್ನು ಹೊಂದುವಂತೆ ವಿಕಾರವನ್ನು ಹೊಂದುವುದಿಲ್ಲ. ನಿತ್ಯನಾದ ಆ ಹರಿಗೆ ವಿಕಾರವಿಲ್ಲವು.

೩೮–೩೯. ಎಲೈ ಮುನಿಗಳೇ, ಬೀಜದ ಭತ್ತದಲ್ಲಿ ಮೊದಲು ಕಾರಣರೂಪದಿಂದ ಮೂಲ, ದಂಟು, ಎಲೆ, ಚಿಗುರು, ಎಸಳು, ಕೋಶ, ಹೂವು, ಹಾಲು, ಅಕ್ಕಿ ಹೊಟ್ಟು, ಚೂರು ಇವುಗಳು ಇದ್ದೇ ಇರುತ್ತವೆ. ಆಮೇಲೆ ನೆಲ ಮತ್ತು ಭೂಮಿ. ಸಂಬಂಧ ಮುಂತಾದ ಲೌಕಿಕಕಾರಣಗಳು ಒದಗಲು ಅವೆಲ್ಲವೂ ಆವಿರ್ಭವಿಸುವುವು. ಅವೆಲ್ಲವೂ ಮೊದಲು ಬೀಜದಲ್ಲಿಲ್ಲದಿದ್ದರೆ ಹುಟ್ಟುವದು ಹೇಗೆ? ಇಲ್ಲದಿದ್ದುದು ಹುಟ್ಟುವುದಿಲ್ಲ. ಇಲ್ಲದಿದ್ದದ್ದೂ ಹುಟ್ಟುವುದೆಂದು ಒಪ್ಪುವುದಾದರೆ ಇಲ್ಲದ ಮೊಲದ ಕೊಂಬು ಹುಟ್ಟಲಿ. ಆದುದರಿಂದ ಬೀಜದಲ್ಲಿ ಕಾರಣರೂಪದಿಂದಿದ್ದೇ ಮೂಲ ಮೊದಲಾದವುಗಳು ಹುಟ್ಟುವುವೆಂದು ತಿಳಿಯಬೇಕು. ಶಾಸ್ತ್ರದಲ್ಲಿ ಇದಕ್ಕೆ ಸತ್ಕಾರಣವಾದ ಎಂದು ಹೇಳುವರು.

೪೦. ಅದರಂತೆಯೇ ದೇವತೆ, ಮನುಷ್ಯ, ಮುಂತಾದ ಜನ್ಮಗಳನ್ನುಂಟುಮಾಡುವ ಕರ್ಮಗಳಲ್ಲಿ ದೇವತೆಗಳು ಮನುಷ್ಯರು ಮೊದಲಾದವರ ಶರೀರಗಳು ಮೊದಲು ಕಾರಣರೂಪದಿಂದ ಇದ್ದು ಆಮೇಲೆ ವಿಷ್ಣುಶಕ್ತಿಯ ಮಹಿಮೆಯಿಂದ ಮತ್ತು ಲೌಕಿಕ ಕಾರಣಗಳ ಸಹಾಯದಿಂದ ಆವಿರ್ಭವಿಸುವುವು.

shrinath.udupa@gmail.com

ಸ ಚ ವಿಷ್ಣುಃ ಪರಂ ಬ್ರಹ್ಮ ಯತಃ ಸರ್ವಮಿದಂ ಜಗತ್ ।
ಜಗಚ್ಚ ಯೋ ಯತ್ರ ಚೇದಂ ಯಸ್ಮಿನ್ವಿಲಯಮೇಷ್ಯತಿ ॥ ೪೧ ॥

ತದ್ಬ್ರಹ್ಮ ಪರಮಂ ಧಾಮ ಸದಸತ್ಪರಮಂ ಪದಂ ।
ಯಸ್ಯ ಸರ್ವಮಭೇದೇನ ಜಗದೇತಚ್ಚರಾಚರಂ ॥ ೪೨ ॥

ಸ ಏವ ಮೂಲಪ್ರಕೃತಿರ್ವ್ಯಕ್ತರೂಪೀ ಜಗಚ್ಚ ಸಃ ।
ತಸ್ಮಿನ್ನೇವ ಲಯಂ ಸರ್ವಂ ಯಾತಿ ತತ್ರ ಚ ತಿಷ್ಠತಿ ॥ ೪೩ ॥

ಕರ್ತಾ ಕ್ರಿಯಾಣಾಂ ಸ ಚ ಇಜ್ಯತೇ ಕ್ರತುಃ
ಸ ಏವ ತತ್ಕರ್ಮಫಲಂ ಚ ತಸ್ಯ ಯತ್ ।

---

೪೧. ಆ ವಿಷ್ಣುವೇ ಪರಬ್ರಹ್ಮವು. ಆ ಬ್ರಹ್ಮವಸ್ತುವಿನಿಂದಲೇ ಜಗತ್ತು ಜನಿಸುವುದು. ಅದು ಜಗದ್ರೂಪವಾದುದು. ಜಗತ್ತು ಆ ಬ್ರಹ್ಮವಸ್ತುವಿನಲ್ಲಿಯೇ ಇರುವುದು. ಕೊನೆಗೆ ಅಲ್ಲಿಯೇ ಲಯವನ್ನು ಹೊಂದುವುದು. ಮಡಕೆಗೆ ಕಾರಣವಾದ ಮಣ್ಣಿನಲ್ಲಿಯೇ ಮಡಕೆಯು ನಾಶಹೊಂದುವಂತೆ ತನಗೆ ಕಾರಣವಾದ ಬ್ರಹ್ಮವಸ್ತುವಿನಲ್ಲಿಯೇ ಜಗತ್ತು ಲಯವನ್ನು ಹೊಂದುವುದು.

೪೨. ಆ ಬ್ರಹ್ಮವಸ್ತುವೇ ಉತ್ಕೃಷ್ಟವಾದ ಸ್ಥಾನವು. ಅದಕ್ಕಿಂತ ಶ್ರೇಷವಾದ ಸತ್ಯವಾದ ಸ್ಥಾನವು ಮತ್ತೊಂದಿಲ್ಲ. ಅದು ಪ್ರತ್ಯಕ್ಷವಾಗಿ ಕಾಣಿಸುವ ಪೃಥಿವೀ ಮೊದಲಾದವುಗಳಿಂದಲೂ, ಇಂದ್ರಿಯಗಳಿಗೆ ಕಾಣಿಸದಿರುವ ಆಕಾಶ ಪ್ರಕೃತಿ ಮುಂತಾದವುಗಳಿಂದಲೂ ಬೇರೆಯಾದುದು. ಅದು ಕಾರ್ಯವೂ ಅಲ್ಲ ಕಾರಣವೂ ಅಲ್ಲ. ಈ ಜಗತ್ತಿಗೂ ಬ್ರಹ್ಮವಸ್ತುವಿಗೂ ಭೇದವೇ ಇಲ್ಲವು. ಬ್ರಹ್ಮವಸ್ತುವನ್ನು ಬಿಟ್ಟು ಬೇರೆ ಜಗತ್ತಿಲ್ಲವು.

೪೩. ಇಂತಹ ಬ್ರಹ್ಮವಸ್ತುವಿನ ರೂಪನಾದುದರಿಂದ ವಿಷ್ಣುವೇ ಜಗತ್ತಿಗೆ ಆದಿಕಾರಣನು. ಕಣ್ಣಿಗೆ ಕಾಣಿಸುವ ಜಗತ್ತಿನ ರೂಪವನ್ನು ಮಾಯೆಯಿಂದ ತಾಳುವನು. ಅವನಲ್ಲಿಯೇ ಜಗತ್ತಿರುವುದು. ಕೊನೆಗೆ ಆ ಹರಿಯಲ್ಲಿಯೇ ಈ ಜಗತ್ತು ಲಯವನ್ನು ಹೊಂದುವುದು.

೪೪. ಆ ಹರಿಯೇ ಕಾರ್ಯಗಳನ್ನು ಮಾಡುವನು. ಯಾಗಗಳಿಂದ ಆರಾಧಿ

shrinath.udupa@gmail.com

ಯುಗಾದಿ ಯಸ್ಮಾಚ್ಚ ಭವೇದಶೇಷತೋ
ಹರೇರ್ನ ಕಿಂಚಿದ್ವ್ಯತಿರಿಕ್ತಮಸ್ತಿ ತತ್ ॥ ೪೪ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಭೂಭುವಃಸ್ವರಾದಿ
ಕೀರ್ತನಂ ನಾಮ ತ್ರಯೋವಿಂಶೋಽಧ್ಯಾಯಃ

ಸಲ್ಪಡುವ ಯಜ್ಞಪುರುಷನೂ ಆ ಹರಿಯೇ. ಯಾಗವೂ ಅವನೇ. ಯಾಗ ಮುಂತಾದ ಕರ್ಮಗಳಿಂದ ಬರುವ ಫಲವೂ ಆ ವಿಷ್ಣುವೇ. ಯುಗ ಮೊದಲಾದ ಜಗತ್ತು ಆ ಹರಿಯಿಂದಲೇ ಜನಿಸಿರುವುದು. ಹರಿಯನ್ನು ಬಿಟ್ಟು ಶ್ರೇಷ್ಠವೂ ಸತ್ಯವೂ ಆದ ವಸ್ತುವು ಯಾವದೂ ಇಲ್ಲವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಭೂಭುವಃಸ್ವರಾದಿಕೀರ್ತನವೆಂಬ
ಇಪ್ಪತ್ತುಮೂರನೆಯ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಚತುರ್ವಿಂಶೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ತಾರಾಮಯಂ ಭಗವತಃ ಶಿಂಶುಮಾರಾಕೃತಿ ಪ್ರಭೋಃ ।
ದಿವಿ ರೂಪಂ ಹರೇರ್ಯತ್ತು ತಸ್ಯ ಪುಚ್ಛೇ ಸ್ಥಿತೋ ಧ್ರುವಃ ॥ ೧ ॥

ಸೈಷ ಭ್ರಮನ್ಭ್ರಾಮಯತಿ ಚಂದ್ರಾದಿತ್ಯಾದಿಕಾನ್ ಗ್ರಹಾನ್ ।
ಭ್ರಮಂತಮನು ತಂ ಯಾಂತಿ ನಕ್ಷತ್ರಾಣಿ ಚ ಚಕ್ರವತ್ ॥ ೨ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು

೧. ಸೂತಮುನಿಯು ಹೇಳಿದನು.—ಎಲೈ ಮುನಿಗಳೇ, ಗಗನದಲ್ಲಿ ಭಗವಂತನ ನಕ್ಷತ್ರಮಯರೂಪವಾದ ರೂಪವಿರುವುದು. ಅದು ಶಿಂಶುಮಾರ (ಕೆಂಪು ಮೀನು) ದ ಆಕಾರವುಳ್ಳದಾಗಿರುವುದು ಅದರ ಬಾಲದ ಭಾಗದಲ್ಲಿ ಧ್ರುವನು ಇರುವನು.

೨. ಈ ಧ್ರುವನು ಚಲಿಸುತ್ತಾ ಚಂದ್ರ, ಸೂರ್ಯ, ನಕ್ಷತ್ರ ಮೊದಲಾದವುಗಳನ್ನು ಚಲಿಸುವಂತೆ ಮಾಡುವನು. ಸುತ್ತುತಿರುಗುವ ಆ ಧ್ರುವನನ್ನನುಸರಿಸಿ ಮಿಕ್ಕ ಚಂದ್ರ, ಸೂರ್ಯ, ನಕ್ಷತ್ರ ಮೊದಲಾದುವುಗಳು ಚಕ್ರದಂತೆ ಸುತ್ತುತಿರುಗುವರು.

shrinath.udupa@gmail.com

ಸೂರ್ಯಾಚಂದ್ರಮಸೌ ತಾರಾ ನಕ್ಷತ್ರಾಣಿ ಗ್ರಹೈಃ ಸಹ ।
ವಾತಾನೀಕಮಯೈರ್ಬಂಧೈರ್ಧ್ರುವೇ ಬದ್ಧಾನಿ ತಾನಿ ವೈ ॥ ೩ ॥

ಶಿಂಶುಮಾರಾಕೃತಿ ಪ್ರೋಕ್ತಂ ಯದ್ರೂಪಂ ಜ್ಯೋತಿಷಾಂ ದಿವಿ ।
ನಾರಾಯಣಃ ಪರಂ ಧಾಮ ತಸ್ಯಾಧಾರಃ ಸ್ವಯಂ ಹೃದಿ ॥ ೪ ॥

ಉತ್ತಾನಪಾದತನಯಸ್ತಮಾರಾಧ್ಯ ಪ್ರಜಾಪತಿಂ ।
ಸ ತಾರಾಶಿಂಶುಮಾರಸ್ಯ ಧ್ರುವಃ ಪುಚ್ಛೇ ವ್ಯವಸ್ಥಿತಃ ॥ ೫ ॥

ಆಧಾರಃ ಶಿಂಶುಮಾರಸ್ಯ ಸರ್ವಾಧ್ಯಕ್ಷೋ ಜನಾರ್ದನಃ ।
ಧ್ರುವಸ್ಯ ಶಿಂಶುಮಾರಶ್ಚ ಧ್ರುವೇ ಭಾನುರ್ವ್ಯವಸ್ಥಿತಃ ॥ ೬ ॥

ತದಾಧಾರಂ ಜಗಚ್ಚೇದಂ ಸದೇವಾಸುರಮಾನುಷಂ ।
ಯೇನ ವಿಪ್ರಾ ವಿಧಾನೇನ ತನ್ಮೇ ಶೃಣುತ ಸಾಂಪ್ರತಂ ॥ ೭ ॥

---

೩. ಸೂರ್ಯ ಚಂದ್ರರು, ತಾರೆಗಳು, ನಕ್ಷತ್ರಗಳು, ಗ್ರಹಗಳು ಇವೆಲ್ಲವೂ ಗಾಳಿಯರೂಪವಾದ ಹಗ್ಗಗಳಿಂದ ಧ್ರುವಮಂಡಲದಲ್ಲಿ ಬಂಧಿಸಲ್ಪಟ್ಟಿರುವುವು. ಈ ಕಾರಣ ಧ್ರುವಮಂಡಲವು ತಿರುಗಿದೊಡನೆ ಅವೆಲ್ಲವೂ ತಿರುಗುವುವು.

೪. ಶಿಂಶುಮಾರದ ಆಕಾರವುಳ್ಳ ಜ್ಯೋತಿರ್ಮಯವಾದ ಯಾವ ರೂಪವಿರುವುದೋ ಅದಕ್ಕೆ ನಾರಾಯಣನೇ ಆಧಾರವು. ಆ ನಾರಾಯಣನು ಎಲ್ಲರ ಹೃದಯದಲ್ಲಿಯೂ ಇರುವನು.

೫. ಉತ್ತಾನಪಾದರಾಜನ ಮಗನಾದ ಧ್ರುವನು ಜಗತ್ಕರ್ತನಾದ ನಾರಾಯಣನನ್ನಾರಾಧಿಸಿ ಜ್ಯೋತಿರ್ಮಯವಾದ ಶಿಂಶುಮಾರದ ಬಾಲದಲ್ಲಿ ನೆಲಸಿರುವನು.

೬. ಆ ಶಿಂಶುಮಾರಕ್ಕೆ ಪರಮೇಶ್ವರನಾದ ಜನಾರ್ದನನೇ ಆಧಾರವು. ಧ್ರುವನಿಗೆ ಶಿಂಶುಮಾರವು ಆಧಾರ. ಆ ಧ್ರುವನಲ್ಲಿ ಸೂರ್ಯನು ಇರುವನು.

೭. ಆ ಸೂರ್ಯನ ಆಧಾರದಿಂದಲೇ ದೇವತೆಗಳು, ಅಸುರರು, ಮಾನವರು ಇವರನ್ನೊಳಗೊಂಡ ಜಗತ್ತು ನಿಂತಿರುವುದು. ಎಲೈ ಮುನಿಗಳೇ, ಹಾಗೆ ಜಗತ್ತು ನಿಂತಿರುವ ಕ್ರಮವನ್ನು ಹೇಳುವೆನು.

shrinath.udupa@gmail.com

ವಿವಸ್ವಾನಷ್ಟಭಿರ್ಮಾಸೈರ್ಗಸತ್ಯಪೋ ರಸಾತ್ಮಿಕಾಃ ।
ವರ್ಷತ್ಯಂಬು ತತಶ್ಚಾನ್ನಮನ್ನಾದಮಖಿಲಂ ಜಗತ್ ॥ ೮ ॥

ವಿವಸ್ವಾನಂಶುಭಿಸ್ತೀಕ್ಷ್ಣೈರಾದಾಯ ಜಗತೋ ಜಲಂ ।
ಸೋಮಂ ಪುಷ್ಯತ್ಯಥೇಂದುಶ್ಚ ವಾಯುನಾಡೀಮಯೈರ್ದಿವಿ ॥ ೯ ॥

ಜಲೈರ್ವಿಕ್ಷಿಪ್ಯತೇಽಭ್ರೇಷು ಧೂಮಾಗ್ನ್ಯನಿಲಮೂರ್ತಿಷು ।
ನ ಭ್ರಶ್ಯಂತಿ ಯತಸ್ತೇಭ್ಯೋ ಜಲಾನ್ಯಭ್ರಾಣಿ ತಾನ್ಯತಃ ॥ ೧೦ ॥

ಅಭ್ರಸ್ಥಾಃ ಪ್ರಪತಂತ್ಯಾಪೋ ವಾಯುನಾ ಸಮುದೀರಿತಾಃ ।
ಸಂಸ್ಕಾರಂ ಕಾಲಜನಿತಂ ವಿಪ್ರಾಶ್ಚಾಽಸಾದ್ಯ ನಿರ್ಮಲಾಃ ॥ ೧೧ ॥

ಸರಿತ್ಸಮುದ್ರಾ ಭೌಮಾಸ್ತು ತಥಾಽಪಃ ಪ್ರಾಣಿಸಂಭವಾಃ ।
ಚತುಷ್ಪ್ರಕಾರಾ ಭಗವಾನಾದತ್ತೇ ಸವಿತಾ ದ್ವಿಜಾಃ ॥ ೧೨ ॥

---

೮. ಆ ಸೂರ್ಯನು ವರ್ಷದಲ್ಲಿ ಎಂಟುತಿಂಗಳು ಭೂಮಿಯಲ್ಲಿನ ರಸಮಯವಾದ ನೀರನ್ನು ತನ್ನ ಕಿರಣಗಳಿಂದ ಹೀರುವನು. ಆಮೇಲೆ ನಾಲ್ಕು ತಿಂಗಳು ಮಳೆಯನ್ನು ಸುರಿಸುವನು. ಆ ಮಳೆಯ ಸಹಾಯದಿಂದ ಭೂಮಿಯಲ್ಲಿ ಆಹಾರ ವಸ್ತುಗಳು ಹುಟ್ಟುವುವು. ಆ ಆಹಾರವಸ್ತುಗಳನ್ನು ತಿಂದು ಜನಗಳು ಜೀವಿಸುವರು.

೯. ಆ ಸೂರ್ಯನು ತನ್ನ ತೀಕ್ಷ್ಣವಾದ ಕಿರಣಗಳಿಂದ ಜಗತ್ತಿನ ನೀರೆಲ್ಲವನ್ನೂ ಹೀರಿ ಅದನ್ನು ಚಂದ್ರಮಂಡಲಕ್ಕೆ ಸೇರಿಸುವನು. ಆ ಚಂದ್ರನು ಗಾಳಿಯ ಮೂಲಕ ನೀರನ್ನು ಹೊಗೆ, ಅಗ್ನಿ, ಗಾಳಿ ಇವುಗಳ ರೂಪವಾದ ಮೇಘದಲ್ಲಿ ಸೇರಿಸುವನು.

೧೦. ಆ ಮೇಘಗಳಿಂದ ಜಲವು ಭ್ರಂಶ (ಬೀಳುವಿಕೆ) ವನ್ನು ಹೊಂದುವುದಿಲ್ಲ. ಆ ಕಾರಣ ಅಭ್ರಗಳೆಂದು ಮೇಘಗಳಿಗೆ ಹೆಸರಾಯಿತು. ಆ ಮೇಘಗಳಿಂದ ನೀರು ಗಾಳಿಯ ಹೊಡೆತದಿಂದ ಕೆಳಗೆ ಬೀಳುವುದು.

೧೧-೧೨. ಆಮೇಲಾ ನೀರು ಕಾಲಕ್ಕನುಸಾರವಾದ ಸಂಸ್ಕಾರವನ್ನು ಹೊಂದಿ ನದಿ, ಸಮುದ್ರ, ಕೆರೆ, ಪ್ರಾಣಿಗಳಲ್ಲಿರುವ ನೀರು ಎಂದು ನಾಲ್ಕುವಿಧವಾಗಿರುವುದು. ಆ ನಾಲ್ಕು ವಿಧವಾದ ನೀರನ್ನೂ ಸೂರ್ಯನು ತಿರುಗಿ ಬೇಸಿಗೆಯಲ್ಲಿ ಹೀರುವನು.

shrinath.udupa@gmail.com

ಆಕಾಶಗಂಗಾಸಲಿಲಂ ತಥಾಽಽಹೃತ್ಯ ಗಭಸ್ತಿಮಾನ್ ।
ಅನಭ್ರಗತಮೇವೋರ್ವ್ಯಾಂ ಸದ್ಯಃ ಕ್ಷಿಪತಿ ರಶ್ಮಿಭಿಃ ॥ ೧೩ ॥

ತಸ್ಯ ಸಂಸ್ಪರ್ಶನಿರ್ಧೂತಪಾಪಪಂಕೋ ದ್ವಿಜೋತ್ತಮಾಃ ।
ನ ಯಾತಿ ನರಕಂ ಮರ್ತ್ಯೋ ದಿವ್ಯಂ ಸ್ನಾನಂ ಹಿ ತತ್ಸ್ಮೃತಂ ॥ ೧೪ ॥

ದೃಷ್ಟಸೂರ್ಯಂ ಹಿ ತದ್ವಾರಿ ಪತತ್ಯಭ್ರೈರ್ವಿನಾ ದಿವಃ ।
ಆಕಾಶಗಂಗಾಸಲಿಲಂ ತದ್ಗೋಭಿಃ ಕ್ಷಿಪ್ಯತೇ ರವೇಃ ॥ ೧೫ ॥

ಕೃತ್ತಿಕಾದಿಷು ಋಕ್ಷೇಷು ವಿಷಮೇಷ್ವಂಬು ಯದ್ದಿವಃ ।
ದೃಷ್ಟ್ವಾಽರ್ಕಂ ಪತಿತಂ ಜ್ಞೇಯಂ ತದ್ಗಾಂಗಂ ದಿಗ್ಗಜೋದ್ಧೃತಂ ॥ ೧೬ ॥

ಯುಗ್ಮರ್ಕ್ಷೇಷು ತು ಯತ್ತೋಯಂ ಪತತ್ಯರ್ಕೋದ್ಧೃತಂ ದಿವಃ ।
ತತ್ಸೂರ್ಯರಶ್ಮಿಭಿಃ ಸದ್ಯಃ ಸಮಾದಾಯ ನಿರಸ್ಯತೇ ॥ ೧೭ ॥

---

೧೩. ಆಕಾಶಗಂಗೆಯ ನೀರನ್ನು ಸೂರ್ಯನು ಮೇಘಗಳ ಸಂಬಂಧವಿಲ್ಲದೆಯೇ ತನ್ನ ಕಿರಣಗಳಿಂದ ಪ್ರವಾಹರೂಪವಾಗಿ ಭೂಮಿಗೆ ಹರಿಸುವನು.

೧೪. ಆ ಗಂಗಾನದಿಯ ಪವಿತ್ರವಾದ ಜಲದಲ್ಲಿ ಸ್ನಾನಮಾಡಿದರೆ ಪಾಪಿಯೂ ಸಹ ತನ್ನ ಪಾಪವನ್ನು ಕಳೆದುಕೊಳ್ಳುವನು. ನರಕವನ್ನು ಪಡೆಯುವುದಿಲ್ಲ.

೧೫. ಆ ಗಂಗೆಯ ಪ್ರವಾಹವು ಸೂರ್ಯಮಂಡಲವನ್ನು ಪಡೆದು ಅವನ ಕಿರಣಗಳ ಪ್ರೇರಣೆಯಿಂದ ಮೇಘಗಳ ಸಂಬಂಧವಿಲ್ಲದೆಯೇ ಭೂಮಿಗೆ ಬೀಳುವದು.

೧೬. ಕೃತ್ತಿಕೆ ಮೊದಲಾದ ಬೆಸಸಂಖ್ಯೆಯ ನಕ್ಷತ್ರಗಳಲ್ಲಿ ಸೂರ್ಯಮಂಡಲದ ಸಂಬಂಧವನ್ನು ಹೊಂದಿ ಬೀಳುವ ಗಂಗಾಪ್ರವಾಹವು ಆ ನದಿಯ ಮಧ್ಯದಲ್ಲಿ ನೀರಾಟವಾಡುವ ದಿಗ್ಗಜಗಳಿಂದ ಎರಚಲ್ಪಟ್ಟುದಾಗಿ ಭಾವಿಸಬೇಕು.

೧೭. ಸಮಸಂಖ್ಯೆಯ ನಕ್ಷತ್ರಗಳಲ್ಲಿ ಸೂರ್ಯನ ಕಿರಣಗಳ ಪ್ರೇರಣೆಯಿಂದ ಭೂಮಿಗೆ ಬೀಳುವ ಆಕಾಶಗಂಗೆಯ ನೀರು ಪುನಃ ಬೇಸಗೆಯಲ್ಲಿ ಸೂರ್ಯಕಿರಣಗಳಿಂದ ಹೀರಲ್ಪಡುತ್ತದೆ.

shrinath.udupa@gmail.com

ಉಭಯಂ ಪುಣ್ಯಮತ್ಯರ್ಥಂ ನೃಣಾಂ ಪಾಪಹರಂ ದ್ವಿಜಾಃ ।
ಆಕಾಶಗಂಗಾಸಲಿಲಂ ದಿವ್ಯಂ ಸ್ನಾನಂ ದ್ವಿಜೋತ್ತಮಾಃ ॥ ೧೮ ॥

ಯತ್ತು ಮೇಘೈಃ ಸಮುತ್ಸೃಷ್ಟಂ ವಾರಿ ತತ್ಪ್ರಾಣಿನಾಂ ದ್ವಿಜಾಃ ।
ಪುಷ್ಣಾತ್ಯೋಷಧಯಃ ಸರ್ವಾ ಜೀವನಾಯಾಮೃತಂ ಹಿ ತತ್ ॥ ೧೯ ॥

ತೇನ ವೃದ್ಧಿಂ ಪರಾಂ ನೀತಃ ಸಕಲಶ್ಚೌಷಧೀಗಣಃ ।
ಸಾಧಕಃ ಫಲಪಾಕಾಂತಃ ಪ್ರಜಾನಾಂ ತು ಪ್ರಜಾಯತೇ ॥ ೨೦ ॥

ತೇನ ಯಜ್ಞಾನ್ಯಥಾಪ್ರೋಕ್ತಾನ್ಮಾನವಾಃ ಶಾಸ್ತ್ರಚಕ್ಷುಷಃ ।
ಕುರ್ವತೇಽಹರಹಶ್ಚೈವ ದೇವಾನಾಪ್ಯಾಯಯಂತಿ ತೇ ॥ ೨೧ ॥

ಏವಂ ಯಜ್ಞಾಶ್ಚ ವೇದಾಶ್ಚ ವರ್ಣಾಶ್ಚ ದ್ವಿಜಪೂರ್ವಕಾಃ ।
ಸರ್ವದೇವನಿಕಾಯಾಶ್ಚ ಪಶುಭೂತಗಣಾಶ್ಚಯೇ ॥ ೨೨ ॥

---

೧೮. ಈ ಗಂಗಾನದಿಯ ಎರಡುತರಹೆಯ ನೀರೂ ತುಂಬಾ ಪವಿತ್ರವಾದುವು. ಪಾಪವನ್ನು ಹೋಗಲಾಡಿಸುವವು. ಗಂಗಾನದಿಯ ನೀರಿನಲ್ಲಿನ ಸ್ನಾನವು ಮಹಾಪವಿತ್ರವಾದುದು.

೧೯. ಮೇಘಗಳಿಂದ ಬೀಳುವ ಮಳೆಯಿಂದ ಪ್ರಾಣಿಗಳು ಜೀವಿಸುವವು. ಓಷಧಿ ಲತೆಗಳು ಬೆಳೆಯುವವು. ನೀರು ಜೀವನಕ್ಕೆ ಅಮೃತಸಮಾನವಾದುದು.

೨೦. ಆ ಮಳೆಯ ನೀರಿನ ಆಸರೆಯಿಂದಲೇ ಎಲ್ಲ ಸಸ್ಯಗಳೂ ಓಷಧಿಲತೆಗಳೂ ಹುಟ್ಟಿಬೆಳೆದು ಫಲವನ್ನು ಕೊಡುವವು. ಓಷಧಿಗಳಿಂದ ರೋಗಗಳು ವಾಸಿಯಾಗುವವು.

೨೧. ಹಾಗೆ ಸಸ್ಯಾದಿಗಳಿಂದ ಫಲವು ಲಭಿಸಿದುದರಿಂದ ಮಾನವರು ದಿನದಿನವೂ ನಾನಾಪ್ರಕಾರವಾದ ಯಾಗಗಳನ್ನು ವಿಧಿವತ್ತಾಗಿ ಮಾಡಿ ದೇವತೆಗಳನ್ನು ಸಂತೋಷಗೊಳಿಸುವರು.

೨೨-೨೩. ಎಲೈ ಮುನಿಗಳೇ, ಹೀಗೆ ಯಾಗಗಳು, ವೇದಗಳು, ನಾಲ್ಕುವರ್ಣಗಳು, ದೇವತೆಗಳು, ಪಶು ಮೊದಲಾದ ಪ್ರಾಣಿಗಳು, ಮೊದಲಾದವರೆಲ್ಲರೂ

shrinath.udupa@gmail.com

ವೃಷ್ಟ್ಯಾ ಧೃತಮಿದಂ ಸರ್ವಂ ಜಗತ್ಸ್ಥಾವರಜಂಗಮಂ ।
ಸಾಽಪಿ ನಿಷ್ಪಾದ್ಯತೇ ವೃಷ್ಟಿಃ ಸವಿತ್ರಾ ಮುನಿಸತ್ತಮಾಃ ॥ ೨೩ ॥

ಆಧಾರಭೂತಃ ಸವಿತುರ್ಧ್ರುವೋ ಮುನಿವರೋತ್ತಮಾಃ ।
ಧ್ರುವಸ್ಯ ಶಿಂಶುಮಾರೋಽಸೌ ಸೋಽಪಿ ನಾರಾಯಣಾಶ್ರಯಃ ॥ ೨೪ ॥

ಹೃದಿ ನಾರಾಯಣಸ್ತಸ್ಯ ಶಿಂಶುಮಾರಸ್ಯ ಸಂಸ್ಥಿತಃ ।
ವಿಭರ್ತಾ ಸರ್ವಭೂತಾನಾಮಾದಿಭೂತಃ ಸನಾತನಃ ॥ ೨೫ ॥

ಏವಂ ಮಯಾ ಮುನಿಶ್ರೇಷ್ಠಾ ಬ್ರಹ್ಮಾಂಡಂ ಸಮುದಾಹೃತಂ ।
ಭೂಸಮುದ್ರಾದಿಭಿರ್ಯುಕ್ತಂ ಕಿಮನ್ಯಚ್ಛ್ರೋತುಮಿಚ್ಛಥ ॥ ೨೬ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಧ್ರುವಸಂಸ್ಥಿತಿನಿರೂಪಣಂ
ನಾಮ ಚತುರ್ವಿಂಶೋಽಧ್ಯಾಯಃ

ಹೆಚ್ಚೇನು ? ಸ್ಥಿರ ಚರಾತ್ಮಕವಾದ ಜಗತ್ತೆಲ್ಲವೂ ಮಳೆಯ ಆಸರೆಯಿಂದಲೇ ನಿಂತಿರವುದು. ಆ ಮಳೆಯನ್ನು ಭಗವಾನ್ ಸೂರ್ಯನು ಸುರಿಸುವನು.

೨೪. ಆ ಸೂರ್ಯನಿಗೆ ಧ್ರುವಮಂಡಲವು ಆಧಾರವು. ಧ್ರುವನಿಗೆ ಶಿಂಶುಮಾರರೂಪವಾದ ತೇಜೋಮಂಡಲವು ಆಧಾರವು. ಆ ಶಿಂಶುಮಾರಕ್ಕೆ ನಾರಾಯಣನು ಆಧಾರನು.

೨೫. ಆ ನಾರಾಯಣನು ಶಿಂಶುಮಾರದ ಹೃದಯದಲ್ಲಿರುವನು. ಆ ಹರಿಯು ಜಗತ್ತೆಲ್ಲವನ್ನೂ ಧರಿಸಿ ಸಲಹುವನು. ಜಗತ್ತಿಗೆ ಆದಿಯಾದ ಪುರಾಣ ಪುರುಷನು ಅವನು.

೨೬. ಎಲೈ ಮುನಿಗಳೇ, ಹೀಗೆ ನಿಮಗೆ ನಾನು ಭೂಮಿ ಸಮುದ್ರ ಮುಂತಾದುವನ್ನೊಳಗೊಂಡ ಬ್ರಹ್ಮಾಂಡವೆಲ್ಲವನ್ನೂ ವರ್ಣಿಸಿರುವೆನು. ಮುಂದೆ ಇನ್ನೇನನ್ನು ಕೇಳಬೇಕೆಂದಿರುವಿರಿ ? ಹೇಳಿರಿ ಎಂದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಧ್ರುವಸಂಸ್ಥಿತಿನಿರೂಪಣವೆಂಬ
ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚವಿಂಶೋಽಧ್ಯಾಯಃ

॥ ಮುನಯ ಊಚುಃ ॥

ಪೃಥಿವ್ಯಾಂ ಯಾನಿ ತೀರ್ಥಾನಿ ಪುಣ್ಯಾನ್ಯಾಯತನಾನಿ ಚ ।
ವಕ್ತುಮರ್ಹಸಿ ಧರ್ಮಜ್ಞ ಶ್ರೋತುಂ ನೋ ವರ್ತತೇ ಮನಃ ॥ ೧ ॥

॥ ಲೋಮಹರ್ಷಣ ಉವಾಚ ॥

ಯಸ್ಯ ಹಸ್ತೌ ಚ ಪಾದೌ ಚ ಮನಶ್ಚೈವ ಸುಸಂಯತಂ ।
ವಿದ್ಯಾ ತಪಶ್ಚ ಕೀರ್ತಿಶ್ಚ ಸ ತೀರ್ಥಫಲಮಶ್ನುತೇ ॥ ೨ ॥

ಇಪ್ಪತ್ತೈದನೆಯ ಅಧ್ಯಾಯವು

೧. ಮುನಿಗಳು ಹೇಳಿದರು.—ಎಲೈ ಸರ್ವಜ್ಞನಾದ ಸೂತಮುನಿಯೇ ಭೂಮಿಯಲ್ಲಿರುವ ಪುಣ್ಯತೀರ್ಥಗಳು, ಪವಿತ್ರಕ್ಷೇತ್ರಗಳು ಇವೆಲ್ಲವನ್ನೂ ಕೇಳಬೇಕೆಂದಿರುವೆವು, ಹೇಳು ಎನಲು

೨. ಸೂತಮುನಿಯು ಹೇಳಿದನು.—ಯಾವನು ಮನಸ್ಸು, ಕೈಕಾಲುಗಳು, ಪರಿಶುದ್ಧವಾಗಿದ್ದು ವಿದ್ಯೆ, ತಪಸ್ಸು, ಕೀರ್ತಿಗಳಿಂದ ಕೂಡಿರುವನೋ ಅವನು ತೀರ್ಥಯಾತ್ರೆಯ ಫಲವನ್ನು ಸಂಪೂರ್ಣವಾಗಿ ಪಡೆಯುವನು.

shrinath.udupa@gmail.com

ಮನೋ ವಿಶುದ್ಧಂ ಪುರುಷಸ್ಯ ತೀರ್ಥಂ
ವಾಚಃ ತಥಾ ಚೇಂದ್ರಿಯನಿಗ್ರಹಶ್ಚ ।
ಏತಾನಿ ತೀರ್ಥಾನಿ ಶರೀರಜಾನಿ
ಸ್ವರ್ಗಸ್ಯ ಮಾರ್ಗಂ ಪ್ರತಿಬೋಧಯಂತಿ ॥ ೩ ॥

ಚಿತ್ತಮಂತರ್ಗತಂ ದುಷ್ಟಂ ತೀರ್ಥಸ್ನಾನೈರ್ನ ಶುಧ್ಯತಿ ।
ಶತಶೋಽಪಿ ಜಲೈರ್ಧೌತಂ ಸುರಾಭಾಂಡಮಿವಾಶುಚಿ ॥ ೪ ॥

ನ ತೀರ್ಥಾನಿ ನ ದಾನಾನಿ ನ ವ್ರತಾನಿ ನ ಚಾಽಶ್ರಮಾಃ ।
ದುಷ್ಟಾಶಯಂ ದಂಭರುಚಿಂ ಪುನಂತಿ ವ್ಯುತ್ಥಿತೇಂದ್ರಿಯಂ ॥ ೫ ॥

ಇಂದ್ರಿಯಾಣಿ ವಶೇ ಕೃತ್ವಾ ಯತ್ರ ಯತ್ರ ವಸೇನ್ನರಃ ।
ತತ್ರ ತತ್ರ ಕುರುಕ್ಷೇತ್ರಂ ಪ್ರಯಾಗಂ ಪುಷ್ಕರಂ ತಥಾ ॥ ೬ ॥

ತಸ್ಮಾಚ್ಛೃಣುಧ್ವಂ ವಕ್ಷ್ಯಾಮಿ ತೀರ್ಥಾನ್ಯಾಯತನಾನಿ ಚ ।
ಸಂಕ್ಷೇಪೇಣ ಮುನಿಶ್ರೇಷ್ಠಾಃ ಪೃಥಿವ್ಯಾಂ ಯಾನಿ ಕಾನಿ ವೈ ॥ ೭ ॥

---

೩. ಪುರುಷನಿಗೆ ಪರಿಶುದ್ಧವಾದ ಮನಸ್ಸೂ, ಶುದ್ಧವಾದ ಮಾತೂ, ಇಂದ್ರಿಯ ಜಯವೂ ನಿಜವಾದ ತೀರ್ಥವೆನಿಸುವುದು. ಈರೀತಿ ತನ್ನ ಶರೀರದಲ್ಲಿಯೇ ಇರತಕ್ಕ ತೀರ್ಥಗಳು ಪುರುಷನಿಗೆ ಸ್ವರ್ಗದ ಹಾದಿಯನ್ನು ತೋರಿಸುವವು.

೪. ಸುರೆಯಿಂದ ತುಂಬಿದ ಕೊಡವನ್ನು ಹೊರಗಡೆ ಎಷ್ಟು ತೊಳೆದರೂ ಅದು ಪರಿಶುದ್ಧವಾಗದಿರುವಂತೆ ಪುರುಷನಮನಸ್ಸು ಪರಿಶುದ್ಧವಿಲ್ಲದಿದ್ದರೆ ಎಷ್ಟೊಂದು ತೀರ್ಥಸ್ನಾನಗಳನ್ನು ಮಾಡಿದರೂ ಪರಿಶುದ್ಧತೆಯು ಬರಲಾರದು.

೫. ಜಿತೇಂದ್ರಿಯನಲ್ಲದೆ ಕೆಟ್ಟಮನಸ್ಸುಳ್ಳವನಾಗಿ ಗರ್ವಿಷ್ಠನಾಗಿರುವವನನ್ನು ಯಾವ ತೀರ್ಥಗಳೂ, ದಾನಗಳೂ, ಆಶ್ರಮಗಳೂ, ವ್ರತಗಳೂ ಪವಿತ್ರಮಾಡಲಾರವು.

೬. ಇಂದ್ರಿಯಗಳನ್ನು ತನ್ನಧೀನದಲ್ಲಿಟ್ಟುಕೊಂಡ ಪುರುಷನು ಎಲ್ಲಿದ್ದರೆ ಅದೇ ಪ್ರಯಾಗಕ್ಷೇತ್ರವು. ಅದೇ ಕುರುಕ್ಷೇತ್ರವು. ಅದೇ ಪುಷ್ಕರಕ್ಷೇತ್ರವು.

೭. ಎಲೈ ಮುನಿಗಳೇ, ಆದುದರಿಂದ ನೀವು ಕೇಳಿದ ತೀರ್ಥಗಳು, ಕ್ಷೇತ್ರಗಳು ಇವುಗಳೆಲ್ಲವನ್ನೂ ಸಂಕ್ಷೇಪವಾಗಿ ಹೇಳುವೆನು. ಕೇಳಿರಿ. ತೀರ್ಥಕ್ಷೇತ್ರಗಳೆಲ್ಲವನ್ನೂ ವಿಸ್ತಾರವಾಗಿ ವರ್ಣಿಸಲು ನೂರುವರ್ಷಗಳೂ ಸಾಲವು.

shrinath.udupa@gmail.com

ವಿಸ್ತರೇಣ ನ ಶಕ್ಯಂತೇ ವಕ್ತುಂ ವರ್ಷಶತೈರಪಿ ।
ಪ್ರಥಮಂ ಪುಷ್ಕರಂ ತೀರ್ಥಂ ನೈಮಿಷಾರಣ್ಯಮೇವ ಚ ॥ ೮ ॥

ಪ್ರಯಾಗಂ ಚ ಪ್ರವಕ್ಷ್ಯಾಮಿ ಧರ್ಮಾರಣ್ಯಂ ದ್ವಿಜೋತ್ತಮಾಃ ।
ಧೇನುಕಂ ಚಂಪಕಾರಣ್ಯಂ ಸೈಂಧವಾರಣ್ಯಮೇವ ಚ ॥ ೯ ॥

ಪುಣ್ಯಂ ಚ ಮಗಧಾರಣ್ಯಂ ದಂಡಕಾರಣ್ಯಮೇವ ಚ ।
ಗಯಾ ಪ್ರಭಾಸಂ ಶ್ರೀತೀರ್ಥಂ ದಿವ್ಯಂ ಕನಖಲಂ ತಥಾ ॥ ೧೦ ॥

ಭೃಗುತುಂಗಂ ಹಿರಣ್ಯಾಕ್ಷಂ ಭೀಮಾರಣ್ಯಂ ಕುಶಸ್ಥಲೀಂ ।
ಲೋಹಾಕುಲಂ ಸಕೇದಾರಂ ಮಂದರಾರಣ್ಯಮೇವ ಚ ॥ ೧೧ ॥

ಮಹಾಬಲಂ ಕೋಟಿತೀರ್ಥಂ ಸರ್ವಪಾಪಹರಂ ತಥಾ ।
ರೂಪತೀರ್ಥಂ ಶೂಕರವಂ ಚಕ್ರತೀರ್ಥಂ ಮಹಾಫಲಂ ॥ ೧೨ ॥

ಯೋಗತೀರ್ಥಂ ಸೋಮತೀರ್ಥಂ ತೀರ್ಥಂ ಸಾಹೋಟಕಂ ತಥಾ ।
ತೀರ್ಥಂ ಕೋಕಾಮುಖಂ ಪುಣ್ಯಂ ಬದರೀಶೈಲಮೇವ ಚ ॥ ೧೩ ॥

೮–೯. ಪುಷ್ಕರ, ನೈಮಿಷಾರಣ್ಯ, ಮಗಧಾರಣ್ಯ, ದಂಡಕಾರಣ್ಯ, ಧೇನುಕಾರಣ್ಯ, ಚಂಪಕಾರಣ್ಯ, ಸೈಂಧವಾರಣ್ಯ ಇವೆಲ್ಲವೂ ಪವಿತ್ರವಾದ ಕ್ಷೇತ್ರಗಳು.

೧೦–೧೨. ಮತ್ತು ಪ್ರಯಾಗ, ಧರ್ಮಾರಣ್ಯ, ಗಯೆ, ಪ್ರಭಾಸಕ್ಷೇತ್ರ, ಶ್ರೀತೀರ್ಥ, ಕನಖಲಕ್ಷೇತ್ರ, ಭೃಗುತುಂಗತೀರ್ಥ, ಹಿರಣ್ಯಾಕ್ಷಕ್ಷೇತ್ರ, ಭೀಮಾರಣ್ಯ, ಕುಶಸ್ಥಲೀತೀರ್ಥ, ಲೋಹಾಕುಲ, ಕೇದಾರಕ್ಷೇತ್ರ, ಮಂದರಾರಣ್ಯ, ಮಹಾಬಲಕ್ಷೇತ್ರ, ಕೋಟಿತೀರ್ಥ, ರೂಪತೀರ್ಥ, ಶೂಕರವಕ್ಷೇತ್ರ, ಚಕ್ರತೀರ್ಥ, ಮಹಾಫಲಕ್ಷೇತ್ರ ಇವೆಲ್ಲವೂ ಪವಿತ್ರವಾದ ಕ್ಷೇತ್ರಗಳು.

೧೩–೧೫. ಯೋಗತೀರ್ಥ, ಸೋಮತೀರ್ಥ, ಸಾಹೋಟಕತೀರ್ಥ, ಕೋಕಾಮುಖತೀರ್ಥ, ಬದರೀಕ್ಷೇತ್ರ, ಸೋಮತೀರ್ಥ, ತುಂಗಕೂಟವೆಂಬ ಪಾಪನಾಶಕವಾದ ಕ್ಷೇತ್ರ, ಅಗ್ನಿಪದವೆಂಬ ಕೋಟಿತೀರ್ಥ, ಪಂಚಶಿಖತೀರ್ಥ, ಧರ್ಮೋದ್ಭವವೆಂಬ

shrinath.udupa@gmail.com

ಸೋಮತೀರ್ಥಂ ತುಂಗಕೂಟಂ ತೀರ್ಥಂ ಸ್ಕಂದಾಶ್ರಮಂ ತಥಾ ।
ಕೋಟಿತೀರ್ಥಂ ಚಾಗ್ನಿಪದಂ ತೀರ್ಥಂ ಪಂಚಶಿಖಂ ತಥಾ ॥ ೧೪ ॥

ಧರ್ಮೋದ್ಭವಂ ಕೋಟಿತೀರ್ಥಂ ತೀರ್ಥಂ ಬಾಧಪ್ರಮೋಚನಂ ।
ಗಂಗಾದ್ವಾರಂ ಪಂಚಕೂಟಂ ಮಧ್ಯಕೇಸರಮೇವ ಚ ॥ ೧೫ ॥

ಚಕ್ರಪ್ರಭಂ ಮತಂಗಂ ಚ ಕುಶದಂಡಂ ಚ ವಿಶ್ರುತಂ ।
ದಂಷ್ಟ್ರಾಕುಂಡಂ ವಿಷ್ಣುತೀರ್ಥಂ ಸರ್ವಕಾಮಿಕಮೇವ ಚ ॥ ೧೬ ॥

ತೀರ್ಥಂ ಮತ್ಸ್ಯತಿಲಂ ಚೈವ ಬದರೀ ಸುಪ್ರಭಂ ತಥಾ ।
ಬ್ರಹ್ಮಕುಂಡಂ ವಹ್ನಿಕುಂಡಂ ತೀರ್ಥಂ ಸತ್ಯಪದಂ ತಥಾ ॥ ೧೭ ॥

ಚತುಸ್ರೋತಶ್ಚತುಶ್ಶೃಂಗಂ ಶೈಲಂ ದ್ವಾದಶಧಾರಕಂ ।
ಮಾನಸಂ ಸ್ಥೂಲಶೃಂಗಂ ಚ ಸ್ಥೂಲದಂಡಂ ತಥೋರ್ವಶೀ ॥ ೧೮ ॥

ಲೋಕಪಾಲಂ ಮನುವರಂ ಸೋಮಾಹ್ವಶೈಲಮೇವ ಚ ।
ಸದಾಪ್ರಭಂ ಮೇರುಕುಂಡಂ ತೀರ್ಥಂ ಸೋಮಾಭಿಷೇಚನಂ ॥ ೧೯ ॥

ಕೋಟಿತೀರ್ಥ, ಬಾಧಪ್ರಮೋಚನತೀರ್ಥ, ಗಂಗಾದ್ವಾರತೀರ್ಥ, ಪಂಚಕೂಟಕ್ಷೇತ್ರ, ಮಧ್ಯಕೇಸರಕ್ಷೇತ್ರ ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

೧೬–೧೮. ಚಕ್ರಪ್ರಭ, ಮತಂಗ, ಕೃಶದಂಡ, ದಂಷ್ಟ್ರಾಕುಂಡತೀರ್ಥ, ಸಕಲಫಲವನ್ನೂ ಕೊಡುವಂತಹ ವಿಷ್ಣುತೀರ್ಥ, ಮತ್ಸ್ಯತಿಲತೀರ್ಥ, ಬದರೀತೀರ್ಥ ಸುಪ್ರಭ, ಬ್ರಹ್ಮಕುಂಡತೀರ್ಥ, ವಹ್ನಿಕುಂಡತೀರ್ಥ, ಸತ್ಯತೀರ್ಥ, ಚತುಸ್ರೋತಸ ತೀರ್ಥ, ಚತುಃಶೃಂಗಶೈಲ, ದ್ವಾದಶಧಾರಾತೀರ್ಥ, ಮಾನಸಸರೋವರ, ಸ್ಥೂಲಶೃಂಗ ಶೈಲ, ಸ್ಥೂಲದಂಡಕ್ಷೇತ್ರ, ಉರ್ವಶೀತೀರ್ಥ, ಇವೆಲ್ಲವೂ ಪವಿತ್ರವಾದ ತೀರ್ಥ ಕ್ಷೇತ್ರಗಳು.

೧೯–೨೧. ಲೋಕಪಾಲತೀರ್ಥ, ಮನುವರತೀರ್ಥ, ಸೋಮಶೈಲ, ಸದಾಪ್ರಭಾ ತೀರ್ಥ, ಮೇರುಕುಂಡ, ಸೋಮಾಭಿಷೇಕ, ಮಹಾಸ್ರೋತ, ಕೋಟರಕಕ್ಷೇತ್ರ, ಪಂಚ

shrinath.udupa@gmail.com

ಮಹಾಸ್ರೋತಂ ಕೋಟಿರಕಂ ಪಂಚಧಾರಂ ತ್ರಿಧಾರಕಂ ।
ಸಪ್ತಧಾರೈಕಧಾರಂ ಚ ತೀರ್ಥಂ ಚಾಮರಕಂಟಕಂ ॥ ೨೦ ॥

ಶಾಲಗ್ರಾಮಂ ಚಕ್ರತೀರ್ಥಂ ಕೋಟಿದ್ರುಮಮನುತ್ತಮಂ ।
ಬಿಲ್ವಪ್ರಭಂ ದೇವಹ್ರದಂ ತೀರ್ಥಂ ವಿಷ್ಣುಹ್ರದಂ ತಥಾ ॥ ೨೧ ॥

ಶಂಖಪ್ರಭಂ ದೇವಕುಂಡಂ ತೀರ್ಥಂ ವಜ್ರಾಯುಧಂ ತಥಾ ।
ಅಗ್ನಿ ಪ್ರಭಂ ಚ ಪುನ್ನಾಗಂ ದೇವಪ್ರಭಮನುತ್ತಮಂ ॥ ೨೨ ॥

ವಿದ್ಯಾಧರಂ ಸಗಾಂಧರ್ವಂ ಶ್ರೀತೀರ್ಥಂ ಬ್ರಹ್ಮಣೋ ಹ್ರದಂ ।
ಸಾತೀರ್ಥಂ ಲೋಕಪಾಲಾಖ್ಯಂ ಮಣಿಪೂರಗಿರಿಂ ತಥಾ ॥ ೨೩ ॥

ತೀರ್ಥಂ ಪಂಚಹ್ರದಂ ಚೈವ ಪುಣ್ಯಂ ಪಿಂಡಾರಕಂ ತಥಾ ।
ಮಲವ್ಯಂ ಗೋಪ್ರಭಾವಂ ಚ ಗೋವರಂ ವಟಮೂಲಕಂ ॥ ೨೪ ॥

ಸ್ನಾನದಂಡಂ ಪ್ರಯಾಗಂ ಚ ಗುಹ್ಯಂ ವಿಷ್ಣುಪದಂ ತಥಾ ।
ಕನ್ಯಾಶ್ರಮಂ ವಾಯುಕುಂಡಂ ಜಂಬೂಮಾರ್ಗಂ ತಥೋತ್ತಮಂ ॥ ೨೫ ॥

ಧಾರಾತೀರ್ಥ, ತ್ರಿಧಾರಾತೀರ್ಥ, ಸಪ್ತಧಾರಾತೀರ್ಥ, ಏಕಧಾರಾತೀರ್ಥ, ಅಮರಕಂಟಕತೀರ್ಥ ಶಾಲಗ್ರಾಮಕ್ಷೇತ್ರ, ಚಕ್ರತೀರ್ಥ, ಕೋಟಿದ್ರುಮಕ್ಷೇತ್ರ, ಬಿಲ್ವಪ್ರಭಕ್ಷೇತ್ರ, ದೇವಹ್ರದ ತೀರ್ಥ, ವಿಷ್ಣುಹ್ರದತೀರ್ಥ ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

೨೨-೨೪. ಶಂಖಪ್ರಭತೀರ್ಥ, ದೇವಕುಂಡತೀರ್ಥ, ವಜ್ರಾಯುಧತೀರ್ಥ, ಅಗ್ನಿ ಪ್ರಭತೀರ್ಥ, ಪುನ್ನಾಗಕ್ಷೇತ್ರ, ದೇವಪ್ರಭತೀರ್ಥ, ವಿದ್ಯಾಧರತೀರ್ಥ, ಗಾಂಧರ್ವತೀರ್ಥ, ಶ್ರೀತೀರ್ಥ, ಬ್ರಹ್ಮಹ್ರದ, ಸಾತೀರ್ಥ, ಲೋಕಪಾಲತೀರ್ಥ, ಮಣಿಪೂರಗಿರಿ, ಪಂಚಹ್ರದ ತೀರ್ಥ, ಪಿಂಡಾರಕಕ್ಷೇತ್ರ, ಮಲವ್ಯಕ್ಷೇತ್ರ, ಗೋಪ್ರಭಾವಕ್ಷೇತ್ರ, ಗೋವರಕ್ಷೇತ್ರ, ವಟ ಮೂಲಕಕ್ಷೇತ್ರ ಇವೆಲ್ಲವೂ ಮಹಾ ಪವಿತ್ರವಾದ ತೀರ್ಥಕ್ಷೇತ್ರಗಳು.

೨೫. ಸ್ನಾನದಂಡಕ್ಷೇತ್ರ, ಪ್ರಯಾಗತೀರ್ಥ, ಗುಹ್ಯತೀರ್ಥ, ವಿಷ್ಣುಪಾದಕ್ಷೇತ್ರ, ಕನ್ಯಾಶ್ರಮ, ವಾಯುಕುಂಡ, ಜಂಬೂಮಾರ್ಗ ಇವೂ ಸಹ ಪವಿತ್ರ ತೀರ್ಥಕ್ಷೇತ್ರಗಳು.

shrinath.udupa@gmail.com

ಗಭಸ್ತಿತೀರ್ಥಂ ಚ ತಥಾ ಯಯಾತಿಪತನಂ ಶುಚಿ ।
ಕೋಟಿತೀರ್ಥಂ ಭದ್ರವಟಂ ಮಹಾಕಾಲವನಂ ತಥಾ ॥ ೨೬ ॥

ನರ್ಮದಾತೀರ್ಥಮಪರಂ ತೀರ್ಥವಜ್ರಂ ತಥಾಽರ್ಬುದಂ ।
ಪಿಂಗುತೀರ್ಥಂ ಸವಾಸಿಷ್ಠಂ ತೀರ್ಥಂ ಚ ಪೃಥಸಂಗಮಂ ॥ ೨೭ ॥

ತೀರ್ಥಂ ದೌರ್ವಾಸಿಕಂ ನಾಮ ತಥಾ ಪಿಂಜರಕಂ ಶುಭಂ ।
ಋಷಿತೀರ್ಥಂ ಬ್ರಹ್ಮತುಂಗಂ ವಸುತೀರ್ಥಂ ಕುಮಾರಿಕಂ ॥ ೨೮ ॥

ಶಕ್ರತೀರ್ಥಂ ಪಂಚನದಂ ರೇಣುಕಾತೀರ್ಥಮೇವ ಚ ।
ಪೈತಾಮಹಂಚ ವಿಮಲಂ ರುದ್ರಪಾದಂ ತಥೋತ್ತಮಂ ॥ ೨೯ ॥

ಮಣಿಮತ್ತಂ ಚ ಕಾಮಾಖ್ಯಂ ಕೃಷ್ಣತೀರ್ಥಂ ಕುಶಾವಿಲಂ ।
ಯಜನಂ ಯಾಜನಂ ಚೈವ ತಥೈವ ಬ್ರಹ್ಮವಾಲುಕಂ ॥ ೩೦ ॥

ಪುಷ್ಪನ್ಯಾಸಂ ಪುಂಡರೀಕಂ ಮಣಿಪೂರಂ ತಥೋತ್ತರಂ ।
ದೀರ್ಘಸತ್ರಂ ಹಯಪದಂ ತೀರ್ಥಂ ಚಾನಶನಂ ತಥಾ ॥ ೩೧ ॥

೨೬–೨೮. ಗಭಸ್ತಿತೀರ್ಥ, ಯಯಾತಿಪತನವೆಂಬ ನಿರ್ಮಲವಾದ ತೀರ್ಥ, ಭದ್ರವಟವೆಂಬ ಕೋಟಿತೀರ್ಥ, ಮಹಾಕಾಲವನ, ಪಿಂಗುತೀರ್ಥ, ವಾಸಿಷ್ಠತೀರ್ಥ, ಪೃಥುಸಂಗಮತೀರ್ಥ, ನರ್ಮದಾತೀರ್ಥ, ತೀರ್ಥವಜ್ರ, ಅರ್ಬುದತೀರ್ಥ, ದುರ್ವಾಸತೀರ್ಥ, ಪಿಂಜರಕತೀರ್ಥ, ಋಷಿತೀರ್ಥ, ಬ್ರಹ್ಮತುಂಗತೀರ್ಥ, ವಸುತೀರ್ಥ, ಕುಮಾರೀತೀರ್ಥ, ಇವೆಲ್ಲವೂ ಪವಿತ್ರ ತೀರ್ಥಕ್ಷೇತ್ರಗಳು.

೨೯–೩೧. ಶಕ್ರತೀರ್ಥ, ಪಂಚನದತೀರ್ಥ, ರೇಣುಕಾತೀರ್ಥ, ಪಿತಾಮಹತೀರ್ಥ, ರುದ್ರಪಾದಕ್ಷೇತ್ರ, ಮಣಿಮತ್ತ, ಕಾಮತೀರ್ಥ, ಕೃಷ್ಣತೀರ್ಥ, ಕುಶಾವಿಲತೀರ್ಥ, ಯಜನ ಯಾಜನ, ಬ್ರಹ್ಮವಾಲುಕತೀರ್ಥ, ಪುಷ್ಪನ್ಯಾಸ, ಪುಂಡರೀಕ, ಮಣಿಪೂರ, ದೀರ್ಘಸತ್ರ, ಹಯಪದ, ಅನಶನತೀರ್ಥ ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

shrinath.udupa@gmail.com

ಗಂಗೋದ್ಭೇದಂ ಶಿವೋದ್ಭೇದಂ ನರ್ಮದೋದ್ಭೇದಮೇವ ಚ ।
ವಸ್ತ್ರಾಪದಂ ದಾರುವಲಂ ಛಾಯಾರೋಹಣಮೇವ ಚ ॥ ೩೨ ॥

ಸಿದ್ಧೇಶ್ವರಂ ಮಿತ್ರಬಲಂ ಕಾಲಿಕಾಶ್ರಮಮೇವ ಚ ।
ವಟಾವಟಂ ಭದ್ರವಟಂ ಕೌಶಾಂಬೀ ಚ ದಿವಾಕರಂ ॥ ೩೩ ॥

ದ್ವೀಪಂ ಸಾರಸ್ವತಂ ಚೈವ ವಿಜಯಂ ಕಾಮದಂ ತಥಾ ।
ರುದ್ರಕೋಟಿಂ ಸುಮನಸಂ ತೀರ್ಥಂ ಸದ್ರಾವನಾಮಿತಂ ॥ ೩೪ ॥

ಸ್ಯಮಂತಪಂಚಕಂ ತೀರ್ಥಂ ಬ್ರಹ್ಮತೀರ್ಥಂ ಸುದರ್ಶನಂ ।
ಸತತಂ ಪೃಥಿವೀಸರ್ವಂ ಪಾರಿಪ್ಲವಪೃಥೂದಕೌ ॥ ೩೫ ॥

ದಶಾಶ್ವಮೇಧಿಕಂ ತೀರ್ಥಂ ಸರ್ಪಿಜಂ ವಿಷಯಾಂತಿಕಂ ।
ಕೋಟಿತೀರ್ಥಂ ಪಂಚನದಂ ವಾರಾಹಂ ಯಕ್ಷಿಣೀಹ್ರದಂ ॥ ೩೬ ॥

ಪುಂಡರೀಕಂ ಸೋಮತೀರ್ಥಂ ಮುಂಜವಟಂ ತಥೋತ್ತಮಂ ।
ಬದರೀವನಮಾಸೀನಂ ರತ್ನಮೂಲಕಮೇವ ಚ ॥ ೩೭ ॥

೩೨–೩೪. ಗಂಗೋದ್ಭೇದ [ಗಂಗಾಮೂಲ] ಶಿವೋದ್ಭೇದ, ನರ್ಮದೋದ್ಭೇದ [ನರ್ಮದಾಮೂಲ] ವಸ್ತ್ರಾಪದ, ದಾರುವಾಲ, ಛಾಯಾರೋಹಣ, ಸಿದ್ಧೇಶ್ವರ, ಮಿತ್ರಬಲ, ಕಾಲಿಕಾಶ್ರಮ, ವಟಾವಟ, ಭದ್ರವಟ, ಕೌಶಾಂಬಿ, ದಿವಾಕರತೀರ್ಥ, ಸರಸ್ವತೀದ್ವೀಪ, ವಿಜಯಕ್ಷೇತ್ರ, ಕಾಮದಕ್ಷೇತ್ರ, ರುದ್ರಕೋಟಿಕ್ಷೇತ್ರ, ಸುಮನಸಕ್ಷೇತ್ರ, ಸದ್ರಾವನಾಮಿತತೀರ್ಥ ಇವೆಲ್ಲವೂ ಮಹಾ ಪವಿತ್ರವಾದ ತೀರ್ಥಕ್ಷೇತ್ರಗಳು.

೩೫-೩೭. ಸ್ಯಮಂತಪಂಚಕತೀರ್ಥ, ಸುದರ್ಶನಬ್ರಹ್ಮತೀರ್ಥ, ಪೃಥಿವೀತೀರ್ಥ, ಪಾರಿಪ್ಲವತೀರ್ಥ, ಪೃಥೂದಕತೀರ್ಥ, ದಶಾಶ್ವಮೇಧಿಕತೀರ್ಥ,ಸರ್ಪಿಸ್ತೀರ್ಥ, ವಿಷಯಾಂತಿಕತೀರ್ಥ, ಪಂಚನಂದವೆಂಬ ಕೋಟಿತೀರ್ಥ, ವರಾಹತೀರ್ಥ, ಯಕ್ಷಿಣೀಹ್ರದ, ಪುಂಡರೀಕತೀರ್ಥ, ಸೋಮತೀರ್ಥ, ಮುಂಜವಟತೀರ್ಥ, ಬದರೀವನ, ರತ್ನಮೂಲ ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

shrinath.udupa@gmail.com

ಲೋಕದ್ವಾರಂ ಪಂಚತೀರ್ಥಂ ಕಪಿಲಾತೀರ್ಥಮೇವ ಚ ।
ಸೂರ್ಯತೀರ್ಥಂ ಶಂಖಿನೀ ಚ ಗವಾಂ ಭವನಮೇವ ಚ ॥ ೩೮ ॥

ತೀರ್ಥಂ ಚ ಯಕ್ಷರಾಜಸ್ಯ ಬ್ರಹ್ಮಾವರ್ತಂ ಸುತೀರ್ಥಕಂ ।
ಕಾಮೇಶ್ವರಂ ಮಾತೃತೀರ್ಥಂ ತೀರ್ಥಂ ಶೀತವನಂ ತಥಾ ॥ ೩೯ ॥

ಸ್ನಾನಲೋಮಾಪಹಂ ಚೈವ ಮಾಸಸಂಸರಕಂ ತಥಾ ।
ದಶಾಶ್ವಮೇಧಂ ಕೇದಾರಂ ಬ್ರಹ್ಮೋದುಂಬರಮೇವ ಚ ॥ ೪೦ ॥

ಸಪ್ತರ್ಷಿಕುಂಡಂ ಚ ತಥಾ ತೀರ್ಥಂ ದೇವ್ಯಾಃ ಸುಜಂಬುಕಂ ।
ಈಹಾಸ್ಪದಂ ಕೋಟಿಕೂಟಂ ಕಿಂದಾನಂ ಕಿಂಜಪಂ ತಥಾ ॥ ೪೧ ॥

ಕಾರಂಡವಂ ಚಾವೇಧ್ಯಂ ಚ ತ್ರಿವಿಷ್ಟಪಮಥಾಪರಂ ।
ಪಾಣಿಖಾತಂ ಮಿಶ್ರಕಂ ಚ ಮಧೂವಟಿಮನೋಜವೌ ॥ ೪೨ ॥

ಕೌಶಿಕೀ ದೇವತೀರ್ಥಂ ಚ ತೀರ್ಥಂ ಚ ಋಣಮೋಚನಂ ।
ದಿವ್ಯಂ ಚ ನೃಗಧೂಮಾಖ್ಯಂ ತೀರ್ಥಂ ವಿಷ್ಣುಪದಂ ತಥಾ ॥ ೪೩ ॥

೩೮-೪೦. ಲೋಕದ್ವಾರತೀರ್ಥ, ಪಂಚತೀರ್ಥ, ಕಪಿಲಾತೀರ್ಥ, ಸೂರ್ಯತೀರ್ಥ, ಶಂಖಿನೀತೀರ್ಥ, ಗೋಭವನತೀರ್ಥ, ಯಕ್ಷತೀರ್ಥ, ಬ್ರಹ್ಮಾವರ್ತ, ಕಾಮೇಶ್ವರ, ಮಾತೃತೀರ್ಥ, ಶೀತವನತೀರ್ಥ, ಸ್ನಾನಲೋಮಾಪಹತೀರ್ಥ, ಮಾಸಸಂಸರಕತೀರ್ಥ, ದಶಾಶ್ವಮೇಧಕ್ಷೇತ್ರ, ಕೇದಾರಕ್ಷೇತ್ರ, ಬ್ರಹ್ಮೋದುಂಬರಕ್ಷೇತ್ರ, ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

೪೧-೪೩. ಸಪ್ತರ್ಷಿಕುಂಡ, ಸುಜಂಬುಕವೆಂಬ ದೇವೀತೀರ್ಥ, ಈಹಾಸ್ಪದ ತೀರ್ಥ, ಕೋಟಿಕೂಟತೀರ್ಥ, ಕಿಂದಾನತೀರ್ಥ, ಕಿಂಜಪತೀರ್ಥ, ಕಾರಂಡವತೀರ್ಥ, ಅವೇಧ್ಯತೀರ್ಥ, ತ್ರಿವಿಷ್ಟಪ, ಪಾಣಿಖಾತತೀರ್ಥ, ಮಿಶ್ರತೀರ್ಥ, ಮಧೂವಟಕ್ಷೇತ್ರ, ಮನೋಜವತೀರ್ಥ, ಕೌಶಿಕೀತೀರ್ಥ, ದೇವತೀರ್ಥ, ಋಣವಿಮೋಚನತೀರ್ಥ, ನೃಗಧೂಮತೀರ್ಥ, ವಿಷ್ಣುಪಾದ ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

shrinath.udupa@gmail.com

ಅಮರಾಣಾಂ ಹ್ರದಂ ಪುಣ್ಯಂ ಕೋಟಿತೀರ್ಥಂ ತಥಾಽಪರಂ ।
ಶ್ರೀಕುಂಜಂ ಶಾಲಿತೀರ್ಥಂ ಚ ನೈಮಿಷೇಯಂ ಚ ವಿಶ್ರುತಂ ॥ ೪೪ ॥

ಬ್ರಹ್ಮಸ್ಥಾನಂ ಸೋಮತೀರ್ಥಂ ಕನ್ಯಾತೀರ್ಥಂ ತಥೈವ ಚ ।
ಬ್ರಹ್ಮತೀರ್ಥಂ ಮನಸ್ತೀರ್ಥಂ ತೀರ್ಥಂ ವೈ ಕಾರುಪಾವನಂ ॥ ೪೫ ॥

ಸೌಗಂಧಿಕವನಂ ಚೈವ ಮಣಿತೀರ್ಥಂ ಸರಸ್ವತೀ ।
ಈಶಾನತೀರ್ಥಂ ಪ್ರವರಂ ಪಾವನಂ ಪಾಂಚಯಜ್ಞಿಕಂ ॥ ೪೬ ॥

ತ್ರಿಶೂಲಧಾರಂ ಮಾಹೇಂದ್ರಂ ದೇವಸ್ಥಾನಂ ಕೃತಾಲಯಂ ।
ಶಾಕಂಬರೀ ದೇವತೀರ್ಥಂ ಸುವರ್ಣಾಖ್ಯಂ ಕಲಿಂ ಹ್ರದಂ ॥ ೪೭ ॥

ಕ್ಷೀರಶ್ರವಂ ವಿರೂಪಾಕ್ಷಂ ಭೃಗುತೀರ್ಥಂ ಕುಶೋದ್ಭವಂ ।
ಬ್ರಹ್ಮತೀರ್ಥಂ ಬ್ರಹ್ಮಯೋನಿಂ ನೀಲಪರ್ವತಮೇವ ಚ ॥ ೪೮ ॥

ಕುಬ್ಜಾಂಬಕಂ ಭದ್ರವಟಂ ವಸಿಷ್ಠಪದಮೇವ ಚ ।
ಸ್ವರ್ಗದ್ವಾರಂ ಪ್ರಜಾದ್ವಾರಂ ಕಾಲಿಕಾಶ್ರಮಮೇವ ಚ ॥ ೪೯ ॥

ರುದ್ರಾವರ್ತಂ ಸುಗಂಧಾಶ್ವಂ ಕಪಿಲಾವನಮೇವ ಚ ।
ಭದ್ರಕರ್ಣಹ್ರದಂ ಚೈವ ಶಂಕುಕರ್ಣಹ್ರದಂ ತಥಾ ॥ ೫೦ ॥

೪೪-೪೬. ಅಮರಹ್ರದ, ಕೋಟಿತೀರ್ಥ, ಶ್ರೀಕುಂಜ, ಶಾಲಿತೀರ್ಥ, ನೈಮಿಶಾರಣ್ಯದ ತೀರ್ಥ, ಬ್ರಹ್ಮಸ್ಥಾನ, ಸೋಮತೀರ್ಥ, ಕನ್ಯಾತೀರ್ಥ, ಬ್ರಹ್ಮತೀರ್ಥ, ಮನಸ್ತೀರ್ಥ, ಕಾರುಪಾವನತೀರ್ಥ, ಸೌಗಂಧಿಕವನ, ಮಣಿತೀರ್ಥ, ಸರಸ್ವತೀ, ಶ್ರೇಷ್ಠವಾದ ಈಶಾನತೀರ್ಥ, ಪವಿತ್ರವಾದ ಪಂಚಯಜ್ಞತೀರ್ಥ ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

೪೭–೫೦. ತ್ರಿಶೂಲಧಾರಾತೀರ್ಥ, ಮಾಹೇಂದ್ರತೀರ್ಥ, ದೇವಾಲಯಗಳು ಶಾಕಂಬರೀತೀರ್ಥ, ಸುವರ್ಣವೆಂಬ ದೇವತೀರ್ಥ, ಕಲಿಹ್ರದ ಕ್ಷೀರಶ್ರವ, ವಿರೂಪಾಕ್ಷ, ಭೃಗುತೀರ್ಥ, ಕುಶೋದ್ಭವ, ಬ್ರಹ್ಮತೀರ್ಥ, ಬ್ರಹ್ಮಯೋನಿ, ನೀಲಪರ್ವತ, ಕುಬ್ಜಾಂಬಕ, ಭದ್ರವಟ, ವಸಿಷ್ಠಾಶ್ರಮ, ಸ್ವರ್ಗದ್ವಾರ, ಪ್ರಜಾದ್ವಾರ, ಕಾಲಿಕಾಶ್ರಮ, ರುದ್ರಾವರ್ತ, ಸುಗಂಧಾಶ್ವ ಕಪಿಲಾವನ, ಭದ್ರಕರ್ಣಹ್ರದ, ಶಂಕುಕರ್ಣಹ್ರದ, ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

shrinath.udupa@gmail.com

ಸಪ್ತಸಾರಸ್ವತಂ ಚೈವ ತೀರ್ಥಮೌಶನಸಂ ತಥಾ ।
ಕಪಾಲಮೋಚನಂ ಚೈವ ಅವಕೀರ್ಣಂ ಚ ಕಾಮ್ಯಕಂ ॥ ೫೧ ॥

ಚತುಃಸಾಮುದ್ರಿಕಂ ಚೈವ ಶತಕಿಂಚ ಸಹಸ್ರಿಕಂ ।
ರೇಣುಕಂ ಪಂಚವಟಿಕಂ ವಿಮೋಚನಮಥೌಜಸಂ ॥ ೫೨ ॥

ಸ್ಥಾಣುತೀರ್ಥಂ ಕುರೋಸ್ತೀರ್ಥಂ ಸ್ವರ್ಗದ್ವಾರಂ ಕುಶಧ್ವಜಂ ।
ವಿಶ್ವೇಶ್ವರಂ ಮಾನವಕಂ ಕೂಪಂ ನಾರಾಯಣಾಶ್ರಯಂ ॥ ೫೩ ॥

ಗಂಗಾಹ್ರದಂ ವಟಂ ಚೈವ ಬದರೀಪಾಟನಂ ತಥಾ ।
ಇಂದ್ರಮಾರ್ಗಮೇಕರಾತ್ರಂ ಕ್ಷೀರಕಾವಾಸಮೇವ ಚ ॥ ೫೪ ॥

ಸೋಮತೀರ್ಥಂ ದಧೀಚಂ ಚ ಶ್ರುತತೀರ್ಥಂ ಚ ಭೋ ದ್ವಿಜಾಃ ।
ಕೋಟಿತೀರ್ಥಸ್ಥಲೀಂ ಚೈವ ಭದ್ರಕಾಲೀಹ್ರದಂ ತಥಾ ॥ ೫೫ ॥

ಅರುಂಧತೀವನಂ ಚೈವ ಬ್ರಹ್ಮಾವರ್ತಂ ತಥೋತ್ತಮಂ ।
ಅಶ್ವವೇದೀ ಕುಬ್ಜಾವನಂ ಯಮುನಾಪ್ರಭವಂ ತಥಾ ॥ ೫೬ ॥

೫೧–೫೩. ಸಪ್ತಸಾರಸ್ವತತೀರ್ಥ, ಶುಕ್ರತೀರ್ಥ, ಕಪಾಲಮೋಚನತೀರ್ಥ, ಅವಕೀರ್ಣತೀರ್ಥ, ಕಾಮ್ಯಕವನ, ಚತುಸ್ಸಾಮುದ್ರಿಕತೀರ್ಥ, ಶತಕ, ಸಹಸ್ರಕ, ರೇಣುಕತೀರ್ಥ, ಪಂಚವಟ ವಿಮೋಚನತೀರ್ಥ, ಔಜಸತೀರ್ಥ, ಸ್ಥಾಣುತೀರ್ಥ, ಕುರುತೀರ್ಥ, ಸ್ವರ್ಗದ್ವಾರ ತೀರ್ಥ, ಕುಶಧ್ವಜತೀರ್ಥ, ವಿಶ್ವೇಶ್ವರಕ್ಷೇತ್ರ, ಮಾನವಕ, ನಾರಾಯಣಕೂಪ ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

೫೪–೫೬. ಗಂಗಾಹ್ರದ, ವಟ, ಬದರೀಪಾಟನ, ಇಂದ್ರಮಾರ್ಗ, ಏಕರಾತ್ರ, ಕ್ಷೀರಕಾವಾಸ, ಸೋಮತೀರ್ಥ, ದಧೀಚತೀರ್ಥ, ಶ್ರುತತೀರ್ಥ, ಕೋಟಿತೀರ್ಥಸ್ಥಲಗಳು, ಭದ್ರಕಾಲೀಹ್ರದ, ಅರುಂಧತೀವನ, ಬ್ರಹ್ಮಾವರ್ತ, ಅಶ್ವವೇದೀ, ಕುಬ್ಜಾವನ, ಯಮುನಾನದಿಯ ಮೂಲ ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

shrinath.udupa@gmail.com

ವೀರಂ ಪ್ರಮೋಕ್ಷಂ ಸಿಂಧೂತ್ಥಮೃಷಿಕುಲ್ಯಾ ಸಕೃತ್ತಿಕಂ ।
ಉರ್ವೀಸಂಕ್ರಮಣಂ ಚೈವ ಮಾಯಾವಿದ್ಯೋದ್ಭವಂ ತಥಾ ॥ ೫೭ ॥

ಮಹಾಶ್ರಮೋ ವೈತಸಿಕಾರೂಪಂ ಸುಂದರಿಕಾಶ್ರಮಂ ।
ಬಾಹುತೀರ್ಥಂ ಚಾರುನದೀಂ ವಿಮಲಾಶೋಕಮೇವ ಚ ॥ ೫೮ ॥

ತೀರ್ಥಂ ಪಂಚನದಂ ಚೈವ ಮಾರ್ಕಂಡೇಯಸ್ಯ ಧೀಮತಃ ।
ಸೋಮತೀರ್ಥಂ ಸಿತೋದಂ ಚ ತೀರ್ಥಂ ಮತ್ಸ್ಯೋದರೀಂ ತಥಾ ॥ ೫೯ ॥

ಸೂರ್ಯಪ್ರಭಂ ಸೂರ್ಯತೀರ್ಥಮಶೋಕವನಮೇವ ಚ ।
ಅರುಣಾಸ್ಪದಂ ಕಾಮದಂ ಚ ಶುಕ್ರತೀರ್ಥಂ ಸವಾಲುಕಂ ॥ ೬೦ ॥

ಪಿಶಾಚಮೋಚನಂ ಚೈವ ಸುಭದ್ರಾಹ್ರದಮೇವ ಚ ।
ಕುಂಡಂ ವಿಮಲದಂಡಸ್ಯ ತೀರ್ಥಂ ಚಂಡೇಶ್ವರಸ್ಯ ಚ ॥ ೬೧ ॥

ಜ್ಯೇಷ್ಠಸ್ಥಾನಹ್ರದಂ ಚೈವ ಪುಣ್ಯಂ ಬ್ರಹ್ಮಸರಂ ತಥಾ ।
ಜೈಗೀಷವ್ಯಗುಹಾ ಚೈವ ಹರಿಕೇಶವನಂ ತಥಾ ॥ ೬೨ ॥

೫೭-೫೯. ವೀರತೀರ್ಥ, ಪ್ರಮೋಕ್ಷತೀರ್ಥ, ಸಿಂಧುತೀರ್ಥ, ಋಷಿಕಲ್ಯಾತೀರ್ಥ, ಕೃತ್ತಿಕಾತೀರ್ಥ, ಭೂಸಂಕ್ರಮಣ, ಮಾಯಾವಿದ್ಯೋದ್ಭವತೀರ್ಥ, ಮಹಾಶ್ರಮ, ಜೊಂಡು ರೂಪವಾದ ಸುಂದರ್ಯಾಶ್ರಮ, ಬಾಹುತೀರ್ಥ, ಚಾರುನದೀ, ಅಶೋಕಕ್ಷೇತ್ರ, ತಪಸ್ವಿಯಾದ ಮಾರ್ಕಂಡೇಯನ ಪಂಚನದತೀರ್ಥ, ಸೋಮತೀರ್ಥ, ಸಿತೋದ, ಮತ್ಸ್ಯೋದರೀಕ್ಷೇತ್ರ ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

೬೦-೬೨. ಪ್ರಕಾಶಮಾನವಾದ ಸೂರ್ಯತೀರ್ಥ, ಅಶೋಕವನ, ಅರುಣತೀರ್ಥ, ಕಾಮತೀರ್ಥ, ಶುಕ್ರತೀರ್ಥ, ವಾಲುಕಾತೀರ್ಥ, ಪಿಶಾಚಮೋಚನತೀರ್ಥ, ಸುಭದ್ರಾಹ್ರದ, ವಿಮಲದಂಡಕುಂಡ, ಚಂಡೇಶ್ವರತೀರ್ಥ, ಜ್ಯೇಷ್ಠಸ್ಥಾನಹ್ರದ, ಬ್ರಹ್ಮಸರಸ್ಸು, ಜೈಗೀಷವ್ಯಗುಹೆ, ಹರಿಕೇಶವನ ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

shrinath.udupa@gmail.com

ಅಜಾಮುಖಸರಂ ಚೈವ ಘಂಟಾಕರ್ಣಹ್ರದಂ ತಥಾ ।
ಪುಂಡರೀಕಹ್ರದಂ ಚೈವ ವಾಪೀ ಕರ್ಕೋಟಕಸ್ಯ ಚ ॥ ೬೩ ॥

ಸುವರ್ಣಸ್ಯೋದಪಾನಂ ಚ ಶ್ವೇತತೀರ್ಥಹ್ರದಂ ತಥಾ ।
ಕುಂಡಂ ಘರ್ಘರಿಕಾಯಾಶ್ಚ ಶ್ಯಾಮಾಕೂಂ ಚ ಚಂದ್ರಿಕಾ ॥ ೬೪ ॥

ಶ್ಮಶಾನಸ್ತಂಭಕೂಪಂ ಚ ವಿನಾಯಕಹ್ರದಂ ತಥಾ ।
ಕೂಪಂ ಸಿಂಧೂದ್ಭವಂ ಚೈವ ಪುಣ್ಯಂ ಬ್ರಹ್ಮಸರಂ ತಥಾ ॥ ೬೫ ॥

ರುದ್ರಾವಾಸಂ ತಥಾ ತೀರ್ಥಂ ನಾಗತೀರ್ಥಂ ಪುಲೋಮಕಂ ।
ಭಕ್ತಹ್ರದಂ ಕ್ಷೀರಸರಃ ಪ್ರೇತಾಧಾರಂ ಕುಮಾರಕಂ ॥ ೬೬ ॥

ಬ್ರಹ್ಮಾವರ್ತಂ ಕುಶಾವರ್ತಂ ದಧಿಕರ್ಣೋದಪಾನಕಂ ।
ಶೃಂಗತೀರ್ಥಂ ಮಹಾತೀರ್ಥಂ ತೀರ್ಥಶ್ರೇಷ್ಠಾ ಮಹಾನದೀ ॥ ೬೭ ॥

ದಿವ್ಯಂ ಬ್ರಹ್ಮಸರಂ ಪುಣ್ಯಂ ಗಯಾಶೀರ್ಷಾಕ್ಷಯಂ ವಟಂ ।
ದಕ್ಷಿಣಂ ಚೋತ್ತರಂ ಚೈವ ಗೋಮಯಂ ರೂಪಶೀತಿಕಂ ॥ ೬೮ ॥

೬೩-೬೫. ಅಜಾಮುಖಸರಸ್ಸು, ಘಂಟಾಕರ್ಣಹ್ರದ, ಪುಂಡರೀಕಹ್ರದ, ಕರ್ಕೋಟವಾಪಿ, ಸುವರ್ಣವಾಪಿ, ಶ್ವೇತತೀರ್ಥ ಹ್ರದ, ಘರ್ಘರಿಕಾಕುಂಡ, ಶ್ಯಾಮಕೂಪ, ಚಂದ್ರಿಕಾತೀರ್ಥ, ಶ್ಮಶಾನಸ್ತಂಭಕೂಪ, ವಿನಾಯಕಹ್ರದ, ಸಿಂಧುಕೂಪ, ಬ್ರಹ್ಮಸರಸ್ಸು, ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

೬೬-೬೮. ರುದ್ರತೀರ್ಥ, ನಾಗತೀರ್ಥ, ಪುಲೋಮತೀರ್ಥ, ಭಕ್ತಹ್ರದ, ಕ್ಷೀರಸರಸ್ಸು, ಪ್ರೇಧಾರತೀರ್ಥ, ಕುಮಾರತೀರ್ಥ, ಬ್ರಹ್ಮಾವರ್ತ, ಕುಶಾವರ್ತ, ದಧಿಕರ್ಣಸರಸ್ಸು, ಶೃಂಗತೀರ್ಥ, ಮಹಾತೀರ್ಥ, ತೀರ್ಥೋತ್ತಮವಾದ ಮಹಾನದೀ, ಸ್ವರ್ಗಲೋಕದ ಬ್ರಹ್ಮಸರಸ್ಸು, ಗಯಾಶೀರ್ಷದಲ್ಲಿರುವ ಅಕ್ಷಯ ವಟ, ದಕ್ಷಿಣತೀರ್ಥ; ಉತ್ತರತೀರ್ಥ, ಗೋಮಯಕ್ಷೇತ್ರ, ರೂಪಶೀತಿಕತೀರ್ಥ ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

shrinath.udupa@gmail.com

ಕಪಿಲಾಹ್ರದಂ ಗೃಧ್ರವಟಂ ಸಾವಿತ್ರೀಹ್ರದಮೇವ ಚ ।
ಪ್ರಭಾಸನಂ ಸೀತವನಂ ಯೋನಿದ್ವಾರಂ ಚ ಧೇನುಕಂ ॥ ೧೯ ॥

ಧನ್ಯಕಂ ಕೋಕಿಲಾಖ್ಯಂ ಚ ಮತಂಗಹ್ರದಮೇವ ಚ ।
ಪಿತೃಕೂಪಂ ರುದ್ರತೀರ್ಥಂ ಶಕ್ರತೀರ್ಥಂ ಸುಮಾಲಿನಂ ॥ ೨೦ ॥

ಬ್ರಹ್ಮಸ್ಥಾನಂ ಸಪ್ತಕುಂಡಂ ಮಣಿರತ್ನಹ್ರದಂ ತಥಾ ।
ಕೌಶಿಕ್ಯಂ ಭರತಂ ಚೈವ ತೀರ್ಥಂ ಜ್ಯೇಷ್ಠಾಲಿಕಾ ತಥಾ ॥ ೨೧ ॥

ವಿಶ್ವೇಶ್ವರಂ ಕಲ್ಪಸರಃ ಕನ್ಯಾಸಂವೇತ್ಯಮೇವ ಚ ।
ನಿಶ್ಚೀವಾ ಪ್ರಭವಶ್ಚೈವ ವಸಿಷ್ಠಾಶ್ರಮಮೇವ ಚ ॥ ೨೨ ॥

ದೇವಕೂಟಂ ಚ ಕೂಪಂ ಚ ವಸಿಷ್ಠಾಶ್ರಮಮೇವ ಚ ।
ವೀರಾಶ್ರಮಂ ಬ್ರಹ್ಮಸರೋ ಬ್ರಹ್ಮವೀರಾವಕಾಪಿಲೀ ॥ ೨೩ ॥

ಕುಮಾರಧಾರಾ ಶ್ರೀಧಾರಾ ಗೌರೀಶಿಖರಮೇವ ಚ ।
ಶುನಃ ಕುಂಡೋಽಥ ತೀರ್ಥಂ ಚ ನಂದಿತೀರ್ಥಂ ತಥೈವ ಚ ॥ ೨೪ ॥

೧೯–೨೧. ಕಪಿಲಾಹ್ರದ, ಗೃಧ್ರವಟ, ಸಾವಿತ್ರೀಹ್ರದ, ಪ್ರಭಾಸನಕ್ಷೇತ್ರ, ಸೀತವನ, ಯೋನಿದ್ವಾರ, ಧೇನುಕವನ, ಧನ್ಯಕವನ, ಕೋಕಿಲವನ, ಮತಂಗಹ್ರದ, ಪಿತೃಕೂಪ, ರುದ್ರತೀರ್ಥ, ಶಕ್ರತೀರ್ಥ, ಸುಮಾಲಿತೀರ್ಥ, ಬ್ರಹ್ಮಸ್ಥಾನ, ಸಪ್ತಕುಂಡ, ಮಣಿರತ್ನಹ್ರದ, ಕೌಶಿಕ್ಯತೀರ್ಥ, ಭರತತೀರ್ಥ, ಜ್ಯೇಷ್ಠಾಲಿಕಾತೀರ್ಥ, ಇವೆಲ್ಲವೂ ಪುಣ್ಯತೀರ್ಥ ಕ್ಷೇತ್ರಗಳು.

೨೨-೨೪. ವಿಶ್ವೇಶ್ವರತೀರ್ಥ, ಕಲ್ಪಸರಸ್ಸು, ಕನ್ಯಾಹ್ರದ, ನಿಶ್ಚೀವಾತೀರ್ಥ, ವಸಿಷ್ಠಾಶ್ರಮ, ದೇವಕೂಟ, ದೇವಕೂಪ, ವೀರಾಶ್ರಮ, ಬ್ರಹ್ಮಸರಸ್ಸು, ಬ್ರಹ್ಮವೀರಾವಕಾಪಿಲೀತೀರ್ಥ, ಕುಮಾರಧಾರಾತೀರ್ಥ, ಶ್ರೀಧಾರಾತೀರ್ಥ, ಗೌರೀಶಿಖರ, ಶ್ವಕುಂಡ, ನಂದಿತೀರ್ಥ, ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

shrinath.udupa@gmail.com
ಕುಮಾರವಾಸಂ ಶ್ರೀವಾಸಮೌರ್ವೀಶೀತಾರ್ಥಮೇವ ಚ ।
ಕುಂಭಕರ್ಣಹ್ರದಂ ಚೈವ ಕೌಶಿಕೀಹ್ರದಮೇವ ಚ ॥ ೭೫ ॥

ಧರ್ಮತೀರ್ಥಂ ಕಾಮತೀರ್ಥಂ ತೀರ್ಥಮುದ್ದಾಲಕಂ ತಥಾ ।
ಸಂಧ್ಯಾತೀರ್ಥಂ ಕಾರತೋಯಂ ಕಪಿಲಂ ಲೋಹಿತಾರ್ಣವಂ ॥ ೭೬ ॥

ಶೋಣೋದ್ಭವಂ ವಂಶಗುಲ್ಮಮೃಷಭಂ ಕಲತೀರ್ಥಕಂ ।
ಪುಣ್ಯಾವತೀಹ್ರದಂ ತೀರ್ಥಂ ತೀರ್ಥಂ ಬದರಿಕಾಶ್ರಮಂ ॥ ೭೭ ॥

ರಾಮತೀರ್ಥಂ ಪಿತೃವನಂ ವಿರಜಾತೀರ್ಥಮೇವ ಚ ।
ಮಾರ್ಕಂಡೇಯವನಂ ಚೈವ ಕೃಷ್ಣತೀರ್ಥಂ ತಥಾ ವಟಂ ॥ ೭೮ ॥

ರೋಹಿಣೀಕೂಪಪ್ರವರಮಿಂದ್ರದ್ಯುಮ್ನಸರಂ ಚ ಯತ್ ।
ಸಾನುಗರ್ತಂ ಸಮಾಹೇಂದ್ರಂ ಶ್ರೀತೀರ್ಥಂ ಶ್ರೀನದಂ ತಥಾ ॥ ೭೯ ॥

ಇಷುತೀರ್ಥಂ ವಾರ್ಷಭಂ ಚ ಕಾವೇರೀಹ್ರದಮೇವ ಚ ।
ಕನ್ಯಾತೀರ್ಥಂ ಚ ಗೋಕರ್ಣಂ ಗಾಯತ್ರೀಸ್ಥಾನಮೇವ ಚ ॥ ೮೦ ॥

ಬದರೀಹ್ರದಮನ್ಯಚ್ಚ ಮಧ್ಯಸ್ಥಾನಂ ವಿಕರ್ಣಕಂ ।
ಜಾತೀಹ್ರದಂ ದೇವಕೂಪಂ ಕುಶಪ್ರವಣಮೇವ ಚ ॥ ೮೧ ॥

೭೫-೭೭. ಕುಮಾರತೀರ್ಥ, ಶ್ರೀತೀರ್ಥ, ಉರ್ವೀತೀರ್ಥ, ಶೀತತೀರ್ಥ, ಕುಂಭಕರ್ಣ ಹ್ರದ, ಕೌಶಿಕೀಹ್ರದ, ಧರ್ಮತೀರ್ಥ, ಕಾಮತೀರ್ಥ, ಉದ್ದಾಲಕತೀರ್ಥ, ಸಂಧ್ಯಾತೀರ್ಥ ಕರತೋಯಾತೀರ್ಥ, ಕಪಿಲತೀರ್ಥ, ಲೋಹಿತಾರ್ಣವತೀರ್ಥ, ಶೋಣತೀರ್ಥ, ವಂಶಗುಲ್ಮ ಕ್ಷೇತ್ರ, ಋಷಭತೀರ್ಥ, ಕುಲತೀರ್ಥ, ಪುಣ್ಯಾವತೀಹ್ರದ, ಇವೆಲ್ಲವೂ ಪವಿತ್ರವಾದ ತೀರ್ಥಕ್ಷೇತ್ರಗಳು.

೭೮-೮೦. ರಾಮತೀರ್ಥ, ಪಿತೃವನ, ವಿರಜಾತೀರ್ಥ, ಮಾರ್ಕಂಡೇಯವನ, ಕೃಷ್ಣವನ, ಮಹಾವಟ, ರೋಹಿಣೀಕೂಪ, ಇಂದ್ರದ್ಯುಮ್ನಸರಸ್ಸು, ಅನುಗರ್ತ, ಮಹೇಂದ್ರತೀರ್ಥ, ಶ್ರೀತೀರ್ಥ, ಶ್ರೀನದ, ಇಷುತೀರ್ಥ, ವೃಷಭತೀರ್ಥ, ಕಾವೇರೀ ಹ್ರದ, ಕನ್ಯಾಹ್ರದಗೋಕರ್ಣ, ಗಾಯತ್ರೀಸ್ಥಾನ ಇವೆಲ್ಲವೂ ಪವಿತ್ರ ತೀರ್ಥಕ್ಷೇತ್ರಗಳು.

೮೧. ಬದರೀಹ್ರದ, ಮಧ್ಯಸ್ಥಾನ, ವಿಕರ್ಣಕ್ಷೇತ್ರ, ಜಾತೀಹ್ರದ, ದೇವಕೂಪ ಕುಶವನ, ಸರ್ವದೇವವ್ರತಕ್ಷೇತ್ರ, ಕನ್ಯಾಶ್ರಮಹ್ರದ, ಇವೆಲ್ಲವೂ ಪವಿತ್ರವಾದ ತೀರ್ಥ ಕ್ಷೇತ್ರಗಳು.

shrinath.udupa@gmail.com

ಸರ್ವದೇವವ್ರತಂ ಚೈವ ಕನ್ಯಾಶ್ರಮಹ್ರದಂ ತಥಾ ।
ತಥಾಽನ್ಯದ್ವಾಲಖಿಲ್ಯಾನಾಂ ಸಪೂರ್ವಾಣಾಂ ತಥಾಽಪರಂ ॥ ೮೨ ॥

ತಥಾಽನ್ಯಚ್ಚ ಮಹರ್ಷೀಣಾಮಖಂಡಿತಹ್ರದಂ ತಥಾ ।
ತೀರ್ಥೇಷ್ವೇತೇಷು ವಿಧಿವತ್ಸಮ್ಯಕ್ ಶ್ರದ್ಧಾಸಮನ್ವಿತಃ ॥ ೮೩ ॥

ಸ್ನಾನಂ ಕರೋತಿ ಯೋ ಮರ್ತ್ಯಃ ಸೋಪವಾಸೋ ಜಿತೇಂದ್ರಿಯಃ ।
ದೇವಾನೃಷೀನ್ ಮನುಷ್ಯಾಂಶ್ಚ ಪಿತೄನ್ ಸಂತರ್ಪ್ಯ ಚ ಕ್ರಮಾತ್ ॥ ೮೪ ॥

ಅಭ್ಯರ್ಚ್ಯ ದೇವತಾಸ್ತತ್ರ ಸ್ಥಿತ್ವಾ ಚ ರಜನೀತ್ರಯಂ ।
ಪೃಥಕ್ಪೃಥಕ್ಫಲಂ ತೇಷು ಪ್ರತಿತೀರ್ಥೇಷು ಭೋ ದ್ವಿಜಾಃ ॥ ೮೫ ॥

ಪ್ರಾಪ್ನೋತಿ ಹಯಮೇಧಸ್ಯ ನರೋ ನಾಸ್ತ್ಯತ್ರ ಸಂಶಯಃ ।
ಯಸ್ತ್ವಿದಂ ಶೃಣುಯಾನ್ನಿತ್ಯಂ ತೀರ್ಥಮಾಹಾತ್ಮ್ಯಮುತ್ತಮಂ ।
ಪಠೇಚ್ಚ ಶ್ರಾವಯೇದ್ವಾಽಪಿ ಸರ್ವಪಾಪೈಃ ಪ್ರಮುಚ್ಯತೇ ॥ ೮೬ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯ
ವರ್ಣನಂ ನಾಮ ಪಂಚವಿಂಶೋಽಧ್ಯಾಯಃ

೮೨-೮೫. ಎಲೈ ಮುನಿಗಳಿರಾ! ಈ ತೀರ್ಥಕ್ಷೇತ್ರಗಳಲ್ಲಿ ಮಾನವನು ಜಿತೇಂದ್ರಿಯನಾಗಿ ಉಪವಾಸವಿದ್ದು ವಿಧಿವತ್ತಾಗಿ ಸ್ನಾನಮಾಡಬೇಕು. ದೇವತೆಗಳಿಗೂ ಋಷಿಗಳಿಗೂ ಪಿತೃಗಳಿಗೂ ತರ್ಪಣವನ್ನು ಕೊಡಬೇಕು. ಮನುಷ್ಯರಿಗೆ ಸಂತರ್ಪಣೆ ಮಾಡಬೇಕು. ದೇವತೆಗಳನ್ನರ್ಚಿಸುತ್ತಾ ಅಂತಹ ತೀರ್ಥಗಳಲ್ಲಿ ಮೂರುರಾತ್ರಿಗಳಿರಬೇಕು. ಹೀಗೆ ಪ್ರತಿಯೊಂದು ತೀರ್ಥದಲ್ಲಿಯೂ ಮಾಡಿದರೆ ಒಂದೊಂದು ಕಡೆಯೂ ಅಶ್ವಮೇಧಯಾಗ ಮಾಡಿದುದರ ಫಲವನ್ನು ಪಡೆಯುವನು. ಇದರಲ್ಲಿ ಸಂಶಯವಿಲ್ಲ. ಅಲ್ಲದೆ ವಾಲಖಿಲ್ಯಹ್ರದವೂ ಮಿಕ್ಕ ಮಹರ್ಷಿಗಳ ಪವಿತ್ರವಾದ ಹ್ರದಗಳೂ ಇರುವುವು.

೮೬. ಈ ತೀರ್ಥಮಾಹಾತ್ಮ್ಯವನ್ನು ಕೇಳಿದರೂ ಓದಿದರೂ ಇನ್ನೊಬ್ಬರಿಗೆ ಹೇಳಿದರೂ ಸಹ ಸಕಲಪಾಪಗಳೂ ನಾಶವಾಗುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ತೀರ್ಥಮಾಹಾತ್ಮ್ಯವರ್ಣನವೆಂಬ
ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಷಡ್ವಿಂಶೋಽಧ್ಯಾಯಃ

॥ ಮುನಯ ಊಚುಃ ॥

ಪೃಥಿವ್ಯಾಮುತ್ತಮಾಂ ಭೂಮಿಂ ಧರ್ಮಕಾಮಾರ್ಥಮೋಕ್ಷದಾಂ ।
ತೀರ್ಥಾನಾಮುತ್ತಮಂ ತೀರ್ಥಂ ಬ್ರೂಹಿ ನೋ ವದತಾಂ ವರ ॥ ೧ ॥

॥ ಲೋಮಹರ್ಷಣ ಉವಾಚ ॥

ಇಮಂ ಪ್ರಶ್ನಂ ಮಮ ಗುರುಂ ಪಪ್ರಚ್ಛುರ್ಮುನಯಃ ಪುರಾ ।
ತಮಹಂ ಸಂಪ್ರವಕ್ಷ್ಯಾಮಿ ಯತ್ಪೃಚ್ಛಧ್ವಂ ದ್ವಿಜೋತ್ತಮಾಃ ॥ ೨ ॥

ಇಪ್ಪತ್ತಾರನೆಯ ಅಧ್ಯಾಯವು

೧. ಮುನಿಗಳು ಪ್ರಶ್ನಿಸಿದರು-"ಓ ಸೂತಮುನಿಯೇ! ಭೂಮಿಯಲ್ಲಿ ಧರ್ಮ, ಕಾಮ, ಅರ್ಥ, ಮೋಕ್ಷ ಈ ನಾಲ್ಕು ಪುರುಷಾರ್ಥಗಳಿಗೂ ಸಾಧಕವಾದಂತಹ ಉತ್ತಮಭೂಮಿಯಾವುದು? ತೀರ್ಥಗಳಲ್ಲಿ ಉತ್ತಮತೀರ್ಥವಾವುದು? ಸರ್ವಜ್ಞನಾದ ನೀನು ನಮಗೆ ಇದನ್ನು ಹೇಳುವವನಾಗು."

೨. ಆಗ, ಸೂತಮುನಿಯು ಹೇಳಿದನು.—ಎಲೈ ಮುನಿಗಳೇ, ಈಗ ನೀವು ಕೇಳಿದ ಪ್ರಶ್ನೆಯನ್ನು ಹಿಂದೆ ನನ್ನ ಗುರುವಾದ ವ್ಯಾಸಮುನಿಯನ್ನು ಕುರಿತು ಮಹರ್ಷಿಗಳು ಪ್ರಶ್ನೆಮಾಡಿದರು. ಆ ವಿಷಯವನ್ನು ನಿಮಗೆ ಹೇಳುವೆನು ಕೇಳಿರಿ.

shrinath.udupa@gmail.com

ಸ್ವಾಶ್ರಮೇ ಸುಮಹಾಪುಣ್ಯೇ ನಾನಾಪುಷ್ಪೋಪಶೋಭಿತೇ ।
ನಾನಾದ್ರುಮಲತಾಕೀರ್ಣೇ ನಾನಾಮೃಗಗಣೈರ್ಯುತೇ ॥ ೩ ॥

ಪುಂನಾಗೈಃ ಕರ್ಣಿಕಾರೈಶ್ಚ ಸರಲೈರ್ದೇವದಾರುಭಿಃ ।
ಶಾಲೈಸ್ತಾಲೈಸ್ತಮಾಲೈಶ್ಚ ಪನಸೈರ್ಧವಖಾದಿರೈಃ ॥ ೪ ॥

ಪಾಟಲಾಶೋಕಬಕುಲೈಃ ಕರವೀರೈಃ ಸಚಂಪಕೈಃ ।
ಅನ್ಯೈಶ್ಚ ವಿವಿಧೈರ್ವೃಕ್ಷೈರ್ನಾನಾಪುಷ್ಪೋಪಶೋಭಿತೈಃ ॥ ೫ ॥

ಕುರುಕ್ಷೇತ್ರೇ ಸಮಾಸೀನಂ ವ್ಯಾಸಂ ಮತಿಮತಾಂ ವರಂ ।
ಮಹಾಭಾರತಕರ್ತಾರಂ ಸರ್ವಶಾಸ್ತ್ರವಿಶಾರದಂ ॥ ೬ ॥

ಅಧ್ಯಾತ್ಮನಿಷ್ಠಂ ಸರ್ವಜ್ಞಂ ಸರ್ವಭೂತಹಿತೇ ರತಂ ।
ಪುರಾಣಾಗಮವಕ್ತಾರಂ ವೇದವೇದಾಂಗಪಾರಗಂ ॥ ೭ ॥

೩-೫. ಆ ವ್ಯಾಸಮುನಿಯು ತನ್ನಾಶ್ರಮದಲ್ಲಿ ಕುಳಿತಿದ್ದನು. ಆ ಆಶ್ರಮದಲ್ಲಿ ಅನೇಕ ಸುಂದರವಾದ ಹೂಗಿಡಗಳಿದ್ದುವು. ಪುನ್ನಾಗ, ಕರ್ಣಿಕಾರ, [ದ್ರುಮೋತ್ಪಲತರು] ಸರಲ, [ಹಸರುಮರ] ದೇವದಾರು, ಮದ್ದೀಗಿಡ, ತಾಳೇಮರ, ಹೊಂಗೆ ಹಲಸು, ಕಗ್ಗಲೀಮರ, ಖದಿರ, ಪಾದರಿಮರ, ಅಶೋಕವೃಕ್ಷ, ಬಕುಲವೃಕ್ಷ, ಕರವೀರ ಸಂಪಿಗೆ ಮೊದಲಾದ ಫಲಪುಷ್ಪ ವೃಕ್ಷಗಳೂ ಮತ್ತು ಲತೆಗಳೂ ಇದ್ದುವಲ್ಲದೆ ಇನ್ನೂ ಅನೇಕ ತರುಲತೆಗಳೂ ಸಹ ಶೋಭಿಸುತ್ತಿದ್ದುವು.

೬-೭. ಕುರುಕ್ಷೇತ್ರದಲ್ಲಿರುವ ಸುಂದರವೂ ಪವಿತ್ರವೂ ಆದ ಇಂತಹ ಆಶ್ರಮದಲ್ಲಿ ಸರ್ವಜ್ಞನೂ ಭಾರತವನ್ನು ಬರೆದವನೂ ಶಾಸ್ತ್ರ ಮತ್ತು ಪುರಾಣಗಳನ್ನು ರಚಿಸಿದವನೂ, ವೇದ ಮತ್ತು ವೇದಾಂಗಗಳನ್ನು ಸಂಪೂಣವಾಗಿ ತಿಳಿದವನೂ ಸಮಸ್ತ ಶಾಸ್ತ್ರಪಂಡಿತನೂ ಸಕಲಪ್ರಾಣಿಗಳಿಗೂ ಹಿತವಾಗುವಂತಹ ಕಾರ್ಯಗಳನ್ನು ಮಾಡುವವನೂ ಪರಾಶರಮುನಿಯ ಮಗನೂ ಆದ ವ್ಯಾಸಮುನಿಯು ಆತ್ಮಚಿಂತನೆ ಮಾಡುತ್ತ ಕುಳಿತಿದ್ದನು.

shrinath.udupa@gmail.com

ಪರಾಶರಸುತಂ ಶಾಂತಂ ಪದ್ಮಪತ್ರಾಯತೇಕ್ಷಣಂ ।
ದ್ರಷ್ಟುಮಭ್ಯಾಯಯುಃ ಪ್ರೀತ್ಯಾ ಮುನಯಃ ಸಂಶಿತವ್ರತಾಃ ॥ ೮ ॥

ಕಶ್ಯಪೋ ಜಮದಗ್ನಿಶ್ಚ ಭರದ್ವಾಜೋಽಥ ಗೌತಮಃ ।
ವಸಿಷ್ಠೋ ಜೈಮಿನಿರ್ಧೌಮ್ಯೋ ಮಾರ್ಕಂಡೇಯೋಽಥ ವಾಲ್ಮೀಕಿಃ ॥ ೯ ॥

ವಿಶ್ವಾಮಿತ್ರಃ ಶತಾನಂದೋ ವಾತ್ಸ್ಯೋ ಗಾರ್ಗ್ಯೋಽಥ ಆಸುರಿಃ ।
ಸುಮಂತುರ್ಭಾರ್ಗವೋ ನಾಮ ಕಣ್ವೋ ಮೇಧಾತಿಥಿರ್ಗುರುಃ ॥ ೧೦ ॥

ಮಾಂಡವ್ಯಶ್ಚ್ಯವನೋ ಧೂಮ್ರೋ ಹ್ಯಸಿತೋ ದೇವಲಸ್ತಥಾ ।
ಮೌದ್ಗಲ್ಯಸ್ತೃಣಯಜ್ಞಶ್ಚ ಪಿಪ್ಪಲಾದೋಽಕೃತವ್ರಣಃ ॥ ೧೧ ॥

ಸಂವರ್ತಃ ಕೌಶಿಕೋ ರೈಭ್ಯೋ ಮೈತ್ರೇಯೋ ಹರಿತಸ್ತಥಾ ।
ಶಾಂಡಿಲ್ಯಶ್ಚ ವಿಭಾಂಡಶ್ಚ ದುರ್ವಾಸಾ ಲೋಮಶಸ್ತಥಾ ॥ ೧೨ ॥

ನಾರದಃ ಪರ್ವತಶ್ಚೈವ ವೈಶಂಪಾಯನಗಾಲವೌ ।
ಭಾಸ್ಕರಿಃ ಪೂರಣಃ ಸೂತಃ ಪುಲಸ್ತ್ಯಃ ಕಪಿಲಸ್ತಥಾ ॥ ೧೩ ॥

ಉಲೂಕಃ ಪುಲಹೋ ವಾಯುರ್ದೇವಸ್ಥಾನಶ್ಚತುರ್ಭುಜಃ ।
ಸನತ್ಕುಮಾರಃ ಪೈಲಶ್ಚ ಕೃಷ್ಣಃ ಕೃಷ್ಣಾನುಭೌತಿಕಃ ॥ ೧೪ ॥

೮–೧೦. ಕಮಲದಂತೆ ಸುಂದರವಾದ ಕಣ್ಣುಗಳುಳ್ಳವನೂ ಬ್ರಹ್ಮಜ್ಞಾನಿಯೂ ಆದ ಆ ವ್ಯಾಸಮುನಿಯನ್ನು ನೋಡಲು ಕಶ್ಯಪ, ಜಮದಗ್ನಿ, ಭರದ್ವಾಜ, ಗೌತಮ, ವಸಿಷ್ಠ, ಜೈಮಿನಿ, ಧೌಮ್ಯ, ಮಾರ್ಕಂಡೇಯ, ವಾಲ್ಮೀಕಿ, ವಿಶ್ವಾಮಿತ್ರ, ಶತಾನಂದ, ವಾತ್ಸ್ಯಾಯನ, ಗಾರ್ಗ್ಯ, ಆಸುರಿ, ಸುಮಂತು, ಭಾರ್ಗವ, ಕಣ್ವ, ಮೇಧಾತಿಥಿಗಳೆಂಬ ಮಹಾತಪಸ್ವಿಗಳಾದ ಮಹರ್ಷಿಗಳು ಸಂತಸದಿಂದ ವ್ಯಾಸಾಶ್ರಮಕ್ಕೆ ಬಂದರು.

೧೧-೧೪. ಮಾಂಡವ್ಯ, ಚ್ಯವನ, ಧೂಮ್ರ, ಅಸಿತ, ದೇವಲ, ಮೌದ್ಗಲ್ಯ, ತೃಣಯಜ್ಞ, ಪಿಪ್ಪಲಾದ, ಅಕೃತವ್ರಣ, ಸಂವರ್ತ, ಕೌಶಿಕ, ರೈಭ್ಯ, ಮೈತ್ರೇಯ, ಹರಿತ, ಶಾಂಡಿಲ್ಯ, ವಿಭಾಂಡಕ, ದುರ್ವಾಸ, ಲೋಮಶ, ನಾರದ, ಪರ್ವತ, ವೈಶಂಪಾಯನ, ಗಾಲವ, ಭಾಸ್ಕರಿ, ಪೂರಣ, ಸೂತಮುನಿ, [ತಾನು] ಪುಲಸ್ತ್ಯ, ಕಪಿಲ, ಉಲೂಕ, ಪುಲಹ, ವಾಯು, ದೇವಸ್ಥಾನ, ಚತುರ್ಭುಜ, ಸನತ್ಕುಮಾರ, ಪೈಲ, ಕೃಷ್ಣಭಕ್ತನಾದ ಕೃಷ್ಣಮುನಿ ಈ ಮಹರ್ಷಿಗಳು ವ್ಯಾಸನನ್ನು ನೋಡಲು ಬಂದರು.

shrinath.udupa@gmail.com

ಏತೈರ್ಮುನಿವರೈಶ್ಚಾನ್ಯೈರ್ವೃತಃ ಸತ್ಯವತೀಸುತಃ ।
ರರಾಜ ಸ ಮುನಿಃ ಶ್ರೀಮಾನ್ನಕ್ಷತ್ರೈರಿವ ಚಂದ್ರಮಾಃ ॥ ೧೫ ॥

ತಾನಾಗತಾನ್ಮುನೀನ್ಸರ್ವಾನ್ಪೂಜಯಾಮಾಸ ವೇದವಿತ್ ।
ತೇಽಪಿ ತಂ ಪ್ರತಿಪೂಜ್ಯೈವ ಕಥಾಂ ಚಕ್ರುಃ ಪರಸ್ಪರಂ ॥ ೧೬ ॥

ಕಥಾಂತೇ ತೇ ಮುನಿಶ್ರೇಷ್ಠಾಃ ಕೃಷ್ಣಂ ಸತ್ಯವತೀಸುತಂ ।
ಪಪ್ರಚ್ಛುಃ ಸಂಶಯಂ ಸರ್ವೇ ತಪೋವನನಿವಾಸಿನಃ ॥ ೧೭ ॥

॥ ಮುನಯ ಊಚುಃ ॥

ಮುನೇ ವೇದಾಂಶ್ಚ ಶಾಸ್ತ್ರಾಣಿ ಪುರಾಣಾಗಮಭಾರತಂ ।
ಭೂತಂ ಭವ್ಯಂ ಭವಿಷ್ಯಂ ಚ ಸರ್ವಂ ಜಾನಾಸಿ ವಾಙ್ಮಯಂ ॥ ೧೮ ॥

ಕಷ್ಟೇಽಸ್ಮಿನ್ದುಃಖಬಹುಲೇ ನಿಃಸಾರೇ ಭವಸಾಗರೇ ।
ರಾಗಗ್ರಾಹಾಕುಲೇ ರೌದ್ರೇ ವಿಷಯೋದಕಸಂಪ್ಲವೇ ॥ ೧೯ ॥

---

೧೫. ಈ ಮುನಿಗಳೆಲ್ಲರಿಂದಲೂ ತನ್ನ ಆಶ್ರಮದ ಇನ್ನೂ ಕೆಲವರು ಮುನಿಗಳಿಂದಲೂ ಸುತ್ತುವರಿಯಲ್ಪಟ್ಟ ತೇಜಸ್ವಿಯಾದ ಆ ವ್ಯಾಸನು ನಕ್ಷತ್ರಗಳಿಂದ ಕೂಡಿರುವ ಚಂದ್ರನಂತೆ ಬೆಳಗುತ್ತಿದ್ದನು.

೧೬. ಬಂದಿರುವ ಆ ಮುನಿಗಳೆಲ್ಲರನ್ನೂ ವೇದವಿತ್ತಾದ ಆ ವ್ಯಾಸಮುನಿಯು ಪೂಜಿಸಿದನು. ಅವರೂ ಸಹ ಆತನನ್ನು ಗೌರವಿಸಿ ಪರಸ್ಪರ ಕುಶಲಪ್ರಶ್ನೆಗಳನ್ನು ಮಾಡಿದರು.

೧೭. ಆಮೇಲೆ ಆ ಮುನಿಗಳೆಲ್ಲರೂ ಸತ್ಯವತಿಯ ಮಗನಾದ ವ್ಯಾಸಮುನಿಯನ್ನು ಕುರಿತು ತಮಗುಂಟಾಗಿದ್ದ ಸಂಶಯವನ್ನು ನಿವಾರಿಸಲು ಪ್ರಶ್ನಿಸಿದರು.

೧೭-೧೮. ಮುನಿಗಳು ಹೇಳಿದರು.—ಎಲೈ ವ್ಯಾಸಮುನಿಯೇ! ನೀನು ವೇದಗಳನ್ನೂ ಶಾಸ್ತ್ರಗಳನ್ನೂ ಪುರಾಣ ಮತ್ತು ಭಾರತಗಳನ್ನೂ ತಿಳಿದಿರುವೆ. ಭೂತ ಭವಿಷ್ಯತ್ ವರ್ತಮಾನ ಕಾಲಗಳಲ್ಲಿ ನಡೆಯುವುದೆಲ್ಲವನ್ನೂ ತಿಳಿದಿರುವೆ. ಶಬ್ದ ಪ್ರಪಂಚವೆಲ್ಲವನ್ನೂ ತಿಳಿದಿರುವೆ.

೧೯-೨೦. ಈ ಸಂಸಾರವೆಂಬುದು ಮಹಾಸಾಗರವಾಗಿರುವುದು. ಈ ಸಾಗರದಲ್ಲಿ ರಾಗಗಳೇ ಮೊಸಳೆ ತಿಮಿಂಗಿಲಗಳು. ಸ್ತ್ರೀ ಚಂದನಾದಿ ವಿಷಯಗಳೇ ಜಲ

shrinath.udupa@gmail.com

ಇಂದ್ರಿಯಾವರ್ತಕಲಿಲೇ ದೃಷ್ಟ್ಯೋರ್ಮಿಶತಸಂಕುಲೇ ।
ಮೋಹಪಂಕಾವಿಲೇ ದುರ್ಗೇ ಲೋಭಗಂಭೀರದುಸ್ತರೇ ॥ ೨೦ ॥

ನಿಮಜ್ಜಜ್ಜಗದಾಲೋಕ್ಯ ನಿರಾಲಂಬಮಚೇತನಂ ।
ಪೃಚ್ಛಾಮಸ್ತ್ವಾಂ ಮಹಾಭಾಗಂ ಬ್ರೂಹಿ ನೋ ಮುನಿಸತ್ತಮ ॥ ೨೧ ॥

ಶ್ರೇಯಃ ಕಿಮತ್ರಸಂಸಾರೇ ಭೈರವೇ ಲೋಮಹರ್ಷಣೇ ।
ಉಪದೇಶಪ್ರದಾನೇನ ಲೋಕಾನುದ್ಧರ್ತುಮರ್ಹಸಿ ॥ ೨೨ ॥

ದುರ್ಲಭಂ ಪರಮಂ ಕ್ಷೇತ್ರಂ ವಕ್ತುಮರ್ಹಸಿ ಮೋಕ್ಷದಂ ।
ಪೃಥಿವ್ಯಾಂ ಕರ್ಮಭೂಮಿಂ ಚ ಶ್ರೋತುಮಿಚ್ಛಾಮಹೇ ವಯಂ ॥ ೨೩ ॥

ಪ್ರವಾಹವು. ಇಂದ್ರಿಯಗಳೇ ಸುಳಿಗಳು. ದುಃಖಗಳೇ ಅಲೆಗಳು. ಮೋಹವೆಂಬುದೇ ಕೆಸರು. ದುರಾಸೆಗಳೆಂಬುದೇ ಆಳವಾದ ಮಡುಗಳು. ಇಂತಹ ಈ ಸಂಸಾರಸಾಗರವು ಭಯಂಕರವೂ ದುಃಖಮಯವೂ ಸಾರವಿಲ್ಲದುದೂ ಆಗಿರುವುದು. ಇದನ್ನು ದಾಟುವುದೇ ಕಷ್ಟಸಾಧ್ಯವಾಗಿರುವುದು.

೨೧. ಇಂತಹ ಘೋರಸಾಗರದಲ್ಲಿ ಪ್ರಾಣಿಗಳು ಮುಳುಗುತ್ತಿರುವವು. ಅಲ್ಲಿಂದ ಮೇಲೆ ಬರಲು ಅವುಗಳಿಗೆ ಯಾವ ಆಧಾರವೂ ಇಲ್ಲ ಮತ್ತು ಶಕ್ತಿಯೂ ಇಲ್ಲವಾಗಿದೆ. ಇದನ್ನು ನೋಡಿ, ಎಲೈ ಮುನಿಯೇ ! ಅದಕ್ಕುಪಾಯವನ್ನು ಕೇಳಲು ನಿನ್ನ ಬಳಿಗೆ ಬಂದಿರುವೆವು.

೨೨. ಈ ಭಯಂಕರವಾದ ಸಂಸಾರವನ್ನು ಯೋಚಿಸಿದರೂ ಸಾಕು ; ಮೈಯ್ಯಲ್ಲಿ ರೋಮಾಂಚವಾಗುವುದು. ಇಂತಹ ಸಂಸಾರಸಾಗರವನ್ನು ದಾಟಲು ಉಪಾಯಗಳನ್ನುಪದೇಶಿಸಿ ಜನಗಳನ್ನು ನೀನು ಉದ್ಧರಿಸಬೇಕು.

೨೩. ಈ ಸಂಸಾರದಿಂದ ಬಿಡುಗಡೆಯನ್ನು ಹೊಂದುವಂತಹ ಪವಿತ್ರವಾದ ಶ್ರೇಷ್ಠತೀರ್ಥಕ್ಷೇತ್ರವನ್ನು ಹೇಳುವವನಾಗು. ಭೂಮಿಯಲ್ಲಿ ಕರ್ಮಭೂಮಿ ಯಾವುದು ? ಅದನ್ನೂ ಹೇಳು.

shrinath.udupa@gmail.com

ಕೃತ್ವಾ ಕ್ಕಕಿಲ ಮನರಃ ಸರ್ಮ್ಯ ಭೂಮೌ ಯಥೋದಿತಂ ।
ಪ್ರಾಪ್ನೋತಿ ಪರಮಾಂ ಸಿದ್ಧಿಂ ನರಕಂ ಚ ವಿಕರ್ಮತಃ ॥ ೨೪ ॥

ಮೋಕ್ಷಕ್ಷೇತ್ರೇ ತಥಾ ಮೋಕ್ಷಂ ಪ್ರಾಪ್ನೋತಿ ಪುರುಷಃ ಸುಧೀಃ ।
ತಸ್ಮಾದ್ ಬ್ರೂಹಿ ಮಹಾಪ್ರಾಜ್ಞ ಯತ್ಪೃಷ್ಟೋಽಸಿ ದ್ವಿಜೋತ್ತಮ ॥ ೨೫ ॥

ಶ್ರುತ್ವಾ ತು ವಚನಂ ತೇಷಾಂ ಮುನೀನಾಂ ಭಾವಿತಾತ್ಮನಾಂ ।
ವ್ಯಾಸಃ ಪ್ರೋವಾಚ ಭಗವಾನ್ಭೂತಭವ್ಯಭವಿಷ್ಯವಿತ್ ॥ ೨೬ ॥

॥ ವ್ಯಾಸ ಉವಾಚ ॥

ಶೃಣುಧ್ವಂ ಮುನಯಃ ಸರ್ವೇ ವಕ್ಷ್ಯಾಮಿ ಯದಿ ಪೃಚ್ಛಥ ।
ಯಃ ಸಂವಾದೋಽಭವತ್ಪೂರ್ವಮೃಷೀಣಾಂ ಬ್ರಹ್ಮಣಾ ಸಹ ॥ ೨೭ ॥

ಮೇರುಪೃಷ್ಠೇ ತು ವಿಸ್ತೀರ್ಣೇ ನಾನಾರತ್ನವಿಭೂಷಿತೇ ।
ನಾನಾದ್ರುಮಲತಾಕೀರ್ಣೇ ನಾನಾಪುಷ್ಪೋಪಶೋಭಿತೇ ॥ ೨೮ ॥

---

೨೪. ಭೂಮಿಯಲ್ಲಿ ಮಾನವನು ಒಳ್ಳೆಯ ಕರ್ಮವನ್ನು ವಿಧಿವತ್ತಾಗಿ ಮಾಡಿದರೆ ಉತ್ತಮವಾದ ಸಿದ್ಧಿಯನ್ನು ಪಡೆಯುವನು. ಕೆಟ್ಟಕಾರ್ಯವನ್ನು ಮಾಡಿದರೆ ನರಕವನ್ನು ಹೊಂದುವನು.

೨೫. ಮುಕ್ತಿಯನ್ನು ಕೊಡುವಂತಹ ಕ್ಷೇತ್ರದಲ್ಲಿ ಕರ್ಮಮಾಡಿದರೆ ಮುಕ್ತಿಯನ್ನು ಹೊಂದುವನು. ಆದಕಾರಣ, ಸರ್ವಜ್ಞನಾದ ವಿಪ್ರೋತ್ತಮನೇ! ನಾವು ಕೇಳಿದುದನ್ನು ಹೇಳು ಎಂದರು.

೨೬. ಮಹಾತಪಸ್ವಿಗಳಾದ ಆ ಮುನಿಗಳ ಮಾತನ್ನು ಕೇಳಿ ಭೂತ ಭವಿಷ್ಯತ್ ವರ್ತಮಾನಕಾಲಗಳಲ್ಲಿನ ಆಗುಹೋಗುಗಳನ್ನು ಬಲ್ಲ ಭಗವಾನ್ ವ್ಯಾಸನು ಹೀಗೆ ಹೇಳಿದನು.

೨೭. ವ್ಯಾಸಮುನಿಯು ಹೇಳಿದನು.—ಎಲೈ ಮುನಿಗಳೇ! ಕೇಳಿರಿ. ನೀವು ಕೇಳಿದ ವಿಷಯದಲ್ಲಿಯೇ ಹಿಂದೆ ಬ್ರಹ್ಮನಿಗೂ ಮಹರ್ಷಿಗಳಿಗೂ ಮಾತುಕತೆಗಳಾಗಿದ್ದುವು. ಅದನ್ನು ಹೇಳುವೆನು.

೨೮-೩೦. ಒಂದು ದಿನ ವಿಶಾಲವಾದ ಮೇರುಪರ್ವತದ ತಪ್ಪಲಲ್ಲಿ ಬ್ರಹ್ಮನು ಕುಳಿತಿದ್ದನು. ಆ ಪ್ರದೇಶವು ಅನೇಕಬಗೆಯ ರತ್ನಗಳಿಂದ ತುಂಬಿದ್ದು ಮನೋಹರ

shrinath.udupa@gmail.com

ನಾನಾಪಕ್ಷಿರುತೇ ರಮ್ಯೇ ನಾನಾಪ್ರಸ್ರವಣಾಕುಲೇ ।
ನಾನಾಸತ್ತ್ವಸಮಾಕೀರ್ಣೇ ನಾನಾಶ್ಚರ್ಯಸಮನ್ವಿತೇ ॥ ೨೯ ॥

ನಾನಾವರ್ಣಶಿಲಾಕೀರ್ಣೇ ನಾನಾಧಾತುವಿಭೂಷಿತೇ ।
ನಾನಾಮುನಿಜನಾಕೀರ್ಣೇ ನಾನಾಶ್ರಮಸಮನ್ವಿತೇ ॥ ೩೦ ॥

ತತ್ರಾಸೀನಂ ಜಗನ್ನಾಥಂ ಜಗದ್ಯೋನಿಂ ಚತುರ್ಮುಖಂ ।
ಜಗತ್ಪತಿಂ ಜಗದ್ವಂದ್ಯಂ ಜಗದಾಧಾರಮೀಶ್ವರಂ ॥ ೩೧ ॥

ದೇವದಾನವಗಂಧರ್ವೈರ್ಯಕ್ಷವಿದ್ಯಾಧರೋರಗೈಃ ।
ಮುನಿಸಿದ್ಧಾಪ್ಸರೋಭಿಶ್ಚ ವೃತಮನ್ಯೈರ್ದಿವಾಲಯೈಃ ॥ ೩೨ ॥

ಕೇಚಿತ್ಸ್ತುವಂತಿ ತಂ ದೇವಂ ಕೇಚಿದ್ಗಾಯಂತಿ ಚಾಗ್ರತಃ ।
ಕೇಚಿದ್ವಾದ್ಯಾನಿ ವಾದ್ಯಂತೇ ಕೇಚಿನ್ನೃತ್ಯಂತಿ ಚಾಪರೇ ॥ ೩೩ ॥

ವಾಗಿತ್ತು. ಅನೇಕ ಬಗೆಯ ಮರಗಳು ಅಲ್ಲಿ ಸೊಂಪಾಗಿ ಬೆಳೆದಿದ್ದುವು. ಅನೇಕ ತರಹೆಯ ಹೂಗಳು ಅಲ್ಲಿ ಕಂಗೊಳಿಸುತ್ತಿದ್ದುವು. ಹಕ್ಕಿಗಳು ಇಂಪಾಗಿ ಧ್ವನಿಗೈಯುತ್ತಿದ್ದುವು. (ನಿರ್ಮಲವಾದ ಅನೇಕ ಗಿರಿನದಿಗಳು ಹರಿಯುತ್ತಿದ್ದುವು.) ಅನೇಕ ಪ್ರಾಣಿಗಳು ಅಲ್ಲಿ ವಾಸವಾಗಿದ್ದುವು. ಅನೇಕಬಗೆಯ ಆಶ್ಚರ್ಯವಸ್ತುಗಳು ಅಲ್ಲಿದ್ದುವು. ತರತರಹೆಯ ಬಣ್ಣದ ಕಲ್ಲುಗಳು ಅಲ್ಲಿರುವುವು. ಅನೇಕಬಗೆಯ ಗೈರಿಕಧಾತುಗಳು ಅಲ್ಲಿರುವುವು. ತಪಸ್ವಿಗಳಾದ ಮುನಿಗಳು ಅಲ್ಲಿ ಆಶ್ರಮಗಳನ್ನು ಕಟ್ಟಿಕೊಂಡು ವಾಸವಾಗಿರುವರು.

೩೧–೩೨. ಇಂತಹ ರಮಣೀಯವಾದ ಪ್ರದೇಶದಲ್ಲಿ ಕುಳಿತಿದ್ದ ಜಗದೊಡೆಯನೂ, ಜಗತ್ಕರ್ತನೂ, ನಾಲ್ಕುಮುಖಗಳುಳ್ಳವನೂ, ಜಗತ್ತಿಗೆ ಪೂಜ್ಯನೂ, ಆಧಾರನೂ, ಪರಮೇಶ್ವರನೂ ಆದ ಬ್ರಹ್ಮದೇವನನ್ನು ಕೆಲವರು ಭಕ್ತರು ಸ್ತೋತ್ರಮಾಡುತ್ತಿದ್ದರು. ಕೆಲವರು ಎದುರಿನಲ್ಲಿ ಗಾನಮಾಡುತ್ತಿದ್ದರು. ಕೆಲವರು ವಾದ್ಯಗಳನ್ನು ಬಾರಿಸುತ್ತಿದ್ದರು. ಕೆಲವರು ಅವನೆದುರಿಗೆ ನರ್ತನವನ್ನು ಮಾಡುತ್ತಿದ್ದರು.

೩೩. ಮತ್ತು ದೇವತೆಗಳು, ದಾನವರು, ಗಂಧರ್ವರು, ಯಕ್ಷರು, ವಿದ್ಯಾಧರರು, ಸರ್ಪರಾಜರು, ಮುನಿಗಳು, ಸಿದ್ಧರು, ಅಪ್ಸರೆಯರು ಇನ್ನೂ ಕೆಲವರು ದೇವಲೋಕದಲ್ಲಿನ ಕಿನ್ನರರು ಮೊದಲಾದವರು ಆ ಬ್ರಹ್ಮದೇವನ ಸುತ್ತಲೂ ನೆರೆದಿದ್ದರು.

shrinath.udupa@gmail.com

ಏವಂ ಪ್ರಮುದಿತೇ ಕಾಲೇ ಸರ್ವಭೂತಸಮಾಗಮೇ ।
ನಾನಾಕುಸುಮಗಂಧಾಢ್ಯೇ ದಕ್ಷಿಣಾನಿಲಸೇವಿತೇ ॥ ೩೪ ॥

ಭೃಗ್ವಾದ್ಯಾಸ್ತಂ ತದಾ ದೇವಂ ಪ್ರಣಿಪತ್ಯ ಪಿತಾಮಹಂ ।
ಇಮಮರ್ಥಮೃಷಿವರಾಃ ಪಪ್ರಚ್ಛುಃ ಪಿತರಂ ದ್ವಿಜಾಃ ॥ ೩೫ ॥

॥ ಋಷಯ ಊಚುಃ ॥
ಭಗವನ್ ಶ್ರೋತುಮಿಚ್ಛಾಮಃ ಕರ್ಮಭೂಮಿಂ ಮಹೀತಲೇ ।
ವಕ್ತುಮರ್ಹಸಿ ದೇವೇಶ ಮೋಕ್ಷಕ್ಷೇತ್ರಂ ಚ ದುರ್ಲಭಂ ॥ ೩೬ ॥

॥ ವ್ಯಾಸ ಉವಾಚ ॥
ತೇಷಾಂ ವಚನಮಾಕರ್ಣ್ಯ ಪ್ರಾಹ ಬ್ರಹ್ಮಾ ಸುರೇಶ್ವರಃ ।
ಪಪ್ರಚ್ಛುಸ್ತೇ ಯಥಾ ಪ್ರಶ್ನಂ ತತ್ಸರ್ವಂ ಮುನಿಸತ್ತಮಾಃ ॥ ೩೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭೂಬ್ರಹ್ಮರ್ಷಿ ಸಂವಾದೇ ಪ್ರಶ್ನನಿರೂಪಣಂ ನಾಮ ಷಡ್ವಿಂಶೋಽಧ್ಯಾಯಃ

೩೪–೩೫. ಇಂತಹ ದೇವತೆಗಳು ಮೊದಲಾದವರೆಲ್ಲರೂ ಸೇರಿರುವ, ನಾನಾ ಬಗೆಯ ಕುಸುಮಗಳ ಸುವಾಸನೆಯಿಂದ ಕೂಡಿರುವ, ಮಲಯಮಾರುತವು ಮೆಲ್ಲಗೆ ಬೀಸುತ್ತಲಿರುವ ಆ ಪ್ರದೇಶದಲ್ಲಿ ಕುಳಿತಿರುವ ಬ್ರಹ್ಮದೇವನ ಬಳಿಗೆ ಭೃಗುಮುನಿ ಮೊದಲಾದ ಮಹರ್ಷಿಗಳು ಬಂದು ನಮಸ್ಕರಿಸಿ ಹೀಗೆ ಕೇಳಿದರು.

೩೬. ಋಷಿಗಳು ಕೇಳಿದರು.—"ಓ ಭಗವನ್ ! ಭೂಮಿಯಲ್ಲಿ ಕರ್ಮಭೂಮಿ ಯಾವುದು? ಮುಕ್ತಿಯನ್ನುಂಟುಮಾಡುವಂತಹ ಕ್ಷೇತ್ರವಾವುದು ? ಇದನ್ನು ನಮಗೆ ಹೇಳಬೇಕು."

೩೭. ವ್ಯಾಸಮುನಿಯು ಹೇಳಿದನು—ಹೀಗೆ ಮುನಿಗಳ ಮಾತನ್ನು ಕೇಳಿ ದೇವದೇವನಾದ ಬ್ರಹ್ಮನು ಅವರ ಪ್ರಶ್ನೆಗಳಿಗೆಲ್ಲಾ ಉತ್ತರವನ್ನು ಈರೀತಿ ಹೇಳಿದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಸ್ವಯಂಭೂಬ್ರಹ್ಮರ್ಷಿಸಂವಾದಪ್ರಶ್ನನಿರೂಪಣವೆಂಬ ಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತವಿಂಶೋಽಧ್ಯಾಯಃ

॥ ಬ್ರಹ್ಮೋವಾಚ ॥

ಶೃಣುಧ್ವಂ ಮುನಯಃ ಸರ್ವೇ ಯದ್ವೋ ವಕ್ಷ್ಯಾಮಿ ಸಾಂಪ್ರತಂ ।
ಪುರಾಣಂ ವೇದಸಂಬದ್ಧಂ ಭುಕ್ತಿಮುಕ್ತಿಪ್ರದಂ ಶುಭಂ ॥ ೧ ॥

ಪೃಥಿವ್ಯಾಂ ಭಾರತಂ ವರ್ಷಂ ಕರ್ಮಭೂಮಿರುದಾಹೃತಾ ।
ಕರ್ಮಣಃ ಫಲಭೂಮಿಶ್ಚ ಸ್ವರ್ಗಂ ಚ ನರಕಂ ತಥಾ ॥ ೨ ॥

ತಸ್ಮಿನ್ ವರ್ಷೇ ನರಃ ಪಾಪಂ ಕೃತ್ವಾ ಧರ್ಮಂ ಚ ಭೋ ದ್ವಿಜಾಃ ।
ಅವಶ್ಯಂ ಫಲಮಾಪ್ನೋತಿ ಅಶುಭಸ್ಯ ಶುಭಸ್ಯ ಚ ॥ ೩ ॥

ಇಪ್ಪತ್ತೇಳನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು.—ಎಲೈ ಮುನಿಗಳೇ ! ವೇದಾರ್ಥವನ್ನೊಳಗೊಂಡಿರುವುದೂ, ಭುಕ್ತಿಯನ್ನೂ ಮುಕ್ತಿಯನ್ನೂ ಉಂಟುಮಾಡುವುದೂ, ಶುಭವೂ ಆದ ಪುರಾಣವನ್ನು ಹೇಳುವೆನು, ಶ್ರದ್ಧೆಯಿಂದ ಕೇಳುವವರಾಗಿರಿ.

೨. ಜಗತ್ತಿನಲ್ಲಿ ಭರತಖಂಡವೇ ಕರ್ಮಭೂಮಿಯು. ಕರ್ಮಫಲವನ್ನನುಭವಿಸುವ ಭೂಮಿಗಳು ಸ್ವರ್ಗ ಮತ್ತು ನರಕಗಳು ಎಂದು ಹೇಳಲ್ಪಟ್ಟಿರುವುವು.

೩. ಆ ಭರತಖಂಡದಲ್ಲಿ ಪುಣ್ಯವನ್ನು ಮಾಡಿದವನು ಒಳ್ಳೆಯ ಫಲವನ್ನನುಭವಿಸುವನು. ಪಾಪವನ್ನು ಮಾಡಿದವನು ಕೆಟ್ಟ ಫಲವನ್ನನುಭವಿಸುವನು.

shrinath.udupa@gmail.com

ಬ್ರಾಹ್ಮಣಾದ್ಯಾಃ ಸ್ವಕಂ ಕರ್ಮ ಕೃತ್ವಾ ಸಮ್ಯಕ್ಸುಸಂಯುತಾಃ ।
ಪ್ರಾಪ್ನುವಂತಿ ಪರಾಂ ಸಿದ್ಧಿಂ ತಸ್ಮಿನ್ವರ್ಷೇ ನ ಸಂಶಯಃ ॥ ೪ ॥

ಧರ್ಮಂ ಚಾರ್ಥಂ ಚ ಕಾಮಂ ಚ ಮೋಕ್ಷಂ ಚ ದ್ವಿಜಸತ್ತಮಾಃ ।
ಪ್ರಾಪ್ನೋತಿ ಪುರುಷಃ ಸರ್ವಂ ತಸ್ಮಿನ್ ವರ್ಷೇ ಸುಸಂಯತಃ ॥ ೫ ॥

ಇಂದ್ರಾದ್ಯಾಶ್ಚ ಸುರಾಃ ಸರ್ವೇ ತಸ್ಮಿನ್ ವರ್ಷೇ ದ್ವಿಜೋತ್ತಮಾಃ ।
ಕೃತ್ವಾ ಸುಶೋಭನಂ ಕರ್ಮ ದೇವತ್ವಂ ಪ್ರತಿಪೇದಿರೇ ॥ ೬ ॥

ಅನ್ಯೇಽಪಿ ಲೇಭಿರೇ ಮೋಕ್ಷಂ ಪುರುಷಾಃ ಸಂಯತೇಂದ್ರಿಯಾಃ ।
ತಸ್ಮಿನ್ವರ್ಷೇ ಬುಧಾಃ ಶಾಂತಾ ವೀತರಾಗಾ ವಿಮತ್ಸರಾಃ ॥ ೭ ॥

ಯೇ ಚಾಪಿ ಸ್ವರ್ಗೇ ತಿಷ್ಠಂತಿ ವಿಮಾನೇನ ಗತಜ್ವರಾಃ ।
ತೇಽಪಿ ಕೃತ್ವಾ ಶುಭಂ ಕರ್ಮ ತಸ್ಮಿನ್ ವರ್ಷೇ ದಿವಂ ಗತಾಃ ॥ ೮ ॥

---

೪. ಈ ಭರತಖಂಡದಲ್ಲಿ ಬ್ರಾಹ್ಮಣ ಮೊದಲಾದವರು ತಮ್ಮತಮ್ಮ ವರ್ಣಗಳಿಗೆ ವಿಹಿತವಾದ ಸತ್ಕರ್ಮಗಳನ್ನು ನಿಯಮದಿಂದಲೂ ಜಿತೇಂದ್ರಿಯತೆಯಿಂದಲೂ ಅನುಷ್ಠಾನಮಾಡಿದರೆ ಉತ್ತಮಸಿದ್ಧಿಯನ್ನು ಪಡೆಯುವರು. ಇದರಲ್ಲಿ ಸಂಶಯವಿಲ್ಲವು.

೫. ಆ ಭರತಖಂಡದಲ್ಲಿ ವಿಧಿವತ್ತಾಗಿ ವ್ರತನಿಯಮಗಳನ್ನು ಆಚರಿಸುವವನು, ಧರ್ಮವನ್ನೂ, ಅರ್ಥವನ್ನೂ, ಕಾಮವನ್ನೂ, ಕೊನೆಯಲ್ಲಿ ಮುಕ್ತಿಯನ್ನೂ ಪಡೆಯುವನು.

೬. ಹೆಚ್ಚೇನು? ಇಂದ್ರನೇ ಮೊದಲಾದವರೂ ಸಹ ಈ ಭಾರತಖಂಡದಲ್ಲಿ ಹಿಂದೆ ಪುಣ್ಯಕರ್ಮಗಳನ್ನು ಮಾಡಿ ಈಗ ದೇವತ್ವವನ್ನು ಹೊಂದಿರುವರು.

೭. ಇನ್ನೂ ಕೆಲವರು ಆ ಭರತಖಂಡದಲ್ಲಿ ಜ್ಞಾನಿಗಳೂ, ಶಾಂತರೂ ನಿಸ್ಪೃಹರೂ, ಅಸೂಯೆಯಿಲ್ಲದವರೂ ಆಗಿದ್ದು ಜಿತೇಂದ್ರಿಯತೆಯಿಂದ ಆತ್ಮಧ್ಯಾನಪರರಾಗಿ ಮುಕ್ತಿಯನ್ನು ಪಡೆದಿರುವರು.

೮. ಈಗ ಸ್ವರ್ಗದಲ್ಲಿದ್ದು ವಿಮಾನಗಳಲ್ಲಿ ವಿಹರಿಸುತ್ತಿರುವವರೂ ಸಹ ಹಿಂದೆ ಭರತಖಂಡದಲ್ಲಿ ಪುಣ್ಯಕರ್ಮವನ್ನು ಮಾಡಿಯೇ ಸ್ವರ್ಗವನ್ನು ಪಡೆದಿರುವರು.

shrinath.udupa@gmail.com

ನಿವಾಸಂ ಭಾರತೇ ವರ್ಷ ಆಕಾಂಕ್ಷಂತಿ ಸದಾ ಸುರಾಃ ।
ಸ್ವರ್ಗಾಪವರ್ಗಫಲದೇ ತತ್ಪಶ್ಯಾಮಃ ಕದಾ ವಯಂ ॥ ೯ ॥

॥ ಮುನಯು ಊಚುಃ ॥

ಯದೇತದ್ಭವತಾ ಪ್ರೋಕ್ತಂ ಕರ್ಮ ನಾನ್ಯತ್ರ ಪುಣ್ಯದಂ ।
ಪಾಪಾಯ ವಾ ಸುರಶ್ರೇಷ್ಠ ವರ್ಜಯಿತ್ವಾ ಚ ಭಾರತಂ ॥ ೧೦ ॥

ತತಃ ಸ್ವರ್ಗಶ್ಚ ಮೋಕ್ಷಶ್ಚ ಮಧ್ಯಮಂ ತಚ್ಚ ಗಮ್ಯತೇ ।
ನ ಖಲ್ವನ್ಯತ್ರ ಮರ್ತ್ಯಾನಾಂ ಭೂಮೌ ಕರ್ಮ ವಿಧೀಯತೇ ॥ ೧೧ ॥

ತಸ್ಮಾದ್ವಿಸ್ತರತೋ ಬ್ರಹ್ಮನ್ನಸ್ಮಾಕಂ ಭಾರತಂ ವದ ।
ಯದಿ ತೇಽಸ್ತಿ ದಯಾಸ್ಮಾಸು ಯಥಾವಸ್ಥಿತಿರೇವ ಚ ॥ ೧೨ ॥

ತಸ್ಮಾದ್ವರ್ಷಮಿದಂ ನಾಥ ಯೇ ವಾಽಸ್ಮಿನ್ವರ್ಷಪರ್ವತಾಃ ।
ಭೇದಾಶ್ಚ ತಸ್ಯ ವರ್ಷಸ್ಯ ಬ್ರೂಹಿ ಸರ್ವಾನಶೇಷತಃ ॥ ೧೩ ॥

---

೯. ದೇವತೆಗಳೂ ಸಹ ಭಾರತವರ್ಷದಲ್ಲಿ ವಾಸವನ್ನಪೇಕ್ಷಿಸುವವರಾಗಿ ಸ್ವರ್ಗ ಮತ್ತು ಮೋಕ್ಷಗಳಿಗೆ ಸಾಧನಭೂಮಿಯಾದ ಆ ಭಾರತವರ್ಷದಲ್ಲಿ ನಾವು ಯಾವಾಗ ಜನ್ಮವೆತ್ತುವೆವು ಎಂದು ಕುತೂಹಲವುಳ್ಳವರಾಗಿರುವರು.

೧೦. ಮುನಿಗಳು ಹೇಳಿದರು.—ಓ ಬ್ರಹ್ಮದೇವ! ಭಾರತವನ್ನು ಬಿಟ್ಟು, ಇನ್ನೆಲ್ಲಿಯೂ ಕೂಡ ಕರ್ಮವನ್ನು ಮಾಡಿದರೆ ಪಾಪವಾಗಲಿ ಪುಣ್ಯವಾಗಲಿ ಲಭಿಸುವದಿಲ್ಲ ಎಂದು ನೀನು ಹೇಳಿರುವೆಯಲ್ಲವೆ?

೧೧. "ಆ ಭೂಮಿಯಿಂದಲೇ ಸ್ವರ್ಗವನ್ನಾಗಲಿ ಮುಕ್ತಿಯನ್ನಾಗಲಿ ನರಕವನ್ನಾಗಲಿ ಪಡೆಯಬಹುದು. ಇಲ್ಲವೆ ಅಲ್ಲಿಯೇ ತಿರುಗಿ ಜನ್ಮವೆತ್ತಬಹುದು. ಅಂತೂ ಭರತಖಂಡವನ್ನು ಹೊರತು ಇನ್ನೆಲ್ಲಿಯೂ ಕರ್ಮಾಧಿಕಾರವಿಲ್ಲವು" ಎಂದೂ ಹೇಳಿರುವೆಯಲ್ಲವೇ ?

೧೨. ಆದುದರಿಂದ ಓ ಬ್ರಹ್ಮದೇವ! ನಮ್ಮಲ್ಲಿ ನಿನಗೆ ಅನುಗ್ರಹವಿದ್ದರೆ ಕ್ರಮವಾಗಿ ಭಾರತವನ್ನು ವಿಸ್ತರಿಸಿ ಹೇಳುವವನಾಗು.

೧೩. ಓ ನಾಥ! ಈ ಭರತಖಂಡದಲ್ಲಿ ದೇಶಗಳೆಷ್ಟಿರುವುವು? ವರ್ಷಪರ್ವತಗಳಾವುವು? ಮುಂತಾದ ವಿಷಯವೆಲ್ಲವನ್ನೂ ಹೇಳುವವನಾಗು.

shrinath.udupa@gmail.com

॥ ಬ್ರಹ್ಮೋವಾಚ ॥

ಶೃಣುಧ್ವಂ ಭಾರತಂ ವರ್ಷಂ ನವಭೇದೇನ ಭೋ ದ್ವಿಜಾಃ ।
ಸಮುದ್ರಾಂತರಿತಾ ಜ್ಞೇಯಾಸ್ತೇ ಸಮಾಶ್ಚ ಪರಸ್ಪರಂ ॥ ೧೪ ॥

ಇಂದ್ರದ್ವೀಪಃ ಕಶೇರುಶ್ಚ ತಾಮ್ರವರ್ಣೋ ಗಭಸ್ತಿಮಾನ್ ।
ನಾಗದ್ವೀಪಸ್ತಥಾ ಸೌಮ್ಯೋ ಗಾಂಧರ್ವೋ ವಾರುಣಸ್ತಥಾ ॥ ೧೫ ॥

ಅಯಂ ತು ನವಮಸ್ತೇಷಾಂ ದ್ವೀಪಃ ಸಾಗರಸಂವೃತಃ ।
ಯೋಜನಾನಾಂ ಸಹಸ್ರಂ ವೈ ದ್ವೀಪೋಽಯಂ ದಕ್ಷಿಣೋತ್ತರಃ ॥ ೧೬ ॥

ಪೂರ್ವೇ ಕಿರಾತಾ ಯಸ್ಯಾಽಸನ್ಪಶ್ಚಿಮೇ ಯವನಾಸ್ತಥಾ ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚಾಂತೇ ಸ್ಥಿತಾ ದ್ವಿಜಾಃ ॥ ೧೭ ॥

ಇಜ್ಯಾಯುದ್ಧವಣಿಜ್ಯಾದ್ಯೈಃ ಕರ್ಮಭಿಃ ಕೃತಪಾವನಾಃ ।
ತೇಷಾಂ ಸಂವ್ಯವಹಾರಶ್ಚ ಏಭಿಃ ಕರ್ಮಭಿರಿಷ್ಯತೇ ॥ ೧೮ ॥

---

೧೪. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ! ಕೇಳಿರಿ. ಭರತಖಂಡವು ಒಂಭತ್ತು ಭೇದವುಳ್ಳದ್ದಾಗಿರುವುದು. ಈ ಒಂಭತ್ತು ಭಾಗಗಳ ನಡುವೆ ಸಮುದ್ರವು ಇರುವುದು. ಮತ್ತು ಪ್ರತಿಯೊಂದು ಭಾಗವೂ ಸಮಾನವಾದ ಅಳತೆಯುಳ್ಳದಾಗಿರುವುದು.

೧೫-೧೬. ಇಂದ್ರದ್ವೀಪ, ಕಶೇರು, ತಾಮ್ರವರ್ಣ, ಗಭಸ್ತಿಮಾನ್, ನಾಗದ್ವೀಪ, ಸೌಮ್ಯ, ಗಾಂಧರ್ವ, ವಾರುಣ ಈ ಎಂಟು ದ್ವೀಪಗಳಿರುವುವು. ಭಾರತವು ಒಂಭತ್ತನೆಯ ದ್ವೀಪವು. ಇದರ ಸುತ್ತಲೂ ಸಮುದ್ರವಿರುವುದು. ಇದು ಸಾವಿರಯೋಜನ ವಿಸ್ತಾರವಾಗಿದ್ದು ದಕ್ಷಿಣ ಮತ್ತು ಉತ್ತರಗಳವರೆಗೆ ಹರಡಿರುವುದು.

೧೭. ಇದರ ಪೂರ್ವಕ್ಕೆ ಕಿರಾತರಿರುವರು. ಪಶ್ಚಿಮದಲ್ಲಿ ಯವನರಿರುವರು. ಮಧ್ಯದಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರೆಂಬ ನಾಲ್ಕುವರ್ಣದವರಿರುವರು.

೧೮. ಬ್ರಾಹ್ಮಣರು ಯಾಗಮಾಡುವುದರಿಂದಲೂ, ಕ್ಷತ್ರಿಯರು ದೇಶರಕ್ಷಣೆಗಾಗಿ ಯುದ್ಧಮಾಡುವುದರಿಂದಲೂ, ವೈಶ್ಯರು ವ್ಯಾಪಾರಮಾಡುವುದರಿಂದಲೂ, ಶೂದ್ರರು ಗೋಸೇವೆ ಉತ್ತಮವರ್ಣದವರ ಸೇವೆ ಮುಂತಾದುವುಗಳಿಂದಲೂ ಜೀವನ

shrinath.udupa@gmail.com

ಸ್ವರ್ಗಾಪವರ್ಗಹೇತುಶ್ಚ ಪುಣ್ಯಂ ಪಾಪಂ ಚ ವೈ ತಥಾ ।
ಮಹೇಂದ್ರೋ ಮಲಯಃ ಸಹ್ಯಃ ಶುಕ್ತಿಮಾನೃಕ್ಷಪರ್ವತಃ ॥ ೧೯ ॥

ವಿಂಧ್ಯಶ್ಚ ಪಾರಿಯಾತ್ರಶ್ಚ ಸಪ್ತೈವಾತ್ರ ಕುಲಾಚಲಾಃ ।
ತೇಷಾಂ ಸಹಸ್ರಶಶ್ಚಾನ್ಯೇ ಭೂಧರಾ ಯೇ ಸಮೀಪಗಾಃ ॥ ೨೦ ॥

ವಿಸ್ತಾರೋಚ್ಛ್ರಾಯಿಣೋ ರಮ್ಯಾ ವಿಪುಲಾಶ್ಚಿತ್ರಸಾನವಃ ।
ಕೋಲಾಹಲಃ ಸ ವೈಭ್ರಾಜೋ ಮಂದರೋ ದರ್ದುರಾಚಲಃ ॥ ೨೧ ॥

ವಾತಂಧಯೋ ವೈದ್ಯುತಶ್ಚ ಮೈನಾಕಃ ಸುರಸಸ್ತಥಾ ।
ತುಂಗಪ್ರಸ್ಥೋ ನಾಗಗಿರಿರ್ಗೋಧನಃ ಪಾಂಡರಾಚಲಃ ॥ ೨೨ ॥

ಪುಷ್ಪಗಿರಿರ್ವೈಜಯಂತೋ ರೈವತೋಽರ್ಬುದ ಏವ ಚ ।
ಋಷ್ಯಮೂಕಃ ಸ ಗೋಮಂಥಃ ಕೃತಶೈಲಃ ಕೃತಾಚಲಃ ॥ ೨೩ ॥

ನಡೆಸುತ್ತಿರುವರು. ಅವರಲ್ಲಿ ಪುಣ್ಯಶಾಲಿಗಳು ಸ್ವರ್ಗ ಮತ್ತು ಮುಕ್ತಿಗೆ ಹೇತುವಾದ ಪುಣ್ಯವನ್ನೂ, ಪಾಪಿಗಳು ನರಕಕಾರಣವಾದ ಪಾಪವನ್ನೂ ಆಚರಿಸಿ ತಕ್ಕ ಫಲಗಳನ್ನನುಭವಿಸುವರು.

೧೯. ಮಹೇಂದ್ರ, ಮಲಯ, ಶುಕ್ತಿಮಾನ್, ಋಕ್ಷಪರ್ವತ, ವಿಂಧ್ಯ, ಪಾರಿಯಾತ್ರಗಳೆಂಬ ಏಳು ಕುಲ ಪರ್ವತಗಳು ಭಾರತದಲ್ಲಿರುವವು.

೨೦. ಈ ಗಿರಿಗಳ ಸಮೀಪದಲ್ಲಿ ಇನ್ನೂ ಅನೇಕ ಆಶ್ಚರ್ಯಕರವಾದ ತಪ್ಪಲುಗಳುಳ್ಳವೂ ಮನೋಹರಗಳೂ ಆದ, ವಿಸ್ತಾರದಲ್ಲಿಯೂ ಎತ್ತರದಲ್ಲಿಯೂ ದೊಡ್ಡದಾದ ಪರ್ವತಗಳಿರುವುವು.

೨೧-೨೪. ಕೋಲಾಹಲ, ವೈಭ್ರಾಜ, ಮಂದರ, ದರ್ದುರಾಚಲ, ವಾತಂಧಯ, ವೈದ್ಯುತ, ಮೈನಾಕ, ಸುರಸ, ತುಂಗಪ್ರಸ್ಥ, ನಾಗಗಿರಿ, ಗೋವರ್ಧನ, ಪಾಂಡರಾಚಲ, ಪುಷ್ಪಗಿರಿ, ವೈಜಯಂತ, ರೈವತ, ಅರ್ಬುದಗಿರಿ, ಋಷ್ಯಮೂಕ, ಗೋಮಂಥ, ಕೃತಶೈಲ, ಕೃತಾಚಲ, ಶ್ರೀಪರ್ವತ ಚಕೋರ ಮೊದಲಾದ ಸಾವಿರಾರು ಗಿರಿಗಳು ಭಾರತದಲ್ಲಿರುವುವು. ಯವನದೇಶ ಮೊದಲಾದ ಮಿಕ್ಕ ದೇಶಗಳೂ ಸಹ ಈ ಬೆಟ್ಟಗಳನ್ನು ತಮ್ಮ ತಮ್ಮ

shrinath.udupa@gmail.com

ಶ್ರೀಪಾರ್ವತಶ್ಚಕೋರಶ್ಚ ಶತಶೋಽನ್ಯೇ ಚ ಪರ್ವತಾಃ ।
ತೈರ್ವಿಮಿಶ್ರಾ ಜನಪದಾ ಮ್ಲೇಚ್ಛಾದ್ಯಾಶ್ಚೈವ ಭಾಗಶಃ ॥ ೨೪ ॥

ತೈಃ ಪೀಯಂತೇ ಸರಿಚ್ಛ್ರೇಷ್ಠಾಸ್ತಾ ಬುಧ್ಯಧ್ವಂ ದ್ವಿಜೋತ್ತಮಾಃ ।
ಗಂಗಾ ಸರಸ್ವತೀ ಸಿಂಧುಶ್ಚಂದ್ರಭಾಗಾ ತಥಾಽಪರಾ ॥ ೨೫ ॥

ಯಮುನಾ ಶತದ್ರುರ್ವಿಪಾಶಾ ವಿತಸ್ತೈರಾವತೀ ಕುಹೂಃ ।
ಗೋಮತೀ ಧೂತಪಾಪಾ ಚ ಬಾಹುದಾ ಚ ದೃಷದ್ವತೀ ॥ ೨೬ ॥

ವಿಪಾಶಾ ದೇವಿಕಾ ಚಕ್ಷುರ್ನಿಷ್ಠೀವಾ ಗಂಡಕೀ ತಥಾ ।
ಕೌಶಿಕೀ ಚಾಽಪಗಾ ಚೈವ ಹಿಮವತ್ಪಾದನಿಸ್ಸೃತಾಃ ॥ ೨೭ ॥

ದೇವಸ್ಮೃತಿರ್ದೇವವತೀ ವಾತಘ್ನೀ ಸಿಂಧುರೇವ ಚ ।
ವೇಣ್ಯಾ ತು ಚಂದನಾ ಚೈವ ಸದಾನೀರಾ ಮಹೀ ತಥಾ ॥ ೨೮ ॥

ಚರ್ಮಣ್ವತೀ ವೃಷೀ ಚೈವ ವಿದಿಶಾ ವೇದವತ್ಯಪಿ ।
ಸಿಪ್ರಾ ಹ್ಯವಂತೀ ಚ ತಥಾ ಪಾರಿಯಾತ್ರಾನುಗಾಃ ಸ್ಮೃತಾಃ ॥ ೨೯ ॥

ಭಾಗಗಳಲ್ಲಿ ಸ್ವಲ್ಪಮಟ್ಟಿಗೆ ಹೊಂದಿರುವುವು. ಎಲೈ ವಿಪ್ರೋತ್ತಮರೇ! ಭಾರತದಲ್ಲಿನ ಉತ್ತಮ ನದಿಗಳನ್ನು ಹೇಳುವೆನು; ಕೇಳಿರಿ.

೨೫-೨೭. ಗಂಗಾ, ಸರಸ್ವತೀನದಿ, ಸಿಂಧು, ಚಂದ್ರಭಾಗಾ, ಯಮುನಾ, ಶತದ್ರುನದಿ, ವಿಪಾಶಾನದಿ, ವಿತಸ್ತಾನದಿ, ಇರಾವತೀನದಿ, ಕುಹೂನದಿ, ವಿಪಾಶಾನದಿ, ಗೋಮತೀನದಿ, ಧೂತಪಾಪಾನದಿ, ಬಾಹುದಾನದಿ, ದೃಷದ್ವತೀನದಿ, ದೇವಿಕಾನದಿ, ಚಕ್ಷುರ್ನದಿನಿಷ್ಠೀವಾನದಿ, ಗಂಡಕೀನದಿ, ಕೌಶಿಕೀನದಿ ಈ ನದಿಗಳೆಲ್ಲವೂ ಹಿಮಾಲಯದಿಂದ ಹೊರಟಿರುವುವು.

೨೮-೨೯. ದೇವಸ್ಮೃತಿನದಿ, ದೇವವತೀನದಿ, ವಾತಘ್ನೀನದಿ, ಸಿಂಧುನದಿ, ವೇಣ್ಯಾನದಿ, ಚಂದನಾನದಿ, ಸದಾನೀರಾನದಿ, ಮಹೀನದಿ, ಚರ್ಮಣ್ವತೀನದಿ, ವೃಷೀನದಿ, ವಿದಿಶಾನದಿ, ವೇದವತೀನದಿ, ಸಿಪ್ರಾನದಿ, ಅವಂತೀನದಿ ಇವೆಲ್ಲವೂ ಪಾರಿಯಾತ್ರ ಗಿರಿಯಿಂದ ಹೊರಟಿರುವುವು.

shrinath.udupa@gmail.com

ಶೋಣಾ ಮಹಾನದೀ ಚೈವ ನರ್ಮದಾ ಸುರಥಾ ಕ್ರಿಯಾ ।
ಮಂದಾಕಿನೀ ದಶಾರ್ಣಾ ಚ ಚಿತ್ರಕೂಟಾ ತಥಾಪರಾ ॥ ೩೦ ॥

ಚಿತ್ರೋತ್ಪಲಾ ವೇತ್ರವತೀ ಕರಮೋದಾ ಪಿಶಾಚಿಕಾ ।
ತಥಾಽನ್ಯಾಽತಿಲಘುಶ್ರೋಣೀ ವಿಪಾಪ್ಮಾ ಶೈವಲಾ ನದೀ ॥ ೩೧ ॥

ಸಧೇರುಜಾ ಶಕ್ತಿಮತೀ ಶಕುನೀ ತ್ರಿದಿವಾ ಕ್ರಮುಃ ।
ಋಕ್ಷಪಾದಪ್ರಸೂತಾ ವೈ ತಥಾಽನ್ಯಾ ವೇಗವಾಹಿನೀ ॥ ೩೨ ॥

ಸಿಪ್ರಾ ಪಯೋಷ್ಣೀ ನಿರ್ವಿಂಧ್ಯಾ ತಾಪೀ ಚೈವ ಸರಿದ್ವರಾ ।
ವೇಣಾ ವೈತರಣೀ ಚೈವ ಸಿನೀವಾಲೀ ಕುಮುದ್ವತೀ ॥ ೩೩ ॥

ತೋಯಾ ಚೈವ ಮಹಾಗೌರೀ ದುರ್ಗಾ ಚಾಂತಃಶಿಲಾ ತಥಾ ।
ವಿಂಧ್ಯಪಾದಪ್ರಸೂತಾಸ್ತಾ ನದ್ಯಃ ಪುಣ್ಯಜಲಾಃ ಶುಭಾಃ ॥ ೩೪ ॥

ಗೋದಾವರೀ ಭೀಮರಥೀ ಕೃಷ್ಣವೇಣಾ ತಥಾಪಗಾ ।
ತುಂಗಭದ್ರಾ ಸುಪ್ರಯೋಗಾ ತಥಾನ್ಯಾ ಪಾಪನಾಶಿನೀ ॥ ೩೫ ॥

೩೦–೩೨. ಶೋಣಾನದಿ, ಮಹಾನದಿ, ನರ್ಮದಾ, ಸುರಥಾನದಿ, ಕ್ರಿಯಾನದಿ ಮಂದಾಕಿನೀ, ದಶಾರ್ಣಾನದಿ, ಚಿತ್ರಕೂಟಾನದಿ, ಚಿತ್ರೋತ್ಪಲಾನದಿ, ವೇತ್ರವತೀನದಿ ಕರಮೋದಾ, ಪಿಶಾಚಿಕಾನದಿ, ಅತಿಲಘುಶ್ರೋಣೀನದಿ, ವಿಪಾಪ್ಮಾನದಿ, ಶೈವಲಾನದಿ ಧೇರುಜಾನದಿ, ಶಕ್ತಿಮತೀನದಿ, ಶಕುನಿನದಿ, ತ್ರಿದಿವಾನದಿ, ಕ್ರಮುನದಿ, ವೇಗವಾಹಿನೀ ಈ ನದಿಗಳೆಲ್ಲವು ಋಕ್ಷಗಿರಿಯಿಂದ ಹೊರಟಿರುವುವು.

೩೩–೩೪. ಶಿಪ್ರಾನದಿ, ಪಯೋಷ್ಣೀನದಿ, ನಿರ್ವಿಂಧ್ಯಾನದಿ, ತಾಪೀನದಿ ವೇಣಾನದಿ, ವೈತರಣೀನದಿ, ಸಿನೀವಾಲೀನದಿ, ಕುಮುದ್ವತೀನದಿ, ತೋಯಾನದಿ, ಮಹಾಗೌರೀನದಿ, ದುರ್ಗಾನದಿ, ಅಂತಶ್ಶಿಲಾನದಿ, ಈ ಪವಿತ್ರವಾದ ನದಿಗಳೆಲ್ಲವು ವಿಂಧ್ಯಗಿರಿಯಿಂದ ಹೊರಟಿರುವುವು.

೩೫. ಗೋದಾವರೀ, ಭೀಮರಥೀ, ಕೃಷ್ಣವೇಣಿ, ತುಂಗಭದ್ರಾ, ಸುಪ್ರಯೋಗಾ ಪಾಪನಾಶಿನೀ ಈ ಪವಿತ್ರನದಿಗಳು ಸಹ್ಯಪರ್ವತದಿಂದ ಹೊರಟಿರುವುವು.

shrinath.udupa@gmail.com

ಸಹ್ಯಪಾದವಿನಿಷ್ಕ್ರಾಂತಾ ಇತ್ಯೇತಾಃ ಸರಿತಾಂ ವರಾಃ ।
ಕೃತಮಾಲಾ ತಾಮ್ರಪರ್ಣೀ ಪುಷ್ಯಜಾ ಪ್ರತ್ಯಲಾವತೀ ॥ ೩೬ ॥

ಮಲಯಾದ್ರಿಸಮುದ್ಭೂತಾಃ ಪುಣ್ಯಾಃ ಶೀತಜಲಾಸ್ತ್ವಿಮಾಃ ।
ಪಿತೃಸೋಮರ್ಷಿಕುಲ್ಯಾ ಚ ವಂಜುಲಾ ತ್ರಿದಿವಾ ಚ ಯಾ ॥ ೩೭ ॥

ಲಾಂಗುಲಿನೀ ವಂಶಕರಾ ಮಹೇಂದ್ರಪ್ರಭವಾಃ ಸ್ಮೃತಾಃ ।
ಸುವಿಕಾಲಾ ಕುಮಾರೀ ಚ ಮನೂಗಾ ಮಂದಗಾಮಿನೀ ॥ ೩೮ ॥

ಕ್ಷಯಾಪಲಾಸಿನೀ ಚೈವ ಶುಕ್ತಿಮತ್ಪ್ರಭವಾಃ ಸ್ಮೃತಾಃ ।
ಸರ್ವಾಃ ಪುಣ್ಯಾಃ ಸರಸ್ವತ್ಯಃ ಸರ್ವಾ ಗಂಗಾಃ ಸಮುದ್ರಗಾಃ ॥ ೩೯ ॥

ವಿಶ್ವಸ್ಯ ಮಾತರಃ ಸರ್ವಾಃ ಸರ್ವಾಃ ಪಾಪಹರಾಃ ಸ್ಮೃತಾಃ ।
ಅನ್ಯಾಃ ಸಹಸ್ರಶಃ ಪ್ರೋಕ್ತಾಃ ಕ್ಷುದ್ರನದ್ಯೋ ದ್ವಿಜೋತ್ತಮಾಃ ॥ ೪೦ ॥

---

೩೬. ಕೃತಮಾಲಾ, ತಾಮ್ರಪರ್ಣೀ, ಪುಷ್ಯಜಾನದಿ, ಪ್ರತ್ಯಲಾವತೀನದಿ, ಈ ಶೀತಲವಾದ ನೀರುಳ್ಳ ಪವಿತ್ರನದಿಗಳು ಮಲಯಗಿರಿಯಿಂದ ಹೊರಟಿರುವುವು.

೩೭. ಪಿತೃಕುಲ್ಯಾ, ಸೋಮಕುಲ್ಯಾ, ಋಷಿಕುಲ್ಯಾ, ವಂಜುಲಾ ತ್ರಿದಿವಾ ಲಾಂಗುಲಿನೀ, ವಂಶಕರಾ ಈ ನದಿಗಳು ಮಹೇಂದ್ರಗಿರಿಯಿಂದ ಹೊರಟಿರುವುವು.

೩೮. ಸುವಿಕಾಲಾ, ಕುಮಾರೀ, ಮನೂಗಾ, ಮಂದಗಾಮಿನೀ, ಕ್ಷಯಾಪಲಾಸಿನೀ ಈ ನದಿಗಳು ಶುಕ್ತಿಮತ್ಪರ್ವತದಿಂದ ಹೊರಟಿರುವುವು.

೩೯-೪೦. ಈ ನದಿಗಳೆಲ್ಲವೂ ಪವಿತ್ರವಾದುವು. ಮಧುರವಾದ ನೀರುಳ್ಳವು. ಇವೆಲ್ಲವೂ ಸಮುದ್ರವನ್ನು ಸೇರುವ ಮಹಾನದಿಗಳು. ಪ್ರಾಣಿಗಳ ಪಾಪಗಳನ್ನು ಹೋಗಲಾಡಿಸುವ ಈ ನದಿಗಳು ಜಗತ್ತಿಗೆ ಮಾತೆಯರಂತೆ ಇರುವುವು. ಇನ್ನೂ ಕೆಲವು ನದಿಗಳು ಮಳೆಗಾಲದಲ್ಲಿ ಮಾತ್ರ ಹರಿಯುವುವು. ಕೆಲವು ಯಾವಾಗಲೂ ಹರಿಯುವುವು. ಇಂತಹ ಕ್ಷುದ್ರನದಿಗಳು ಸಾವಿರಾರು ಇರುವುವು.

shrinath.udupa@gmail.com

ಪ್ರಾವೃಟ್‌ಕಾಲವಹಾಃ ಸಂತಿ ಸದಾ ಕಾಲವಹಾಶ್ಚ ಯಾಃ ।
ಮತ್ಸ್ಯಾ ಮುಕುಟಕುಲ್ಯಾಶ್ಚ ಕುಂತಲಾಃ ಕಾಶಿಕೋಶಲಾಃ ॥ ೪೧ ॥

ಅಂಧ್ರಕಾಶ್ಚ ಕಲಿಂಗಾಶ್ಚ ಶಮಕಾಶ್ಚ ವೃಕೈಃ ಸಹ ।
ಮಧ್ಯದೇಶಾ ಜನಪದಾಃ ಪ್ರಾಯಶೋಽಮೀ ಪ್ರಕೀರ್ತಿತಾಃ ॥ ೪೨ ॥

ಸಹ್ಯಸ್ಯ ಚೋತ್ತರೇ ಯಸ್ತು ಯತ್ರ ಗೋದಾವರೀ ನದೀ ।
ಪೃಥಿವ್ಯಾಮಪಿ ಕೃತ್ಸ್ನಾಯಾಂ ಸಪ್ರದೇಶೋ ಮನೋರಮಃ ॥ ೪೩ ॥

ಗೋವರ್ಧನಪುರಂ ರಮ್ಯಂ ಭಾರ್ಗವಸ್ಯ ಮಹಾತ್ಮನಃ ।
ವಾಹೀಕರಾಟಧಾನಾಶ್ಚ ಸುತೀರಾಃ ಕಾಲತೋಯದಾಃ ॥ ೪೪ ॥

ಅಪರಾಂತಾಶ್ಚ ಶೂದ್ರಾಶ್ಚ ಬಾಹ್ಲಿಕಾಶ್ಚ ಸ ಕೇರಲಾಃ ।
ಗಾಂಧಾರಾ ಯವನಾಶ್ಚೈವ ಸಿಂಧುಸೌವೀರಮದ್ರಕಾಃ ॥ ೪೫ ॥

ಶತದ್ರುಹಾಃ ಕಲಿಂಗಾಶ್ಚ ಪಾರದಾ ಹಾರಭೂಷಿಕಾಃ ।
ಮಾಠರಾಶ್ಚೈವ ಕನಕಾಃ ಕೈಕೇಯಾ ದಂಭಮಾಲಿಕಾಃ ॥ ೪೬ ॥

೪೧-೪೨. ಮತ್ಸ್ಯದೇಶ, ಮುಕುಟಕುಲ್ಯದೇಶ, ಕುಂತಲದೇಶ, ಕಾಶಿ, ಕೋಸಲ, ಆಂಧ್ರ, ಕಲಿಂಗದೇಶ, ಶಮಕದೇಶ, ವೃಕದೇಶ ಇವುಗಳು ಭರತಖಂಡದ ಮಧ್ಯ ದೇಶಗಳು.

೪೩. ಗೋದಾವರೀನದಿಯು ಹರಿಯುವ ಸಹ್ಯಗಿರಿಯಿಂದುತ್ತರಕ್ಕಿರುವ ಪ್ರದೇಶವು ಭೂಮಿಯಲ್ಲೆಲ್ಲಾ ತುಂಬಾ ಮನೋಹರವಾದುದು.

೪೪. ಭಾರ್ಗವವನ, ಗೋವರ್ಧನಪುರ, ಮತ್ತು ವಾಹೀದೇಶ, ಕರಾಡದೇಶ ಧಾನದೇಶ ಇವುಗಳಲ್ಲಿ ಯಾವಾಗಲೂ ಮಳೆಯು ಕಾಲಕಾಲಕ್ಕೆ ಆಗುವುದು.

೪೫-೪೬. ಅಪರಾಂತದೇಶಗಳು, ಶೂದ್ರದೇಶಗಳು, ಬಾಹ್ಲೀಕದೇಶಗಳು, ಕೇರಲ ದೇಶ, ಗಾಂಧಾರದೇಶ, ಯವನದೇಶ, ಸಿಂಧುದೇಶ, ಸೌವೀರದೇಶ, ಮದ್ರದೇಶ, ಶತ ದ್ರುಹದೇಶ, ಕಲಿಂಗದೇಶ, ಪಾರದದೇಶ, ಹಾರಭೂಷಿಕದೇಶ, ಮಾಠರದೇಶ, ಕನಕ ದೇಶ, ಕೇಕಯದೇಶ, ದಂಭಮಾಲಿಕದೇಶ, ಕ್ಷತ್ರಿಯೋಪಮದೇಶ, ವೈಶ್ಯಕುಲ

shrinath.udupa@gmail.com

ಕ್ಷತ್ರಿಯೋಪಮದೇಶಾಶ್ಚ ವೈಶ್ಯಶೂದ್ರಕುಲಾನಿ ಚ ।
ಕಾಂಭೋಜಾಶ್ಚೈವ ವಿಪ್ರೇಂದ್ರಾ ಬರ್ಬರಾಶ್ಚ ಸಲೌಕಿಕಾಃ ॥ ೪೭ ॥

ವೀರಾಶ್ಚೈವ ತುಷಾರಾಶ್ಚ ಪಹ್ಲವಾಧಾಯತಾ ನರಾಃ ।
ಆತ್ರೇಯಾಶ್ಚ ಭರದ್ವಾಜಾಃ ಪುಷ್ಕಲಾಶ್ಚ ದಶೇರಕಾಃ ॥ ೪೮ ॥

ಲಂಪಕಾಃ ಶುನಶೋಕಾಶ್ಚ ಕುಲಿಕಾ ಜಾಂಗಲೈಃ ಸಹ ।
ಔಷಧ್ಯಶ್ಚಲಚಂದ್ರಾಶ್ಚ ಕಿರಾತಾನಾಂ ಚ ಜಾತಯಃ ॥ ೪೯ ॥

ತೋಮರಾ ಹಂಸಮಾರ್ಗಾಶ್ಚ ಕಾಶ್ಮೀರಾಃ ಕರುಣಾಸ್ತಥಾ ।
ಶೂಲಿಕಾಃ ಕುಹಕಾಶ್ಚೈವ ಮಾಗಧಾಶ್ಚ ತಥೈವ ಚ ॥ ೫೦ ॥

ಏತೇ ದೇಶಾ ಉದೀಚ್ಯಾಸ್ತು ಪ್ರಾಚ್ಯಾನ್ ದೇಶಾನ್ನಿಬೋಧತ ।
ಅಂಧ್ರಾ ವಾಮಾಂಕುರಾಕಾಶ್ಚ ವಲ್ಲಕಾಶ್ಚ ಮುಖಾಂತಕಾಃ ॥ ೫೧ ॥

ತಥಾಽಪರೇಽಂಗಾ ವಂಗಾಶ್ಚ ಮಲದಾ ಮಾಲವರ್ತಿಕಾಃ ।
ಭದ್ರತುಂಗಾಃ ಪ್ರತಿಜಯಾ ಭಾರ್ಯಾಂಗಾಶ್ಚಾಪಮರ್ದಕಾಃ ॥ ೫೨ ॥

ಶೂದ್ರಕುಲ, ಕಾಂಭೋಜದೇಶ, ಬರ್ಬರದೇಶ, ಲೌಕಿಕದೇಶ ಈ ದೇಶಗಳೆಲ್ಲವೂ ಉತ್ತರದೇಶಗಳು.

೪೮-೫೦. ವೀರದೇಶ, ತುಷಾರದೇಶ, ಪಹ್ಲವದೇಶ, ಧಾಯತದೇಶ, ಆತ್ರೇಯ ಗೋತ್ರದ ಜನಗಳಿರುವ ದೇಶ, ಭಾರದ್ವಾಜಗೋತ್ರದ ಜನಗಳಿರುವ ದೇಶ, ಪುಷ್ಕಲ ದೇಶ, ದಶೇರಕದೇಶ, ಲಂಪಕದೇಶ, ಶುನಶೋಕದೇಶ, ಕುಲಿಕದೇಶ, ಜಾಂಗಲದೇಶ, ಓಷಧಿಲತೆಗಳಿರುವದೇಶ, ಚಲಚಂದ್ರದೇಶ, ಮಗಧದೇಶ, ಕಿರಾತದೇಶ, ತೋಮರ ದೇಶ, ಹಂಸಮಾರ್ಗದೇಶ, ಕಾಶ್ಮೀರದೇಶ, ಕರುಣದೇಶ, ಶೂಲಿಕಾದೇಶ, ಕುಹಕ ದೇಶ ಇವೆಲ್ಲವೂ ಉತ್ತರದೇಶಗಳು. ಇನ್ನು ಪೂರ್ವದೇಶಗಳನ್ನು ಹೇಳುವೆನು ಕೇಳಿರಿ.

೫೧-೫೩. ಅಂಧ್ರದೇಶ, ವಾಮಾಂಕುರದೇಶ, ವಲ್ಲಕದೇಶ, ಮುಖಾಂತಕದೇಶ ಅಂಗದೇಶ, ವಂಗದೇಶ, ಮಲದದೇಶ, ಮಾಲವದೇಶ, ಭದ್ರತುಂಗದೇಶ, ಪ್ರತಿಜಯ ದೇಶ, ಭಾರ್ಯಾಂಗದೇಶ, ಅಪಮರ್ದಕದೇಶ, ಪ್ರಾಗ್ಜ್ಯೋತಿಷದೇಶ, ಮದ್ರದೇಶ,

shrinath.udupa@gmail.com

ಪ್ರಾಗ್ಜ್ಯೋತಿಷಾಶ್ಚ ಮದ್ರಾಶ್ಚ ವಿದೇಹಾಸ್ತಾಮ್ರಲಿಪ್ತಕಾಃ ।
ಮಲ್ಲಾ ಮಗಧಕಾ ನಂದಾಃ ಪ್ರಾಚ್ಯಾ ಜನಪದಾಸ್ತಥಾ ॥ ೫೩ ॥

ಅಥಾಪರೇ ಜನಪದಾ ದಕ್ಷಿಣಾಪಥವಾಸಿನಃ ।
ಪೂರ್ಣಾಶ್ಚ ಕೇವಲಾಶ್ಚೈವ ಗೋಲಾಂಗೂಲಾಸ್ತಥೈವ ಚ ॥ ೫೪ ॥

ಋಷಿಕಾ ಮುಷಿಕಾಶ್ಚೈವ ಕುಮಾರಾ ರಾಮಠಾಃ ಶಕಾಃ ।
ಮಹಾರಾಷ್ಟ್ರಾ ಮಾಹಿಷಕಾಃ ಕಲಿಂಗಾಶ್ಚೈವ ಸರ್ವಶಃ ॥ ೫೫ ॥

ಆಭೀರಾಃ ಸಹವೈಶಿಕ್ಯಾ ಅಟವ್ಯಾಃ ಸರವಾಶ್ಚ ಯೇ ।
ಪುಲಿಂದಾಶ್ಚೈವ ಮೌಲೇಯಾ ವೈದರ್ಭಾ ದಂಡಕೈಃ ಸಹ ॥ ೫೬ ॥

ಪೌಲಿಕಾ ಮೌಲಿಕಾಶ್ಚೈವ ಅಶ್ಮಕಾ ಭೋಜವರ್ಧನಾಃ ।
ಕೌಲಿಕಾಃ ಕುಂತಲಾಶ್ಚೈವ ದಂಭಕಾ ನೀಲಕಾಲಕಾಃ ॥ ೫೭ ॥

ದಾಕ್ಷಿಣಾತ್ಯಾಸ್ತ್ವಮೀ ದೇಶಾ ಅಪರಾಂತಾನ್ನಿಬೋಧತ ।
ಶೂರ್ಪಾರಕಾಃ ಕಾಲಿಧನಾ ಲೋಲಾಸ್ತಾಲಕಟೈಃ ಸಹ ॥ ೫೮ ॥

ವಿದೇಹದೇಶ, ತಾಮ್ರಲಿಪ್ತಕದೇಶ, ಮಲ್ಲದೇಶ, ಮಗಧದೇಶ, ನಂದದೇಶ ಈ ದೇಶಗಳು ಪೂರ್ವದೇಶಗಳು.

೫೪-೫೭. ಪೂರ್ಣದೇಶ, ಕೇವಲದೇಶ, ಗೋಲಾಂಗೂಲದೇಶ, ಋಷಿಕದೇಶ ಕುಮಾರದೇಶ, ರಾಮಠದೇಶ, ಶಕದೇಶ, ಮಹಾರಾಷ್ಟ್ರದೇಶ, ಮಾಹಿಷಕದೇಶ ಕಲಿಂಗದೇಶ, ಆಭೀರದೇಶ, ವೈಶಿಕ್ಯದೇಶ, ಅಟವ್ಯದೇಶ, ಸರವದೇಶ, ಪುಲಿಂದದೇಶ ಮೌಲೇಯದೇಶ, ವಿದರ್ಭದೇಶ, ದಂಡಕದೇಶ, ಪೌಲಿಕದೇಶ, ಮೌಲಿಕದೇಶ, ಅಶ್ಮಕದೇಶ, ಭೋಜವರ್ಧನದೇಶ, ಕೌಲಿಕದೇಶ, ಕುಂತಲದೇಶ, ದಂಭಕದೇಶ, ನೀಲಕಾಲದೇಶ, ಇವೆಲ್ಲವೂ ದಕ್ಷಿಣದೇಶಗಳು.

೫೮. ಶೂರ್ಪಾರಕ, ಕಾಲಿಧನ, ಲೋಲ, ತಾಲಕಟ, ಈ ದೇಶಗಳು ಅಪರಾಂತ ದೇಶಗಳು. ವಿಂಧ್ಯಗಿರಿಯ ತಪ್ಪಲಲ್ಲಿರುವ ದೇಶಗಳನ್ನು ಕೇಳಿರಿ.

shrinath.udupa@gmail.com

ಇತ್ಯೇತೇ ಹ್ಯಪರಾಂತಾಶ್ಚ ಶೃಣುಧ್ವಂ ವಿಂಧ್ಯವಾಸಿನಃ ।
ಮಲಜಾಃ ಕರ್ಕಶಾಶ್ಚೈವ ಮೇಲಕಾಶ್ಚೋಲಕೈಃ ಸಹ ॥ ೫೯ ॥

ಉತ್ತಮಾರ್ಣಾ ದಶಾರ್ಣಾಶ್ಚ ಭೋಜಾಃ ಕಿಷ್ಕಿಂಧಕೈಃ ಸಹ ।
ತೋಷಲಾಃ ಕೋಶಲಾಶ್ಚೈವ ತ್ರೈಪುರಾ ವೈದಿಶಾಸ್ತಥಾ ॥ ೬೦ ॥

ತುಂಬುರಾಸ್ತು ಚರಾಶ್ಚೈವ ಯವನಾಃ ಪವನೈಃ ಸಹ ।
ಅಭಯಾ ರುಂಡಿಕೇರಾಶ್ಚ ಚರ್ಚರಾ ಹೋತ್ರಧರ್ತಯಃ ॥ ೬೧ ॥

ಏತೇ ಜನಪದಾಃ ಸರ್ವೇ ತತ್ರ ವಿಂಧ್ಯನಿವಾಸಿನಃ ।
ಅತೋ ದೇಶಾನ್ಪ್ರವಕ್ಷ್ಯಾಮಿ ಪರ್ವತಾಶ್ರಯಿಣಶ್ಚ ಯೇ ॥ ೬೨ ॥

ನೀಹಾರಾಸ್ತುಷಮಾರ್ಗಾಶ್ಚ ಕುರವಸ್ತುಂಗಣಾಃ ಖಸಾಃ ।
ಕರ್ಣಪ್ರಾವರಣಾಶ್ಚೈವ ಊರ್ಣಾ ದರ್ಘಾಃ ಸಕುಂತಲಾಃ ॥ ೬೩ ॥

ಚಿತ್ರಮಾರ್ಗಾ ಮಾಲವಾಶ್ಚ ಕಿರಾತಾಸ್ತೋಮರೈಃ ಸಹ ।
ಕೃತತ್ರೇತಾದಿಕಾಶ್ಚಾತ್ರ ಚತುರ್ಯುಗಕೃತೋ ವಿಧಿಃ ॥ ೬೪ ॥

೫೯–೬೨. ಮಲಜ, ಕರ್ಕಶ, ಮೇಲಕ, ಚೋಲ, ಉತ್ತಮರ್ಣ, ದಶಾರ್ಣ ಭೋಜ, ಕಿಷ್ಕಿಂಧ, ತೋಷಲ, ಕೋಶಲ, ತ್ರೈಪುರ, ವೈದಿಶ, ತುಂಬುರ, ಚರ ಯವನ, ಪವನ, ಅಭಯ, ಚರ್ಚರ, ಹೊತ್ರಧರ್ತಿ, ರುಂಡಿಕೇರ ಈ ದೇಶಗಳು ವಿಂಧ್ಯಪರ್ವತದಲ್ಲಿನ ದೇಶಗಳು. ಮಿಕ್ಕಪರ್ವತಗಳೂ ಇರುವ ದೇಶಗಳನ್ನು ಹೇಳುವೆನು.

೬೩. ನೀಹಾರದೇಶ, ತುಷಮಾರ್ಗ, ಕುರು, ತುಂಗಣ, ಖಸ, ಕರ್ಣಪ್ರಾವರಣ, ಊರ್ಣ, ದೀರ್ಘ, ಕುಂತಕ, ಚಿತ್ರಮಾರ್ಗ, ಮಾಲವ, ಕಿರಾತ, ತೋಮರ ಈ ದೇಶಗಳು ಮಿಕ್ಕ ಪರ್ವತಗಳ ತಪ್ಪಲಲ್ಲಿರುವವು.

೬೪. ಹೀಗೆ ಭಾರತವು ಒಂಭತ್ತು ದೇಶಗಳುಳ್ಳದಾಗಿದೆ. ಕೃತಯುಗ ತ್ರೇತಾಯುಗ, ದ್ವಾಪರಯುಗ, ಕಲಿಯುಗ ಈ ನಾಲ್ಕು ಯುಗಗಳ ನಿಯಮವು ಇಲ್ಲಿ ಇದೆ.

shrinath.udupa@gmail.com

ಏವಂ ತು ಭಾರತಂ ವರ್ಷಂ ನವಸಂಸ್ಥಾನಸಂಸ್ಥಿತಂ ।
ದಕ್ಷಿಣೇ ಪರತೋ ಯಸ್ಯ ಪೂರ್ವೇ ಚೈವ ಮಹೋದಧಿಃ ॥ ೧೫ ॥

ಹಿಮವಾನುತ್ತರೇಣಾಸ್ಯ ಕಾರ್ಮುಕಸ್ಯ ಯಥಾ ಗುಣಃ ।
ತದೇತದ್ಭಾರತಂ ವರ್ಷಂ ಸರ್ವಬೀಜಂ ದ್ವಿಜೋತ್ತಮಾಃ ॥ ೧೬ ॥

ಬ್ರಹ್ಮತ್ವಮಮರೇಶತ್ವಂ ದೇವತ್ವಂ ಮರುತಾಂ ತಥಾ ।
ಮೃಗಯಕ್ಷಾಪ್ಸರೋಯೋನಿಂ ತದ್ವತ್ಸರ್ಪಸರೀಸೃಪಾಃ ॥ ೧೭ ॥

ಸ್ಥಾವರಾಣಾಂ ಚ ಸರ್ವೇಷಾಂ ಮಿತೋ ವಿಪ್ರಾಃ ಶುಭಾಶುಭೈಃ ।
ಪ್ರಯಾಂತಿ ಕರ್ಮಭೂರ್ವಿಪ್ರಾ ನಾನ್ಯಾ ಲೋಕೇಷು ವಿದ್ಯತೇ ॥ ೧೮ ॥

ದೇವಾನಾಮಪಿ ಭೋ ವಿಪ್ರಾಃ ಸದೈವೈಷ ಮನೋರಥಃ ।
ಅಪಿ ಮಾನುಷ್ಯಮಾಪ್ಸ್ಯಾಮೋ ದೇವತ್ವಾತ್ಪ್ರಚ್ಯುತಾಃ ಕ್ಷಿತೌ ॥ ೧೯ ॥

ಮನುಷ್ಯಃ ಕುರುತೇ ಯತ್ತು ತನ್ನ ಶಕ್ಯಂ ಸುರಾಸುರೈಃ ।
ತತ್ಕರ್ಮ ನಿಗಡಗ್ರಸ್ತೈಸ್ತತ್ಕರ್ಮಕ್ಷಪಣೋನ್ಮುಖೈಃ ॥ ೨೦ ॥

೧೫. ಈ ಭಾರತದ ದಕ್ಷಿಣ ಮತ್ತು ಪೂರ್ವಪಶ್ಚಿಮಗಳಲ್ಲಿ ಸಾಗರವಿರುವುದು. ಉತ್ತರದಲ್ಲಿ ಹಿಮಾಲಯವು ಬಿಲ್ಲಿನ ಹೆದೆಯಂತೆ ತೋರುತ್ತಲಿರುವುದು.

೧೬–೧೭. ಈ ಭಾರತವು ಎಲ್ಲಕ್ಕೂ ಕಾರಣವಾಗಿರುವುದು. ಇಲ್ಲಿಂದಲೇ ಪುಣ್ಯಕರ್ಮಗಳನ್ನು ಮಾಡಿ ಬ್ರಹ್ಮಪದವಿ, ದೇವೇಂದ್ರಪದವಿಗಳನ್ನು ಪಡೆಯಬಹುದು. ದೇವತ್ವವನ್ನೂ ಪಡೆಯಬಹುದು. ವಾಯು, ಯಕ್ಷರು, ಅಪ್ಸರೆಯರೂ ಆಗಬಹುದು. ಪಾಪಕರ್ಮಗಳನ್ನು ಮಾಡಿದರೆ ಮೃಗ, ಹಾವು, ಕಲ್ಲು, ಮರ ಮುಂತಾದ ಜನ್ಮಗಳೂ ಉಂಟಾಗುವುವು.

೧೮–೧೯. ಈ ಭಾರತಭೂಮಿಯನ್ನು ಬಿಟ್ಟರೆ ಬೇರೆ ಕರ್ಮಭೂಮಿಯಿಲ್ಲವು. ದೇವತೆಗಳೂ ಸಹ ಈ ದೇವತ್ವವು ಕಳೆದಮೇಲೆ ನಾವು ಭಾರತದಲ್ಲಿ ಮನುಷ್ಯರಾಗಿ ಜನಿಸುವೆವೆ? ಎಂದು ಸದಾ ಅಪೇಕ್ಷಿಸುವರು.

೨೦. ಮನುಷ್ಯರು ಮಾಡಬಹುದಾದ ಕರ್ಮಗಳನ್ನು ದೇವತೆಗಳೂ, ಅಸುರರೂ ಮಾಡಲಾರರು. ಅವರೆಲ್ಲರೂ ತಾವು ತಾವು ಮಾಡಿದ ಕರ್ಮಗಳ ಹಿಡಿತಕ್ಕೊಳಪಟ್ಟು

shrinath.udupa@gmail.com

ನ ಭಾರತಸಮಂ ವರ್ಷಂ ಪೃಥಿವ್ಯಾಮಸ್ತಿ ಭೋ ದ್ವಿಜಾಃ ।
ಯತ್ರ ವಿಪ್ರಾದಯೋ ವರ್ಣಾಃ ಪ್ರಾಪ್ನುವಂತ್ಯಭಿವಾಂಛಿತಂ ॥ ೭೧ ॥

ಧನ್ಯಾಸ್ತೇ ಭಾರತೇ ವರ್ಷೇ ಜಾಯಂತೇ ಯೇ ನರೋತ್ತಮಾಃ ।
ಧರ್ಮಾರ್ಥಕಾಮಮೋಕ್ಷಾಣಾಂ ಪ್ರಾಪ್ನುವಂತಿ ಮಹಾಫಲಂ ॥ ೭೨ ॥

ಪ್ರಾಪ್ಯತೇ ಯತ್ರ ತಪಸಃ ಫಲಂ ಪರಮದುರ್ಲಭಂ ।
ಸರ್ವದಾನಫಲಂ ಚೈವ ಸರ್ವಯಜ್ಞಫಲಂ ತಥಾ ॥ ೭೩ ॥

ತೀರ್ಥಯಾತ್ರಾಫಲಂ ಚೈವ ಗುರುಸೇವಾಫಲಂ ತಥಾ ।
ದೇವತಾರಾಧನಫಲಂ ಸ್ವಾಧ್ಯಾಯಸ್ಯ ಫಲಂ ದ್ವಿಜಾಃ ॥ ೭೪ ॥

ಅದರ ಬಂಧನದಲ್ಲಿರುವರು. ಆ ಕರ್ಮಬಂಧನವು ಹೋಗಲೆಂದು ಸದಾ ದೇವತಾನವರು ಆಶಿಸುವರು.

೭೧. ಭೂಮಿಯಲ್ಲಿ ಭಾರತದಂತಹ ದೇಶವೇ ಇಲ್ಲವು. ಅಲ್ಲಿ ಬ್ರಾಹ್ಮಣ ಮೊದಲಾದವರು ತಮ್ಮ ತಮ್ಮ ಕರ್ಮಗಳನ್ನು ಮಾಡಿ ಇಷ್ಟಾರ್ಥಗಳನ್ನು ಪಡೆಯು ವರು.

೭೨. ಭಾರತದಲ್ಲಿ ಹುಟ್ಟುವ ಮಾನವಶ್ರೇಷ್ಠರೇ ಧನ್ಯರು. ಅಲ್ಲಿ ಅವರು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಈ ನಾಲ್ಕು ಪುರುಷಾರ್ಥಗಳನ್ನೂ ಪಡೆಯು ವರು.

೭೩–೭೪. ಆ ಭಾರತದಲ್ಲಿ ಮಾನವರು ತಪಸ್ಸನ್ನು ಮಾಡಿ ದುರ್ಲಭವಾದ ತಹ ಮಹಾಫಲಗಳನ್ನೂ ಪಡೆಯುವರು. ದಾನವನ್ನು ಮಾಡಿ ಅದರ ಫಲವನ್ನು ಪಡೆಯುವರು. ಯಜ್ಞಫಲಗಳನ್ನು ಪಡೆಯುವರು. ತೀರ್ಥಯಾತ್ರೆಯ ಫಲವನ್ನು ಪಡೆಯುವರು. ಗುರುಸೇವೆಯ ಫಲವನ್ನು ಪಡೆಯುವರು. ದೇವತೆಗಳನ್ನರ್ಚಿಸಿ ಅದರ ಫಲವನ್ನು ಪಡೆಯುವರು. ವೇದಾಧ್ಯಯನಮಾಡಿ ಆ ಫಲವನ್ನು ಪಡೆಯುವರು.

shrinath.udupa@gmail.com

ಯತ್ರ ದೇವಾಃ ಸದಾ ಹೃಷ್ಟಾ ಜನ್ಮ ವಾಂಛಂತಿ ಶೋಭನಂ ।
ನಾನಾವ್ರತಫಲಂ ಚೈವ ನಾನಾಶಾಸ್ತ್ರಫಲಂ ತಥಾ ॥ ೭೫ ॥

ಅಹಿಂಸಾದಿಫಲಂ ಸಮ್ಯಕ್ಫಲಂ ಸರ್ವಾಭಿವಾಂಛಿತಂ ।
ಬ್ರಹ್ಮಚರ್ಯಫಲಂ ಚೈವ ಗಾರ್ಹಸ್ಥ್ಯೇನ ಚ ಯತ್ಫಲಂ ॥ ೭೬ ॥

ಯತ್ಫಲಂ ವನವಾಸೇನ ಸಂನ್ಯಾಸೇನ ಚ ಯತ್ಫಲಂ ।
ಇಷ್ಟಾಪೂರ್ತಫಲಂ ಚೈವ ತಥಾನ್ಯಚ್ಛುಭಕರ್ಮಣಾಂ ॥ ೭೭ ॥

ಪ್ರಾಪ್ಯತೇ ಭಾರತೇ ವರ್ಷೇ ನ ಚಾನ್ಯತ್ರ ದ್ವಿಜೋತ್ತಮಾಃ ।
ಕಃ ಶಕ್ನೋತಿ ಗುಣಾನ್ ವಕ್ತುಂ ಭಾರತಸ್ಯಾಖಿಲಾನ್ ದ್ವಿಜಾಃ ॥ ೭೮ ॥

ಏವಂ ಸಮ್ಯಙ್ಮಯಾ ಪ್ರೋಕ್ತಂ ಭಾರತಂ ವರ್ಷಮುತ್ತಮಂ ।
ಸರ್ವಪಾಪಹರಂ ಪುಣ್ಯಂ ಧನ್ಯಂ ಬುದ್ಧಿವಿವರ್ಧನಂ ॥ ೭೯ ॥

೭೫–೭೭. ದೇವತೆಗಳೂ ಜನ್ಮವನ್ನುಪೇಕ್ಷಿಸುವ ಈ ಭಾರತಭೂಮಿಯಲ್ಲಿ ಮಾನವರು ಅನೇಕಬಗೆಯ ವ್ರತಗಳನ್ನು ಮಾಡಿ ಫಲವನ್ನು ಪಡೆಯುವರು. ಶಾಸ್ತ್ರಗಳನ್ನೋದಿ ಅದರಂತೆ ಆಚರಿಸಿ ತಕ್ಕ ಫಲವನ್ನು ಪಡೆಯುವರು. ಅಹಿಂಸೆಯ ಫಲವನ್ನು ಪಡೆಯುವರು. ಬ್ರಹ್ಮಚರ್ಯಾಶ್ರಮ, ಗ್ರಹಸ್ಥಾಶ್ರಮ, ವಾನಪ್ರಸ್ಥಾಶ್ರಮ ಸಂನ್ಯಾಸಾಶ್ರಮ ಇವುಗಳನ್ನಾಚರಿಸಿ ಅವುಗಳಿಗೆ ತಕ್ಕ ಫಲಗಳನ್ನು ಪಡೆಯುವರು. ಕೆರೆಕಟ್ಟೆಗಳನ್ನು ಕಟ್ಟಿಸಿ, ಭಾವಿಗಳನ್ನು ತೋಡಿಸಿ, ಸಾಲುಮರಗಳನ್ನು ಹಾಕಿಸಿ, ಉಪವನಗಳನ್ನು ನಿರ್ಮಿಸಿ ಅದಕ್ಕೆ ತಕ್ಕ ಫಲಗಳನ್ನು ಪಡೆಯುವರು, ಮತ್ತು ದೇವಾಲಯ ಮುಂತಾದುವುಗಳನ್ನು ಕಟ್ಟಿಸಿ ಅದರ ಫಲವನ್ನು ಪಡೆಯುವರು.

೭೮. ಈ ಭಾರತದಲ್ಲಿ ಇನ್ನೂ ಅನೇಕ ಶುಭಕರ್ಮಗಳನ್ನು ಮಾಡಿ ಫಲವನ್ನನುಭವಿಸುವರು. ಇನ್ನೆಲ್ಲಿಯೂ ಹೀಗಿರುವುದಿಲ್ಲ. ಇಂತಹ ಭಾರತದ ಗುಣಗಳನ್ನು ಎಲ್ಲವನ್ನೂ ವರ್ಣಿಸಲು ಯಾವನು ಸಮರ್ಥನಾಗುವನು ?

೭೯. ಹೀಗೆ ನಾನು ಭಾರತವನ್ನು ನಿಮಗೆ ವರ್ಣಿಸಿರುವೆನು. ಈ ಭಾರತವು ಪುಣ್ಯವಾದುದು. ಪಾಪವನ್ನು ಹೋಗಲಾಡಿಸುವುದು. ಧನಧಾನ್ಯಗಳನ್ನುಂಟುಮಾಡುವುದು. ಈ ಭಾರತಚರಿತ್ರೆಯನ್ನು ಕೇಳಿದವರಿಗೆ ಮೇಲಿನ ಫಲಗಳೆಲ್ಲವೂ ಲಭಿಸುವುದಲ್ಲದೆ ಬುದ್ಧಿಯೂ ವಿಶಾಲವಾಗುವುದು.

shrinath.udupa@gmail.com

ಯ ಇದಂ ಶೃಣುಯಾನ್ನಿತ್ಯಂ ಪಠೇದ್ವಾ ನಿಯತೇಂದ್ರಿಯಃ ।
ಸರ್ವಪಾಪೈರ್ವಿನಿರ್ಮುಕ್ತೋ ವಿಷ್ಣುಲೋಕಂ ಸ ಗಚ್ಛತಿ ॥ ೮೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭ್ವೃಷಿಸಂವಾದೇ ಭಾರತವರ್ಷಾನುಕೀರ್ತನಂ ನಾಮ ಸಪ್ತವಿಂಶೋಽಧ್ಯಾಯಃ

---

೮೦. ಈ ಭಾರತದ ಮಾಹಾತ್ಮ್ಯವನ್ನು ಶ್ರದ್ಧೆಯಿಂದ ಕೇಳಿದರೂ, ಇಲ್ಲವೇ ಓದಿದರೂ ಮಾನವನು ಸಕಲ ಪಾಪಗಳನ್ನೂ ಕಳೆದುಕೊಂಡವನಾಗಿ ವಿಷ್ಣುಲೋಕವನ್ನು ಪಡೆಯುವನು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಸ್ವಯಂಭುಋಷಿಸಂವಾದದಲ್ಲಿ ಭಾರತವರ್ಷಕೀರ್ತನವೆಂಬ ಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಅಷ್ಟವಿಂಶೋಽಧ್ಯಾಯಃ

॥ ಬ್ರಹ್ಮೋವಾಚ ॥

ತತ್ರಾಸ್ತೇ ಭಾರತೇ ವರ್ಷೇ ದಕ್ಷಿಣೋದಧಿಸಂಸ್ಥಿತಃ ।
ಓಂಡ್ರದೇಶ ಇತಿ ಖ್ಯಾತಃ ಸ್ವರ್ಗಮೋಕ್ಷಪ್ರದಾಯಕಃ ॥ ೧ ॥

ಸಮುದ್ರಾದುತ್ತರಂ ತಾವದ್ಯಾವದ್ವಿರಜಮಂಡಲಂ ।
ದೇಶೋಽಸೌ ಪುಣ್ಯಶೀಲಾನಾಂ ಗುಣೈಃ ಸರ್ವೈರಲಂಕೃತಃ ॥ ೨ ॥

ಇಪ್ಪತ್ತೆಂಟನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು.—ಎಲೈ ಮುನಿಗಳೇ ! ಆ ಭಾರತದಲ್ಲಿ ದಕ್ಷಿಣ ಸಮುದ್ರದ ತೀರದಲ್ಲಿ ಸ್ವರ್ಗಪ್ರದವೂ, ಮುಕ್ತಿಪ್ರದವೂ ಆದ ಓಂಡ್ರವೆಂಬ ದೇಶವಿರುವುದು.

೨. ಸಮುದ್ರದಿಂದ ಉತ್ತರಕ್ಕಿರುವ ವಿರಜಮಂಡಲದವರೆಗೂ ಆ ದೇಶವು ವ್ಯಾಪಿಸಿರುವುದು. ಆ ದೇಶವು ಸಕಲ ಗುಣಗಳಿಂದಲೂ ಕೂಡಿರುವುದು. ಅಲ್ಲಿ ಪುಣ್ಯವಂತರಾದ ಮಾನವರು ವಾಸಮಾಡುವರು.

shrinath.udupa@gmail.com

ತತ್ರ ದೇಶಪ್ರಸೂತಾ ಯೇ ಬ್ರಾಹ್ಮಣಾಃ ಸಂಯತೇಂದ್ರಿಯಾಃ ।
ತಪಃಸ್ವಾಧ್ಯಾಯನಿರತಾ ವಂದ್ಯಾಃ ಪೂಜ್ಯಾಶ್ಚ ತೇ ಸದಾ ॥ ೩ ॥

ಶ್ರಾದ್ಧೇ ದಾನೇ ವಿವಾಹೇ ಚ ಯಜ್ಞೇ ವಾಚಾರ್ಯಕರ್ಮಣಿ ।
ಪ್ರಶಸ್ತಾಃ ಸರ್ವಕಾರ್ಯೇಷು ತತ್ರ ದೇಶೋದ್ಭವಾ ದ್ವಿಜಾಃ ॥ ೪ ॥

ಷಟ್ಕರ್ಮನಿರತಾಸ್ತತ್ರ ಬ್ರಾಹ್ಮಣಾ ವೇದಪಾರಗಾಃ ।
ಇತಿಹಾಸವಿದಶ್ಚೈವ ಪುರಾಣಾರ್ಥವಿಶಾರದಾಃ ॥ ೫ ॥

ಸರ್ವಶಾಸ್ತ್ರಾರ್ಥಕುಶಲಾ ಯಜ್ವಾನೋ ವೀತಮತ್ಸರಾಃ ।
ಅಗ್ನಿಹೋತ್ರರತಾಃ ಕೇಚಿತ್ಕೇಚಿತ್ಸ್ಮಾರ್ತಾಗ್ನಿತತ್ಪರಾಃ ॥ ೬ ॥

ಪುತ್ರದಾರಧನೈರ್ಯುಕ್ತಾ ದಾತಾರಃ ಸತ್ಯವಾದಿನಃ ।
ನಿವಸಂತ್ಯುತ್ಕಲೇ ಪುಣ್ಯೇ ಯಜ್ಞೋತ್ಸವವಿಭೂಷಿತೇ ॥ ೭ ॥

---

೩. ಆ ದೇಶದಲ್ಲಿನ ಬ್ರಾಹ್ಮಣರು ಜಿತೇಂದ್ರಿಯರೂ ತಪಸ್ಸು, ವೇದಾಧ್ಯಯನಗಳನ್ನು ಸದಾ ಮಾಡುವವರೂ ಆಗಿರುವರು. ಅವರು ಸದಾ ಪೂಜ್ಯರೂ ಯೋಗ್ಯರೂ ಆಗಿರುವರು.

೪. ಆ ಓಂಡ್ರ (ಉತ್ಕಲ) ದೇಶದ ಬ್ರಾಹ್ಮಣರು ಶ್ರಾದ್ಧ, ದಾನ, ಮದುವೆ, ಯಜ್ಞ, ಆಚಾರ್ಯತ್ವ ಮುಂತಾದ ಕಾರ್ಯಗಳಲ್ಲಿ ಸಮರ್ಥರಾಗಿರುವರು.

೫. ಅಲ್ಲಿಯ ವಿಪ್ರರು ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ ಪ್ರತಿಗ್ರಹಗಳೆಂಬ ಆರು ಕರ್ಮಗಳನ್ನೂ ಅನುಷ್ಠಾನದಲ್ಲಿಟ್ಟುಕೊಂಡಿರುವರು. ಅವರು ವೇದವಿತ್ತುಗಳು; ಇತಿಹಾಸಗಳನ್ನು ಬಲ್ಲವರು; ಪುರಾಣಗಳನ್ನು ಚೆನ್ನಾಗಿ ತಿಳಿದಿರುವರು.

೬. ಆ ಬ್ರಾಹ್ಮಣರೆಲ್ಲರೂ ಶಾಸ್ತ್ರಗಳೆಲ್ಲವರಲ್ಲೂ ಪಂಡಿತರು. ವಿಧಿಪೂರ್ವಕವಾಗಿ ಯಾಗಮಾಡಿದ ದೀಕ್ಷಿತರು. ಮಾತ್ಸರ್ಯವಿಲ್ಲದವರು. ಅವರಲ್ಲಿ ಕೆಲವರು ನಿತ್ಯವೂ ಅಗ್ನಿಹೋತ್ರವನ್ನು ಮಾಡುವರು. ಕೆಲವರು ನಿತ್ಯವೂ ಔಪಾಸನವನ್ನು ಮಾಡುವರು.

೭. ಆ ವಿಪ್ರರು ಸತ್ಪುತ್ರರಿಂದಲೂ ಸುಗುಣಿಯಾದ ಹೆಂಡತಿಯಿಂದಲೂ, ಸಂಪತ್ತಿನಿಂದಲೂ, ಔದಾರ್ಯದಿಂದಲೂ, ಸತ್ಯವಚನದಿಂದಲೂ ಕೂಡಿದ್ದು ನಿತ್ಯವೂ ಯಜ್ಞವು ನಡೆಯುತ್ತಲಿರುವ ಆ ಉತ್ಕಲದೇಶದಲ್ಲಿ ವಾಸವಾಗಿರುವರು.

shrinath.udupa@gmail.com

ಇತರೇಽಪಿ ತ್ರಯೋ ವರ್ಣಾಃ ಕ್ಷತ್ರಿಯಾದ್ಯಾಃ ಸುಸಂಯುತಾಃ ।
ಸ್ವಕರ್ಮನಿರತಾಃ ಶಾಂತಾಸ್ತತ್ರ ತಿಷ್ಠಂತಿ ಧಾರ್ಮಿಕಾಃ ॥ ೮ ॥

ಕೋಣಾದಿತ್ಯ ಇತಿ ಖ್ಯಾತಸ್ತಸ್ಮಿನ್ದೇಶೇ ವ್ಯವಸ್ಥಿತಃ ।
ಯಂ ದೃಷ್ಟ್ವಾ ಭಾಸ್ಕರಂ ಮರ್ತ್ಯಃ ಸರ್ವಪಾಪೈಃ ಪ್ರಮುಚ್ಯತೇ ॥ ೯ ॥

॥ ಮುನಯ ಊಚುಃ ॥

ಶ್ರೋತುಮಿಚ್ಛಾಮ ತದ್ ಬ್ರೂಹಿ ಕ್ಷೇತ್ರಂ ಸೂರ್ಯಸ್ಯ ಸಾಂಪ್ರತಂ ।
ತಸ್ಮಿನ್ ದೇಶೇ ಸುರಶ್ರೇಷ್ಠ ಯತ್ರಾಸ್ತೇ ಸ ದಿವಾಕರಃ ॥ ೧೦ ॥

॥ ಬ್ರಹ್ಮೋವಾಚ ॥

ಲವಣಸ್ಯೋದಧೇಸ್ತೀರೇ ಪವಿತ್ರೇ ಸುಮನೋಹರೇ ।
ಸರ್ವತ್ರ ವಾಲುಕಾಕೀರ್ಣೇ ದೇಶೇ ಸರ್ವಗುಣಾನ್ವಿತೇ ॥ ೧೧ ॥

ಚಂಪಕಾಶೋಕಬಕುಲೈಃ ಕರವೀರೈಃ ಸಪಾಟಲೈಃ ।
ಪುನ್ನಾಗೈಃ ಕರ್ಣಿಕಾರೈಶ್ಚ ಬಕುಲೈರ್ನಾಗಕೇಸರೈಃ ॥ ೧೨ ॥

---

೮. ಮಿಕ್ಕ ಕ್ಷತ್ರಿಯರು ಮೊದಲಾದ ಮೂರುವರ್ಣದವರೂ ಸಹ ಜಿತೇಂದ್ರಿಯರೂ, ಶಾಂತರೂ, ಆಗಿದ್ದು ತಮ್ಮ ತಮ್ಮ ಕರ್ಮಗಳನ್ನು ಮಾಡುತ್ತಾ ಧಾರ್ಮಿಕರಾಗಿರುವರು.

೯. ಆ ದೇಶದಲ್ಲಿ ಸೂರ್ಯನು ಕೋಣಾದಿತ್ಯನೆಂಬ ಹೆಸರಿನಿಂದ ನೆಲಸಿರುವನು. ಆ ಸೂರ್ಯಮೂರ್ತಿಯನ್ನು ದರ್ಶನಮಾಡಿದರೆ ಸಕಲಪಾಪಗಳೂ ನಾಶವಾಗುವುವು.

೧೦. ಮುನಿಗಳು ಪ್ರಶ್ನಿಸಿದರು.—ಓ ಬ್ರಹ್ಮದೇವ! ಸೂರ್ಯನು ಆ ದೇಶದಲ್ಲಿ ಎಲ್ಲಿ ನೆಲಸಿರುವನು? ಆ ಕೋಣಾದಿತ್ಯಕ್ಷೇತ್ರ ವಿಷಯವನ್ನು ಕೇಳಬೇಕೆಂದಿರುವೆವು: ಹೇಳುವವನಾಗು.

೧೧. ಬ್ರಹ್ಮನು ಹೇಳಿದನು.—ಲವಣಸಮುದ್ರದ ತೀರದಲ್ಲಿ ಮರಳುಗಳಿಂದ ತುಂಬಿದುದೂ ಸುಂದರವಾದುದೂ ಆದ ಪವಿತ್ರ ಪ್ರದೇಶದಲ್ಲಿ ಕೋಣಾದಿತ್ಯಕ್ಷೇತ್ರವಿರುವುದು.

೧೨-೧೪. ಆ ಪ್ರದೇಶದಲ್ಲಿ ಸಂಪಿಗೆ, ಅಶೋಕ, ಗೋರಂಟೆ, ಕರವೀರ, ಪಾಟಲ, (ಪಾದರಿ) ಪುನ್ನಾಗ, ದ್ರುಮೋತ್ಪಲ, ವಕುಲ, ನಾಗಸಂಪಿಗೆ, ತಗರ,

shrinath.udupa@gmail.com

ತಗರೈರ್ಧವಬಾಣೈಶ್ಚ ಅತಿಮುಕ್ತೈಃ ಸಕುಬ್ಜಕೈಃ ।
ಮಾಲತೀಕುಂದಪುಷ್ಪೈಶ್ಚ ತಥಾನ್ಯೈರ್ಮಲ್ಲಿಕಾದಿಭಿಃ ॥ ೧೩ ॥

ಕೇತಕೀವನಖಂಡೈಶ್ಚ ಸರ್ವರ್ತುಕುಸುಮೋಜ್ಜ್ವಲೈಃ ।
ಕದಂಬೈರ್ಲಕುಚೈಃ ಶಾಲೈಃ ಪನಸೈರ್ದೇವದಾರುಭಿಃ ॥ ೧೪ ॥

ಸರಲೈರ್ಮುಚುಕುಂದೈಶ್ಚ ಚಂದನೈಶ್ಚ ಸಿತೇತರೈಃ ।
ಅಶ್ವತ್ಥೈಃ ಸಪ್ತಪರ್ಣೈಶ್ಚ ಆಮ್ರೈರಾಮ್ರಾತಕೈಸ್ತಥಾ ॥ ೧೫ ॥

ತಾಲೈಃ ಪೂಗಫಲೈಶ್ಚೈವ ನಾರಿಕೇರೈಃ ಕಪಿತ್ಥಕೈಃ ।
ಅನ್ಯೈಶ್ಚ ವಿವಿಧೈರ್ವೃಕ್ಷೈಃ ಸರ್ವತಃ ಸಮಲಂಕೃತಂ ॥ ೧೬ ॥

ಕ್ಷೇತ್ರಂ ತತ್ರ ರವೇಃ ಪುಣ್ಯಮಾಸ್ತೇ ಜಗತಿ ವಿಶ್ರುತಂ ।
ಸಮಂತಾದ್ಯೋಜನಂ ಸಾಗ್ರಂ ಭುಕ್ತಿಮುಕ್ತಿಫಲಪ್ರದಂ ॥ ೧೭ ॥

ಆಸ್ತೇ ತತ್ರ ಸ್ವಯಂ ದೇವಃ ಸಹಸ್ರಾಂಶುರ್ದಿವಾಕರಃ ।
ಕೋಣಾದಿತ್ಯ ಇತಿ ಖ್ಯಾತೋ ಭುಕ್ತಿಮುಕ್ತಿಫಲಪ್ರದಃ ॥ ೧೮ ॥

ಕಗ್ಗಲೀಮರ, ಬಾಣ (ಕರೀಗೋರಂಟಿ) ಅತಿಮುಕ್ತ (ಗಿರಿಮಲ್ಲಿಗೆಭೇದ) ಕುಬ್ಜಕ, ಮಾಲತೀ, ಗಿರಿಮಲ್ಲಿಗೆ, ಮಲ್ಲಿಗೆ ಮುಂತಾದ ಮರಗಳು ಮತ್ತು ಲತೆಗಳು ಹೂವು ಹಣ್ಣುಗಳಿಂದ ತುಂಬಿರುವುವು. ಮತ್ತು ಕೇದಗೆ ವನಗಳು ಅಲ್ಲಿರುವುವು. ಎಲ್ಲಾ ಕಾಲದಲ್ಲೂ ಹೂಗಳನ್ನುಳ್ಳ ಮರಬಳ್ಳಿಗಳು ಅಲ್ಲಿರುವುವು. ಅಲ್ಲದೆ ತಾಳೆ, ಲಿಂಬೆ, ಸಾಲ, ಹಲಸು, ದೇವದಾರು ಮುಂತಾದ ಮರಗಳೂ ಸೊಂಪಾಗಿರುವುವು.

೧೫-೧೬. ಮತ್ತು ಹಸರುಮರ, ಮುಚುಕುಂದ, ರಕ್ತಚಂದನ, ಅಶ್ವತ್ಥ, ಏಳೆಲೆಬಾಳೆ, ಮಾವು, ಆಮ್ರಾತಕ, (ಕಾಡುಮಾವು) ತಾಲ, ಅಡಕೆ, ತೆಂಗು, ಬೇಲ ಮುಂತಾದ ಅನೇಕಬಗೆಯ ಮರಗಳು ಆ ಪ್ರದೇಶದಲ್ಲಿ ಸೊಂಪಾಗಿ ಬೆಳೆದಿರುವುವು. ಇಂತಹ ಪ್ರದೇಶದಲ್ಲಿ ಆದಿತ್ಯನ ಪವಿತ್ರ ಕ್ಷೇತ್ರವಿರುವುದು.

೧೭-೧೮. ಭೋಗಮೋಕ್ಷಗಳನ್ನುಂಟುಮಾಡುವ ಆ ಕ್ಷೇತ್ರವು ಒಂದು ಯೋಜನವಿಸ್ತಾರವಾಗಿರುವುದು. ಆ ಕ್ಷೇತ್ರದಲ್ಲಿ ಭೋಗಮೋಕ್ಷಗಳನ್ನು ಕೊಡುವವನೂ ಸಾವಿರಕಿರಣವುಳ್ಳವನೂ ಆದ ಭಾಸ್ಕರನು ಕೋಣಾದಿತ್ಯನೆಂಬ ಹೆಸರಿನಿಂದ ನೆಲೆಸಿರುವನು.

shrinath.udupa@gmail.com

ಮಾಘೇ ಮಾಸಿ ಸಿತೇ ಪಕ್ಷೇ ಸಪ್ತಮ್ಯಾಂ ಸಂಯತೇಂದ್ರಿಯಃ ।
ಕೃತೋಪವಾಸೋ ಯತ್ರೇತ್ಯ ಸ್ನಾತ್ವಾ ತು ಮಕರಾಲಯೇ ॥ ೧೯ ॥

ಕೃತಶೌಚೋ ವಿಶುದ್ಧಾತ್ಮಾ ಸ್ಮರನ್ ದೇವಂ ದಿವಾಕರಂ ।
ಸಾಗರೇ ವಿಧಿವತ್ಸ್ನಾತ್ವಾ ಶರ್ವರ್ಯಂತೇ ಸಮಾಹಿತಃ ॥ ೨೦ ॥

ದೇವಾನೃಷೀನ್ ಮನುಷ್ಯಾಂಶ್ಚ ಪಿತ್ನ್ ಸಂತರ್ಪ್ಯ ಚ ದ್ವಿಜಾಃ ।
ಉತ್ತೀರ್ಯ ವಾಸಸೀ ಧೌತೇ ಪರಿಧಾಯ ಸುನಿರ್ಮಲೇ ॥ ೨೧ ॥

ಆಚಮ್ಯ ಪ್ರಯತೋ ಭೂತ್ವಾ ತೀರೇ ತಸ್ಯ ಮಹೋದಧೇಃ ।
ಉಪವಿಶ್ಯೋದಯೇ ಕಾಲೇ ಪ್ರಾಙ್ಮುಖಃ ಸವಿತುಸ್ತದಾ ॥ ೨೨ ॥

ವಿಲಿಖ್ಯ ಪದ್ಮಂ ಮೇಧಾವೀ ರಕ್ತಚಂದನವಾರಿಣಾ ।
ಅಷ್ಟಪತ್ರಂ ಕೇಸರಾಢ್ಯಂ ವರ್ತುಲಂ ಚೋರ್ಧ್ವಕರ್ಣಿಕಂ ॥ ೨೩ ॥

ತಿಲತಂಡುಲತೋಯಂ ಚ ರಕ್ತಚಂದನಸಂಯುತಂ ।
ರಕ್ತಪುಷ್ಪಂ ಸದರ್ಭಂ ಚ ಪ್ರಕ್ಷಿಪೇತ್ತಾಮ್ರಭಾಜನೇ ॥ ೨೪ ॥

೧೯-೨೦. ಮಾಘಮಾಸದ ಶುದ್ಧ (ರಥ) ಸಪ್ತಮಿಯಲ್ಲಿ ಆ ಕೋಣಾದಿತ್ಯ ಕ್ಷೇತ್ರಕ್ಕೆ ಬಂದು ಪ್ರಾತಃಕಾಲದಲ್ಲಿ ಸಮುದ್ರದಲ್ಲಿ ವಿಧಿವತ್ತಾಗಿ ಸ್ನಾನಮಾಡಿ ಜಿತೇಂದ್ರಿಯನಾಗಿದ್ದು ಸೂರ್ಯನನ್ನು ಸ್ಮರಿಸುತ್ತಾ ಉಪವಾಸವಿದ್ದು ಪರಿಶುದ್ಧನಾಗಿ ಆ ಸಾಗರಜಲದಲ್ಲಿ ದೇವತೆಗಳಿಗೂ, ಋಷಿಗಳಿಗೂ, ಪಿತೃಗಳಿಗೂ, ತನ್ನ ಪಿತೃಗಳಿಗೂ ತರ್ಪಣವನ್ನು ಕೊಡಬೇಕು.

೨೧-೨೩. ಬಳಿಕ ಸಮುದ್ರದಿಂದ ದಡಕ್ಕೆ ಬಂದು ನಿರ್ಮಲವಾದ ಮಡಿಬಟ್ಟೆಗಳನ್ನುಟ್ಟು ಆಚಮನಮಾಡಿ ಸೂರ್ಯನುದಯಿಸುವ ಕಾಲಕ್ಕೆ ಸರಿಯಾಗಿ ಆ ಸಮುದ್ರತೀರದಲ್ಲಿ ಸೂರ್ಯನಿಗೆದುರಾಗಿ ಕುಳಿತುಕೊಂಡು ಆ ಸ್ಥಳದಲ್ಲಿ ಎಂಟುದಳಗಳುಳ್ಳ ಪದ್ಮವೊಂದನ್ನು ದುಂಡಗೆ ರಕ್ತಚಂದನದ ನೀರಿನಿಂದ ಬರೆಯಬೇಕು. ಆ ಪದ್ಮದಲ್ಲಿ ಕೇಸರಗಳನ್ನು ಬಿಡಿಸಬೇಕು. ಮೇಲುಮುಖವಾಗಿ ಕರ್ಣಿಕೆಗಳನ್ನು ಬಿಡಿಸಬೇಕು.

೨೪. ಆಮೇಲೆ ಒಂದು ತಾಮ್ರದ ಪಾತ್ರೆಯಲ್ಲಿ ಎಳ್ಳು, ಅಕ್ಕಿ, ರಕ್ತಚಂದನ ನೀರು, ದರ್ಭೆ, ಕೆಂಪುಹೂವು ಇವುಗಳನ್ನು ಇರಿಸಬೇಕು.

shrinath.udupa@gmail.com

ತಾಮ್ರಾಭಾವೇಽರ್ಕಪತ್ರಸ್ಯ ಪುಟೇ ಕೃತ್ವಾ ತಿಲಾದಿಕಂ ।
ವಿಧಾಯ ತನ್ಮುನಿಶ್ರೇಷ್ಠಾಃ ಪಾತ್ರಂ ಪಾತ್ರೇಣ ವಿನ್ಯಸೇತ್ ೨೫ ॥

ಕರನ್ಯಾಸಾಂಗವಿನ್ಯಾಸಂ ಕೃತ್ವಾಂಗೈರ್ಹೃದಯಾದಿಭಿಃ ।
ಆತ್ಮಾನಂ ಭಾಸ್ಕರಂ ಧ್ಯಾತ್ವಾ ಸಮ್ಯಕ್ಶ್ರದ್ಧಾಸಮನ್ವಿತಃ ॥ ೨೬ ॥

ಮಧ್ಯೇ ಚಾಗ್ನಿದಲೇ ಧೀಮಾನ್ನೈರ್ಋತೇ ಶ್ವಾಸನೇ ದಲೇ ।
ಕಾಮಾರಿಗೋಚರೇ ಚೈವ ಪುನರ್ಮಧ್ಯೇ ಚ ಪೂಜಯೇತ್ ॥ ೨೭ ॥

ಪ್ರಭೂತಂ ವಿಮಲಂ ಸಾರಮಾರಾಧ್ಯಂ ಪರಮಂ ಸುಖಂ ।
ಸಂಪೂಜ್ಯ ಪದ್ಮಮಾವಾಹ್ಯ ಗಗನಾತ್ತತ್ರ ಭಾಸ್ಕರಂ ॥ ೨೮ ॥

ಕರ್ಣಿಕೋಪರಿ ಸಂಸ್ಥಾಪ್ಯ ತತೋ ಮುದ್ರಾಂ ಪ್ರದರ್ಶಯೇತ್ ।
ಕೃತ್ವಾ ಸ್ನಾನಾದಿಕಂ ಸರ್ವಂ ಧ್ಯಾತ್ವಾ ತಂ ಸುಸಮಾಹಿತಃ ॥ ೨೯ ॥

---

೨೫. ತಾಮ್ರದ ಪಾತ್ರೆಯಿಲ್ಲದಿದ್ದರೆ ಎಕ್ಕದಮರದ ಎಲೆಯಲ್ಲಿ ಎಳ್ಳು ಮೊದಲಾದುವುಗಳನ್ನಿರಿಸಬೇಕು. ಆಮೇಲೆ ಪಾತ್ರೆಯಾದರೆ ಆ ಪಾತ್ರೆಯನ್ನು ಪಾತ್ರೆಯಿಂದಲೇ ಮುಚ್ಚಬೇಕು. ಎಲೆಯಾದರೆ ಎಲೆಯಿಂದಲೇ ಮುಚ್ಚಿ ಇರಿಸಬೇಕು.

೨೬. ಕರ ಮತ್ತು ಹೃದಯ ಮೊದಲಾದ ಅಂಗಗಳಿಂದ ಅಂಗನ್ಯಾಸಕರನ್ಯಾಸಗಳನ್ನು ಭಕ್ತಿಯಿಂದ ಮಾಡುವುದಲ್ಲದೆ ತಾನೇ ಭಾಸ್ಕರನೆಂದು ಅಭೇದ ಬುದ್ಧಿಯಿಂದ ಧ್ಯಾನ ಮಾಡಬೇಕು.

೨೭. ಆ ಕಮಲದ ಮಧ್ಯದಲ್ಲಿಯೂ, ಆಗ್ನೇಯದಳದಲ್ಲಿಯೂ, ನೈಋತ್ಯದಳದಲ್ಲಿಯೂ ವಾಯುವ್ಯದಳದಲ್ಲಿಯೂ, ಈಶಾನ್ಯದಳದಲ್ಲಿಯೂ ಪುನಃ ಮಧ್ಯದಲ್ಲಿಯೂ ಕ್ರಮವಾಗಿ ಪೂಜಿಸಬೇಕು.

೨೮. ಹಿಂದೆ ಹೇಳಿದ ಐದುದಿಕ್ಕುಗಳಲ್ಲಿಯೂ (ಮಧ್ಯ) ಪ್ರಭೂತಾಯನಮಃ (ಆಗ್ನೇಯ) ವಿಮಲಾಯನಮಃ, (ನೈಋತ್ಯ) ಸಾರಾಯನಮಃ, (ವಾಯುವ್ಯ) ಆರಾಧ್ಯಾಯನಮಃ, (ಈಶಾನ್ಯ) ಪರಮಾಯನಮಃ, (ಮಧ್ಯ) ಸುಖಾಯ ನಮಃ ಎಂದು ಕ್ರಮವಾಗಿ ಪೂಜಿಸಿ, ಗಗನದಲ್ಲಿರುವ ಸೂರ್ಯನನ್ನು ಕಮಲದ ಕರ್ಣಿಕೆಯ ಮಧ್ಯದಲ್ಲಿ ಆವಾಹನೆ ಮಾಡಿ ಆಮೇಲೆ ಮುದ್ರೆಗಳನ್ನು ತೋರಿಸಬೇಕು.

೨೯-೩೧. ಆಮೇಲೆ ಸ್ನಾನ ಮೊದಲಾದುವುಗಳನ್ನು ಮಾಡಿಸಿ ತೇಜೋಮಂಡಲದಲ್ಲಿ ಬಿಳಿಯ ಕಮಲದಲ್ಲಿ ಕುಳಿತಿರುವವನೂ, ಮಾಸಲಗೆಂಪುಗಣ್ಣುಗಳುಳ್ಳ

shrinath.udupa@gmail.com

ಸಿತಪದ್ಮೋಪರಿ ರವಿಂ ತೇಜೋಬಿಂಬೇ ವ್ಯವಸ್ಥಿತಂ ।
ಪಿಂಗಾಕ್ಷಂ ದ್ವಿಭುಜಂ ರಕ್ತಂ ಪದ್ಮಪತ್ರಾರುಣಾಂಬರಂ ॥ ೩೦ ॥

ಸರ್ವಲಕ್ಷಣಸಂಯುಕ್ತಂ ಸರ್ವಾಭರಣಭೂಷಿತಂ ।
ಸುರೂಪಂ ವರದಂ ಶಾಂತಂ ಪ್ರಭಾಮಂಡಲಮಂಡಿತಂ ॥ ೩೧ ॥

ಉದ್ಯಂತಂ ಭಾಸ್ಕರಂ ದೃಷ್ಟ್ವಾ ಸಾಂದ್ರಸಿಂದೂರಸಂನಿಭಂ ।
ತತಸ್ತತ್ಪಾತ್ರಮಾದಾಯ ಜಾನುಭ್ಯಾಂ ಧರಣೀಂ ಗತಃ ॥ ೩೨ ॥

ಕೃತ್ವಾ ಶಿರಸಿ ತತ್ಪಾತ್ರಮೇಕಚಿತ್ತಸ್ತು ವಾಗ್ಯತಃ ।
ತ್ರ್ಯಕ್ಷರೇಣ ತು ಮಂತ್ರೇಣ ಸೂರ್ಯಾಯಾರ್ಘ್ಯಂ ನಿವೇದಯೇತ್ ॥ ೩೩ ॥

ಅದೀಕ್ಷಿತಸ್ತು ತಸ್ಯೈವ ನಾಮ್ನೈವಾರ್ಘ್ಯಂ ಪ್ರಯಚ್ಛತಿ ।
ಶ್ರದ್ಧಯಾ ಭಾವಯುಕ್ತೇನ ಭಕ್ತಿಗ್ರಾಹ್ಯೋ ರವಿರ್ಯತಃ ॥ ೩೪ ॥

ವನೂ, ಎರಡು ಕೈಗಳುಳ್ಳವನೂ, ಕೆಂಪುಬಣ್ಣದ ಶರೀರವುಳ್ಳವನೂ, ತಾವರೆಯ ದಳದಂತೆ ಕೆಂಪಾದ ಬಟ್ಟೆಗಳನ್ನು ಧರಿಸಿರುವವನೂ, ಎಲ್ಲ ಲಕ್ಷಣಗಳಿಂದ ಕೂಡಿರುವವನೂ, ಸಕಲಾಭರಣಗಳಿಂದಲೂ ಶರೀರವನ್ನಲಂಕರಿಸಿಕೊಂಡಿರುವವನೂ, ಸುಂದರನೂ, ಪ್ರಭಾಮಂಡಲದಿಂದ ಬೆಳಗುತ್ತಿರುವವನೂ, ಶಾಂತನೂ, ಭಕ್ತರಿಗೆ ವರಗಳನ್ನು ಕೊಡುವವನೂ ಆದ ಸೂರ್ಯದೇವನನ್ನು ಭಕ್ತಿಯಿಂದ ಧ್ಯಾನಿಸಬೇಕು.

೩೨-೩೩. ಆಮೇಲೆ ಉದಯಿಸುತ್ತಲಿರುವ, ಕುಂಕುಮದ ರಾಶಿಯಂತೆ ಕೆಂಪುಬಣ್ಣದವನಾದ ಸೂರ್ಯನನ್ನು ನೋಡಿ, ಭೂಮಿಯಲ್ಲಿ ಮಂಡಿಗಳೆರಡನ್ನೂರಿ ಕೆಳಗಿರಿಸಿದ್ದ ತಾಮ್ರದ ಅರ್ಘ್ಯಪಾತ್ರೆಯನ್ನು ತೆಗೆದುಕೊಂಡು ತಲೆಯಲ್ಲಿಟ್ಟುಕೊಂಡು ಏಕಾಗ್ರತೆಯಿಂದಲೂ, ಮೌನದಿಂದಲೂ ಸೂರ್ಯಾಯ ಎಂಬ ಮೂರಕ್ಷರದ ಮಂತ್ರದಿಂದ ಆ ಸೂರ್ಯನಿಗೆ ಅರ್ಘ್ಯವನ್ನು ಕೊಡಬೇಕು.

೩೪. ದೀಕ್ಷಿತನಲ್ಲದವನು (ಶೂದ್ರನು) ಸೂರ್ಯನ ಯಾವುದಾದರೂ ಹೆಸರಿನಿಂದ ಭಕ್ತಿಪೂರ್ವಕವಾಗಿ ಅರ್ಘ್ಯವನ್ನು ಕೊಡಬೇಕು. ಭಕ್ತಿಗೆ ಸಂತೋಷಿಸುವ ಸೂರ್ಯನು ಯಾವ ನಾಮದಿಂದ ಭಕ್ತಿಪೂರ್ವಕವಾಗಿ ಅರ್ಘ್ಯಕೊಟ್ಟರೂ ಪೂಜಿಸಿದರೂ ಮೆಚ್ಚುವನು.

shrinath.udupa@gmail.com

ಆಗ್ನಿನಿರ್ಋತಿವಾಯ್ವೀಶಮಧ್ಯಪೂರ್ವಾದಿದಿಕ್ಷು ಚ ।
ಹೃಚ್ಛಿರಶ್ಚ ಶಿಖಾವರ್ಮನೇತ್ರಾಣ್ಯಸ್ತ್ರಂ ಚ ಪೂಜಯೇತ್ ॥ ೩೫ ॥

ದತ್ವಾಽರ್ಘ್ಯಂ ಗಂಧಧೂಪಂ ಚ ದೀಪಂ ನೈವೇದ್ಯಮೇವ ಚ ।
ಜಪ್ತ್ವಾ ಸ್ತುತ್ವಾ ನಮಸ್ಕೃತ್ವಾ ಮುದ್ರಾಂ ಬದ್ಧ್ವಾ ವಿಸರ್ಜಯೇತ್ ॥ ೩೬ ॥

ಯೇ ತ್ವರ್ಘ್ಯಂ ಸಂಪ್ರಯಚ್ಛಂತಿ ಸೂರ್ಯಾಯ ನಿಯತೇಂದ್ರಿಯಾಃ ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಸ್ತ್ರಿಯಃ ಶೂದ್ರಾಶ್ಚ ಸಂಯತಾಃ ॥ ೩೭ ॥

ಭಕ್ತಿಭಾವೇನ ಸತತಂ ವಿಶುದ್ಧೇನಾಂತರಾತ್ಮನಾ ।
ತೇ ಭುಕ್ತ್ವಾಽಭಿಮತಾನ್ಕಾಮಾನ್ಪ್ರಾಪ್ನುವಂತಿ ಪರಾಂ ಗತಿಂ ॥ ೩೮ ॥

ತ್ರೈಲೋಕ್ಯದೀಪಕಂ ದೇವಂ ಭಾಸ್ಕರಂ ಗಗನೇಚರಂ ।
ಯೇ ಸಂಶ್ರಯಂತಿ ಮನುಜಾಸ್ತೇ ಸ್ಯುಃ ಸುಖಸ್ಯ ಭಾಜನಂ ॥ ೩೯ ॥

---

೩೫. ಆಗ್ನೇಯ, ನೈರ್ಋತ್ಯ, ವಾಯವ್ಯ, ಈಶಾನ್ಯ, ಮಧ್ಯ, ಪೂರ್ವ ಮೊದಲಾದ ದಿಕ್ಕುಗಳಲ್ಲಿ ಹೃದಯ, ಶಿರಸ್ಸು, ಶಿಖೆ, ಕವಚ, ನೇತ್ರ, ಅಸ್ತ್ರ ಇವುಗಳನ್ನು ಪೂಜಿಸಬೇಕು.

೩೬. ಅರ್ಘ್ಯವನ್ನು ಕೊಟ್ಟು ಆಮೇಲೆ ಗಂಧ, ಧೂಪ, ದೀಪಗಳನ್ನು ಸೂರ್ಯನಿಗರ್ಪಿಸಿ, ನೈವೇದ್ಯಮಾಡಿ, ಜಪಿಸಿ, ಸ್ತುತಿಸಿ, ನಮಸ್ಕರಿಸಿ, ಮುದ್ರೆಗಳನ್ನು ಪ್ರದರ್ಶಿಸಿ ಕೊನೆಯಲ್ಲಿ ವಿಸರ್ಜನೆಯನ್ನು ಮಾಡಬೇಕು.

೩೭-೩೮. ಬ್ರಾಹ್ಮಣರಾಗಲೀ ಕ್ಷತ್ರಿಯರಾಗಲೀ ವೈಶ್ಯರಾಗಲೀ ಶೂದ್ರರಾಗಲೀ ಸ್ತ್ರೀಯರಾಗಲೀ ನಿರ್ಮಲವಾದ ಮನಸ್ಸುಳ್ಳವರಾಗಿ ಭಕ್ತಿಯಿಂದ ಸೂರ್ಯನಿಗೆ ಅರ್ಘ್ಯವನ್ನು ಕೊಟ್ಟರೆ, ಅವರು ಇಹಲೋಕದಲ್ಲಿ ಅನೇಕ ಭೋಗಸುಖಗಳನ್ನನುಭವಿಸಿ ಕೊನೆಯಲ್ಲಿ ಉತ್ತಮಗತಿಯನ್ನು ಪಡೆಯುವರು.

೩೯. ಗಗನದಲ್ಲಿದ್ದು ಮೂರುಲೋಕಗಳನ್ನೂ ಬೆಳಗುವ ಸೂರ್ಯದೇವನನ್ನು ಯಾವ ಮಾನವರು ಭಕ್ತಿಯಿಂದ ಆಶ್ರಯಿಸುವರೋ ಅವರು ಸಕಲಸುಖಗಳನ್ನೂ ಪಡೆಯುವರು.

shrinath.udupa@gmail.com

ಯಾವನ್ನ ದೀಯತೇ ಚಾರ್ಘ್ಯಂ ಭಾಸ್ಕರಾಯ ಯಥೋದಿತಂ ।
ತಾವನ್ನ ಪೂಜಯೇದ್ವಿಷ್ಣುಂ ಶಂಕರಂ ವಾ ಸುರೇಶ್ವರಂ ॥ ೪೦ ॥

ತಸ್ಮಾತ್ಪ್ರಯತ್ನಮಾಸ್ಥಾಯ ದದ್ಯಾದರ್ಘ್ಯಂ ದಿನೇ ದಿನೇ ।
ಆದಿತ್ಯಾಯ ಶುಚಿರ್ಭೂತ್ವಾ ಪುಷ್ಪೈರ್ಗಂಧೈರ್ಮನೋರಮೈಃ ॥ ೪೧ ॥

ಏವಂ ದದಾತಿ ಯಶ್ಚಾರ್ಘ್ಯಂ ಸಪ್ತಮ್ಯಾಂ ಸುಸಮಾಹಿತಃ ।
ಆದಿತ್ಯಾಯ ಶುಚಿಃ ಸ್ನಾತಃ ಸ ಲಭೇದೀಪ್ಸಿತಂ ಫಲಂ ॥ ೪೨ ॥

ರೋಗಾದ್ವಿಮುಚ್ಯತೇ ರೋಗೀ ವಿತ್ತಾರ್ಥೀ ಲಭತೇ ಧನಂ ।
ವಿದ್ಯಾಂ ಪ್ರಾಪ್ನೋತಿ ವಿದ್ಯಾರ್ಥೀ ಸುತಾರ್ಥೀ ಪುತ್ರವಾನ್ ಭವೇತ್ ॥ ೪೩ ॥

ಯಂ ಯಂ ಕಾಮಮಭಿಧ್ಯಾಯನ್ ಸೂರ್ಯಾಯಾರ್ಘ್ಯಂ ಪ್ರಯಚ್ಛತಿ ।
ತಸ್ಯ ತಸ್ಯ ಫಲಂ ಸಮ್ಯಕ್ಪ್ರಾಪ್ನೋತಿ ಪುರುಷಃ ಸುಧೀಃ ॥ ೪೪ ॥

---

೪೦. ಸೂರ್ಯನಿಗೆ ವಿಧಿವತ್ತಾಗಿ ಅರ್ಘ್ಯವನ್ನು ಕೊಡದೆ ಹರಿಯನ್ನಾಗಲೀ ಹರನನ್ನಾಗಲೀ ಬ್ರಹ್ಮನನ್ನಾಗಲೀ ಪೂಜಿಸಬಾರದು.

೪೧. ಆದುದರಿಂದ ಸೂರ್ಯನಿಗೆ ಶ್ರದ್ಧೆಯಿಂದ ಪ್ರತಿದಿನವೂ ಮಡಿಯಾಗಿದ್ದು ಹೂವುಗಂಧಗಳೊಡನೆ ಅರ್ಘ್ಯವನ್ನು ಕೊಡಬೇಕು.

೪೨. ಹೀಗೆ ವಿಧಿವತ್ತಾಗಿ ಮಾಘಶುಕ್ಲಸಪ್ತಮಿಯಲ್ಲಿ ಸ್ನಾನಮಾಡಿ ಮಡಿಯಾಗಿದ್ದು ಸೂರ್ಯನಿಗೆ ಅರ್ಘ್ಯವನ್ನು ಕೊಡುವನೋ ಅವನು ಬೇಕಾದ ಫಲಗಳೆಲ್ಲವನ್ನೂ ಅನುಭವಿಸುವನು.

೪೩. ಹಾಗೆ ಅರ್ಘ್ಯವನ್ನು ಕೊಟ್ಟರೆ ರೋಗಿಯಾದವನು ಆರೋಗ್ಯವಂತನಾಗುವನು. ಧನವನ್ನು ಅಪೇಕ್ಷಿಸುವವನು ಧನವನ್ನು ಪಡೆಯುವನು. ವಿದ್ಯೆಯನ್ನು ಬಯಸುವವನು ವಿದ್ಯೆಯನ್ನು ಪಡೆಯುವನು. ಮಕ್ಕಳನ್ನು ಬಯಸುವವನು ಮಕ್ಕಳನ್ನು ಪಡೆಯುವನು.

೪೪. ಬುದ್ಧಿವಂತನಾದ ಪುರುಷನು ಯಾವಾವ ಇಷ್ಟಾರ್ಥಗಳು ಬೇಕೆಂದು ಚಿಂತಿಸಿ ಸೂರ್ಯನಿಗೆ ಅರ್ಘ್ಯವನ್ನು ಕೊಡುವನೋ ಅವನು ಆಯಾಯ ಫಲಗಳನ್ನು ಪಡೆಯುವನು.

shrinath.udupa@gmail.com

ಸ್ನಾತ್ವಾ ವೈ ಸಾಗರೇ ದತ್ವಾ ಸೂರ್ಯಾಯಾರ್ಘ್ಯಂ ಪ್ರಣಮ್ಯ ಚ ।
ನರೋ ವಾ ಯದಿ ವಾ ನಾರೀ ಸರ್ವಕಾಮಫಲಂ ಲಭೇತ್ ॥ ೪೫ ॥

ತತಃ ಸೂರ್ಯಾಲಯಂ ಗಚ್ಛೇತ್ಪುಷ್ಪಮಾದಾಯ ವಾಗ್ಯತಃ ।
ಪ್ರವಿಶ್ಯ ಪೂಜಯೇದ್ಭಾನುಂ ಕೃತ್ವಾ ತು ತ್ರಿಃ ಪ್ರದಕ್ಷಿಣಂ ॥ ೪೬ ॥

ಪೂಜಯೇತ್ಪರಯಾ ಭಕ್ತ್ಯಾ ಕೋಣಾರ್ಕಂ ಮುನಿಸತ್ತಮಾಃ ।
ಗಂಧೈಃ ಪುಷ್ಪೈಸ್ತಥಾ ದೀಪೈರ್ಧೂಪೈರ್ನೈವೇದ್ಯಕೈರಪಿ ॥ ೪೭ ॥

ದಂಡವತ್ಪ್ರಣಿಪಾತೈಶ್ಚ ಜಯಶಬ್ದೈಸ್ತಥಾ ಸ್ತವೈಃ ।
ಏವಂ ಸಂಪೂಜ್ಯ ತಂ ದೇವಂ ಸಹಸ್ರಾಂಶುಂ ಜಗತ್ಪತಿಂ ॥ ೪೮ ॥

ದಶಾನಾಮಶ್ವಮೇಧಾನಾಂ ಫಲಂ ಪ್ರಾಪ್ನೋತಿ ಮಾನವಃ ।
ಸರ್ವಪಾಪವಿನಿರ್ಮುಕ್ತೋ ಯುವಾ ದಿವ್ಯವಪುರ್ನರಃ ॥ ೪೯ ॥

---

೪೫. ಸಮುದ್ರದಲ್ಲಿ ಸ್ನಾನಮಾಡಿ ಸೂರ್ಯನಿಗೆ ಅರ್ಘ್ಯವನ್ನು ಕೊಟ್ಟು ನಮಸ್ಕರಿಸಿದರೆ ಪುರುಷನಾಗಲೀ, ಸ್ತ್ರೀಯಾಗಲೀ ತನ್ನ ಇಷ್ಟಾರ್ಥಗಳೆಲ್ಲವನ್ನೂ ಪಡೆಯುವರು.

೪೬. ಆಮೇಲೆ ಆ ಕೋಣಾದಿತ್ಯಕ್ಷೇತ್ರದಲ್ಲಿ ಹೂವು ಹಣ್ಣುಗಳನ್ನು ತೆಗೆದುಕೊಂಡು ಸೂರ್ಯನ ದೇವಾಲಯಕ್ಕೆ ತೆರಳಿ ಅಲ್ಲಿ ಮೂರುಪ್ರದಕ್ಷಿಣೆಗಳನ್ನು ಮಾಡಿ ಸೂರ್ಯನನ್ನು ಪೂಜಿಸಬೇಕು.

೪೭. ಆ ಕೋಣಾದಿತ್ಯನನ್ನು ಉತ್ತಮಭಕ್ತಿಯುಳ್ಳವನಾಗಿ ಗಂಧ, ಹೂವು, ಧೂಪ, ದೀಪ, ನೈವೇದ್ಯ ಇವುಗಳಿಂದ ಪೂಜಿಸಬೇಕು. ದಂಡದಂತೆ ಅಡ್ಡಬಿದ್ದು ನಮಸ್ಕಾರಮಾಡಬೇಕು. ಜಯ (ಸರ್ವೋತ್ಕರ್ಷವೆಂದಿರು) ಮುಂತಾದ ಶಬ್ದಗಳಿಂದ ಸ್ತುತಿಸಬೇಕು.

೪೮. ಹೀಗೆ ಸಹಸ್ರಕಿರಣನಾದ ಸೂರ್ಯದೇವನನ್ನು ಭಕ್ತಿಯಿಂದ ವಿಧಿವತ್ತಾಗಿ ಅರ್ಚಿಸಿದರೆ ಹತ್ತು ಅಶ್ವಮೇಧಗಳನ್ನು ಮಾಡಿದ ಪುಣ್ಯವನ್ನು ಪಡೆಯುವನು.

೪೯-೫೦. ಮತ್ತು ಆ ಸೂರ್ಯಾರಾಧಕನು ಪಾಪಗಳೆಲ್ಲವನ್ನೂ ಕಳೆದುಕೊಂಡವನಾಗಿ ತನ್ನ ವಂಶದ ಹಿಂದಿನ ಏಳುಜನಗಳನ್ನೂ ಮುಂದಿನ ಏಳುಜನಗಳನ್ನೂ

shrinath.udupa@gmail.com

ಸಪ್ತಾವರಾನ್ಸಪ್ತ ಪರಾನ್ ವಂಶಾನುದ್ಧೃತ್ಯ ಭೋ ದ್ವಿಜಾಃ ।
ವಿಮಾನೇನಾರ್ಕವರ್ಣೇನ ಕಾಮಗೇನ ಸುವರ್ಚಸಾ ॥ ೫೦ ॥

ಉಪಗೀಯಮಾನೋ ಗಂಧರ್ವೈಃ ಸೂರ್ಯಲೋಕಂ ಸ ಗಚ್ಛತಿ ।
ಭುಕ್ತ್ವಾ ತತ್ರ ವರಾನ್ಭೋಗಾನ್ಯಾವದಾಭೂತಸಂಪ್ಲವಂ ॥ ೫೧ ॥

ಪುಣ್ಯಕ್ಷಯಾದಿಹಾಯಾತಃ ಪ್ರವರೇ ಯೋಗಿನಾಂ ಕುಲೇ ।
ಚತುರ್ವೇದೋ ಭವೇದ್ವಿಪ್ರಃ ಸ್ವಧರ್ಮನಿರತಃ ಶುಚಿಃ ॥ ೫೨ ॥

ಯೋಗಂ ವಿವಸ್ವತಃ ಪ್ರಾಪ್ಯ ತತೋ ಮೋಕ್ಷಮವಾಪ್ನುಯಾತ್ ।
ಚೈತ್ರೇ ಮಾಸಿ ಸಿತೇ ಪಕ್ಷೇ ಯಾತ್ರಾಂ ದಮನಭಂಜಿಕಾಂ ॥ ೫೩ ॥

ಯಃ ಕರೋತಿ ನರಸ್ತತ್ರ ಪೂರ್ವೋಕ್ತಂ ಸ ಫಲಂ ಲಭೇತ್ ।
ಶಯನೋತ್ಥಾಪನೇ ಭಾನೋಃ ಸಂಕ್ರಾಂತ್ಯಾಂ ವಿಷುವಾಯನೇ ॥ ೫೪ ॥

ಉದ್ಧರಿಸುವನು. ಕೊನೆಯಲ್ಲಿ ಸುಂದರವಾದ ದೇವಶರೀರವುಳ್ಳ ಯುವಕನಾಗಿ ಸೂರ್ಯನಂತೆ ತೇಜಸ್ವಿಯಾದ ಮತ್ತು ಬೇಕಾದೆಡೆಯಲ್ಲಿ ಸಂಚರಿಸಬಲ್ಲ ವಿಮಾನದಲ್ಲಿ ಕುಳಿತು ಗಂಧರ್ವರಿಂದ ಹೊಗಳಿಸಿಕೊಳ್ಳಲ್ಪಡುತ್ತಾ ಸೂರ್ಯಲೋಕಕ್ಕೆ ತೆರಳುವನು.

೫೧-೫೨. ಆ ಸೂರ್ಯಲೋಕದಲ್ಲಿ ಉತ್ತಮಭೋಗಗಳನ್ನನುಭವಿಸುತ್ತಾ ಒಂದು ಕಲ್ಪದವರೆಗೆ ಇದ್ದು, ಪುಣ್ಯವು ಕಳೆಯಲು, ಭೂಲೋಕದಲ್ಲಿ ಯೋಗಿಗಳ ಉತ್ತಮಕುಲದಲ್ಲಿ ಬ್ರಾಹ್ಮಣನಾಗಿ ಜನಿಸಿ, ನಾಲ್ಕು ವೇದಗಳಲ್ಲಿ ವಿದ್ವಾಂಸನೂ, ಪರಿಶುದ್ಧನೂ, ತನ್ನ ಧರ್ಮಗಳನ್ನಾಚರಿಸುವವನೂ ಆಗುವನು. ಆಮೇಲೆ ಸೂರ್ಯನ ಅನುಗ್ರಹದಿಂದ ಬ್ರಹ್ಮಜ್ಞಾನವನ್ನು ಪಡೆದು ಮುಕ್ತಿಯನ್ನೈದುವನು.

೫೩. ಚೈತ್ರಶುದ್ಧದಲ್ಲಿ ಕೋಣಾದಿತ್ಯಕ್ಷೇತ್ರದ ಯಾತ್ರೆಯನ್ನು ವಿಧಿವತ್ತಾಗಿ ಮಾಡಿದವನೂ ಸಹ ಹಿಂದೆ ಹೇಳಿದ ಫಲವನ್ನು ಪಡೆಯುವನು.

೫೪-೫೫. ಸೂರ್ಯನ ಶಯನ ಮತ್ತು ಜಾಗರಣ, ಸಂಕ್ರಮಣ, ವಿಷುವತ್ಪುಣ್ಯಕಾಲ, ಭಾನುವಾರ, ಸಪ್ತಮೀ, ತಿಥಿ, ಅಮಾವಾಸ್ಯೆ ಮೊದಲಾದ ಪರ್ವಕಾಲಗಳಲ್ಲಿ ಯಾರು ಶ್ರದ್ಧೆಯಿಂದ ಕೋಣಾದಿತ್ಯಕ್ಷೇತ್ರದ ಯಾತ್ರೆಯನ್ನು ಶ್ರದ್ಧೆಯಿಂದ ಮಾಡು

shrinath.udupa@gmail.com

ವಾರೇ ರವೇಸ್ತಿಥೌ ಚೈವ ಪರ್ವಕಾಲೇಽಥವಾ ದ್ವಿಜಾಃ ।
ಯೇ ತತ್ರ ಯಾತ್ರಾಂ ಕುರ್ವಂತಿ ಶ್ರದ್ಧಯಾ ಸಂಯತೇಂದ್ರಿಯಾಃ ॥೫೫॥

ವಿಮಾನೇನಾರ್ಕವರ್ಣೇನ ಸೂರ್ಯಲೋಕಂ ವ್ರಜಂತಿ ತೇ ।
ಆಸ್ತೇ ತತ್ರ ಮಹಾದೇವಸ್ತೀರೇ ನದನದೀಪತೇಃ ॥ ೫೬ ॥

ರಾಮೇಶ್ವರ ಇತಿ ಖ್ಯಾತಃ ಸರ್ವಕಾಮಫಲಪ್ರದಃ ।
ಯೇ ತಂ ಪಶ್ಯಂತಿ ಕಾಮಾರಿಂ ಸ್ನಾತ್ವಾ ಸಮ್ಯಙ್ಮಹೋದಧೌ ॥ ೫೭ ॥

ಗಂಧೈಃ ಪುಷ್ಪೈಸ್ತಥಾ ಧೂಪೈರ್ದೀಪೈರ್ನೈವೇದ್ಯಕೈರ್ವರೈಃ ।
ಪ್ರಣಿಪಾತೈಸ್ತಥಾ ಸ್ತೋತ್ರೈರ್ಗೀತೈರ್ವಾದ್ಯೈರ್ಮನೋಹರೈಃ ॥ ೫೮ ॥

ರಾಜಸೂಯಫಲಂ ಸಮ್ಯಗ್ವಾಜಿಮೇಧಫಲಂ ತಥಾ ।
ಪ್ರಾಪ್ನುವಂತಿ ಮಹಾತ್ಮಾನಃ ಸಂಸಿದ್ಧಿಂ ಪರಮಾಂ ತಥಾ ॥ ೫೯ ॥

ವರೋ ಅವರು ಸೂರ್ಯನಂತೆ ತೇಜಸ್ವಿಯಾದ ವಿಮಾನದಲ್ಲಿ ಕುಳಿತು ಸೂರ್ಯಲೋಕಕ್ಕೆ ತೆರಳುವರು.

೫೬. ಅಲ್ಲಿಯೇ ದಕ್ಷಿಣ ಸಮುದ್ರದ ತೀರದಲ್ಲಿ ಸಕಲ ಇಷ್ಟಾರ್ಥಗಳನ್ನೂ ಕೊಡುವ ಮಹಾದೇವನು ರಾಮೇಶ್ವರನೆಂಬ ಹೆಸರಿನಿಂದ ನೆಲಸಿರುವನು.

೫೭-೫೯. ಯಾರು ರಾಮೇಶ್ವರಕ್ಷೇತ್ರದಲ್ಲಿ ಸಮುದ್ರಸ್ನಾನಮಾಡಿ ಕಾಮವೈರಿಯಾದ ರಾಮೇಶ್ವರನ ದರ್ಶನವನ್ನು ಮಾಡಿ, ಆ ಸ್ವಾಮಿಯನ್ನು ಗಂಧ, ಹೂವು, ದೀಪ, ಧೂಪ, ನೈವೇದ್ಯ, ನಮಸ್ಕಾರ, ಸ್ತೋತ್ರ, ಮನೋಹರವಾದ ಗಾನವಾದ್ಯಗಳು ಇವುಗಳಿಂದ ಶ್ರದ್ಧೆಯೊಡನೆ ಅರ್ಚಿಸುವರೋ ಅಂತಹ ಮಹಾತ್ಮರು ರಾಜಸೂಯಯಾಗದ ಫಲವನ್ನೂ, ಅಶ್ವಮೇಧಯಾಗದ ಫಲವನ್ನೂ ಪಡೆಯುವರು. ಮತ್ತು ಉತ್ತಮಸಿದ್ಧಿಯನ್ನು ಹೊಂದುವರು.

shrinath.udupa@gmail.com

ಕಾಮಗೇನ ವಿಮಾನೇನ ಕಿಂಕಿಣೀಜಾಲಮಾಲಿನಾ ।
ಉಪಗೀಯಮಾನಾ ಗಂಧರ್ವೈಃ ಶಿವಲೋಕಂ ವ್ರಜಂತಿ ತೇ ॥ ೬೦ ॥

ಆಭೂತಸಂಪ್ಲವಂ ಯಾವದ್ಭುಕ್ತ್ವಾ ಭೋಗಾನ್ಮನೋರಮಾನ್ ।
ಪುಣ್ಯಕ್ಷಯಾದಿಹಾಗತ್ಯ ಚಾತುರ್ವೇದಾ ಭವಂತಿ ತೇ ॥ ೬೧ ॥

ಶಾಂಕರಂ ಯೋಗಮಾಸ್ಥಾಯ ತತೋ ಮೋಕ್ಷಂ ವ್ರಜಂತಿ ತೇ ।
ಯಸ್ತ್ವತ್ರ ಸವಿತುಃ ಕ್ಷೇತ್ರೇ ಪ್ರಾಣಾಂಸ್ತ್ಯಜತಿ ಮಾನವಃ ॥ ೬೨ ॥

ಸ ಸೂರ್ಯಲೋಕಮಾಸ್ಥಾಯ ದೇವವನ್ಮೋದತೇ ದಿವಿ ।
ಪುನರ್ಮಾನುಷತಾಂ ಪ್ರಾಪ್ಯ ರಾಜಾ ಭವತಿ ಧಾರ್ಮಿಕಃ ॥ ೬೩ ॥

ಯೋಗಂ ರವೇಃ ಸಮಾಸಾದ್ಯ ತತೋ ಮೋಕ್ಷಮವಾಪ್ನುಯಾತ್ ।
ಏವಂ ಮಯಾ ಮುನಿಶ್ರೇಷ್ಠಾಃ ಪ್ರೋಕ್ತಂ ಕ್ಷೇತ್ರಂ ಸುದುರ್ಲಭಂ ॥ ೬೪ ॥

---

೬೦. ಮತ್ತು ಅವರು ಕೊನೆಯಲ್ಲಿ ಕಾಮಚಾರಿಯೂ ಸಣ್ಣಘಂಟೆಗಳ ಮಾಲೆಯುಳ್ಳದುದೂ ಆದಂತಹ ವಿಮಾನದಲ್ಲಿ ಕುಳಿತು ಗಂಧರ್ವರಿಂದ ಹೊಗಳಿಸಿಕೊಳ್ಳುತ್ತಾ ಶಿವಲೋಕಕ್ಕೆ ತೆರಳುವರು.

೬೧. ಆ ಶಿವಲೋಕದಲ್ಲಿ ಒಂದು ಕಲ್ಪದವರೆಗೆ ಮನೋಹರವಾದ ಭೋಗಗಳನ್ನನುಭವಿಸುತ್ತಾ ಇರುವರು. ಕೊನೆಗೆ ಪುಣ್ಯವು ಕಳೆಯಲು ಭೂಲೋಕದಲ್ಲಿ ಬ್ರಾಹ್ಮಣವಂಶದಲ್ಲಿ ಜನ್ಮತಾಳಿ ಚತುರ್ವೇದವಿದ್ವಾಂಸರಾಗುವರು. ಕೊನೆಯಲ್ಲಿ ಅವರು ಶಂಕರನ ಯೋಗವನ್ನನುಷ್ಠಾನಮಾಡಿ ಮುಕ್ತಿಯನ್ನೈದುವರು.

೬೨. ಆ ಕೋಣಾದಿತ್ಯಕ್ಷೇತ್ರದಲ್ಲಿ ಪ್ರಾಣಗಳನ್ನು ಬಿಡುವವನು ಸೂರ್ಯಲೋಕವನ್ನು ಪಡೆದು ದೇವತೆಗಳಂತೆ ಸುಖವನ್ನನುಭವಿಸುತ್ತಾ ವಿಹರಿಸುವನು.

೬೩. ಪುಣ್ಯವು ಕಳೆದಮೇಲೆ ತಿರುಗಿ ಭೂಮಿಯಲ್ಲಿ ಧಾರ್ಮಿಕನಾದ ರಾಜನಾಗಿ ಜನಿಸುವನು. ಕೊನೆಯಲ್ಲಿ ಸೂರ್ಯನ ಯೋಗವನ್ನನುಷ್ಠಾನಮಾಡಿ ಮುಕ್ತಿಯನ್ನೈದುವನು.

shrinath.udupa@gmail.com

ಕೋಣಾರ್ಕಸ್ಯೋದಧೇಸ್ತೀರೇ ಭುಕ್ತಿಮುಕ್ತಿಫಲಪ್ರದಂ ॥ ೬೫ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭ್ವೃಷಿಸಂವಾದೇ
ಕೋಣಾದಿತ್ಯಮಾಹಾತ್ಮ್ಯವರ್ಣನಂ ನಾಮ
ಅಷ್ಟವಿಂಶೋಽಧ್ಯಾಯಃ

---

೬೫. ಎಲೈ ಮುನಿಗಳೇ ! ಹೀಗೆ ಸಮುದ್ರತೀರದಲ್ಲಿರುವ ಮಹಾಪವಿತ್ರವೂ ಭೋಗಮೋಕ್ಷಗಳೆರಡನ್ನೂ ಉಂಟುಮಾಡುವಂತಹುದೂ ಆದ ಕೋಣಾದಿತ್ಯ ಕ್ಷೇತ್ರವನ್ನು ನಿಮಗೆ ವಿಸ್ತರಿಸಿ ಹೇಳಿರುವೆನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಸ್ವಯಂಭ್ವೃಷಿಸಂವಾದದಲ್ಲಿ ಕೋಣಾದಿತ್ಯ
ಮಾಹಾತ್ಮ್ಯವರ್ಣನವೆಂಬ ಇಪ್ಪತ್ತೆಂಟನೆಯ ಅಧ್ಯಾಯವು
ಮುಗಿದುದು

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕೋನತ್ರಿಂಶತ್ತಮೋಽಧ್ಯಾಯಃ

॥ ಮುನಯ ಊಚುಃ ॥

ಶ್ರುತೋಽಸ್ಮಾಭಿಃ ಸುರಶ್ರೇಷ್ಠ ಭವತಾ ಯದುದಾಹೃತಂ ।
ಭಾಸ್ಕರಸ್ಯ ಪರಂ ಕ್ಷೇತ್ರಂ ಭುಕ್ತಿಮುಕ್ತಿಫಲಪ್ರದಂ ॥ ೧ ॥

ನ ತೃಪ್ತಿಮಧಿಗಚ್ಛಾಮಃ ಶೃಣ್ವಂತಃ ಸುಖದಾಂ ಕಥಾಂ ।
ತವ ವಕ್ತ್ರೋದ್ಭವಾಂ ಪುಣ್ಯಾಮಾದಿತ್ಯಸ್ಯಾಘನಾಶಿನೀಂ ॥ ೨ ॥

ಇಪ್ಪತ್ತೊಂಭತ್ತನೆಯ ಅಧ್ಯಾಯವು

೧. ಮುನಿಗಳು ಹೇಳಿದರು.—ಓ ಬ್ರಹ್ಮದೇವ ! ನೀನು ವರ್ಣಿಸಿದ ಭೋಗ ಮೋಕ್ಷವನ್ನುಂಟುಮಾಡುವ ಭಾಸ್ಕರನ ಪವಿತ್ರವಾದ ಕೋಣಾದಿತ್ಯಕ್ಷೇತ್ರವಿಚಾರವನ್ನು ನಾವು ಕೇಳಿದೆವು.

೨. ಆದಿತ್ಯನ ಪಾಪನಾಶಕವಾದ ಈ ಮನೋಹರವಾದ ಕಥೆಯನ್ನು ನಿನ್ನ ಮುಖದಿಂದ ಕೇಳುತ್ತಾ ನಮಗೆ ತೃಪ್ತಿಯೇ ಆಗಲಿಲ್ಲವು. ಇನ್ನೂ ಕೇಳಬೇಕೆಂಬ ಆಶೆಯಿರುವುದು.

shrinath.udupa@gmail.com

ಅತಃ ಪರಂ ಸುರಶ್ರೇಷ್ಠ ಬ್ರೂಹಿ ನೋ ವದತಾಂ ವರ ।
ದೇವಪೂಜಾಫಲಂ ಯಚ್ಚ ಯಚ್ಚ ದಾನಫಲಂ ಪ್ರಭೋ ॥ ೩ ॥

ಪ್ರಣಿಪಾತೇ ನಮಸ್ಕಾರೇ ತಥಾ ಚೈವ ಪ್ರದಕ್ಷಿಣೇ ।
ದೀಪಧೂಪಪ್ರದಾನೇ ಚ ಸಂಮಾರ್ಜನವಿಧೌ ಚ ಯತ್ ॥ ೪ ॥

ಉಪವಾಸೇ ಚ ಯತ್ಪುಣ್ಯಂ ಯತ್ಪುಣ್ಯಂ ನಕ್ತಭೋಜನೇ ।
ಅರ್ಘ್ಯಶ್ಚ ಕೀದೃಶಃ ಪ್ರೋಕ್ತಃ ಕುತ್ರ ವಾ ಸಂಪ್ರದೀಯತೇ ॥ ೫ ॥

ಕಥಂ ಚ ಕ್ರಿಯತೇ ಭಕ್ತಿಃ ಕಥಂ ದೇವಃ ಪ್ರಸೀದತಿ ।
ಏತತ್ಸರ್ವಂ ಸುರಶ್ರೇಷ್ಠ ಶ್ರೋತುಮಿಚ್ಛಾಮಹೇ ವಯಂ ॥ ೬ ॥

॥ ಬ್ರಹ್ಮೋವಾಚ ॥

ಅರ್ಘ್ಯಂ ಪೂಜಾದಿಕಂ ಸರ್ವಂ ಭಾಸ್ಕರಸ್ಯ ದ್ವಿಜೋತ್ತಮಾಃ ।
ಭಕ್ತಿಂ ಶ್ರದ್ಧಾಂ ಸಮಾಧಿಂ ಚ ಕಥ್ಯಮಾನಂ ನಿಬೋಧತ ॥ ೭ ॥

---

೩. ಮುಂದೆ, ಓ ದೇವದೇವ ! ಸರ್ವಜ್ಞನಾದ ನೀನು ದೇವಪೂಜೆಯ ಫಲವನ್ನೂ ದಾನದ ಫಲವನ್ನೂ ತಿಳಿಸು.

೪. ಅಡ್ಡಬೀಳುವುದು, ನಮಸ್ಕಾರ, ಪ್ರದಕ್ಷಿಣ, ಧೂಪ, ದೀಪ, ಸ್ನಾನಮಾಡಿಸುವುದು ಈ ದೇವಸೇವೆಗಳಿಗೆ ಫಲವನ್ನೂ ತಿಳಿಯಪಡಿಸು.

೫. ಉಪವಾಸಮಾಡುವುದು, ರಾತ್ರಿಯಲ್ಲಿ ಮಾತ್ರ ಊಟಮಾಡಿ ಪೂಜಿಸ್ಸುವುದು, ಇವುಗಳಿಗೂ ಫಲವೇನು ? ಅರ್ಘ್ಯದ ಸ್ವರೂಪವೆಂತಹುದು ? ಅರ್ಘ್ಯವನ್ನೆಲ್ಲಿ ಕೊಡಬೇಕು ?

೬. ಭಕ್ತಿಯನ್ನು ಮಾಡುವುದು ಹೇಗೆ? ದೇವನು ಹೇಗೆ ಪ್ರಸನ್ನನಾಗುವನು ? ಓ ದೇವೋತ್ತಮ ! ಇದೆಲ್ಲವನ್ನೂ ಕೇಳಬೇಕೆಂದಿರುವೆವು. ನಮಗೆ ಇದನ್ನು ತಿಳಿಯಪಡಿಸು.

೭. ಬ್ರಹ್ಮನು ಹೇಳಿದನು.—ಎಲೈ ಮುನಿಗಳೇ ! ಅರ್ಘ್ಯ, ಸೂರ್ಯನ ಪೂಜೆ, ಭಕ್ತಿ, ಶ್ರದ್ಧೆ, ಸಮಾಧಿ ಇವೆಲ್ಲವನ್ನೂ ಹೇಳುವೆನು, ಸಾವಧಾನವಾಗಿ ಕೇಳಿರಿ.

shrinath.udupa@gmail.com

ಮನಸಾ ಭಾವನಾ ಭಕ್ತಿರಿಷ್ಟಾ ಶ್ರದ್ಧಾ ಚ ಕೀರ್ತ್ಯತೇ ।
ಧ್ಯಾನಂ ಸಮಾಧಿರಿತ್ಯುಕ್ತಂ ಶೃಣುಧ್ವಂ ಸುಸಮಾಹಿತಾಃ ॥ ೮ ॥

ತತ್ಕಥಾಂ ಶ್ರಾವಯೇದ್ಯಸ್ತು ತದ್ಭಕ್ತಾನ್ಪೂಜಯೀತ ವಾ ।
ಅಗ್ನಿಶುಶ್ರೂಷಕಶ್ಚೈವ ಸ ವೈ ಭಕ್ತಃ ಸನಾತನಃ ॥ ೯ ॥

ತಚ್ಚಿತ್ತಸ್ತನ್ಮನಾಶ್ಚೈವ ದೇವಪೂಜಾರತಃ ಸದಾ ।
ತತ್ಕರ್ಮಕೃದ್ಭವೇದ್ಯಸ್ತು ಸ ವೈ ಭಕ್ತಃ ಸನಾತನಃ ॥ ೧೦ ॥

ದೇವಾರ್ಥೇ ಕ್ರಿಯಮಾಣಾನಿ ಯಃ ಕರ್ಮಾಣ್ಯನುಮನ್ಯತೇ ।
ಕೀರ್ತನಾದ್ವಾ ಪರೋ ವಿಪ್ರಾಃ ಸ ವೈ ಭಕ್ತತರೋ ನರಃ ॥ ೧೧ ॥

ನಾಭ್ಯಸೂಯೇತ ತದ್ಭಕ್ತಾನ್ನ ನಿಂದ್ಯಾಚ್ಚಾನ್ಯದೇವತಾಂ ।
ಆದಿತ್ಯವ್ರತಚಾರೀ ಚ ಸ ವೈ ಭಕ್ತತರೋ ನರಃ ॥ ೧೨ ॥

---

೮. ಮನಸ್ಸಿನ ಭಾವನೆ (ದೇವನಲ್ಲಿ ಪ್ರೀತಿ) ಯೇ ಭಕ್ತಿಯು; ಆಸಕ್ತಿಯು ಶ್ರದ್ಧೆಯೆನಿಸಿಕೊಳ್ಳುವುದು; ಧ್ಯಾನವೇ ಸಮಾಧಿಯು ಎಂದು ತಿಳಿಯಿರಿ.

೯. ಯಾರು ಸೂರ್ಯನ ಕಥೆಗಳನ್ನು ಆದರದಿಂದ ಶ್ರವಣಮಾಡುವವರೋ, ಯಾರು ಆತನ ಭಕ್ತರನ್ನು ಪೂಜಿಸುವರೋ ಮತ್ತು ಯಾರು ಅಗ್ನಿಯನ್ನು ಸೇವಿಸುವರೋ ಅವರು ನಿಜವಾದ ಸೂರ್ಯಭಕ್ತರೆನಿಸುವರು.

೧೦. ಯಾವನು ಆ ದೇವನನ್ನೇ ಸದಾ ಧ್ಯಾನಿಸುತ್ತಾ ಅವನನ್ನು ಪೂಜಿಸುತ್ತಿರುವನೋ ಮತ್ತು ಮಾಡಿದ ಕರ್ಮಗಳನ್ನು ಆ ದೇವನಿಗೆ ಅರ್ಪಿಸುವನೋ ಅಂತಹ ಪುರುಷನು ನಿಜವಾದ ಭಕ್ತನೆನಿಸುವನು.

೧೧. ದೇವತೆಗಳನ್ನುದ್ದೇಶಿಸಿ ಮಿಕ್ಕವರು ಕರ್ಮವನ್ನು ಮಾಡುತ್ತಿದ್ದರೆ ಅದರಲ್ಲಿ ಸಹಾನುಭೂತಿಯನ್ನು ತೋರಿಸುವವನು, ಇಲ್ಲವೇ ಅಂತಹ ಕರ್ಮವನ್ನು ಮಾಡುವವನನ್ನು ಹೊಗಳುವವನು ಭಕ್ತೋತ್ತಮನು.

೧೨. ಮಿಕ್ಕ ಸೂರ್ಯಭಕ್ತರನ್ನು ನೋಡಿ ಅಸೂಯೆಪಡಬಾರದು. ಬೇರೆ ವಿಷ್ಣು, ಶಿವ, ಮುಂತಾದ ದೇವತೆಗಳನ್ನು ನಿಂದಿಸಬಾರದು. ಹೀಗಿದ್ದು ಆದಿತ್ಯನ ವ್ರತವನ್ನು ಯಾವನು ಮಾಡುತ್ತಲಿರುವನೋ ಅವನು ಭಕ್ತರಲ್ಲಿ ಉತ್ತಮನು.

shrinath.udupa@gmail.com

ಗಚ್ಛಂಸ್ತಿಷ್ಠನ್ ಸ್ವಪಂಜಿಘ್ರನ್ನುನ್ಮಿಷನ್ನಿಮಿಷನ್ನಪಿ ।
ಯಃ ಸ್ಮರೇದ್ಭಾಸ್ಕರಂ ನಿತ್ಯಂ ಸ ವೈ ಭಕ್ತತರೋ ನರಃ ॥ ೧೩ ॥

ಏವಂವಿಧಾ ತ್ವಿಯಂ ಭಕ್ತಿಃ ಸದಾ ಕಾರ್ಯಾ ವಿಜಾನತಾ ।
ಭಕ್ತ್ಯಾ ಸಮಾಧಿನಾ ಚೈವ ಸ್ತವೇನ ಮನಸಾ ತಥಾ ॥ ೧೪ ॥

ಕ್ರಿಯತೇ ನಿಯಮೋ ಯಸ್ತು ದಾನಂ ವಿಪ್ರಾಯ ದೀಯತೇ ।
ಪ್ರತಿಗೃಹ್ಣಂತಿ ತಂ ದೇವಾ ಮನುಷ್ಯಾಃ ಪಿತರಸ್ತಥಾ ॥ ೧೫ ॥

ಪತ್ರಂ ಪುಷ್ಪಂ ಫಲಂ ತೋಯಂ ಯದ್ಭಕ್ತ್ಯಾ ಸಮುಪಾಹೃತಂ ।
ಪ್ರತಿಗೃಹ್ಣಂತಿ ತದ್ದೇವಾ ನಾಸ್ತಿಕಾನ್ವರ್ಜಯಂತಿ ಚ ॥ ೧೬ ॥

ಭಾವಶುದ್ಧಿಃ ಪ್ರಯೋಕ್ತವ್ಯಾ ನಿಯಮಾಚಾರಸಂಯುತಾ ।
ಭಾವಶುಧ್ಧ್ಯಾ ಕ್ರಿಯತೇ ಯತ್ತತ್ಸರ್ವಂ ಸಫಲಂ ಭವೇತ್ ॥ ೧೭ ॥

---

೧೩. ನಡೆಯುವಾಗ, ಕುಳಿತಿರುವಾಗ, ನಿದ್ದೆಮಾಡುವಾಗ, ಸುವಾಸನೆಯನ್ನು ಸೇವಿಸುವಾಗ, ಕಣ್ಣುಗಳನ್ನು ಮುಚ್ಚುವಾಗಲೂ, ಬಿಡುವಾಗಲೂ ಸಹ ಯಾವನು ಸೂರ್ಯನನ್ನು ಭಕ್ತಿಯಿಂದ ಸ್ಮರಿಸುವನೋ ಅವನು ಉತ್ತಮ ಭಕ್ತನು.

೧೪–೧೫. ಎಲೈ ಮುನಿಗಳೇ ! ಇಂತಹ ಭಕ್ತಿಯನ್ನೇ ತಿಳಿದು ಅನುಸರಿಸಬೇಕು. ಭಕ್ತಿಯಿಂದ, ಶ್ರದ್ಧೆಯಿಂದ, ಧ್ಯಾನದಿಂದ, ಸ್ತುತಿಯಿಂದ ಮನಃಪೂರ್ವಕವಾಗಿ, ಮಾಡಿದ ನಿಯಮವನ್ನು ಆಚರಿಸಿದರೆ ಮತ್ತು ಬ್ರಾಹ್ಮಣನಿಗೆ ದಾನಕೊಟ್ಟರೆ ದೇವತೆಗಳು ಅವನ್ನು ಸ್ವೀಕರಿಸುವರು; ಸಂತುಷ್ಟರಾಗುವರು. ಪಿತೃಗಳೂ ಮನುಷ್ಯರೂ ಸಂತುಷ್ಟರಾಗುವರು.

೧೬. ದಳವಾಗಲೀ, ಹೂವಾಗಲೀ, ಹಣ್ಣಾಗಲೀ, ನೀರಾಗಲೀ, ಯಾವುದಾದರೂ ಸರಿಯೇ, ಭಕ್ತಿಯಿಂದ ಅರ್ಪಿಸಿದರೆ ದೇವತೆಗಳು ಅದನ್ನು ಸ್ವೀಕರಿಸುವರು. ಭಕ್ತಿಯಿಲ್ಲದಿದ್ದರೆ ಸ್ವೀಕರಿಸುವುದಿಲ್ಲ.

೧೭. ನಿಯಮ ಮತ್ತು ಆಚಾರಗಳಿಂದ ಅಂತಃಕರಣವನ್ನು ಶುದ್ಧಿಗೊಳಿಸಿಕೊಳ್ಳಬೇಕು. ಅಂತಃಕರಣಶುದ್ಧಿಯಿಂದ ಮಾಡಿದುದೆಲ್ಲವೂ ಸಫಲವಾಗುವುದು.

shrinath.udupa@gmail.com

ಸ್ತುತಿಜಪ್ಯೋಪಹಾರೇಣ ಪೂಜಯಾಽಪಿ ವಿವಸ್ವತಃ ।
ಉಪವಾಸೇನ ಭಕ್ತ್ಯಾ ವೈ ಸರ್ವಪಾಪೈಃ ಪ್ರಮುಚ್ಯತೇ ॥ ೧೮ ॥

ಪ್ರಣಿಧಾಯ ಶಿರೋ ಭೂಮ್ಯಾಂ ನಮಸ್ಕಾರಂ ಕರೋತಿ ಯಃ ।
ತತ್ಕ್ಷಣಾತ್ಸರ್ವಪಾಪೇಭ್ಯೋ ಮುಚ್ಯತೇ ನಾತ್ರ ಸಂಶಯಃ ॥ ೧೯ ॥

ಭಕ್ತಿಯುಕ್ತೋ ನರೋ ಯೋಽಸೌ ರವೇಃ ಕುರ್ಯಾತ್ಪ್ರದಕ್ಷಿಣಾಂ ।
ಪ್ರದಕ್ಷಿಣೀಕೃತಾ ತೇನ ಸಪ್ತದ್ವೀಪಾ ವಸುಂಧರಾ ॥ ೨೦ ॥

ಸೂರ್ಯಂ ಮನಸಿ ಯಃ ಕೃತ್ವಾ ಕುರ್ಯಾದ್ವ್ಯೋಮಪ್ರದಕ್ಷಿಣಾಂ ।
ಪ್ರದಕ್ಷಿಣೀಕೃತಾಸ್ತೇನ ಸರ್ವೇ ದೇವಾ ಭವಂತಿ ಹಿ ॥ ೨೧ ॥

ಏಕಾಹಾರೋ ನರೋ ಭೂತ್ವಾ ಷಷ್ಠ್ಯಾಂ ಯೋಽರ್ಚಯತೇ ರವಿಂ ।
ನಿಯಮವ್ರತಚಾರೀ ಚ ಭವೇದ್ಭಕ್ತಿಸಮನ್ವಿತಃ ॥ ೨೨ ॥

---

೧೮. ಸ್ತೋತ್ರ, ಜಪ, ನೈವೇದ್ಯ, ಸೂರ್ಯನಪೂಜೆ, ಉಪವಾಸ ಇವುಗಳನ್ನು ಭಕ್ತಿಯಿಂದ ಮಾಡಿದರೆ ಸಕಲಪಾಪಗಳೂ ನಾಶವಾಗುವುವು.

೧೯. ಶಿರಸ್ಸು ನೆಲಕ್ಕೆ ತಾಗುವಂತೆ ಭಕ್ತಿಯಿಂದ ನಮಸ್ಕಾರಮಾಡಿದರೆ ಆ ಕೂಡಲೇ ಪಾಪಗಳೆಲ್ಲವೂ ನಾಶವಾಗುವುವು. ಇದರಲ್ಲಿ ಸಂಶಯವಿಲ್ಲವು.

೨೦. ಭಕ್ತಿಯಿಂದ ಸೂರ್ಯನಿಗೆ ಪ್ರದಕ್ಷಿಣೆಯನ್ನು ಮಾಡಿದರೆ ಏಳುದ್ವೀಪಗಳನ್ನೊಳಗೊಂಡ ಭೂಮಿಯನ್ನೇ ಪ್ರದಕ್ಷಿಣೆಮಾಡಿದಂತಾಗುವುದು (ಭೂಪ್ರದಕ್ಷಿಣೆಯ ಪುಣ್ಯವು ಬರುವುದು).

೨೧. ಸೂರ್ಯನನ್ನು ಭಕ್ತಿಯಿಂದ ಧ್ಯಾನಿಸುತ್ತಾ ಆಕಾಶಪ್ರದಕ್ಷಿಣೆಯನ್ನು ಮಾಡಿದರೆ ದೇವತೆಗಳೆಲ್ಲರಿಗೂ ಪ್ರದಕ್ಷಿಣೆಮಾಡಿದಂತಾಗುವುದು.

೨೨. ಷಷ್ಠಿಯಲ್ಲಾಗಲೀ ಸಪ್ತಮಿಯಲ್ಲಾಗಲೀ ಒಪ್ಪೊತ್ತು ಉಪವಾಸವನ್ನು ಮಾಡಿ, ವ್ರತನಿಯಮಗಳನ್ನು ಭಕ್ತಿಯಿಂದ ಅನುಷ್ಠಾನಮಾಡುತ್ತಾ ಸೂರ್ಯನನ್ನರ್ಚಿಸಿದವನು ಅಶ್ವಮೇಧಯಾಗದ ಫಲವನ್ನು ಪಡೆಯುವನು.

shrinath.udupa@gmail.com

ಸಪ್ತಮ್ಯಾಂ ವಾ ಮಹಾಭಾಗಾಃ ಸೋಽಶ್ವಮೇಧಫಲಂ ಲಭೇತ್ ।
ಅಹೋರಾತ್ರೋಪವಾಸೇನ ಪೂಜಯೇದ್ಯಸ್ತು ಭಾಸ್ಕರಂ ॥ ೨೩ ॥

ಸಪ್ತಮ್ಯಾಮಥವಾ ಷಷ್ಠ್ಯಾಂ ಸ ಯಾತಿ ಪರಮಾಂ ಗತಿಂ ।
ಕೃಷ್ಣಪಕ್ಷಸ್ಯ ಸಪ್ತಮ್ಯಾಂ ಸೋಪವಾಸೋ ಜಿತೇಂದ್ರಿಯಃ ॥ ೨೪ ॥

ಸರ್ವರತ್ನೋಪಹಾರೇಣ ಪೂಜಯೇದ್ಯಸ್ತು ಭಾಸ್ಕರಂ ।
ಪದ್ಮಪ್ರಭೇಣ ಯಾನೇನ ಸೂರ್ಯಲೋಕಂ ಸ ಗಚ್ಛತಿ ॥ ೨೫ ॥

ಶುಕ್ಲಪಕ್ಷಸ್ಯ ಸಪ್ತಮ್ಯಾಮುಪವಾಸಪರೋ ನರಃ ।
ಸರ್ವಶುಕ್ಲೋಪಹಾರೇಣ ಪೂಜಯೇದ್ಯಸ್ತು ಭಾಸ್ಕರಂ ॥ ೨೬ ॥

ಸರ್ವಪಾಪವಿನಿರ್ಮುಕ್ತಃ ಸೂರ್ಯಲೋಕಂ ಸ ಗಚ್ಛತಿ ।
ಅರ್ಕಸಂಪುಟಸಂಯುಕ್ತಮುದಕಂ ಪ್ರಸೃತಂ ಪಿಬೇತ್ ॥ ೨೭ ॥

---

೨೩. ಷಷ್ಠಿ ಅಥವಾ ಸಪ್ತಮಿಯಲ್ಲಿ ರಾತ್ರಿಹಗಲು ಉಪವಾಸವಿದ್ದು ಭಕ್ತಿಯಿಂದ ಸೂರ್ಯನನ್ನು ಅರ್ಚಿಸಿದವನು ಉತ್ತಮಗತಿಯನ್ನು ಪಡೆಯುವನು.

೨೪-೨೫. ಕೃಷ್ಣಪಕ್ಷದ ಸಪ್ತಮಿಯಲ್ಲಿ ಉಪವಾಸವಿದ್ದು ಜಿತೇಂದ್ರಿಯತೆಯಿಂದ ಶ್ರೇಷ್ಠ ವಸ್ತುಗಳನ್ನೂ, ರತ್ನಗಳನ್ನೂ, ಸೂರ್ಯನಿಗರ್ಪಿಸಿ ಪೂಜಿಸಿದವನು ಕಮಲದಂತೆ ಕೆಂಪುಬಣ್ಣವುಳ್ಳ ವಿಮಾನವನ್ನೇರಿ ಸೂರ್ಯಲೋಕಕ್ಕೆ ತೆರಳುವನು.

೨೬. ಶುಕ್ಲಪಕ್ಷದ ಸಪ್ತಮಿಯಲ್ಲಿ ಉಪವಾಸವಿದ್ದು ಬಿಳಿಯ ಪೂಜಾವಸ್ತುಗಳನ್ನರ್ಪಿಸಿ ಭಕ್ತಿಯಿಂದ ಸೂರ್ಯನನ್ನರ್ಚಿಸಿದವನು ಪಾಪಗಳೆಲ್ಲವನ್ನೂ ಕಳೆದುಕೊಂಡವನಾಗಿ ಸೂರ್ಯಲೋಕವನ್ನು ಪಡೆಯುವನು.

೨೭-೨೮. ಮೊದಲನೆಯದಿನ ಸೂರ್ಯದೇವತಾಕವಾದ ಮಂತ್ರದ ಸಂಪುಟೀಕರಣದಿಂದ ಅಭಿಮಂತ್ರಿತವಾದ ಒಂದುಸೇರೆ ಹಿಡಿಯುವಷ್ಟು ಮಟ್ಟಿನ ನೀರನ್ನು ಕುಡಿಯಬೇಕು. ಎರಡನೆಯದಿನ ಎರಡುಸೇರೆ ನೀರು ಕುಡಿಯಬೇಕು. ಹೀಗೆ ಹೆಚ್ಚುಮಾಡುತ್ತಾ ಇಪ್ಪತ್ತು ನಾಲ್ಕು ದಿನಗಳವರೆಗೆ ಬರಿಯ ನೀರನ್ನೇ ಕುಡಿದು ಜೀವಿಸಬೇಕು. ಆಮೇಲೆ ದಿನಕ್ಕೊಂದೊಂದು ಸೇರೆಯಂತೆ ನೀರನ್ನು ಕಡಮೆಮಾಡಿ ಕುಡಿ

shrinath.udupa@gmail.com

ಕ್ರಮವೃದ್ಧ್ಯಾ ಚತುರ್ವಿಂಶಮೇಕೈಕಂ ಕ್ಷಪಯೇತ್ಪುನಃ ।
ದ್ವಾಭ್ಯಾಂ ಸಂವತ್ಸರಾಭ್ಯಾಂ ತು ಸಮಾಪ್ತನಿಯಮೋ ಭವೇತ್ ॥ ೨೮ ॥

ಸರ್ವಕಾಮಪ್ರದಾ ಹ್ಯೇಷಾ ಪ್ರಶಸ್ತಾ ಹ್ಯರ್ಕಸಪ್ತಮೀ ।
ಶುಕ್ಲ ಪಕ್ಷಸ್ಯ ಸಪ್ತಮ್ಯಾಂ ಯದ್ಯಾಽಽದಿತ್ಯದಿನಂ ಭವೇತ್ ॥ ೨೯ ॥

ಸಪ್ತಮೀ ವಿಜಯಾ ನಾಮ ತತ್ರ ದತ್ತಂ ಮಹತ್ಫಲಂ ।
ಸ್ನಾನಂ ದಾನಂ ತಪೋ ಹೋಮ ಉಪವಾಸಸ್ತಥೈವ ಚ ॥ ೩೦ ॥

ಸರ್ವಂ ವಿಜಯಸಪ್ತಮ್ಯಾಂ ಮಹಾಪಾತಕನಾಶನಂ ।
ಯೇ ಚಾಽಽದಿತ್ಯದಿನೇ ಪ್ರಾಪ್ತೇ ಶ್ರಾದ್ಧಂ ಕುರ್ವಂತಿ ಮಾನವಾಃ ॥ ೩೧ ॥

ಯಜಂತಿ ಚ ಮಹಾಶ್ವೇತಂ ತೇ ಲಭಂತೇ ಯಥೇಪ್ಸಿತಂ ।
ಯೇಷಾಂ ಧರ್ಮ್ಯಾಃ ಕ್ರಿಯಾಃ ಸರ್ವಾಃ ಸದೈವೋದ್ದಿಶ್ಯ ಭಾಸ್ಕರಂ ॥ ೩೨ ॥

ಯುತ್ತಾ ಇಪ್ಪತ್ತನಾಲ್ಕುದಿನಗಳವರೆಗೆ ಕಮ್ಮಿಮಾಡಬೇಕು. ಹೀಗೆ ನಲವತ್ತೆಂಟು ದಿನಗಳವರೆಗೆ ವ್ರತವನ್ನು ಮಾಡಿ ಆದಿತ್ಯನನ್ನು ಪೂಜಿಸಬೇಕು. ಸಪ್ತಮಿಯದಿನ ಈ ವ್ರತವನ್ನು ಪ್ರಾರಂಭಿಸಬೇಕು. ಇದಕ್ಕೆ ಅರ್ಕಸಪ್ತಮೀವ್ರತವೆಂದು ಹೆಸರು. ಎರಡು ವರ್ಷಗಳವರೆಗೆ ಈ ವ್ರತವನ್ನಾಚರಿಸಿದರೆ ಸಕಲಮನೋರಥಗಳೂ ಸಿದ್ಧಿಸುವುವು.

೨೯. ಶುಕ್ಲಪಕ್ಷದ ಸಪ್ತಮಿಗೆ ವಿಜಯಸಪ್ತಮಿಯೆಂದು ಹೆಸರು. ಈ ದಿನದಲ್ಲಿ ಸೂರ್ಯನನ್ನರ್ಚಿಸಿ ಧ್ಯಾನಮಾಡಿದರೆ ಮಹಾಫಲವು ಲಭಿಸುವುದು.

೩೦. ಈ ವಿಜಯಸಪ್ತಮಿಯಲ್ಲಿ ಸ್ನಾನ, ದಾನ, ತಪಸ್ಸು, ಹೋಮ, ಉಪವಾಸಗಳನ್ನು ಮಾಡಿದರೆ ಮಹಾಪಾಪಗಳೂ ನಾಶವಾಗುವುವು.

೩೧. ಆ ವಿಜಯಸಪ್ತಮಿಯಲ್ಲಿ ಶ್ರಾದ್ಧವನ್ನು ಮಾಡಿದರೂ ಅತಿಶುಭ್ರ (ಬಿಳಿಯ) ವಾದ ಬಣ್ಣವುಳ್ಳ ಭಾಸ್ಕರನನ್ನು ಅರ್ಚಿಸಿದರೂ ಸಕಲಮನೋರಥಗಳೂ ಸಿದ್ಧಿಸುವುವು.

೩೨. ಯಾರು ಸೂರ್ಯನನ್ನು ಸದಾ ಅರ್ಚಿಸುತ್ತಾ ವ್ರತಗಳನ್ನಾಚರಿಸುವರೋ ಅವರ ವಂಶದಲ್ಲಿ ದರಿದ್ರನಾಗಲೀ ರೋಗಿಯಾಗಲೀ ಜನಿಸುವುದಿಲ್ಲ.

shrinath.udupa@gmail.com

ನ ಕುಲೇ ಜಾಯತೇ ತೇಷಾಂ ದರಿದ್ರೋ ವ್ಯಾಧಿತೋಽಪಿ ವಾ ।
ಶ್ವೇತಯಾ ರಕ್ತಯಾ ವಾಽಪಿ ಪೀತಮೃತ್ತಿಕಯಾಽಪಿ ವಾ ॥ ೩೩ ॥

ಉಪಲೇಪನಕರ್ತಾ ತು ಚಿಂತಿತಂ ಲಭತೇ ಫಲಂ ।
ಚಿತ್ರಭಾನುಂ ವಿಚಿತ್ರೈಸ್ತು ಕುಸುಮೈಶ್ಚ ಸುಗಂಧಿಭಿಃ ॥ ೩೪ ॥

ಪೂಜಯೇತ್ಸೋಪವಾಸೋ ಯಃ ಸ ಕಾಮಾನೀಪ್ಸಿತಾನ್ ಲಭೇತ್ ।
ಘೃತೇನ ದೀಪಂ ಪ್ರಜ್ವಾಲ್ಯ ತಿಲತೈಲೇನ ವಾ ಪುನಃ ॥ ೩೫ ॥

ಆದಿತ್ಯಂ ಪೂಜಯೇದ್ಯಸ್ತು ಚಕ್ಷುಷಾ ನ ಸ ಹೀಯತೇ ।
ದೀಪದಾತಾ ನರೋ ನಿತ್ಯಂ ಜ್ಞಾನದೀಪೇನ ದೀಪ್ಯತೇ ॥ ೩೬ ॥

ತಿಲಾಃ ಪವಿತ್ರಂ ತೈಲಂ ವಾ ತಿಲಗೋದಾನಮುತ್ತಮಂ ।
ಅಗ್ನಿಕಾರ್ಯೇ ಚ ದೀಪೇ ಚ ಮಹಾಪಾತಕನಾಶನಂ ॥ ೩೭ ॥

---

೩೩. ಬಿಳಿಯಗಂಧ ಇಲ್ಲವೆ ಕೆಂಪು, ಹಳದಿ, ಬಣ್ಣಗಳ ಗಂಧ, ಅಲ್ಲದಿದ್ದರೆ ಶುದ್ಧವಾದ ಮಣ್ಣು ಇವುಗಳಿಂದ ಸೂರ್ಯನಿಗೆ ಲೇಪನವನ್ನು ಮಾಡಿದವನು ಸಕಲ ಇಷ್ಟಾರ್ಥಗಳನ್ನೂ ಪಡೆಯುವನು.

೩೪. ಅನೇಕ ಬಣ್ಣಗಳ ಕಿರಣಗಳುಳ್ಳವನಾದ ಸೂರ್ಯನನ್ನು ಅನೇಕಬಗೆಯ ಬಣ್ಣಬಣ್ಣದ ಸುವಾಸನೆಯುಳ್ಳ ಹೂವುಗಳಿಂದ ಉಪವಾಸವಿದ್ದು ಪೂಜಿಸಿದವನು ಸಕಲ ಮನೋರಥಗಳನ್ನೂ ಹೊಂದುವನು.

೩೫–೩೬. ತುಪ್ಪದದೀಪವನ್ನಾಗಲೀ ಎಳ್ಳೆಣ್ಣೆಯ ದೀಪವನ್ನಾಗಲೀ ಹೊತ್ತಿಸಿ ಆದಿತ್ಯನನ್ನು ಪೂಜಿಸಿದರೆ ಅಂಥವನ ಕಣ್ಣುಗಳು ಸರ್ವದಾ ಚೆನ್ನಾಗಿ ಬೆಳಗುತ್ತಿರುವುವು. ದಾನವನ್ನು ಮಾಡಿದವನು ಸದಾ ಜ್ಞಾನಜ್ಯೋತಿಯಿಂದ ಬೆಳಗುವನು.

೩೭. ಎಳ್ಳು ಮತ್ತು ಎಣ್ಣೆಗಳು ಪವಿತ್ರವಾದುವುಗಳು. ಮತ್ತು ಹೋಮಾದಿಗಳಲ್ಲಿ ಎಳ್ಳಿನ ದಾನವೂ ಗೋದಾನವೂ ಉತ್ತಮವಾದುದು. ದೀಪದಾನಕ್ಕೆ ಎಳ್ಳೆಣ್ಣೆಯು ಉತ್ತಮವಾದುದು. ತಿಲದಾನವನ್ನೂ, ಎಳ್ಳೆಣ್ಣೆಯ ದೀಪದಾನವನ್ನೂ ಮಾಡಿದರೆ ಮಹಾಪಾಪಗಳು ನಾಶವಾಗುವುವು.

shrinath.udupa@gmail.com

ದೀಪಂ ದದಾತಿ ಯೋ ನಿತ್ಯಂ ದೇವತಾಯತನೇಷು ಚ ।
ಚತುಷ್ಪಥೇಷು ರಥ್ಯಾಸು ರೂಪವಾನ್ ಸುಭಗೋ ಭವೇತ್ ॥ ೩೮ ॥

ಹವಿರ್ಭಿಃ ಪ್ರಥಮಃ ಕಲ್ಪೋ ದ್ವಿತೀಯಶ್ಚೌಷಧೀರಸೈಃ ।
ವಸಾಮೇದೋಸ್ಥಿನಿರ್ಯಾಸೈರ್ನತು ದೇಯಃ ಕಥಂಚನ ॥ ೩೯ ॥

ಭವೇದೂರ್ಧ್ವಗತಿರ್ದೀಪೋ ನ ಕದಾಚಿದಧೋಗತಿಃ ।
ದಾತಾ ದೀಪ್ಯತಿ ಚಾಪ್ಯೇವಂ ನ ತಿರ್ಯಗ್ಗತಿಮಾಪ್ನುಯಾತ್ ॥ ೪೦ ॥

ಜ್ವಲಮಾನಂ ಸದಾ ದೀಪಂ ನ ಹರೇನ್ನಾಪಿ ನಾಶಯೇತ್ ।
ದೀಪಹರ್ತಾ ನರೋ ಬಂಧಂ ನಾಶಂ ಕ್ರೋಧಂ ತಮೋ ವ್ರಜೇತ್ ॥ ೪೧ ॥

ದೀಪದಾತಾ ಸ್ವರ್ಗಲೋಕೇ ದೀಪಮಾಲೇವ ರಾಜತೇ ।
ಯಃ ಸಮಾಲಭತೇ ನಿತ್ಯಂ ಕುಂಕುಮಾಗುರುಚಂದನೈಃ ॥ ೪೨ ॥

೩೮. ದೇವಾಲಯಗಳು, ಚೌಕಗಳು, ರಸ್ತೆಗಳು ಇವುಗಳಲ್ಲಿ ದೀಪಗಳನ್ನು ಯಾವನು ಹೊತ್ತಿಸಿ ಇಡಿಸುವನೋ ಅವನು ಮುಂದಿನ ಜನ್ಮದಲ್ಲಿ ರೂಪವಂತನೂ ಸೌಭಾಗ್ಯವುಳ್ಳವನೂ ಆಗುವನು.

೩೯. ಹವಿಸ್ಸುಗಳಿಂದ ಅರ್ಚಿಸುವುದು ಉತ್ತಮವು. ಓಷಧಿರಸಗಳಿಂದ ರ್ಚಿಸುವುದು ಮಧ್ಯಮವು. ಕೊಬ್ಬು, ಮೇದಸ್ಸು, ಎಲುಬು, ರಸಿಕೆಗಳಿಂದ ಅರ್ಚಿಸಲೇ ಬಾರದು.

೪೦. ದೀಪವನ್ನು ದಾನಮಾಡಿದವನು ದೀಪವು ಮೇಲ್ಮುಖವಾಗಿ ಉರಿಯುವಂತೆ ಉತ್ತಮಗತಿಯನ್ನೇ ಹೊಂದುವನು; ನೀಚಗತಿಯನ್ನು ಹೊಂದುವುದಿಲ್ಲ.

೪೧. ಉರಿಯುತ್ತಲಿರುವ ದೀಪವನ್ನು ಬೇರೆಕಡೆಗೆ ತೆಗೆದುಕೊಂಡು ಹೋಗಬಾರದು. ಕೆಡಿಸಲೂಬಾರದು. ಹಾಗೆ ದೀಪನಾಶಮಾಡಿದವನು ಅಜ್ಞಾನವನ್ನೂ ಬಂಧನವನ್ನೂ ಕೋಪವನ್ನೂ ಹೊಂದಿದವನಾಗಿ ನಾಶವಾಗುವನು.

೪೨. ದೀಪದಾನವನ್ನು ಮಾಡಿದವನು ಸ್ವರ್ಗದಲ್ಲಿ ದೀಪದಸಾಲಿನಂತೆ ಬೆಳಗುವನು. ಕುಂಕುಮ, ಅಗರು, ಚಂದನಗಳಿಂದ ಸೂರ್ಯನನ್ನರ್ಚಿಸುವವನು ಮುಂದಿನ ಜನ್ಮದಲ್ಲಿ ಧನವಂತನೂ, ಕೀರ್ತಿವಂತನೂ, ಐಶ್ವರ್ಯವುಳ್ಳವನೂ ಆಗುವನು.

shrinath.udupa@gmail.com

ಸಂಪದ್ಯತೇ ನರಃ ಪ್ರೇತ್ಯ ಧನೇನ ಯಶಸಾ ಶ್ರಿಯಾ ।
ರಕ್ತಚಂದನಸಂಮಿಶ್ರೈ ರಕ್ತಪುಷ್ಪೈಃ ಶುಚಿರ್ನರಃ ॥ ೪೩ ॥

ಉದಯೇಽರ್ಘ್ಯಂ ಸದಾ ದತ್ವಾ ಸಿದ್ಧಿಂ ಸಂವತ್ಸರಾಲ್ಲಭೇತ್ ।
ಉದಯಾತ್ಪರಿವರ್ತೇತ ಯಾವದಸ್ತಮನೇ ಸ್ಥಿತಃ ॥ ೪೪ ॥

ಜಪನ್ನಭಿಮುಖಃ ಕಿಂಚಿನ್ಮಂತ್ರಂ ಸ್ತೋತ್ರಮಥಾಪಿ ವಾ ।
ಆದಿತ್ಯವ್ರತಮೇತತ್ತು ಮಹಾಪಾತಕನಾಶನಂ ॥ ೪೫ ॥

ಅರ್ಘ್ಯೇಣ ಸಹಿತಂ ಚೈವ ಸರ್ವಂ ಸಾಂಗಂ ಪ್ರದಾಪಯೇತ್ ।
ಉದಯೇ ಶ್ರದ್ಧಯಾ ಯುಕ್ತಃ ಸರ್ವಪಾಪೈಃ ಪ್ರಮುಚ್ಯತೇ ॥ ೪೬ ॥

ಸುವರ್ಣಧೇನ್ವನಡುಹವಸುಧಾವಸ್ತ್ರಸಂಯುತಂ ।
ಅರ್ಘ್ಯಪ್ರದಾತಾ ಲಭತೇ ಸಪ್ತಜನ್ಮಾನುಗಂ ಫಲಂ ॥ ೪೭ ॥

---

೪೩. ಕೆಂಪುಗಂಧ ಮತ್ತು ಕೆಂಪುಹೂವುಗಳೊಡನೆ ಉದಯಃಕಾಲದಲ್ಲಿ ಮಡಿಯಾಗಿ ಸೂರ್ಯನಿಗೆ ಅರ್ಘ್ಯವನ್ನು ಕೊಟ್ಟವನು ಒಂದುವರ್ಷದೊಳಗೆ ಸಿದ್ಧಿಯನ್ನು ಪಡೆಯುವನು.

೪೪–೪೫. ಸೂರ್ಯನುದಯಿಸಿದ ಮೊದಲುಗೊಂಡು ಅಸ್ತವಾಗುವವರೆಗೆ ಸೂರ್ಯನೆದುರುಮುಖವಾಗಿಯೇ ನಿಂತಿದ್ದು ಸೂರ್ಯಮಂತ್ರಜಪವನ್ನಾಗಲೀ ಸ್ತೋತ್ರವನ್ನಾಗಲೀ ಮಾಡಿದರೆ ಮಹಾಪಾಪಗಳೂ ನಾಶವಾಗುವುವು. ಇದಕ್ಕೆ ಆದಿತ್ಯವ್ರತವೆಂದು ಹೆಸರು.

೪೬. ಉದಯಕಾಲದಲ್ಲಿ ಅರ್ಘ್ಯದೊಡನೆ ಎಲ್ಲವನ್ನೂ ಸಾಂಗವಾಗಿ ಸೂರ್ಯನಿಗೆ ಶ್ರದ್ಧೆಯಿಂದ ಅರ್ಪಿಸಿದರೆ ಸಕಲಪಾಪಗಳೂ ನಾಶವಾಗುವುವು.

೪೭. ಸೂರ್ಯನಿಗೆ ಅರ್ಘ್ಯಕೊಟ್ಟು ಸುವರ್ಣದಾನ, ಗೋದಾನ, ವೃಷಭದಾನ, ಭೂದಾನ, ವಸ್ತ್ರದಾನ ಇವುಗಳನ್ನು ಮಾಡಿದರೆ ಏಳುಜನ್ಮಗಳ ವರೆಗೂ ಬರುವಂತಹ ಪುಣ್ಯವು ಉಂಟಾಗುವುದು.

shrinath.udupa@gmail.com

ಅಗ್ನೌ ತೋಯೇಽಂತರಿಕ್ಷೇ ಚ ಶುಚೌ ಭೂಮ್ಯಾಂ ತಥೈವ ಚ ।
ಪ್ರತಿಮಾಯಾಂ ತಥಾ ಪಿಂಡ್ಯಾಂ ದೇಯಮರ್ಘ್ಯಂ ಪ್ರಯತ್ನತಃ ॥ ೪೮ ॥

ನಾಪಸವ್ಯಂ ನ ಸವ್ಯಂ ಚ ದದ್ಯಾದಭಿಮುಖಃ ಸದಾ ।
ಸಘೃತಂ ಗುಗ್ಗುಲಂ ವಾಽಪಿ ರವೇರ್ಭಕ್ತಿಸಮನ್ವಿತಃ ॥ ೪೯ ॥

ತತ್ಕ್ಷಣಾತ್ಸರ್ವಪಾಪೇಭ್ಯೋ ಮುಚ್ಯತೇ ನಾತ್ರ ಸಂಶಯಃ ।
ಶ್ರೀವಾಸಂ ಚತುರಸ್ರಂ ಚ ದೇವದಾರುಂ ತಥೈವ ಚ ॥ ೫೦ ॥

ಕರ್ಪೂರಾಗರುಧೂಪಾನಿ ದತ್ವಾ ವೈ ಸ್ವರ್ಗಗಾಮಿನಃ ।
ಅಯನೇ ತೂತ್ತರೇ ಸೂರ್ಯಮಥವಾ ದಕ್ಷಿಣಾಯನೇ ॥ ೫೧ ॥

ಪೂಜಯಿತ್ವಾ ವಿಶೇಷೇಣ ಸರ್ವಪಾಪೈಃ ಪ್ರಮುಚ್ಯತೇ ।
ವಿಷುವೇಷೂಪರಾಗೇಷು ಷಡಶೀತಿಮುಖೇಷು ಚ ॥ ೫೨ ॥

---

೪೮. ಅಗ್ನಿ, ನೀರು, ಆಕಾಶ. ಶುದ್ಧವಾದ ಭೂಮಿ, ಸೂರ್ಯವಿಗ್ರಹ, ಹಿಟ್ಟಿನ ವಿಗ್ರಹ, ಇವುಗಳಲ್ಲಿ ಶ್ರದ್ಧೆಯಿಂದ ಅರ್ಘ್ಯವನ್ನು ಕೊಡಬೇಕು.

೪೯. ಸೂರ್ಯನಿಗೆದುರಾಗಿಯೇ ಅರ್ಘ್ಯವನ್ನು ತುಪ್ಪ ಮತ್ತು ಧೂಪಗಳೊಡನೆ ಭಕ್ತಿಯಿಂದ ಕೊಡಬೇಕು. ಆದರೆ ಎಡಕ್ಕಾಗಲಿ ಬಲಭಾಗದಲ್ಲಾಗಲೀ ಅರ್ಘ್ಯವನ್ನು ಕೊಡಕೂಡದು. ಹಾಗೆ ವಿಧಿವತ್ತಾಗಿ ಅರ್ಘ್ಯಕೊಟ್ಟರೆ ಆಕೂಡಲೇ ಸಕಲ ಪಾಪಗಳಿಂದಲೂ ನಿಶ್ಚಯವಾಗಿಯೂ ಬಿಡಲ್ಪಡುವನು.

೫೦. ಶ್ರೀವಾಸ, ಚತುರಸ್ರ ಮತ್ತು ಸುರಹೊನ್ನೆ ಈ ಮರಗಳ ಪುಷ್ಪಗಳನ್ನು ಕರ್ಪೂರ, ಅಗರು, ಧೂಪಗಳನ್ನು ಸೂರ್ಯನಿಗರ್ಪಿಸಿದರೆ ಸ್ವರ್ಗವು ಲಭಿಸುವುದು.

೫೧. ಉತ್ತರಾಯಣ ಅಥವಾ ದಕ್ಷಿಣಾಯನಗಳಲ್ಲಿ ಸೂರ್ಯನನ್ನು ಭಕ್ತಿಯಿಂದ ಪೂಜಿಸಿದರೆ ಸಕಲಪಾಪಗಳೂ ನಾಶವಾಗುವುವು.

೫೨. ವಿಷುವತ್ಪುಣ್ಯಕಾಲ, ಗ್ರಹಣಕಾಲ, ಷಡಶೀತಿ (೮೬) ಪುಣ್ಯಕಾಲಗಳಲ್ಲಿ ಸೂರ್ಯನನ್ನು ಭಕ್ತಿಯಿಂದ ಅರ್ಚಿಸಿದರೆ ಸಕಲಪಾಪಗಳೂ ನಾಶವಾಗುವುವು.

shrinath.udupa@gmail.com

ಪೂಜಯಿತ್ವಾ ವಿಶೇಷೇಣ ಸರ್ವಪಾಪೈಃ ಪ್ರಮುಚ್ಯತೇ ।
ಏವಂ ವೇಲಾಸು ಸರ್ವಾಸು ಸರ್ವಕಾಲಂ ಚ ಮಾನವಃ ॥ ೫೩ ॥

ಭಕ್ತ್ಯಾ ಪೂಜಯತೇ ಯೋಽರ್ಕಂ ಸೋಽರ್ಕಲೋಕೇ ಮಹೀಯತೇ ।
ಕೃಸರೈಃ ಪಾಯಸೈಃ ಪೂಪೈಃ ಫಲಮೂಲಘೃತೌದನೈಃ ॥ ೫೪ ॥

ಬಲಿಂ ಕೃತ್ವಾ ತು ಸೂರ್ಯಾಯ ಸರ್ವಾನ್ಕಾಮಾನವಾಪ್ನುಯಾತ್ ।
ಘೃತೇನ ತರ್ಪಣಂ ಕೃತ್ವಾ ಸರ್ವಸಿದ್ಧೋ ಭವೇನ್ನರಃ ॥ ೫೫ ॥

ಕ್ಷೀರೇಣ ತರ್ಪಣಂ ಕೃತ್ವಾ ಮನಸ್ತಾಪೈರ್ನ ಯುಜ್ಯತೇ ।
ದಧ್ನಾ ತು ತರ್ಪಣಂ ಕೃತ್ವಾ ಕಾರ್ಯಸಿದ್ಧಿಂ ಲಭೇನ್ನರಃ ॥ ೫೬ ॥

ಸ್ನಾನಾರ್ಥಮಾಹರೇದ್ಯಸ್ತು ಜಲಂ ಭಾನೋಃ ಸಮಾಹಿತಃ ।
ತೀರ್ಥೇಷು ಶುಚಿತಾಪನ್ನಃ ಸ ಯಾತಿ ಪರಮಾಂ ಗತಿಂ ॥ ೫೭ ॥

ಛತ್ರಂ ಧ್ವಜಂ ವಿತಾನಂ ವಾ ಪತಾಕಾಂ ಚಾಮರಾಣಿ ಚ ।
ಶ್ರದ್ಧಯಾ ಭಾನವೇ ದತ್ವಾ ಗತಿಮಿಷ್ಟಾಮವಾಪ್ನುಯಾತ್ ॥ ೫೮ ॥

---

೫೩. ಮೇಲೆಹೇಳಿದ ಕಾಲಗಳಲ್ಲೂ ಮಿಕ್ಕ ಎಲ್ಲಾ ಕಾಲಗಳಲ್ಲೂ ಯಾವನು ಸೂರ್ಯನನ್ನು ಭಕ್ತಿಯಿಂದ ಪೂಜಿಸುವನೋ ಅವನು ಸೂರ್ಯಲೋಕದಲ್ಲಿ ವಿಹರಿಸುವನು.

೫೪. ಎಳ್ಳನ್ನ, ಪಾಯಸ, ತಂಬಿಟ್ಟು, ಹಣ್ಣು, ಗೆಡ್ಡೆ, ತುಪ್ಪದನ್ನ ಮುಂತಾದುವುಗಳನ್ನು ಸೂರ್ಯನಿಗೆ ನೈವೇದ್ಯಮಾಡುವವನು ಸಕಲಮನೋರಥಗಳನ್ನೂ ಪಡೆಯುವನು.

೫೫-೫೬. ತುಪ್ಪದಿಂದ ಸೂರ್ಯನಿಗೆ ತರ್ಪಣವನ್ನು ಕೊಟ್ಟರೆ ಸಕಲ ಸಿದ್ಧಿಯನ್ನೂ ಪಡೆಯುವನು. ಹಾಲಿನಿಂದ ತರ್ಪಣವನ್ನು ಮಾಡಿದರೆ ಮನಸ್ಸಿನ ವ್ಯಥೆ (ತಾಪ) ಗಳು ಉಂಟಾಗಲಾರವು. ಮೊಸರಿನಿಂದ ತರ್ಪಣಮಾಡಿದರೆ ಕಾರ್ಯಸಿದ್ಧಿಯು ಆಗುವುದು.

೫೭. ತೀರ್ಥಗಳಿಂದ ಮಡಿಯಾಗಿ ಪವಿತ್ರಜಲವನ್ನು ತಂದು ಸೂರ್ಯನಿಗೆ ಸ್ನಾನಮಾಡಿಸಿದರೆ ಉತ್ತಮಗತಿಯನ್ನು ಪಡೆಯುವನು.

೫೮. ಛತ್ರಿ, ಧ್ವಜ, ಸುಂದರವಾದ ಮೇಲುಕಟ್ಟು, ಪತಾಕೆ, ಚಾಮರಗಳನ್ನು ಭಕ್ತಿಯಿಂದ ಸೂರ್ಯನಿಗರ್ಪಿಸಿದರೆ ತನಗಿಷ್ಟವಾದ ಉತ್ತಮಗತಿಯನ್ನೈದುವನು.

shrinath.udupa@gmail.com

ಯದ್ಯದ್ದ್ರವ್ಯಂ ನರೋ ಭಕ್ತ್ಯಾ ಆದಿತ್ಯಾಯ ಪ್ರಯಚ್ಛತಿ ।
ತತ್ತಸ್ಯ ಶತಸಾಹಸ್ರಮುತ್ಪಾದಯತಿ ಭಾಸ್ಕರಃ ॥ ೫೯ ॥

ಮಾನಸಂ ವಾಚಿಕಂ ವಾಪಿ ಕಾಯಜಂ ಯಚ್ಚ ದುಷ್ಕೃತಂ ।
ಸರ್ವಂ ಸೂರ್ಯಪ್ರಸಾದೇನ ತದಶೇಷಂ ವ್ಯಪೋಹತಿ ॥ ೬೦ ॥

ಏಕಾಹೇನಾಪಿ ಯದ್ಭಾನೋಃ ಪೂಜಾಯಾಃ ಪ್ರಾಪ್ಯತೇ ಫಲಂ ।
ಯಥೋಕ್ತದಕ್ಷಿಣೈರ್ವಿಪ್ರೈರ್ನ ತತ್ಕ್ರತುಶತೈರಪಿ ॥ ೬೧ ॥

ಇತಿ ಶ್ರೀಮಹಾಪುರಾಣೇ ಬ್ರಾಹ್ಮೇ ಸ್ವಯಂಭ್ವೃಷಿಸಂವಾದೇ
ಸೂರ್ಯಪೂಜಾನಿಯಮಭಕ್ತಿಮಾಹಾತ್ಮ್ಯವರ್ಣನಂ
ನಾಮೈಕೋನತ್ರಿಂಶತ್ತಮೋಽಧ್ಯಾಯಃ

---

೫೯. ಮಾನವನು ಭಕ್ತಿಯಿಂದ ಸೂರ್ಯನಿಗೆ ಯಾವ ಯಾವ ವಸ್ತುಗಳನ್ನರ್ಪಿಸುವನೋ ಆ ವಸ್ತುಗಳು ಸಾವಿರಾರುಪಾಲು ಹೆಚ್ಚಾಗಿ ಉಂಟಾಗುವಂತೆ ಸೂರ್ಯನು ಅನುಗ್ರಹಿಸುವನು.

೬೦. ಸೂರ್ಯನ ಅನುಗ್ರಹದಿಂದ ಮನಸ್ಸು, ವಾಕ್ಕು, ಶರೀರಗಳಿಂದ ಮಾಡಿದ ಮೂರು ವಿಧವಾದ ಪಾಪಗಳೂ ಸಂಪೂರ್ಣವಾಗಿ ನಾಶವಾಗುವುವು.

೬೧. ಒಂದು ದಿನ ಭಕ್ತಿಯಿಂದ ಸೂರ್ಯನನ್ನರ್ಚಿಸಿದರೆ ಯಾವ ಫಲವು ಲಭಿಸುವುದೋ ಆ ಫಲವು ತುಂಬಾ ದಕ್ಷಿಣೆಗಳುಳ್ಳ ನೂರಾರು ಯಾಗಗಳಿಂದಲೂ ಲಭಿಸಲಾರದು. ಸೂರ್ಯಾರಾಧನೆಯು ಅಷ್ಟು ಮಹತ್ತ್ವವುಳ್ಳದುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಸ್ವಯಂಭ್ವೃಷಿಸಂವಾದದಲ್ಲಿ ಸೂರ್ಯಪೂಜಾ ನಿಯಮ ಭಕ್ತಿಮಾಹಾತ್ಮ್ಯನಿರೂಪಣವೆಂಬ ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಿಂಶೋಽಧ್ಯಾಯಃ

॥ ಮುನಯ ಊಚುಃ ॥

ಅಹೋ ದೇವಸ್ಯ ಮಾಹಾತ್ಮ್ಯಂ ಶ್ರುತಮೇವಂ ಜಗತ್ಪತೇ ।
ಭಾಸ್ಕರಸ್ಯ ಸುರಶ್ರೇಷ್ಠ ವದತಸ್ತೇಷು ದುರ್ಲಭಂ ॥ ೧ ॥

ಭೂಯಃ ಪ್ರಬ್ರೂಹಿ ದೇವೇಶ ಯತ್ಪೃಚ್ಛಾಮೋ ಜಗತ್ಪತೇ ।
ಶ್ರೋತುಮಿಚ್ಛಾಮಹೇ ಬ್ರಹ್ಮನ್ ಪರಂ ಕೌತೂಹಲಂ ಹಿ ನಃ ॥ ೨ ॥

ಗೃಹಸ್ಥೋ ಬ್ರಹ್ಮಚಾರೀ ಚ ವಾನಪ್ರಸ್ಥೋಽಥ ಭಿಕ್ಷುಕಃ ।
ಯ ಇಚ್ಛೇನ್ಮೋಕ್ಷಮಾಸ್ಥಾತುಂ ದೇವತಾಂ ಕಾಂ ಯಜೇತ ಸಃ ॥ ೩ ॥

ಮೂವತ್ತನೆಯ ಅಧ್ಯಾಯವು

೧. ಮುನಿಗಳು ಹೇಳಿದರು.—ಓ ಜಗದೊಡೆಯನಾದ ಬ್ರಹ್ಮದೇವನೇ ! ನೀನು ಹೇಳಿದ ಭಾಸ್ಕರನ ಮಾಹಾತ್ಮ್ಯವು ಆಶ್ಚರ್ಯಕರವಾಗಿದೆ. ಎಂದೂ ಕೇಳದ ಈ ಮಾಹಾತ್ಮ್ಯವನ್ನು ನಾವು ನಿನ್ನಿಂದ ಕೇಳಿದೆವು.

೨. ಓ ದೇವದೇವ ! ನಾವು ಕೇಳಬೇಕೆಂದಿರುವ ವಿಷಯವನ್ನು ತಿರುಗಿ ಹೇಳುವವನಾಗು. ಸೂರ್ಯನ ಮಹಿಮೆಯನ್ನು ನಿನ್ನ ಮುಖದಿಂದ ಇನ್ನೂ ಕೇಳಬೇಕೆಂಬ ಕುತೂಹಲವು ಹೆಚ್ಚಾಗಿರುವುದು.

೩. ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥದಲ್ಲಿರುವವನು, ಸನ್ಯಾಸಿ ಇವರುಗಳಲ್ಲಿ ಮುಕ್ತಿಯನ್ನಪೇಕ್ಷಿಸುವವರು ಯಾವ ದೇವನನ್ನು ಅರ್ಚಿಸಬೇಕು ?

shrinath.udupa@gmail.com

ಕುತೋ ಹ್ಯಸ್ಯಾಕ್ಷಯಃ ಸ್ವರ್ಗಃ ಕುತೋ ನಿಶ್ಶ್ರೇಯಸಂ ಪರಂ ।
ಸ್ವರ್ಗತಶ್ಚೈವ ಕಿಂ ಕುರ್ಯಾದ್ಯೇನ ನ ಚ್ಯವತೇ ಪುನಃ ॥ ೪ ॥

ದೇವಾನಾಂ ಚಾತ್ರ ಕೋ ದೇವಃ ಪಿತೄಣಾಂ ಚೈವ ಕಃ ಪಿತಾ ।
ಯಸ್ಮಾತ್ಪರತರಂ ನಾಸ್ತಿ ತನ್ಮೇ ಬ್ರೂಹಿ ಸುರೇಶ್ವರ ॥ ೫ ॥

ಕುತಃ ಸೃಷ್ಟಮಿದಂ ವಿಶ್ವಂ ಸರ್ವಂ ಸ್ಥಾವರಜಂಗಮಂ ।
ಪ್ರಲಯೇ ಚ ಕಮಭ್ಯೇತಿ ತದ್ಭವಾನ್ವಕ್ತುಮರ್ಹತಿ ॥ ೬ ॥

॥ ಬ್ರಹ್ಮೋವಾಚ ॥

ಉದ್ಯನ್ನೇವೈಷ ಕುರುತೇ ಜಗದ್ವಿತಿಮಿರಂ ಕರೈಃ ।
ನಾತಃ ಪರತರೋ ದೇವಃ ಕಶ್ಚಿದನ್ಯೋ ದ್ವಿಜೋತ್ತಮಾಃ ॥ ೭ ॥

ಅನಾದಿನಿಧನೋ ಹ್ಯೇಷ ಪುರುಷಃ ಶಾಶ್ವತೋಽವ್ಯಯಃ ।
ತಾಪಯತ್ಯೇಷ ತ್ರೀನ್ ಲೋಕಾನ್ಸರ್ವಾ ರಶ್ಮಿಭಿರುಲ್ಬಣಃ ॥ ೮ ॥

---

೪. ಸ್ಥಿರವಾಗಿ ಸ್ವರ್ಗವು ಯಾವದೇವನಿಂದ ಲಭಿಸುವುದು ? ಮುಕ್ತಿಯು ಯಾವದೇವನ ಅನುಗ್ರಹದಿಂದುಂಟಾಗುವುದು ? ಸ್ವರ್ಗವನ್ನು ಪಡೆದವನು ಅಲ್ಲಿಂದ ತಿರುಗಿ ಮರಳಿಬಾರದಂತೆ ಏನು ಮಾಡಬೇಕು ?

೫. ದೇವತೆಗಳಿಗೂ ದೇವನು ಯಾರು ? ಪಿತೃಗಳಿಗೂ ಪಿತನು ಯಾರು ? ಯಾವ ದೇವನಿಗಿಂತ ಮಿಗಿಲಾದ ದೇವರಿಲ್ಲವೊ ಅಂತಹ ದೇವನನ್ನು, ಓ ಬ್ರಹ್ಮದೇವ ! ಹೇಳುವವನಾಗು.

೬. ಈ ಸ್ಥಿರಚರರೂಪವಾದ ಜಗತ್ತನ್ನು ಸೃಷ್ಟಿಸಿದವನು ಯಾರು? ಪ್ರಲಯದಲ್ಲಿ ಈ ಜಗತ್ತು ಯಾರನ್ನು ಸೇರವುದು ? ಇದೆಲ್ಲವನ್ನೂ ನಮಗೆ ಹೇಳುವವನಾಗು.

೭. ಬ್ರಹ್ಮನು ಹೇಳಿದನು.—ಎಲೈ ಮುನಿಗಳೇ! ಈ ಸೂರ್ಯನು ಉದಯಿಸುತ್ತಲೇ ತನ್ನ ಕಿರಣಗಳಿಂದ ಜಗತ್ತಿನ ಕತ್ತಲೆಯೆಲ್ಲವನ್ನೂ ಹೋಗಲಾಡಿಸುವನು. ಇಂತಹ ಸೂರ್ಯನಿಗಿಂತ ಮಿಗಿಲಾದ ದೇವನಿನ್ನೊಬ್ಬನಿರುವುದಿಲ್ಲ.

೮. ಈ ಸೂರ್ಯನು ಆದಿಯೂ ಅಂತ್ಯವೂ ಇಲ್ಲದ ಪುರಾಣಪುರುಷನು· ನಿತ್ಯನು. ಇವನಿಗೆಂದೆಂದಿಗೂ ನಾಶವಿಲ್ಲವು. ತನ್ನ ಉಗ್ರವಾದ ಕಿರಣಗಳಿಂದ ಈ ಸೂರ್ಯನು ಮೂರುಲೋಕಗನ್ನೂ ತಪಿಸುವನು.

shrinath.udupa@gmail.com

ಸರ್ವದೇವಮಯೋ ಹ್ಯೇಷ ತಪತಾಂ ತಪನೋ ವರಃ ।
ಸರ್ವಸ್ಯ ಜಗತೋ ನಾಥಃ ಸರ್ವಸಾಕ್ಷೀ ಜಗತ್ಪತಿಃ ॥ ೯ ॥

ಸಂಕ್ಷಿಪತ್ಯೇಷ ಭೂತಾನಿ ತಥಾ ವಿಸೃಜತೇ ಪುನಃ ।
ಏಷ ಭಾತಿ ತಪತ್ಯೇಷ ವರ್ಷತ್ಯೇಷ ಗಭಸ್ತಿಭಿಃ ॥ ೧೦ ॥

ಏಷ ಧಾತಾ ವಿಧಾತಾ ಚ ಭೂತಾದಿರ್ಭೂತಭಾವನಃ ।
ನ ಹ್ಯೇಷ ಕ್ಷಯಮಾಯಾತಿ ನಿತ್ಯಮಕ್ಷಯಮಂಡಲಃ ॥ ೧೧ ॥

ಪಿತೃಣಾಂ ಚ ಪಿತಾ ಹ್ಯೇಷ ದೇವತಾನಾಂ ಹಿ ದೇವತಾ ।
ಧ್ರುವಂ ಸ್ಥಾನಂ ಸ್ಮೃತಂ ಹ್ಯೇತದ್ಯಸ್ಮಾನ್ನ ಚ್ಯವತೇ ಪುನಃ ॥ ೧೨ ॥

ಸರ್ಗಕಾಲೇ ಜಗತ್ಕೃತ್ಸ್ನಮಾದಿತ್ಯಾತ್ಸಂಪ್ರಸೂಯತೇ ।
ಪ್ರಲಯೇ ಚ ತಮಭ್ಯೇತಿ ಭಾಸ್ಕರಂ ದೀಪ್ತತೇಜಸಂ ॥ ೧೩ ॥

---

೯. ಎಲ್ಲಾ ದೇವತೆಗಳ ಸ್ವರೂಪನಿವನು. ಪ್ರಕಾಶಿಸುವವರಲ್ಲಿವನು ಶ್ರೇಷ್ಠನು. ಜಗತ್ತಿಗೆಲ್ಲಕ್ಕೂ ಒಡೆಯನು. ಜಗತ್ತಿನಲ್ಲಿ ನಡೆಯುವ ಕಾರ್ಯಗಳಿಗೆಲ್ಲಾ ಇವನು ಸಾಕ್ಷಿಯು.

೧೦. ಈ ಸೂರ್ಯನೇ ಜಗತ್ತನ್ನು ಸಂಹರಿಸುವನು. ತಿರುಗಿ ಸೃಷ್ಟಿಸುವನು. ಕಿರಣಗಳಿಂದ ಪ್ರಕಾಶಗೊಳಿಸುವನು. ತಾಪಗೊಳಿಸುವನು. ಮತ್ತೆ ಮಳೆಯನ್ನು ಸುರಿಸುವನು.

೧೧. ಈ ಸೂರ್ಯನೇ ಸೃಷ್ಟಿಕರ್ತನು. ಪಾಲಿಸುವವನು. ಜಗತ್ತಿಗೆ ಇವನೇ ಆದಿಯು. ಜಗತ್ತನ್ನಿವನೇ ಧರಿಸಿರುವನು. ನಿತ್ಯವಾದ ತೇಜೋಮಂಡಲವುಳ್ಳ ಈ ಸೂರ್ಯನು ಎಂದೂ ಕ್ಷಯಿಸುವುದಿಲ್ಲವು.

೧೨. ಈ ಸೂರ್ಯನು ಪಿತೃಗಳಿಗೆ ಪಿತನು. ದೇವತೆಗಳಿಗೂ ದೇವನು. ಸೂರ್ಯಮಂಡಲವು ಸ್ಥಿರವಾದ ಸ್ಥಾನವು. ಏಕೆಂದರೆ, ಇದು ಎಂದೆಂದಿಗೂ ಚ್ಯುತಿಯನ್ನು ಹೊಂದಲಾರದು.

೧೩. ಸೃಷ್ಟಿಯ ಕಾಲದಲ್ಲಿ ಸೂರ್ಯನಿಂದ ಜಗತ್ತೆಲ್ಲವೂ ಜನಿಸುವುದು. ಪ್ರಳಯಕಾಲದಲ್ಲಿ ತೇಜಸ್ವಿಯಾದ ಆ ಭಾಸ್ಕರನಲ್ಲಿಯೇ ಲಯವನ್ನು ಹೊಂದುವುದು.

shrinath.udupa@gmail.com

ಯೋಗಿನಶ್ಚಾಪ್ಯಸಂಖ್ಯಾತಾಸ್ತ್ಯಕ್ತ್ವಾ ಗೃಹಕಲೇವರಂ ।
ವಾಯುರ್ಭೂತ್ವಾ ವಿಶಂತ್ಯಸ್ಮಿಂಸ್ತೇಜೋರಾಶೌ ದಿವಾಕರೇ ॥ ೧೪ ॥

ಅಸ್ಯ ರಶ್ಮಿಸಹಸ್ರಾಣಿ ಶಾಖಾ ಇವ ವಿಹಂಗಮಾಃ ।
ವಸಂತ್ಯಾಶ್ರಿತ್ಯ ಮುನಯಃ ಸಂಸಿದ್ಧಾ ದೈವತೈಃ ಸಹ ॥ ೧೫ ॥

ಗೃಹಸ್ಥಾ ಜನಕಾದ್ಯಾಶ್ಚ ರಾಜಾನೋ ಯೋಗಧರ್ಮಿಣಃ ।
ವಾಲಖಿಲ್ಯಾದಯಶ್ಚೈವ ಋಷಯೋ ಬ್ರಹ್ಮವಾದಿನಃ ॥ ೧೬ ॥

ವಾನಪ್ರಸ್ಥಾಶ್ಚ ಯೇ ಚಾನ್ಯೇ ವ್ಯಾಸಾದ್ಯಾ ಭಿಕ್ಷವಸ್ತಥಾ ।
ಯೋಗಮಾಸ್ಥಾಯ ಸರ್ವೇ ತೇ ಪ್ರವಿಷ್ಟಾಃ ಸೂರ್ಯಮಂಡಲಂ ॥ ೧೭ ॥

ಶುಕೋ ವ್ಯಾಸಸುತಃ ಶ್ರೀಮಾನ್ಯೋಗಧರ್ಮಮವಾಪ್ಯ ಸಃ ।
ಆದಿತ್ಯಕಿರಣಾನ್ ಗತ್ವಾ ಹ್ಯಪುನರ್ಭಾವಮಾಸ್ಥಿತಃ ॥ ೧೮ ॥

ಶಬ್ದಮಾತ್ರಶ್ರುತಿಮುಖಾ ಬ್ರಹ್ಮವಿಷ್ಣುಶಿವಾದಯಃ ।
ಪ್ರತ್ಯಕ್ಷೋಽಯಂ ಪರೋ ದೇವಃ ಸೂರ್ಯಸ್ತಿಮಿರನಾಶನಃ ॥ ೧೯ ॥

---

೧೪. ಯೋಗಿಗಳು ಯೋಗದಿಂದ, ಶರೀರವೆಂಬ ಮನೆಯನ್ನು ಬಿಟ್ಟು ವಾಯುರೂಪವನ್ನು ಧರಿಸಿ ತೇಜೋಮಯನಾದ ಈ ಸೂರ್ಯನನ್ನೇ ಸೇರುವರು.

೧೫. ತಪಸ್ಸಿದ್ಧಿಯನ್ನು ಪಡೆದ ಮುನಿಗಳು ಈ ಸೂರ್ಯನ ಸಾವಿರಾರು ಕಿರಣಗಳನ್ನು ಹಕ್ಕಿಗಳು ಕೊಂಬೆಗಳನ್ನು ಆಶ್ರಯಿಸುವಂತೆ ಆಶ್ರಯಿಸಿ ದೇವತೆಗಳೊಡನೆ ವಿಹರಿಸುವರು.

೧೬–೧೭. ಗೃಹಸ್ಥರಾದ ಜನಕರಾಜಮೊದಲಾದವರೂ, ವಾಲಖಿಲ್ಯ ಮೊದಲಾದ ಬ್ರಹ್ಮಜ್ಞಾನಿಗಳಾದ ಋಷಿಗಳೂ, ಕೆಲವರು ವಾನಪ್ರಸ್ಥಾಶ್ರಮಿಗಳೂ, ವ್ಯಾಸಮುನಿ ಮೊದಲಾದ ಸನ್ಯಾಸಿಗಳೂ ಸಹ ಯೋಗವನ್ನನುಷ್ಠಾನಮಾಡಿ ಸೂರ್ಯಮಂಡಲವನ್ನು ಪ್ರವೇಶಿಸಿರುವರು.

೧೮ ವ್ಯಾಸಮುನಿಯ ಮಗನಾದ ಬ್ರಹ್ಮಚಾರಿಶುಕನು ಯೋಗವನ್ನನುಷ್ಠಾನಮಾಡಿ ಆದಿತ್ಯಮಂಡಲವನ್ನು ಸೇರಿ ಮುಕ್ತಿಯನ್ನೈದಿದನು.

೧೯. ಬ್ರಹ್ಮ, ವಿಷ್ಣು, ಶಂಕರ ಇವರ ಸ್ವರೂಪವು ನಮಗೆ ವೇದಪುರಾಣಾದಿಗಳಿಂದ ಮಾತ್ರ ತಿಳಿಯುವುದು. ಆದರೆ ಕತ್ತಲೆಗೆ ವೈರಿಯಾದ ಈ ಸೂರ್ಯದೇವನು ನಮಗೆ ನಿತ್ಯವೂ ಕಾಣಿಸುವನು.

shrinath.udupa@gmail.com

ತಸ್ಮಾದನ್ಯತ್ರ ಭಕ್ತಿರ್ಹಿ ನ ಕಾರ್ಯಾ ಶುಭಮಿಚ್ಛತಾ ।
ಯಸ್ಮಾದ್ದೃಷ್ಟೇರಗಮ್ಯಾಸ್ತೇ ದೇವಾ ವಿಷ್ಣುಪುರೋಗಮಾಃ ॥ ೨೦ ॥

ಅತೋ ಭವದ್ಭಿಃ ಸತತಮಭ್ಯರ್ಚ್ಯೋ ಭಗವಾನ್ ರವಿಃ ।
ಸ ಹಿ ಮಾತಾ ಪಿತಾ ಚೈವ ಕೃತ್ಸ್ನಸ್ಯ ಜಗತೋ ಗುರುಃ ॥ ೨೧ ॥

ಅನಾದ್ಯೋ ಲೋಕನಾಥೋಽಸೌ ರಶ್ಮಿಮಾಲೀ ಜಗತ್ಪತಿಃ ।
ಮಿತ್ರತ್ವೇ ಚ ಸ್ಥಿತೋ ಯಸ್ಮಾತ್ತಪಸ್ತೇಪೇ ದ್ವಿಜೋತ್ತಮಾಃ ॥ ೨೨ ॥

ಅನಾದಿನಿಧನೋ ಬ್ರಹ್ಮಾ ನಿತ್ಯಶ್ಚಾಕ್ಷಯ ಏವ ಚ ।
ಸೃಷ್ಟ್ವಾ ಸಸಾಗರಾನ್ ದ್ವೀಪಾನ್ಭುವನಾನಿ ಚತುರ್ದಶ ॥ ೨೩ ॥

ಲೋಕಾನಾಂ ಸ ಹಿತಾರ್ಥಾಯ ಸ್ಥಿತಶ್ಚಂದ್ರಸರಿತ್ತಟೇ ।
ಸೃಷ್ಟ್ವಾ ಪ್ರಜಾಪತೀನ್ಸರ್ವಾನ್ಸೃಷ್ಟ್ವಾ ಚ ವಿವಿಧಾಃ ಪ್ರಜಾಃ ॥ ೨೪ ॥

---

೨೦. ಹರಿ ಮೊದಲಾದವರು ಸಾಮಾನ್ಯರ ದೃಷ್ಟಿಗೆ ಸಿಲುಕುವವರಲ್ಲವಾದುದರಿಂದ ಈ ಸೂರ್ಯದೇವನಲ್ಲಿಯೇ ಭಕ್ತಿಯುಳ್ಳವನಾಗಬೇಕು. ಅವರಿಂದ ಶುಭವಾಗುವುದು.

೨೧. ಆದುದರಿಂದ ನೀವೆಲ್ಲರೂ ಭಗವಾನ್ ಸೂರ್ಯದೇವನನ್ನು ನಿತ್ಯವೂ ಪೂಜಿಸಬೇಕು. ಆ ಸೂರ್ಯನೇ ಜಗತ್ತಿಗೆ ತಂದೆಯು; ತಾಯಿಯು; ಮತ್ತು ಗುರುವು.

೨೨. ಆದಿಯಿಲ್ಲವನೂ, ಅಂತ್ಯವಿಲ್ಲದವನೂ, ಜಗದೊಡೆಯನೂ, ತೇಜೋಮಯನೂ, ಜಗತ್ತಿಗೆ ಮಿತ್ರನೂ, ನಿತ್ಯನೂ, ಪರಬ್ರಹ್ಮಸ್ವರೂಪನೂ ಆದ ಈ ಸೂರ್ಯದೇವನು ಚಂದ್ರಭಾಗಾನದಿಯ ದಡದಲ್ಲಿ ತಪಸ್ಸು ಮಾಡಿ ಸೃಷ್ಟಿಯನ್ನು ಮಾಡತೊಡಗಿದನು.

೨೩–೨೪. ಸಮುದ್ರ ಮತ್ತು ದ್ವೀಪಗಳನ್ನೊಳಗೊಂಡ ಹದಿನಾಲ್ಕುಲೋಕಗಳನ್ನು ಸೃಷ್ಟಿಸಿ ತಿರುಗಿ ಚಂದ್ರಭಾಗಾನದಿಯ ತೀರದಲ್ಲಿ ಲೋಕಕ್ಷೇಮಕ್ಕಾಗಿ ತಪಸ್ಸನ್ನಾಚರಿಸಿ ಒಂಭತ್ತು ಜನ ಪ್ರಜಾಪತಿಗಳನ್ನೂ ಅವರ ಮೂಲಕ ಅನೇಕ ಪ್ರಜೆಗಳನ್ನೂ ಸೃಷ್ಟಿಸಿದನು.

shrinath.udupa@gmail.com

ತತಃ ಶತಸಹಸ್ರಾಂಶುರವ್ಯಕ್ತಶ್ಚ ಪುನಃ ಸ್ವಯಂ ।
ಕೃತ್ವಾ ದ್ವಾದಶಧಾತ್ಮಾನಮಾದಿತ್ಯಮುಪಪದ್ಯತೇ ॥ ೨೫ ॥

ಇಂದ್ರೋ ಧಾತಾಥ ಪರ್ಜನ್ಯಸ್ತ್ವಷ್ಟಾ ಪೂಷಾರ್ಯಮಾ ಭಗಃ ।
ವಿವಸ್ವಾನ್ ವಿಷ್ಣುರಂಶಶ್ಚ ವರುಣೋ ಮಿತ್ರ ಏವ ಚ ॥ ೨೬ ॥

ಆಭಿರ್ದ್ವಾದಶಭಿಸ್ತೇನ ಸೂರ್ಯೇಣ ಪರಮಾತ್ಮನಾ ।
ಕೃತ್ಸ್ನಂ ಜಗದಿದಂ ವ್ಯಾಪ್ತಂ ಮೂರ್ತಿಭಿಶ್ಚ ದ್ವಿಜೋತ್ತಮಾಃ ॥ ೨೭ ॥

ತಸ್ಯ ಯಾ ಪ್ರಥಮಾ ಮೂರ್ತಿರಾದಿತ್ಯಸ್ಯೇಂದ್ರಸಂಜ್ಞಿತಾ ।
ಸ್ಥಿತಾ ಸಾ ದೇವರಾಜತ್ವೇ ದೇವಾನಾಂ ರಿಪುನಾಶಿನೀ ॥ ೨೮ ॥

ದ್ವಿತೀಯಾ ತಸ್ಯ ಯಾ ಮೂರ್ತಿರ್ನಾಮ್ನಾ ಧಾತೇತಿ ಕೀರ್ತಿತಾ ।
ಸ್ಥಿತಾ ಪ್ರಜಾಪತಿತ್ವೇನ ವಿವಿಧಾಃ ಸೃಜತೇ ಪ್ರಜಾಃ ॥ ೨೯ ॥

---

೨೫. ಆಮೇಲೆ ಸಾವಿರಾರು ಕಿರಣಗಳುಳ್ಳ ಸೂರ್ಯನು, ಇಂದ್ರಿಯಗಳಿಗೆ ಪ್ರತ್ಯಕ್ಷವಲ್ಲದ ತನ್ನ ಸ್ವರೂಪವನ್ನು ಹನ್ನೆರಡುರೂಪವಾಗಿ ಮಾಡಿ ಆದಿತ್ಯರೂಪದಿಂದ ಬೆಳಗುತ್ತಿರುವನು.

೨೬. ಇಂದ್ರ, ಧಾತಾ, ಪರ್ಜನ್ಯ, ತ್ವಷ್ಟಾ, ಪೂಷಾ, ಅರ್ಯಮಾ, ಭಗ, ವಿವಸ್ವಾನ್, ವಿಷ್ಣು, ಅಂಶ, ವರುಣ, ಮಿತ್ರ ಇವರೇ ಹನ್ನೆರಡುಜನ ಆದಿತ್ಯರು.

೨೭. ಸೂರ್ಯಪರಮಾತ್ಮನು ತನ್ನ ಈ ಹನ್ನೆರಡು ಮೂರ್ತಿಗಳಿಂದ ಜಗತ್ತೆಲ್ಲವನ್ನೂ ವ್ಯಾಪಿಸಿರುವನು.

೨೮. ಆ ಸೂರ್ಯನ ಮೊದಲನೆಯ ಇಂದ್ರಮೂರ್ತಿಯು ದೇವತೆಗಳ ವೈರಿಗಳನ್ನು ನಾಶಮಾಡುತ್ತಾ ದೇವೇಂದ್ರನಾಗಿರುವುದು.

೨೯. ಧಾತೃವೆಂಬ ಸೂರ್ಯನೆರಡನೆಯ ಮೂರ್ತಿಯು ಬ್ರಹ್ಮನಾಗಿದ್ದು ನಾನಾಬಗೆಯ ಪ್ರಜೆಗಳನ್ನು ಸೃಷ್ಟಿಸುತ್ತಿರುವುದು.

shrinath.udupa@gmail.com

ತೃತೀಯೋಽರ್ಕಸ್ಯ ಯಾ ಮೂರ್ತಿಃ ಪರ್ಜನ್ಯ ಇತಿ ವಿಶ್ರುತಾ ।
ಮೇಘೇಷ್ವೇವ ಸ್ಥಿತಾ ಸಾ ತು ವರ್ಷತೇ ಚ ಗಭಸ್ತಿಭಿಃ ॥ ೩೦ ॥

ಚತುರ್ಥೀ ತಸ್ಯ ಯಾ ಮೂರ್ತಿರ್ನಾಮ್ನಾ ತ್ವಷ್ಟೇತಿ ವಿಶ್ರುತಾ ।
ಸ್ಥಿತಾ ವನಸ್ಪತೌ ಸಾ ತು ಓಷಧೀಷು ಚ ಸರ್ವತಃ ॥ ೩೧ ॥

ಪಂಚಮೀ ತಸ್ಯ ಯಾ ಮೂರ್ತಿರ್ನಾಮ್ನಾ ಪೂಷೇತಿ ವಿಶ್ರುತಾ ।
ಅನ್ನೇ ವ್ಯವಸ್ಥಿತಾ ಸಾ ತು ಪ್ರಜಾಂ ಪುಷ್ಣಾತಿ ನಿತ್ಯಶಃ ॥ ೩೨ ॥

ಮೂರ್ತಿಃ ಷಷ್ಠೀ ರವೇರ್ಯಾ ತು ಅರ್ಯಮಾ ಇತಿ ವಿಶ್ರುತಾ ।
ವಾಯೋಃ ಸಂಸರಣಾ ಸಾ ತು ದೇವೇಷ್ವೇವ ಸಮಾಶ್ರಿತಾ ॥ ೩೩ ॥

ಭಾನೋರ್ಯಾ ಸಪ್ತಮೀ ಮೂರ್ತಿರ್ನಾಮ್ನಾ ಭಗೇತಿ ವಿಶ್ರುತಾ ।
ಭೂತಿಷ್ವವಸ್ಥಿತಾ ಸಾ ತು ಶರೀರೇಷು ಚ ದೇಹಿನಾಂ ॥ ೪೩ ॥

---

೩೦. ಮೂರನೆಯದಾದ ಪರ್ಜನ್ಯವೆಂಬ ಮೂರ್ತಿಯು ಮೇಘಗಳಲ್ಲಿದ್ದು ತನ್ನ ಕಿರಣಗಳಿಂದ ಮಳೆಯನ್ನು ಸುರಿಸುವುದು.

೩೧. ಸೂರ್ಯನ ನಾಲ್ಕನೆಯ ಮೂರ್ತಿಯಾದ ತ್ವಷ್ಟೃವು ವನಸ್ಪತಿ ಮತ್ತು ಓಷಧಿಗಳಲ್ಲಿದ್ದುಕೊಂಡು ಜನಗಳಿಗೆ ಅನುಕೂಲಮಾಡುವನು.

೩೨. ಸೂರ್ಯನ ಐದನೆಯ ಪೂಷಮೂರ್ತಿಯು ಆಹಾರಪದಾರ್ಥಗಳಲ್ಲಿದ್ದುಕೊಂಡು ಪ್ರಜೆಗಳನ್ನು ನಿತ್ಯವೂ ಸಲಹುತ್ತಿರುವುದು.

೩೩. ಸೂರ್ಯನ ಆರನೇ ಮೂರ್ತಿಯಾದ ಅರ್ಯಮನು ವಾಯುವನ್ನು ಪ್ರೇರಿಸುತ್ತಾ ವಾಯುದೇವನಾಗಿರುವನು.

೩೪. ಸೂರ್ಯನ ಏಳನೆಯ ಭಗನೆಂಬ ಮೂರ್ತಿಯು ಮನುಷ್ಯರ ಶರೀರದಲ್ಲಿಯೂ ಐಶ್ವರ್ಯದಲ್ಲಿಯೂ ಇರುವುದು.

shrinath.udupa@gmail.com

ಮೂರ್ತಿರ್ಯಾ ತ್ವಷ್ಟಮೀ ತಸ್ಯ ವಿವಸ್ವಾನಿತಿ ವಿಶ್ರುತಾ ।
ಅಗ್ನೌ ಪ್ರತಿಷ್ಠಿತಾ ಸಾ ತು ಪಚತ್ಯನ್ನಂ ಶರೀರಿಣಾಂ ॥ ೩೫ ॥

ನವಮೀ ಚಿತ್ರಭಾನೋರ್ಯಾ ಮೂರ್ತಿರ್ವಿಷ್ಣುಶ್ಚ ನಾಮತಃ ।
ಪ್ರಾದುರ್ಭವತಿ ಸಾ ನಿತ್ಯಂ ದೇವಾನಾಮರಿಸೂದನೀ ॥ ೩೬ ॥

ದಶಮೀ ತಸ್ಯ ಯಾ ಮೂರ್ತಿರಂಶುಮಾನಿತಿ ವಿಶ್ರುತಾ ।
ವಾಯೌ ಪ್ರತಿಷ್ಠಿತಾ ಸಾ ತು ಪ್ರಹ್ಲಾದಯತಿ ವೈ ಪ್ರಜಾಃ ॥ ೩೭ ॥

ಮೂರ್ತಿಸ್ತ್ವೇಕಾದಶೀ ಭಾನೋರ್ನಾಮ್ನಾ ವರುಣಸಂಜ್ಞಿತಾ ।
ಜಲೇಷ್ವವಸ್ಥಿತಾ ಸಾ ತು ಪ್ರಜಾಂ ಪುಷ್ಣಾತಿ ನಿತ್ಯಶಃ ॥ ೩೮ ॥

ಮೂರ್ತಿರ್ಯಾ ದ್ವಾದಶೀ ಭಾನೋರ್ನಾಮ್ನಾ ಮಿತ್ರೇತಿ ಸಂಜ್ಞಿತಾ ।
ಲೋಕಾನಾಂ ಸಾ ಹಿತಾರ್ಥಾಯ ಸ್ಥಿತಾ ಚಂದ್ರಸರಿತ್ತಟೇ ॥ ೩೯ ॥

---

೩೫. ಸೂರ್ಯನ ಎಂಟನೆಯ ಮೂರ್ತಿಯಾದ ವಿವಸ್ವಾನ್ ಎಂಬುವವನು ಅಗ್ನಿಯಲ್ಲಿದ್ದು ನಿತ್ಯವೂ ಮನುಷ್ಯರಿಗೆ ಬೇಕಾದ ಆಹಾರವನ್ನು ಪಾಕಮಾಡುವನು.

೩೬. ಸೂರ್ಯನ ಒಂಭತ್ತನೆಯ ಮೂರ್ತಿಯಾದ ವಿಷ್ಣುವು ನಿತ್ಯವೂ ದೇವತೆಗಳ ವೈರಿಗಳಾದ ಅಸುರರನ್ನು ನಾಶಮಾಡುವನು.

೩೭. ಸೂರ್ಯನ ಹತ್ತನೇ ಮೂರ್ತಿಯಾದ ಅಂಶುಮಾನ್ ಎಂಬುವವನು ಗಾಳಿಯಲ್ಲಿದ್ದುಕೊಂಡು ಜನಗಳನ್ನಾನಂದಗೊಳಿಸುವನು.

೩೮. ಸೂರ್ಯನ ಹನ್ನೊಂದನೆಯ ಮೂರ್ತಿಯಾದ ವರುಣನು ನೀರಿನಲ್ಲಿದ್ದು ಸದಾ ಪ್ರಜೆಗಳನ್ನು ಸಲಹುತ್ತಿರುವನು.

೩೯. ಸೂರ್ಯನ ಹನ್ನೆರಡನೆಯ ಮೂರ್ತಿಯಾದ ಮಿತ್ರನೆಂಬುವವನು ಚಂದ್ರಭಾಗಾನದಿಯ ತೀರದಲ್ಲಿ ನೆಲಸಿರುವನು.

shrinath.udupa@gmail.com

ವಾಯುಭಕ್ಷಸ್ತಪಸ್ತೇಪೇ ಸ್ಥಿತ್ವಾ ಮೈತ್ರೇಣ ಚಕ್ಷುಷಾ ।
ಅನುಗೃಹ್ಣನ್ ಸದಾ ಭಕ್ತಾನ್ ವರೈರ್ನಾನಾವಿಧೈಸ್ತು ಸಃ ॥ ೪೦ ॥

ಏವಂ ಸಾ ಜಗತಾಂ ಮೂರ್ತಿರ್ಹಿತಾಯ ವಿಹಿತಾ ಪುರಾ ।
ತತ್ರ ಮಿತ್ರಃ ಸ್ಥಿತೋ ಯಸ್ಮಾತ್ತಸ್ಮಾನ್ಮಿತ್ರಂ ಪರಂ ಸ್ಮೃತಂ ॥ ೪೧ ॥

ಆಭಿರ್ದ್ವಾದಶಭಿಸ್ತೇನ ಸವಿತ್ರಾ ಪರಮಾತ್ಮನಾ ।
ಕೃತ್ಸ್ನಂ ಜಗದಿದಂ ವ್ಯಾಪ್ತಂ ಮೂರ್ತಿಭಿಶ್ಚ ದ್ವಿಜೋತ್ತಮಾಃ ॥ ೪೨ ॥

ತಸ್ಮಾದ್ಧ್ಯೇಯೋ ನಮಸ್ಯಶ್ಚ ದ್ವಾದಶಸ್ಥಾಸು ಮೂರ್ತಿಷು ।
ಭಕ್ತಿಮದ್ಭಿರ್ನರೈರ್ನಿತ್ಯಂ ತದ್ಗತೇನಾಂತರಾತ್ಮನಾ ॥ ೪೩ ॥

ಇತ್ಯೇವಂ ದ್ವಾದಶಾದಿತ್ಯಾನ್ನಮಸ್ಕೃತ್ವಾ ತು ಮಾನವಃ ।
ನಿತ್ಯಂ ಶ್ರುತ್ವಾ ಪಠಿತ್ವಾ ಚ ಸೂರ್ಯಲೋಕೇ ಮಹೀಯತೇ ॥ ೪೪ ॥

---

೪೦. ಅಲ್ಲಿ ಆ ಮಿತ್ರನು ವಾಯುವನ್ನು ಮಾತ್ರ ಸೇವಿಸುತ್ತಾ ಲೋಕಕ್ಷೇಮಕ್ಕಾಗಿ ತಪಸ್ಸುಮಾಡಿದನು. ಮತ್ತು ಅಲ್ಲಿ ತನ್ನ ಭಕ್ತರಿಗೆ ನಾನಾವರಗಳನ್ನನುಗ್ರಹಿಸಿದನು.

೪೧. ಹೀಗೆ ಆ ಮಿತ್ರನು ಚಂದ್ರಭಾಗಾನದಿಯ ತೀರದಲ್ಲಿ ನೆಲಸಿ ಮಿತ್ರನಂತೆ ಜಗತ್ತಿಗೆ ಕ್ಷೇಮವನ್ನುಂಟುಮಾಡಿದುದರಿಂದ ಮಿತ್ರನೆಂಬ ಹೆಸರು ಅವನಿಗೆ ಪ್ರಸಿದ್ಧವಾಯಿತು.

೪೨. ಹೀಗೆ ಪರಮಾತ್ಮರೂಪಿಯಾದ ಸೂರ್ಯನು ತನ್ನ ಹನ್ನೆರಡು ಮೂರ್ತಿಗಳಿಂದ ಇಡೀ ಜಗತ್ತನ್ನೂ ವ್ಯಾಪಿಸಿರುವನು.

೪೩. ಆದುದರಿಂದ ಸೂರ್ಯನ ಆ ಹನ್ನೆರಡು ಮೂರ್ತಿಗಳಲ್ಲೂ ಸೂರ್ಯನನ್ನು ಭಕ್ತಿಯಿಂದ ನಿತ್ಯವೂ ನಮಸ್ಕರಿಸಬೇಕು. ಧ್ಯಾನಮಾಡಬೇಕು. ಪೂಜಿಸಬೇಕು.

೪೪. ಈ ದ್ವಾದಶಾದಿತ್ಯರ ವಿಷಯವನ್ನು ಯಾವನು ಕೇಳುವನೋ ಮತ್ತು ಓದುವನೋ ಮತ್ತು ಅವರನ್ನು ನಮಸ್ಕರಿಸುವನೋ ಅವನು ಸೂರ್ಯಲೋಕದಲ್ಲಿ ವಿಹರಿಸುವನು.

shrinath.udupa@gmail.com
॥ ಮುನಯ ಊಚುಃ ॥

ಯದಿ ತಾವದಯಂ ಸೂರ್ಯಶ್ಚಾದಿದೇವಃ ಸನಾತನಃ ।
ತತಃ ಕಸ್ಮಾತ್ತಪಸ್ತೇಪೇ ವರೇಪ್ಸುಃ ಪ್ರಾಕೃತೋ ಯಥಾ ॥ ೪೫ ॥

॥ ಬ್ರಹ್ಮೋವಾಚ ॥

ಏತದ್ವಃ ಸಂಪ್ರವಕ್ಷ್ಯಾಮಿ ಪರಂ ಗುಹ್ಯಂ ವಿಭಾವಸೋಃ ।
ಪೃಷ್ಟಂ ಮಿತ್ರೇಣ ಯತ್ಪೂರ್ವಂ ನಾರದಾಯ ಮಹಾತ್ಮನೇ ॥ ೪೬ ॥

ಪ್ರಾಙ್ಮಯೋಕ್ತಾಸ್ತು ಯುಷ್ಮಭ್ಯಂ ರವೇರ್ದ್ವಾದಶ ಮೂರ್ತಯಃ ।
ಮಿತ್ರಶ್ಚ ವರುಣಶ್ಚೋಭೌ ತಾಸಾಂ ತಪಸಿ ಸಂಸ್ಥಿತೌ ॥ ೪೭ ॥

ಅಬ್ಭಕ್ಷೋ ವರುಣಸ್ತಾಸಾಂ ತಸ್ಥೌ ಪಶ್ಚಿಮಸಾಗರೇ ।
ಮಿತ್ರೋ ಮಿತ್ರವನೇ ಚಾಸ್ಮಿನ್ವಾಯುಭಕ್ಷೋಽಭವತ್ತದಾ ॥ ೪೮ ॥

ಅಥ ಮೇರುಗಿರೇಃ ಶೃಂಗಾತ್ಪ್ರಚ್ಯುತೋ ಗಂಧಮಾದನಾತ್ ।
ನಾರದಸ್ತು ಮಹಾಯೋಗೀ ಸರ್ವಾನ್ ಲೋಕಾಂಶ್ಚರನ್ವಶೀ ॥ ೪೯ ॥

---

೪೫. ಮುನಿಗಳು ಪ್ರಶ್ನಿಸಿದರು.—ಈ ಸೂರ್ಯನು ದೇವದೇವನೂ ಪರಮಾತ್ಮನೂ ಆಗಿರುವನು. ಹೀಗಿದ್ದು ಇವನು ಸಾಮಾನ್ಯ ಮನುಷ್ಯನಂತೆ ವರವನ್ನು ಪಡೆಯಲು ತಪಸ್ಸನ್ನಾಚರಿಸಲು ಕಾರಣವೇನು ?

೪೬. ಬ್ರಹ್ಮನು ಹೇಳಿದನು.—ಎಲೈ ಮುನಿಗಳೇ ! ನೀವು ಪ್ರಶ್ನಿಸಿದುದನ್ನು ಹೇಳುವೆನು. ಸೂರ್ಯನ ಈ ತಪಸ್ಸಿನ ರಹಸ್ಯವನ್ನು ಕುರಿತು ಹಿಂದೆ ಮಹಾತ್ಮನಾದ ನಾರದನು ಆ ಮಿತ್ರನನ್ನೇ ಕೇಳಿದನು. ಅದನ್ನೇ ನಿಮಗೆ ಹೇಳುವೆನು.

೪೭. ಹಿಂದೆ ಹೇಳಿದ ಹನ್ನೆರಡುಜನ ಆದಿತ್ಯರಲ್ಲಿ ಮಿತ್ರನೂ, ವರುಣನೂ ತಪಸ್ಸನ್ನು ಆಚರಿಸಿದರು.

೪೮. ವರುಣನು ಪಶ್ಚಿಮಸಮುದ್ರತೀರದಲ್ಲಿ ನೀರನ್ನೇ ಆಹಾರವಾಗಿ ಸೇವಿಸುತ್ತಾ ತಪಸ್ಸುಮಾಡಿದನು. ಮಿತ್ರನು ಹಿಂದೆ ಹೇಳಿದ ಮಿತ್ರವನದಲ್ಲಿ ಬರಿಯ ಗಾಳಿಯನ್ನು ಸೇವಿಸಿಕೊಂಡು ತಪಸ್ಸನ್ನಾಚರಿಸಿದನು.

೪೯. ಆಗ ಲೋಕಸಂಚಾರಿಯೂ, ಮಹಾಯೋಗಿಯೂ ಆದ ನಾರದಮುನಿಯು ಮೇರುಶಿಖರವಾದ ಗಂಧಮಾಧನಗಿರಿಯಿಂದ ಹೊರಟು ಸಂಚರಿಸುತ್ತಾ ಮಿತ್ರನು ತಪಸ್ಸುಮಾಡುತ್ತಿರುವಲ್ಲಿಗೆ ಬಂದನು.

shrinath.udupa@gmail.com

ಆಜಗಾಮಾಥ ತತ್ರೈವ ಯತ್ರ ಮಿತ್ರೋಽಚರತ್ತಪಃ ।
ತಂ ದೃಷ್ಟ್ವಾ ತು ತಪಸ್ಯಂತಂ ತಸ್ಯ ಕೌತೂಹಲಂ ಹ್ಯಭೂತ್ ॥ ೫೦ ॥

ಯೋಽಕ್ಷಯಶ್ಚಾವ್ಯಯಶ್ಚೈವ ವ್ಯಕ್ತಾವ್ಯಕ್ತಃ ಸನಾತನಃ ।
ಧೃತಮೇಕಾತ್ಮಕಂ ಯೇನ ತ್ರೈಲೋಕ್ಯಂ ಸುಮಹಾತ್ಮನಾ ॥ ೫೧ ॥

ಯಃ ಪಿತಾ ಸರ್ವದೇವಾನಾಂ ಪರಾಣಾಮಪಿ ಯಃ ಪರಃ ।
ಅಯಜದ್ದೇವತಾಃ ಕಾಸ್ತು ಪಿತೄನ್ವಾ ಕಾನಸೌ ಯಜೇತ್ ।
ಇತಿ ಸಂಚಿಂತ್ಯ ಮನಸಾ ತಂ ದೇವಂ ನಾರದೋಽಬ್ರವೀತ್ ॥ ೫೨ ॥

॥ ನಾರದ ಉವಾಚ ॥

ವೇದೇಷು ಸಪುರಾಣೇಷು ಸಾಂಗೋಪಾಂಗೇಷು ಗೀಯಸೇ ।
ತ್ವಮಜಃ ಶಾಶ್ವತೋ ಧಾತಾ ತ್ವಂ ನಿಧಾನಮನುತ್ತಮಂ ॥ ೫೩ ॥

---

೫೦. ಅಲ್ಲಿ ಮಿತ್ರದೇವನು ತಪಸ್ಸುಮಾಡುತ್ತಿರುವುದನ್ನು ನೋಡಿ ನಾರದ ಮುನಿಯು ತುಂಬಾ ಆಶ್ಚರ್ಯಗೊಂಡು ಹೀಗೆ ಚಿಂತಿಸಿದನು.

೫೧. ಈ ಮಿತ್ರನು ನಿತ್ಯನೂ ನಾಶವಿಲ್ಲದವನೂ ಆಗಿರುವನು. ಸೂರ್ಯ ರೂಪದಿಂದ ಪ್ರತ್ಯಕ್ಷನೂ ಇಂದ್ರಿಯಗೋಚರವಲ್ಲದ ಪರಮಾತ್ಮರೂಪನೂ ಆಗಿರುವನು. ಪುರಾಣಪುರುಷನಿವನು. ಈ ಮಹಾತ್ಮನು ಮೂರು ಲೋಕಗಳನ್ನೂ ಧರಿಸಿರುವನು.

೫೨. ದೇವತೆಗಳೆಲ್ಲರಿಗೂ ಇವನು ಪಿತನು. ಸರ್ವೋತ್ತಮನಿವನು. ಇಂತಹ ಈ ಮಿತ್ರನು ಯಾವ ದೇವರನ್ನು ಕುರಿತು ತಪಸ್ಸುಮಾಡುತ್ತಿರುವನು? ಯಾವ ಪಿತೃಗಳನ್ನಾರಾಧಿಸುವನು? ಹೀಗೆ ಯೋಚಿಸಿ ನಾರದನು ಆ ಮಿತ್ರನನ್ನು ಕುರಿತು ಹೀಗೆ ಹೇಳಿದನು.

೫೩. ನಾರದನು ಹೇಳಿದನು.—ಓ ಮಿತ್ರದೇವ! ವೇದಗಳೂ, ವೇದಾಂಗ ಗಳೂ, ಪುರಾಣಗಳೂ, ಶಾಸ್ತ್ರಗಳೂ, ನಿನ್ನನ್ನೇ ಸ್ತುತಿಸುವುವು. ನಿನಗೆ ಉತ್ಪತ್ತಿ ಯಿಲ್ಲ. ನಿತ್ಯನು ನೀನು. ಸೃಷ್ಟಿಕರ್ತನು ನೀನು. ಜಗತ್ತಿಗೆ ಆಶ್ರಯನು ನೀನು.

shrinath.udupa@gmail.com

ಭೂತಂ ಭವ್ಯಂ ಭವಚ್ಚೈವ ತ್ವಯಿ ಸರ್ವಂ ಪ್ರತಿಷ್ಠಿತಂ ।
ಚತ್ವಾರಶ್ಚಾಶ್ರಮಾ ದೇವ ಗೃಹಸ್ಥಾದ್ಯಾಸ್ತಥೈವ ಹಿ ॥ ೫೪ ॥

ಯಜಂತಿ ತ್ವಾಮಹರಹಸ್ತ್ವಾಂ ಮೂರ್ತಿತ್ವಂ ಸಮಾಶ್ರಿತಂ ।
ಪಿತಾ ಮಾತಾ ಚ ಸರ್ವಸ್ಯ ದೈವತಂ ತ್ವಂ ಹಿ ಶಾಶ್ವತಂ ॥ ೫೫ ॥

ಯಜಸೇ ಪಿತರಂ ಕಂ ತ್ವಂ ದೇವಂ ವಾಪಿ ನ ವಿದ್ಮಹೇ ॥ ೫೬ ॥

॥ ಮಿತ್ರ ಉವಾಚ ॥

ಅವಾಚ್ಯಮೇತದ್ವಕ್ತವ್ಯಂ ಪರಂ ಗುಹ್ಯಂ ಸನಾತನಂ ।
ತ್ವಯಿ ಭಕ್ತಿಮತಿ ಬ್ರಹ್ಮನ್ಪ್ರವಕ್ಷ್ಯಾಮಿ ಯಥಾತಥಂ ॥ ೫೭ ॥

ಯತ್ತತ್ಸೂಕ್ಷ್ಮಮವಿಜ್ಞೇಯಮವ್ಯಕ್ತಮಚಲಂ ಧ್ರುವಂ ।
ಇಂದ್ರಿಯೈರಿಂದ್ರಿಯಾರ್ಥೈಶ್ಚ ಸರ್ವಭೂತೈರ್ವಿವರ್ಜಿತಂ ॥ ೫೮ ॥

೫೪-೫೫. ಹಿಂದೆ ನಡೆದ, ಈಗ ನಡೆಯುತ್ತಿರುವ ಮತ್ತು ಮುಂದೆ ನಡೆಯುವ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳು ಮತ್ತು ಆಗುಹೋಗುಗಳು ಎಲ್ಲವೂ ನಿನ್ನನ್ನೇ ಅವಲಂಬಿಸಿರುವುವು. ಗೃಹಸ್ಥ, ಬ್ರಹ್ಮಚಾರಿ, ವಾನಪ್ರಸ್ಥ, ಸನ್ಯಾಸಿ ಈ ನಾಲ್ಕು ಆಶ್ರಮದವರೂ ನಿನ್ನ ಮೂರ್ತಿಯನ್ನು ಪ್ರತಿದಿನವೂ ಆರಾಧಿಸುವರು.

೫೬. ಜಗತ್ತಿಗೆ ಮಾತೆಯೂ, ಪಿತನೂ, ದೇವನೂ ನೀನೇ ಆಗಿರುವೆ. ಇಂತಹ ನೀನು ಅದಾವ ದೇವನನ್ನಾರಾಧಿಸುತ್ತಿರುವೆ? ಯಾವ ಪಿತೃವನ್ನು ಆರಾಧಿಸುತ್ತಿರುವೆ?

೫೭. ಓ ನಾರದಮುನಿ ! ನೀನು ಕೇಳಿದ ವಿಷಯವು ತುಂಬಾ ರಹಸ್ಯವಾದುದು. ಇದನ್ನಾರಿಗೂ ಹೇಳತಕ್ಕುದಲ್ಲ. ಆದರೂ ಭಕ್ತನಾದ ನಿನಗೆ ಇದರ ತತ್ತ್ವಾಂಶವನ್ನು ಹೇಳುವೆನು.

೫೮-೫೯. ಇಂದ್ರಿಯಗಳಿಗೆ ಪ್ರತ್ಯಕ್ಷವಾಗದುದೂ ತಿಳಿವಳಿಕೆಗೆ ನಿಲುಕದುದೂ ಆದ ಬ್ರಹ್ಮವಸ್ತುವೊಂದಿರುವುದು. ಆ ವಸ್ತುವೇ ಜಗತ್ತಿಗೆ ಆದಿಯಾದ ಪರಮಾತ್ಮವಸ್ತುವು. ಅದಕ್ಕೆ ಇಂದ್ರಿಯಗಳೂ, ಇಂದ್ರಿಯವಿಷಯಗಳೂ ಇಲ್ಲ. ಆ

shrinath.udupa@gmail.com

ಸರ್ವಾಂತರಾತ್ಮಾ ಭೂತಾನಾಂ ಕ್ಷೇತ್ರಜ್ಞಶ್ಚೈವ ಕಥ್ಯತೇ ।
ತ್ರಿಗುಣಾದ್ವ್ಯತಿರಿಕ್ತೋಽಸೌ ಪುರುಷಶ್ಚೈವ ಕಲ್ಪಿತಃ ॥ ೫೯ ॥

ಹಿರಣ್ಯಗರ್ಭೋ ಭಗವಾನ್ಸೈವ ಬುದ್ಧಿರಿತಿ ಸ್ಮೃತಃ ।
ಮಹಾನಿತಿ ಚ ಯೋಗೇಷು ಪ್ರಧಾನಮಿತಿ ಕಥ್ಯತೇ ॥ ೬೦ ॥

ಸಾಂಖ್ಯೇ ಚ ಕಥ್ಯತೇ ಯೋಗೇ ನಾಮಭಿರ್ಬಹುಧಾತ್ಮಕಃ ।
ಸ ಚ ತ್ರಿರೂಪೋ ವಿಶ್ವಾತ್ಮಾ ಶರ್ವೋಽಕ್ಷರ ಇತಿ ಸ್ಮೃತಃ ॥ ೬೧ ॥

ಧೃತಮೇಕಾತ್ಮಕಂ ತೇನ ತ್ರೈಲೋಕ್ಯಮಿದಮಾತ್ಮನಾ ।
ಅಶರೀರಃ ಶರೀರೇಷು ಸರ್ವೇಷು ನಿವಸತ್ಯಸೌ ॥ ೬೨ ॥

ವಸನ್ನಪಿ ಶರೀರೇಷು ನ ಸ ಲಿಪ್ಯೇತ ಕರ್ಮಭಿಃ ।
ಮಮಾಂತರಾತ್ಮಾ ತವ ಚ ಯೇ ಚಾನ್ಯೇ ದೇಹಸಂಸ್ಥಿತಾಃ ॥ ೬೩ ॥

ವಸ್ತುವೇ ಪ್ರಾಣಿಗಳ ಹೃದಯದಲ್ಲಿರುವ ಅಂತರಾತ್ಮ (ಜೀವ) ನು. ಈ ಅಂತರಾತ್ಮನನ್ನೇ ಕ್ಷೇತ್ರಜ್ಞನೆಂದೆನ್ನುವರು. ಅವನು ಸತ್ತ್ವ, ರಜಸ್ಸು, ತಮಸ್ಸು ಈ ಮೂರು ಗುಣಗಳಿಂದಲೂ ಬೇರೆಯಾದವನು. ಮಾಯೆಯಿಂದ ಜೀವನಾಗಿರುವನು.

೬೦. ಅವನೇ ಹಿರಣ್ಯಗರ್ಭನಾಗಿರುವನು. ಅವನನ್ನು ಬುದ್ಧಿಯೆಂದೂ ಮಹಾ್ ಎಂದೂ ಪ್ರಧಾನ (ಪ್ರಕೃತಿ) ವೆಂದೂ ಯೋಗಶಾಸ್ತ್ರದಲ್ಲಿ ಹೇಳುವರು.

೬೧. ಸಾಂಖ್ಯಶಾಸ್ತ್ರದಲ್ಲಿಯೂ, ಯೋಗಶಾಸ್ತ್ರದಲ್ಲಿಯೂ ಆ ಪರಮಾತ್ಮನನ್ನು ಅನೇಕ ಹೆಸರುಗಳಿಂದ ಕರೆದಿರುವರು. ಮುಖ್ಯವಾಗಿ ಅವನು ವಿಶ್ವಾತ್ಮಾ, ಶರ್ವ, ಅಕ್ಷರ ಎಂದು ಮೂರು ರೂಪಗಳುಳ್ಳವನಾಗಿರುವನು.

೬೨. ಆ ಪರಮಾತ್ಮನೇ ಈ ಮೂರುಲೋಕಗಳನ್ನೂ ಒಂದಾಗಿ ಧರಿಸಿರುವನು. ವಸ್ತುತಃ ಶರೀರವಿಲ್ಲದ ಅವನು ಮಾಯೆಯಿಂದ ಪ್ರಾಣಿ ಶರೀರಗಳಲ್ಲಿ ಜೀವ ರೂಪದಿಂದ ವಾಸಿಸುವನು.

೬೩. ಶರೀರದಲ್ಲಿದ್ದರೂ ಕರ್ಮಗಳ ಸಂಬಂಧವು ಅವನಿಗಿಲ್ಲವು. ನನಗೂ ನಿನಗೂ ಮಿಕ್ಕ ಪ್ರಾಣಿಗಳಿಗೂ ಅವನು ಅಂತರಾತ್ಮನು. ಎಲ್ಲಕ್ಕೂ ಅವನು ಸಾಕ್ಷಿಯು. ಅವನನ್ನು ಚರ್ಮಚಕ್ಷುಸ್ಸುಗಳಿಂದ ಯಾರೂ ನೋಡಲಾರರು.

shrinath.udupa@gmail.com

ಸರ್ವೇಷಾಂ ಸಾಕ್ಷಿಭೂತೋಽಸೌ ನ ಗ್ರಾಹ್ಯಃ ಕೇನಚಿತ್ಕ್ವಚಿತ್ ।
ಸಗುಣೋ ನಿರ್ಗುಣೋ ವಿಶ್ವೋ ಜ್ಞಾನಗಮ್ಯೋ ಹ್ಯಸೌ ಸ್ಮೃತಃ ॥ ೬೪ ॥

ಸರ್ವತಃ ಪಾಣಿಪಾದಾಂತಃ ಸರ್ವತೋಽಕ್ಷಿಶಿರೋಮುಖಃ ।
ಸರ್ವತಃಶ್ರುತಿಮಾನ್ ಲೋಕೇ ಸರ್ವಮಾವೃತ್ಯ ತಿಷ್ಠತಿ ॥ ೬೫ ॥

ವಿಶ್ವಮೂರ್ಧಾ ವಿಶ್ವಭುಜೋ ವಿಶ್ವಪಾದಾಕ್ಷಿನಾಸಿಕಃ ।
ಏಕಶ್ಚರತಿ ವೈ ಕ್ಷೇತ್ರೇ ಸ್ವೈರಚಾರೀ ಯಥಾಸುಖಂ ॥ ೬೬ ॥

ಕ್ಷೇತ್ರಾಣೀಹ ಶರೀರಾಣಿ ತೇಷಾಂ ಚೈವ ಯಥಾಸುಖಂ ।
ತಾನಿ ವೇತ್ತಿ ಸ ಯೋಗಾತ್ಮಾ ತತಃ ಕ್ಷೇತ್ರಜ್ಞ ಉಚ್ಯತೇ ॥ ೬೭ ॥

೬೪. ಅವನು ವಸ್ತುತಃ ನಿರ್ಗುಣನಾದರೂ ಮಾಯೆಯಿಂದ ಸಗುಣ (ಈಶ್ವರ-ಜೀವ) ನಾಗುವನು. ಜಗದ್ರೂಪನಾಗುವನು. ಜ್ಞಾನಮಾರ್ಗದಿಂದ ಮಾತ್ರ ಅವನನ್ನು ತಿಳಿಯಬಹುದು.

೬೫. ಅವನ ಕೈಕಾಲುಗಳು ಎಲ್ಲೆಲ್ಲಿಯೂ ಇರುವುವು. ಕಣ್ಣು ಮತ್ತು ತಲೆ ಮುಖಗಳು ಎಲ್ಲೆಲ್ಲಿಯೂ ಇರುವುವು. ಅವನ ಕಿವಿಗಳು ಎಲ್ಲೆಲ್ಲಿಯೂ ಇರುವುವು. ಇಂತಹ ವಿರಾಟ್ ಪುರುಷನಾದ ಆ ಪರಮಾತ್ಮನು ಜಗತ್ತೆಲ್ಲವನ್ನೂ ವ್ಯಾಪಿಸಿರುವನು.

೬೬. ಪ್ರಾಣಿಗಳ ಶಿರಸ್ಸೇ ಅವನ ಶಿರಸ್ಸು. ಪ್ರಾಣಿಗಳ ತೋಳುಗಳೇ ಅವನ ತೋಳುಗಳು. ಪ್ರಾಣಿಗಳ ಕಾಲು, ಕಣ್ಣು, ಮೂಗುಗಳೇ ಅವನ ಕಾಲು, ಕಣ್ಣು, ಮೂಗುಗಳು. ಓರ್ವನೇ ಆದ ಅವನು ಪ್ರತಿಯೊಂದು ಶರೀರದಲ್ಲಿಯೂ ಸುಖವಾಗಿ ಜೀವರೂಪದಿಂದ ವಿಹರಿಸುವನು.

೬೭. ಶರೀರಗಳಿಗೆ ಕ್ಷೇತ್ರಗಳೆಂದು ಹೆಸರು. ಆ ಶರೀರಗಳನ್ನು ಈ ಪರಮಾತ್ಮನು ತಿಳಿಯುವುದರಿಂದ (ಶರೀರವ್ಯಾಪಾರಗಳಿಗೆ ಸಾಕ್ಷಿಯಾದುದರಿಂದ) ಕ್ಷೇತ್ರಜ್ಞನೆನಿಸಿಕೊಳ್ಳುವನು. ಇಂದ್ರಿಯಗಳಿಗೆ ಕಾಣಿಸದಿರುವ ಅಂತಃಕರಣವೆಂಬ ಪುರದಲ್ಲಿ ಅವನು ವಾಸಿಸುವುದರಿಂದ ಅವನಿಗೆ ಪುರುಷನೆಂದು ಹೆಸರು.

shrinath.udupa@gmail.com

ಅವ್ಯಕ್ತೇ ಚ ಪುರೇ ಶೇತೇ ಪುರುಷಸ್ತೇನ ಚೋಚ್ಯತೇ ।
ವಿಶ್ವಂ ಬಹುವಿಧಂ ಜ್ಞೇಯಂ ಸ ಚ ಸರ್ವತ್ರ ಉಚ್ಯತೇ ॥ ೬೮ ॥

ತಸ್ಮಾತ್ಸ ಬಹುರೂಪತ್ವಾದ್ವಿಶ್ವರೂಪ ಇತಿ ಸ್ಮೃತಃ ।
ತಸ್ಯೈಕಸ್ಯ ಮಹತ್ತ್ವಂ ಹಿ ಸ ಚೈಕಃ ಪುರುಷಃ ಸ್ಮೃತಃ ॥ ೬೯ ॥

ಮಹತ್ಪುರುಷಶಬ್ದಂ ಹಿ ಬಿಭರ್ತ್ಯೇಕಃ ಸನಾತನಃ ।
ಸ ತು ವಿಧಿಕ್ರಿಯಾಯತ್ತಃ ಸೃಜತ್ಯಾತ್ಮಾನಮಾತ್ಮನಾ ॥ ೭೦ ॥

ಶತಧಾ ಸಹಸ್ರಧಾ ಚೈವ ತಥಾ ಶತಸಹಸ್ರಧಾ ।
ಕೋಟಿಶಶ್ಚ ಕರೋತ್ಯೇಷ ಪ್ರತ್ಯಗಾತ್ಮಾನಮಾತ್ಮನಾ ॥ ೭೧ ॥

ಆಕಾಶಾತ್ಪತಿತಂ ತೋಯಂ ಯಾತಿ ಸ್ವಾದ್ವಂತರಂ ಯಥಾ ।
ಭೂಮೇ ರಸವಿಶೇಷೇಣ ತಥಾ ಗುಣರಸಾತ್ತು ಸಃ ॥ ೭೨ ॥

---

೬೮. ಇಂದ್ರಿಯಗಳಿಗೆ ಪ್ರತ್ಯಕ್ಷವಾಗುವ ಈ ಜಗತ್ತು ಆ ಪರಮಾತ್ಮನ ರೂಪವಾದುದು. ಆದುದರಿಂದ ಅವನಿಗೆ ವಿಶ್ವರೂಪನೆಂದು ಹೆಸರು.

೬೯. ಜಗತ್ತಿನಲ್ಲಿ ಮಹತ್ತ್ವವುಳ್ಳವನು ಅವನೋರ್ವನೇ ಆದುದರಿಂದಲೂ ಮತ್ತು ಪುರುಷನು ಅವನೋರ್ವನೇ ಇರುವುದರಿಂದಲೂ ಅವನಿಗೆ ಮಹಾಪುರುಷನೆಂದು ಹೆಸರಾಯಿತು.

೭೦–೭೧. ಆ ಪರಮಾತ್ಮನು ಮಾಯೆಯ ಪ್ರವೃತ್ತಿಗನುಸಾರವಾಗಿ ತನ್ನನ್ನೇ ನೂರಾರು ಸಾವಿರ ಲಕ್ಷ ಕೋಟಿಕೋಟಿ ಜೀವರೂಪ ವಾಗಿ ಸೃಜಿಸುವನು. (ತಾನೇ ಮಾಯೆಯಿಂದ ಅನೇಕಜೀವರೂಪವನ್ನು ಧರಿಸುವನು ಎಂದು ಅಭಿಪ್ರಾಯವು.)

೭೨. ಗಗನದಿಂದ ಬಿದ್ದ ನೀರು ಆಯಾಯ ಭೂಮಿಯ ಗುಣಗಳಿಗನುಸಾರವಾಗಿ ಬೇರೆಬೇರೆ ರಸ (ರುಚಿ) ವುಳ್ಳದ್ದಾಗುವಂತೆ ಈ ಪರಮಾತ್ಮನೂ ಸತ್ತ್ವ, ರಜಸ್ಸು ತಮಸ್ಸುಗಳ ಸಂಬಂಧದಿಂದ ನಾನಾಶರೀರಗಳಲ್ಲಿ ನಾನಾಗುಣವುಳ್ಳವನಾಗುವನು.

shrinath.udupa@gmail.com

ಏಕ ಏವ ಯಥಾ ವಾಯುರ್ದೇಹೇಷ್ವೇವ ಹಿ ಪಂಚಧಾ ।
ಏಕತ್ವಂ ಚ ಪೃಥಕ್ತ್ವಂ ಚ ತಥಾ ತಸ್ಯ ನ ಸಂಶಯಃ ॥ ೭೩ ॥

ಸ್ಥಾನಾಂತರವಿಶೇಷಾಚ್ಚ ಯಥಾಽಗ್ನಿರ್ಲಭತೇ ಪರಾಂ ।
ಸಂಜ್ಞಾಂ ತಥಾ ಮುನೇ ಸೋಽಯಂ ಬ್ರಹ್ಮಾದಿಷು ತಥಾಪ್ಯಯಾತ್ ॥

ಯಥಾ ದೀಪಸಹಸ್ರಾಣಿ ದೀಪ ಏಕಃ ಪ್ರಸೂಯತೇ ।
ತಥಾ ರೂಪಸಹಸ್ರಾಣಿ ಸ ಏಕಃ ಸಂಪ್ರಸೂಯತೇ ॥ ೭೫ ॥

ಯದಾ ಸ ಬುಧ್ಯತ್ಯಾತ್ಮಾನಂ ತದಾ ಭವತಿ ಕೇವಲಃ ।
ಏಕತ್ವಪ್ರಲಯೇ ಚಾಸ್ಯ ಬಹುತ್ವಂ ಚ ಪ್ರವರ್ತತೇ ॥ ೭೬ ॥

ನಿತ್ಯಂ ಹಿ ನಾಸ್ತಿ ಜಗತಿ ಭೂತಂ ಸ್ಥಾವರಜಂಗಮಂ ।
ಅಕ್ಷಯಶ್ಚಾಪ್ರಮೇಯಶ್ಚ ಸರ್ವಗಶ್ಚ ಸ ಉಚ್ಯತೇ ॥ ೭೭ ॥

---

೭೩. ಒಂದೇ ವಾಯುವು ಸ್ಥಾನಭೇದದಿಂದ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬ ಭೇದವನ್ನು ಪಡೆಯುವಂತೆ ಈ ಪರಮಾತ್ಮನೂ ಶರೀರ ಭೇದಗಳಿಂದ ನಾನಾಭೇದಗಳುಳ್ಳವನಾಗುವನು. ವಸ್ತುತಃ ಅವನು ಒಬ್ಬನೇ; ಭೇದ ವವನಿಗಿಲ್ಲ.

೭೪. ಒಂದೇ ಅಗ್ನಿಯು ಸ್ಥಾನವಿಶೇಷದಿಂದ ದಕ್ಷಿಣಾಗ್ನಿ, ಗಾರ್ಹಪತ್ಯ ಆಹ ವನೀಯ, ಮುಂತಾದ ಸಂಜ್ಞೆಗಳನ್ನು ಹೊಂದುವಂತೆ ಈ ಪರಮಾತ್ಮನೂ ಸ್ಥಾನ ಭೇದದಿಂದ ಬ್ರಹ್ಮ, ವಿಷ್ಣು, ಶಿವ ಮೊದಲಾದ ಸಂಜ್ಞೆಗಳನ್ನು ಹೊಂದಿರುವನು.

೭೫. ಒಂದೇ ದೀಪದಿಂದ ಸಾವಿರಾರು ದೀಪಗಳಾಗುವಂತೆಯೇ, ಆ ಪರಮಾತ್ಮನೋರ್ವನಿಂದಲೇ ಸಾವಿರಾರು ದೇವ ಮನುಷ್ಯ ಮುಂತಾದ ರೂಪಗಳಾಗುವುವು.

೭೬. ಜೀವರೂಪನಾದ ಈ ಪರಮಾತ್ಮನು ತನ್ನ ನಿಜವಾದ ಪರಮಾತ್ಮ ಸ್ವರೂಪವನ್ನು ತಿಳಿದುಕೊಂಡವನಾದರೆ ಆಗ ಅದ್ವಿತೀಯನಾಗುವನು. ಮಾಯೆ ಯಿಂದ ಆ ಅದ್ವಿತೀಯತ್ವವು ಮುಚ್ಚಲ್ಪಟ್ಟರೆ ನಾನಾರೂಪ (ಜೀವ) ನಾಗುವನು. (ಇದೇ ಜೀವ ಬ್ರಹ್ಮರ ತತ್ತ್ವವು; ರಹಸ್ಯವು.)

೭೭. ಸ್ಥಿರಚರರೂಪವಾದ ಈ ಜಗತ್ತು ನಿತ್ಯವಾದುದಲ್ಲ. ಆ ಪರಮಾತ್ಮ ನೋರ್ವನೇ ನಿತ್ಯನು. ಅವನು ಎಲ್ಲೆಲ್ಲಿಯೂ ಇರುವನು. ಆದರೂ ಅವನನ್ನು ಪ್ರತ್ಯ ಕ್ಷವಾಗಿ ನೋಡಲು ಸಾಧ್ಯವಿಲ್ಲ.

shrinath.udupa@gmail.com

ತಸ್ಮಾದವ್ಯಕ್ತಮುತ್ಪನ್ನಂ ತ್ರಿಗುಣಂ ದ್ವಿಜಸತ್ತಮಾಃ ।
ಅವ್ಯಕ್ತಾವ್ಯಕ್ತಭಾವಸ್ಥಾ ಯಾ ಸಾ ಪ್ರಕೃತಿರುಚ್ಯತೇ ॥ ೭೮ ॥

ತಾಂ ಯೋನಿಂ ಬ್ರಹ್ಮಣೋ ವಿದ್ಧಿ ಯೋಽಸೌ ಸದಸದಾತ್ಮಕಃ ।
ಲೋಕೇ ಚ ಪೂಜ್ಯತೇ ಯೋಽಸೌ ದೈವೇ ಪಿತ್ರ್ಯೇ ಚ ಕರ್ಮಣಿ ॥ ೭೯ ॥

ನಾಸ್ತಿ ತಸ್ಮಾತ್ಪರೋ ಹ್ಯನ್ಯಃ ಪಿತಾ ದೇವೋಽಪಿ ವಾ ದ್ವಿಜಾಃ ।
ಆತ್ಮನಾ ಸ ತು ವಿಜ್ಞೇಯಸ್ತತಸ್ತಂ ಪೂಜಯಾಮ್ಯಹಂ ॥ ೮೦ ॥

ಸ್ವರ್ಗೇಷ್ವಪಿ ಹಿ ಯೇ ಕೇಚಿತ್ತಂ ನಮಸ್ಯಂತಿ ದೇಹಿನಃ ।
ತೇನ ಗಚ್ಛಂತಿ ದೇವರ್ಷೇ ತೇನೋದ್ದಿಷ್ಟಫಲಾಂ ಗತಿಂ ॥ ೮೧ ॥

ತಂ ದೇವಾಃ ಸ್ವಾಶ್ರಮಸ್ಥಾಶ್ಚ ನಾನಾಮೂರ್ತಿಸಮಾಶ್ರಿತಾಃ ।
ಭಕ್ತ್ಯಾ ಸಂಪೂಜಯಂತ್ಯಾದ್ಯಂ ಗತಿಶ್ಚೈಷಾಂ ದದಾತಿ ಸಃ ॥ ೮೨ ॥

---

೭೮. ಆ ಪರಮಾತ್ಮನಿಂದ ಸತ್ತ್ವ, ರಜಸ್ಸು, ತಮಸ್ಸು ಈ ಮೂರುಗುಣಗಳ ರೂಪವಾದ ಅವ್ಯಕ್ತ (ಇಂದ್ರಿಯಗಳಿಗೆ ಪ್ರತ್ಯಕ್ಷವಲ್ಲದ) ವು ಜನಿಸಿತು. ಅದಕ್ಕೆ ಪ್ರಕೃತಿಯೆಂದು ಹೆಸರು. ಅದರಿಂದ ಮುಂದೆ ಜಗತ್ತು ಜನಿಸಿತು.

೭೯. ಆ ಪ್ರಕೃತಿಯಿಂದ ಮೊದಲು ಭಾವ ಮತ್ತು ಅಭಾವರೂಪನಾದ ಹಿರಣ್ಯಗರ್ಭನು ಜನಿಸಿದನು. ಅವನನ್ನು ಜನಗಳು ದೇವಕಾರ್ಯಗಳಲ್ಲೂ ಪಿತೃ ಕಾರ್ಯಗಳಲ್ಲೂ ಪೂಜಿಸುವರು.

೮೦. ಎಲೈ ನಾರದಮುನಿಯೇ ! ಹೀಗೆ ಆ ಪರಮಾತ್ಮನನ್ನು ಹೊರತು ಜಗತ್ತಿಗೆ ಪಿತನಾಗಲೀ, ದೇವನಾಗಲೀ ಯಾರೂ ಇಲ್ಲ. ಅವನನ್ನು ನಾವು ಆತ್ಮಚಿಂತನೆಯಿಂದಲೇ ತಿಳಿಯಬೇಕು. ಇಂತಹ ಪರಮಾತ್ಮನನ್ನು ನಾನು ಪೂಜಿಸುತ್ತಿರುವೆನು.

೮೧. ಸ್ವರ್ಗದಲ್ಲಿಯೂ ಸಹ ಆ ಪರಮಾತ್ಮನನ್ನು ನಮಸ್ಕರಿಸಿದರೆ, ಚಿಂತನೆ ಮಾಡಿದರೆ ಉತ್ತಮ ಗತಿಯನ್ನು (ಮುಕ್ತಿಯನ್ನು) ಪಡೆಯುವನು.

೮೨. ಆ ಪರಮಾತ್ಮನನ್ನು ದೇವತೆಗಳೂ, ಗೃಹಸ್ಥನೇ ಮೊದಲಾದ ಆಶ್ರಮಿಗಳೂ ಶಿವ, ವಿಷ್ಣು, ಮೊದಲಾದ ಮೂರ್ತಿಗಳ ರೂಪದಿಂದ ಭಕ್ತಿಯಿಂದ ಪೂಜಿಸಿ ಅವನನುಗ್ರಹದಿಂದ ಉತ್ತಮಗತಿಯನ್ನು ಪಡೆಯುವರು.

shrinath.udupa@gmail.com

ಸ ಹಿ ಸರ್ವಗತಶ್ಚೈವ ನಿರ್ಗುಣಶ್ಚೈವ ಕಥ್ಯತೇ ।
ಏವಂ ಮತ್ವಾ ಯಥಾಜ್ಞಾನಂ ಪೂಜಯಾಮಿ ದಿವಾಕರಂ ॥ ೮೩ ॥

ಯೇ ಚ ತದ್ಭಾವಿತಾ ಲೋಕೇ ಏಕತತ್ತ್ವಂ ಸಮಾಶ್ರಿತಾಃ ।
ಏತದಪ್ಯಧಿಕಂ ತೇಷಾಂ ಯದೇಕಂ ಪ್ರವಿಶಂತ್ಯುತ ॥ ೮೪ ॥

ಇತಿ ಗುಹ್ಯಸಮುದ್ದೇಶಸ್ತವ ನಾರದ ಕೀರ್ತಿತಃ ।
ಅಸ್ಮದ್ಭಕ್ತ್ಯಾಪಿ ದೇವರ್ಷೇ ತ್ವಯಾಪಿ ಪರಮಂ ಸ್ಮೃತಂ ॥ ೮೫ ॥

ಸುರೈರ್ವಾ ಮುನಿಭಿರ್ವಾಪಿ ಪುರಾಣೈರ್ವರದಂ ಸ್ಮೃತಂ ।
ಸರ್ವೇ ಚ ಪರಮಾತ್ಮಾನಂ ಪೂಜಯಂತಿ ದಿವಾಕರಂ ॥ ೮೬ ॥

॥ ಬ್ರಹ್ಮೋವಾಚ ॥

ಏವಮೇತತ್ಪುರಾಖ್ಯಾತಂ ನಾರದಾಯ ತು ಭಾನುನಾ ।
ಮಯಾಪಿ ಚ ಸಮಾಖ್ಯಾತಾ ಕಥಾ ಭಾನೋರ್ದ್ವಿಜೋತ್ತಮಾಃ ॥ ೮೭ ॥

---

೮೩. ಆ ಪರಮಾತ್ಮನು ಸರ್ವವ್ಯಾಪಿಯೆಂದೂ, ನಿರ್ಗುಣನೆಂದೂ ವೇದಗಳು ಹೇಳುವುವು. ಹೀಗೆ ತಿಳಿದುಕೊಂಡು ಅಂತಹ ಪರಮಾತ್ಮರೂಪಿಯಾದ ಸೂರ್ಯನನ್ನು ನಾನು ವಿಧಿವತ್ತಾಗಿ ಆರಾದಿಸುತ್ತಿರುವೆನು.

೮೪. ಅವನಿಂದ ಸೃಷ್ಟಿಸಲ್ಪಟ್ಟ ಈ ಲೋಕಗಳು ಅವನನ್ನೇ ಅವಲಂಬಿಸಿರುವುವು. ಮತ್ತು ಪ್ರಳಯಕಾಲದಲ್ಲಿ ಆ ಪರಮಾತ್ಮರೂಪನಾದ ಸೂರ್ಯನನ್ನೇ ಸೇರುವುವು.

೮೫. ಎಲೈ ದೇವಮುನಿಯೇ ! ಹೀಗೆ ರಹಸ್ಯವಾದ ಪರಮಾತ್ಮಸ್ವರೂಪವನ್ನು ನನ್ನ ಭಕ್ತನಾದ ನಿನಗೆ ಹೇಳಿರುವೆನು. ನೀನೂ ಸಹ ಉತ್ತಮವಿಷಯವನ್ನು ತಿಳಿದಂತಾಯಿತು.

೮೬. ದೇವತೆಗಳೂ, ಪುರಾಣಮುನಿಗಳೂ ಸಹ ಪರಮಾತ್ಮರೂಪನೂ ಭಕ್ತರಿಗೆ ಇಷ್ಟಾರ್ಥವನ್ನು ಕೊಡುವವನೂ ಆದ ಸೂರ್ಯನನ್ನು ಪೂಜಿಸುವರು.

೮೭. ಬ್ರಹ್ಮನು ಹೇಳಿದನು.—ಎಲೈ ಬ್ರಾಹ್ಮಣೋತ್ತಮರೇ ! ಹೀಗೆ ಮಿತ್ರನು ನಾರದಮುನಿಗೆ ಪರಮಾತ್ಮತತ್ತ್ವವನ್ನು ಹೇಳಿದನು. ಅದನ್ನು ನಿಮಗೂ ನಾನು ಹೇಳಿರುವೆನು.

shrinath.udupa@gmail.com

ಇದಮಾಖ್ಯಾನಮಾಖ್ಯೇಯಂ ಮಯಾಖ್ಯಾತಂ ದ್ವಿಜೋತ್ತಮಾಃ ।
ನ ಹ್ಯನಾದಿತ್ಯಭಕ್ತಾಯ ಇದಂ ದೇಯಂ ಕದಾಚನ ॥ ೮೮ ॥

ಯಶ್ಚೈತಚ್ಛ್ರಾವಯೇನ್ನಿತ್ಯಂ ಯಶ್ಚೈವ ಶೃಣುಯಾನ್ನರಃ ।
ಸ ಸಹಸ್ರಾರ್ಚಿಷಂ ದೇವಂ ಪ್ರವಿಶೇನ್ನಾತ್ರ ಸಂಶಯಃ ॥ ೮೯ ॥

ಮುಚ್ಯೇತಾರ್ತಸ್ತಥಾ ರೋಗಾಚ್ಛ್ರುತ್ವೇಮಾಮಾದಿತಃ ಕಥಾಂ ।
ಜಿಜ್ಞಾಸುರ್ಲಭತೇ ಜ್ಞಾನಂ ಗತಿಮಿಷ್ಟಾಂ ತಥೈವ ಚ ॥ ೯೦ ॥

ಕ್ಷಣೇನ ಲಭತೇಽಧ್ವಾನಮಿದಂ ಯಃ ಪಠತೇ ಮುನೇ ।
ಯೋ ಯಂ ಕಾಮಯತೇ ಕಾಮಂ ಸ ತಂ ಪ್ರಾಪ್ನೋತ್ಯಸಂಶಯಂ ॥ ೯೧ ॥

---

೮೮. ನಾನು ಹೇಳಿದ ಈ ಸೂರ್ಯನ ತತ್ತ್ವವನ್ನು ಸೂರ್ಯಭಕ್ತನಲ್ಲದವನಿಗೆ ಎಂದೂ ಹೇಳಕೂಡದು.

೮೯. ಈ ಆಖ್ಯಾನವನ್ನು ಓದುವವನೂ, ಹೇಳುವವನೂ, ಕೇಳುವವನೂ ಸಹ ಸಹಸ್ರಕಿರಣನಾದ ಸೂರ್ಯದೇವನನ್ನು ಪಡೆಯುವನು.

೯೦. ಈ ಕಥೆಯನ್ನು ಮೊದಲಿನಿಂದ ಕೊನೆಯವರೆಗೆ ಕೇಳಿದರೆ ರೋಗಿಯಾದವನು ಖಾಯಿಲೆಯಿಂದ ಬಿಡಲ್ಪಟ್ಟು ಆರೋಗ್ಯವಂತನಾಗುವನು. ಜ್ಞಾನವನ್ನಪೇಕ್ಷಿಸುವವನು ಜ್ಞಾನವನ್ನು ಪಡೆಯುವವನಲ್ಲದೆ ಉತ್ತಮಗತಿಯನ್ನೈದುವನು.

೯೧. ಈ ಕಥೆಯನ್ನು ಕೇಳಿದವನು ಕೂಡಲೇ ಉತ್ತಮವಾದ ಮುಕ್ತಿಮಾರ್ಗವನ್ನು ಕಂಡುಕೊಳ್ಳುವನು. ಮಾರ್ಗದಲ್ಲಿ ದಾರಿತಪ್ಪಿದವನೂ ಸಹ ಈ ಇತಿಹಾಸವನ್ನು ಪಠಿಸಿದರೆ ಕೂಡಲೇ ಸರಿಯಾದ ದಾರಿಗೆ ಬರುವನು. ಯಾವನು ಯಾವಾವ ಫಲವನ್ನಪೇಕ್ಷಿಸಿದರೂ ಆದೆಲ್ಲವೂ ಸಿದ್ಧಿಸುವುದು.

shrinath.udupa@gmail.com

ತಸ್ಮಾದ್ಭವದ್ಭಿಃ ಸತತಂ ಸ್ಮರ್ತವ್ಯೋ ಭಗವಾನ್ ರವಿಃ ।
ಸ ಚ ಧಾತಾ ವಿಧಾತಾ ಚ ಸರ್ವಸ್ಯ ಜಗತಃ ಪ್ರಭುಃ ॥ ೯೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಆದಿತ್ಯಮಾಹಾತ್ಮ್ಯವರ್ಣನಂ ನಾಮ ತ್ರಿಂಶತ್ತಮೋಽಧ್ಯಾಯಃ

೯೨. ಎಲೈ ಮುನಿಗಳೇ ! ಆದುದರಿಂದ ನೀವು ಸದಾ ಭಗವಂತನಾದ ರವಿಯನ್ನು ಧ್ಯಾನಮಾಡಬೇಕು. ಪರಮಾತ್ಮರೂಪನಾದ ಅವನೇ ಜಗತ್ಕರ್ತನು. ಜಗದೊಡೆಯನು. ಅವನನ್ನವಲಂಬಿಸಿಯೇ ಜಗತ್ತು ನಿಂತಿರುವುದು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಸ್ವಯಂಭುಋಷಿಸಂವಾದದಲ್ಲಿ ಆದಿತ್ಯವರ್ಣನವೆಂಬ
ಮೂವತ್ತನೆಯ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕತ್ರಿಂಶತ್ತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಆದಿತ್ಯಮೂಲಮಖಿಲಂ ತ್ರೈಲೋಕ್ಯಂ ಮುನಿಸತ್ತಮಾಃ ।
ಭವತ್ಯಸ್ಮಾಜ್ಜಗತ್ಸರ್ವಂ ಸದೇವಾಸುರಮಾನುಷಂ ॥ ೧ ॥

ರುದ್ರೋಪೇಂದ್ರಮಹೇಂದ್ರಾಣಾಂ ವಿಪ್ರೇಂದ್ರ ತ್ರಿದಿವೌಕಸಾಂ ।
ಮಹಾದ್ಯುತಿಮತಾಂ ಚೈವ ತೇಜೋಽಯಂ ಸಾರ್ವಲೌಕಿಕಂ ॥ ೨ ॥

ಮುವತ್ತೊಂದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು.—ಎಲೈ ಮುನಿಗಳೇ ! ಮೂರುಲೋಕಗಳಿಗೂ ಸೂರ್ಯನೇ ಮೂಲವು. ದೇವತೆ, ಅಸುರ, ಮಾನುಷ ಮೊದಲಾದ ಸಕಲಪ್ರಾಣಿಸ್ವರೂಪವಾದ ಈ ಜಗತ್ತೆಲ್ಲವೂ ಸೂರ್ಯನಿಂದಲೇ ಜನಿಸುವುದು.

೨. ಈ ಸೂರ್ಯನು ಮಹಾತೇಜಸ್ವಿಗಳಾದ ರುದ್ರ, ವಿಷ್ಣು, ದೇವೇಂದ್ರ ಮೊದಲಾದವರ ತೋಜೋರೂಪನಾಗಿದ್ದು ಲೋಕಗಳಲ್ಲೆಲ್ಲಾ ತೇಜಸ್ಸನ್ನು ಬೀರುವನು.

shrinath.udupa@gmail.com

ಸರ್ವಾತ್ಮಾ ಸರ್ವಲೋಕೇಶೋ ದೇವದೇವಃ ಪ್ರಜಾಪತಿಃ ।
ಸೂರ್ಯ ಏವ ತ್ರಿಲೋಕಸ್ಯ ಮೂಲಂ ಪರಮದೈವತಂ ॥ ೩ ॥

ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ ।
ಆದಿತ್ಯಾಜ್ಜಾಯತೇ ವೃಷ್ಟಿರ್ವೃಷ್ಟೇರನ್ನಂ ತತಃ ಪ್ರಜಾಃ ॥ ೪ ॥

ಸೂರ್ಯಾತ್ಪ್ರಸೂಯತೇ ಸರ್ವಂ ತತ್ರ ಚೈವ ಪ್ರಲೀಯತೇ ।
ಭಾವಾಭಾವೌ ಹಿ ಲೋಕಾನಾಮಾದಿತ್ಯಾನ್ನಿಸ್ಸೃತೌ ಪುರಾ ॥ ೫ ॥

ಏತತ್ತು ಧ್ಯಾನಿನಾಂ ಧ್ಯಾನಂ ಮೋಕ್ಷಶ್ಚಾಪ್ಯೇಷ ಮೋಕ್ಷಿಣಾಂ ।
ತತ್ರ ಗಚ್ಛಂತಿ ನಿರ್ವಾಣಂ ಜಾಯಂತೇಽಸ್ಮಾತ್ಪುನಃ ಪುನಃ ॥ ೬ ॥

---

೩. ಈ ಸೂರ್ಯನು ಎಲ್ಲಾ ಪ್ರಾಣಿಗಳ ಆತ್ಮನು. ದೇವದೇವನು. ಪರಮೇಶ್ವರನು. ಸೃಷ್ಟಿಕರ್ತನು. ಈ ಸೂರ್ಯನೇ ಜಗತ್ತಿಗೆ ಮೂಲವು ಮತ್ತು ಪರದೇವನು.

೪. ಈ ಜಗತ್ತೆಲ್ಲವೂ ಸೃಷ್ಟಿಯ ಆದಿಯಲ್ಲಿ ಸೂರ್ಯನಿಂದಲೇ ಜನಿಸುವುದು. ಕೊನೆಯಲ್ಲಿ ಸೂರ್ಯನಲ್ಲಿಯೇ ಪ್ರಳಯವನ್ನು ಹೊಂದುವುದು. ಜಗತ್ತಿನ ಆಗುಹೋಗುಗಳೆಲ್ಲವೂ ಸೂರ್ಯನನ್ನೇ ಅವಲಂಬಿಸಿರುವುವು. ಅವನಿಂದಲೇ ನಡೆಯುವುವು.

೫. ಅಗ್ನಿಯಲ್ಲಿ ಹೋಮಮಾಡಿದ ಆಹುತಿಯು ಸೂರ್ಯನನ್ನು ಸೇರುವುದು. ಸೂರ್ಯನಿಂದ ಮಳೆಯುಂಟಾಗುವುದು. ಮಳೆಯಿಂದ ಆಹಾರಪದಾರ್ಥಗಳು ಜನಿಸುವುವು. ಅವುಗಳಿಂದ ಪ್ರಜೆಗಳು (ವೀರ್ಯೋತ್ಪತ್ತಿಯ ಮೂಲಕ) ಜನಿಸುವರು.

೬. ಆ ಸೂರ್ಯನು ಧ್ಯಾನಮಾಡುವವರ ಧ್ಯಾನವು. ಮೋಕ್ಷವನ್ನು ಬಯಸುವವರ ಮೋಕ್ಷವು. ಆ ಸೂರ್ಯನಲ್ಲಿಯೇ ಜ್ಞಾನಿಗಳು ಮುಕ್ತಿಯನ್ನೈದುವರು. ಆ ಸೂರ್ಯನಿಂದಲೇ ಜಗತ್ತು ಪುನಃ ಪುನಃ ಜನಿಸುವುದು.

shrinath.udupa@gmail.com

ಕ್ಷಣಾ ಮುಹೂರ್ತಾ ದಿವಸಾ ನಿಶಾ ಪಕ್ಷಾಶ್ಚ ನಿತ್ಯಶಃ ।
ಮಾಸಾಃ ಸಂವತ್ಸರಾಶ್ಚೈವ ಋತವಶ್ಚ ಯುಗಾನಿ ಚ ॥ ೭ ॥

ಅಥಾದಿತ್ಯಾದೃತೇ ಹ್ಯೇಷಾಂ ಕಾಲಸಂಖ್ಯಾ ನ ವಿದ್ಯತೇ ।
ಕಾಲಾದೃತೇ ನ ನಿಯಮೋ ನಾಗ್ನೌ ವಿಹರಣಕ್ರಿಯಾ ॥ ೮ ॥

ಋತೂನಾಮವಿಭಾಗಶ್ಚ ತತಃ ಪುಷ್ಪಫಲಂ ಕುತಃ ।
ಕುತೋ ವೈ ಸಸ್ಯನಿಷ್ಪತ್ತಿಸ್ತೃಣೌಷಧಿಗಣಃ ಕುತಃ ॥ ೯ ॥

ಅಭಾವೋ ವ್ಯವಹಾರಾಣಾಂ ಜಂತೂನಾಂ ದಿವಿ ಚೇಹ ಚ ।
ಜಗತ್ಪ್ರಭಾವಾದ್ವಿಶತೇ ಭಾಸ್ಕರಾದ್ವಾರಿತಸ್ಕರಾತ್ ॥ ೧೦ ॥

ನಾವೃಷ್ಟ್ಯಾ ತಪತೇ ಸೂರ್ಯೋ ನಾವೃಷ್ಟ್ಯಾ ಪರಿಶುಷ್ಯತಿ ।
ನಾವೃಷ್ಟ್ಯಾ ಪರಿಧಿಂ ಧತ್ತೇ ವಾರಿಣಾ ದೀಪ್ಯತೇ ರವಿಃ ॥ ೧೧ ॥

---

೭. ಕ್ಷಣಗಳು, ಮುಹೂರ್ತಗಳು, ದಿವಸಗಳು, ರಾತ್ರಿಗಳು, ಪಕ್ಷಗಳು, ತಿಂಗಳುಗಳು, ವರ್ಷಗಳು, ಋತುಗಳು, ಯುಗಗಳು ಇವೆಲ್ಲವೂ ಸೂರ್ಯಸ್ವರೂಪ ಗಳು.

೮. ಸೂರ್ಯನನ್ನು ಬಿಟ್ಟರೆ ಕ್ಷಣ, ಮುಹೂರ್ತ, ಮೊದಲಾದ, ಕಾಲಗಣನೆಯೇ ಸಾಧ್ಯವಿಲ್ಲ. ಕಾಲವಿಲ್ಲದಿದ್ದರೆ ನಿಯಮವೂ ಇಲ್ಲ. ಅಗ್ನಿಯಲ್ಲಿ ಮಾಡುವ ಯಾಗ ಮೊದಲಾದುವುಗಳೂ ಇಲ್ಲ. ಎಲ್ಲವೂ ಒಂದು ಕ್ಲ್ಪಪ್ತಕಾಲವನ್ನನುಸರಿಸಿಯೇ ನಡೆಯುವುವು.

೯. ಸೂರ್ಯನಿಲ್ಲದಿದ್ದರೆ ಅವನ ಗತಿಯನ್ನನುಸರಿಸಿ ಬರುವ ಋತುಗಳೆಲ್ಲಿ ? ಋತುವಿಭಾಗವಿಲ್ಲದಿದ್ದರೆ, ಆಯಾಯ ಕಾಲಗಳಲ್ಲಿ ಹೂವುಹಣ್ಣುಗಳೂ, ಸಸ್ಯಗಳೂ ಓಷಧಿಗಳೂ ಬೆಳೆಯುವುದು ಹೇಗೆ ?

೧೦. ಸೂರ್ಯನಿಲ್ಲದಿದ್ದರೆ ಭೂಲೋಕ ಸ್ವರ್ಗಲೋಕಗಳಲ್ಲಿ ವ್ಯವಹಾರವೇ ನಡೆಯಲಾರದು. ಬೇಸಗೆಯಲ್ಲಿ ನೀರನ್ನು ಹೀರುವಂತಹ ಆ ಸೂರ್ಯನಿಂದಲೇ ಎಲ್ಲಾ ವ್ಯವಹಾರಗಳೂ ನಡೆಯುವುವು.

೧೧. ಆ ಸೂರ್ಯನೂ ಸಹ ನೀರಿಲ್ಲದಿದ್ದರೆ ಪ್ರಕಾಶಿಸಲಾರನು. ನೀರನ್ನು ಹೀರಲಾರನು. ಪರಿಧಿಯನ್ನು ಧರಿಸಲಾರನು. ನೀರಿನಿಂದಲೂ ಸೂರ್ಯನು ಪ್ರಕಾಶಿಸುವನು.

shrinath.udupa@gmail.com

ವಸಂತೇ ಕಪಿಲಃ ಸೂರ್ಯೋ ಗ್ರೀಷ್ಮೇ ಕಾಂಚನಸಂನಿಭಃ ।
ಶ್ವೇತೋ ವರ್ಷಾಸು ವರ್ಣೇನ ಪಾಂಡುಃ ಶರದಿ ಭಾಸ್ಕರಃ ॥ ೧೨ ॥

ಹೇಮಂತೇ ತಾಮ್ರವರ್ಣಾಭಃ ಶಿಶಿರೇ ಲೋಹಿತೋ ರವಿಃ ।
ಇತಿ ವರ್ಣಾಃ ಸಮಾಖ್ಯಾತಾಃ ಸೂರ್ಯಸ್ಯ ಋತುಸಂಭವಾಃ ॥ ೧೩ ॥

ಋತುಸ್ವಭಾವವರ್ಣೈಶ್ಚ ಸೂರ್ಯಃ ಕ್ಷೇಮಸುಭಿಕ್ಷಕೃತ್ ।
ಅಥಾದಿತ್ಯಸ್ಯ ನಾಮಾನಿ ಸಾಮಾನ್ಯಾನಿ ದ್ವಿಜೋತ್ತಮಾಃ ॥ ೧೪ ॥

ದ್ವಾದಶೈವ ಪೃಥಕ್ತ್ವೇನ ತಾನಿ ವಕ್ಷ್ಯಾಮ್ಯಶೇಷತಃ ।
ಆದಿತ್ಯಃ ಸವಿತಾ ಸೂರ್ಯೋ ಮಿಹಿರೋಽರ್ಕಃ ಪ್ರಭಾಕರಃ ॥ ೧೫ ॥

ಮಾರ್ತಂಡೋ ಭಾಸ್ಕರೋ ಭಾನುಶ್ಚಿತ್ರಭಾನುರ್ದಿವಾಕರಃ ।
ರವಿರ್ದ್ವಾದಶಭಿಸ್ತೇಷಾಂ ಜ್ಞೇಯಃ ಸಾಮಾನ್ಯನಾಮಭಿಃ ॥ ೧೬ ॥

೧೨-೧೩. ವಸಂತಋತುವಿನಲ್ಲಿ ಸೂರ್ಯನು ಕಪಿಲ (ಕಪ್ಪುಮಿಶ್ರವಾದ ಕೆಂಪು) ವರ್ಣದವನಾಗಿರುವನು. ಗ್ರೀಷ್ಮದಲ್ಲಿ ಸುವರ್ಣದ ಬಣ್ಣವುಳ್ಳವನಾಗಿರುವನು. ಮಳೆಗಾಲದಲ್ಲಿ ಬಿಳಿಯಬಣ್ಣವುಳ್ಳವನಾಗಿರುವನು. ಶರದೃತುವಿನಲ್ಲಿಯೂ ಬಿಳಿಯ ಬಣ್ಣದವನಾಗಿರುವನು. ಹೇಮಂತದಲ್ಲಿ ತಾಮ್ರದ ಬಣ್ಣವುಳ್ಳವನಾಗಿರುವನು. ಶಿಶಿರಋತುವಿನಲ್ಲಿ ರಕ್ತವರ್ಣದವನಾಗಿರುವನು. ಹೀಗೆ ಸೂರ್ಯನು ಆಯಾಯ ಋತುಗಳಲ್ಲಿ ಮೇಲೆ ಹೇಳಿದ ವರ್ಣವುಳ್ಳವನಾಗಿರುವನು. ಆಯಾಯ ಋತುಗಳಲ್ಲಿ ಆಯಾವರ್ಣಗಳಿಂದ ಧ್ಯಾನಮಾಡಿದರೆ ಕ್ಷೇಮ ಮತ್ತು ಸುಭಿಕ್ಷಗಳನ್ನು ಉಂಟುಮಾಡುವನು.

೧೪. ಈಗ ಸೂರ್ಯನ ಸಾಮಾನ್ಯವಾದ ಹನ್ನೆರಡು ಹೆಸರುಗಳನ್ನು ಬೇರೆಬೇರೆಯಾಗಿ ಹೇಳುವೆನು, ಕೇಳಿರಿ.

೧೫-೧೬. ಆದಿತ್ಯ, ಸವಿತೃ, ಸೂರ್ಯ, ಮಿಹಿರ, ಅರ್ಕ, ಪ್ರಭಾಕರ ಮಾರ್ತಂಡ, ಭಾಸ್ಕರ, ಭಾನು, ಚಿತ್ರಭಾನು, ದಿವಾಕರ ಈ ಹನ್ನೆರಡು ಸೂರ್ಯನ ಸಾಮಾನ್ಯನಾಮಗಳು.

shrinath.udupa@gmail.com

ವಿಷ್ಣುರ್ಧಾತಾ ಭಗಃ ಪೂಷಾ ಮಿತ್ರೇಂದ್ರೌ ವರುಣೋಽರ್ಯಮಾ ।
ವಿವಸ್ವಾನಂಶುಮಾಂಸ್ತ್ವಷ್ಟಾ ಪರ್ಜನ್ಯೋ ದ್ವಾದಶಃ ಸ್ಮೃತಃ ॥ ೧೭ ॥

ಇತ್ಯೇತೇ ದ್ವಾದಶಾದಿತ್ಯಾಃ ಪೃಥಕ್ತ್ವೇನ ವ್ಯವಸ್ಥಿತಾಃ ।
ಉತ್ತಿಷ್ಠಂತಿ ಸದಾ ಹ್ಯೇತೇ ಮಾಸೈರ್ದ್ವಾದಶಭಿಃ ಕ್ರಮಾತ್ ॥ ೧೮ ॥

ವಿಷ್ಣುಸ್ತಪತಿ ಚೈತ್ರೇ ತು ವೈಶಾಖೇ ಚಾರ್ಯಮಾ ತಥಾ ।
ವಿವಸ್ವಾನ್ ಜ್ಯೇಷ್ಠಮಾಸೇ ತು ಆಷಾಢೇ ಚಾಂಶುಮಾನ್ ಸ್ಮೃತಃ ॥ ೧೯ ॥

ಪರ್ಜನ್ಯಃ ಶ್ರಾವಣೇ ಮಾಸಿ ವರುಣಃ ಪ್ರೌಷ್ಠಸಂಜ್ಞಕೇ ।
ಇಂದ್ರ ಆಶ್ವಯುಜೇ ಮಾಸಿ ಧಾತಾ ತಪತಿ ಕಾರ್ತಿಕೇ ॥ ೨೦ ॥

ಮಾರ್ಗಶೀರ್ಷೇ ತಥಾ ಮಿತ್ರಃ ಪೌಷೇ ಪೂಷಾ ದಿವಾಕರಃ ।
ಮಾಘೇ ಭಗಸ್ತು ವಿಜ್ಞೇಯಸ್ತ್ವಷ್ಟಾ ತಪತಿ ಫಾಲ್ಗುನೇ ॥ ೨೧ ॥

ಶತೈರ್ದ್ವಾದಶಭಿರ್ವಿಷ್ಣೂ ರಶ್ಮಿಭಿರ್ದೀಪ್ಯತೇ ಸದಾ ।
ದೀಪ್ಯತೇ ಗೋಸಹಸ್ರೇಣ ಶತೈಶ್ಚ ತ್ರಿಭಿರರ್ಯಮಾ ॥ ೨೨ ॥

೧೭-೧೮. ವಿಷ್ಣು, ಧಾತಾ, ಭಗ, ಪೂಷಾ, ಮಿತ್ರ, ಇಂದ್ರ, ವರುಣ, ಅರ್ಯಮಾ, ವಿವಸ್ವಾನ್, ಅಂಶುಮಾನ್, ತ್ವಷ್ಟಾ, ಪರ್ಜನ್ಯ ಇವರು ಹನ್ನೆರಡುಮಂದಿ ಆದಿತ್ಯರು. ಇವರು ಕ್ರಮವಾಗಿ ಒಬ್ಬೊಬ್ಬರಾಗಿ ಹನ್ನೆರಡು ಮಾಸಗಳಲ್ಲಿ ಉದಯಿಸುವರು.

೧೯-೨೧. ವಿಷ್ಣುವು ಚೈತ್ರಮಾಸದಲ್ಲುದಯಿಸಿ ಪ್ರಕಾಶಿಸುವನು. ಅರ್ಯಮನು ವೈಶಾಖದಲ್ಲಿ ಪ್ರಕಾಶಿಸುವನು. ವಿವಸ್ವಂತನು ಜ್ಯೇಷ್ಠಮಾಸದಲ್ಲಿಯೂ ಅಂಶುಮಂತನು ಆಷಾಢಮಾಸದಲ್ಲಿಯೂ ಪ್ರಕಾಶಿಸುವರು. ಶ್ರಾವಣಮಾಸದಲ್ಲಿ ಪರ್ಜನ್ಯನೂ, ಭಾದ್ರಪದಮಾಸದಲ್ಲಿ ವರುಣನೂ, ಆಶ್ವಯುಜಮಾಸದಲ್ಲಿ ಇಂದ್ರನೂ ಕಾರ್ತೀಕಮಾಸದಲ್ಲಿ ಧಾತೃವೂ ಪ್ರಕಾಶಿಸುವರು. ಮಾರ್ಗಶಿರಮಾಸದಲ್ಲಿ ಮಿತ್ರನೂ ಪುಷ್ಯಮಾಸದಲ್ಲಿ ಪೂಷನೂ, ಮಾಘಮಾಸದಲ್ಲಿ ಭಗದೇವನೂ, ಫಾಲ್ಗುಣಮಾಸದಲ್ಲಿ ತ್ವಷ್ಟೃವೂ ಪ್ರಕಾಶಿಸುವರು.

೨೨. ವಿಷ್ಣುವು ಒಂದುಸಾವಿರದ ಇನ್ನೂರು (೧,೨೦೦) ಕಿರಣಗಳಿಂದ ಪ್ರಕಾಶಿಸುವನು. ಅರ್ಯಮನು ಸಾವಿರದ ಮುನ್ನೂರು ಕಿರಣಗಳಿಂದ ಪ್ರಕಾಶಿಸುವನು.

shrinath.udupa@gmail.com

ದ್ವಿಃ ಸಪ್ತೈರ್ವಿವಸ್ವಾಂಸ್ತು ಅಂಶುಮಾನ್ ಪಂಚಭಿಸ್ತ್ರಿಭಿಃ ।
ವಿವಸ್ವಾನಿವ ಪರ್ಜನ್ಯೋ ವರುಣಶ್ಚಾರ್ಯಮಾ ತಥಾ ॥ ೨೩ ॥

ಮಿತ್ರವದ್ಭಗವಾಂಸ್ತ್ವಷ್ಟಾ ಸಹಸ್ರೇಣ ಶತೇನ ಚ ।
ಇಂದ್ರಸ್ತು ದ್ವಿಗುಣೈಃ ಷಡ್ಭಿರ್ಧಾತೈಕಾದಶಭಿಃ ಶತೈಃ ॥ ೨೪

ಸಹಸ್ರೇಣ ತು ಮಿತ್ರೋ ವೈ ಪೂಷಾ ತು ನವಭಿಃ ಶತೈಃ ।
ಉತ್ತರೋಪಕ್ರಮೇಽರ್ಕಸ್ಯ ವರ್ಧಂತೇ ರಶ್ಮಯಸ್ತಥಾ ॥ ೨೫ ॥

ದಕ್ಷಿಣೋಪಕ್ರಮೇ ಭೂಯೋ ಹ್ರಸಂತೇ ಸೂರ್ಯರಶ್ಮಯಃ ।
ಏವಂ ರಶ್ಮಿಸಹಸ್ರಂ ತು ಸೂರ್ಯಲೋಕಾದನುಗ್ರಹಂ ॥ ೨೬ ॥

ಏವಂ ನಾಮ್ನಾಂ ಚತುರ್ವಿಂಶದೇಕ ಏಷಾಂ ಪ್ರಕೀರ್ತಿತಃ ।
ವಿಸ್ತರೇಣ ಸಹಸ್ರಂ ತು ಪುನರನ್ಯತ್ಪ್ರಕೀರ್ತಿತಂ ॥ ೨೭ ॥

---

೨೩. ವಿವಸ್ವಂತನು ಸಾವಿರದನೂರು ಕಿರಣಗಳಿಂದ ಪ್ರಕಾಶಿಸುವನು. ಅಂಶುಮಂತನು ಸಾವಿರದೈನೂರು ಕಿರಣಗಳಿಂದ ಪ್ರಕಾಶಿಸುವನು. ವಿವಸ್ವಂತನಂತೆ ಪರ್ಜನ್ಯನೂ ವರುಣನೂ ಸಾವಿರದನಾನೂರು ಕಿರಣಗಳಿಂದಪ್ರಕಾಶಿಸುವರು.

೨೪. ಮಿತ್ರನಂತೆ ಭಗದೇವನು ಸಾವಿರಕಿರಣಗಳಿಂದಲೂ, ತ್ವಷ್ಟೃವು ಸಾವಿರದನೂರು ಕಿರಣಗಳಿಂದಲೂ, ಇಂದ್ರನು ಸಾವಿರದ ಆರುನೂರು (೧,೬೦೦) ಕಿರಣಗಳಿಂದಲೂ, ಧಾತೃವು ಸಾವಿರದ ನೂರು (೧,೧೦೦) ಕಿರಣಗಳಿಂದಲೂ ಪ್ರಕಾಶಿಸುವರು. ಮಿತ್ರನು ಸಾವಿರಕಿರಣಗಳಿಂದಲೂ ಪೂಷನು ಒಂಭೈನೂರು (೯೦೦) ಕಿರಣಗಳಿಂದಲೂ ಪ್ರಕಾಶಿಸುವರು.

೨೫. ಉತ್ತರಾಯಣ ಮೊದಲಾದಲ್ಲಿ ಸೂರ್ಯನ ಕಿರಣಗಳು ಜಾಸ್ತಿಯಾಗುವುವು. ದಕ್ಷಿಣಾಯನ ಮೊದಲಾದಲ್ಲಿ ಕಮ್ಮಿಯಾಗುವುವು.

೨೬. ಹೀಗೆ ಪ್ರತಿದಿನವೂ ಸಾವಿರಾರು ಕಿರಣಗಳು ಸೂರ್ಯನ ಅನುಗ್ರಹದಿಂದ ಭೂಮಿಯಮೇಲೆ ಪ್ರಸರಿಸುವುವು.

೨೭. ಹೀಗೆ ಓರ್ವನೇ ಆದ ಸೂರ್ಯನಿಗೆ ಇಪ್ಪತ್ತನಾಲ್ಕು ಹೆಸರುಗಳಿರುವುವು. ಇನ್ನೂ ವಿಸ್ತಾರವಾಗಿ ಅವನಿಗೆ ಸಾವಿರ ಹೆಸರುಗಳನ್ನೂ ಹೇಳಿರುವರು.

shrinath.udupa@gmail.com

॥ ಮುನಯ ಊಚುಃ ॥

ಯೇ ತನ್ನಾಮಸಹಸ್ರೇಣ ಸ್ತುವಂತ್ಯರ್ಕಂ ಪ್ರಜಾಪತೇ ।
ತೇಷಾಂ ಭವತಿ ಕಿಂ ಪುಣ್ಯಂ ಗತಿಶ್ಚ ಪರಮೇಶ್ವರ ॥ ೨೮ ॥

॥ ಬ್ರಹ್ಮೋವಾಚ ॥

ಶೃಣುಧ್ವಂ ಮುನಿಶಾರ್ದೂಲಾಃ ಸಾರಭೂತಂ ಸನಾತನಂ ।
ಅಲಂ ನಾಮಸಹಸ್ರೇಣ ಪಠನ್ನೇವಂ ಸ್ತವಂ ಶುಭಂ ॥ ೨೯ ॥

ಯಾನಿ ನಾಮಾನಿ ಗುಹ್ಯಾನಿ ಪವಿತ್ರಾಣಿ ಶುಭಾನಿ ಚ ।
ತಾನಿ ವಃ ಕೀರ್ತಯಿಷ್ಯಾಮಿ ಶೃಣುಧ್ವಂ ಭಾಸ್ಕರಸ್ಯ ವೈ ॥ ೩೦ ॥

ವಿಕರ್ತನೋ ವಿವಸ್ವಾಂಶ್ಚ ಮಾರ್ತಂಡೋ ಭಾಸ್ಕರೋ ರವಿಃ ।
ಲೋಕಪ್ರಕಾಶಕಃ ಶ್ರೀಮಾನ್ ಲೋಕಚಕ್ಷುರ್ಮಹೇಶ್ವರಃ ॥ ೩೧ ॥

ಲೋಕಸಾಕ್ಷೀ ತ್ರಿಲೋಕೇಶಃ ಕರ್ತಾ ಹರ್ತಾ ತಮಿಸ್ರಹಾ ।
ತಪನಸ್ತಾಪನಶ್ಚೈವ ಶುಚಿಃ ಸಪ್ತಾಶ್ವವಾಹನಃ ॥ ೩೨ ॥

---

೨೮. ಮುನಿಗಳು ಪ್ರಶ್ನಿಸಿದರು—ಓ ಬ್ರಹ್ಮದೇವ! ಸೂರ್ಯನನ್ನು ಸಹಸ್ರ ನಾಮಗಳಿಂದ ಸ್ತುತಿಸಿದರೆ ಎಂತಹ ಪುಣ್ಯವುಂಟಾಗುವುದು? ಎಂತಹ ಗತಿಯು ಲಭಿಸುವುದು?

೨೯. ಬ್ರಹ್ಮನು ಹೇಳಿದನು.—ಎಲೈ ಮುನಿಶ್ರೇಷ್ಠರೇ! ಕೇಳಿರಿ, ಸಾರವಾದುದೂ, ಅನಾದಿಯಾದುದೂ ಆದಂತಹ-ಸ್ತೋತ್ರವೊಂದನ್ನು ಹೇಳುವೆನು. ಅದನ್ನು ಹೇಳಿದರೆ ಸಹಸ್ರನಾಮವನ್ನು ಹೇಳಿದುದರ ಫಲವು ಬರುವುದು.

೩೦. ಭಾಸ್ಕರನ ರಹಸ್ಯವೂ ಪವಿತ್ರವೂ ಮಂಗಳವೂ ಆದ ನಾಮಗಳುಂಟು, ಅವುಗಳನ್ನು ಈಗ ನಿಮಗೆ ಹೇಳುವೆನು.

೩೧-೩೨. ವಿಕರ್ತನ, ವಿವಸ್ವಾನ್, ಮಾರ್ತಂಡ, ಭಾಸ್ಕರ, ರವಿ, ಲೋಕಪ್ರಕಾಶನ, ಶ್ರೀಮಾನ್, ಲೋಕಚಕ್ಷು, ಮಹೇಶ್ವರ, ಲೋಕಸಾಕ್ಷಿ, ತ್ರಿಲೋಕೇಶ, ಕರ್ತಾ, ಹರ್ತಾ, ತಮಿಸ್ರಹಾ, ತಪನ, ತಾಪನ, ಶುಚಿ, ಸಪ್ತಾಶ್ವವಾಹನ, ಗಭಸ್ತಿ

shrinath.udupa@gmail.com

ಗಭಸ್ತಿಹಸ್ತೋ ಬ್ರಹ್ಮಾ ಚ ಸರ್ವದೇವನಮಸ್ಕೃತಃ ।
ಏಕವಿಂಶತಿ ಇತ್ಯೇಷ ಸ್ತವ ಇಷ್ಟಃ ಸದಾ ರವೇಃ ॥ ೩೩ ॥

ಶರೀರಾರೋಗ್ಯದಶ್ಚೈವ ಧನವೃದ್ಧಿಯಶಸ್ಕರಃ ।
ಸ್ತವರಾಜ ಇತಿ ಖ್ಯಾತಸ್ತ್ರಿಷು ಲೋಕೇಷು ವಿಶ್ರುತಃ ॥ ೩೪ ॥

ಯ ಏತೇನ ದ್ವಿಜಶ್ರೇಷ್ಠಾ ದ್ವಿಸಂಧ್ಯೇಽಸ್ತಮನೋದಯೇ ।
ಸ್ತೌತಿ ಸೂರ್ಯಂ ಶುಚಿರ್ಭೂತ್ವಾ ಸರ್ವಪಾಪೈಃ ಪ್ರಮುಚ್ಯತೇ ॥ ೩೫ ॥

ಮಾನಸಂ ವಾಚಿಕಂ ವಾಪಿ ದೇಹಜಂ ಕರ್ಮಜಂ ತಥಾ ।
ಏಕಜಪ್ಯೇನ ತತ್ಸರ್ವಂ ನಶ್ಯತ್ಯರ್ಕಸ್ಯ ಸಂನಿಧೌ ॥ ೩೬ ॥

ಏಕಜಪ್ಯಶ್ಚ ಹೋಮಶ್ಚ ಸಂಧ್ಯೋಪಾಸನಮೇವ ಚ ।
ಧೂಪಮಂತ್ರಾರ್ಘ್ಯಮಂತ್ರಶ್ಚ ಬಲಿಮಂತ್ರಸ್ತಥೈವ ಚ ॥ ೩೭ ॥

ಹಸ್ತ, ಬ್ರಹ್ಮ, ಸರ್ವದೇವನಮಸ್ಕೃತ ಎಂಬ ಇಪ್ಪತ್ತೊಂದು ನಾಮಗಳುಳ್ಳ ಈ ಸ್ತವವು ಸೂರ್ಯನಿಗೆ ತುಂಬಾ ಪ್ರಿಯವಾದುದು.

೩೪. ಈ ಸ್ತೋತ್ರವನ್ನು ಪಠಿಸುವುದರಿಂದ ಆರೋಗ್ಯವುಂಟಾಗುವುದು. ಸಂಪತ್ತು ಅಭಿವೃದ್ಧಿಯಾಗುವುದು. ಕೀರ್ತಿಯು ಹರಡುವುದು. ಸೂರ್ಯಸ್ತವ ರಾಜನೆಂದು ಈ ಸ್ತೋತ್ರವು ತುಂಬಾ ಪ್ರಸಿಧ್ಧವಾಗಿರುವುದು.

೩೫. ಬ್ರಾಹ್ಮಣೋತ್ತಮರೇ! ಈ ಸೂರ್ಯಸ್ತವರಾಜವನ್ನು ಪ್ರಾತಃಕಾಲ ಸಾಯಂಕಾಲಗಳಲ್ಲಿ ಮಡಿಯಿಂದ ಹೇಳಿ ಸೂರ್ಯನನ್ನು ಸ್ತುತಿಸಿದರೆ ಸಕಲಪಾಪಗಳೂ ನಾಶವಾಗುವುವು.

೩೬. ಸೂರ್ಯನ ಈ ಸ್ತವರಾಜವನ್ನು ಒಂದುಬಾರಿ ಜಪಿಸಿದರೆ ಮನಸ್ಸು, ವಾಕ್ಕು, ಶರೀರ ಈ ಮೂರರಿಂದ ಮಾಡಿದ ಪಾಪಗಳೆಲ್ಲವೂ ನಾಶವಾಗುವುವು.

೩೭. ಈ ಸ್ತವರಾಜವೇ ಹೋಮಮಂತ್ರವೂ ಸಂಧ್ಯೋಪಾಸನೆಯ ಮಂತ್ರವೂ, ಧೂಪಮಂತ್ರವೂ, ಅರ್ಘ್ಯಮಂತ್ರವೂ, ಬಲಿಮಂತ್ರವೂ ಆಗುವುದು.

shrinath.udupa@gmail.com

ಅನ್ನಪ್ರದಾನೇ ದಾನೇ ಚ ಪ್ರಣಿಪಾತೇ ಪ್ರದಕ್ಷಿಣೇ ।
ಪೂಜಿತೋಽಯಂ ಮಹಾಮಂತ್ರಃ ಸರ್ವಪಾಪಹರಃ ಶುಭಃ ॥ ೩೮ ॥

ತಸ್ಮಾದ್ಯೂಯಂ ಪ್ರಯತ್ನೇನ ಸ್ತವೇನಾನೇನ ವೈ ದ್ವಿಜಾಃ ।
ಸ್ತುವೀಧ್ವಂ ವರದಂ ದೇವಂ ಸರ್ವಕಾಮಫಲಪ್ರದಂ ॥ ೩೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭ್ವೃಷಿಸಂವಾದೇ
ಮಾರ್ತಂಡಸ್ಯೈಕವಿಂಶತಿನಾಮಾನುಕೀರ್ತನಂ ನಾಮ
ಏಕತ್ರಿಂಶೋಽಧ್ಯಾಯಃ

---

೩೮. ಅನ್ನದಾನ ಮೊದಲಾದ ದಾನಗಳಲ್ಲಿಯೂ ಪ್ರದಕ್ಷಿಣನಮಸ್ಕಾರಗಳಲ್ಲಿಯೂ ಈ ಮಂತ್ರವು ಉತ್ತಮವಾದುದು. ಹೋಮ ಮೊದಲಾದ ಕರ್ಮಗಳಲ್ಲಿ ಮಂತ್ರವಾಗಿ ಈ ಶುಭಸ್ತವವನ್ನು ಉಪಯೋಗಿಸಿದರೆ ಸಕಲಪಾಪಗಳೂ ನಾಶವಾಗುವುವು.

೩೯. ಆದುದರಿಂದ, ಎಲೈ ಮುನಿಗಳೇ! ನೀವು ಈ ಸ್ತವರಾಜದಿಂದ ಸಕಲ ಇಷ್ಟಾರ್ಥಗಳನ್ನೂ ಕೊಡುವಂತಹ ಸೂರ್ಯದೇವನನ್ನು ಭಕ್ತಿಯಿಂದ ಸ್ತುತಿಸಿರಿ ಎಂದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದ ಸ್ವಯಂಭುಋಷಿಸಂವಾದದಲ್ಲಿ ಮಾರ್ತಂಡೈಕ
ವಿಂಶತಿನಾಮಾನುಕೀರ್ತನವೆಂಬ ಮೂವತ್ತೊಂದನೆಯ
ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ದ್ವಾತ್ರಿಂಶೋಽಧ್ಯಾಯಃ

॥ ಮುನಯ ಊಚುಃ ॥

ನಿರ್ಗುಣಃ ಶಾಶ್ವತೋ ದೇವಸ್ತ್ವಯಾ ಪ್ರೋಕ್ತೋ ದಿವಾಕರಃ ।
ಪುನರ್ದ್ವಾದಶಧಾ ಜಾತಃ ಶ್ರುತೋಽಸ್ಮಾಭಿಸ್ತ್ವಯೋದಿತಃ ॥ ೧ ॥

ಸ ಕಥಂ ತೇಜಸೋ ರಶ್ಮಿಃ ಸ್ತ್ರಿಯಾ ಗರ್ಭೇ ಮಹಾದ್ಯುತಿಃ ।
ಸಂಭೂತೋ ಭಾಸ್ಕರೋ ಜಾತಸ್ತತ್ರ ನಃ ಸಂಶಯೋ ಮಹಾನ್ ॥ ೨ ॥

ಮೂವತ್ತೆರಡನೆಯ ಅಧ್ಯಾಯವು

೧. ಮುನಿಗಳು ಕೇಳಿದರು.—ಓ ಬ್ರಹ್ಮದೇವ ! ಸೂರ್ಯನು ನಿರ್ಗುಣನೂ ನಿತ್ಯನೂ ಪರಮಾತ್ಮರೂಪನೆಂದೂ ನೀನು ಹೇಳಿರುವೆ. ತಿರುಗಿ ಅವನು ಲೋಕರಕ್ಷಣೆಗಾಗಿ ಹನ್ನೆರಡು ರೂಪಗಳನ್ನು ಧರಿಸಿದನೆಂದೂ ಹೇಳಿರುವೆ.

೨. ಇಂತಹ ತೇಜೋಮಯನಾದ ಆ ಭಾಸ್ಕರನು ಸ್ತ್ರೀಯ ಗರ್ಭದಲ್ಲಿ ಜನಿಸುದುದು ಹೇಗೆ? ಎಂದು ನಮಗೆ ಸಂದೇಹವುಂಟಾಗಿರುವುದು. ಅದನ್ನು ಹೋಗಲಾಡಿಸು ಎನಲು,

shrinath.udupa@gmail.com

॥ ಬ್ರಹ್ಮೋವಾಚ ॥

ದಕ್ಷಸ್ಯ ಹಿ ಸುತಾಃ ಶ್ರೇಷ್ಠಾ ಬಭೂವುಃ ಷಷ್ಟಿಃ ಶೋಭನಾಃ ।
ಅದಿತಿರ್ದಿತಿರ್ದನುಶ್ಚೈವ ವಿನತಾದ್ಯಾಸ್ತಥೈವ ಚ ॥ ೩ ॥

ದಕ್ಷಸ್ತಾಃ ಪ್ರದದೌ ಕನ್ಯಾಃ ಕಶ್ಯಪಾಯ ತ್ರಯೋದಶ ।
ಅದಿತಿರ್ಜನಯಾಮಾಸ ದೇವಾಂಸ್ತ್ರಿಭುವನೇಶ್ವರಾನ್ ॥ ೪ ॥

ದೈತ್ಯಾನ್ ದಿತಿರ್ದನುಶ್ಚೋಗ್ರಾನ್ ದಾನವಾನ್ಬಲದರ್ಪಿತಾನ್ ।
ವಿನತಾದ್ಯಾಸ್ತಥಾ ಚಾನ್ಯಾಃ ಸುಷುವುಃ ಸ್ಥಾಣುಜಂಗಮಾನ್ ॥ ೫ ॥

ತಸ್ಯಾಥ ಪುತ್ರದೌಹಿತ್ರೈಃ ಪೌತ್ರದೌಹಿತ್ರಕಾದಿಭಿಃ ।
ವ್ಯಾಪ್ತಮೇತಜ್ಜಗತ್ಸರ್ವಂ ತೇಷಾಂ ತಾಸಾಂ ಚ ವೈ ಮುನೇ ॥ ೬ ॥

ತೇಷಾಂ ಕಶ್ಯಪಪುತ್ರಾಣಾಂ ಪ್ರಧಾನಾ ದೇವತಾಗಣಾಃ ।
ಸಾತ್ತ್ವಿಕಾ ರಾಜಸಾಶ್ಚಾನ್ಯೇ ತಾಮಸಾಶ್ಚ ಗಣಾಃ ಸ್ಮೃತಾಃ ॥ ೭ ॥

---

೩. ಬ್ರಹ್ಮನು ಹೇಳಿದನು.—ಎಲೈ ಮುನಿಗಳೇ! ದಕ್ಷಬ್ರಹ್ಮನಿಗೆ ಅದಿತಿ, ದಿತಿ, ದನು, ವಿನತೆ, ಮೊದಲಾದ ಅರವತ್ತು ಮಂದಿ ಸುಂದರಿಯರಾದ ಕನ್ಯೆಯರು ಜನಿಸಿದರು.

೪. ದಕ್ಷನು ಅವರಲ್ಲಿ ಹದಿಮೂರು ಮಂದಿ ಕನ್ಯೆಯರನ್ನು ಕಶ್ಯಪನಿಗೆ ಮದುವೆಮಾಡಿಕೊಟ್ಟನು. ಅವರಲ್ಲಿ ಅದಿತಿಯು ಜಗದೊಡೆಯರಾದ ದೇವತೆಗಳನ್ನು ಹಡೆದಳು.

೫. ದಿತಿಯು ದೈತ್ಯರನ್ನು ಹಡೆದಳು. ದನುದೇವಿಯು ಉಗ್ರರೂ, ಬಲಿಷ್ಠರೂ ಆದ ದಾನವರನ್ನು ಹಡೆದಳು. ವಿನತಾದೇವಿ ಮೊದಲಾದವರು ಕೆಲವರು ಸ್ಥಿರ [ಚಲಿಸದಿರುವ] ಚರ [ಸಂಚರಿಸುವಂತಹ] ರೂಪಗಳಾದ ಪ್ರಾಣಿಗಳನ್ನು ಹಡೆದರು.

೬. ಆ ಕಶ್ಯಪನ ಮಕ್ಕಳು, ಕನ್ಯೆಯರ ಮಕ್ಕಳು, ಮೊಮ್ಮಕ್ಕಳು, ಕನ್ಯೆಯರ ಮಕ್ಕಳ ಮಕ್ಕಳು ಇವರುಗಳಿಂದ ಜಗತ್ತೆಲ್ಲವೂ ತುಂಬಿಹೋಯಿತು.

೭. ಆ ಕಶ್ಯಪನ ಮಕ್ಕಳಲ್ಲಿ ದೇವತೆಗಳು ಮುಖ್ಯರು. ಅವರು ಸಾತ್ತ್ವಿಕರು. ಉಳಿದ ಪುತ್ರರು ರಜೋಗುಣದವರೂ, ತಮೋಗುಣದವರೂ, ಆದರು.

shrinath.udupa@gmail.com

ದೇವಾನ್ ಯಜ್ಞಭುಜಶ್ಚಕ್ರೇ ತಥಾ ತ್ರಿಭುವನೇಶ್ವರಾನ್ ।
ಸ್ರಷ್ಟಾ ಬ್ರಹ್ಮವಿದಾಂ ಶ್ರೇಷ್ಠಃ ಪರಮೇಷ್ಠೀ ಪ್ರಜಾಪತಿಃ ॥ ೮ ॥

ತಾನಬಾಧಂತ ಸಹಿತಾಃ ಸಾಪತ್ನ್ಯಾದ್ದೈತ್ಯದಾನವಾಃ ।
ತತೋ ನಿರಾಕೃತಾನ್ಪುತ್ರಾನ್ ದೈತೇಯೈರ್ದಾನವೈಸ್ತಥಾ ॥ ೯ ॥

ಹತಂ ತ್ರಿಭುವನಂ ದೃಷ್ಟ್ವಾ ಅದಿತಿರ್ಮುನಿಸತ್ತಮಾಃ ।
ಆಚ್ಛಿನದ್ಯಜ್ಞಭಾಗಾಂಶ್ಚ ಕ್ಷುಧಾ ಸಂಪೀಡಿತಾನ್ಭೃಶಂ ॥ ೧೦ ॥

ಆರಾಧನಾಯ ಸವಿತುಃ ಪರಂ ಯತ್ನಂ ಪ್ರಚಕ್ರಮೇ ।
ಏಕಾಗ್ರಾ ನಿಯತಾಹಾರಾ ಪರಂ ನಿಯಮಮಾಸ್ಥಿತಾ ।
ತುಷ್ಟಾವ ತೇಜಸಾಂ ರಾಶಿಂ ಗಗನಸ್ಥಂ ದಿವಾಕರಂ ॥ ೧೧ ॥

---

೮. ದೇವತೆಗಳು ಯಜ್ಞದ ಹವಿಸ್ಸುಗಳನ್ನು ಭಕ್ಷಿಸುವಂತೆಯೂ ಜಗದೊಡೆಯರಾಗಿರುವಂತೆಯೂ ಬ್ರಹ್ಮಜ್ಞಾನಿಯೂ, ಸೃಷ್ಟಿಕರ್ತನೂ ಪರಮೇಶ್ವರನೂ ಆದ ಬ್ರಹ್ಮನು ನಿಯಮಿಸಿದನು.

೯-೧೦. ಆ ದೇವತೆಗಳನ್ನು ಸವತಿಯ ಮಕ್ಕಳಾದ ದೈತ್ಯರೂ, ದಾನವರೂ ಸಹ ವೈರದಿಂದ ಪೀಡಿಸಿದರು. ಸ್ವರ್ಗದಿಂದ ಓಡಿಸಿದರು. ದೇವತೆಗಳಿಗೆ ಹವಿಸ್ಸು ಸಿಗದೆ ಹಸಿವಿನಿಂದ ಬಳಲಿ ಕಂಗೆಟ್ಟರು. ಮೂರುಲೋಕವೂ ಹಾಳಾಗುವ ಸ್ಥಿತಿಯುಂಟಾಯಿತು.

೧೧. ದೇವತೆಗಳ ಆ ಅವಸ್ಥೆಯನ್ನು ನೋಡಿ ಅವರ ಮಾತೆಯಾದ ಅದಿತಿ ದೇವಿಯು ಖತಿಗೊಂಡು, ಆಹಾರನಿಯಮದಿಂದಲೂ ತಲ್ಲೀನತೆಯಿಂದಲೂ ಕೂಡಿ ಸೂರ್ಯನನ್ನು ಭಕ್ತಿಯಿಂದ ಆರಾಧಿಸತೊಡಗಿದಳು. ಮತ್ತು ಗಗನದಲ್ಲಿರುವ ತೇಜೋರೂಪನಾದ ಸೂರ್ಯನನ್ನು ಹೀಗೆ ಸ್ತುತಿಸಿದಳು.

shrinath.udupa@gmail.com

॥ ಅದಿತಿರುವಾಚ ॥

ನಮಸ್ತುಭ್ಯಂ ಪರಂ ಸೂಕ್ಷ್ಮಂ ಸುಪುಣ್ಯಂ ಬಿಭ್ರತೇಽತುಲಂ ।
ಧಾಮ ಧಾಮವತಾಮೀಶಂ ಧಾಮಾಧಾರಂ ಚ ಶಾಶ್ವತಂ ॥ ೧೨ ॥

ಜಗತಾಮುಪಕಾರಾಯ ತ್ವಾಮಹಂ ಸ್ತೌಮಿ ಗೋಪತೇ ।
ಆದದಾನಸ್ಯ ಯದ್ರೂಪಂ ತೀವ್ರಂ ತಸ್ಮೈ ನಮಾಮ್ಯಹಂ ॥ ೧೩ ॥

ಗ್ರಹೀತುಮಷ್ಟಮಾಸೇನ ಕಾಲೇನಾಂಬುಮಯಂ ರಸಂ ।
ಭಿಭ್ರತಸ್ತವ ಯದ್ರೂಪಮತಿತೀವ್ರಂ ನತಾಸ್ಮಿ ತತ್ ॥ ೧೪ ॥

ಸಮೇತಮಗ್ನಿಸೋಮಾಭ್ಯಾಂ ನಮಸ್ತಸ್ಮೈ ಗುಣಾತ್ಮನೇ ।
ಯದ್ರೂಪಮೃಗ್ಯಜುಸ್ಸಾಮ್ನಾಮೈಕ್ಯೇನ ತಪತೇ ತವ ॥ ೧೫ ॥

---

೧೨. ಅದಿತಿಯು ಹೇಳಿದಳು—ಓ ಸೂರ್ಯದೇವ ! ಇಂದ್ರಿಯಗಳಿಗೆ ಅಗೋಚರವೂ, ಸರ್ವೋತ್ಕೃಷ್ಟವೂ, ಪರಿಶುದ್ಧವೂ, ನಿರತಿಶಯವೂ ಆದ ಬ್ರಹ್ಮವಸ್ತುವಿನ ಸ್ವರೂಪನಾದ ನಿನಗೆ ನಮಸ್ಕಾರವು. ತೇಜಸ್ವಿಗಳಾದವರ ತೇಜಸ್ಸೇ ನೀನು. ಅಂತಹ ತೇಜಸ್ಸುಗಳಿಗೆ ಆಧಾರನೂ ನೀನು. ನಿನಗೆಂದಿಗೂ ನಾಶವಿಲ್ಲವು.

೧೩. ಸಹಸ್ರಕಿರಣನಾದ ಓ ದೇವ ! ಜಗತ್ತಿಗೆ ಕ್ಷೇಮವಾಗಲೆಂದು ನಿನ್ನನ್ನು ಸ್ತುತಿಸುತ್ತಿರುವೆನು. ಜಗತ್ತೆಲ್ಲವನ್ನೂ ಧರಿಸಿರುವಂತಹ ನಿನ್ನ ಉಗ್ರರೂಪವನ್ನು ನಮಿಸುವೆನು.

೧೪. ಎಂಟುತಿಂಗಳವರೆಗೆ, ಭೂಮಿಯಲ್ಲಿರುವ ಜಲರಸವನ್ನು ಹೀರಲು ಧರಿಸಿರುವ ನಿನ್ನ ಮಹಾತೇಜಸ್ವಿಯಾದ ರೂಪವನ್ನು ನಮಿಸುವೆನು.

೧೫. ಅಗ್ನಿ ಮತ್ತು ಚಂದ್ರರಿಂದ ಕೂಡಿರುವ ಸೂರ್ಯನಿಗೆ ನಮಸ್ಕಾರವು. ಋಗ್ವೇದ, ಯಜುರ್ವೇದ, ಸಾಮವೇದ ಈ ಮೂರು ವೇದಗಳ ಸ್ವರೂಪವನ್ನುಳ್ಳವನಾಗಿದ್ದು ಮೂರು ಲೋಕಗಳನ್ನೂ ಪ್ರಕಾಶಗೊಳಿಸುವ ಸೂರ್ಯನಿಗೆ ನಮಸ್ಕಾರವು.

shrinath.udupa@gmail.com

ವಿಶ್ವಮೇತತ್ತ್ರಯೀಸಂಜ್ಞಂ ನಮಸ್ತಸ್ಮೈ ವಿಭಾವಸೋ ।
ಯತ್ತು ತಸ್ಮಾತ್ಪರಂ ರೂಪಮೋಮಿತ್ಯುಕ್ತ್ವಾಭಿಸಂಹಿತಂ ।
ಅಸ್ಥೂಲಂ ಸ್ಥೂಲಮಮಲಂ ನಮಸ್ತಸ್ಮೈ ಸನಾತನ ॥ ೧೬ ॥

॥ ಬ್ರಹ್ಮೋವಾಚ ॥

ಏವಂ ಸಾ ನಿಯತಾ ದೇವೀ ಚಕ್ರೇ ಸ್ತೋತ್ರಮಹರ್ನಿಶಂ ।
ನಿರಾಹಾರಾ ವಿವಸ್ವಂತಮಾರಿರಾಧಯಿಷುರ್ದ್ವಿಜಾಃ ॥ ೧೭ ॥

ತತಃ ಕಾಲೇನ ಮಹತಾ ಭಗವಾಂಸ್ತಪನೋ ದ್ವಿಜಾಃ ।
ಪ್ರತ್ಯಕ್ಷತಾಮಗಾತ್ತಸ್ಯಾ ದಾಕ್ಷಾಯಣ್ಯಾ ದ್ವಿಜೋತ್ತಮಾಃ ॥ ೧೮ ॥

ಸಾ ದದರ್ಶ ಮಹಾಕೂಟಂ ತೇಜಸೋಽಂಬರಸಂವೃತಂ ।
ಭೂಮೌ ಚ ಸಂಸ್ಥಿತಂ ಭಾಸ್ವಜ್ಜ್ವಾಲಾಭಿರತಿದುರ್ದಶಂ ।
ತಂ ದೃಷ್ಟ್ವಾ ಚ ತತೋ ದೇವೀ ಸಾಧ್ವಸಂ ಪರಮಂ ಗತಾ ॥ ೧೯ ॥

---

೧೬. ಪುರಾಣಪುರುಷನಾದ ಓ ಸೂರ್ಯ ! ನಿನ್ನ ಮೂರು ವೇದಗಳ ರೂಪವಾದ ಸ್ವರೂಪಕ್ಕಿಂತಲೂ ಶ್ರೇಷ್ಠವಾದುದೂ, ಓಂಕಾರರೂಪವಾದುದೂ, ಸ್ಥೂಲ ಸೂಕ್ಷ್ಮ ಜಗದ್ರೂಪವಾದುದೂ ಆದ ಯಾವ ನಿನ್ನ ಬ್ರಹ್ಮಸ್ವರೂಪವಿರುವುದೋ ಅದಕ್ಕೆ ನಮಸ್ಕಾರವು ಎಂದು ಸ್ತುತಿಸಿದಳು.

೧೭. ಬ್ರಹ್ಮನು ಹೇಳಿದನು.—ಎಲೈ ಮುನಿಗಳೇ ! ಹೀಗೆ ಆ ಅದಿತಿದೇವಿಯು ಸೂರ್ಯನನ್ನಾರಾಧಿಸಲು ಉಪವಾಸವಿದ್ದು ರಾತ್ರಿಹಗಲು ಸ್ತೋತ್ರವನ್ನು ಮಾಡುತ್ತಲಿದ್ದಳು.

೧೮. ಹೀಗೆ ಕೆಲವು ಕಾಲವು ಕಳೆಯಲು ಭಗವಂತನಾದ ಸೂರ್ಯದೇವನು ಆ ಅದಿತಿದೇವಿಗೆ ಪ್ರತ್ಯಕ್ಷನಾದನು.

೧೯. ಆ ಅದಿತಿದೇವಿಯು ತನ್ನ ಎದುರಿನಲ್ಲಿ ತೇಜಸ್ಸಿನ ಜ್ವಾಲೆಗಳಿಂದ ಕೂಡಿದ, ಕಣ್ಣುಗಳನ್ನು ಕುಕ್ಕಿಸುವ ತೇಜೋರಾಶಿಯೊಂದನ್ನು ಆಗ ನೋಡಿದಳು.

shrinath.udupa@gmail.com

॥ ಅದಿತಿರುವಾಚ ॥

ಜಗದಾದ್ಯ ಪ್ರಸೀದೇತಿ ನ ತ್ವಾಂ ಪಶ್ಯಾಮಿ ಗೋಪತೇ ।
ಪ್ರಸಾದಂ ಕುರು ಪಶ್ಯೇಯಂ ಯದ್ರೂಪಂ ತೇ ದಿವಾಕರ ॥ ೨೦ ॥

ಭಕ್ತಾನುಕಂಪಕ ವಿಭೋ ತ್ವದ್ಭಕ್ತಾನ್ ಪಾಹಿ ಮೇ ಸುತಾನ್ ॥ ೨೧ ॥

॥ ಬ್ರಹ್ಮೋವಾಚ ॥

ತತಃ ಸ ತೇಜಸಸ್ತಸ್ಮಾದಾವಿರ್ಭೂತೋ ವಿಭಾವಸುಃ ।
ಅದೃಶ್ಯತ ತದಾದಿತ್ಯಸ್ತಪ್ತತಾಮ್ರೋಪಮಃ ಪ್ರಭುಃ ॥ ೨೨ ॥

ತತಸ್ತಾಂ ಪ್ರಣತಾಂ ದೇವೀಂ ತಸ್ಯಾಸಂದರ್ಶನೇ ದ್ವಿಜಾಃ ।
ಪ್ರಾಹ ಭಾಸ್ವಾನ್ವೃಣುಷ್ವೈಕಂ ವರಂ ಮತ್ತೋ ಯಮಿಚ್ಛಸಿ ॥ ೨೩ ॥

ಪ್ರಣತಾ ಶಿರಸಾ ಸಾ ತು ಜಾನುಪೀಡಿತಮೇದಿನೀ ।
ಪ್ರತ್ಯುವಾಚ ವಿವಸ್ವಂತಂ ವರದಂ ಸಮುಪಸ್ಥಿತಂ ॥ ೨೪ ॥

---

೨೦. ಅಂತಹ ತೇಜೋಮಯನಾದ ಸೂರ್ಯನು ಎದುರಿಗೆ ನಿಂತಿರುವುದನ್ನು ನೋಡಿ ಅದಿತಿದೇವಿಯು ಆಶ್ಚರ್ಯಗೊಂಡು,

೨೧. "ಜಗತ್ತಿಗೆ ಕಾರಣನಾದ ಓ ದಿನಮಣಿಯೇ ! ಪ್ರಸನ್ನನಾಗು. ಉಗ್ರ ತೇಜಸ್ಸುಳ್ಳ ನಿನ್ನನ್ನು ನೋಡಲಾರೆನು. ನಿನ್ನ ಸೌಮ್ಯರೂಪವನ್ನು ನೋಡುವಂತೆ ನನ್ನನ್ನು ಅನುಗ್ರಹಿಸು. ಭಕ್ತರಲ್ಲಿ ವಾತ್ಸಲ್ಯವುಳ್ಳ ಓ ಸ್ವಾಮಿಯೇ ! ನನ್ನ ಮಕ್ಕಳನ್ನು ಸಲಹು" ಎಂದಳು.

೨೨. ಆಮೇಲೆ ಆ ತೇಜೋರಾಶಿಯಿಂದ ಆವಿರ್ಭವಿಸಿ ಕಾಸಿದ ತಾಮ್ರದಂತೆ ವರ್ಣವುಳ್ಳ ಸೂರ್ಯನು ಅದಿತಿಯ ಎದುರಿಗೆ ಕಾಣಿಸಿದನು.

೨೩. ಆಮೇಲೆ ಸೂರ್ಯನನ್ನು ನೋಡಿ ಅಡ್ಡಬಿದ್ದು ನಮಸ್ಕರಿಸುತ್ತಿರುವ ಅದಿತಿಯನ್ನು ಕುರಿತು ಆ ಸೂರ್ಯನು: ನಿನಗೆ ಬೇಕಾದ ವರವನ್ನು ಕೇಳು ಎಂದು ಹೇಳಿದನು.

೨೪. ವರದನಾದ ಸೂರ್ಯನ ಆ ಮಾತನ್ನು ಕೇಳಿ ಅದಿತಿದೇವಿಯು ತಿರುಗಿ ಮಂಡಿಯೂರಿ ಶಿರಸ್ಸಿನಿಂದ ನಮಸ್ಕರಿಸಿ,

shrinath.udupa@gmail.com

॥ ಅದಿತಿರುವಾಚ ॥

ದೇವ ಪ್ರಸೀದ ಪುತ್ರಾಣಾಂ ಹೃತಂ ತ್ರಿಭುವನಂ ಮಮ ।
ಯಜ್ಞಭಾಗಾಶ್ಚ ದೈತೇಯೈರ್ದಾನವೈಶ್ಚ ಬಲಾಧಿಕೈಃ ॥ ೨೫ ॥

ತನ್ನಿಮಿತ್ತಂ ಪ್ರಸಾದಂ ತ್ವಂ ಕುರುಷ್ವ ಮಮ ಗೋಪತೇ ।
ಅಂಶೇನ ತೇಷಾಂ ಭ್ರಾತೃತ್ವಂ ಗತ್ವಾ ತಾನ್ನಾಶಯೋ ರಿಪೂನ್ ॥ ೨೬ ॥

ಯಥಾ ಮೇ ತನಯಾ ಭೂಯೋ ಯಜ್ಞಭಾಗಭುಜಃ ಪ್ರಭೋ ।
ಭವೇಯುರಧಿಪಾಶ್ಚೈವ ತ್ರೈಲೋಕ್ಯಸ್ಯ ದಿವಾಕರ ॥ ೨೭ ॥

ತಥಾನುಕಲ್ಪಂ ಪುತ್ರಾಣಾಂ ಸುಪ್ರಸನ್ನೋ ರವೇ ಮಮ ।
ಕುರು ಪ್ರಸನ್ನಾರ್ತಿಹರ ಕಾರ್ಯಂ ಕರ್ತಾ ತ್ವಮುಚ್ಯತೇ ॥ ೨೮ ॥

॥ ಬ್ರಹ್ಮೋವಾಚ ॥

ತತಸ್ತಾಮಾಹ ಭಗವಾನ್ ಭಾಸ್ಕರೋ ವಾರಿತಸ್ಕರಃ ।
ಪ್ರಣತಾಮದಿತಿಂ ವಿಪ್ರಾಃ ಪ್ರಸಾದಸುಮುಖೋ ವಿಭುಃ ॥ ೨೯ ॥

---

೨೫. ಓ ಸೂರ್ಯದೇವ ! ಅನುಗ್ರಹಿಸು. ನನ್ನ ಮಕ್ಕಳಾದ ದೇವತೆಗಳನ್ನು ಬಲಿಷ್ಠರಾದ ದೈತ್ಯರು ಮತ್ತು ದಾನವರು ರಾಜ್ಯವನ್ನಪಹರಿಸಿ ಓಡಿಸಿರುವರು. ಆ ದೇವತೆಗಳಿಗೀಗ ಹವಿಸ್ಸಿನ ಭಾಗವೂ ಸಿಕ್ಕುತ್ತಿಲ್ಲ.

೨೬. ಆ ದೇವತೆಗಳಿಗಾಗಿ ಅನುಗ್ರಹಮಾಡು. ಓ ಸಹಸ್ರಕಿರಣ ! ನೀನು ಆ ದೇವತೆಗಳ ಸಹೋದರನಾಗಿ ಜನಿಸಿ ಅವರ ಶತ್ರುಗಳನ್ನು ನಾಶಮಾಡು.

೨೭–೨೮. ಓ ಭಗವಂತ ! ತಿರುಗಿ ನನ್ನ ಮಕ್ಕಳು ಹವಿಸ್ಸಿನ ಭಾಗಗಳನ್ನು ಪಡೆಯುವಂತೆಯೂ, ತ್ರೈಲೋಕ್ಯರಾಜ್ಯವನ್ನು ಪಡೆಯುವಂತೆಯೂ ಅನುಗ್ರಹಿಸು. ಭಕ್ತರನ್ನು ಸಲಹುವ ನೀನು ಈ ಕಾರ್ಯವನ್ನು ನನಗಾಗಿ ಮಾಡು. ಎಲ್ಲಕ್ಕೂ ನೀನೇ ಕರ್ತನೆಂದು ತಿಳಿದವರು ಹೇಳುವರು ಎಂದಳು.

೨೯. ಬ್ರಹ್ಮನು ಹೇಳಿದನು.—ಎಲೈ ಮುನಿಗಳೇ ! ಆಮೇಲೆ ಭಗವಾನ್ ಸೂರ್ಯನು ಪ್ರಸನ್ನನಾಗಿ ಶರಣಾಗತಳಾದ ಆ ಅದಿತಿಯನ್ನು ಕುರಿತು,

shrinath.udupa@gmail.com

॥ ಸೂರ್ಯ ಉವಾಚ ॥

ಸಹಸ್ರಾಂಶೇನ ತೇ ಗರ್ಭಃ ಸಂಭೂಯಾಹಮಶೇಷತಃ ।
ತ್ವತ್ಪುತ್ರಶತ್ರೂನ್ ದಕ್ಷೋಽಹಂ ನಾಶಯಾಮ್ಯಾಶು ನಿರ್ವೃತಃ ॥ ೩೦ ॥

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾ ಭಗವಾನ್ ಭಾಸ್ವಾನಂತರ್ಧಾನಮುಪಾಗತಃ ।
ನಿವೃತ್ತಾ ಸಾಪಿ ತಪಸಃ ಸಂಪ್ರಾಪ್ತಾಖಿಲವಾಂಛಿತಾ ॥ ೩೧ ॥

ತತೋ ರಶ್ಮಿಸಹಸ್ರಾತ್ತು ಸುಷುಮ್ನಾಖ್ಯೋ ರವೇಃ ಕರಃ ।
ತತಃ ಸಂವತ್ಸರಸ್ಯಾಂತೇ ತತ್ಕಾಮಪೂರಣಾಯ ಸಃ ॥ ೩೨ ॥

ನಿವಾಸಂ ಸವಿತಾ ಚಕ್ರೇ ದೇವಮಾತುಸ್ತದೋದರೇ ।
ಕೃಚ್ಛ್ರಚಾಂದ್ರಾಯಣಾದೀಂಶ್ಚ ಸಾ ಚಕ್ರೇ ಸುಸಮಾಹಿತಾ ॥ ೩೩ ॥

ಶುಚಿನಾ ಧಾರಯಾಮ್ಯೇನಂ ದಿವ್ಯಂ ಗರ್ಭಮಿತಿ ದ್ವಿಜಾಃ ।
ತತಸ್ತಾಂ ಕಶ್ಯಪಃ ಪ್ರಾಹ ಕಿಂಚಿತ್ಕೋಪಪ್ಲುತಾಕ್ಷರಂ ॥ ೩೪ ॥

---

೩೦. ಎಲೌ ದೇವಿ ! ಸಾವಿರ ಅಂಶಗಳಿಂದಲೂ ನಾನೇ ನಿನ್ನ ಪುತ್ರನಾಗಿ ಜನಿಸಿ ನನ್ನ ಸಾಮರ್ಥ್ಯದಿಂದ ನಿನ್ನ ಮಕ್ಕಳ ಶತ್ರುಗಳನ್ನೆಲ್ಲರನ್ನೂ ಜಾಗ್ರತೆಯಾಗಿ ನಾಶ ಮಾಡುವೆನು.

೩೧. ಎಂದು ಹೇಳಿ ಭಗವಂತನಾದ ಭಾಸ್ಕರನು ಅಂತರ್ಧಾನಹೊಂದಿದನು. ಅದಿತಿದೇವಿಯೂ ಸಹ ಇಷ್ಟಾರ್ಥವನ್ನು ಪಡೆದು ತಪಸ್ಸನ್ನು ಮುಗಿಸಿ ತನ್ನ ಮನೆಗೆ ತೆರಳಿದಳು.

೩೨–೩೩. ಆಮೇಲೆ ಸೂರ್ಯನು ಒಂದು ವರುಷದಮೇಲೆ ಅದಿತಿದೇವಿಯ ಮನೋರಥವನ್ನು ಪೂರೈಸಲು ಸುಷುಮ್ನಾ ಎಂಬ ತನ್ನ ಮುಖ್ಯ ಕಿರಣದ ಮೂಲಕ ಆ ದೇವಮಾತೆಯ ಉದರದಲ್ಲಿ ಪ್ರವೇಶಿಸಿದನು. ಅದಿತಿಯು ಗರ್ಭವತಿಯಾದಳು.

೩೪. ಆ ಅದಿತಿಯು ತುಂಬಾ ಪರಿಶುದ್ಧಳಾಗಿದ್ದು ಈ ದಿವ್ಯವಾದ ಗರ್ಭವನ್ನು ಧರಿಸುವೆನೆಂದು ನಿಯಮದಿಂದ ಕೃಚ್ಛ್ರ, ಚಾಂದ್ರಾಯಣ ಮೊದಲಾದ ಕಠಿಣ ವ್ರತಗಳನ್ನು ಮಾಡಿದಳು. ಆಗ ಅದಿತಿಯನ್ನು ಕುರಿತು ಕಶ್ಯಪನು ಸ್ವಲ್ಪ ಕೋಪದಿಂದ

shrinath.udupa@gmail.com

॥ ಕಶ್ಯಪ ಉವಾಚ ॥

ಕಿಂ ಮಾರಯಸಿ ಗರ್ಭಾಂಡಮಿತಿ ನಿತ್ಯೋಪವಾಸಿನೀ ।

॥ ಬ್ರಹ್ಮೋವಾಚ ॥

ಸಾ ಚ ತಂ ಪ್ರಾಹ ಗರ್ಭಾಂಡಮೇತತ್ಪಶ್ಯೇತಿ ಕೋಪನಾ ।
ನ ಮಾರಿತಂ ವಿಪಕ್ಷಾಣಾಂ ಮೃತ್ಯುರೇವ ಭವಿಷ್ಯತಿ ॥ ೩೫ ॥

ಇತ್ಯುಕ್ತ್ವಾ ತಂ ತದಾ ಗರ್ಭಮುತ್ಸಸರ್ಜ ಸುರಾರಣಿಃ ।
ಜಾಜ್ವಲ್ಯಮಾನಂ ತೇಜೋಭಿಃ ಪತ್ಯುರ್ವಚನಕೋಪಿತಾ ॥ ೩೬ ॥

ತಂ ದೃಷ್ಟ್ವಾ ಕಶ್ಯಪೋ ಗರ್ಭಮುದ್ಯದ್ಭಾಸ್ಕರವರ್ಚಸಂ ।
ತುಷ್ಟಾವ ಪ್ರಣತೋ ಭೂತ್ವಾ ವಾಗ್ಭಿರಾದ್ಯಾಭಿರಾದರಾತ್ ॥ ೩೭ ॥

ಸಂಸ್ತೂಯಮಾನಃ ಸ ತದಾ ಗರ್ಭಾಂಡಾತ್ಪ್ರಕಟೋಽಭವತ್ ।
ಪದ್ಮಪತ್ರಸವರ್ಣಾಭಸ್ತೇಜಸಾ ವ್ಯಾಪ್ತದಿಙ್ಮುಖಃ ॥ ೩೮ ॥

ಎಲೌ ದೇವಿ ! ನಿತ್ಯವೂ ಹೀಗೆ ಉಪವಾಸಮಾಡಿ ಈ ಗರ್ಭವನ್ನು ಹಾಳುಮಾಡ ಬೇಕೆಂದಿರುವೆಯೇನು ? ಎನ್ನಲು

೩೫. ಆ ಅದಿತಿಯೂ ಸಹ ಕೋಪದಿಂದಲೇ—ಓ ಸ್ವಾಮಿ ! ನೋಡು, ಗರ್ಭವನ್ನು ನಾನು ಹಾಳುಮಾಡಿಲ್ಲ. ಇದು ದೇವವೈರಿಗಳಿಗೆ ಮೃತ್ಯುವೇ ಆಗು ವುದು, ಎಂದು ಹೇಳಿದಳು.

೩೬. ಹೀಗೆ ಹೇಳಿ ಪತಿಯ ಮಾತಿನಿಂದ ಕೋಪಗೊಂಡ ಆ ದೇವ ಮಾತೆಯು ತೇಜಸ್ಸಿನಿಂದ ಬೆಳಗುತ್ತಿರುವಂತಹ ಆ ಗರ್ಭವನ್ನು ವಿಸೃಜಿಸಿದಳು.

೩೭. ಉದಯಿಸುತ್ತಿರುವ ಸೂರ್ಯನಂತೆ ತೇಜಸ್ವಿಯಾದ ಆ ಗರ್ಭವನ್ನು ನೋಡಿ ಕಶ್ಯಪನು ನಮಸ್ಕರಿಸಿ ವೇದಸೂಕ್ತಗಳಿಂದ ಸ್ತುತಿಸಿದನು.

೩೮. ಹಾಗೆ ಕಶ್ಯಪನು ಸ್ತುತಿಸುತ್ತಿರಲು ಆ ಗರ್ಭಾಂಡದಿಂದ ಓರ್ವ ಪುರುಷನು ಆವಿರ್ಭವಿಸಿದನು. ಅವನು ಕಮಲದಳದಂತೆ ವರ್ಣವುಳ್ಳವನಾಗಿದ್ದು ತೇಜಸ್ಸಿನಿಂದ ದಿಕ್ಕುಗಳೆಲ್ಲವನ್ನೂ ಬೆಳಗುತ್ತಿದ್ದನು.

shrinath.udupa@gmail.com

ಅಥಾಂತರಿಕ್ಷಾದಾಭಾಷ್ಯ ಕಶ್ಯಪಂ ಮುನಿಸತ್ತಮಂ ।
ಸತೋಽಯಮೋಘಗಂಭೀರಾ ವಾಗುವಾಚಾಶರೀರಿಣೀ ॥ ೩೯ ॥

॥ ವಾಗುವಾಚ ॥

ಮಾರಿತಮಿತಿ ಯತ್ಪ್ರೋಕ್ತಮೇತದಂಡಂ ತ್ವಯಾದಿತೇಃ ।
ತಸ್ಮಾನ್ಮುನೇ ಸುತಸ್ತೇಽಯಂ ಮಾರ್ತಾಂಡಾಖ್ಯೋ ಭವಿಷ್ಯತಿ ॥ ೪೦ ॥

ಹನಿಷ್ಯತ್ಯಸುರಾಂಶ್ಚಾಯಂ ಯಜ್ಞಭಾಗಹರಾನರೀನ್ ।
ದೇವಾ ನಿಶಮ್ಯೇತಿ ವಚೋ ಗಗನಾತ್ಸಮುಪಾಗತಂ ॥ ೪೧ ॥

ಪ್ರಹರ್ಷಮತುಲಂ ಯಾತಾ ದಾನವಾಶ್ಚ ಹತೌಜಸಃ ।
ತತೋ ಯುದ್ಧಾಯ ದೈತೇಯಾನಾಜುಹಾವ ಶತಕ್ರತುಃ ॥ ೪೨ ॥

---

೩೯. ಆಗ ಆಕಾಶದ ಮಳೆಗಾಲದ ಮೇಘಧ್ವನಿಯಂತೆ ಗಂಭೀರವಾದ ಅಶರೀರವಾಣಿಯು ಕಶ್ಯಪನಿಗೆ ಹೀಗೆ ಕೇಳಿಸಿತು.

೪೦. ಆಕಾಶವಾಣಿಯು ಹೇಳಿತು.—ಓ ಮುನಿ ! ನೀನು ಅದಿತಿಗೆ ಈ ಅಂಡವನ್ನು ಮೃತವಾಗುವಂತೆ ಮಾಡುವೆ (ಗರ್ಭವನ್ನು ಉಪವಾಸದಿಂದ ಹಾಳುಮಾಡುವೆ) ಎಂದು ಹೇಳಿದುದರಿಂದ ಆ ಗರ್ಭದಿಂದ ಜನಿಸಿದ ಈ ನಿನ್ನ ಮಗನಿಗೆ ಮಾರ್ತಂಡನೆಂದು ಹೆಸರಾಗುವುದು.

೪೧. ಮತ್ತು ಈ ಕುಮಾರನು ಯಜ್ಞದ ಹವಿರ್ಭಾಗವನ್ನಪಹರಿಸುವ ದೇವವೈರಿಗಳಾದ ಅಸುರರನ್ನು ನಾಶಮಾಡುವನು ಎಂದು ಅಶರೀರವಾಣಿಯು ಕೇಳಿಸಿತು. ದೇವತೆಗಳು ಆ ವಾಣಿಯನ್ನು ಕೇಳಿ ತುಂಬಾ ಹರ್ಷಗೊಂಡರು. ದಾನವರಿಗೆ ಶಕ್ತಿಯುಡುಗಿತು.

೪೨. ಆಮೇಲೆ ದೇವೇಂದ್ರನು ಉತ್ಸಾಹದಿಂದ ದೇವತೆಗಳೊಡನೆ ಕೂಡಿ ರಾಕ್ಷಸರನ್ನು ಯುದ್ಧಕ್ಕೆ ಕರೆದನು. ದಾನವರೂ ದೇವತೆಗಳಿಗೆದುರಾದರು.

shrinath.udupa@gmail.com

ಸಹ ದೇವೈರ್ಮೃಧಾ ಯುಕ್ತ್ವೋ ದಾನವಾಶ್ಚ ತಮಭ್ಯಯುಃ ।
ತೇಷಾಂ ಯುದ್ಧಮಭೂದ್ಘೋರಂ ದೇವಾನಾಮಸುರೈಃ ಸಹ ॥ ೪೩ ॥

ಶಸ್ತ್ರಾಸ್ತ್ರವೃಷ್ಟಿಸಂದೀಪ್ತಸಮಸ್ತಭುವನಾಂತರಂ ।
ತಸ್ಮಿನ್ ಯುದ್ಧೇ ಭಗವತಾ ಮಾರ್ತಂಡೇನ ನಿರೀಕ್ಷಿತಾಃ ॥ ೪೪ ॥

ತೇಜಸಾ ದಹ್ಯಮಾನಾಸ್ತೇ ಭಸ್ಮೀಭೂತಾ ಮಹಾಸುರಾಃ ।
ತತಃ ಪ್ರಹರ್ಷಮತುಲಂ ಪ್ರಾಪ್ತಾಃ ಸರ್ವೇ ದಿವೌಕಸಃ ॥ ೪೫ ॥

ತುಷ್ಟುವುಸ್ತೇಜಸಾಂ ಯೋನಿಂ ಮಾರ್ತಂಡಮದಿತಿಂ ತಥಾ ।
ಸ್ವಾಧಿಕಾರಾಂಸ್ತತಃ ಪ್ರಾಪ್ತಾ ಯಜ್ಞಭಾಗಾಂಶ್ಚ ಪೂರ್ವವತ್ ॥ ೪೬ ॥

ಭಗವಾನಪಿ ಮಾರ್ತಂಡಃ ಸ್ವಾಧಿಕಾರಮಥಾಕರೋತ್ ।
ಕದಂಬಪುಷ್ಪವದ್ಭಾಸ್ವಾನಧಶ್ಚೋರ್ಧ್ವಂ ಚ ರಶ್ಮಿಭಿಃ ।
ವೃತೋಽಗ್ನಿಪಿಂಡಸದೃಶೋ ದಧ್ರೇ ನಾತಿಸ್ಫುಟಂ ವಪುಃ ॥ ೪೭ ॥

೪೩–೪೪. ಆಗ ದೇವತೆಗಳಿಗೂ ದಾನವರಿಗೂ ಘೋರಯುದ್ಧವು ಜರುಗಿ ದೇವಾಸುರರ ಶಸ್ತ್ರ ಮತ್ತು ಅಸ್ತ್ರಗಳಿಂದ ಜಗತ್ತೆಲ್ಲವೂ ಉರಿಯತೊಡಗಿತು. ಆ ಯುದ್ಧದಲ್ಲಿ ಭಗವಂತನಾದ ಮಾರ್ತಂಡನ ಕ್ರೂರದೃಷ್ಟಿಯಿಂದಲೇ ಮಹಾಮಹಾ ಅಸುರರೂ ಸಹ ಅವನ ತೇಜಸ್ಸಿನಿಂದ ಸುಡಲ್ಪಟ್ಟು ಭಸ್ಮವಾಗಿ ಹೋದರು.

೪೫–೪೬. ಆಗ ದೇವತೆಗಳೆಲ್ಲರೂ ಸಂತಸಗೊಂಡು ತೇಜೋನಿಧಿಯಾದ ಸೂರ್ಯನನ್ನೂ ಅದಿತಿದೇವಿಯನ್ನೂ ಸ್ತುತಿಸಿದರು. ಆಮೇಲೆ ದೇವತೆಗಳು ತಮ್ಮ ತಮ್ಮ ಅಧಿಕಾರವನ್ನೂ ಯಜ್ಞದಲ್ಲಿ ಹವಿಸ್ಸುಗಳನ್ನೂ ಮೊದಲಿನಂತೆ ಪಡೆದರು.

೪೭. ಭಗವಾನ್ ಮಾರ್ತಂಡನೂ ಸಹ ತನ್ನಧಿಕಾರವನ್ನು ನಡೆಯಿಸತೊಡಗಿದನು. ಕದಂಬ ಪುಷ್ಪದಂತೆಯೂ, ಅಗ್ನಿಪಿಂಡದಂತೆಯೂ ಸೂರ್ಯನು ಮೇಲೂ ಕೆಳಗೂ ಕಿರಣಗಳುಳ್ಳವನಾಗಿ ಹೆಚ್ಚು ಸ್ಫುಟವಾಗಿ ಕಾಣಿಸದಿರುವಂತಹ ರೂಪವನ್ನು ಧರಿಸಿದನು.

shrinath.udupa@gmail.com

॥ ಮುನಯ ಊಚುಃ ॥

ಕಥಂ ಕಾಂತತರಂ ಪಶ್ಚಾದ್ರೂಪಂ ಸಂಲಬ್ಧವಾನ್ ರವಿಃ ।
ಕದಂಬಗೋಲಕಾಕಾರಂ ತನ್ನೋ ಬ್ರೂಹಿ ಜಗತ್ಪತೇ ॥ ೪೮ ॥

॥ ಬ್ರಹ್ಮೋವಾಚ ॥

ತ್ವಷ್ಟಾ ತಸ್ಮೈ ದದೌ ಕನ್ಯಾಂ ಸಂಜ್ಞಾಂ ನಾಮ ವಿವಸ್ವತೇ ।
ಪ್ರಸಾದ್ಯ ಪ್ರಣತೋ ಭೂತ್ವಾ ವಿಶ್ವಕರ್ಮಾ ಪ್ರಜಾಪತಿಃ ॥ ೪೯ ॥

ತ್ರೀಣ್ಯಪತ್ಯಾನ್ಯಸೌ ತಸ್ಯಾಂ ಜನಯಾಮಾಸ ಗೋಪತಿಃ ।
ದ್ವೌ ಪುತ್ರೌ ಸುಮಹಾಭಾಗೌ ಕನ್ಯಾಂ ಚ ಯಮುನಾಂ ತಥಾ ॥ ೫೦ ॥

ಯತ್ತೇಜೋಽಭ್ಯಧಿಕಂ ತಸ್ಯ ಮಾರ್ತಂಡಸ್ಯ ವಿವಸ್ವತಃ ।
ತೇನಾತಿತಾಪಯಾಮಾಸ ತ್ರೀನ್ ಲೋಕಾನ್ಸಚರಾಚರಾನ್ ॥ ೫೧ ॥

ತದ್ರೂಪಂ ಗೋಲಕಾಕಾರಂ ದೃಷ್ಟ್ವಾ ಸಂಜ್ಞಾ ವಿವಸ್ವತಃ ।
ಅಸಹಂತೀ ಮಹತ್ತೇಜಃ ಸ್ವಾಂ ಛಾಯಾಂ ವಾಕ್ಯಮಬ್ರವೀತ್ ॥ ೫೨ ॥

---

೪೮. ಮುನಿಗಳು ಕೇಳಿದರು.—ಓ ಬ್ರಹ್ಮದೇವ ! ಮಹಾತೇಜಸ್ವಿಯಾದ ಸೂರ್ಯನು ಕದಂಬ ಪುಷ್ಪದಂತೆ ಸುಂದರವಾದ ರೂಪವನ್ನು ಹೇಗೆ ಪಡೆದನು ? ಎನ್ನಲು,

೪೯. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ ! ವಿಶ್ವಕರ್ಮಪ್ರಜಾಪತಿಯು ಸೂರ್ಯನನ್ನು ನಮಸ್ಕರಿಸಿ ಪ್ರಸನ್ನಗೊಳಿಸಿ ಅವನಿಗೆ ತನ್ನ ಮಗಳಾದ ಸಂಜ್ಞಾದೇವಿಯನ್ನು ಮದುವೆಮಾಡಿಕೊಟ್ಟನಷ್ಟೆ.

೫೦. ಆ ಸಂಜ್ಞಾದೇವಿಯಲ್ಲಿ ಸೂರ್ಯನು ಮೂರುಮಂದಿ ಮಕ್ಕಳನ್ನು ಪಡೆದನು. ಮಹಾಮಹಿಮರಾದ ಗಂಡುಮಕ್ಕಳೀರ್ವರು; ಯಮುನೆಯೆಂಬ ಕನ್ಯೆಯೋರ್ವಳು.

೫೧. ಸೂರ್ಯನು ತನ್ನ ಉಗ್ರತೇಜಸ್ಸಿನಿಂದ ಮೂರುಲೋಕಗಳನ್ನೂ ಬೇಗೆಗೊಳಿಸಿದನು.

೫೨. ಮಂಡಲರೂಪವಾದ ಸೂರ್ಯನ ಆ ಉಗ್ರತೇಜಸ್ಸನ್ನು ನೋಡಿ ಸಹಿಸಲಾರದೇ ಸಂಜ್ಞಾದೇವಿಯು ತನ್ನ ಛಾಯೆ (ನೆರಳು) ಯನ್ನು ಕುರಿತು,

shrinath.udupa@gmail.com

॥ ಸಂಜ್ಞೋವಾಚ ॥

ಅಹಂ ಯಾಸ್ಯಾಮಿ ಭದ್ರಂ ತೇ ಸ್ವಮೇವ ಭವನಂ ಪಿತುಃ ।
ನಿರ್ವಿಕಾರಂ ತ್ವಯಾತ್ರೈವ ಸ್ಥೇಯಂ ಮಚ್ಛಾಸನಾಚ್ಛುಭೇ ॥ ೫೩ ॥

ಇಮೌ ಚ ಬಾಲಕೌ ಮಹ್ಯಂ ಕನ್ಯಾ ಚ ವರವರ್ಣಿನೀ ।
ಸಂಭಾವ್ಯಾ ನೈವ ಚಾಖ್ಯೇಯಮಿದಂ ಭಗವತೇ ತ್ವಯಾ ॥ ೫೪ ॥

॥ ಛಾಯೋವಾಚ ॥

ಆಕಚಗ್ರಹಣಾದ್ದೇವಿ ಆಶಾಪಾನ್ನೈವ ಕರ್ಹಿಚಿತ್ ।
ಆಖ್ಯಾಸ್ಯಾಮಿ ಮತಂ ತುಭ್ಯಂ ಗಮ್ಯತಾಂ ಯತ್ರ ವಾಂಛಿತಂ ॥ ೫೫ ॥

ಇತ್ಯುಕ್ತಾ ವ್ರೀಡಿತಾ ಸಂಜ್ಞಾ ಜಗಾಮ ಪಿತೃಮಂದಿರಂ ।
ವತ್ಸರಾಣಾಂ ಸಹಸ್ರಂ ತು ವಸಮಾನಾ ಪಿತುರ್ಗೃಹೇ ॥ ೫೬ ॥

---

೫೩. ಎಲೌ ಛಾಯಾದೇವಿ ! ನಾನು ನನ್ನ ತಂದೆಯಮನೆಗೆ ತೆರಳುವೆನು. ನಿನಗೆ ಒಳ್ಳೆಯದಾಗಲಿ. ಇಲ್ಲಿ ನೀನು ನನ್ನಪ್ಪಣೆಯಂತೆ ಯಾವ ಭಯವೂ ಇಲ್ಲದೇ ಇರು.

೫೪. ಈ ನನ್ನ ಕುಮಾರರೀರ್ವರನ್ನೂ, ಮುದ್ದುಕುವರಿಯನ್ನೂ ಪ್ರೀತಿಯಿಂದ ಸಲಹಬೇಕು. ಈ ರಹಸ್ಯವನ್ನು ಭಗವಂತನಾದ ಸೂರ್ಯನಿಗೆ ಹೇಳಬಾರದು ಎನ್ನಲು,

೫೫. ಛಾಯಾದೇವಿಯು —ಎಲೌ ದೇವಿ ! ಕಚಗ್ರಹಣ [ಜುಟ್ಟುಹಿಡಿದು ನಿರ್ಬಂಧಿಸುವುದು] ದ ಪ್ರಸಂಗವಾಗಲಿ, ಶಾಪಕೊಡುವ ಪ್ರಸಂಗವಾಗಲಿ ಬರುವ ವರೆಗೂ ನಿನ್ನ ರಹಸ್ಯವನ್ನು ಸೂರ್ಯನಿಗೆ ಹೇಳಲಾರೆನು. ನೀನು ಬೇಕಾದೆಡೆಗೆ ಹೋಗಬಹುದು.

೫೬. ಎಂದು ಹೇಳಲು ಸಂಜ್ಞಾದೇವಿಯು ನಾಚಿಕೆಗೊಂಡವಳಾಗಿ ತನ್ನ ತಂದೆಯ ಮನೆಗೆ ತೆರಳಿದಳು. ಅಲ್ಲಿ ಸಾವಿರವರ್ಷಗಳ ವರೆಗೆ ಇದ್ದಳು.

shrinath.udupa@gmail.com

ಭರ್ತುಃ ಸಮೀಪಂ ಯಾಹೀತಿ ಪಿತ್ರೋಕ್ತಾ ಸಾ ಪುನಃ ಪುನಃ ।
ಆಗಚ್ಛದ್ವಡವಾ ಭೂತ್ವಾ ಕುರೂನಥೋತ್ತರಾಂಸ್ತತಃ ॥ ೫೭ ॥

ತತ್ರ ತೇಪೇ ತಪಃ ಸಾಧ್ವೀ ನಿರಾಹಾರಾ ದ್ವಿಜೋತ್ತಮಾಃ ।
ಪಿತುಃ ಸಮೀಪಂ ಯಾತಾಯಾಂ ಸಂಜ್ಞಾಯಾಂ ವಾಕ್ಯತತ್ಪರಾ ॥ ೫೮ ॥

ತದ್ರೂಪಧಾರಿಣೀ ಛಾಯಾ ಭಾಸ್ಕರಂ ಸಮುಪಸ್ಥಿತಾ ।
ತಸ್ಯಾಂ ಚ ಭಗವಾನ್ ಸೂರ್ಯಃ ಸಂಜ್ಞೇಯಮಿತಿ ಚಿಂತಯನ್ ॥ ೫೯ ॥

ತಥೈವ ಜನಯಾಮಾಸ ದ್ವೌ ಪುತ್ರೌ ಕನ್ಯಕಾಂ ತಥಾ ।
ಸಂಜ್ಞಾ ತು ಪಾರ್ಥಿವೀ ತೇಷಾಮಾತ್ಮಜಾನಾಂ ತಥಾಕರೋತ್ ॥ ೬೦ ॥

ಸ್ನೇಹಂ ನ ಪೂರ್ವಜಾತಾನಾಂ ತಥಾ ಕೃತವತೀ ತು ಸಾ ।
ಮನುಸ್ತತ್ಕ್ಷಾಂತವಾಂಸ್ತಸ್ಯಾ ಯಮಸ್ತಸ್ಯಾ ನ ಚಕ್ಷಮೇ ॥ ೬೧ ॥

---

೫೭. ಆಮೇಲೆ ತಂದೆಯು ನಿನ್ನ ಗಂಡನಲ್ಲಿಗೇ ಹೋಗು ಇಲ್ಲಿಗೇಕೆ ಬಂದೆ ? ಎನ್ನಲು, ಆ ಸಂಜ್ಞೆಯು ಮನೆಯನ್ನು ಬಿಟ್ಟು ವಡವಾರೂಪ [ಹೆಣ್ಣುಕುದುರೆಯ ರೂಪ] ವನ್ನು ಧರಿಸಿ ಉತ್ತರ ಕುರುದೇಶಗಳಿಗೆ ತೆರಳಿದಳು.

೫೮. ಅಲ್ಲಿ ಯಾವ ಆಹಾರವನ್ನೂ ಸೇವಿಸದೆ ಬಹುಕಾಲದವರೆಗೆ ಪತಿವ್ರತೆಯಾದ ಆ ಸಂಜ್ಞೆಯು ನಿಷ್ಠೆಯಿಂದ ತಪಸ್ಸನ್ನಾಚರಿಸಿದಳು.

೫೯. ತಂದೆಯ ಮನೆಗೆ ಸಂಜ್ಞೆಯು ಹೊರಟುಹೋದಮೇಲೆ ಇತ್ತಲಾಗಿ ಛಾಯೆಯು ಆ ಸಂಜ್ಞೆಯ ಅಪ್ಪಣೆಯಂತೆ ಅವಳ ರೂಪವನ್ನುಧರಿಸಿ ಸೂರ್ಯನನ್ನು ಸೇವಿಸುತ್ತಿದ್ದಳು.

೬೦. ಆ ಛಾಯೆಯನ್ನು ಸಂಜ್ಞಾದೇವಿಯೆಂದೇ ತಿಳಿದು ಸೂರ್ಯನು ಅವಳಲ್ಲಿ ತಿರುಗಿ ಗಂಡುಮಕ್ಕಳೀರ್ವರನ್ನೂ, ಕನ್ಯೆಯೋರ್ವಳನ್ನೂ ಪಡೆದನು.

೬೧. ಛಾಯೆಯ ರೂಪಳಾದ ಸಂಜ್ಞೆಯು ತನ್ನ ಸವತಿಯ ಮಕ್ಕಳಲ್ಲಿ ತನ್ನ ಮಕ್ಕಳಂತೆ ಪ್ರೀತಿಯನ್ನು ಇಟ್ಟಿರಲಿಲ್ಲ. ಮನುವು ಮಲತಾಯಿಯ ಕಿರುಕುಳವನ್ನು ಸಹಿಸಿಕೊಂಡಿದ್ದನು. ಆದರೆ ಯಮನು ಅವಳಹಿಂಸೆಯನ್ನು ತಡೆಯಲಾರದೆ ದುಃಖಿಸುತ್ತಿದ್ದನು.

shrinath.udupa@gmail.com

ಬಹುಧಾ ಪೀಡ್ಯಮಾನಸ್ತು ಪಿತುಃ ಪತ್ನ್ಯಾ ಸುದುಃಖಿತಃ ।
ಸ ವೈ ಕೋಪಾಚ್ಚ ಬಾಲ್ಯಾಚ್ಚ ಭಾವಿನೋಽರ್ಥಸ್ಯ ವೈ ಬಲಾತ್ ।
ಪದಾ ಸಂತರ್ಜಯಾಮಾಸ ನ ತು ದೇಹೇ ನ್ಯಪಾತಯತ್ ॥ ೬೨ ॥

॥ ಛಾಯೋವಾಚ ॥

ಪದಾ ತರ್ಜಯಸೇ ಯಸ್ಮಾತ್ಪಿತುರ್ಭಾರ್ಯಾಂ ಗರೀಯಸೀಂ ।
ತಸ್ಮಾತ್ತವೈಷ ಚರಣಃ ಪತಿಷ್ಯತಿ ನ ಸಂಶಯಃ ॥ ೬೩ ॥

॥ ಬ್ರಹ್ಮೋವಾಚ ॥

ಯಮಸ್ತು ತೇನ ಶಾಪೇನ ಭೃಶಂ ಪೀಡಿತಮಾನಸಃ ।
ಮನುನಾ ಸಹ ಧರ್ಮಾತ್ಮಾ ಪಿತ್ರೇ ಸರ್ವಂ ನ್ಯವೇದಯತ್ ॥ ೬೪ ॥

॥ ಯಮ ಉವಾಚ ॥

ಸ್ನೇಹೇನ ತುಲ್ಯಮಸ್ಮಾಸು ಮಾತಾ ದೇವ ನ ವರ್ತತೇ ।
ವಿಸೃಜ್ಯ ಜ್ಯಾಯಸಂ ಭಕ್ತ್ಯಾ ಕನೀಯಾಂಸಂ ಬುಭೂಷತಿ ॥ ೬೫ ॥

---

೬೨. ಯಮನು ಕೋಪದಿಂದಲೂ, ಹುಡುಗತನದಿಂದಲೂ ಮುಂದಾಗಬೇಕಾದುದರ ವಿಧಿಬಲದಿಂದಲೂ ಕಾಲಿನಿಂದ ಒದೆಯುವೆನೆಂದು ಆ ಛಾಯೆಯನ್ನು ಗದರಿಸಿದನು. ಆದರೆ ಒದೆಯಲಿಲ್ಲ.

೬೩. ಆಗ ಛಾಯೆಯು ಕೋಪದಿಂದ ಎಲೈ ಮೂಢ ನಾನು ನಿನ್ನ ತಂದೆಯ ಹೆಂಡತಿಯು, ಆದುದರಿಂದ ನಿನ್ನ ತಾಯಿಯು, ನಿನಗೆ ಪೂಜ್ಯಳಾದ ನನ್ನನ್ನು ಕಾಲು ತೋರಿಸಿ ಗದರಿಸುವೆ. ಆದುದರಿಂದ ನಿನ್ನ ಕಾಲು ಬಿದ್ದುಹೋಗಲಿ ಎಂದಳು.

೬೪. ಬ್ರಹ್ಮನು ಹೇಳಿದನು—ಆ ಶಾಪದಿಂದ ಯಮನು ತುಂಬಾ ದುಃಖಿತನಾಗಿ ಮನುವಿನೊಡನೆ ತಂದೆಗೆ ನಡೆದ ಸಮಾಚಾರವನ್ನು ಹೇಳಿದನು.

೬೫. ಓ ದೇವ, ನಮ್ಮ ತಾಯಿಯು ನಮ್ಮಲ್ಲಿ ಸರಿಯಾದ ಪ್ರೀತಿಯುಳ್ಳವಳಾಗಿಲ್ಲ. ಹಿರಿಯವನನ್ನು ಬಿಟ್ಟು ಕಿರಿಯವರಲ್ಲಿ ಹೆಚ್ಚಾಗಿಪ್ರೀತಿಯನ್ನು ತೋರಿಸುತ್ತಿರುವಳು.

shrinath.udupa@gmail.com

ತಸ್ಯಾಂ ಮಯೋದ್ಯತಃ ಪಾದೋ ನ ತು ದೇಹೇ ನಿಪಾತಿತಃ ।
ಬಾಲ್ಯಾದ್ವಾ ಯದಿ ವಾ ಮೋಹಾತ್ತದ್ಭವಾನ್ಕ್ಷಂತುಮರ್ಹಸಿ ॥ ೧೬ ॥

ಶಪ್ತೋಽಹಂ ತಾತ ಕೋಪೇನ ಜನನ್ಯಾ ತನಯೋ ಯತಃ ।
ತತೋ ಮನ್ಯೇ ನ ಜನನೀಮಿಮಾಂ ವೈ ತಪತಾಂ ವರ ॥ ೧೭ ॥

ತವ ಪ್ರಸಾದಾಚ್ಚರಣೋ ಭಗವನ್ನ ಪತೇದ್ಯಥಾ ।
ಮಾತೃಶಾಪಾದಯಂ ಮೇಽದ್ಯ ತಥಾ ಚಿಂತಯ ಗೋಪತೇ ॥ ೧೮ ॥

॥ ರವಿರುವಾಚ ॥

ಅಸಂಶಯಂ ಮಹತ್ಪುತ್ರ ಭವಿಷ್ಯತ್ಯತ್ರ ಕಾರಣಂ ।
ಯೇನ ತ್ವಾಮಾವಿಶತ್ಕ್ರೋಧೋ ಧರ್ಮಜ್ಞಂ ಧರ್ಮಶೀಲಿನಂ ॥ ೧೯ ॥

ಸರ್ವೇಷಾಮೇವ ಶಾಪಾನಾಂ ಪ್ರತಿಘಾತೋ ಹಿ ವಿದ್ಯತೇ ।
ನ ತು ಮಾತ್ರಾಭಿಶಪ್ತಾನಾಂ ಕ್ವಚಿಚ್ಛಾಪನಿವರ್ತನಂ ॥ ೨೦ ॥

---

೧೬. ಆದಕ್ಕಾಗಿ ನಾನು ಅವಳನ್ನು ಕಾಲಿನಿಂದ ಒದೆಯುವೆನೆಂದು ಹೆದರಿಸಿದೆನು, ಆದರೆ ಒದೆಯಲಿಲ್ಲ. ಹುಡುಗತನದಿಂದಲೂ ಅಜ್ಞಾನದಿಂದಲೂ ಮಾಡಿದ ನನ್ನ ಈ ತಪ್ಪನ್ನು ಕ್ಷಮಿಸುವವನಾಗು.

೧೭. ಈ ಕಾರಣದಿಂದ ಮಾತೆಯು ಕೋಪಗೊಂಡು ಮಗನಾದ ನನ್ನನ್ನು ಶಪಿಸಿದಳು. ಇದರಿಂದ ಬಹುಶಃ ಇವಳು ನಮ್ಮ ತಾಯಿಯಲ್ಲವೆಂದು ತಿಳಿಯುವೆನು.

೧೮. ಹೇ ಭಗವನ್, ಮಾತೃಶಾಪದಿಂದ ಈ ನನ್ನ ಕಾಲು ಬಿದ್ದುಹೋಗದಂತೆ ಅನುಗ್ರಹಿಸು ಎನ್ನಲು,

೧೯. ಸೂರ್ಯನು ಹೇಳಿದನು—ಎಲೈ ಯಮನೆ, ಧರ್ಮವನ್ನು ಬಲ್ಲವನೂ, ಧರ್ಮನಿಷ್ಠನೂ ಆದ ನಿನಗೂ ಮಾತೆಯಮೇಲೆ ಕೋಪವುಂಟಾಗಿರಬೇಕಾದರೆ ಏನೋ ಮಹತ್ತಾದ ಕಾರಣವಿರಬೇಕು.

೨೦. ಶಾಪಗಳೆಲ್ಲಕ್ಕೂ ಪರಿಹಾರವಿರುವುದು. ಆದರೆ ಮಾತೃಶಾಪಕ್ಕೆ ಪರಿಹಾರವೇ ಇಲ್ಲ.

shrinath.udupa@gmail.com

ನ ಶಕ್ಯಮೇತನ್ಮಿಥ್ಯಾ ತು ಕರ್ತುಂ ಮಾತುರ್ವಚಸ್ತವ ।
ಕಿಂಚಿತ್ತೇಽಹಂ ವಿಧಾಸ್ಯಾಮಿ ಪುತ್ರಸ್ನೇಹಾದನುಗ್ರಹಂ ॥ ೨೧ ॥

ಕೃಮಯೋ ಮಾಂಸಮಾದಾಯ ಪ್ರಯಾಸ್ಯಂತಿ ಮಹೀತಲಂ ।
ಕೃತಂ ತಸ್ಯಾ ವಚಃ ಸತ್ಯಂ ತ್ವಂ ಚ ತ್ರಾತೋ ಭವಿಷ್ಯಸಿ ॥ ೨೨ ॥

॥ ಬ್ರಹ್ಮೋವಾಚ ॥

ಆದಿತ್ಯಸ್ತ್ವಬ್ರವೀಚ್ಛಾಯಾಂ ಕಿಮರ್ಥಂ ತನಯೇಷು ವೈ ।
ತುಲ್ಯೇಷ್ವಪ್ಯಧಿಕಃ ಸ್ನೇಹ ಏಕಂ ಪ್ರತಿ ಕೃತಸ್ತ್ವಯಾ ॥ ೨೩ ॥

ನೂನಂ ನೈಷಾಂ ತ್ವಂ ಜನನೀ ಸಂಜ್ಞಾ ಕಾಪಿ ತ್ವಮಾಗತಾ ।
ನಿರ್ಗುಣೇಷ್ವಪ್ಯಪತ್ಯೇಷು ಮಾತಾ ಶಾಪಂ ನ ದಾಸ್ಯತಿ ॥ ೨೪ ॥

ಸಾ ತತ್ಪರಿಹರಂತೀ ಚ ಶಾಪಾದ್ಭೀತಾ ತದಾ ರವೇಃ ।
ಕಥಯಾಮಾಸ ವೃತ್ತಾಂತಂ ಸ ಶ್ರುತ್ವಾ ಶ್ವಶುರಂ ಯಯೌ ॥ ೨೫ ॥

---

೨೧. ಈ ಕಾರಣದಿಂದ ನಿನ್ನ ತಾಯಿಯ ಶಾಪವನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಆದರೂ ಪುತ್ರಸ್ನೇಹದಿಂದ ನಿನಗೆ ಸ್ವಲ್ಪ ಅನುಗ್ರಹವನ್ನು ಮಾಡುವೆನು.

೨೨. ಕ್ರಿಮಿಗಳು ನಿನ್ನ ಕಾಲಿನ ಮಾಂಸವನ್ನು ಕಿತ್ತುಕೊಂಡು ಭೂಮಿಯನ್ನು ಸೇರುವವು ಅದರಿಂದ ನಿನ್ನ ತಾಯಿಯ ಶಾಪವೂ ನಡೆದಂತಾಗುವುದು. ನೀನೂ ಬದುಕುವೆ ಎಂದು ಸಮಾಧಾನಮಾಡಿದನು.

೨೩. ಬ್ರಹ್ಮನು ಹೇಳಿದನು—ಬಳಿಕ ಸೂರ್ಯನು ಛಾಯೆಯನ್ನು ಕುರಿತು–ಎಲೌ ದೇವಿ, ನೀನು ಮಕ್ಕಳೆಲ್ಲರಲ್ಲಿಯೂ ಒಂದೇ ವಿಧವಾದ ಸ್ನೇಹವನ್ನು ತೋರಿಸದೆ ಕೇವಲ ಒಬ್ಬಿಬ್ಬರಲ್ಲಿ ಹೆಚ್ಚಾಗಿ ಪ್ರೀತಿಯನ್ನು ತೋರಿಸಲು ಕಾರಣವೇನು?

೨೪. ನೀನು ಈ ಮಕ್ಕಳ ತಾಯಿಯಾದ ಸಂಜ್ಞಾದೇವಿಯಲ್ಲ. ಯಾವಳೋ ಬೇರೆಯವಳಾಗಿರುವೆ. ಮಕ್ಕಳು ಗುಣವಂತರಲ್ಲದಿದ್ದರೂ ತಾಯಿಯಾದವಳು ಶಾಪವನ್ನು ಕೊಡಲಾರಳು ಎಂದನು.

೨೫. ಆಗ ಆ ಛಾಯೆಯು ಸೂರ್ಯನು ಶಾಪಕೊಡುವನೆಂಬ ಭಯದಿಂದ ನಡೆದ ಸಮಾಚಾರವನ್ನು ಅವನಿಗೆ ಹೇಳಿದಳು. ಅದನ್ನು ಕೇಳಿ ಸೂರ್ಯನು ಕೂಡಲೇ ತನ್ನ ಮಾವನ ಮನೆಗೆ ಹೋದನು.

shrinath.udupa@gmail.com

ಸ ಚಾಪಿ ತಂ ಯಥಾನ್ಯಾಯಮರ್ಚಯಿತ್ವಾ ತದಾ ರವಿಂ ।
ನಿರ್ದಗ್ಧುಕಾಮಂ ರೋಷೇಣ ಸಾಂತ್ವಯಾನಸ್ತಮಬ್ರವೀತ್ ॥ ೭೬ ॥

॥ ವಿಶ್ವಕರ್ಮೋವಾಚ ॥

ತವಾತಿತೇಜಸಾ ವ್ಯಾಪ್ತಮಿದಂ ರೂಪಂ ಸುದುಃಸಹಂ ।
ಅಸಹಂತೀ ತು ತತ್ಸಂಜ್ಞಾ ವನೇ ಚರತಿ ವೈ ತಪಃ ॥ ೭೭ ॥

ದ್ರಕ್ಷ್ಯತೇ ತಾಂ ಭವಾನದ್ಯ ಸ್ವಾಂ ಭಾರ್ಯಾಂ ಶುಭಚಾರಿಣೀಂ ।
ರೂಪಾರ್ಥಂ ಭವತೋಽರಣ್ಯೇ ಚರಂತೀಂ ಸುಮಹತ್ತಪಃ ॥ ೭೮ ॥

ಶ್ರುತಂ ಮೇ ಬ್ರಹ್ಮಣೋ ವಾಕ್ಯಂ ತವ ತೇಜೋಽವರೋಧನೇ ।
ರೂಪಂ ನಿರ್ವರ್ತಯಾಮ್ಯದ್ಯ ತವ ಕಾಂತಂ ದಿವಸ್ಪತೇ ॥ ೭೯ ॥

॥ ಬ್ರಹ್ಮೋವಾಚ ॥

ತತಸ್ತಥೇತಿ ತಂ ಪ್ರಾಹ ತ್ವಷ್ಟಾರಂ ಭಗವಾನ್ ರವಿಃ ।
ತತೋ ವಿವಸ್ವತೋ ರೂಪಂ ಪ್ರಾಗಾಸೀತ್ಪರಿಮಂಡಲಂ ॥ ೮೦ ॥

---

೭೬. ಆಗ ವಿಶ್ವಕರ್ಮನು ಸೂರ್ಯನನ್ನು ವಿಧಿವತ್ತಾಗಿ ಪೂಜಿಸಿ ಕೋಪದಿಂದ ಉರಿಯುತ್ತಿರುವ ಅವನನ್ನು ಸಮಾಧಾನಗೊಳಿಸುತ್ತಾ ಹೀಗೆ ಹೇಳಿದನು.

೭೭-೭೮. ಓ ದೇವ, ಮಹಾತೇಜಸ್ಸಿನಿಂದ ಕೂಡಿಉಗ್ರವಾಗಿರುವ ನಿನ್ನ ಈ ರೂಪವನ್ನು ನೋಡಿ ಸಹಿಸಲಾರದೇ ಸಂಜ್ಞಾದೇವಿಯು ಮನೆಯನ್ನು ಬಿಟ್ಟು ಕಾಡಿಗೆ ಹೋಗಿ ನಿನಗೆ ಸುಂದರರೂಪವುಂಟಾಗುವುದಕ್ಕಾಗಿ ಘೋರತಪಸ್ಸನ್ನಾಚರಿಸುತ್ತಲಿರುವಳು ಆ ಪತಿವ್ರತೆಯಾದ ನಿನ್ನ ಹೆಂಡತಿ ಸಂಜ್ಞಾದೇವಿಯನ್ನು ಅಲ್ಲಿ ನೋಡುವೆ. ಎಂದು ಹೇಳಿ,

೭೯. ನಿನ್ನ ತೇಜಸ್ಸನ್ನು ಕಮ್ಮಿಮಾಡುವ ಉಪಾಯವನ್ನು ಬ್ರಹ್ಮನು ಹೇಳಿರುವನು. ಓ ದಿನಕರ, ನಿನ್ನ ತೇಜಸ್ಸನ್ನು ಕಮ್ಮಿಮಾಡಿ ನೋಡಲು ಯೋಗ್ಯವಾದಂತಹ ಸುಂದರರೂಪವನ್ನು ನಿನಗೆ ಕಲ್ಪಿಸುವೆನು. ಅನುಜ್ಞೆಯನ್ನು ಕೊಡು ಎಂದನು.

೮೦. ಬ್ರಹ್ಮನು ಹೇಳಿದನು—ಆಮೇಲೆ ಸೂರ್ಯನು ಹಾಗೆಯೇ ಆಗಲೆಂದು ವಿಶ್ವಕರ್ಮನಿಗೆ ಹೇಳಿ ತನ್ನ ರೂಪವನ್ನು ಒಂದು ತೇಜೋಮಂಡಲವಾಗಿ ಮಾರ್ಪಡಿಸಿದನು.

shrinath.udupa@gmail.com

ವಿಶ್ವಕರ್ಮಾ ತ್ವನುಜ್ಞಾತಃ ಶಾಕದ್ವೀಪೇ ವಿವಸ್ವತಾ ।
ಭ್ರಮಿಮಾರೋಪ್ಯ ತತ್ತೇಜಃ ಶಾತನಾಯೋಪಚಕ್ರಮೇ ॥ ೮೧ ॥

ಭ್ರಮತಾಽಶೇಷಜಗತಾಂ ನಾಭಿಭೂತೇನ ಭಾಸ್ವತಾ ।
ಸಮುದ್ರಾದ್ರಿವನೋಪೇತಾ ತ್ವಾರುರೋಹ ಮಹೀ ನಭಃ ॥ ೮೨ ॥

ಗಗನಂ ಚಾಖಿಲಂ ವಿಪ್ರಾಃ ಸಚಂದ್ರಗ್ರಹತಾರಕಂ ।
ಅಧೋ ಗತಂ ಮಹಾಭಾಗಾ ಬಭೂವಾಕ್ಷಿಪ್ತಮಾಕುಲಂ ॥ ೮೩ ॥

ವಿಕ್ಷಿಪ್ತಸಲಿಲಾಃ ಸರ್ವೇ ಬಭೂವುಶ್ಚ ತಥಾರ್ಣವಾಃ ।
ವ್ಯಭಿದ್ಯಂತ ಮಹಾಶೈಲಾಃ ಶೀರ್ಣಸಾನುನಿಬಂಧನಾಃ ॥ ೮೪ ॥

ಧ್ರುವಾಧಾರಾಣ್ಯಶೇಷಾಣಿ ಧಿಷ್ಣ್ಯಾನಿ ಮುನಿಸತ್ತಮಾಃ ।
ತ್ರುಟ್ಯದ್ರಶ್ಮಿನಿಬಂಧೀನಿ ಬಂಧನಾನಿ ಅಧೋ ಯಯುಃ ॥ ೮೫ ॥

---

೮೧. ಸೂರ್ಯನ ಅನುಜ್ಞೆಯನ್ನು ಪಡೆದು ವಿಶ್ವಕರ್ಮನು ಆಮೇಲೆ ಶಾಕದ್ವೀಪದಲ್ಲಿ ಸೂರ್ಯಮಂಡಲವನ್ನು ಸಾಣೆಯ ಚಕ್ರಕ್ಕೇರಿಸಿ ಅವನ ತೇಜಸ್ಸನ್ನು ಸಾಣೆಹಿಡಿದು ಕಮ್ಮಿಮಾಡಲು ತೊಡಗಿದನು.

೮೨. ತೇಜೋಮಯವಾದ ಸೂರ್ಯಮಂಡಲವು ಸಾಣೆಯ ಚಕ್ರದಲ್ಲಿ ತಿರುಗುತ್ತಿರಲು ಸಮುದ್ರ, ಬೆಟ್ಟ, ವನಗಳೊಡನೆ ಭೂಮಿಯು ಆಕಾಶಕ್ಕೇರಿತು. ತಲೆ ಕೆಳಕಾಯಿತು.

೮೩. ಆಕಾಶವು ಚಂದ್ರ, ಗ್ರಹ, ನಕ್ಷತ್ರಗಳೊಡನೆ ಕೆಳಗೆ ಬಂದಿತು. ಹೀಗೆ ಎಲ್ಲವೂ ಮೇಲೆಕೆಳಗೆ ಆಯಿತು.

೮೪. ಸಮುದ್ರಗಳ ನೀರೆಲ್ಲವೂ ಉಕ್ಕಿಬಂದು ಅಲ್ಲೋಲಕಲ್ಲೋಲವಾಯಿತು. ಮಹಾಗಿರಿಗಳ ತಪ್ಪಲು ಮತ್ತು ಶಿಖರಗಳು ಒಡೆದು ಚೂರಾದುವು.

೮೫. ಧ್ರುವಮಂಡಲವನ್ನವಲಂಬಿಸಿದ್ದ ಜ್ಯೋತಿರ್ಮಂಡಲಗಳೆಲ್ಲವೂ ಕಿರಣ ಬಂಧನವು ಕಡಿದು ಕೆಳಗೆ ಬಿದ್ದುವು.

shrinath.udupa@gmail.com

ವೇಗಭ್ರಮಣಸಂಪಾತವಾಯುಕ್ಷಿಪ್ತಾಃ ಸಹಸ್ರಶಃ ।
ವ್ಯಶೀರ್ಯಂತ ಮಹಾಮೇಘಾ ಘೋರಾರಾವವಿರಾವಿಣಃ ॥ ೮೬ ॥

ಭಾಸ್ವದ್ಭ್ರಮಣವಿಭ್ರಾಂತಭೂವ್ಯಾಕಾಶರಸಾತಲಂ ।
ಜಗದಾಕುಲಮತ್ಯರ್ಥಂ ತದಾಸೀನ್ಮುನಿಸತ್ತಮಾಃ ॥ ೮೭ ॥

ತ್ರೈಲೋಕ್ಯಮಾಕುಲಂ ವೀಕ್ಷ್ಯ ಭ್ರಮಮಾಣಂ ಸುರರ್ಷಯಃ ।
ದೇವಾಶ್ಚ ಬ್ರಹ್ಮಣಾ ಸಾರ್ಧಂ ಭಾಸ್ವಂತಮಭಿತುಷ್ಟುವುಃ ॥ ೮೮ ॥

ಆದಿದೇವೋಽಸಿ ದೇವಾನಾಂ ಜಾತಸ್ತ್ವಂ ಭೂತಯೇ ಭುವಃ ।
ಸರ್ಗಸ್ಥಿತ್ಯಂತಕಾಲೇಷು ತ್ರಿಧಾ ಭೇದೇನ ತಿಷ್ಠಸಿ ॥ ೮೯ ॥

ಸ್ವಸ್ತಿ ತೇಽಸ್ತು ಜಗನ್ನಾಥ ಘರ್ಮವರ್ಷ ದಿವಾಕರ ।
ಇಂದ್ರಾದಯಸ್ತದಾ ದೇವಾ ಲಿಖ್ಯಮಾನಮಥಾಸ್ತುವನ್ ॥ ೯೦ ॥

---

೮೬. ವೇಗವಾಗಿ ತಿರುಗುವ ಸೂರ್ಯಮಂಡಲದಿಂದ ಮಹಾಗಾಳಿಯುಂಟಾಗಿ ಅದರಿಂದ ಮಹಾಮಹಾ ಮೇಘಗಳೂ ಸಹ ಘೋರವಾಗಿ ಗರ್ಜನೆಮಾಡುತ್ತಾ ಚೂರುಚೂರಾದುವು.

೮೭. ಸೂರ್ಯಮಂಡಲದ ತಿರುಗುವಿಕೆಯಿಂದ ಭೂಮಿ, ಆಕಾಶ, ಪಾತಾಳ, ಗಳೆಲ್ಲವೂ ತಲೆಕೆಳಗಾಗಿ ಜಗತ್ತೆಲ್ಲವೂ ತಳಮಳಗೊಂಡಿತು.

೮೮. ಮೂರು ಲೋಕಗಳೂ ಹೀಗೆ ಮೇಲೆಕೆಳಗೆ ತಿರುಗುವುದನ್ನು ನೋಡಿ ದೇವಮುನಿಗಳೂ, ದೇವತೆಗಳೂ ಸಹ ಬ್ರಹ್ಮನೊಡನೆ ಹೀಗೆ ಸ್ತುತಿಸಿದರು.

೮೯. ಓ ಸೂರ್ಯದೇವ, ದೇವತೆಗಳಲ್ಲಿ ನೀನು ಮೊದಲನೆಯ ದೇವನು. ದೇವತೆಗಳಿಗೆ ಆದಿಕಾರಣನೂ ನೀನೇ, ಇಂತಹ ನೀನು ಜಗತ್ತನ್ನು ರಕ್ಷಿಸಲು ಮಾರ್ತಂಡನಾಗಿ ಜನಿಸಿರುವೆ. ಸೃಷ್ಟಿ, ಸ್ಥಿತಿ, ಪ್ರಳಯಕಾಲದಲ್ಲಿ ನೀನು ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಮೂರು ರೂಪಗಳನ್ನು ಧರಿಸು.

೯೦. ಇಂದ್ರಾದಿದೇವತೆಗಳು ಹೀಗೆ ಸ್ತುತಿಸಿದರು. —ಜಗದೊಡೆಯನಾದ ಓ ದೇವನೇ, ನೀನು ಜಯಶೀಲನಾಗು. ಈ ಜಗತ್ತನ್ನು ಪಾಲಿಸುವವನಾಗು.

shrinath.udupa@gmail.com

ಜಯ ದೇವ ಜಗತ್ಸ್ವಾಮಿನ್ ಜಾಯಾಶೇಷಜಗತ್ಪತೇ ।
ಋಷಯಶ್ಚ ತತಃ ಸಪ್ತ ವಸಿಷ್ಠಾತ್ರಿಪುರೋಗಮಾಃ ॥ ೯೧ ॥

ತುಷ್ಟುವುರ್ವಿವಿಧೈಃ ಸ್ತೋತ್ರೈಃ ಸ್ವಸ್ತಿ ಸ್ವಸ್ತೀತಿವಾದಿನಃ ।
ವೇದೋಕ್ತಿಭಿರಥಾಗ್ರ್ಯಾಭಿರ್ವಾಲಖಿಲ್ಯಾಶ್ಚ ತುಷ್ಟುವುಃ ॥ ೯೨ ॥

ಅಗ್ನಿರಾದ್ಯಾಶ್ಚ ಭಾಸ್ವಂತಂ ಲಿಖ್ಯಮಾನಂ ಮುದಾ ಯುತಾಃ ।
ತ್ವಂ ನಾಥ ಮೋಕ್ಷಿಣಾಂ ಮೋಕ್ಷೋ ಧ್ಯೇಯಸ್ತ್ವಂ ಧ್ಯಾನಿನಾಂ ಪರಃ ॥

ತ್ವಂ ಗತಿಃ ಸರ್ವಭೂತಾನಾಂ ಕರ್ಮಕಾಂಡವಿವರ್ತಿನಾಂ ।
ಸಂಪೂಜ್ಯಸ್ತ್ವಂ ತು ದೇವೇಶ ಶಂ ನೋಽಸ್ತು ಜಗತಾಂ ಪತೇ ॥ ೯೪ ॥

ಶಂ ನೋಽಸ್ತು ದ್ವಿಪದೇ ನಿತ್ಯಂ ಶಂ ನಶ್ಚಾಸ್ತು ಚತುಷ್ಪದೇ ।
ತತೋ ವಿದ್ಯಾಧರಗಣಾ ಯಕ್ಷರಾಕ್ಷಸಪನ್ನಗಾಃ ॥ ೯೫ ॥

೯೧-೯೨. ಬೆಚ್ಚನೆಯ ಕಿರಣಗಳನ್ನು ಬೀರುವ ಓ ಸೂರ್ಯದೇವ, ನಿನಗೆ ಮಂಗಳವಾಗಲಿ ಎಂದೂ ದೇವತೆಗಳು ಸ್ತುತಿಸಿದರು. ವಸಿಷ್ಠ, ಅತ್ರಿ ಮೊದಲಾದ ಋಷಿಗಳು ನಿನಗೆ ಮಂಗಳವಾಗಲಿ, ನಿನಗೆ ಮಂಗಳವಾಗಲಿ ಎಂದು ಹೇಳುತ್ತಾ ಬಹುವಾಗಿ ಆ ಸೂರ್ಯನನ್ನು ಸ್ತುತಿಸಿದರು. ವಾಲಖಿಲ್ಯರೆಂಬ ಮುನಿಗಳು ವೇದಸೂಕ್ತಗಳಿಂದ ಸ್ತುತಿಸಿದರು.

೯೩. ಅಗ್ನಿಯೇ ಮೊದಲಾದವರು ಹೀಗೆ ಸ್ತುತಿಸಿದರು—ಓ ದೇವ ಮೋಕ್ಷವನ್ನು ಬಯಸುವವರಿಗೆ ಮೋಕ್ಷವು ನೀನು. ಧ್ಯಾನಮಾಡುವವರಿಗೆ ಧ್ಯಾನಮೂರ್ತಿಯು ನೀನು.

೯೪. ಕರ್ಮವನ್ನಾಚರಿಸುವ ಮಾನವರಿಗೆ ಗತಿಯು ನೀನು. ಓ ದೇವದೇವ, ನಮಗೂ ಜಗತ್ತಿಗೂ ಕ್ಷೇಮವಾಗುವಂತೆ ಅನುಗ್ರಹಿಸು. ಎರಡು ಕಾಲುಗಳುಳ್ಳ ಪ್ರಾಣಿಗಳಿಗೂ, ಮನುಷ್ಯರಿಗೂ, ಕ್ಷೇಮವಾಗಲಿ, ಚತುಷ್ಪಾದಗಳಾದ ಪಶುಗಳಿಗೂ ಕ್ಷೇಮವಾಗಲಿ.

೯೫-೯೬. ಆಮೇಲೆ ವಿದ್ಯಾಧರರು, ಯಕ್ಷರು, ರಾಕ್ಷಸರು, ನಾಗಪುರುಷರು ಇವರೆಲ್ಲರೂ ಸೂರ್ಯನನ್ನು ನಮಸ್ಕರಿಸಿ ವಿನಯದಿಂದ ಅಂಜಲಿಯನ್ನು ಧರಿಸಿ ಕಿವಿಗೆ ಇಂಪಾಗಿಯೂ, ಮನಸ್ಸಿಗೆ ಆನಂದವನ್ನುಂಟುಮಾಡುವಂತಹುದೂ ಆಗಿರುವ ಅನೇಕ

shrinath.udupa@gmail.com

ಕೃತಾಂಜಲಿಪುಟಾಃ ಸರ್ವೇ ಶಿರೋಭಿಃ ಪ್ರಣತಾ ರವಿಂ ।
ಊಚುಸ್ತೇ ವಿವಿಧಾ ವಾಚೋ ಮನಃ ಶ್ರೋತ್ರಸುಖಾವಹಾಃ ॥ ೯೬ ॥

ಸಹ್ಯಂ ಭವತು ತೇಜಸ್ತೇ ಭೂತಾನಾಂ ಭೂತಭಾವನ ।
ತತೋ ಹಾಹಾಹೂಹೂಶ್ಚೈವ ನಾರದಸ್ತುಂಬುರುಸ್ತಥಾ ॥ ೯೭ ॥

ಉಪಗಾಯಿತುಮಾರಬ್ಧಾ ಗಾಂಧರ್ವಕುಶಲಾ ರವಿಂ ।
ಷಡ್ಜಮಧ್ಯಮಗಾಂಧಾರಗಾನತ್ರಯವಿಶಾರದಾಃ ॥ ೯೮ ॥

ಮೂರ್ಛನಾಭಿಶ್ಚ ತಾಲೈಶ್ಚ ಸಂಪ್ರಯೋಗೈಃ ಸುಖಪ್ರದಂ ।
ವಿಶ್ವಾಚೀ ಚ ಘೃತಾಚೀ ಚ ಉರ್ವಶ್ಯಥ ತಿಲೋತ್ತಮಾಃ ॥ ೯೯ ॥

ಮೇನಕಾ ಸಹಜನ್ಯಾ ಚ ರಂಭಾ ಚಾಪ್ಸರಸಾಂ ವರಾ ।
ನನೃತುರ್ಜಗತಾಮೀಶೇ ಲಿಖ್ಯಮಾನೇ ವಿಭಾವಸೌ ॥ ೧೦೦ ॥

ಸ್ತೋತ್ರಗಳನ್ನು ಹೇಳಿ, ಪ್ರಜೆಗಳನ್ನು ಸಲಹುವ ಓ ಸ್ವಾಮಿಯೇ, ನಿನ್ನ ತೇಜಸ್ಸನ್ನು ಎಲ್ಲರೂ ನೋಡಿ ಸಹಿಸುವಂತಾಗಲಿ ಎಂದು ಹೇಳಿದರು.

೯೭. ಆಮೇಲೆ ಹಾಹಾ, ಹೂಹೂ, ನಾರದ, ತುಂಬುರು ಮೊದಲಾದ ಸಂಗೀತ ವಿದ್ವಾಂಸರು ಸೂರ್ಯನನ್ನು ಸ್ತುತಿಸಿ ಹಾಡತೊಡಗಿದರು.

೯೮. ಆ ಹಾಹಾ ಮೊದಲಾದ ಸಂಗೀತಗಾರರು ರಾಗಗಳನ್ನು ಆಲಾಪನೆ ಮಾಡುತ್ತಾ, ಷಡ್ಜ, ಮಧ್ಯಮ, ಗಾಂಧಾರ ಮೊದಲಾದ ಸಪ್ತಸ್ವರಯುಕ್ತವಾದ ಗಾನಗಳನ್ನು ಮೂರ್ಛನ, ತಾಲ, ಲಯ ಮೊದಲಾದುವುಗಳಿಂದ ಕಿವಿಗಳಿಗೆ ಇಂಪಾಗುವಂತೆ ಹಾಡುತ್ತಿದ್ದರು.

೯೯-೧೦೦. ಸೂರ್ಯನು ಹಾಗೆ ಸಾಣೆಹಿಡಿಯಲ್ಪಡುತ್ತಿರಲು ವಿಶ್ವಾಚೀ, ಘೃತಾಚೀ, ಉರ್ವಶೀ, ತಿಲೋತ್ತಮೆ, ಮೇನಕೆ, ಸಹಜನ್ಯಾ, ರಂಭೆ ಮೊದಲಾದ ಅಪ್ಸರೆಯರು, ಅನೇಕ ಹಾವಭಾವವಿಲಾಸಾದಿಗಳನ್ನಭಿನಯಿಸುತ್ತಾ ನರ್ತನಮಾಡಿದರು.

shrinath.udupa@gmail.com

ಭಾವಹಾವವಿಲಾಸಾಢ್ಯಾಃ ಕುರ್ವಂತ್ಯೋಽಭಿನಯಾನ್ಬಹೂನ್ ।
ಪ್ರಾವಾದ್ಯಂತ ತತಸ್ತತ್ರ ವೀಣಾ ವೇಣ್ವಾದಿಝರ್ಝರಾಃ ॥ ೧೦೧ ॥

ಪಣವಾಃ ಪುಷ್ಕರಾಶ್ಚೈವ ಮೃದಂಗಾಃ ಪಟಹಾನಕಾಃ ।
ದೇವದುಂದುಭಯಃ ಶಂಖಾಃ ಶತಶೋಽಥ ಸಹಸ್ರಶಃ ॥ ೧೦೨ ॥

ಗಾಯದ್ಭಿಶ್ಚೈವ ನೃತ್ಯದ್ಭಿರ್ಗಂಧರ್ವೈರಪ್ಸರೋಗಣೈಃ ।
ತೂರ್ಯವಾದಿತ್ರಘೋಷೈಶ್ಚ ಸರ್ವಂ ಕೋಲಾಹಲೀಕೃತಂ ॥ ೧೦೩ ॥

ತತಃ ಕೃತಾಂಜಲಿಪುಟಾ ಭಕ್ತಿನಮ್ರಾತ್ಮಮೂರ್ತಯಃ ।
ಲಿಖ್ಯಮಾನಂ ಸಹಸ್ರಾಂಶುಂ ಪ್ರಣೇಮುಃ ಸರ್ವದೇವತಾಃ ॥ ೧೦೪ ॥

ತತಃ ಕೋಲಾಹಲೇ ತಸ್ಮಿನ್ ಸರ್ವದೇವಸಮಾಗಮೇ ।
ತೇಜಸಃ ಶಾತನಂ ಚಕ್ರೇ ವಿಶ್ವಕರ್ಮಾ ಶನೈಃ ಶನೈಃ ॥ ೧೦೫ ॥

೧೦೧–೧೦೨. ಆಮೇಲೆ ವೀಣೆ, ಕೊಳಲು, ಝಲ್ಲರಿ, ಪಣವ [ಮೌರಿ] ಪುಷ್ಕರ [ಡೋಳು] ಮದ್ದಳೆ, ಕಹಳೆ ಮೊದಲಾದ ವಾದ್ಯಗಳನ್ನು ಬಾರಿಸಿದರು. ದೇವದುಂಭಿಗಳನ್ನು ಬಾರಿಸಿದರು. ಶಂಖವನ್ನೂದಿದರು. ಹೀಗೆ ಸಾವಿರಾರು ವಾಧ್ಯಗಳನ್ನು ಬಾರಿಸಿದರು.

೧೦೩. ಗಂಧರ್ವರ ಗಾನ, ಅಪ್ಸರೆಯರ ನರ್ತನ! ವೀಣೆ, ಮದ್ದಳೆ, ದುಂದುಭಿ ಮೊದಲಾದ ವಾದ್ಯಗಳ ಘೋಷ, ಇವುಗಳಿಂದ ಆಗ ತುಂಬಾ ಕೋಲಾಹಲವಾಯಿತು.

೧೦೪. ದೇವತೆಗಳೆಲ್ಲರೂ ಸಹ ಭಕ್ತಿಯಿಂದ ಬಗ್ಗಿದ ಶರೀರವುಳ್ಳವರಾಗಿ ಅಂಜಲಿಯನ್ನು ಧರಿಸಿ ಸಾಣೆಚಕ್ರದಲ್ಲಿ ತಿರುಗುತ್ತಿರುವ ಸೂರ್ಯನನ್ನು ನಮಸ್ಕರಿಸಿದರು.

೧೦೫. ಹೀಗೆ ದೇವತೆಗಳೆಲ್ಲರೂ ಕೂಡಿ ಕೋಲಾಹಲವಾಗುತ್ತಿರುವ ಸಮಯದಲ್ಲಿ ವಿಶ್ವಕರ್ಮನು ಸೂರ್ಯನ ತೇಜಸ್ಸನ್ನು ಮೆಲ್ಲಮೆಲ್ಲಗೆ ಸಾಣೆಹಿಡಿದು ಕತ್ತರಿಸಿದನು.

shrinath.udupa@gmail.com

ಆಜಾನುಲಿಖಿತಶ್ಚಾಸೌ ನಿಪುಣಂ ವಿಶ್ವಕರ್ಮಣಾ ।
ನಾಭ್ಯನಂದತ್ತು ಲಿಖನಂ ತತಸ್ತೇನಾವತಾರಿತಃ ॥ ೧೦೬ ॥

ನ ತು ನಿರ್ಭರ್ತ್ಸಿತಂ ರೂಪಂ ತೇಜಸೋ ಹನನೇನ ತು ।
ಕಾಂತಾತ್ಕಾಂತತರಂ ರೂಪಮಧಿಕಂ ಶುಶುಭೇ ತತಃ ॥ ೧೦೭ ॥

ಇತಿ ಹಿಮಜಲಘರ್ಮಕಾಲಹೇತೋ-
ರ್ಹರಕಮಲಾಸನವಿಷ್ಣುಸಂಸ್ತುತಸ್ಯ ।
ತದುಪರಿ ಲಿಖನಂ ನಿಶಮ್ಯ ಭಾನೋ-
ರ್ವ್ರಜತಿ ದಿವಾಕರಲೋಕಮಾಯುಷೋಽಂತೇ ॥ ೧೦೮ ॥

ಏವಂ ಜನ್ಮ ರವೇಃ ಪೂರ್ವಂ ಬಭೂವ ಮುನಿಸತ್ತಮಾಃ ।
ರೂಪಂ ಚ ಪರಮಂ ತಸ್ಯ ಮಯಾ ಸಂಪರಿಕೀರ್ತಿತಂ ॥ ೧೦೯ ॥

ಇತಿ ಶ್ರೀಮಹಾಪುರಾಣೇ ಬ್ರಾಹ್ಮೇ ಸ್ವಯಂಭ್ವೃಷಿಸಂವಾದೇ
ಮಾರ್ತಂಡಸ್ಯ ಜನ್ಮಶರೀರಲಿಖನಂ ನಾಮ ದ್ವಾತ್ರಿಂಶೋಽಧ್ಯಾಯಃ

---

೧೦೬. ಮೊಳಕಾಲುಗಳವರೆಗೆ ಸೂರ್ಯನನ್ನು ವಿಶ್ವಕರ್ಮನು ಚನ್ನಾಗಿ ಸಾಣೆಹಿಡಿದು ಉಜ್ಜಿದನು. ಆಮೇಲೆ ಸೂರ್ಯನು ಸಾಕೆನಲು ಮುಗಿಸಿ ಸಾಣೆಯ ಚಕ್ರದಿಂದ ಸೂರ್ಯನನ್ನಿಳಿಸಿದನು.

೧೦೭. ತೇಜಸ್ಸನ್ನು ಕಮ್ಮಿಮಾಡಿದುದರಿಂದ ಸೂರ್ಯನ ರೂಪು ಹಾಳಾಗಲಿಲ್ಲ. ಮತ್ತು ಮಹಾಸುಂದರವಾಗಿ ಅವನ ರೂಪವು ಪ್ರಕಾಶಿಸಿತು.

೧೦೮. ಹಿಮ, ಜಲ, ಬಿಸಿಲು, ಕಾಲ ಇವುಗಳಿಗೆ ಕಾರಣನೂ, ಹರ, ಬ್ರಹ್ಮ ಹರಿ ಇವರಿಂದ ಸ್ತುತಿಸಲ್ಪಡುವವನೂ ಆದ ಸೂರ್ಯನ ತೇಜಸ್ಸನ್ನು ಸಾಣೆಹಿಡಿದು ಕಮ್ಮಿಮಾಡಿದ ಈ ಕಥೆಯನ್ನು ಕೇಳುವವನು, ಮುಂದಿನ ಜನ್ಮದಲ್ಲಿ ಸೂರ್ಯಲೋಕವನ್ನು ಪಡೆಯುವನು.

೧೦೯. ಎಲೈ ಮುನಿಗಳೇ, ಹೀಗೆ ಸೂರ್ಯನಿಗೆ ಜನ್ಮವಾಯಿತು ಮತ್ತು ಸುಂದರವಾದ ರೂಪವುಂಟಾಯಿತು. ಇದೆಲ್ಲವನ್ನೂ ನಿಮಗೆ ಹೇಳಿರುವೆನು ಎಂದನು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಸ್ವಯಂಭುಋಷಿಸಂವಾದದಲ್ಲಿ ಮಾರ್ತಂಡಜನ್ಮಶರೀರ ವರ್ಣನವೆಂಬ ಮೂವತ್ತೆರಡನೇ ಅಧ್ಯಾಯವು ಮುಗಿದುದು.

shrinath.udupa@gmail.com

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಯಸ್ತ್ರಿಂಶೋಽಧ್ಯಾಯಃ

॥ ಮುನಯ ಊಚುಃ ॥

ಭೂಯೋಽಪಿ ಕಥಯಾಸ್ಮಾಕಂ ಕಥಾಂ ಸೂರ್ಯಸಮಾಶ್ರಿತಾಂ ।
ನ ತೃಪ್ತಿಮಧಿಗಚ್ಛಾಮಃ ಶೃಣ್ವಂತಸ್ತಾಂ ಕಥಾಂ ಶುಭಾಂ ॥ ೧ ॥

ಯೋಽಯಂ ದೀಪ್ತೋ ಮಹಾತೇಜಾ ವಹ್ನಿರಾಶಿಸಮಪ್ರಭಃ ।
ಏತದ್ವೇದಿತುಮಿಚ್ಛಾಮಃ ಪ್ರಭಾವೋಽಸ್ಯ ಕುತಃ ಪ್ರಭೋ ॥ ೨ ॥

॥ ಬ್ರಹ್ಮೋವಾಚ ॥

ತಮೋಭೂತೇಷು ಲೋಕೇಷು ನಷ್ಟೇ ಸ್ಥಾವರಜಂಗಮೇ ।
ಪ್ರಕೃತೇರ್ಗುಣಹೇತುಸ್ತು ಪೂರ್ವಂ ಬುದ್ಧಿರಜಾಯತ ॥ ೩ ॥

ಮೂವತ್ತಮೂರನೆಯ ಅಧ್ಯಾಯವು

೧. ಮುನಿಗಳು ಕೇಳಿದರು—ಓ ಬ್ರಹ್ಮದೇವ, ಸೂರ್ಯನ ಸಂಬಂಧವಾದ ಇತಿಹಾಸವನ್ನು ಇನ್ನೂ ವಿಶದವಾಗಿ ಹೇಳು. ಆ ಕಥೆಯನ್ನು ಕೇಳಿದಷ್ಟೂ ನಮಗೆ ತೃಪ್ತಿಯಿಲ್ಲ. ಇನ್ನೂ ಕೇಳಬೇಕೆಂದೆನಿಸುವುದು.

೨. ಅಗ್ನಿಯರಾಶಿಯಂತೆ ತೇಜಸ್ವಿಯಾದ ಈ ಸೂರ್ಯನಿಗೆ ಇಂತಹ ಮಹಿಮೆಯು ಹೇಗೆ ಉಂಟಾಯಿತು ? ಇದನ್ನು ತಿಳಿಯಬೇಕೆಂದಿರುವೆವು, ಹೇಳೆನಲು,

೩. ಬ್ರಹ್ಮನು ಹೇಳಿದನು—ಪ್ರಳಯದಿಂದ ಜಗತ್ತೆಲ್ಲವೂ ನಷ್ಟವಾಗಿ ಎಲ್ಲೆಲ್ಲಿಯೂ ಕತ್ತಲೆಯು ಹರಡಿದ್ದಿತು. ಆಮೇಲೆ ಪ್ರಕೃತಿಯ ಗುಣಗಳಿಂದ ಬುದ್ಧಿಯು ಜನಿಸಿತು.

shrinath.udupa@gmail.com

ಅಹಂಕಾರಸ್ತತೋ ಜಾತೋ ಮಹಾಭೂತಪ್ರವರ್ತಕಃ ।
ವಾಯ್ವಗ್ನಿರಾಪಃ ಖಂ ಭೂಮಿಸ್ತತಸ್ತ್ವಂಡಮಜಾಯತ ॥ ೪ ॥

ತಸ್ಮಿನ್ನಂಡೇ ತ್ವಿಮೇ ಲೋಕಾಃ ಸಪ್ತ ಚೈವ ಪ್ರತಿಷ್ಠಿತಾಃ ।
ಪೃಥಿವೀ ಸಪ್ತಭಿರ್ದ್ವೀಪೈಃ ಸಮುದ್ರೈಶ್ಚೈವ ಸಪ್ತಭಿಃ ॥ ೫ ॥

ತತ್ರೈವಾವಸ್ಥಿತೋ ಹ್ಯಾಸೀದಹಂ ವಿಷ್ಣುರ್ಮಹೇಶ್ವರಃ ।
ವಿಮೂಢಾಸ್ತಾಮಸಾಃ ಸರ್ವೇ ಪ್ರಧ್ಯಾಯಂತಿ ತಮೀಶ್ವರಂ ॥ ೬ ॥

ತತೋ ವೈ ಸುಮಹಾತೇಜಾಃ ಪ್ರಾದುರ್ಭೂತಸ್ತಮೋನುದಃ ।
ಧ್ಯಾನಯೋಗೇನ ಚಾಸ್ಮಾಭಿರ್ವಿಜ್ಞಾತಃ ಸವಿತಾ ತದಾ ॥ ೭ ॥

ಜ್ಞಾತ್ವಾ ಚ ಪರಮಾತ್ಮಾನಂ ಸರ್ವ ಏವ ಪೃಥಕ್ಪೃಥಕ್ ।
ದಿವ್ಯಾಭಿಸ್ತುತಿಭಿರ್ದೇವಃ ಸ್ತುತೋಽಸ್ಮಾಭಿಸ್ತದೇಶ್ವರಃ ॥ ೮ ॥

---

೪. ಆ ಬುದ್ಧಿಯಿಂದ ಅಹಂಕಾರವು ಜನಿಸಿತು. ಅಹಂಕಾರದಿಂದ ವಾಯು, ಅಗ್ನಿ, ಜಲ, ಆಕಾಶ, ಭೂಮಿಗಳೆಂಬ ಮಹಾಭೂತಗಳುದಯಿಸಿದುವು. ಆಮೇಲೆ ಬ್ರಹ್ಮಾಂಡವು ಜನಿಸಿತು.

೫. ಆ ಬ್ರಹ್ಮಾಂಡದಲ್ಲಿ ಈ ಏಳು ಲೋಕಗಳೂ ಪ್ರತಿಷ್ಠಿತವಾದುವು. ಏಳು ದ್ವೀಪಗಳು, ಏಳು ಸಮುದ್ರಗಳೂ ಇವುಗಳನ್ನೊಳಗೊಂಡ ಈ ಭೂಮಿಯೂ ಆ ಅಂಡದಲ್ಲಿರುವುದು.

೬. ಆ ಬ್ರಹ್ಮಾಂಡದಲ್ಲಿಯೇ ನಾನೂ ಹರಿಯೂ, ಮಹೇಶ್ವರನೂ, ಕತ್ತಲೆಯಿಂದ ದಿಙ್ಮೂಢರಾಗಿದ್ದು ಆ ಪರಮೇಶ್ವರನನ್ನು ಧ್ಯಾನಿಸುತ್ತಿದ್ದೆವು.

೭. ಆಮೇಲೆ ಕತ್ತಲೆಯನ್ನು ಹೋಗಲಾಡಿಸುತ್ತಾ ಮಹಾತೇಜಸ್ವಿಯಾದ ಪುರುಷನೋರ್ವನು ಆವಿರ್ಭವಿಸಿದನು. ಧ್ಯಾನಯೋಗದಿಂದ ನಾವು ಅವನನ್ನು ಸೂರ್ಯನೆಂದು ತಿಳಿದೆವು.

೮. ಅವನು ಪರಮಾತ್ಮನೆಂದು ತಿಳಿದು ನಾವೆಲ್ಲರೂ ಬೇರೆಬೇರೆಯಾದ ದಿವ್ಯವಾದ ಸ್ತೋತ್ರಗಳಿಂದ ಆ ಭಗವಂತನನ್ನು ಹೀಗೆ ಸ್ತುತಿಸಿದೆವು.

shrinath.udupa@gmail.com

ಆದಿದೇವೋಽಸಿ ದೇವಾನಾಮೈಶ್ವರ್ಯಾಚ್ಚ ತ್ವಮೀಶ್ವರಃ ।
ಆದಿಕರ್ತಾಽಸಿ ಭೂತಾನಾಂ ದೇವದೇವೋ ದಿವಾಕರಃ ॥ ೯ ॥

ಜೀವನಃ ಸರ್ವಭೂತಾನಾಂ ದೇವಗಂಧರ್ವರಕ್ಷಸಾಂ ।
ಮುನಿಕಿನ್ನರಸಿದ್ಧಾನಾಂ ತಥೈವೋರಗಪಕ್ಷಿಣಾಂ ॥ ೧೦ ॥

ತ್ವಂ ಬ್ರಹ್ಮಾ ತ್ವಂ ಮಹದೇವಸ್ತ್ವಂ ವಿಷ್ಣುಸ್ತ್ವಂ ಪ್ರಜಾಪತಿಃ ।
ವಾಯುರಿಂದ್ರಶ್ಚ ಸೋಮಶ್ಚ ವಿವಸ್ವಾನ್ವರುಣಸ್ತಥಾ ॥ ೧೧ ॥

ತ್ವಂ ಕಾಲಃ ಸೃಷ್ಟಿಕರ್ತಾ ಚ ಹರ್ತಾ ಭರ್ತಾ ತಥಾ ಪ್ರಭುಃ ।
ಸರಿತಃ ಸಾಗರಾಃ ಶೈಲಾ ವಿದ್ಯುದಿಂದ್ರಧನೂಂಷಿ ಚ ॥ ೧೨ ॥

೯. ಓ ದೇವನೇ, ನೀನು ದೇವತೆಗಳಿಗೆಲ್ಲಾ ಮೊದಲನೆಯವನಾದ ದೇವನು. ಸಕಲೈಶ್ವರ್ಯವುಳ್ಳವನಾದುದರಿಂದ ನೀನು ಈಶ್ವರನು. ಪ್ರಾಣಿಗಳನ್ನು ಮೊದಲು ಸೃಷ್ಟಿಸುವವನು ನೀನು. ಜಗತ್ತನ್ನು ಪ್ರಕಾಶಗೊಳಿಸುವ ದಿವಾಕರನು ನೀನು.

೧೦. ದೇವತೆಗಳು, ಗಂಧರ್ವರು, ರಾಕ್ಷಸರು, ಮುನಿಗಳು, ಕಿನ್ನರರು, ಸಿದ್ಧರು, ಮನುಷ್ಯರು, ಸರ್ಪಗಳು, ಪಕ್ಷಿಗಳು ಮೊದಲಾದ ಎಲ್ಲಾ ಪ್ರಾಣಿಗಳಿಗೂ ಜೀವನವನ್ನು ನೀನೇ ಕಲ್ಪಿಸುವವನು.

೧೧. ಓ ದೇವದೇವ, ಬ್ರಹ್ಮನು ನೀನು, ಮಹಾದೇವನು ನೀನು, ಹರಿಯು ನೀನು, ಪ್ರಜಾಪತಿಯು ನೀನು, ವಾಯು, ಇಂದ್ರ, ಚಂದ್ರ, ಸೂರ್ಯ, ವರುಣ ಇವರೂ ನೀನೇ.

೧೨. ನೀನು ಕಾಲನು, ಸೃಷ್ಟಿಕರ್ತನು ನೀನು, ಜಗತ್ತನ್ನು ಪಾಲಿಸುವವನೂ ನೀನು. ಕೊನೆಯಲ್ಲಿ ಸಂಹರಿಸುವವನು ನೀನೆ. ಜಗದೊಡೆಯನು ನೀನು, ನದಿಗಳು, ಸಾಗರಗಳು, ಬೆಟ್ಟಗಳು, ಮಿಂಚು, ಸಿಡಿಲು, ಕಾಮನಬಿಲ್ಲು, ಇವೆಲ್ಲವೂ ನೀನು. ಉತ್ಪತ್ತಿಪ್ರಳಯಗಳೂ ನೀನು. ಸ್ಥೂಲಜಗದ್ರೂಪನೂ ನೀನು. ಸೂಕ್ಷ್ಮ ಜಗದ್ರೂಪನೂ ನೀನು. ಪುರಾಣಪುರುಷನು ನೀನು.

shrinath.udupa@gmail.com

ಪ್ರಲಯಃ ಪ್ರಭವಶ್ಚೈವ ವ್ಯಕ್ತಾವ್ಯಕ್ತಃ ಸನಾತನಃ ।
ಈಶ್ವರಾತ್ಪರತೋ ವಿದ್ಯಾ ವಿದ್ಯಾಯಾಃ ಪರತಃ ಶಿವಃ ॥ ೧೩ ॥

ಶಿವಾತ್ಪರತರೋ ದೇವಸ್ತ್ವಮೇವ ಪರಮೇಶ್ವರಃ ।
ಸರ್ವತಃ ಪಾಣಿಪಾದಾಂತಃ ಸರ್ವತೋಽಕ್ಷಿಶಿರೋಮುಖಃ ॥ ೧೪ ॥

ಸಹಸ್ರಾಂಶುಃ ಸಹಸ್ರಾಸ್ಯಃ ಸಹಸ್ರಚರಣೇಕ್ಷಣಃ ।
ಭೂತಾದಿರ್ಭೂರ್ಭುವಃ ಸ್ವಶ್ಚ ಮಹಃ ಸತ್ಯಂ ತಪೋ ಜನಃ ॥ ೧೫ ॥

ಪ್ರದೀಪ್ತಂ ದೀಪನಂ ದಿವ್ಯಂ ಸರ್ವಲೋಕಪ್ರಕಾಶಕಂ ।
ದುರ್ನಿರೀಕ್ಷಂ ಸುರೇಂದ್ರಾಣಾಂ ಯದ್ರೂಪಂ ತಸ್ಯ ತೇ ನಮಃ ॥ ೧೬ ॥

ಸುರಸಿದ್ಧಗಣೈರ್ಜುಷ್ಟಂ ಭೃಗ್ವತ್ರಿಪುಲಹಾದಿಭಿಃ ।
ಸ್ತುತಂ ಪರಮಮವ್ಯಕ್ತಂ ಯದ್ರೂಪಂ ತಸ್ಯ ತೇ ನಮಃ ॥ ೧೭ ॥

---

೧೩. ಈಶ್ವರನಿಗಿಂತಲೂ ವಿದ್ಯೆಯು ಶ್ರೇಷ್ಠವಾದುದು. ವಿದ್ಯೆಗಿಂತಲೂ ಶಿವನು ಶ್ರೇಷ್ಠನಾದವನು. ಆ ಶಿವನಿಗಿಂತಲೂ ಪರಮೇಶ್ವರನು ಶ್ರೇಷ್ಠನು. ಅಂತಹ ಆ ಪರಮೇಶ್ವರನೇ ನೀನು.

೧೪. ನಿನ್ನ ಕೈಕಾಲುಗಳು ಎಲ್ಲೆಲ್ಲಿಯೂ ಇರುವುವು. ಕಣ್ಣು ಮುಖಗಳು ಎಲ್ಲೆಲ್ಲಿಯೂ ಇರುವವು. ಸಾವಿರಕಿರಣಗಳುಳ್ಳವನು ನೀನು. ನಿನಗೆ ಸಾವಿರಾರು ಮುಖಗಳು, ಸಾವಿರಾರು ಕಣ್ಣು ಕೈಕಾಲುಗಳುಇರುವವು .ಇಂತಹವಿರಾಟ್ ಪುರುಷನು ನೀನು.

೧೫. ಪ್ರಾಣಿಗಳಿಗೆ ನೀನೇ ಮೊದಲನೆಯವನು. ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹೋಲೋಕ, ಸತ್ಯಲೋಕ, ತಪೋಲೋಕ, ಜನೋಲೋಕ ಈ ಲೋಕಗಳೂ ನೀನು.

೧೬. ಸಕಲಲೋಕಗಳನ್ನೂ ಪ್ರಕಾಶಗೊಳಿಸುವುದೂ, ದೇವತೆಗಳಿಗೂ ನೋಡಲಸಾಧ್ಯವಾದುದೂ ಆದ ನಿನ್ನ ಉಗ್ರರೂಪವನ್ನು ನಮಿಸುವೆವು.

೧೭. ದೇವತೆಗಳು, ಸಿದ್ಧರು ಇವರಿಂದ ಸೇವಿಸಲ್ಪಟ್ಟುದೂ ಭೃಗು, ಅತ್ರಿ, ಪುಲಹ ಮುಂತಾದ ಮಹಾಮುನಿಗಳಿಂದ ಸ್ತುತಿಸಲ್ಪಡುವಂತಹುದೂ ಇಂದ್ರಿಯ ಗಳಿಗೆ ಪ್ರತ್ಯಕ್ಷವಲ್ಲದದೂ, ಆದ ನಿನ್ನ ಪರಮಾತ್ಮಸ್ವರೂಪವನ್ನು ನಮಿಸುವೆವು.

shrinath.udupa@gmail.com

ವೇದ್ಯಂ ವೇದವಿದಾಂ ನಿತ್ಯಂ ಸರ್ವಜ್ಞಾನಸಮನ್ವಿತಂ
ಸರ್ವದೇವಾತಿದೇವಸ್ಯ ಯದ್ರೂಪಂ ತಸ್ಯ ತೇ ನಮಃ ॥ ೧೮ ॥

ವಿಶ್ವಕೃದ್ವಿಶ್ವಭೂತಂ ಚ ವೈಶ್ವಾನರಸುರಾರ್ಚಿತಂ ।
ವಿಶ್ವಸ್ಥಿತಮಚಿಂತ್ಯಂ ಚ ಯದ್ರೂಪಂ ತಸ್ಯ ತೇ ನಮಃ ॥ ೧೯ ॥

ಪರಂ ಯಜ್ಞಾತ್ಪರಂ ವೇದಾತ್ಪರಂ ಲೋಕಾತ್ಪರಂ ದಿವಃ ।
ಪರಮಾತ್ಮೇತ್ಯಭಿಖ್ಯಾತಂ ಯದ್ರೂಪಂ ತಸ್ಯ ತೇ ನಮಃ ॥ ೨೦ ॥

ಅವಿಜ್ಞೇಯಮನಾಲಕ್ಷ್ಯಮಧ್ಯಾನಗತಮವ್ಯಯಂ ।
ಅನಾದಿನಿಧನಂ ಚೈವ ಯದ್ರೂಪಂ ತಸ್ಯ ತೇ ನಮಃ ॥ ೨೧ ॥

೧೮. ನಿನ್ನ ರೂಪವನ್ನು ವೇದಜ್ಞರು ಮಾತ್ರ ತಿಳಿಯಬಲ್ಲರು. ನಿನ್ನ ರೂಪು ಜ್ಞಾನಸ್ವರೂಪವಾದುದು. ದೇವದೇವನಾದ ನಿನ್ನ ಇಂತಹ ರೂಪನ್ನು ನಮ ಸ್ಕರಿಸುವೆವು.

೧೯. ಮತ್ತು ನಿನ್ನ ಪರಮಾತ್ಮರೂಪವು ಜಗತ್ತನ್ನು ಸೃಷ್ಟಿಸುವುದು ಮತ್ತು ಜಗದ್ರೂಪವಾದುದು. ಅಗ್ನಿ ಮೊದಲಾದವರು ನಿನ್ನ ದಿವ್ಯರೂಪವನ್ನರ್ಚಿಸುವರು. ಜಗತ್ತೆಲ್ಲವನ್ನೂ ನಿನ್ನ ರೂಪವು ವ್ಯಾಪಿಸಿರುವುದು. ಇಂತಹ ಅದ್ಭುತವಾದ ರೂಪ ವುಳ್ಳ ನಿನಗೆ ನಮಸ್ಕಾರವು.

೨೦. ನಿನ್ನ ರೂಪವು ಯಜ್ಞಗಳಿಗಿಂತಲೂ, ವೇದಗಳಿಗಿಂತಲೂ ಉತ್ತಮ ವಾದುದು. ಸ್ವರ್ಗ, ಮರ್ತ್ಯ, ಪಾತಾಳ ಲೋಕಗಳಿಗಿಂತಲೂ ಮಿಗಿಲಾದುದು. ಆದುದರಿಂದ ಅದಕ್ಕೆ ಪರಮಾತ್ಮನೆಂದು ಹೆಸರುಬಂದಿದೆ. ಇಂತಹ ಪರಮಾತ್ಮರೂಪ ನಾದ ನಿನಗೆ ನಮಸ್ಕಾರವು.

೨೧. ನಿನ್ನ ರೂಪವನ್ನು ತಿಳಿಯಲು ಸಾಧ್ಯವಿಲ್ಲವು. ಅದು ಇಂದ್ರಿಯ ಗಳಿಗೂ ಪ್ರತ್ಯಕ್ಷವಲ್ಲ. ಧ್ಯಾನದಿಂದ ನಿನ್ನ ರೂಪನ್ನು ತಿಳಿಯಲು ಸಾಧ್ಯವಿಲ್ಲ. ನಿನ್ನ ರೂಪಕ್ಕೆ ಆದಿಯೂ ಇಲ್ಲ. ಅಂತ್ಯವೂ ಇಲ್ಲ. ಇಂತಹ ರೂಪವುಳ್ಳ ನಿನಗೆ ನಮಸ್ಕಾರವು.

shrinath.udupa@gmail.com

ನಮೋ ನಮಃ ಕಾರಣಕಾರಣಾಯ
ನಮೋ ನಮಃ ಪಾಪವಿಮೋಚನಾಯ ।
ನಮೋ ನಮಸ್ತೇ ದಿತಿಜಾರ್ದನಾಯ
ನಮೋ ನಮೋ ರೋಗವಿಮೋಚನಾಯ ॥ ೨೨ ॥

ನಮೋ ನಮಃ ಸರ್ವವರಪ್ರದಾಯ
ನಮೋ ನಮಃ ಸರ್ವಸುಖಪ್ರದಾಯ ।
ನಮೋ ನಮಃ ಸರ್ವಧನಪ್ರದಾಯ
ನಮೋ ನಮಃ ಸರ್ವಮತಿಪ್ರದಾಯ ॥ ೨೩ ॥

ಸ್ತುತಃ ಸ ಭಗವಾನೇವಂ ತೈಜಸಂ ರೂಪಮಾಸ್ಥಿತಃ ।
ಉವಾಚ ವಾಚಾ ಕಲ್ಯಾಣ್ಯಾ ಕೋ ವರೋ ವಃ ಪ್ರದೀಯತಾಂ ॥ ೨೪ ॥

॥ ದೇವಾ ಊಚುಃ ॥

ತವಾತಿತೈಜಸಂ ರೂಪಂ ನ ಕಶ್ಚಿತ್ಸೋಢುಮುತ್ಸಹೇತ್ ।
ಸಹನೀಯಂ ತದ್ಭವತು ಹಿತಾಯ ಜಗತಃ ಪ್ರಭೋ ॥ ೨೫ ॥

---

೨೨. ಜಗತ್ತಿಗೆ ಕಾರಣನು ಬ್ರಹ್ಮನು. ಅವನಿಗೂ ನೀನು ಕಾರಣವು ಇಂತಹ ನಿನಗೆ ನಮಸ್ಕಾರವು. ಪಾಪನಾಶಕನಾದ ನಿನಗೆ ನಮಸ್ಕಾರವು. ರಾಕ್ಷಸ ವೈರಿಯಾದ ನಿನಗೆ ನಮಸ್ಕಾರಗಳು. ರೋಗನಾಶಕನಾದ ನಿನಗೆ ನಮಸ್ಕಾರವು.

೨೩. ಸಕಲ ವರಗಳನ್ನೂ ಕೊಡುವ ನಿನಗೆ ನಮಸ್ಕಾರವು. ಸಕಲ ಸುಖಗಳ್ನೂ ಕೊಡುವ ನಿನಗೆ ನಮಸ್ಕಾರವು. ಸಕಲಸಂಪತ್ತನ್ನೂ ಕೊಡುವ ನಿನಗೆ ನಮಸ್ಕಾರವು. ಒಳ್ಳೆಯಬುದ್ಧಿಯನ್ನು ಕೊಡುವ ನಿನಗೆ ನಮಸ್ಕಾರವು ಎಂದರು.

೨೪. ಹೀಗೆ ದೇವತೆಗಳು ಸ್ತುತಿಸಲು ತೇಜೋರೂಪನಾದ ಆ ಸೂರ್ಯನು ಮಧುರವಾದ ಮಾತಿನಿಂದ—ನಿಮಗೆ ಯಾವ ವರವನ್ನು ಕೊಡಲಿ ಎಂದು ಕೇಳಿದನು.

೨೫. ದೇವತೆಗಳು ಹೇಳಿದರು—ಓ ಸ್ವಾಮಿ, ನಿನ್ನ ಈ ಮಹಾತೇಜಸ್ವಿಯಾದ ರೂಪವನ್ನು ಯಾರೂ ಸಹಿಸಲಾರರು. ಜಗತ್ತಿನ ಹಿತಕ್ಕಾಗಿ ನಿನ್ನ ರೂಪವನ್ನು ಎಲ್ಲರೂ ಸಹಿಸಿ ನೋಡುವಂತೆ ಸೌಮ್ಯರೂಪವನ್ನು ಅನುಗ್ರಹಿಸುವವನಾಗು ಎಂದು ಪ್ರಾರ್ಥಿಸಲು,

shrinath.udupa@gmail.com

ಏವಮುಕ್ತ್ವೇತಿ ಸೋಽಪ್ಯುಕ್ತ್ವಾ ಭಗವಾನಾದಿಕೃತ್ಪ್ರಭುಃ ।
ಲೋಕಾನಾಂ ಕಾರ್ಯಸಿದ್ಧ್ಯರ್ಥಂ ಘರ್ಮವರ್ಷಹಿಮಪ್ರದಃ ॥ ೨೬ ॥

ತತಃ ಸಾಂಖ್ಯಾಶ್ಚ ಯೋಗಾಶ್ಚ ಯೇ ಚಾನ್ಯೇ ಮೋಕ್ಷಕಾಂಕ್ಷಿಣಃ ।
ಧ್ಯಾಯಂತಿ ಧ್ಯಾಯಿನೋ ದೇವಂ ಹೃದಯಸ್ಥಂ ದಿವಾಕರಂ ॥ ೨೭ ॥

ಸರ್ವಲಕ್ಷಣಹೀನೋಽಪಿ ಯುಕ್ತೋ ವಾ ಸರ್ವಪಾತಕೈಃ
ಸರ್ವಂ ಚ ತರತೇ ಪಾಪಂ ದೇವಮರ್ಕಂ ಸಮಾಶ್ರಿತಃ ॥ ೨೮ ॥

ಅಗ್ನಿಹೋತ್ರಂ ಚ ವೇದಾಶ್ಚ ಯಜ್ಞಾಶ್ಚ ಬಹುದಕ್ಷಿಣಾಃ ।
ಭಾನೋರ್ಭಕ್ತಿನಮಸ್ಕಾರಕಲಾಂ ನಾರ್ಹಂತಿ ಷೋಡಶೀಂ ॥ ೨೯ ॥

ತೀರ್ಥಾನಾಂ ಪರಮಂ ತೀರ್ಥಂ ಮಂಗಲಾನಾಂ ಚ ಮಂಗಲಂ ।
ಪವಿತ್ರಂ ಚ ಪವಿತ್ರಾಣಾಂ ಪ್ರಪದ್ಯಂತೇ ದಿವಾಕರಂ ॥ ೩೦ ॥

---

೨೬. ಆದಿಕರ್ತನೂ, ಜಗದೊಡೆಯನೂ, ಬಿಸಿಲು, ಮಳೆ, ಹಿಮಗಳನ್ನುಂಟು ಮಾಡುವವನೂ ಆದ ಆ ಸೂರ್ಯನು ಲೋಕಕ್ಷೇಮಕ್ಕಾಗಿ ಹಾಗೆಯೇ ಮಾಡುವೆನು ಎಂದು ಹೇಳಿದನು.

೨೭. ಈ ಕಾರಣದಿಂದಲೇ, ಸಾಂಖ್ಯರು, ಯೋಗಿಗಳು ಮೊದಲಾದ ಮೋಕ್ಷಾಭಿಲಾಷಿಗಳು ತಮ್ಮ ಹೃದಯದಲ್ಲಿ ಪರಮಾತ್ಮನಾದ ಸೂರ್ಯನನ್ನು ಧ್ಯಾನಿಸುವರು.

೨೮. ಸೂರ್ಯನನ್ನಾಶ್ರಯಿಸಿದವನು, ಅವಲಕ್ಷಣದವನಾಗಿದ್ದರೂ, ಮಹಾಪಾಪಿಯಾಗಿದ್ದರೂ, ಸಕಲಪಾಪಗಳನ್ನೂ ಕಳೆದುಕೊಳ್ಳುವನು.

೨೯. ಅಗ್ನಿಹೋತ್ರ, ವೇದಗಳು, ಅನೇಕದಕ್ಷಿಣೆಗಳುಳ್ಳ ಯಜ್ಞಗಳು ಇವಾವುದೂ ಸೂರ್ಯನನ್ನು ಕುರಿತು ಮಾಡುವ ಭಕ್ತಿಪೂರ್ವಕವಾದ ನಮಸ್ಕಾರದ ಹದಿನಾರನೆಯ ಒಂದು ಭಾಗವನ್ನೂ ಸರಿತೂಗಲಾರವು.

೩೦. ಸೂರ್ಯನು ತೀರ್ಥಗಳಲ್ಲಿ ಉತ್ತಮವಾದ ತೀರ್ಥವು. ಮಂಗಳವಸ್ತುಗಳಲ್ಲಿ ಶ್ರೇಷ್ಠವಾದ ವಸ್ತುವು. ಪವಿತ್ರವಾದ ವಸ್ತುಗಳಲ್ಲಿ ಉತ್ತಮವು. ಇಂತಹ ಸೂರ್ಯನನ್ನು ಜ್ಞಾನಿಗಳು ಸೇವಿಸುವರು.

shrinath.udupa@gmail.com

ಶಕ್ರಾದ್ಯೈಃ ಸಂಸ್ತುತಂ ದೇವಂ ಯೋ ನಮಸ್ಯಂತಿ ಭಾಸ್ಕರಂ ।
ಸರ್ವಕಿಲ್ಬಿಷನಿರ್ಮುಕ್ತಾಃ ಸೂರ್ಯಲೋಕಂ ವ್ರಜಂತಿ ತೇ ॥ ೩೧ ॥

॥ ಮುನಯ ಊಚುಃ ॥

ಚಿರಾತ್ಪ್ರಭೃತಿ ನೋ ಬ್ರಹ್ಮಞ್ಛ್ರೋತುಮಿಚ್ಛಾ ಪ್ರವರ್ತತೇ ।
ನಾಮ್ನಾಮಷ್ಟಶತಂ ಬ್ರೂಹಿ ಯತ್ತ್ವಯೋಕ್ತಂ ಪುರಾ ರವೇಃ ॥ ೩೨ ॥

॥ ಬ್ರಹ್ಮೋವಾಚ ॥

ಅಷ್ಟೋತ್ತರಶತಂ ನಾಮ್ನಾಂ ಶೃಣುಧ್ವಂ ಗದತೋ ಮಮ ।
ಭಾಸ್ಕರಸ್ಯ ಪರಂ ಗುಹ್ಯಂ ಸ್ವರ್ಗಮೋಕ್ಷಪ್ರದಂ ದ್ವಿಜಾಃ ॥ ೩೩ ॥

ಓಂ ಸೂರ್ಯೋಽರ್ಯಮಾ ಭಗಸ್ತ್ವಷ್ಟಾ ಪೂಷಾರ್ಕಃ ಸವಿತಾ ರವಿಃ ।
ಗಭಸ್ತಿಮಾನಜಃ ಕಾಲೋ ಮೃತ್ಯುರ್ಧಾತಾ ಪ್ರಭಾಕರಃ ॥ ೩೪ ॥

ಪೃಥಿವ್ಯಾಪಶ್ಚ ತೇಜಶ್ಚ ಖಂ ವಾಯುಶ್ಚ ಪರಾಯಣಂ ।
ಸೋಮೋ ಬೃಹಸ್ಪತಿಃ ಶುಕ್ರೋ ಬುಧೋಽಂಗಾರಕ ಏವ ಚ ॥ ೩೫ ॥

---

೩೧. ಇಂದ್ರನೇ ಮೊದಲಾದ ದೇವತೆಗಳಿಂದ ಸ್ತುತಿಸಲ್ಪಡುವ ಭಾಸ್ಕರನನ್ನು ಯಾವನು ಭಕ್ತಿಯಿಂದ ನಮಸ್ಕರಿಸುವನೋ ಅವನು ಪಾಪಗಳೆಲ್ಲವನ್ನೂ ಕಳೆದುಕೊಂಡು ಸೂರ್ಯಲೋಕವನ್ನು ಪಡೆಯುವನು.

೩೨. ಮುನಿಗಳು ಹೇಳಿದರು—ಓ ಬ್ರಹ್ಮದೇವ, ಬಹಳ ಕಾಲದಿಂದಲೂ ಸೂರ್ಯನ ನೂರೆಂಟು ಹೆಸರುಗಳನ್ನು ಕೇಳಬೇಕೆಂಬ ಇಚ್ಛೆಯಿರುವುದು ಅದನ್ನು ಹೇಳೆನಲು,

೩೩. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ, ಸೂರ್ಯನ ನೂರೆಂಟು ಹೆಸರುಗಳನ್ನು ಹೇಳುವೆನು, ಕೇಳಿರಿ. ಈ ಸ್ತೋತ್ರವು ಮಹಾ ರಹಸ್ಯವಾದುದು, ಸ್ವರ್ಗ ಮತ್ತು ಮುಕ್ತಿಗಳನ್ನುಂಟುಮಾಡುವುದು.

೩೪–೪೭. ಸೂರ್ಯ, ಅರ್ಯಮಾ, ಭಗ, ತ್ವಷ್ಟಾ, ಪೂಷಾ, ಅರ್ಕ, ಸವಿತಾ ರವಿ, ಗಭಸ್ತಿಮಾನ್, ಅಜ, ಕಾಲ, ಮೃತ್ಯು, ಧಾತೃ, ಪ್ರಭಾಕರ, ಪೃಥಿವೀ, ಆಪ, ತೇಜ, ಖ, ವಾಯು, ಪರಾಯಣ, ಸೋಮ, ಬೃಹಸ್ಪತಿ, ಶುಕ್ರ, ಬುಧ, ಅಂಗಾರಕ,

shrinath.udupa@gmail.com

ಇಂದ್ರೋ ವಿವಸ್ವಾನ್ ದೀಪ್ತಾಂಶುಃ ಶುಚಿಃ ಶೌರಿಃ ಶನೈಶ್ಚರಃ ।
ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಸ್ಕಂದೋ ವೈಶ್ರವಣೋ ಯಮಃ ॥ ೩೬ ॥

ವೈದ್ಯುತೋ ಜಾಠರಶ್ಚಾಗ್ನಿರೈಂಧನಸ್ತೇಜಸಾಂ ಪತಿಃ ।
ಧರ್ಮಧ್ವಜೋ ವೇದಕರ್ತಾ ವೇದಾಂಗೋ ವೇದವಾಹನಃ ॥ ೩೭ ॥

ಕೃತಂ ತ್ರೇತಾ ದ್ವಾಪರಶ್ಚ ಕಲಿಃ ಸರ್ವಾಮರಾಶ್ರಯಃ ।
ಕಾಲಾಕಾಷ್ಠಾಮುಹೂರ್ತಾಶ್ಚ ಕ್ಷಪಾ ಯಾಮಾಸ್ತಥಾ ಕ್ಷಣಾಃ ॥ ೩೮ ॥

ಸಂವತ್ಸರಕರೋಽಶ್ವತ್ಥಃ ಕಾಲಚಕ್ರೋ ವಿಭಾವಸುಃ ।
ಪುರುಷಃ ಶಾಶ್ವತೋ ಯೋಗೀ ವ್ಯಕ್ತಾವ್ಯಕ್ತಃ ಸನಾತನಃ ॥ ೩೯ ॥

ಕಾಲಾಧ್ಯಕ್ಷಃ ಪ್ರಜಾಧ್ಯಕ್ಷೋ ವಿಶ್ವಕರ್ಮಾ ತಮೋನುದಃ ।
ವರುಣಃ ಸಾಗರೋಂಽಶಶ್ಚ ಜೀಮೂತೋ ಜೀವನೋಽರಿಹಾ ॥ ೪೦ ॥

ಭೂತಾಶ್ರಯೋ ಭೂತಪತಿಃ ಸರ್ವಲೋಕನಮಸ್ಕೃತಃ ।
ಸ್ರಷ್ಟಾ ಸಂವರ್ತಕೋ ವಹ್ನಿಃ ಸರ್ವಸ್ಯಾದಿರಲೋಲುಪಃ ॥ ೪೧ ॥

ಇಂದ್ರ, ವಿವಸ್ವಾನ್, ದೀಪ್ತಾಂಶು, ಶುಚಿ, ಶೌರಿ, ಶನೈಶ್ಚರ, ಬ್ರಹ್ಮ, ವಿಷ್ಣು, ರುದ್ರ, ಸ್ಕಂದ, ವೈಶ್ರವಣ, ಯಮ, ವೈದ್ಯುತ, ಜಾಠರಾಗ್ನಿ, ಐಂಧನ, ತೇಜಃಪತಿ, ಧರ್ಮಧ್ವಜ, ವೇದಕರ್ತಾ, ವೇದಾಂಗ, ವೇದವಾಹನ, ಕೃತ, ತ್ರೇತಾ, ದ್ವಾಪರ, ಕಲಿ, ಸರ್ವಾಮರಾಶ್ರಯ, ಕಲಾ, ಕಾಷ್ಠಾ, ಮುಹೂರ್ತ, ಕ್ಷಪಾ, ಯಾಮ, ಕ್ಷಣ, ಸಂವತ್ಸರಕರ, ಅಶ್ವತ್ಥ, ಕಾಲಚಕ್ರ, ವಿಭಾವಸು, ಪುರುಷ, ಶಾಶ್ವತ, ಯೋಗಿ, ವ್ಯಕ್ತಾವ್ಯಕ್ತ, ಸನಾತನ, ಕಾಲಾಧ್ಯಕ್ಷ, ಪ್ರಜಾಧ್ಯಕ್ಷ, ವಿಶ್ವಕರ್ಮಾ, ತಮೋನುದ, ವರುಣ, ಸಾಗರ, ಅಂಶ, ಜೀಮೂತ, ಜೀವನ. ಅರಿಹಾ, ಭೂತಾಶ್ರಯ, ಭೂತಪತಿ, ಸರ್ವಲೋಕನಮಸ್ಕೃತ, ಸ್ರಷ್ಟಾ, ಸಂವರ್ತಕ, ವಹ್ನಿ, ಸರ್ವಾದಿ, ಅಲೋಲುಪ, ಅನಂತ, ಕಪಿಲ, ಭಾನು, ಕಾಮದ, ಸರ್ವತೋಮುಖ, ಜಯ, ವಿಶಾಲ, ವರದ, ಸರ್ವಭೂತನಿಷೇವಿತ, ಮನ, ಸುಪರ್ಣ, ಭೂತಾದಿ, ಶೀಘ್ರಗ, ಪ್ರಾಣಧಾರಣ, ಧನ್ವಂತರಿ, ಧೂಮಕೇತು, ಆದಿದೇವ, ಅದಿತಿಸುತ, ದ್ವಾದಶಾತ್ಮಾ, ರವಿ, ದಕ್ಷ, ಪಿತೃ, ಮಾತೃ,

shrinath.udupa@gmail.com

ಅನಂತಃ ಕಪಿಲೋ ಭಾನುಃ ಕಾಮದಃ ಸರ್ವತೋಮುಖಃ ।
ಜಯೋ ವಿಶಾಲೋ ವರದಃ ಸರ್ವಭೂತನಿಷೇವಿತಃ ॥ ೪೨ ॥

ಮನಃ ಸುಪರ್ಣೋ ಭೂತಾದಿಃ ಶೀಘ್ರಗಃ ಪ್ರಾಣಧಾರಣಃ ।
ಧನ್ವಂತರಿರ್ಧೂಮಕೇತುರಾದಿದೇವೋಽದಿತೇಃ ಸುತಃ ॥ ೪೩ ॥

ದ್ವಾದಶಾತ್ಮಾ ರವಿರ್ದಕ್ಷಃ ಪಿತಾ ಮಾತಾ ಪಿತಾಮಹಃ ।
ಸ್ವರ್ಗದ್ವಾರಂ ಪ್ರಜಾದ್ವಾರಂ ಮೋಕ್ಷದ್ವಾರಂ ತ್ರಿವಿಷ್ಟಪಂ ॥ ೪೪ ॥

ದೇಹಕರ್ತಾ ಪ್ರಶಾಂತಾತ್ಮಾ ವಿಶ್ವಾತ್ಮಾ ವಿಶ್ವತೋಮುಖಃ ।
ಚರಾಚರಾತ್ಮಾ ಸೂಕ್ಷ್ಮಾತ್ಮಾ ಮೈತ್ರೇಯಃ ಕರುಣಾನ್ವಿತಃ ॥ ೪೫ ॥

ಏತದ್ವೈ ಕೀರ್ತನೀಯಸ್ಯ ಸೂರ್ಯಸ್ಯಾಮಿತತೇಜಸಃ ।
ನಾಮ್ನಾಮಷ್ಟಶತಂ ರಮ್ಯಂ ಮಯಾ ಪ್ರೋಕ್ತಂ ದ್ವಿಜೋತ್ತಮಾಃ ॥ ೪೬ ॥

ಸುರಗಣಪಿತೃಯಕ್ಷಸೇವಿತಂ ಹ್ಯಸುರನಿಶಾಕರಸಿದ್ಧವಂದಿತಂ ।
ವರಕನಕಹುತಾಶನಪ್ರಭಂ ಪ್ರಣಿಪತಿತೋಽಸ್ಮಿ ಹಿತಾಯ ಭಾಸ್ಕರಂ ॥ ೪೭ ॥

ಸೂರ್ಯೋದಯೇ ಯಃ ಸುಸಮಾಹಿತಃ ಪಠೇ-
ತ್ಸಪುತ್ರದಾರಾನ್ ಧನರತ್ನಸಂಚಯಾನ್ ।

ಪಿತಾಮಹ, ಸ್ವರ್ಗದ್ವಾರ, ಪ್ರಜಾದ್ವಾರ, ಮೋಕ್ಷದ್ವಾರ, ತ್ರಿವಿಷ್ಟಪ, ದೇಹಕರ್ತೃ, ಪ್ರಶಾಂತಾತ್ಮಾ, ವಿಶ್ವಾತ್ಮಾ ವಿಶ್ವತೋಮುಖ, ಚರಾಚರಾತ್ಮಾ, ಸೂಕ್ಷ್ಮಾತ್ಮಾ, ಮೈತ್ರೇಯ, ಕರುಣಾನ್ವಿತ ಈ ನೂರೆಂಟು ನಾಮಗಳು ಸೂರ್ಯನ ಸ್ತೋತ್ರಗಳು. ಎಲೈ ಮುನಿಗಳೇ ಈ ಅಷ್ಟೋತ್ತರ ಶತನಾಮಸ್ತೋತ್ರವು ತುಂಬಾ ರಹಸ್ಯವಾದುದು.

೪೭. ದೇವತೆಗಳು, ಪಿತೃಗಳು, ಯಕ್ಷರು, ಅಸುರರು, ಚಂದ್ರ, ಸಿದ್ಧರು ಇವರಿಂದ ವಂದಿಸಲ್ಪಡುವವನೂ, ಸುವರ್ಣ ಮತ್ತು ಅಗ್ನಿ ಇವುಗಳಂತೆ ಪ್ರಭೆಯುಳ್ಳವನೂ, ಆದಂತಹ ಸೂರ್ಯದೇವನನ್ನು ಜಗತ್ತಿನ ಕ್ಷೇಮಕ್ಕಾಗಿ ವಂದಿಸುವೆನು.

೪೮. ಸೂರ್ಯೋದಯಕಾಲದಲ್ಲಿ ಈ ಅಷ್ಟೋತ್ತರಶತನಾಮಸ್ತೋತ್ರವನ್ನು ಭಕ್ತಿಯಿಂದ ಪಠಿಸುವವನು ಸುಂದರಿಯಾದ ಹೆಂಡತಿಯನ್ನೂ ಒಳ್ಳೆಯ ಮಕ್ಕ

shrinath.udupa@gmail.com

ಲಭೇತ ಜಾತಿಸ್ಮರತಾಂ ನರಃ ಸ ತು
ಸ್ಮೃತಿಂ ಚ ಮೇಧಾಂ ಚ ಸ ವಿಂದತೇ ಪರಾಂ ॥ ೪೮ ॥

ಇಮಂ ಸ್ತವಂ ದೇವವರಸ್ಯ ಯೋ ನರಃ
ಪ್ರಕೀರ್ತಯೇಚ್ಛುದ್ಧಮನಾಃ ಸಮಾಹಿತಃ ।
ವಿಮುಚ್ಯತೇ ಶೋಕದವಾಗ್ನಿಸಾಗರಾ-
ಲ್ಲಭೇತ ಕಾಮಾನ್ಮನಸಾ ಯಥೇಪ್ಸಿತಾನ್ ॥ ೪೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭ್ವೃಷಿಸಂವಾದೇ
ಸೂರ್ಯನಾಮಾಷ್ಟೋತ್ತರಶತಂ ನಾಮ
ತ್ರಯಸ್ತ್ರಿಂಶೋऽಧ್ಯಾಯಃ

ಳನ್ನೂ ಪಡೆಯುವನು. ಧನ, ರತ್ನಗಳು ಲಭಿಸುವವು. ಹಿಂದುಮುಂದಿನ ಜನ್ಮಗಳ ಸ್ಮರಣೆ ಉಂಟಾಗುವುದು. ಉತ್ತಮವಾದ ಮೇಧಾಶಕ್ತಿಯನ್ನು ಪಡೆಯುವನು.

೪೯. ದೇವದೇವನಾದ ಸೂರ್ಯನ ಈ ಅಷ್ಟೋತ್ತರಶತನಾಮಸ್ತೋತ್ರವನ್ನು ಶುದ್ಧವಾದ ಭಕ್ತಿಯಿಂದ ಕೀರ್ತನೆಮಾಡುವವನು ದುಃಖವೆಂಬ ಅಗ್ನಿಸಮುದ್ರವನ್ನು ದಾಟುವನು. ತನ್ನ ಇಷ್ಟಾರ್ಥಗಳೆಲ್ಲವನ್ನೂ ಪಡೆಯುವನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದ ಸ್ವಯಂಭುಋುಷಿಸಂವಾದದಲ್ಲಿ ಸೂರ್ಯಾಷ್ಟೋತ್ತರ
ಶತನಾಮವರ್ಣನವೆಂಬ ಮೂವತ್ತಮೂರನೆಯ ಅಧ್ಯಾಯವು
ಮುಗಿದುದು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

॥ ಮಂಗಳಂ ॥

shrinath.udupa@gmail.com

ಅಥ ಶ್ರೀಸೂರ್ಯೈಕವಿಂಶತಿನಾಮಾವಳಿಃ

ಓಂ ವಿಕರ್ತನಾಯ ನಮಃ
ಓಂ ವಿವಸ್ವತೇ ನಮಃ
ಓಂ ಮಾರ್ತಂಡಾಯ ನಮಃ
ಓಂ ಭಾಸ್ಕರಾಯ ನಮಃ
ಓಂ ರವಯೇ ನಮಃ
ಓಂ ಲೋಕಪ್ರಕಾಶಕಾಯ ನಮಃ
ಓಂ ಶ್ರೀಮತೇ ನಮಃ
ಓಂ ಲೋಕಚಕ್ಷುಷೇ ನಮಃ
ಓಂ ಗ್ರಹೇಶ್ವರಾಯ ನಮಃ
ಓಂ ಲೋಕಸಾಕ್ಷಿಣೇ ನಮಃ ೧೦
ಓಂ ತ್ರಿಲೋಕೇಶಾಯ ನಮಃ
ಓಂ ಕರ್ತ್ರೇ ನಮಃ
ಓಂ ಹರ್ತ್ರೇ ನಮಃ
ಓಂ ತಮಿಸ್ರಘ್ನೇ ನಮಃ
ಓಂ ತಪನಾಯ ನಮಃ
ಓಂ ತಾಪನಾಯ ನಮಃ
ಓಂ ಶುಚಯೇ ನಮಃ
ಓಂ ಸಪ್ತಾಶ್ವವಾಹಾಯ ನಮಃ
ಓಂ ಗಭಸ್ತಿಹಸ್ತಾಯ ನಮಃ
ಓಂ ಬ್ರಹ್ಮಣೇ ನಮಃ
ಓಂ ಸರ್ವದೇವನಮಸ್ಕೃತಾಯ ನಮಃ ೨೧

ಇತಿ ಶ್ರೀ ಸೂರ್ಯೈಕವಿಂಶತಿನಾಮಾವಳೀ ಸಂಪೂರ್ಣಾ

ಸೂಚನೆ.— ಸೂರ್ಯೋಪಾಸನೆ ಮಾಡುವವರ ಉಪಯೋಗಕ್ಕಾಗಿ ಇಲ್ಲಿ ಸೂರ್ಯೈಕವಿಂಶತಿ ನಾಮಾವಳಿಯನ್ನೂ ಸೂರ್ಯಾಷ್ಟೋತ್ತರಶತನಾಮಾವಳಿಯನ್ನೂ ಕೊಟ್ಟಿರುತ್ತೆ. ಈ ಅಧ್ಯಾಯದಲ್ಲಿ ಹೇಳಿರುವ ಈ ಅಷ್ಟೋತ್ತರವು ಮಹಾಭಾರತದ ಅರಣ್ಯ ಪರ್ವದ ಮೂರನೆಯ ಅಧ್ಯಾಯದಲ್ಲಿಯೂ ಇರುತ್ತೆ. ಇದಲ್ಲದೆ ಬೇರೆಬೇರೆ ಸೂರ್ಯಾಷ್ಟೋತ್ತರಗಳುಸ್ಕಾಂದಪುರಾಣದಲ್ಲಿಯೂ, ಆದಿತ್ಯಪುರಾಣದಲ್ಲಿಯೂ ರಾಮಾಯಣದ ಯುದ್ಧ ಖಂಡದಲ್ಲಿರುವ ಆದಿತ್ಯಹೃದಯದಲ್ಲಿಯೂ ಪ್ರಕಾರಾಂತರ ವಾಗಿ ಇರುವುವು.

shrinath.udupa@gmail.com

॥ ಅಥ ಸೂರ್ಯಾಷ್ಟೋತ್ತರಶತನಾಮಾವಳಿಃ ॥

ಓಂ ಸೂರ್ಯಾಯ ನಮಃ
ಓಂ ಅರ್ಯಮ್ಣೇ ನಮಃ
ಓಂ ಭಗಾಯ ನಮಃ
ಓಂ ತ್ವಷ್ಟ್ರೇ ನಮಃ
ಓಂ ಪೂಷ್ಣೇ ನಮಃ
ಓಂ ಅರ್ಕಾಯ ನಮಃ
ಓಂ ಸವಿತ್ರೇ ನಮಃ
ಓಂ ರವಯೇ ನಮಃ
ಓಂ ಗಭಸ್ತಿಮತೇ ನಮಃ
ಓಂ ಅಜಾಯ ನಮಃ ೧೦
ಓಂ ಕಾಲಾಯ ನಮಃ
ಓಂ ಮೃತ್ಯವೇ ನಮಃ
ಓಂ ಧಾತ್ರೇ ನಮಃ
ಓಂ ಪ್ರಭಾಕರಾಯ ನಮಃ
ಓಂ ಪೃಥಿವ್ಯೈ ನಮಃ
ಓಂ ಅದ್ಭ್ಯೋ ನಮಃ
ಓಂ ತೇಜಸೇ ನಮಃ
ಓಂ ಖಾಯ ನಮಃ
ಓಂ ವಾಯವೇ ನಮಃ
ಓಂ ಪರಾಯಣಾಯ ನಮಃ ೨೦
ಓಂ ಸೋಮಾಯ ನಮಃ
ಓಂ ಬೃಹಸ್ಪತಯೇ ನಮಃ
ಓಂ ಶುಕ್ರಾಯ ನಮಃ
ಓಂ ಬುಧಾಯ ನಮಃ
ಓಂ ಅಂಗಾರಕಾಯ ನಮಃ
ಓಂ ಇಂದ್ರಾಯ ನಮಃ
ಓಂ ವಿವಸ್ವತೇ ನಮಃ
ಓಂ ದೀಪ್ತಾಂಶವೇ ನಮಃ
ಓಂ ಶುಚಯೇ ನಮಃ
ಓಂ ಶೌರಯೇ ನಮಃ ೩೦
ಓಂ ಶನೈಶ್ಚರಾಯ ನಮಃ
ಓಂ ಬ್ರಹ್ಮಣೇ ನಮಃ
ಓಂ ವಿಷ್ಣವೇ ನಮಃ
ಓಂ ರುದ್ರಾಯ ನಮಃ
ಓಂ ಸ್ಕಂದಾಯ ನಮಃ
ಓಂ ವರುಣಾಯ ನಮಃ
ಓಂ ಯಮಾಯ ನಮಃ
ಓಂ ವೈದ್ಯುತಾಯ ನಮಃ
ಓಂ ಜಾಠರಾಯಾಗ್ನಯೇ ನಮಃ
ಓಂ ಇಂಧನಾಯ ನಮಃ ೪೦

shrinath.udupa@gmail.com

ಓಂ ತೇಜಸಾಂ ಪತಯೇ ನಮಃ
ಓಂ ಧರ್ಮಧ್ವಜಾಯ ನಮಃ
ಓಂ ವೇದಕರ್ತ್ರೇ ನಮಃ
ಓಂ ವೇದಾಂಗಾಯ ನಮಃ
ಓಂ ವೇದವಾಹನಾಯ ನಮಃ
ಓಂ ಕೃತಾಯ ನಮಃ
ಓಂ ತ್ರೇತಾಯೈ ನಮಃ
ಓಂ ದ್ವಾಪರಾಯ ನಮಃ
ಓಂ ಕಲಯೇ ಸರ್ವಮಲಾಶ್ರ-
ಯಾಯ ನಮಃ
ಓಂ ಕಲಾಯೈ ನಮಃ ೩೦
ಓಂ ಕಾಷ್ಠಾಯೈ ನಮಃ
ಓಂ ಮುಹೂರ್ತೇಭ್ಯೋ ನಮಃ
ಓಂ ಕ್ಷಪಾಯೈ ನಮಃ
ಓಂ ಯಾಮಾಯ ನಮಃ
ಓಂ ಕ್ಷಣಾಯ ನಮಃ
ಓಂ ಸಂವತ್ಸರಕರಾಯಾಶ್ವ-
ತ್ಥಾಯ ನಮಃ
ಓಂ ಕಾಲಚಕ್ರಾಯವಿಭಾ-
ವಸವೇ ನಮಃ
ಓಂ ಪುರುಷಾಯ ನಮಃ
ಓಂ ಶಾಶ್ವತಾಯ ನಮಃ
ಓಂ ಯೋಗಿನೇ ನಮಃ ೪೦
ಓಂ ವ್ಯಕ್ತಾವ್ಯಕ್ತಾಯ ನಮಃ
ಓಂ ಸನಾತನಾಯ ನಮಃ
ಓಂ ಕಾಲಾಧ್ಯಕ್ಷಾಯ ನಮಃ
ಓಂ ಪ್ರಜಾಧ್ಯಕ್ಷಾಯ ನಮಃ
ಓಂ ವಿಶ್ವಕರ್ಮಣೇ ನಮಃ
ಓಂ ತಮೋನುದಾಯ ನಮಃ
ಓಂ ವರುಣಾಯ ನಮಃ
ಓಂ ಸಾಗರಾಯ ನಮಃ
ಓಂ ಅಂಶಾಯ ನಮಃ
ಓಂ ಜೀಮೂತಾಯ ನಮಃ ೫೦
ಓಂ ಜೀವನಾಯ ನಮಃ
ಓಂ ಅರಿಘ್ನೇ ನಮಃ
ಓಂ ಭೂತಾಶ್ರಯಾಯ ನಮಃ
ಓಂ ಭೂತಪತಯೇ ನಮಃ
ಓಂ ಸರ್ವಲೋಕನಮಸ್ಕೃ-
ತಾಯ ನಮಃ
ಓಂ ಸ್ರಷ್ಟ್ರೇ ನಮಃ
ಓಂ ಸಂವರ್ತಕಾಯವಹ್ನಯೇನಮಃ
ಓಂ ಸರ್ವಸ್ಯಾದಯೇ ನಮಃ
ಓಂ ಅಲೋಲುಪಾಯ ನಮಃ
ಓಂ ಅನಂತಾಯ ನಮಃ ೬೦
ಓಂ ಕಪಿಲಾಯ ನಮಃ
ಓಂ ಭಾನವೇ ನಮಃ
ಓಂ ಕಾಮದಾಯ ನಮಃ
ಓಂ ಸರ್ವತೋಮುಖಾಯ ನಮಃ
ಓಂ ಜಯಾಯ ನಮಃ
ಓಂ ವಿಶಾಲಾಯ ನಮಃ

shrinath.udupa@gmail.com

ಓಂ ವರದಾಯ ನಮಃ
ಓಂ ಸರ್ವಭೂತಹಿತೇರತಾಯ ನಮಃ
ಓಂ ಮನಸ್ಸುಪರ್ಣಾಯ ನಮಃ
ಓಂ ಭೂತಾದಯೇ ನಮಃ ೯೦
ಓಂ ಶೀಘ್ರಗಾಯ ನಮಃ
ಓಂ ಪ್ರಾಣಧಾರಣಾಯ ನಮಃ
ಓಂ ಧನ್ವಂತರಯೇ ನಮಃ
ಓಂ ಧೂಮಕೇತವೇ ನಮಃ
ಓಂ ಆದಿದೇವಾಯಾದಿತೇಸ್ಸುತಾಯ ನಮಃ
ಓಂ ದ್ವಾದಶಾತ್ಮನೇ ನಮಃ
ಓಂ ಅರವಿಂದಾಕ್ಷಾಯ ನಮಃ
ಓಂ ಪಿತ್ರೇ ಮಾತ್ರೇ ಪಿತಾಮಹಾಯ ನಮಃ
ಓಂ ಸ್ವರ್ಗದ್ವಾರಾಯ ಪ್ರಜಾದ್ವಾರಾಯ ನಮಃ
ಓಂ ಮೋಕ್ಷದ್ವಾರಾಯ ತ್ರಿವಿಷ್ಟಪಾಯ ನಮಃ ೧೦೦
ಓಂ ದೇಹಕರ್ತ್ರೇ ನಮಃ
ಓಂ ಪ್ರಶಾಂತಾತ್ಮನೇ ನಮಃ
ಓಂ ವಿಶ್ವಾತ್ಮನೇ ನಮಃ
ಓಂ ವಿಶ್ವತೋಮುಖಾಯ ನಮಃ
ಓಂ ಚರಾಚರಾತ್ಮನೇ ನಮಃ
ಓಂ ಸೂಕ್ಷ್ಮಾತ್ಮನೇ ನಮಃ
ಓಂ ಮೈತ್ರೇಯಾಯ ನಮಃ
ಓಂ ಕರುಣಾನ್ವಿತಾಯ ನಮಃ ೧೦೮

ಇತಿ ಶ್ರೀಸೂರ್ಯಾಷ್ಟೋತ್ತರಶತನಾಮಾವಳಿಃ ಸಂಪೂರ್ಣಾ

ಓಂ ತತ್ಸತ್
ಮಂಗಳಂ

